ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸುತ್ತಿರುವ

ಪಿಹೆಚ್.ಡಿ. ಅಧ್ಯಯನದ ಮಹಾಪ್ರಬಂಧ

"ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ"

ಸಂಶೋಧಕರು

ಶೈಲಜ.ಎ.ಬಿ.

ಮಾರ್ಗದರ್ಶಕರು

ಡಾ|| ಆರ್.ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಅಧ್ಯಯನ ಕೇಂದ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

೨೦೦೯-೨೦೧೪

599

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ
ಪಿಹೆಚ್.ಡಿ. ಅಧ್ಯಯನದ ಮಹಾಪ್ರಬಂಧ

"ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ"

ಸಂಶೋಧಕರು
ಶೈಲಜ.ಎ.ಬಿ.

ಮಾರ್ಗದರ್ಶಕರು
ಡಾ|| ಆರ್.ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಅಧ್ಯಯನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

2009–2014

ಘೋಷಣಾ ಪತ್ರ

ಘೋಷಣಾ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ, ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ **"ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಡಾ॥ ಆರ್.ಲಕ್ಷ್ಮೀನಾರಾಯಣ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಾದರ ಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ: 17/2/2014

ಸಂಶೋಧನ ವಿದ್ಯಾರ್ಥಿನಿ

ಶೈಲಜ.ಎ.ಬಿ

(ಶೈಲಜ.ಎ.ಬಿ)

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ, ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ **"ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಶೈಲಜ.ಎ.ಬಿ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ವಿದ್ಯಾರ್ಥಿನಿಯ ಸ್ವಂತ ಬರವಣಿಗೆಯಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಾದರ ಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ: 17/2/2014

ಮಾರ್ಗದರ್ಶಕರ ಸಹಿ

ಡಾ. ಲಕ್ಷ್ಮೀನಾರಾಯಣ

(ಡಾ॥ ಆರ್.ಲಕ್ಷ್ಮೀನಾರಾಯಣ)

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಪಿಹೆಚ್.ಡಿ. ಅಧ್ಯಯನದ ಮಹಾಪ್ರಬಂಧ

"ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ"

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪ್ರಸ್ತುತತೆ

ಅಧ್ಯಾಯ-1
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪ್ರಸ್ತುತತೆ

ಪ್ರಧಾನ ಸಂಸ್ಕೃತಿಯು ಅಧೀನ ಸಂಸ್ಕೃತಿಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹಾತೊರೆಯುವಂತೆ, ಅಧೀನ ಸಂಸ್ಕೃತಿಯು ತನ್ನ ತನವನ್ನು ಉಳಿಸಿಕೊಳ್ಳಲು ಇಂದು ಹರಸಾಹಸಪಡಬೇಕಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಧೀನ ಸಂಸ್ಕೃತಿಯ ವಕ್ತಾರರಾದ ಜನತೆಯ ಸಂಸ್ಕೃತಿಯನ್ನು ಕುರಿತ ಸಂಶೋಧನೆ ಇಂದು ಪ್ರಮುಖ ಪಾತ್ರವಹಿಸುತ್ತಿದೆ. ಸಂಶೋಧನೆಯು ಸತ್ಯಕ್ಕಾಗಿ ನಡೆಸುವ ಹುಡುಕಾಟವಾಗಿದೆ. ಯಾವುದೇ ಒಂದು ಸಾಧಿತ ಸತ್ಯವನ್ನು ಕಂಡುಕೊಳ್ಳಲು ಸಂಶೋಧನೆ ಅಗತ್ಯ, ಅವಶ್ಯ, ಅನಿವಾರ್ಯವೆಂದರೆ ಅತಿಶಯೋಕ್ತಿಯಾಗಲಾರದು. ಸಂಶೋಧನೆಯಿಂದ ಸಮಾಜಕ್ಕೆ, ಸಾಹಿತ್ಯಕ್ಕೆ ಅಗತ್ಯವಾದ, ಸ್ಪಷ್ಟವಾದ ಮತ್ತು ಖಚಿತವಾದ ಮಾಹಿತಿಯನ್ನು ಕೊಡಲು ಸಾಧ್ಯವಿದೆ. ಜೊತೆಗೆ ಹಿಂದಿನ ಜನರ ಬದುಕು-ಬಾಳ್ವೆ, ಸಾಧನೆಯನ್ನು ಇಂದಿನ ಜನರು ತಿಳಿಯಲು, ಸಂಸ್ಕೃತಿಯನ್ನು ಅರಿಯಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ತಿಳುವಳಿಕೆಯು ವಿಸ್ತಾರಗೊಳ್ಳುತ್ತದೆ. "ಕತ್ತಲೆಯಿಂದ ಬೆಳಕಿನೆಡೆಗೆ ಅಜ್ಞಾನದಿಂದ ಜ್ಞಾನದೆಡೆಗೆ, ಅಳುಕಿನಿಂದ ಆತ್ಮವಿಶ್ವಾಸದೆಡೆಗೆ, ಅನಾಗರೀಕತೆಯಿಂದ ನಾಗರೀಕತೆಯೆಡೆಗೆ, ಸಂದೇಹದಿಂದ ನಿಸ್ಸಂದೇಹದೆಡೆಗೆ, ಅಲ್ಪವಿರಾಮದಿಂದ ಪೂರ್ಣವಿರಾಮದೆಡೆಗೆ ಸಾಗಲು ನಡೆಸುವ ಪ್ರಯತ್ನವೇ ಸಂಶೋಧನೆ" ಎಂಬುದಾಗಿ ಡಾ.ಸಂಗಮೇಶ ಸವದತ್ತಿಮಠರವರು ಅಭಿಪ್ರಾಯಪಟ್ಟಿದ್ದಾರೆ.

ಸಮಾಜ ಶಾಸ್ತ್ರಜ್ಞರ ಅಭಿಪ್ರಾಯದಂತೆ ನಿರ್ಧಿಷ್ಟವಾದ ಶಾರೀರಿಕ ಲಕ್ಷಣಹೊಂದಿರುವ ಜನಗಳ ಒಕ್ಕೂಟವನ್ನು ಜನಾಂಗವೆಂದು ಕರೆಯಲಾಗುತ್ತದೆ. ಸಮಾಜಶಾಸ್ತ್ರಜ್ಞರಾದ ಡಾ॥ ಬಿ.ಎಸ್.ಗುಹರವರು ಹೇಳುವಂತೆ ನೀಗ್ರಿಟೊಗಳು, ಪ್ರೋಟೋ ಆಸ್ಟ್ರಲಾಯ್ಡ್, ಮಂಗೋಲಾಯ್ಡ್, ಮೆಡಿಟರೇನಿಯನ್ನರು, ಪಾಶ್ಚಾತ್ಯ ಬ್ರಾಕೀಸೇಫಾಲರು, ನಾರ್ಡಿಕ್ ಎಂಬ ಆರು ಜನಾಂಗಗಳು ಭಾರತದಲ್ಲಿವೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ದುಬೆರವರ ಪ್ರಕಾರ ಮೊದಲ ಮೂರು ಸಮೂಹಗಳ ಮಂದಿ ಭಾರತದ ಬಹಳ ಹಳೆಯ ನಿವಾಸಿಗಳಾಗಿದ್ದು ಇನ್ನುಳಿದ ಮೂರು ಸಮೂಹಗಳು ವಲಸೆ ಬಂದವುಗಳಾಗಿವೆ.

ಒಂದು ನಿರ್ದಿಷ್ಟ ಗುಂಪು ಸಾಮಾನ್ಯ ಪೂಜಾ ವಿಧಾನ, ಸಾಮಾನ್ಯ ಉದ್ಯೋಗ ಮತ್ತು ತಮ್ಮ ಸಮೂಹದಲ್ಲೇ ಒಳಬಾಂಧವ್ಯವನ್ನು ಹೊಂದಿದ್ದು, ಯಾವುದೋ ಒಬ್ಬ ಮೂಲ ವ್ಯಕ್ತಿಯಿಂದ ಹುಟ್ಟಿದ್ದೇವೆಂಬ ಭಾವನೆ ಹೊಂದಿರುವವರನ್ನು ಜಾತಿಯೆಂದು ಕರೆಯಲಾಗುತ್ತದೆ. ಇದೊಂದು ಒಕ್ಕೂಟವೆಂದು ಸಹ ಹೇಳಲಾಗುತ್ತದೆ.

ಭಾರತದಲ್ಲಿ ವೈಶಿಷ್ಟ್ಯಪೂರ್ಣ ಸಾಮಾಜಿಕ ವ್ಯವಸ್ಥೆಯಾಗಿ ಜಾತಿ ವ್ಯವಸ್ಥೆ ರೂಢಿಯಲ್ಲಿದೆ. ನಮ್ಮ ದೇಶದಲ್ಲಿರುವ ಹಲವಾರು ಜಾತಿಗಳಲ್ಲಿ 'ಸಾದರು' ಎಂಬುದು ಒಂದು ಜಾತಿಯಾಗಿದೆ. ಆಧುನಿಕತೆಯ ಗಾಳಿ ಬೀಸತೊಡಗಿದ್ದು ಪಾಶ್ಚಾತ್ಯ ಸಂಸ್ಕೃತಿಯ ದಾಳಿ ಆರಂಭವಾಗಿದ್ದರೂ ಇವೆರಡನ್ನು ಸಮರ್ಥವಾಗಿ ಎದುರಿಸುತ್ತಾ ಬಂದಿರುವ ಸಾದರ ಜಾತಿಯು ಬದಲಾದ

ಪರಿಸ್ಥಿತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಜಾತಿಯೊಂದರ ಸಮಗ್ರ ಜೀವನದ ಜೀವಂತ ಚಿತ್ರಣವನ್ನು ಕಟ್ಟಿಕೊಡಬಲ್ಲ ಪ್ರಮುಖ ಮಾಧ್ಯಮವೆಂದರೆ ಸಂಸ್ಕೃತಿ. ಆ ಜಾತಿಯಲ್ಲಿರುವ ರೂಢಿ, ಸಂಪ್ರದಾಯ, ನಂಬಿಕೆ, ಆಚಾರ–ವಿಚಾರ, ವೇಷ–ಭಾಷೆ, ಆಹಾರ, ಉಡುಗೆ–ತೊಡುಗೆ, ಧರ್ಮ–ದೇವರು, ಕಲೆಗಳು ಅಲ್ಲಿಯ ಸಂಸ್ಕೃತಿಗೆ ಆಕಾರವನ್ನೊದಗಿಸಿದ ಪ್ರಮುಖ ಘಟಕಗಳಾಗಿವೆ. ಒಂದರ್ಥದಲ್ಲಿ ಸಂಸ್ಕೃತಿಯೆಂಬುದು ಜಾತಿಯೊಂದರ ಜೀವನ ವಿಧಾನದ ಒಟ್ಟು ತಿಳುವಳಿಕೆಯಾಗಿದೆ ಎಂದೇ ಹೇಳಬಹುದು.

“ಜನತೆಯ ಜೀವನವನ್ನು ಕುರಿತಾದ ಅಧ್ಯಯನವನ್ನು ಸಾಂಸ್ಕೃತಿಕ ಅಧ್ಯಯನವೆಂದು ಕರೆಯಬಹುದು”[೧] ಎಂಬ ಚಿ.ಮು ರವರ ಅಭಿಪ್ರಾಯದಂತೆ ಸಾದರ ಬದುಕಿನ ಕ್ರಮವನ್ನು, ರೀತಿಯನ್ನು, ಸಂಸ್ಕೃತಿಯನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಮಾನವನು ತನ್ನ ವ್ಯಕ್ತಿಗತ ಮತ್ತು ಸಾಮಾಜಿಕ ಜೀವನದಲ್ಲಿ ಸಂಪಾದಿಸಿರುವ ಎಲ್ಲ ಅಂಶಗಳನ್ನು ಸಂಸ್ಕೃತಿ ಒಳಗೊಂಡಿರುತ್ತದೆ. “ಸಂಸ್ಕೃತಿಯನ್ನು ರೂಪಿಸುತ್ತ ಹೋಗುವ ಮಾನವ, ತನ್ನನ್ನೇ ತಾನು ರೂಪಿಸಿಕೊಳ್ಳುತ್ತಾನೆ” ಎಂಬುದಾಗಿ ಶಂ.ಬಾ.ಜೋಶಿರವರು ಸಂಸ್ಕೃತಿಯನ್ನು ಕುರಿತಂತೆ ಅಭಿಪ್ರಾಯಪಡುತ್ತಾರೆ.

ಹರ್ಸ್‌ಕೊವಿಟ್ಸ್ ರವರು “ಜನರ ಜೀವನ ವಿಧಾನವೇ ಸಂಸ್ಕೃತಿ” ಎಂದಿದ್ದಾರೆ. ಬರಗೂರು ರಾಮಚಂದ್ರಪ್ಪರವರ ದೃಷ್ಟಿಯಲ್ಲಿ “ಸಂಸ್ಕೃತಿಯೆನ್ನುವುದು ಅಂತರಂಗ ಮತ್ತು ಬಹಿರಂಗಗಳ ಸಂಬಂಧದಲ್ಲಿ ಒಡಮೂಡುವ ಸಾಮಾಜಿಕ ವಿನ್ಯಾಸ, ವಿವಿಧ ನೆಲೆಗಳ ಅಂತರ್ ಸಂಬಂಧದಲ್ಲಿ ಸಂಭವಿಸುವ ಸಾಮಾಜಿಕ ಆಕೃತಿ; ಭೂತ ಬಯಲಾಗುತ್ತ ಹೋಗುವ ವರ್ತಮಾನದ ಉಸಿರಾಗಿದೆ”.

ಸಮಾಜ ಶಾಸ್ತ್ರಜ್ಞರು ಸಂಸ್ಕೃತಿಯನ್ನು “ಭೌತ ಹಾಗೂ ಅಭೌತ (Material and non material culture) ಎಂದು ವಿಂಗಡಿಸಿದ್ದಾರೆ”[೨]. ಭೌತ ಸಂಸ್ಕೃತಿಯು ಮೂರ್ತ ಸ್ವರೂಪದ್ದಾದರೆ ಅಭೌತ ಸಂಸ್ಕೃತಿಯು ಅಮೂರ್ತ ಸ್ವರೂಪದ್ದು. ಭೌತ ಸಂಸ್ಕೃತಿಯು ನಮಗೆ ಗೋಚರಸುವಂತಿದ್ದು ಇದು ಎಲ್ಲ ಬಗೆಯ ವಸ್ತುಗಳು, ಪರಿಕರಗಳು, ಉಪಕರಣಗಳಲ್ಲಿರುತ್ತದೆ. ಇದನ್ನು ನಾಗರಿಕತೆ ಎಂಬುದಾಗಿಯೂ ಕರೆಯಲಾಗುತ್ತದೆ.

ಆದರೆ ಅಭೌತ ಸಂಸ್ಕೃತಿಯು ಅಮೂರ್ತರೂಪದಲ್ಲಿದ್ದು, ಇದು ನಂಬಿಕೆ, ಆಚರಣೆ, ರೂಢಿ–ಸಂಪ್ರದಾಯಗಳು, ನೈತಿಕತೆ, ಮೌಲ್ಯಾದರ್ಶಗಳು, ಸಿದ್ಧಾಂತಗಳು, ಕಲೆ ಮುಂತಾದ ವಿಚಾರಗಳನ್ನು ಒಳಗೊಂಡಿರುತ್ತದೆ. ಸರಳವಾಗಿ ಹೇಳುವುದಾದರೆ ಸಂಸ್ಕೃತಿ ‘ಜನ ಜೀವನ ಕ್ರಮ’ವೇ ಆಗಿದೆ. ಆಧುನಿಕ ಸಂದರ್ಭದಲ್ಲಿ ಜಾಗತೀಕರಣ, ದೇಶಿ–ದೇಸಿ ಎಂಬ ಪರಿಕಲ್ಪನೆಗಳು ಮುಖಾ–ಮುಖಿಯಾಗಿರುವ ಪ್ರಸ್ತುತ ಸಂದರ್ಭದಲ್ಲಿ ಅಪಾರ ಪ್ರಮಾಣದಲ್ಲಿ ಬಳಕೆಯಾದ ಪರಿಕಲ್ಪನೆಯಲ್ಲಿ

ಸಂಸ್ಕೃತಿ ಬಹುಮುಖ್ಯವಾದುದಾಗಿದೆ. ಜಾಗತೀಕರಣದ ವಿರುದ್ಧ ದೇಶಿ ತಲೆಎತ್ತಿ ನಿಲ್ಲಲು ಸಂಸ್ಕೃತಿ ಅಧ್ಯಯನ ಬಹುಮುಖ್ಯ ಸಾಧನ. ಈ ನಿಟ್ಟಿನಲ್ಲಿ ಸಾದರನ್ನು ಕುರಿತ ಸಾಂಸ್ಕೃತಿಕ ಅಧ್ಯಯನ ಹೆಚ್ಚು ಅರ್ಥವಂತಿಕೆಯನ್ನು ಪಡೆದಿದೆ.

ಸಂಸ್ಕೃತಿ ಅಧ್ಯಯನವು ಬಹುಸ್ತರೀಯ ಅಥವಾ ಬಹುಶಿಸ್ತೀಯ ನೆಲೆಯಲ್ಲಿ ಸಾಗುವ ಪ್ರಕ್ರಿಯೆ. ಸಂಸ್ಕೃತಿಯು ಮನುಷ್ಯನ ಬದುಕಿನ ಸರ್ವಮಗ್ಗಲುಗಳನ್ನು ಸ್ಪರ್ಶಿಸುವ ಸ್ಪರ್ಶಮಣಿಯಂತೆ ಎಂದರೆ ಉತ್ಪ್ರೇಕ್ಷೆ ಎಂದೆನ್ನಿಸಲಾರದು. ಜಾತಿಯೊಂದರ ಸಾಂಕೇತಿಕ ಗುರುತಾದ ಸಂಸ್ಕೃತಿಯು ಪ್ರಾಚೀನವೂ, ಪವಿತ್ರವೂ ಆದದ್ದು. ಅದು ನಮ್ಮ ಪೂರ್ವಜರಿಂದ ಬಂದದ್ದಾಗಿದೆ. ನಾವದನ್ನು ಆದರಿಸಬೇಕು, ಅನುಸರಿಸಬೇಕು. ಮಾತ್ರವಲ್ಲ ಅನ್ಯರ ಆಕ್ರಮಣಗಳಿಂದ ರಕ್ಷಿಸಬೇಕು. ಈ ಹಿನ್ನೆಲೆಯಲ್ಲಿ ಸಂಸ್ಕೃತಿ ಅಧ್ಯಯನ ಬಹುಮುಖ್ಯವಾದದ್ದು; ಕಾರಣ ಜಾತಿಯೊಂದರ ಸಮಗ್ರ ಅಧ್ಯಯನದಿಂದ ಆ ಜನತೆಯ ಸಂಸ್ಕೃತಿ ತೆರೆದುಕೊಳ್ಳುತ್ತದೆ.

ಸಂಸ್ಕೃತಿಯು ನಿಂತ ನೀರಲ್ಲ ಅದು ಸದಾ ಹರಿಯುವ ಜೀವಂತ ನದಿಯಂತೆ, ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತಾ ರೂಪಾಂತರ ಹೊಂದುತ್ತಾ ಸಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಸಾದರ ಸಂಸ್ಕೃತಿಯ ಅಧ್ಯಯನದಿಂದ ಸಾದರಲ್ಲಿ ಘಟಿಸಿ ಮರೆಯಾಗಿರುವ ಇಲ್ಲವೆ ರೂಪಾಂತರ ಸ್ಥಿತಿಯಲ್ಲಿರುವ ಸಂಸ್ಕೃತಿಯ ರೂಪ, ವೈಶಿಷ್ಟ್ಯ-ವೈವಿಧ್ಯತೆಯನ್ನು ಮುಂದುವರೆಸಿ ಹಾಗೂ ಅದರ ಗುಣ ವೈವಿಧ್ಯವನ್ನು ತಿಳಿಯಲು ನೆರವಾಗುತ್ತದೆ. ಅಷ್ಟೇ ಅಲ್ಲದೆ ಸಾದರನ್ನು ಸರಿಯಾದ ಕ್ರಮದಲ್ಲಿ ಅರ್ಥೈಸಿಕೊಳ್ಳಲು ಸಂಸ್ಕೃತಿಯ ಅಧ್ಯಯನವು ಪೂರಕವೂ, ಪ್ರೇರಕವೂ, ಪೋಷಕವೂ ಆದ ಬಹುಮುಖ್ಯವಾದ ಪ್ರಕ್ರಿಯೆಯಾಗಿದೆ ಎಂದೇ ಹೇಳಬಹುದು. ಇದರಿಂದ ನಮ್ಮ ತಿಳುವಳಿಕೆ ಹೆಚ್ಚಿ ಮನುಕುಲದ ಬದುಕು ಹೆಚ್ಚು ಸಹನೀಯವೂ, ಅರ್ಥಪೂರ್ಣವೂ ಆಗುತ್ತದೆ.

ನಮ್ಮ ನಾಡಿನ ಸಾಂಸ್ಕೃತಿಕ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿಯಂತೆ ಸಂಸ್ಕೃತಿಯ ರಕ್ಷಣೆ, ಪಾಲನೆ, ಪೋಷಣೆ ನಿರಂತರವಾಗಿ ನಡೆಯುತ್ತಿರಬೇಕು. ಈ ಹಿನ್ನೆಲೆಯಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಸಮೃದ್ಧಗೊಳಿಸುವಲ್ಲಿ ನೆರವಾದ ಜನತೆಯನ್ನು ಕುರಿತ ಅಧ್ಯಯನ ಬಹುಮುಖ್ಯವಾದದು, ಅಳಿವಿನ ಅಂಚಿನಲ್ಲಿರುವ ಅದೆಷ್ಟೋ ಜಾನಪದ ಸಿರಿಯನ್ನು ಶ್ರೀಮಂತಿಕೆಯನ್ನು ತಿಳಿಯಲು ಪ್ರಸ್ತುತ ಅಧ್ಯಯನ ನೆರವಾಗುತ್ತದೆ.

ಯಾವುದೇ ಒಂದು ಜಾತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ಜನರ ಸಂಸ್ಕೃತಿಯ ಪರಿಚಯ ಅತ್ಯಾಗತ್ಯವಾದದ್ದು. ಏಕೆಂದರೆ ಆ ಜನರ ಪ್ರಜ್ಞೆ, ಅವರ ಅಂತಃಕರಣ ಆ ಜಾತಿಯ ಸಂಸ್ಕೃತಿಯಲ್ಲಿ ಪ್ರತಿಬಿಂಬಿತವಾಗುತ್ತದೆ. ಆದ್ದರಿಂದ ಸಂಸ್ಕೃತಿ ಅಧ್ಯಯನ ಬಹುಮುಖ್ಯವಾದದ್ದಾಗಿದೆ. ಈ ಹಿನ್ನೆಲೆಯಲ್ಲಿ ಸಾದರ ಬದುಕು ಮತ್ತು ಸಂಸ್ಕ್ರತಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ, ಸಾರ್ವಕಾಲಿಕ ಮೌಲ್ಯಗಳನ್ನು

ಕುರಿತ ಚಿಂತನೆ ಮತ್ತು ಅದರ ಪ್ರತಿಪಾದನೆ ನಿಚ್ಚಳವಾಗಿ ಮುಖ್ಯವಾದದ್ದು.

"ಹೊಸ ಜಗತ್ತಿನ ಹೊಸ ಮಾರ್ಗದ ಕಡೆಗೆ ವಾಲಿರುವ ಜನಪದರ ಮೂಲ ಏನೆಂಬುದನ್ನು ಪ್ರತಿಯೊಬ್ಬರೂ ಗಮನಿಸಬೇಕಾಗುತ್ತದೆ. ಅವರ ಆಲೋಚನೆಗಳ ದಿಕ್ಕಿನ ಕಡೆಗೆ ನಾವು ಕಣ್ಣು ತೆರೆದು ನೋಡಿ ಸಮಸ್ಯೆಯನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಈ ಕೆಲಸ ಮಾಡುವುದರ ಜೊತೆಗೆ ಅವರ ಜೀವನ ಅಂಗಳದಲ್ಲಿ ಅರಳಿ ಸಹೃದಯಗಳಿಗೆ ಸುವಾಸನೆ ಕೊಟ್ಟು ಈಗ ಕಮರಿ ಹೋಗುವ ಸ್ಥಿತಿಯಲ್ಲಿ ಇರುವುದರಿಂದ ಅಂತಹ ಮಕರಂದದ ಜೇನ ಹನಿಗಳನ್ನು ನಮ್ಮ ಹೃದಯದಲ್ಲಿ ಶೇಖರಿಸಿ ಬಿಚ್ಚು ಮನಸ್ಸಿನಿಂದ ಸ್ಪಷ್ಟವಾಗಿ ಬರೆದು ದಾಖಲಿಸಬೇಕಾಗಿದೆ"[೩].

ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರಾಗಿರುವ ಸಾದರ ಸಂಸ್ಕೃತಿಯನ್ನು ಕುರಿತ ಅಧ್ಯಯನ ಬಹುಮುಖ್ಯವಾದದ್ದೆಂದು ಹೇಳಬಹುದು. ಕಾರಣ ಹಿಂದಿನಿಂದಲೂ ಉಳಿದು-ಬೆಳೆದು ಬಂದಿರುವ ಸಾದರ ಸಂಪ್ರದಾಯಗಳು, ಸಾಂಸ್ಕೃತಿಕ ಆಚರಣೆಗಳು ನಮ್ಮೊಡನಿರುವ ಜೀವಂತ ಸಂಪತ್ತು. ಆಧುನಿಕತೆಯ ಬೀಸುಗಾಳಿಯ ಪ್ರವಾಹದಲ್ಲಿ ಸಾದರ ಸಾಂಸ್ಕೃತಿಕ ಕಲ್ಪನೆಗಳು ಕೊಚ್ಚಿಹೋಗುತ್ತಿವೆ. ಅವು ನಾಶವಾಗುವ ಮೊದಲು ರಕ್ಷಿಸಿ ಕಾಪಾಡಬೇಕು. ಅವುಗಳ ಪ್ರಸ್ತುತತೆಯನ್ನು ಗುರುತಿಸಿ ಆಧುನಿಕತೆಗೆ ಬಳಸಿಕೊಳ್ಳಬೇಕು ಎಂಬ ಉತ್ಕಟ ಬಯಕೆಯಿಂದ, ಬಹುಮುಖಿ ಚಿಂತನೆಯಲ್ಲಿ ಒಲವಿದ್ದ ಕಾರಣ ಸಂಸ್ಕೃತಿ ಅಧ್ಯಯನ ಸೂಕ್ತ ವಿಷಯವೆಂದು ತೋರಿದ ಕಾರಣದಿಂದ **'ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ'** ಎಂಬ ವಸ್ತು ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಸಂಸ್ಕೃತಿಯು ಜನತೆ ಒಟ್ಟಾರೆ ಬಾಳುವ ರೀತಿಯಲ್ಲಿ ವ್ಯಕ್ತವಾಗುತ್ತಿದ್ದರೂ ಭೂಮಿಯಂತೆ ಜನರಿಗೆ ಆಶ್ರಯವನ್ನು ನೀಡಿ ಅದರ ಜೊತೆಗೆ ಆಕಾಶವಾಗಿ ನಿಂತು ಆದರ್ಶಗಳ ಕಡೆ ಬೆಳೆಸುವ ಉತ್ತೇಜನವೂ ಆಗಿನಿಲ್ಲುತ್ತದೆ. "ಜನತೆಯ ಧರ್ಮ, ಮೌಲ್ಯ, ಕಲೆಗಳು, ಸಾಹಿತ್ಯ, ರಾಜಕೀಯ ವಿಧಾನ, ಉಡುಗೆ-ತೊಡುಗೆ, ಆಹಾರ ವಿಧಾನಗಳು, ಉದ್ಯೋಗ, ಆರ್ಥಿಕ ಸ್ಥಿತಿ, ಕಾನೂನು, ಆಚರಣೆ ಇತ್ಯಾದಿ ಎಲ್ಲವನ್ನು ಸಂಸ್ಕೃತಿ ಒಳಗೊಳ್ಳುತ್ತದೆ"[೪] ಎಂಬುದಾಗಿ ಡಾ.ಎಂ.ಚಿದಾನಂದಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. ಚಿ.ಮು.ರವರ ಈ ಮಾತು ಅಕ್ಷರಶಃ ಸತ್ಯವಾದದ್ದು ಜನಪದರ ಜೀವನವಿದ್ದಂತೆ ಜನಪದ ಸಂಸ್ಕೃತಿ ಇರುತ್ತದೆ.

"ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಸ್ತು ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಂಡಿರುವ ಮುಖ್ಯ ಉದ್ದೇಶ ಕಾಲದ ದವಡೆಗೆ ಸಿಕ್ಕು ಮರೆಯಾಗುತ್ತಿರುವ ಸಾದರ ಸಾಂಸ್ಕೃತಿಕ ನೆನಕೆಗಳನ್ನು ಲಿಖಿತರೂಪದಲ್ಲಿ ದಾಖಲಿಸುವುದು, ಭಾರತದ ಸಾವಿರಾರು ಜಾತಿಗಳಲ್ಲಿ ಒಂದಾಗಿರುವ ಸಾದರ ಸಾಂಸ್ಕೃತಿಕ ಇತಿಹಾಸವನ್ನು, ವೈಶಿಷ್ಟ್ಯವನ್ನು, ಅನನ್ಯತೆಯನ್ನು ಒಂದೆಡೆ ಸಂಕಲಿಸುವುದು ಮತ್ತು ಭಾರತೀಯ ನಾಡು-ನುಡಿಗೆ, ಸಂಸ್ಕೃತಿಗೆ ಇವರು ನೀಡಿದ ಕೊಡುಗೆಯನ್ನು ಬರವಣಿಗೆಯಲ್ಲಿ ದಾಖಲಿಸುವುದು ಅಗತ್ಯವಾಗಿರುವುದರಿಂದ ಪ್ರಸ್ತುತ ಅಧ್ಯಯನ ಔಚಿತ್ಯಪೂರ್ಣವಾದುದಾಗಿದೆ ಎಂದು ಹೇಳಬಹುದು.

ಜಾತಿಯೊಂದರ ಅಧ್ಯಯನವು ಹಲವು ಸಾಂಸ್ಕೃತಿಕ ಆಚರಣೆಗಳ ಗುಚ್ಛದ ಅಧ್ಯಯನವೆಂದೇ ಹೇಳಬಹುದು. ಇತ್ತೀಚಿನ ದಿನಗಳಲ್ಲಿ ಸಂಸ್ಕೃತಿ ಅಧ್ಯಯನ ಹೆಚ್ಚು ಮಹತ್ವ ಪಡೆದಿದೆ. ಕಾರಣ-ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಪ್ರಭಾವದಿಂದ ಸಾದರ ಸಂಸ್ಕೃತಿಯಲ್ಲಿಯೂ ಹಲವು ಬದಲಾವಣೆಗಳು ಕಂಡು ಬರುತ್ತಿವೆ. ಇದರಿಂದ ಪ್ರಾಚೀನ ಸಂಸ್ಕೃತಿ ಹಾಗೂ ಅದರ ಹಿಂದಿನ ವೈಜ್ಞಾನಿಕ ಸತ್ಯಗಳು ಕಣ್ಮರೆಯಾಗುತ್ತಿವೆ.

ಹೀಗೆ ಕಣ್ಮರೆಯಾಗುತ್ತಿರುವ ಹಲವು ಸಾಂಸ್ಕೃತಿಕ ಆಚಾರ-ವಿಚಾರಗಳನ್ನು ಬರವಣಿಗೆಯಲ್ಲಿ ದಾಖಲಿಸುವ ಅಗತ್ಯವಿದೆ. ಇದರಿಂದ ಸಾದರ ಬದುಕಿನ ಕ್ರಮ ತಿಳಿಯುತ್ತವೆ. ಇಲ್ಲವಾದಲ್ಲಿ ಕಾಲಾನುಕ್ರಮದಲ್ಲಿ ಬದುಕಿನ ಕ್ರಮ ವ್ಯತ್ಯಾಸವಾಗುತ್ತಾ ಹಳೆಯದು ಮರೆತು ಹೋಗಬಹುದು. ಐತಿಹಾಸಿಕ ದೃಷ್ಟಿಕೋನದಿಂದ ದಾಖಲೀಕರಣ ಅತಿಮುಖ್ಯವಾಗುತ್ತದೆ. ಮಾಹಿತಿ ಸಂಗ್ರಹ ಮತ್ತು ದಾಖಲೀಕರಣ ಸಂಶೋಧನೆಯ ಮೊದಲ ಹಂತವಾದರೆ; ಆ ಮಾಹಿತಿ ಮುಂದಿನ ಸಂಶೋಧನೆಗೆ ಆಕರವಾಗುತ್ತದೆ. ಈ ನಿಟ್ಟಿನಲ್ಲಿ **'ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ'** ಅತ್ಯಂತ ಪ್ರಸ್ತುತವಾದದ್ದಾಗಿದೆ.

ಇತ್ತೀಚಿನ ಸಂದರ್ಭಗಳಲ್ಲಿ ಜಾತಿ ಮತ್ತು ಜನಾಂಗಗಳನ್ನು ಕುರಿತ ಅಧ್ಯಯನಗಳು ಸಾಮಾಜಿಕವಾಗಿ ಮತ್ತು ಸೈದ್ಧಾಂತಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಪ್ರಧಾನ ಸಂಸ್ಕೃತಿಯ ಪ್ರಭಾವದಿಂದಾಗಿ ಅಧೀನ ಸಂಸ್ಕೃತಿಯ ಜನತೆಯು ಸಾಮಾಜಿಕವಾಗಿ ಸ್ಥಾನಮಾನಗಳು ಮತ್ತು ಸೌಲಭ್ಯಗಳಿಂದ ವಂಚಿತವಾಗುತ್ತಿವೆ.

ಸಾದರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಹೊಂದಿರುವ ಕಾರಣದಿಂದ ಜಾತಿಯ ಬಹುತೇಕರು ಶಿಕ್ಷಣದಿಂದ ವಂಚಿತರಾಗಿದ್ದು, ಜಾತಿಯಲ್ಲಿ ಅನಕ್ಷರತೆಯ ಪ್ರಮಾಣ ಹೆಚ್ಚಿದ್ದು, ಸಾಕ್ಷರತೆಯ ಪ್ರಮಾಣ ಕಡಿಮೆಯಿದೆ. ಇದರಿಂದ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಸೂಕ್ತ ಉದ್ಯೋಗಾವಾಕಾಶಗಳು ದೊರೆಯದೆ ಬಹುತೇಕರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

ಇನ್ನು ಅಲ್ಪಸಂಖ್ಯಾತರಾದ ಕಾರಣದಿಂದ ರಾಜಕೀಯ ಸ್ಥಾನಮಾನಗಳು ದೊರೆಯದೆ ನಿರೀಕ್ಷಿತ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿಲ್ಲ. ಸಾದರಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ರಾಜಕೀಯ ಕ್ಷೇತ್ರದಲ್ಲಿರುವುದು ಶೋಚನೀಯ ಸಂಗತಿಯೇ ಸರಿ. ಸಾಮಾಜಿಕ ಮನ್ನಣೆಗೆ ಸಂಬಂಧಪಟ್ಟಂತೆ ಹಲವು ಘರ್ಷಣೆಗಳನ್ನು ಪ್ರಸ್ತುತ ಜಾತಿಯು ಎದುರಿಸುವಂತಾಗಿದೆ.

ಸ್ತ್ರೀಯರಿಗೆ ಸಂಬಂಧಿಸಿದಂತೆ ಸಾಮಾಜಿಕ ಸ್ಥಾನಮಾನಗಳನ್ನು ಗಮನಿಸುವುದಾದರೆ, ಪುರುಷ ಪ್ರಧಾನ ವ್ಯವಸ್ಥೆ ಇವರಲ್ಲಿ ಚಾಲ್ತಿಯಲ್ಲಿರುವುದರಿಂದ ಸ್ತ್ರೀಯು ಸಾಮಾಜಿಕ ಸ್ಥಾನಮಾನಗಳಿಂದ ವಂಚಿತಳಾಗಿ ಅಭಿವ್ಯಕ್ತಿ ಹೀನಳಾಗಿ ಬದುಕುವಂತಾಗಿದೆ. ಆಶ್ರಯದಲ್ಲೇ ಹುಟ್ಟಿ, ಬೆಳದು ಬಾಳುವ ಸ್ತ್ರೀಯು ಶಿಕ್ಷಣದಿಂದ ವಂಚಿತಳಾಗಿ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುವಲ್ಲಿ ವಿಫಲಳಾಗಿದ್ದಾಳೆ

ಎಂದೇ ಹೇಳಬಹುದು. ಪ್ರಸ್ತುತ ಜಾತಿಯಲ್ಲಿ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗು ಸಾದರಲ್ಲಿ ಮನೆ ಮಾಡಿರುವುದರಿಂದ ಇಲ್ಲಿನ ಬಹುತೇಕ ಹೆಣ್ಣು ಮಕ್ಕಳು ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಅನುಭವಿಸುತ್ತಿರುವುದು ಶೋಚನೀಯ ಸಂಗತಿಯೇ ಸರಿ. ಈ ಹಿನ್ನೆಲೆಯಲ್ಲಿ ಸೈದ್ಧಾಂತಿಕವಾಗಿ ಜಾತಿಯು ಮುಂದೆ ಬರಲು ಶಿಕ್ಷಣದಲ್ಲಿ ಉನ್ನತ ಪ್ರಗತಿಯನ್ನು ಸಾಧಿಸಿದವರ ಸಂಖ್ಯೆಯು ಕಡಿಮೆಯಿದೆ. ಆದ್ದರಿಂದ ಅನಿವಾರ್ಯವಾಗಿ ಪ್ರಧಾನ ಸಂಸ್ಕೃತಿಯ ಸಿದ್ಧಾಂತಗಳನ್ನೇ ತಾನು ಒಪ್ಪುವ ಸ್ಥಿತಿ ಸಾದರದ್ದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಮಹತ್ವಪೂರ್ಣವಾದುದ್ದಾಗಿದೆ ಎಂದು ಹೇಳಬಹುದು.

ಮನುಷ್ಯ ನಾಗರಿಕನಾದಂತೆ ಸಂಸ್ಕೃತಿಯು ಕೂಡ ಬದಲಾಗುತ್ತ ಹೋಗುತ್ತದೆ. ಸಂಸ್ಕೃತಿಯು ಒಂದು ಜಾತಿಗೂ ಮತ್ತೊಂದು ಜಾತಿಗೂ ಭಿನ್ನವಾಗಿರುತ್ತದೆ. ಈ ಭಿನ್ನತೆಯಲ್ಲಿಯೇ ಹಲವು ವಿಶಿಷ್ಟ ಅಂಶಗಳು ಅಡಗಿರುತ್ತವೆ. ಅವನ್ನು ತಿಳಿಯಲು, ಆ ಜಾತಿಯ ಜನರನ್ನು ಅರ್ಥಮಾಡಿಕೊಳ್ಳಲು, ಸಂಸ್ಕೃತಿ ಅಧ್ಯಯನ ಬಹುಮುಖ್ಯವಾದದ್ದಾಗಿದೆ. ಈ ಎಲ್ಲಾ ಕಾರಣಗಳಿಂದ **"ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ವಸ್ತು ವಿಷಯದ ಪ್ರಸ್ತುತತೆ ಇದೆ ಎಂದೇ ಹೇಳಬಹುದು.

ಪ್ರಸ್ತುತ ಪ್ರಬಂಧವು ಕರ್ನಾಟಕದ ಪ್ರಾದೇಶಿಕ ಪರಿಸರದಲ್ಲಿ ವಾಸಿಸುತ್ತಿರುವ ಸಾದರ ಜಾತಿಯ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನೊಳಗೊಂಡಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಕೈಗೊಂಡಿರುವ ವ್ಯಾಪಕ ಕ್ಷೇತ್ರಕಾರ್ಯದ ಪ್ರತಿಫಲವೇ ಈ **"ಸಾದರು-ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಮಹಾ ಪ್ರಬಂಧವಾಗಿದೆ. ಜೊತೆಗೆ ಪ್ರಕಟಿತ ಸಾಹಿತ್ಯದ ನೆರವನ್ನೂ ಹಾಗೂ ಕೆಲ ಅಪ್ರಕಟಿತ ನೆರವನ್ನು ಪಡೆಯಲಾಗಿದೆ.

"ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವು ವ್ಯಾಪಕವಾದ ಕ್ಷೇತ್ರಾಕಾರ್ಯದ ಮುಖಾಂತರ ಸಂಗ್ರಹಿಸಿದ ಖಚಿತ ಸಂಗತಿಗಳು ಹಾಗು ನಿಖರ ಮಾಹಿತಿಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ರಚಿಸಿದ ಸಂಶೋಧನಾ ಪ್ರಬಂಧವಾಗಿದೆ. ಪ್ರಸ್ತುತ ಮಹಾಪ್ರಬಂಧವು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪ್ರಸ್ತುತತೆಯನ್ನು ಕುರಿತು ಹೇಳಲಾಗಿದೆ.

ಅಧ್ಯಾಯ ಎರಡರಲ್ಲಿ ಸಾದರ ಮೂಲವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯವನ್ನು ಆರು ಭಾಗಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಸಾದರು ಪದದ ವಿವಿಧ ರೂಪಗಳು ಹಾಗೂ ವಿಭಿನ್ನ ಅರ್ಥಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಶಾಸನಗಳಲ್ಲಿ ಸಾದರು:- 'ಸಾದರ ಮೂಲವನ್ನು ಕುರಿತು ಅಧ್ಯಯನ ಮಾಡುವಲ್ಲಿ

ಶಾಸನಗಳು ಸಹಕಾರಿಯಾಗಿವೆ. ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಸಾದರು ಪದಬಳಕೆಯ ಅಧ್ಯಯನದಿಂದ ಸಾದರ ಮೂಲವನ್ನು ಗುರುತಿಸಲು ಸಹಾಯಕವಾಗುತ್ತದೆ'.

ಈ ನಿಟ್ಟಿನಲ್ಲಿ 'ನದಿಹರಳಹಳ್ಳಿ ಶಾಸನ', ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕು 'ಗುತ್ತಲಿನ ಶಾಸನ', 'ಲಕ್ಷ್ಮೇಶ್ವರದ ಶಾಸನ', 'ಮೂಕನೂರ ಶಾಸನ', 'ಕೆಳಧಿ ರಾಜನ ಶಾಸನ' ಇನ್ನೂ ಮುಂತಾದ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸಾದರ ಮೂಲವನ್ನು ಗುರುತಿಸುವಲ್ಲಿ ಶಾಸನಗಳ ಪಾತ್ರ ಮಹತ್ವವಾದುದಾಗಿದೆ.

ಸಾಹಿತ್ಯ ಕೃತಿಗಳು ಮತ್ತು ಸಾದರ ಬದುಕು:- ಸಾದರನ್ನು ಕುರಿತಂತೆ ಹಲವು ಸಾಹಿತ್ಯ ಕೃತಿಗಳಲ್ಲಿನ ವಿವರಣೆಯನ್ನು ಗಮನಿಸಲಾಗಿದೆ.

ಜನಪದ ಕಥೆಗಳಲ್ಲಿನ ಉಲ್ಲೇಖಗಳು:- ಸಾದರ ಉಗಮ ಮತ್ತು ಮೂಲವನ್ನು ಕುರಿತಂತೆ ಜನಪದರಲ್ಲಿ ಕೆಲವು ಜನಪದ ಕಥೆಗಳು ಚಾಲ್ತಿಯಲ್ಲಿವೆ; ಇವುಗಳ ಅಧ್ಯಯನದಿಂದಲೂ ಸಾದರ ಮೂಲವನ್ನು ಕುರಿತು ಸಾಕಷ್ಟು ಮಾಹಿತಿ ದೊರೆತಿದೆ. ಸಾದರು (ಹಿಂದೂ ಸಾದರು) ಮತ್ತು ಜೈನಸಾದರು, ಸಾದರ ಲಿಂಗಾಯತರು, ಬೆಳ್ಳಿಸಾದರುಗಳ ನಡುವಿನ ಸಾಮ್ಯತೆ ಅಥವಾ ಹೋಲಿಕೆಯ ಅಂಶಗಳನ್ನು ಮತ್ತು ವ್ಯತ್ಯಾಸಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಸಾದರು (ಹಿಂದೂ ಸಾದರು) ವಾಸಿಸುತ್ತಿರುವ ಪ್ರದೇಶಗಳು ಹಾಗೂ ಅಲ್ಪಸಂಖ್ಯಾತರಾದ ಅವರ ಜನಸಂಖ್ಯೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಸಾದರ ಜೀವನ ವಿಧಾನವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮೂರನೇ ಅಧ್ಯಾಯವನ್ನು ಎಂಟು ಭಾಗಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಸಾದರ ಸಾಮಾಜಿಕ ವ್ಯವಸ್ಥೆ, ಕುಟುಂಬ ವ್ಯವಸ್ಥೆ, ಆಹಾರ ಪದ್ಧತಿ, ಉಡುಗೆ-ತೊಡುಗೆ, ಆರ್ಥಿಕ ವ್ಯವಸ್ಥೆ, ರಾಜಕೀಯ ಹಾಗೂ ನ್ಯಾಯ ವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಅರ್ಥಪೂರ್ಣವಾದ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಾದರ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯವನ್ನು ಐದು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

ಒಂದು ಜಾತಿಗೂ ಮತ್ತೊಂದು ಜಾತಿಗೂ ನಡುವೆ ಇರುವ ಹೋಲಿಕೆ ಮತ್ತು ವ್ಯತ್ಯಾಸವನ್ನು ಗುರುತಿಸುವಲ್ಲಿ ಸಹಾಯಕವಾಗುವ ಪ್ರಮುಖ ಅಂಶಗಳಲ್ಲಿ ಆಚರಣೆ ಮತ್ತು ಸಂಪ್ರದಾಯಗಳು ಮಹತ್ವದ ಸ್ಥಾನ ಪಡೆದಿವೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಾಯ ಬಹು ಮುಖ್ಯವಾದುದಾಗಿದೆ.

ಆಚರಣೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಹುಟ್ಟು, ಮದುವೆ, ಹಬ್ಬಗಳು, ಸಾವು, ನಂಬಿಕೆಗಳನ್ನು ಕುರಿತು ವಿಷದಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ಭಾಷೆ ಮತ್ತು ಸಾಹಿತ್ಯವನ್ನು ಕುರಿತು ಹೇಳಲಾಗಿದೆ. ಪ್ರಸ್ತುತ ಅಧ್ಯಾಯವನ್ನು ಎಂಟು ಭಾಗಗಳನ್ನಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಭಾಷೆ ಮತ್ತು ಸಾಹಿತ್ಯ, ಜನಪದ ಸಾಹಿತ್ಯ, ಸಂಪ್ರದಾಯದ ಹಾಡುಗಳು, ಗಾದೆಗಳು, ಒಗಟುಗಳು, ಕಥೆಗಳು, ನುಡಿಗಟ್ಟುಗಳು, ಶಿಷ್ಟ ಸಾಹಿತ್ಯವನ್ನು ಕುರಿತಂತೆ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಾದರಲ್ಲಿ ರೂಡಿಯಲ್ಲಿರುವ ವೈದ್ಯ ಪದ್ಧತಿಯನ್ನು ಕುರಿತು ಚರ್ಚಿಸಲಾಗಿದೆ. ಜನವೈದ್ಯ, ಪಶುವೈದ್ಯ ಪದ್ಧತಿ, ಕೃಷಿ ವೈದ್ಯ ಪದ್ಧತಿಯ ಬಗೆಗೆ ಅಭ್ಯಸಿಸಲಾಗಿದೆ,

ಹಾಗೆಯೇ ಅಧ್ಯಾಯ ಏಳರಲ್ಲಿ ಜನಪದ ಕ್ರೀಡೆಗಳು, ರಂಗೋಲಿಯನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಬದಲಾಗುತ್ತಿರುವ ಪರಿಸರದಲ್ಲಿ ಸಾದರನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಒಂಭತ್ತರಲ್ಲಿ ಉಪಸಂಹಾರ ಭಾಗದಲ್ಲಿ ಅಧ್ಯಯನದ ಒಟ್ಟು ಫಲಿತಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಅನುಬಂಧದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಹಾಯ–ಸಹಕಾರ ನೀಡಿ ತಮ್ಮ ಬದುಕಿನ ಒಳನೋಟಗಳನ್ನು ಹಾಗೂ ಹಲವಾರು ಮೌಲ್ಯಯುತವಾದ ವಿಷಯಗಳನ್ನು ನನ್ನೊಂದಿಗೆ ಹಂಚಿಕೊಂಡ ಪ್ರಮುಖ ವಕ್ತೃಗಳ ಪರಿಚಯವನ್ನು ಹಾಗೂ ಸಹಾಯಕ ಗ್ರಂಥಗಳ ಪಟ್ಟಿಯನ್ನು ಕೊಡಲಾಗಿದೆ.

ಒಟ್ಟಾರೆಯಾಗಿ ಭಾರತದಲ್ಲಿ ಕಂಡು ಬರುವ ಹಲವಾರು ಜನಪದ ವೃಂದಗಳಲ್ಲಿ ಒಂದಾದ ಸಾದರ ಬದುಕು ಮತ್ತು ಸಂಸ್ಕೃತಿಯನ್ನು ಜಾನಪದೀಯ ಹಿನ್ನೆಲೆಯ ಅಧ್ಯಯನದ ಉದ್ದೇಶವನ್ನಿಟ್ಟುಕೊಂಡು, ಸಾದರ ಸಂಸ್ಕೃತಿಯ ಸಮಗ್ರವಾದ ಅಧ್ಯಯನವನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನವು ಹಲವು ಮಿತಿಗಳ ನಡುವೆಯು ಸಾದರ ಸಂಸ್ಕೃತಿಯನ್ನು ಸ್ವಲ್ಪ ಮಟ್ಟಿಗಾದರೂ ಪರಿಚಯ ಮಾಡಿಕೊಡಬಹುದೆಂಬ ನಂಬಿಕೆಯಿದೆ.

ಅಡಿಟಿಪ್ಪಣಿಗಳು

೧. ಡಾ.ಎಂ.ಚಿದಾನಂದಮೂರ್ತಿ–"ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" –ಪುಟ ಸಂಖ್ಯೆ–೧.

೨. ಚ.ನ.ಶಂಕರ್‌ರಾವ್–"ಸಮಾಜಶಾಸ್ತ್ರ"–ಪುಟ ಸಂಖ್ಯೆ–೧೭೮–೧೭೯.

೩. ಡಾ.ಟಿ.ಎಂ.ಭಾಸ್ಕರ್–'ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ'– ಪುಟ ಸಂಖ್ಯೆ– ಅರಿಕೆ ಭಾಗ.

೪. ಡಾ.ಜೆ.ಎನ್.ಉಪಾಧ್ಯ–'ಸಂಸ್ಕೃತಿ ಶೋಧ ಮತ್ತು ಪ್ರೊ.ಹಂಪನಾ'– ಪುಟ ಸಂಖ್ಯೆ–೧೪.

ಅಧ್ಯಾಯ-೨

ಸಾದರು ಜಾತಿಯ ಮೂಲ

೨.೧: ಸಾದರು ಪದದ ವಿವಿಧ ರೂಪಗಳು ಹಾಗೂ ವಿಭಿನ್ನ ಅರ್ಥಗಳು.

೨.೨: ಶಾಸನಗಳಲ್ಲಿ ಸಾದರನ್ನು ಕುರಿತ ಉಲ್ಲೇಖಗಳು.

೨.೩: ಸಾಹಿತ್ಯ ಕೃತಿಗಳಲ್ಲಿ ಸಾದರನ್ನು ಕುರಿತ ವಿವರಗಳು.

೨.೪: ಜನಪದ ಕಥೆಗಳಲ್ಲಿನ ಉಲ್ಲೇಖಗಳು.

೨.೫: ಹಿಂದೂಸಾದರು, ಜೈನಸಾದರು, ಸಾದರ ಲಿಂಗಾಯತರು, ಬೆಳ್ಳಿಸಾದರನ್ನು ಕುರಿತ ಸಂಕ್ಷಿಪ್ತ ವಿವರ.

೨.೬: ಸಾದರು ವಾಸಿಸುತ್ತಿರುವ ಪ್ರದೇಶಗಳು ಮತ್ತು ಜನಸಂಖ್ಯೆ.

ಅಧ್ಯಾಯ-೨

ಸಾದರು ಜಾತಿಯ ಮೂಲ

ಮಾನವ ಸಮಾಜ ಮತ್ತು ಸಂಸ್ಕೃತಿಯ ಅಧ್ಯಯನ ಮಾಡುವ ಸಂದರ್ಭದಲ್ಲಿ ಆ ಸಂಸ್ಕೃತಿಯ ಸೃಷ್ಟಿಕರ್ತರಾದ ಜನಸಮುದಾಯದ ಮೂಲದ ಬಗ್ಗೆ ತಿಳಿಯುವುದು ಬಹುಮುಖ್ಯ ವಿಚಾರವಾಗಿದೆ. ಗ್ರಾಮೀಣ ಜನತೆಯ ಒಟ್ಟಾರೆಯಾದ ಅಭ್ಯಾಸವೇ ಜಾನಪದ. ಜನಪದರು ಸಂಪ್ರದಾಯಬದ್ದರು. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸನೆಂದು' ದೇವರನ್ನೆ ನಂಬಿ ಬದುಕು ಸಾಗಿಸುವುದೇ ಅವರ ಜೀವನದ ಗುರಿ. ಅವರ ಜೀವನವಿದ್ದಂತೆ ಅವರ ಸಂಸ್ಕೃತಿ.

ಯಾವುದೇ ಒಂದು ಜನಪದ ಸಮುದಾಯವು ಅವರ ಬದುಕಿನ ಕ್ರಮ, ಅವರು ನೆಲೆಗೊಂಡ ಪ್ರಾದೇಶಿಕ ಪರಿಸರ, ಅವರ ಆಚಾರ-ವಿಚಾರ, ರೀತಿ-ನೀತಿ, ನಂಬಿಕೆ-ನಡವಳಿಕೆಗಳ ಹಲವಾರು ವೈಶಿಷ್ಟ್ಯಗಳನ್ನು ಒಳಗೊಂಡಿರುತ್ತದೆ.

ಜಗತ್ತಿನ ಸಕಲ ಪ್ರಾಣಿಗಳ ಅಧಿಪತಿ, ಸಂಸ್ಕೃತಿ ಮತ್ತು ನಾಗರಿಕತೆಯ ಸೃಷ್ಟಿಕರ್ತ ಮಾನವ. ಅವನ ಸಮಾಜ ಮತ್ತು ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಹಾಗೂ ಅದರ ಕಾರ್ಯಶೀಲತೆ ಮತ್ತು ಬದಲಾವಣೆಗಳನ್ನು ಅಭ್ಯಾಸ ಮಾಡುವುದು ಸೂಕ್ತವಾಗಿದೆ. ಮಾನವನು ಭೂಮಿಯ ಮೇಲೆ ಹುಟ್ಟಿದಂದಿನಿಂದಲೂ ಮಾನವ ಸಮಾಜ ಮತ್ತು ಸಂಸ್ಕೃತಿಯು ಅಸ್ತಿತ್ವಕ್ಕೆ ಬಂದವು ಎನ್ನಬಹುದು. ಹೀಗೆ ಅಸ್ತಿತ್ವಕ್ಕೆ ಬಂದ ಸಮಾಜವು ಬೆಳೆದು ಮುಂದೆ ಕಾಲಕ್ರಮೇಣ ತನ್ನ ಪರಿಸರಕ್ಕೆ ಅನುಗುಣವಾಗಿ ಬದಲಾಗುತ್ತಾ, ಬೆಳೆಯುತ್ತಾ ಬಂದು ಇಂದು ಅಧುನಿಕ, ಔದ್ಯೋಗಿಕ, ನಗರ ಸಮಾಜಗಳಾಗಿ ಪರಿವರ್ತನೆ ಹೊಂದಿದೆ. ಹೀಗೆ ಅತೀ ಸರಳ ಸಮಾಜ ಸಂಸ್ಕೃತಿಯಾಗಿ ಹುಟ್ಟಿ ಬೆಳದು ಈ ಉನ್ನತ ಸ್ಥಿತಿಗೆ ಬರಲು ಅನೇಕ ಹಂತಗಳನ್ನು ಮತ್ತು ಅನೇಕ ವರ್ಷಗಳನ್ನು ದಾಟಿ ಬರಬೇಕಾಯಿತು. ಹೀಗೆ ಸಂಸ್ಕೃತಿಯು ಅನೇಕ ಪರಿಸರ, ಕಾಲ ಮುಂತಾದವುಗಳ ಪ್ರಭಾವಕ್ಕೆ ಸಿಕ್ಕಿ ಬೆಳೆದು ಬಂದಿದೆ.

ಸಮಾಜ ಮತ್ತು ಸಂಸ್ಕೃತಿ ಒಂದನ್ನೊಂದು ಬಿಟ್ಟು ಬದುಕಲಾರದಷ್ಟು ಅವಿನಾಭಾವ ಸಂಬಂಧವನ್ನು ಹೊಂದಿದೆ. ಒಂದರಿಂದ ಇನ್ನೊಂದಕ್ಕೆ ತುಷ್ಟಿ, ಪುಷ್ಟಿ ಮೂಲ ಎಂದೇ ಹೇಳಬಹುದು.

"ಸಮಾಜವೆನ್ನುವುದು ಒಂದುಗೂಡಿಬಾಳುವ ಜನತೆಯ ಒಂದು ಘಟಕ. ಆ ಜನತೆಯ ಜೀವನ, ರೀತಿ-ನೀತಿ, ನಡವಳಿಕೆ, ಭಾವನೆ, ಕಷ್ಟ-ನಷ್ಟ, ಆಗು-ಹೋಗು, ನಂಬಿಕೆ ಮುಂತಾದವು ಆ ಸಮಾಜದಲ್ಲಿ ಹೆಪ್ಪುಗಟ್ಟಿ ನಿಲ್ಲುತ್ತವೆ, ನಿಂತುದನ್ನು ಕಾಣುತ್ತೇವೆ. ಆ ಸಮಾಜದ ಪದರುಗಳನ್ನು ಬಿಚ್ಚಿ ತೋರಿಸುವಂತೆ ಆ ಜನತೆಯ ಸಾಹಿತ್ಯ ಮೂಡಿ ಬರುವುದುಂಟು, ಜನತೆಯ ಸಂಸ್ಕೃತಿ ತಲೆದೋರುವುದುಂಟು. ಆದ್ದರಿಂದ ಅಯಾ ಜನಾಂಗ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಹೇಳ ಹೊರಟವರು ಆಯಾ ಜನಾಂಗವನ್ನು ಅದರ ಸಮಾಜವನ್ನು ಅರಿತುಕೊಳ್ಳುವುದು ಅತ್ಯಾವಶ್ಯಕವಾಗಿದೆ"[೧].

ಮನುಕುಲದ ವಿಕಾಸದ ಹಾದಿಯಲ್ಲಿ ಸಂಸ್ಕೃತಿಯು ಉಗಮಹೊಂದಿ ತಾನೇ ಬೆಳೆಯುತ್ತಿದ್ದರೂ ಅದನ್ನು ಬದಲಾಯಿಸುವ ಪ್ರಯತ್ನಗಳು ಕಾಲಕಾಲಕ್ಕೆ ಜನತೆಯಿಂದ ನಡೆಯಲೂ ಬಹುದು. ಮಾನವ ಸಂಸ್ಕೃತಿಯ ಹಿಡಿತದಲ್ಲಿ ಸಿಕ್ಕಿದ್ದರೂ ಅದರ ಗುಲಾಮ ಆತನಲ್ಲ. ಯೋಚನಾಶಕ್ತಿ ಬೆಳೆದಂತೆ ಸಂಸ್ಕೃತಿ ಮಾರ್ಪಡುತ್ತದೆ. ಇದನ್ನು ಅಭ್ಯಸಿಸುತ್ತಲೇ ಸಂಸ್ಕೃತಿಯನ್ನು ಅರಿಯತೊಡಗುವುದು ಔಚಿತ್ಯಪೂರ್ಣವಾದುದು. ಈ ದೃಷ್ಟಿಯಿಂದ ಜನಪದ ಸಂಸ್ಕೃತಿಯ ಅಭ್ಯಾಸದೊಂದಿಗೆ ಜಾತಿಯ ಮೂಲವನ್ನು ಕುರಿತಂತೆ ಅಭ್ಯಾಸಮಾಡುವುದು ವಿಹಿತವಾಗಿದೆ.

ಸಾದರ ಸಂಸ್ಕೃತಿಯ ವಿಶಿಷ್ಟತೆಯನ್ನು ಹೆಕ್ಕಿ ತೆಗೆದು, ಸಮಕಾಲೀನ ಸಮಾಜದ ಮುಂದೆ ಸಾದರ ಸಂಸ್ಕೃತಿಯನ್ನು ಸಾದರ ಪಡಿಸುವ ಕಾರ್ಯ ಬಹುಮಹತ್ವದ್ದಾಗಿದೆ. ಸಾದರಲ್ಲಿ ಕೆಲವರು ಹಿಂದೆ ಜೈನ, ವೀರಶೈವ, ವೈಷ್ಣವ ಧರ್ಮಗಳನ್ನು ಅನುಸರಿಸಿ ಆ ಧರ್ಮಗಳಿಂದ ಪುನಃ ತಮ್ಮ ಸ್ವಧರ್ಮಕ್ಕೆ ಮರಳಿಬಂದರು, ಆದರೆ ಮತ್ತೆ ಕೆಲವರು ಅದೇ ಧರ್ಮಗಳ ಅನುಯಾಯಿಗಳಾದರು. ಧರ್ಮಗಳ ಹುಡುಕಾಟದಿಂದ ಸಾಧಿಸಿದ್ದು, ಪಡೆದದ್ದು, ಅಷ್ಟರಲ್ಲೇ ಇದ್ದರೂ ಸರ್ವಧರ್ಮ ಸಮನ್ವಯದ ಭಾವನೆ ಮೂಡಿ, ಮೊಳೆತು, ಬೆಳೆಯಿತು.

೨.೧: ಸಾದರು ಪದದ ವಿವಿಧ ರೂಪಗಳು ಹಾಗೂ ವಿಭಿನ್ನ ಅರ್ಥಗಳು.

ಸಾದರು ಪದದ ವಿವಿಧ ರೂಪಗಳು ಹಾಗೂ ಅವುಗಳ ವಿಭಿನ್ನ ಅರ್ಥಗಳ ಅಧ್ಯಯನದಿಂದ 'ಸಾದರ' ಮೂಲವನ್ನು ಗುರುತಿಸಲು ಸಾಕಷ್ಟು ನೆರವು ದೊರೆಯುತ್ತದೆ. ಯಾವುದೇ ಒಂದು ಜಾತಿಯ ನಾಮದೇಯವು ಕಾಲ-ಪರಿಸರದ ಹಿನ್ನೆಲೆಯಲ್ಲಿ ಉಚ್ಚಾರಣೆ ಮತ್ತು ಅರ್ಥದಲ್ಲಿ ಬದಲಾವಣೆ ಹೊಂದುತ್ತಿರುತ್ತದೆ. ಇದಕ್ಕೆ ನಮಗೆ ಶಾಸನಗಳಿಂದ, ಸಾಹಿತ್ಯಕೃತಿಗಳಿಂದ ಮತ್ತು ಜನಪದದಿಂದ ಸ್ಪಷ್ಟ ನಿದರ್ಶನಗಳು ದೊರೆಯುತ್ತವೆ.

'ಸಾದರು' ಪದವು ಹಲವು ರೂಪಗಳಲ್ಲಿ ಪ್ರಯೋಗಿಸಲ್ಪಟ್ಟು ವಿಭಿನ್ನ ಅರ್ಥ ಪರಂಪರೆಯನ್ನು ಹೊಂದಿದೆ. ಸಾದರು ಪದದ ವಿವಿಧ ರೂಪಗಳು ಮತ್ತು ಅವುಗಳ ವಿಭಿನ್ನ ಅರ್ಥ ಪರಂಪರೆಯನ್ನು ಕೆಳಗಿನಂತೆ ಗುರುತಿಸಬಹುದು.

ದೇಶೀಯ ಮೂಲದ ಜನಸಮುದಾಯವಾದ 'ಸಾದರ' ಪದವು "ಸಾದರು, ಸಾದಕುಲ, ಸಾದವಂಶ, ಸಾಧುಕುಳ, ಸಾದ ಕುಳ, ಸೊಂದೆ ವಂಶ ಎಂಬ ನಾನಾ ರೂಪಗಳಲ್ಲಿ ಬಳಕೆಯಾಗಿದ್ದು ಇವೆಲ್ಲವು 'ಸಾದುಕುಲ'ವನ್ನೇ ಸೂಚಿಸುತ್ತವೆ"[೨].

"ಸಾದ– ಒಂದು ಜನಾಂಗದ ಹೆಸರು ಮತ್ತು ಅದಕ್ಕೆ ಸೇರಿದ ವ್ಯಕ್ತಿ; ಭಾಗವಗಹಿಸುವ ಜಾತಿಗಳು, ಸಾದರು, ಒಕ್ಕಲಿಗರು (ಸಾದರ ಮೂಲ ವೃತ್ತಿ ಅಥವಾ ಕಸುಬು ವ್ಯವಸಾಯ)

ಸಾದು–

ಹಣೆಗಿಡುವ ಕಪ್ಪು ಬಣ್ಣ-(ಇದನ್ನು ಜಾಲಿಕಾಯಿ, ಅಕ್ಕಿ, ರಾಗಿಯ ಕರುಕಿನಿಂದ ತಯಾರಿಸುತ್ತಾರೆ).

ದೃಷ್ಟಿಪರಿಹಾರಕ್ಕೆಂದು ಕೆನ್ನೆ ಅಥವಾ ಗಲ್ಲದ ಮೇಲೆ ಇದರ ಬೊಟ್ಟಿಡುವುದೂ ಉಂಟು; ಇದರಿಂದ 'ಸಾದಿನ ಬೊಟ್ಟು ಹಣೆಯಾಗೆ' ಎಂಬೊಂದು ನಾಣ್ಣುಡಿಯೂ ಇವರಲ್ಲಿ ಚಾಲ್ತಿಯಲ್ಲಿದೆ"[೩]. 'ಸಾದಿಟ್ಟವನೆ ಸಾದ', ಹಂಚಿ ಕಡ್ಡಿಯಷ್ಟು ಸಾದಿ ಕಂಚಿ ತನಕ ಇಡಬಲ್ಲವ ಸಾದ' ಎಂಬ ಗಾದೆಗಳು ಇವರಲ್ಲಿ ಚಾಲ್ತಿಯಲ್ಲಿವೆ.

"ಸಾದಾ-

ಸಾಮಾನ್ಯ, ವಿಶೇಷವಲ್ಲದ್ದು, ಸರಳ, ಸಾಧಾರಣ; ಅವರ ಉಡುಪು ಸಾದಾ ಆಗಿತ್ತು"[೪].

"ಸಾಧು-ಸೌಮ್ಯ ಸ್ವಭಾವದ್ದು, ಸರಳ,

ಒಂಟೆ,.... ಆನೆಗಳಿಗಿಂತ ಹೆಚ್ಚು ಸಾಧು ಮತ್ತು ಉಪಯುಕ್ತ.

ಯತಿ, ಸಂನ್ಯಾಸಿ, ಸಾಧುಸತ್ಪುರುಷರು ಬರುತ್ತಾರೆ"[೫]

"ಸಾದರು-

ಮುಂದಾಳು

ಮುಖಂಡ"[೬].

"ಸಧಾರ-

ಬಲಶಾಲಿ

ಶೂರತನ

ಕಲಿತನ

ಪರಾಕ್ರಮ"[೭].

"ಸಾದರ-

ಆದರ, ಗೌರವ

ಮನ್ನಣೆ

ಆದರಪೂರ್ವಕವಾದ"[೮].

"ಸಾದು–

ಸರಳ ಸ್ವಭಾವದವನು

ಯತಿ

ಯೋಗಿ

ಜೈನ ಸನ್ಯಾಸಿಯ ಕೊಂಡಾಟದ ಒಂದು ನುಡಿ

ಉತ್ತಮವಾದ, ಒಳ್ಳೆಯ

ನಂಬಿಕೆಗೆ ಯೋಗ್ಯವಾದ, ವಿಶ್ವಾಸಾರ್ಹವಾದ

ಶುದ್ಧವಾದ, ಸರಿಯಾದ,

ಸುಂದರವಾದ

ಚೆಲುವಾದ"[೯].

ಕನ್ನಡ ನಿಘಂಟಿನ ಪ್ರಕಾರ–ಸಾದರ (ಗುಣವಾಚಕ) ಎಂದರೆ, ಆದರದಿಂದ ಕೂಡಿದ ಮರ್ಯಾದೆಯಿಂದ ಕೂಡಿದ, ಲಕ್ಷ್ಯದಿಂದ ಕೂಡಿದ, ಗೌರವ ಮನ್ನಣೆ; ಸಾದರು/ಸಾದರ ಎಂದರೆ ಹಾಜರು ಪಡಿಸುವುದು, ಪ್ರಕಟಿಸುವುದು, ಸಾದರಪಡಿಸು ಎಂಬ ಅರ್ಥವಿದೆ. ಅರಬ್ಬಿ ಭಾಷೆ ಮತ್ತು ಹಿಂದೂಸ್ತಾನಿ–ಉರ್ದು ಭಾಷೆಯಲ್ಲಿ "ಸಾದಿರ್" ಎಂದು ಕರೆಯುತ್ತಾರೆ. ಮರಾಠಿ ಭಾಷೆಯಲ್ಲಿ "ಸಾದರ್" ಎಂದು ಕರೆಯಲಾಗುತ್ತದೆ, ಹೀಗೆ ಸೌಮ್ಯ ಸ್ವಭಾವದ, ನಿರುಪದ್ರವಿಯಾದ ಸತ್ಪಥದಲ್ಲಿ ಸಾಗುವ ಜಾತಿಯೆ "ಸಾದರು", "ಸಾಧುಮತ", ಇವರು ಭಾರತದಲ್ಲಿ ಹಿಂದೂ ಧರ್ಮನುಯಾಯಿಗಳು. ಸಾದರು/ಸಾಧು ಮತದವರು ಅಲ್ಪಸಂಖ್ಯಾತರಾಗಿದ್ದು ಕರ್ನಾಟಕದ ಕೆಲವೇ ಕೆಲವು ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ನೆರೆ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡು ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

'K.S.Singh' ರವರು ತಮ್ಮ 'People of India; Karnataka' ಎಂಬ ಕೃತಿಯಲ್ಲಿ ಸಾದರನ್ನು ಕುರಿತಂತೆ ತಮ್ಮದೇ ಆದ ಅಭಿಪ್ರಾಯದ ವ್ಯಕ್ತಪಡಿಸಿದ್ದಾರೆ, 'K.S.Singh' ರವರ ಪ್ರಕಾರ–'The term sadar is derive from the Sanskrit word sadhu, i.e., "gentle". The member of this community style themselves as Sadhu Matasthru.

ಸಾದರು ಜಾತಿಯನ್ನು ಸಾಧುಮತ, ಸಾದಕುಲ, ಸಾದರ್, ಸಾದುಗೌಡ, ಸಾಧುಗೌಡರ್, ಸಾದರಗೌಡ, ಸಾದರ, ಸಾದರಿ, ಸಾದರ ಕಾಪು, ಸಾದರ ರೆಡ್ಡಿ ಎಂದು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಸನ್ನುಡಿ, ಸನ್ನಡೆ, ಸನ್ಮಾರ್ಗಗಳು ಇರುವುದರಿಂದಲೇ ಇವರನ್ನು ಸಾದರು ಎಂದು ಕರೆದಿರಬಹುದು.

"ಸಾಧು" ಎಂಬ ಸಂಸ್ಕೃತ ಪದದಿಂದ 'ಸಾದ' ಎಂಬ ಪದ ಬಂದಿದೆ. ಇದರರ್ಥ ಸಭ್ಯ, ಉದಾರ, ಮೃದು, ದಯಾಪರ, ಒಳ್ಳೆಯ ಸ್ವಭಾವದವ, ಕೋಮಲ ಅಥವಾ ನಮ್ರ, ಪಳಗಿದ ಎಂಬ ಮುಂತಾದ ಅರ್ಥವನ್ನು ಸೂಚಿಸಲಾಗಿದೆ.

ಒಟ್ಟಾರೆಯಾಗಿ 'ಸಾದರ' ಎಂಬ ಪದದ ವಿವಿಧ ರೂಪಗಳು ಹಾಗೂ ವಿಭಿನ್ನ ಅರ್ಥಗಳನ್ನು ಗಮನಿಸಿದಾಗ ಗೋಚರಿಸುವ ಅಂಶವೆಂದರೆ; 'ಸಾದರ' ಎಂಬ ಪದವು ಈ ಜನತೆಯ ಗುಣ ಸ್ವಭಾವದಿಂದಾಗಿ, ಆಚರಣೆ ಮತ್ತು ಸಂಪ್ರದಾಯದಿಂದಾಗಿ ರೂಪುಗೊಂಡ ಪದವೇ ಹೊರತು ಅವರ ಕಸುಬಿನಿಂದಲ್ಲವೆಂಬುದು ಸ್ಪಷ್ಟವಾಗುತ್ತದೆ.

ಭಾರತದಲ್ಲಿ ಜಾತಿಗಳು ವೃತ್ತಿಗಳ ಆಧಾರದಿಂದ ನಿರ್ಧಾರಿತವಾಗುತ್ತವೆ ಎಂಬ ಮಾತು ಅಕ್ಷರಶಃ ಸತ್ಯವಾದುದಾದರೂ ಕೆಲ ಜಾತಿಗಳು ಇದರಿಂದ ಹೊರತಾಗಿ ಉಳಿಯುತ್ತವೆ. ಅಂತಹವುಗಳಲ್ಲಿ ಸಾದರ ಜಾತಿಯು ಒಂದೆಂದು ಹೇಳಬಹುದು. ಸಾದರು ಉತ್ತಮಗುಣಗಳನ್ನೊಳಗೊಂಡ ಸುಸಂಸ್ಕೃತ ಮತ್ತು ಶ್ರೀಮಂತ ಸಂಸ್ಕೃತಿಯನ್ನೊಳಗೊಂಡ ಅಲ್ಪಸಂಖ್ಯಾತ ಜಾತಿಯೆಂಬುದು ಹಲವರ ಅಭಿಪ್ರಾಯವಾಗಿದೆ.

೨.೨: ಶಾಸನಗಳಲ್ಲಿ ಸಾದರನ್ನು ಕುರಿತ ಉಲ್ಲೇಖಗಳು.

ಸಾದರ ಮೂಲವನ್ನು ಕುರಿತು ಅಧ್ಯಯನ ಮಾಡುವಲ್ಲಿ ಶಾಸನಗಳು ಪ್ರಮುಖಪಾತ್ರ ವಹಿಸುತ್ತವೆ. ಅಷ್ಟೇ ಅಲ್ಲದೆ ಸಾದರ ಮೂಲವನ್ನು ಪೂರ್ವಭಾವಿ ನಿರ್ಧಾರಗಳಿಂದ ಮುಕ್ತರಾಗಿ ಹುಡುಕಹೊರಟವರಿಗೆ ವಿಚಾರಗಳ ಗಣಿಗಳಂತೆ ಕಾರ್ಯನಿರ್ವಸುತ್ತವೆ. ಈ ನಿಟ್ಟಿನಲ್ಲಿ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸಾದರನ್ನು ಕುರಿತ ವಿವರಣೆಯು ಜಾತಿಯ ಮೂಲವನ್ನು ಗುರುತಿಸಲು ನೆರವಾಗುತ್ತದೆ.

"ಸಾದುಕುಲವನ್ನು ಕುರಿತು ವಿವರಣೆಗೆ ಭೂಮಿಕೆಯೊಂದನ್ನು ನಿರ್ಮಿಸಿದ ಸಾಲುಗಳು ಇವು:

ಜೈನರಲ್ಲಿ–'

ಚತುರ್ಥ

ಬೋಗಾರ

ಸಾದ

ಪಂಚಮ

ವೈಶ್ಯ' ಕುಲಗಳಿವೆ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಈ ಪಂಗಡಗಳು ಚಾಲ್ತಿಯಲ್ಲಿವೆ. ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಇವು ಪ್ರಬಲವಾಗಿ ಕಂಡು ಬರುತ್ತವೆ: ಜೈನರಲ್ಲೇ ಇರುವ 'ಸಾದಕುಲ' ಕುರಿತ ಪ್ರಾಚೀನ ಶಾಸನ ಪ್ರಯೋಗ ಧಾರವಾಡ ಜಿಲ್ಲೆ ರಾಣಿ ಬೆನ್ನೂರು ತಾಲ್ಲೂಕು ನದಿಹರಳಹಳ್ಳಿ ಶಾಸನದಲ್ಲಿದೆ"[೧೦].

"ನದಿಹರಳಹಳ್ಳಿಯ ಶಾಸನವು ಕಳಚೂರ್ಯ ಚಕ್ರವರ್ತಿ ವೀರಬಿಜ್ಜಣದೇವನ ಆಳ್ವಿಕೆಗೆ ಸೇರಿದ್ದು. ೭೦ ಸಾಲುಗಳಿರುವ ಈ ಶಾಸನ ತುಂಬಾ ಸವೆದು ಹೋಗಿದೆ. ಅಲ್ಲಲ್ಲಿ ಮುಕ್ಕಾಗಿದೆ, ಶಾಸನದ ಅರೆಪಾಲು ಅಳಿಸಿ ಹೋಗಿದ್ದರೂ, ಉಳಿದಿರುವಷ್ಟರಲ್ಲಿ ಸಿಗುವುದು ಸಾದಕುಲದ ಹಿರಿಯರ ಹಿರಿಮೆ–ಗರಿಮೆಗಳ ಬಿಚ್ಚಳಿಕೆ.

ಸಾದಕುಳ ಪ್ರದೀಪನಾದ ನಾಗಗಾವುಂಡ–ಅರಸಿಗಾವುಂಡಿಯರು ಗೊಟ್ಟಗಡಿಯ ವೃಷಭ ಜಿನೇಂದ್ರ ಭವನವನ್ನು ಕಟ್ಟಿಸಿದ್ದನ್ನು ಸುಕವಿ ಶಾಂತಿರನು ವಿರಚಿಸಿರುವ ಈ ಸುದೀರ್ಘ (ತುಟಿತ) ಶಾಸನ ವರ್ಣಿಸಿದೆ"[೧೧].

ಪ್ರಕೃತಿಯ ತವರ್ಮನೆ ಎನಿಸಿದ ಬನವಾಸಿ ನಾಡಿನ ಸಮೀಪವಿರುವ ಗೊಟ್ಟಗಡಿ ಎಂಬ ಪ್ರದೇಶದಲ್ಲಿ ನಿರ್ಮಲ ಜೈನ ಧರ್ಮಪರರು, ಸಂಯಮ ನಿರತರು ಇದ್ದರು. ಅವರ ನಟ್ಟ–ನಡುವೆ ಕೇತಗಾವುಂಡನು ಅವನ ವಧುವು, ಪೆಸರ್ವಡೆದರು. ಅವರ ಮಗ ಬರ್ಮಗಾವುಂಡನು ಆತನ ಸತಿ ಗುಣವತಿ ವನಿತೆಯರೊಳಗೆ ಅರಸಿಯೆಂಬ ಪೆಸರನ್ನು ಪಡೆದು, ಭೂತಳದೊಳ್ಮಿಗಿಲೆನಿಪ್ಪ ಪೆರ್ಮೆ ಹೊಂದಿದ್ದರು. ಅವರ ಮಗ ಸಾಮನ್ತಂ ನಾಗಗಾವುಂಡಂ ಈತನು ಸದಾಕಾಲವೂ ಜಿನಪೂಜೆ, ಜಿನವಂದನೆಗಳಿಂದ, ಚಾರುಚರಿತದ ಪೆಂಪಿಂದ, ಜೈನ ಬ್ರತಾಶಂಸನನಾಗಿ ಭೂಮಿಯಲ್ಲಿ ಖ್ಯಾತನಾಮನಾಗಿದ್ದನು. ಮಂಗಳಕರವಾದ ಜೈನಾಭಿಷೇಕ ಅರ್ಚನಾದಿ ಸ್ತೋತ್ರಾವಳಿಯಲ್ಲಿ ಈ ನಾಗಾಗಾವುಂಡನು ಜಿನ ಭಕ್ತ ಪ್ರಕರದ ಸ್ತುತಿಪಾತ್ರನಾಗಿದ್ದನು.

"ನಾಗಗಾವುಂಡನು 'ಸಾದವಂಶ ಕುಮುದ'ನಾಗಿದ್ದನು. ಈತನಿಗೆ ಸಿದ್ಧಾಚಾರ್ಯ ಉಪಾಧ್ಯಾಯ ಸರ್ವ ಸಾಧುಗಳು, ಐಶ್ವರ್ಯಮನ್ ಎಂದು ಸಾದುಕುಲದವರು ಹಾರೈಸಿದರು. ಮೂಲ ಸಂಘ ಸೂರಸ್ಥಗಣ ಚಿತ್ರ ಕೂಟಾನ್ವಯದ ವಾಸುಪೂಜ್ಯ ಮುನೀಂದ್ರ ಜೈನ ಸಿದ್ಧಾಂತ ಚಕ್ರವರ್ತಿಯೆಂದು ಜಗಧ್ಧವಳಿತ ಕೀರ್ತಿಪಾತ್ರವಾಗಿದ್ದನು. ಆತನ ಶಿಷ್ಯನಾಗಿ ನೆಗಳ್ದ ರಾವಣಂದಿ ಮುನೀಂದ್ರನು ಅನವಧ್ಯನು, ಅನಘನೂ, ಶಾಂತಮನನೂ ಆಗಿದ್ದನು. ಈತನ ಶಿಷ್ಯರು ಕೇತಗಾವುಂಡ ಮತ್ತು ಕೇತನ ಸತಿ. ಇವರ ಮಗನಾದ ನಾಗ ಗಾವುಂಡನು ಉದಾತ್ತ ವಿಶದ ಕೀರ್ತಿಲತೆಗೆ ಅಡರ್ಪ್ಪಾಯ್ತೆನೆ ಗೊಟ್ಟ ಗಡಿಯೊಳ್ ವೃಷಭನಾಥ (ಆದಿದೇವ) ಜಿನಭವನವನ್ನು (ಬಸದಿ) ಮಾಡಿಸಿದನು"[೧೨].

ಸಾಧುಕುಳ ಪ್ರದೀಪನಾದ ನಾಗಗಾವುಂಡನ ಧರ್ಮಾನುರಾಗ ಮಣಿ ಮುಕುರವಾಗಿ ಈತನು ತಾನು ಕಟ್ಟಿಸಿದ ಜಿನಾಲಯಕ್ಕೆ (ಅರಸ ನಾಗಾ ಗಾವುಂಡ ಮತ್ತು ಅರಸಿ ಗಾವುಂಡಿಯರು) ಅಪಾರವಾದ ಧಾನ, ಧರ್ಮವನ್ನು, ಧತ್ತಿಯನ್ನು ನೀಡಿದರು.

ನಾಗಗಾವುಂಡ ಮತ್ತು ಅರಸಿ ಗಾವುಂಡಿಯು ತಾವು ಮಾಡಿಸಿದ ಜಿನಾಲಯಕ್ಕೆ ಬಿಟ್ಟ ಧಾನದ ವಿವರವು ಈ ರೀತಿ ಇದೆ– “ರಿಷಿಯರಯ್ವರಾಹಾರದಾನಕ್ಕಂ, ಅಜ್ಜಿಯರಾಹಾರದಾನಕ್ಕಂ, ಖಂಣ್ಡಸ್ಫುಟಿತ ಜೀರ್ಣೋದ್ದಾರಕ್ಕಂ ಬಿಟ್ಟ ತೋಂಟ ಹಿರಿಯ ಕೆರೆಯ ಕೆಳಗೆ ತುಂಬಿದ ಮೊದಲಲು ತೋಟ ಅಡಕೆಯ ಮರ ನಾಲೂರೂ ಸಿಡಿಲಗೆರೆಯ ಕೆಳಗೆ ತುಂಬಿದ ಗದ್ದೆ ಮತ್ತರೊಂದು ಊರಿಂದಂ ಬಡಗಲೋಣಿಯಿಂದ ಹಡವಲು ಎರಯಕೆಯಿ ಮತ್ತರು ಮೂರು ಸಿಡಿಲಗೆರೆಯ ತೆಂಕಣ ಕೋಡಿಯ ಕೆಳಗೆ ಹಾಳಕೆಯಿ ಮತ್ತರೊಂದು ಮೂಲೆವೆತ್ತ ಹೇರು ಬಳ್ಳವೊಂದು ಹೆಜುಂಜ್ಕದ ನಾಗಣದೇವ ದೇವರ ನಂದಾದೀವಿಗೆಗೆ ತಿಂಗಳಿಗೆ ಬಿಟ್ಟ ಪಣವೊಂದು ದೇವಗೊಳಗ, ಧರ್ಮಗೊಳಗವಂ ಸಲಿಸುವರಿಂತೀ ಧರ್ಮವ ನಾಡ ಮೇಲಾಳ್ಕೆಯರಸುಗಳುಂ ಮೇಲಾಳ್ಕೆಯ ಮನ್ನೆಯರುಂ ಗೌಂಡನುಂ ಪ್ರಜೆಗಳುಂ ಸ್ವಧರ್ಮದಿಂ ನಡೆಸಿದವರು”[೧೩].

ಈ ನದಿಹರಳಹಳ್ಳಿ ಶಾಸನದಿಂದ ತಿಳಿದು ಬರುವಂತೆ ಸಾದರು ಕುಲವು ಅಂದಿನ ದಿನಗಳಲ್ಲಿಯೇ ಪ್ರತಿಷ್ಠಿತ ಕುಲವಾಗಿದ್ದು, ರಾಜರ ಮತ್ತು ಪ್ರಜೆಗಳ ಗೌರವ, ವಿಶ್ವಾಸಗಳನ್ನು ಗಳಿಸಿತ್ತು. ಸಾದಕುಲದ ಧಾರ್ಮಿಕ ಪ್ರವೃತ್ತಿಯ ಪ್ರತೀಕವಾಗಿರುವ ಈ ಶಾಸನದಲ್ಲಿ ಸಾದಕುಲದ ಒಂದು ಕುಟುಂಬದ ಮೂರು ತಲೆಮಾರಿನ ವಿವರ ಕಟ್ಟಿಸಿದ ಬಸದಿ, ಅದಕ್ಕೆ ಬಿಟ್ಟ ದೊಡ್ಡ ಮೊತ್ತದ ದತ್ತಿಯ ವಿವರಗಳು ಪರಿಣಾಮಕಾರಿಯಾಗಿ ದಾಖಲಾಗಿವೆ.

“ಸಾದಕುಲ ಸಂಬಂಧವಾದ ಮಾಹಿತಿ ದೊರೆಯುವ ಮತ್ತೆ ಕೆಲ ಶಾಸನಗಳನ್ನು ಗಮಿನಿಸುವುದಾದರೆ–ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕು ಗುತ್ತಲಿನ ಶಾಸನದಲ್ಲಿ [ಸೌ.ಇ.ಇ.೧೮,೨೯೩,೧೧೯೨.ಪು.೦೩೭೬೭೮] ಸಾದರನ್ನು ಕುರಿತು ಈ ರೀತಿ ವಿವರವಿದೆ.

ಸ್ವಸ್ತಿ ಸಮಸ್ತಗುಣ ಸಂಪನ್ನು ನುಡಿದು ಮತ್ತೆನ್ನ ಗೋತ್ರ ಪವಿತ್ರ,......ಸಾಹಸೋತ್ತುಂಗ ಸೊಂದೆ ವಂಸ ಲಲಾಮನಭಿಮಾನರಾಮ ಜಿನಸಮಯ ಸಮುದ್ಧರಣ......ಚೂಡಾಮಣಿ ಇತ್ಯಾದಿ ನಾಮಾವಳೀ ವಿರಾಜಿತನಪ್ಪ ಶ್ರೀಮತು ವಡ್ಡಬ್ಯವಹಾರಿ ಕೇತಿಸೆಟ್ಟಿಯು ಪಾರ್ಶ್ವದೇವರ ಪ್ರತಿಷ್ಠೆಯಂ ಮಾಡಿಸಿದಡೆ...... [ಅದೇ.ಪು.ಪುಟ.ಸಂಖ್ಯೆ.೩೭೭]”[೧೪].

ಸಾದರಲ್ಲಿ ಜೈನ ಪರಂಪರೆಯವರು ಇರುವಂತೆ ಶೈವ ಸಂಪ್ರದಾಯದವರು ಮತ್ತು ವೈಷ್ಣವ ಪರಂಪರೆಯವರು ಇದ್ದಾರೆ. ಆದರೆ ಶಾಸನಗಳಲ್ಲಿ ಜೈನ ಮತ್ತು ಶೈವ ಪರಂಪರೆಯ ವಿವರಗಳೇ ಹೆಚ್ಚು ದೊರೆಯುತ್ತವೆ.

“ಲಕ್ಷ್ಮೇಶ್ವರದ ಒಂದು ಶಾಸನದಲ್ಲಿ [ಸೌ.ಇ.ಇ.೨೦,೭೮,೧೧೧೮] ನೆಗೆರ್ದ ಸಾದವೆರ್ಗ್ಗಡೆ ಸೋವರಸನ ಪರಿಚಯವಿದೆ, ಈತ ಶೈವನೆಂದು ಹೇಳಬಹುದು. ಹಾಗಿದ್ದರೆ, ಕ್ರಿ.ಶ.೧೧೧೮ರ ವೇಳೆಗೆ

ಸಾದಕುಲದಲ್ಲಿ ಜೈನ, ಶೈವ ಎಂದು ಇಬ್ಭಾಗವಾಗಿತ್ತೆನ್ನಬಹುದಾಗಿದೆ"[೧೫]. ಲಕ್ಷ್ಮೇಶ್ವರದ ಶಾಸನದಿಂದ ತಿಳಿಯುವ ಪ್ರಮುಖ ಅಂಶವೆಂದರೆ ಸಾದ ಕುಲದ ಕೆಲವರು ಜೈನಧರ್ಮವನ್ನು ಮತ್ತೆ ಕೆಲವರು ಶೈವಮತವನ್ನು ಅನುಸರಿಸುವುದಕ್ಕೆ ಸ್ಪಷ್ಟ ನಿದರ್ಶನ ದೊರೆಯುತ್ತದೆ.

ಸಾದಕುಲದ ಬಗ್ಗೆ ಮಾಹಿತಿ ದೊರೆಯುವ ಮತ್ತೊಂದು ಪ್ರಮುಖ ಶಾಸನವೆಂದರೆ "ಧಾರವಾಡ ಜಿಲ್ಲೆಯ ರಾಣಿ ಬೆನ್ನೂರು (ಬೆಣ್ಣೆಯೂರ್ ಪನ್ನೆರೆಡು) ತಾಲ್ಲೂಕು ಮೂಕನೂರು ಶಾಸನದಲ್ಲಿ [ಸೌ.ಇ.ಇ.೧೮,೧೪೯,೧೧೪೪) "ಮುಸುವಡಿಯ ಸಾಂದಗುಲದೊಳ್ ಪೆಸರೆನಿಸಿದ ಬಾಲಿವಂಶದೊಳ್, ಪುಟ್ಟಿದ ಮೂಕನೂರು ಬೊಪ್ಪಣನು ಬೊಪ್ಪಣೇಶ್ವರ ದೇವರನ್ನು ಮಾಡಿಸಿ ತನ್ನ ಮೂವರು ಸೋದರರೊಂದಿಗೆ ನೆಲದಾನವಿತ್ತ ವಿವರವಿದೆ. ಇದು ಜೈನ ಶಾಸನವಾದರೂ ಪರಮತ ಸಹಿಷ್ಣತೆಯನ್ನು ತೋರಿದ ರೀತಿಗೆ ಉದಾಹರಣೆಯಾಗಿದೆ".[೧೬]

ಮೂಕನೂರು ಶಾಸನದಲ್ಲಿ ತಿಳಿಯುವ ಪ್ರಮುಖ ಅಂಶವೆಂದರೆ ಸಾದರ ಕುಲದಲ್ಲಿ ಹೆಸರುವಾಸಿಯಾದ, ಸೂರ್ಯಕುಲದಲ್ಲಿ ಹುಟ್ಟಿದ ಮೂಕನೂರು ಬೊಪ್ಪಣನು ಬೊಪ್ಪಣೇಶ್ವರ ದೇವರನ್ನು ಮಾಡಿಸಿ ತನ್ನ ಇತರ ಮೂವರು ಸೋದರರೊಂದಿಗೆ ಸೇರಿ ಭೂಮಿಯನ್ನು ದಾನನೀಡಿದ ವಿವರವಿದೆ. ಇದೊಂದು ದಾನ ಶಾಸನವೆಂದೇ ಹೇಳಬಹುದು. ಮೂಕನೂರು ಶಾಸನವು ಜೈನ ಧರ್ಮಕ್ಕೆ ಸೇರಿದ ಶಾಸನವಾದರೂ ಸರ್ವಧರ್ಮ ಸಮನ್ವಯದ ಭಾವನೆಯನ್ನು ಧ್ವನಿಸುತ್ತದೆ.

ಸಾದರ ಬಗ್ಗೆ ಮಾಹಿತಿ ದೊರೆಯುವ ಮತ್ತೊಂದು ಪ್ರಮುಖ ಶಾಸನವೆಂದರೆ, ಕೆಳದಿರಾಜರ ಶಾಸನ–ಇಲ್ಲಿನ ವಿವರಣೆಯನ್ನು ಗಮನಿಸುವುದಾದರೆ–"ಶ್ರೀಮದ್ದೆಡೆವ ಮುರಾರಿ ಕೋಟಿ ಕೋಲಾಹಲ ರಾಜಾಧಿರಾಜ ಸೋಮಶೇಖರ ನಾಯ್ಕರಯ್ಯನವರು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಕ ವರುಷ ೧೫೯೪ ನೆಯ ಆನಂದ ಸಂವತ್ಸರದ ವೈಶಾಖ ಬಹುಳ ೨ ರಲ್ಲು ಶ್ರೀ ಬಾಳೆಹೊನ್ನೂರು ಸಿಂಹಾಸನದ ಮಠದ ಗುರುಶಾಂತ ಸ್ವಾಮಿಯವರು ಈ ಸಂಸ್ಥಾನದ ಮೇಲೆ ದುಷ್ಟಕೃತ್ಯಾದಿಗಳುಂಟು ನಡೆವಳಿಕೆಗೋಸುಗ ಮೆಂತ ಜವಳಿಗೆ ಬಂದ ಅಭಿಪ್ರಾಯಕ್ಕೆ ಆ ಮಠದ ಬದುಕು ಜಿಂದಗಿ ಸಾಮಾನು ಮುಂತಾದ್ದು ಲೂಟಿ ಉತ್ತಾರ ಮುಂತಾದ್ದು ಜಪ್ತಿಯ ಮಠದಲ್ಲಿರತಕ್ಕ ಚಂದ್ರಮೌಳೀಶ್ವರ, ಬಲದಶಂಕ, ಏಕಬೆತ್ತ, ಮುತ್ತಿನ ಚೌಕಳಿ ಗದ್ದಿಗೆ, ಭೂಚಕ್ರದಕೊಡೆ, ಶ್ವೇತಛತ್ರಿ, ಸಿಂಹ ಮುಖದ ವಾಲಿ ಇಷ್ಟು ಸಹವನ್ನು ಶೃಂಗೇರಿ ಅಗ್ರಹಾರದಲ್ಲಿರತಕ್ಕ ಶಂಕರಾಚಾರ್ಯರ ಕರಸಂಜಾತರಾದ ಶೃಂಗ ಶಾಸ್ತ್ರಿಯೆಂಬಾತಗೆ ಮೇಲಿರುವ ಖಾತ್ ಪ್ರಕಾರ ಆತಗೆ ಸೇರಿಸಿ ಸಂಸ್ಥಾನಕ್ಕೆ ಭೂಚಕ್ರದಕೊಡೆ ಅಧಿಕವಾದಂತಾದ್ದು ಬಂದುದಾಗಿ ಸಾಗಿಸಿ ಸಂಸ್ಥಾನಕ್ಕೆ ಯೋಗ್ಯಾನುಸಾರಕ್ಕೆ ಅಧಿಕವಾದಂತಾದ್ದು ತಿಳಿದು ನೀವು ಕುಲಗೋತ್ರಗಳು, ಶಿವಾಚಾರ್ಯದ ನಡೆ, ಶೈವಾಚಾರದ ಕಟ್ಟು, ಶಿವಭಕ್ತರ ಪಾಡು, ಸಾಧುಒಕ್ಕಲಿಗ, ರೆಡ್ಡಿಗ, ಕುಂಬಾರ, ಕೈವಾಡಜಾತಿ ಸಮಸ್ತಕ್ಕು ಕಪ್ಪ ಕಾಣಿಕೆಯ ವಸೂಲಿ ಮಾಡಿಕೊಳ್ಳಬೇಕು"[೧೭]. ಎಂಬ ವಿವರಣೆಯು ಕೆಳದಿರಾಜರ ಶಾಸನದಲ್ಲಿ ದೊರೆಯುತ್ತದೆ. ಪ್ರಸ್ತುತ

[illegible]

ಶಾಸನದಲ್ಲಿ ತಿಳಿಯುವ ಪ್ರಮುಖ ಅಂಶವೆಂದರೆ ಹದಿನೇಳನೆ ಶತಮಾನದಲ್ಲಿ ಈ ಭಾಗದ ಸಾದರು ಬಾಳೇಹೊನ್ನೂರು ಮಠದ ಭಕ್ತರಾಗಿದ್ದು, ಅವರಿಂದ ಕಪ್ಪ ಕಾಣಿಕೆ ವಸೂಲಿ ಮಾಡಿಕೊಳ್ಳುವ ಹಕ್ಕನ್ನು ಶೃಂಗೇರಿ ಮಠವು ಬಾಳೇಹೊನ್ನೂರು ಮಠದಿಂದ ಆ ಸಂದರ್ಭದಲ್ಲಿ ಕಿತ್ತುಕೊಂಡಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಜೊತೆಗೆ ಸಾದರಲ್ಲಿನ ಒಂದು ಒಳಪಂಗಡವೇ ಆದ ಸಾದು ಒಕ್ಕಲಿಗರ ಉಲ್ಲೇಖವಿರುವುದನ್ನು ಗಮನಿಸಬಹುದು.

ಕುರುವತ್ತಿ (೧೧೯೭) ಶಾಸನದಲ್ಲಿನ ಸಾದರನ್ನು ಕುರಿತ ವಿವರಣೆಯನ್ನು ಗಮನಿಸುವುದಾದರೆ– "ಆ ದೇವರಪುರದ ಸಾದ ಬಣ್ಣಿಗೆ ಮಗ್ಗ ಪಂಚಕಾರುಕರಾಣದೆಯಂ ಶ್ರೀಮದ್ರಾಜಗುರು ಲೋಕಾಭರಣಗುರುದೇವರ್ಗ್ಗೆ ಆಚಂದ್ರಾರ್ಕತಾರಂಬರಂ ಸಲುವಂತಾಗಿ ಧಾರಾಪೂರ್ವಕಂ ಮಾಡಿಬಿಟ್ಟ ಧರ್ಮ"[೧೮] ಎಂಬ ವಿವರವಿದೆ.

ಪ್ರಸ್ತುತ ಶಾಸನದಲ್ಲಿನ ವಿವರಣೆಯನ್ನು ಗಮನಿಸಿದಾಗ ತಿಳಿಯುವ ಪ್ರಮುಖ ಅಂಶವೆಂದರೆ, ಕುರುವತ್ತಿಯ ಯಾಹವಮಲ್ಲೇಶ್ವರ ದೇವರ ಅಖಂಡ ದೀವಿಗೆ ಧೂಪಕ್ಕೆಂದು ಮಹಾಪ್ರಧ್ಯಾನಾದ ಉತ್ತರಾಕ್ಕ ಹೆಗ್ಗಡೆ ಮತ್ತು ಅರಸೀಕೆರೆಯ ಮಹಾದೇವ ದಂಡನಾಯಕನಾದ ಹೆಗ್ಗಡೆ ಜನ್ನಯ್ಯನು ಆ ಊರಿನ ಸಾದ–ಸಾದರು, ಬಣ್ಣಿಗೆ–ಬಣಜಿಗ, ಮಗ್ಗ–ನೇಕಾರರು, ಪಂಚಕಾರು–ಪಂಚಮರು, ಕರಾಣ–ಕರಣಿಕ ಈ ಎಲ್ಲ ವರ್ಗದ ಜನರಿಗೆ ತೆರಿಗೆಯನ್ನು ಶ್ರೀಮದ್ರಾಜಗುರು ಲೋಕಾಭರಣ ಗುರುದೇವರ್ಗ್ಗೆ ಧಾರಾಪೂರ್ವಕವಾಗಿ ದತ್ತಿ ನೀಡಿದ್ದನ್ನು ವಿವರಿಸಲಾಗಿದೆ.

ಕುರುವತ್ತಿಯ ಕಲ್ಲೇಶ್ವರ ದೇವರ (ಹಿರೇಮಠ) ಶಾಸನದಲ್ಲಿನ ವಿವರಣೆ ಹೀಗಿದೆ. (೧೧೯೯) "ಬಡಗಣದೆಸೆಯಲು ಸಾಂದರ ಸೂರಯ್ಯನ ಕೆಯ್ಯಲು ಮಾರುಗೊಂಡು ಬಿಟ್ಟ ಗುಣಿಗನ್ ಮತ್ತರ್ ೬"[೧೯] ಎಂಬ ಉಲ್ಲೇಖವಿದೆ.

ಪ್ರಸ್ತುತ ಶಾಸನದಲ್ಲಿನ ಸಾಂದರ ಎಂಬುದು ಸಾದರ ಜಾತಿಯನ್ನು ಸೂಚಿಸುತ್ತಿದ್ದು ಸಾಂದರ ಸೂರಯ್ಯನೆಂಬ ವ್ಯಕ್ತಿಯು ಸಾದರ ಜಾತಿಗೆ ಸೇರಿದವನೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಹಡಗಲಿ ತಾಲ್ಲೂಕಿನ ಶಾಸನವೊಂದರಲ್ಲಿ "ಮಂಮರಸನು ಶ್ರೀಸೋಮನಾಥದೇವರಾಚಾರಿ ಬಂವೋಜನಿಗೆ ದೇವರ ಶ್ರೀಮಾಂನ್ಯದ ಭೂಮಿ ಕಗ್ಗಲ ಕೆಂಗಾಡು ೭ ಮತ್ತರು ಭೂಮಿಯನ್ನು ದಾನ ಮಾಡಿದ್ದನ್ನು ಹೇಳುತ್ತಾ ಮುಂದೆ "ಸಾದಗೇರಿಯ ಬಡಗವಾಗಿಲ ಮನೆಮಾರಡೆಯ ದಡದ ಬಡವಾಗಿಲ......ಕೆಯಿನಿನ್ನಿನಿತು"[೨೦] ಎಂಬ ಉಲ್ಲೇಖವಿದೆ.

ಪ್ರಸ್ತುತ ಶಾಸನದಲ್ಲಿ ವಿವರಣೆಯನ್ನು ಗಮನಿಸಿದಾಗ ತಿಳಿಯುವ ಪ್ರಮುಖ ಅಂಶವೆಂದರೆ 'ಸಾದಗೇರಿ' ಎಂಬ ಪದವು ಸಾದರ ಜಾತಿಯ ಕೇರಿಯನ್ನೇ ಸ್ಪಷ್ಟವಾಗಿ ಸೂಚಿಸುತ್ತದೆ.

ಉತ್ತಂಗಿಯ ಶಂಕರೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಶಾಸನದಲ್ಲಿನ (೧೧೫೦) ವಿವರಣೆಯನ್ನು ಗಮನಿಸುವುದಾದರೆ.

"ಇಂತು ಪೊಗರ್ತೆಗಂ ನೆಗರ್ತೆಗಂ ನೆಲೆಯಾದ ಗಾವುಂಡಗಳ ಗ್ರಾಮಂ ಕುತ್ತಂಗಿಯಲು ಬಸವೇಶ್ವರಮಂ ಮಾಡಿಸಿದ ಸೌಧರಬಸವಯ್ಯನ ಮಹಿಮೆಯೆಂತೆಂದೆಡೆ ಜನಕಂ ಹೆರ್ಗ್ಗಡೆ ಬೋಚಿರಾಜಮಹಿಮಂ ನನ್ನವ್ವೆ ಪೆತ್ತವ್ವೆ ಪಾಂಡ್ಯನ್ರಿಪಂ ಸ್ವಾಮಿ ಪತಿಭ್ರತಾಭರಣಮುಳ್ಳಾ ಚಾಮಿಕಾನ್ತೆಯೆಂಗನೆ ಮಲ್ಲಗುಣವಾರ್ಧೀಶಂಕರನೆನಿಪ್ಪ ಮಿಕ್ಕ ತೇಜಸ್ವಿಗಳು ತನೆಯರ್ಸ್ಯಮಾಪರೇಗೆಂದೋಡೀ ಬಸವನಿಂದಾವಂ ಕ್ರಿತಾರ್ಥಾತ್ಮಕಂ"[೨೧].

ಪ್ರಸ್ತುತ ಶಾಸನದಿಂದ ತಿಳಿಯುವ ಪ್ರಮುಖ ಅಂಶವೆಂದರೆ, 'ಸಾದರ' ಪದವು 'ಸೌದರ' ಎಂದು ಬಳಕೆಯಾಗಿದ್ದು 'ಸಾದರ ಬಸಯ್ಯನು' ಕಟ್ಟಿಸಿದ ಬಸವೇಶ್ವರ ದೇವಾಲಯದ ಸೇವಾಕಾರ್ಯಗಳಿಗೆ ಜಗದೇಕಮಲ್ಲ ವೀರಪಾಂಡ್ಯನು ಭೂಮಿದಾನ ಮಾಡಿದ್ದನ್ನು ವಿವರಿಸುತ್ತದೆ.

ಹೊಳಗುಂದಿಯ ಜೈನ ಶಾಸನ–'ಹರಪನಹಳ್ಳಿ–ಹಡಗಲಿ ಭಾಗದ ಹೊಳಗುಂದಿ ಗ್ರಾಮದ ೧೧೬೯ ರಲ್ಲಿ ರಚನೆಯಾದ ಜೈನ ಶಾಸನದಲ್ಲಿ "ವಿಚಿತ್ರಚೈತ್ಯಾಲಯೋದ್ಧರಣ ಪರಿಣತಾಂತಃಕರಣನುಂ ಸಾಂದಗೋಲ ಸಮುದ್ಧರಣನುಂ"[೨೨] ಎಂಬ ವರ್ಣನೆಯುಂಟು. ಪ್ರಸ್ತುತ ಶಾಸನದಲ್ಲಿ ಮಲ್ಲಿಗಾವುಂಡನನ್ನು ವರ್ಣಿಸುವ ಸಂದರ್ಭದಲ್ಲಿ 'ಸಾದುಕುಲ'ವನ್ನು 'ಸಾಂದಗೋಲ' ಎಂಬುದಾಗಿ ಸೂಚಿಸಿರುವುದು ಕಂಡುಬರುತ್ತದೆ.

"ಕೊಪ್ಪಳ ಜಿಲ್ಲೆಯ ಗಿಣಿಗೇರಿಯ ಶಾಸನ (ಆನೆಗೊಂದಿ ವಿಶ್ವಕರ್ಮ ಮಠದ ತಾಮ್ರ ಶಾಸನ ೧೫೨೦)ದಲ್ಲಿ ದತ್ತಿ ಪಡೆದವರ ಪಟ್ಟಿಯಲ್ಲಿ 'ಸಾದರ ಜೋಯಿಸ ಜಕ್ಕಂಣನ ಉಲ್ಲೇಖವಿದೆ"[೨೩]. ಈ ಉಲ್ಲೇಖವು ಸಾಧು ಲಿಂಗಾಯತ ಜಂಗಮನೊಬ್ಬನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಕರಕಲಮಾದಹಳ್ಳಿ ಶಾಸನ (೧೪೯೭)–ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಕರಕಲ ಮಾದಹಳ್ಳಿ ಶಾಸನವು ಮಾದಿಹಳ್ಳಿ ಗ್ರಾಮವನ್ನು ದತ್ತಿ ನೀಡಿದ್ದನ್ನು ನಿರೂಪಿಸುತ್ತದೆ. ವಾಮನಮುದ್ರೆ ಕಲ್ಲನ್ನು ಚತುಸ್ಸೀಮೆಗೆ ಹಾಕಿಸಿಕೊಟ್ಟಿದ್ದನ್ನು ವಿವರಿಸುವ ಸಂದರ್ಭದಲ್ಲಿ ಪ್ರಸ್ತುತ ತ್ರುಟಿತ ಶಾಸನದ ಕೊನೆಯಲ್ಲಿ ಗಡಿ–ಮೇರೆಯ ನಿರ್ದಿಷ್ಟ ಗುರುತುಗಳನ್ನು ವಿವರಿಸುವಾಗ "ಅಲ್ಲಿಂದ ಮೂಡಲು ಸಾದರ ಮೇರುಲಿಯಾಗಿ ನಡದು ಯೀ ಮಾದಿಹಳ್ಳಿ ಕೋಡಿಯಪುರದ ಎಡಸೀಮೆಯ......"[೨೪] ಎಂಬ ಸಾಲು ಬರುತ್ತದೆ. ಸಾದರ ಮೇರೆಯಲ್ಲಿ ನಡೆದು ಎಂಬರ್ಥದಲ್ಲಿ 'ಸಾದರ ಮೇರುಲಿ' ಎಂಬ ಪದಗಳು ಬಳಕೆಯಾಗಿರುವುದನ್ನು ಗಮನಿಸಬಹುದು.

ಮೂಡಲಗ್ರಹಾರ ಶಾಸನ (೧೪೧೩)–"ಕಿರಿಗುಸೂರ ಸಾದಗಾವುಂಡನ ಮಗ...... ಮಾರಮಯಗವುಡ ಎಂಬ ಉಲ್ಲೇಖವಿದೆ"[೨೫].

ಉಮ್ಮತ್ತೂರ ಬಳಿ ಅಗ್ರಹಾರವೊಂದನ್ನು ನಿರ್ಮಿಸಿ ಬ್ರಾಹ್ಮಣರಿಗೆ ದತ್ತಿ ನೀಡಿದ ವಿವಿಧ ಗೌಡರುಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಸಾದಗೌಡನ ಮಗನೂ ಒಬ್ಬನೆಂಬುದನ್ನು ಪ್ರಸ್ತುತ

ಶಾಸನ ವಿವರಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ 'ಗೌಡ' ಎಂಬ ಉನ್ನತ ಸ್ಥಾನವನ್ನು ಸಾದರು ಬಹುಹಿಂದಿನಿಂದಲೂ ಪಡೆದಿದ್ದರೆಂಬುದಕ್ಕೆ ಪ್ರಸ್ತುತ ಶಾಸನದಲ್ಲಿ ನಿದರ್ಶನ ದೊರೆಯುತ್ತದೆ.

"ಧರ್ಮಪುರ ಶಾಸನದಲ್ಲಿ (ಕ್ರಿ.ಶ.೧೧೬೨)-'ಹುಣಸೂರು ತಾಲ್ಲೂಕಿನ ಧರ್ಮಪುರ ಶಾಸನದಲ್ಲಿ 'ಸಾದದೆರೆ' ಎಂಬ ಪದ ಉಲ್ಲೇಖಪಿದ್ದು ಇದು ಸಾದರ ದೆರಿಗೆ"[೨೬] ಎಂಬ ಅರ್ಥವನ್ನು ಸೂಚಿಸುವುದನ್ನು ಗಮನಿಸಬಹುದು.

ತುಣ್ಣೂರು ಶಾಸನ (೧೭೨೭)-"ಮೈಸೂರು ಜಿಲ್ಲೆ ಪಾಂಡವಪುರ ತಾಲ್ಲೂಕಿನ ತೊಣ್ಣೂರು ಶಾಸನದಲ್ಲಿ ಕೆಲವು ಗ್ರಾಮಗಳನ್ನು ಅಗ್ರಹಾರ ಮಾಡಿ ದಾನ ನೀಡಿದ್ದನ್ನು ವಿವರಿಸುವ ಸಂದರ್ಭದಲ್ಲಿ ಹಲವು ಗ್ರಾಮಗಳ ಪಟ್ಟಿಯನ್ನು ನೀಡಿದ್ದು ಸಾದುಗೊಂಡನ ಹೆಸರ ಸಾದುಗೌಡನ ಹಳ್ಳಿಯ ಉಲ್ಲೇಖವಿದೆ"[೨೭].

ಗೋವಿಂದನ ಹಳ್ಳಿ ಶಾಸನ (೧೨೩೬)-ಕೃಷ್ಣರಾಜಪೇಟೆ ಗೋವಿಂದನಹಳ್ಳಿ ಶಾಸನದಲ್ಲಿ "ಸಾದುಗದ್ಯಾಣ"[೨೮] ಎಂಬ ಪದವಿದೆ. ನಾಣ್ಯವನ್ನು ಜಾತಿಯೊಂದಿಗೆ ಸೇರಿಸಿ ಉಲ್ಲೇಖಿಸಿರುವುದು ಗಮನಾರ್ಹ ವಿಷಯವಾಗಿದೆ.

ಅರುವನಹಳ್ಳಿ ಶಾಸನ (೧೩೮೮)- ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ "ಅರುವನಹಳ್ಳಿ ಶಾಸನದಲ್ಲಿ 'ಅಜಗಉಡನ ಸಾದಿಗಉಡ' ಎಂಬ ಹೆಸರು ಉಲ್ಲೇಖಗೊಂಡಿದ್ದು ಅಜ್ಜಪ್ಪ, ಅಜ್ಜಪ್ಪಗೌಡ ಎಂಬ ಹೆಸರು ಸಾದರಲ್ಲಿ ಬಹಳ ಹಿಂದಿನಿಂದಲೂ ಬಳಕೆಯಲ್ಲಿರುವ ಹೆಸರಾಗಿದೆ"[೨೯].

ಪ್ರಸ್ತುತ ಶಾಸನದಲ್ಲಿ 'ಅಜ್ಜನಗೌಡ ಸಾದಿನಗೌಡ' ಎಂಬ ಗೌಡರೊಬ್ಬರ ಹೆಸರು ತಿಳಿಯುತ್ತದೆ.

ಮಳವಳ್ಳಿಯ ಶಾಸನ (೧೬೮೫)- ಮಂಡ್ಯ ಜಿಲ್ಲೆ "ಮಳವಳ್ಳಿಯ ಶಾಸನದಲ್ಲಿ 'ಸಾದುಪುರದ ಉಲ್ಲೇಖವಿದೆ. ಹಾಸನ ಜಿಲ್ಲೆ ಶಾಂತಿಗ್ರಾಮದ ಶಾಸನದಲ್ಲಿ ದಾನಪಡೆದವರ ಸಾಲಿನಲ್ಲಿ 'ಸಾಧುದೇವಣ್ಣ' ಎಂಬಾತನ ಉಲ್ಲೇಖವಿದೆ"[೩೦].

ನಾರಣಪುರ ಶಾಸನ (೧೭೮೦)- ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ನಾರಣಪುರ ಶಾಸನವು "ಆಸಂದಿನಾಡೊಳಗಣ ಗಾಣದಹಾಳು ಸಾದರಹಳ್ಳಿ"[೩೧] ಮುಂತಾಗಿ ಹೆಸರಿಸುತ್ತದೆ.

ಹಾಸನ ಜಿಲ್ಲೆ ಅರಸೀಪುರ ತಾಲ್ಲೂಕಿನ "ಮೊಸಳೆಯ (೧೭೮೭) ದಾನ ಶಾಸನದಲ್ಲಿ ಸಾಕ್ಷಿಗಳ ಪಟ್ಟಿಯಲ್ಲಿ 'ಸಾದರ ಗೋಪಯ್ಯ, ಸಾದರ ಮಾಳಯ್ಯ' ಎಂಬ ಹೆಸರುಗಳ ಉಲ್ಲೇಖವಿದೆ"[೩೨]. ಹಾಗೆಯೇ "ಮುತ್ತಿನಪುರ ಮತ್ತು ಹಳೇಲಕ್ಯ ಶಾಸನಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾದರಹಳ್ಳಿ"[೩೩] ಎಂಬ ಗ್ರಾಮವಿರುವುದನ್ನು ಸೂಚಿಸುತ್ತದೆ.

ಸಂಸ್ಕೃತಿ ಅಧ್ಯಯನ ಮಾಡುವವರಿಗೆ ದಾರಿದೀಪದಂತೆ ಕಾರ್ಯನಿರ್ವಹಿಸುವ ಶಾಸನಗಳು ಸಾದರ ಮೂಲ, ಹಿರಿಯ ಸಾಧಕರು ಮತ್ತು ಸಾದರಲ್ಲಿನ ಒಳಪಂಗಡಗಳ ಬಗ್ಗೆ

ಮಾಹಿತಿಯನ್ನೊದಗಿಸುತ್ತವೆ. ಈ ದೃಷ್ಟಿಯಿಂದ ಸಾದರ ಮೂಲಾನ್ವೇಷಣೆಯಲ್ಲಿ ಶಾಸನಗಳ ಪಾತ್ರ ಬಹುಪ್ರಮುಖವಾದದ್ದೆಂದೇ ಹೇಳಬಹುದು.

೨.೩: ಸಾಹಿತ್ಯ ಕೃತಿಗಳಲ್ಲಿ ಸಾದರನ್ನು ಕುರಿತ ವಿವರಗಳು.

ಸಾದರನ್ನು ಕುರಿತು ವಿವರವಿರುವ ಕೆಲ ಪ್ರಮುಖ ಕೃತಿಗಳನ್ನು ಗಮನಿಸುವುದಾದರೆ-

ಸಾದರನ್ನು ಕುರಿತಂತೆ ಅತಿಮುಖ್ಯ ಮತ್ತು ಅತ್ಯಮೂಲ್ಯವಾದ ಮಾಹಿತಿಯನ್ನು ಸವಿಸ್ತಾರ ವಿವರಣೆಯೊಂದಿಗೆ ಒದಗಿಸುವ ಪ್ರಮುಖ ಗ್ರಂಥವೆಂದರೆ "THE MYSORE TRIBES AND CASTES". ಈ ಗ್ರಂಥದಲ್ಲಿ ಸಾದರನ್ನು ಕುರಿತಂತೆ ದೊರೆಯುವ ಮಾಹಿತಿಯನ್ನು ಗಮನಿಸುವುದಾದರೆ-

"In the census Report of 1901, Sadas were included among the Jains, and their number was returned as 173 males and 241 females. These signs are misleading, and the caste is certainly very much stronger. It is presumed that these numbers represent only the sadas who call themselves Jains, and do not include a large Portion of the castemen who are, still within the pale of Hinduism". The Lingayet sadas are even larger in number and are sound in parts of Shimoga and Chitradurg districts. The caste is commonly known as sadaru, and its members style themselves sadu matasthru. The honored ending added to their personal names is Gauda. They are said to be so called on account of their strict abstinence from flesh and liquor. The term sada being a modified form of the Sanskrit word sadu, meaning gentle or fame. Their language is kannada, and they have stuck to it where ever they may be living, but they also know the local language. A comparatively large percentage of the caste know how to read and write the vernacular, but only a very few have learnt English.

Sadas are said to have been originally Jains, but when Vishnuvardhana was converted by Ramanujacharya to vaishnavisam, some only escaped the religious persecution and remained in their original faith.

Some again were converted to Lingayetism by the Lingayet Reformer Basavanna and his followers. Thus the caste which appears

to have originally been a homogeneous one was split up into three section Lingayet sadas, non-lingayet sadas, and the Jain sadas who have more or less a belief in Jainism"[೩೪].

೧೯೩೧ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದ ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತ ಐಯ್ಯರ್ ವಿರಚಿತ **"ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್"** ಪುಸ್ತಕದಲ್ಲಿನ ಸಾದು ಮತಸ್ಥರ ಬಗ್ಗೆ "ಸಾದರು" ಎಂಬ ಆಂಗ್ಲ ಲೇಖನದ ಕನ್ನಡ ಅನುವಾದವನ್ನು ಶ್ರೀ ಸಾ.ನ.ಲಕ್ಷ್ಮಣಗೌಡ (ನಿವೃತ್ತ ಪ್ರಾಂಶುಪಾಲರು, ಮಂಚೇನಹಳ್ಳಿ) ರವರು ಮಾಡಿದ್ದಾರೆ.

"೧೯೦೧ ರ ಜನಗಣತಿಯಲ್ಲಿ 'ಸಾದರನ್ನು' ಜೈನರ ಗುಂಪಿಗೆ ಸೇರಿಸಿ ಅವರ ಸಂಖ್ಯೆಯಲ್ಲಿ ಗಂಡಸರು ೧೭೩ ಮತ್ತು ಹೆಂಗಸರು ೨೧೪ ಎಂದು ನಮೂದಿಸಿದೆ. ಆದರೆ ಈ ಅಂಕಿ ಅಂಶಗಳು ತಪ್ಪುದಾರಿಗೆ ಏಳೆಯುವಂತಹವು ಎಂದು ಹೇಳಬಹುದು. ಖಂಡಿತವಾಗಿಯೂ ಈ ಜನಾಂಗ ಹೆಚ್ಚು ಬಲಿಷ್ಠವಾಗಿದೆ. ತಾವು ಜೈನಧರ್ಮಕ್ಕೆ ಸೇರಿದವರು ಎಂದು ಹೇಳಿಕೊಳ್ಳುವ ಸಾದರ ಸಂಖ್ಯೆಯನ್ನು ಇದು ಪ್ರತಿನಿಧಿಸುತ್ತದೆಯೇ ಹೊರತು ಈಗಲೂ ಹಿಂದೂಧರ್ಮದ ಸರಹದ್ದಿನಲ್ಲಿರುವ ಹೆಚ್ಚು ಭಾಗದ ಜನರನ್ನು ಇದು ಪ್ರತಿನಿಧಿಸುವುದಿಲ್ಲವೆಂದು ಊಹಿಸಲಾಗಿದೆ. ಲಿಂಗಾಯಿತ ಸಾದರು ಇನ್ನೂ ಹೆಚ್ಚು ಸಂಖ್ಯೆಯಲ್ಲಿದ್ದು ವಿಶೇಷವಾಗಿ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕಾಣಸಿಗುತ್ತಾರೆ. ಸಾಮಾನ್ಯವಾಗಿ ಈ ಜನಾಂಗದವರು 'ಸಾದರು' ಅಥವಾ 'ಸಾದು ಮತಸ್ಥರು' ಎಂದಾಗಿದ್ದು ಗೌರವ ಸೂಚಕವಾಗಿ ತಮ್ಮ ವೈಯಕ್ತಿಕ ಹೆಸರುಗಳ ಕೊನೆಯಲ್ಲಿ 'ಗೌಡ' ಎಂಬ ಪದವನ್ನು ಸೇರಿಸಿರುತ್ತಾರೆ. ಇವರು ಮಾಂಸ ಮತ್ತು ಮದ್ಯಗಳಿಂದ ದೂರವಿರುವುದು ವೇದ್ಯ. 'ಸಾದ' ಎಂಬ ಪದ ಮೃದು ಮತ್ತು ಕೋಮಲ ಎಂಬರ್ಥವುಳ್ಳ ಸಂಸ್ಕೃತದ 'ಸಾಧು'ವಿನಿಂದ ಜನ್ಯವಾಗಿದೆ. ಇವರ ಭಾಷೆ ಕನ್ನಡವಾಗಿದ್ದು ಸ್ಥಳಿಯ ಭಾಷೆಯನ್ನು ತಿಳಿದವರಾಗಿರುತ್ತಾರೆ. ಹಲವರು ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬಲ್ಲವರಾಗಿದ್ದು ಕೆಲವರು ಆಂಗ್ಲ ಭಾಷೆಯನ್ನು ಕಲಿತವರಾಗಿದ್ದಾರೆ.

ಸಾದರು ಮೂಲತಃ ಜೈನರು ಎಂದು ಹೇಳಲಾಗಿದೆ. ಆದರೆ ರಾಮಾನುಜಾಚಾರ್ಯರ ಪ್ರಭಾವದಿಂದ ವಿಷ್ಣುವರ್ಧನನು ವೈಷ್ಣವ ಧರ್ಮಕ್ಕೆ ಪರಿವರ್ತನೆಗೊಂಡರೂ ಕೆಲವರು ಈ ಮತಾಂತರದಿಂದ ಪ್ರಭಾವಿತರಾಗದೆ ತಮ್ಮ ಮೂಲ ಮತವಾದ 'ಸಾದರಲ್ಲಿ' ನಂಬಿಕೆಯನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಪುನಃ ಅವರಲ್ಲಿ ಕೆಲವರು ಬಸವಣ್ಣ ಮತ್ತು ಅವರ ಅನುಯಾಯಿಗಳ ಪ್ರಭಾವದಿಂದ ಮತಾಂತರಗೊಂಡು ಲಿಂಗಾಯಿತರಾದರು. ಹೀಗೆ ಏಕರೂಪವಾಗಿದ್ದು ಸಾದರ ಮತವು ಲಿಂಗಾಯಿತ ಸಾದರು, ಲಿಂಗಾಯತರಲ್ಲದ ಸಾದರು (ಅಂದರೆ ಸಾದರು) ಮತ್ತು ಜೈನ ಧರ್ಮದಲ್ಲಿ ನಿಷ್ಠೆ ತೋರಿದ ಜೈನ ಸಾದರು ಎಂಬ ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ"[೩೫].

ಪ್ರಸ್ತುತ ಗ್ರಂಥದಿಂದ ತಿಳಿಯುವ ಪ್ರಮುಖ ಅಂಶವೆಂದರೆ ಸಾದರು ಮೂಲತಃ ಜೈನಧರ್ಮದಿಂದ ಬಂದವರೆಂಬ ಅಂಶ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಸಾದರಲ್ಲಿರುವ ಮೂರು ಪಂಗಡಗಳ ವಿವರವು ದೊರೆಯುತ್ತದೆ.

ಸಾದರನ್ನು ಕುರಿತಂತೆ 'EGDAR THURSTON' ರವರು ತಮ್ಮ "CASTES AND TRIBES OF SOUTHERN INDIA" ಎಂಬ ಗ್ರಂಥದಲ್ಲಿ ನೀಡುವ ವಿವರವನ್ನು ಮತ್ತು "Mysore Census Report' ನಲ್ಲಿನ ಸಾದರನ್ನು ಕುರಿತಂತೆ ಇರುವ ವಿವರಗಳನ್ನು ಗಮನಿಸುವುದಾದರೆ–"A sub-division of Lingayets, found mainly in the Bellary and Ananthapur districts, where they are largely engaged in cultivation. Some Bedars or Boyas, who live amidst these Lingayets, call themselves Sadaru. It is noted in the Mysore Census Report that the Sadas are 'Cultivators and traders in grain'. A section of these Sadas has embraced Lingayatism, while the others are still within the pale of Hinduism"[೩೬].

ಪ್ರಸ್ತುತ ವಿವರಣೆಯನ್ನು ಗಮನಿಸಿದಾಗ ಸಾದರು ವೀರಶೈವ ಧರ್ಮದ ಒಂದು ಒಳಪಂಗಡ ಎಂಬ ಅಭಿಪ್ರಾಯಕ್ಕೆ ಪುಷ್ಟಿದೊರೆಯುವಂತಿದೆ. ಹಾಗೆಯೇ ಸಾದರ ಬಗೆಗಿನ ವಿವರಣೆಯನ್ನು ಕುರಿತು "The People of India Series" (volume VI at page 3062) ನಲ್ಲಿನ ಅಂಶಗಳನ್ನು ಗಮನಿಸುವುದಾದರೆ–

"The term Sadara is derived from Sanskrit word Sadhu which means gentleman, numerically a small common sadaru are distributed in Ananthapur district of Andhra Pradesh. Agriculture and Agricultural labour are the traditional and present day occupation of Sadaru and they follow Hinduism. Their literacy rate is very low and most of them live below poverty line. Karnataka state also include this caste in the list of backward classes"[೩೭].

"The People of India Series" ನಲ್ಲಿನ ವಿವರಣೆಯು ಸಾದರು ಪದದ ಅರ್ಥ, ಸಾದರು ವಾಸಿಸುತ್ತಿರುವ ಪ್ರದೇಶಗಳು, ಅವರ ವೃತ್ತಿ, ಧರ್ಮ ಮತ್ತು ಅವರಲ್ಲಿನ ಸಾಕ್ಷರತೆಯ ಪ್ರಮಾಣ ಹಾಗೂ ಅವರ ಆರ್ಥಿಕ ಸ್ಥಿತಿ–ಗತಿಯನ್ನು ಕುರಿತು ವಿವರಣೆಯನ್ನೊದಗಿಸುತ್ತಲೇ;

ಕರ್ನಾಟಕ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿನ ಸಾದರು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವ ವಿಚಾರವನ್ನು ಕುರಿತಂತೆ ಬೆಳಕು ಚೆಲ್ಲುತ್ತದೆ.

ಸಾದರನ್ನು ಕುರಿತು ಉಲ್ಲೇಖವಿರುವ ಮತ್ತೊಂದು ಪ್ರಮುಖ ಕೃತಿ **'ಕರ್ನಾಟಕ ರಾಜ್ಯಕೋಶ-4, ಜನಸಮುದಾಯ ಸಂಪುಟ'**-"ಸಾದರು, ಸಾದರಗೌಡ, ಸಾದು ಮತಸ್ಥರು ಎಂದು ಕರೆಯುತ್ತಾರೆ. ಇವರು ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ನಂಜುಂಡಯ್ಯ ಹಾಗೂ ಐಯ್ಯರ್ (೧೯೩೦) ಸಾದರು ಮೂಲತಃ ಜೈನ ಧರ್ಮದವರೆಂದೇ ಒತ್ತಿ ಹೇಳುತ್ತಾರೆ. ರಾಜ ವಿಷ್ಣುವರ್ಧನನು ರಾಮಾನುಜಾಚಾರ್ಯರಿಂದ ವೈಷ್ಣವನಾಗಿ ಮತಾಂತರ ಹೊಂದಿದಾಗ, ಕೆಲವರು ಮತಾಂತರ ಹೊಂದದೆ ಮೂಲದಲ್ಲಿಯೇ ಉಳಿದರು, ಇನ್ನು ಕೆಲವರು ವೈಷ್ಣವ ಧರ್ಮವನ್ನು ಒಪ್ಪಿಕೊಂಡರು. ಕೆಲವರು ಬಸವಣ್ಣನವರ ತತ್ವಗಳನ್ನು ಒಪ್ಪಿಕೊಂಡು ಲಿಂಗಾಯಿತ ಧರ್ಮವನ್ನು ಸ್ವೀಕರಿಸಿದರು. ಇವರಲ್ಲಿ ಮೂರು ವಿಭಾಗಗಳಿವೆ. ಅವೆಂದರೆ ಸಾದಲಿಂಗಾಯಿತರು, ಲಿಂಗಾಯಿತರಲ್ಲದ ಸಾದರು, ಜೈನ ಸಾದರು. ಇವರು ಹೆಚ್ಚಾಗಿ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ತುಮಕೂರು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿದ್ದಾರೆ. ಇವರು ಕನ್ನಡ ಮಾತಾಡಿ ಕನ್ನಡ ಲಿಪಿಯನ್ನು ಬಳಸುತ್ತಾರೆ"[೩೮].

ಪ್ರಾಮಾಣಿಕರಾದ ಒಳ್ಳೆಯ ಜನರನ್ನು 'ಸಾಧುಜನ" ಎನ್ನುತ್ತಾರೆ. ಆದ್ದರಿಂದಲೇ ಸರ್ವರೂ ಪ್ರಾರ್ಥನೆ ಮಾಡುವಾಗ 'ಸಾಧು-ಸಂತ-ಸತ್ಪುರುಷರಿಗೆ ನಮೋ.....ನಮೋ.... ಎಂದು ನಮಸ್ಕರಿಸುತ್ತಾರೆ. ಹೀಗೆ ಸೌಮ್ಯ ಸ್ವಭಾವದ, ನಿರುಪದ್ರವಿಯಾದ ಸತ್ಪಥದಲ್ಲಿ ಸಾಗುವ ಜನರೇ 'ಸಾದರು' ಅಥವಾ 'ಸಾಧುಮತ' ಇವರು ಭಾರತದಲ್ಲಿ ಹಿಂದೂ ಧರ್ಮಾನುಯಾಯಿಗಳಾಗಿದ್ದಾರೆ.

"ಸಾದರು, ಸಾದಕುಲ, ಸಾದವಂಶ, ಸಾಧುಕುಳ, ಸಾದ ಕುಳ, ಸೊಂದೆ ವಂಶ ಎಂಬ ನಾನಾ ರೂಪಗಳೆಲ್ಲ 'ಸಾದಕುಲವನ್ನು ಸೂಚಿಸುತ್ತದೆ. ಮಂಗರಾಜ ನಿಘಂಟಿನಲ್ಲಿ (೧೧೦೬) ಸಾದಂ ವೃಷಲನರಿ ಕುಂಚಿಟಿಗನವದ್ಯಂ, ಗಾವಣಿಗನಂತ್ಯನರಿಯೆ ಗಂಗಡಿಕಾರನಕ್ರಮನಭೀರನೆಂದೆನೆ ಮಹಾ ಶೂದ್ರನಕ್ಕುಂ-ಎಂದಿದೆ. ಚಂದ್ರ ಸಾಗರ ವರ್ಣಿಯೆಂಬ (೧೭೬೦-೧೮೩೪) ಕವಿಯು ಜೈನ ಸಮಾಜದಿಂದ ಸಾದರು ಹೇಗೆ ಬೇರೆಯಾದರೆಂಬುದು ಸೂಚಿಸಿದ್ದಾನೆ"[೩೯].

K.S.Singh ರವರು ಬರೆದಿರುವ " People of India- Karnataka" ಎಂಬ ಕೃತಿಯಲ್ಲಿನ ಸಾದರನ್ನು ಕುರಿತ ವಿವರಣೆಯು ಹೀಗಿದೆ- "The term sadar is derived from the Sanskrit word sadhu i.e., 'gentle'. The members as this community style themselves as sadhu matasthru. Among the sadar there are three main groups,.i.e., Jain Sadar, Hindu Sadar and Lingayet Sadar. The Lingayet Sadar are mainly involved in agriculture and business. They are said to have been originally Jains but when

Vishnuvardhana was converted by Ramanujacharya to Vaishnavism only some escaped religious persecution and remained in their original faith. Some again were converted to the Lingayet faith by the Lingayet reformer Basavanna and his followers. The Sadar Lingayet are original inhabitants of the state. They are concentrated in Bellary, Chitradurga, Shimoga, Chickamagalur, Tumukr, Mysore and Dharwad districts. Kannada is the language of the sadar and they use its script. Being Lingayet Virashaivas, the orthodoz ones among them wear three horizontal marks of vibhuti on their foreheads. Apart from this, they also wear the Linga, housed in a silver casket (gundagaradige) and tied to the thread"[೪೦].

ಜೈನ ಮತದ ಕೆಲವು ಒಳ್ಳೆಯ ಲಕ್ಷಣಗಳು ಸಾದರಲ್ಲಿ ಇರುವುದರಿಂದ ಕೆಲವರು ತಮ್ಮನ್ನು ತಾವು ಜೈನ ಸಾದರು ಎಂದು ಗುರುತಿಸಿಕೊಳ್ಳುವುದುಂಟು ಎಂಬುದಾಗಿ ಕೆಲವರು ಅಭಿಪ್ರಾಯಪಟ್ಟರೆ ಮತ್ತೆ ಕೆಲವರು ಸಾದರು ಮೂಲತಃ ಜೈನರು ಎಂದೇ ವಾದಿಸುತ್ತಾರೆ.

"ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಬಹು ಸಂಖ್ಯಾತರಾಗಿ ಜೈನ ಜನಾಂಗ ನೆಲೆಸಿತ್ತು, **ಉದಾಹರಣೆಗೆ;** ಹೊಳಲು, ಕತ್ತೆ ಬೆನ್ನೂರು, ಉತ್ತಂಗಿ, ತಳಕಳ್, ಮಾಗಳ, ಇಟ್ಟಗಿ, ಮೋರಿಗೇರಿ, ಕೋಗಳಿ, ಕೂಡ್ಲಗಿ, ಊಜ್ಜನಿ, ಕೊಟ್ಟೂರು, ಅಂಬಳಿ, ಬಾಗಳಿ, ಮೈದೂರು, ಚಿಗಟೇರಿ, ಮತ್ತಿಹಳ್ಳಿ, ಶೀರನಹಳ್ಳ, ಬೆಣ್ಣೆಹಳ್ಳಿ, ಹುಣಸೀಹಳ್ಳಿ, ಸಾಸ್ವಿಹಳ್ಳಿ, ಕಡಬಗೇರಿ, ಹೊಸಕೋಟೆ, ತುಂಬಿಗೇರಿ, ಮಾಡ್ಲಿಗೇರಿ, ಯರಬಳ್ಳಿಗುಡ್ಡ, ಉಚ್ಚಂಗಿದುರ್ಗ, ಯು.ಕಲ್ಲಹಳ್ಳಿ, ಯು.ಬೇವಿನಹಳ್ಳಿ, ಪುಣಬಗಟ್ಟ, ಕಂಬತ್ತಹಳ್ಳಿ, ಹೀರೆಮೇಗಳಗೇರಿ, ನಂದಿಕಂಬ ಅಣಜಿಗೇರೆ, ಮಾದಿಹಳ್ಳಿ, ಕುಣೆಮಾದಿಹಳ್ಳಿ, ಗುಡಿಗುಡಾಳು, ಮುತ್ತಿ, ದುಗ್ಗಾವತಿ, ಇತ್ಯಾದಿ ಗ್ರಾಮಗಳಲ್ಲಿ ಜೈನರೇ ಹೆಚ್ಚಾಗಿದ್ದರು. ಆದರೆ ಈ ಎಲ್ಲಾ ಗ್ರಾಮಗಳಲ್ಲಿಯು ಇಂದು ಹೆಚ್ಚಾಗಿ ಸಾದರು ಜನಾಂಗವೇ ಕಂಡುಬರುತ್ತದೆ"[೪೧].

ಮೂಲತಃ ಜೈನ ಧರ್ಮದ ಒಂದು ಒಳಪಂಗಡವಾಗಿದ್ದ ಸಾದರು ಕಾರಣಾಂತರಗಳಿಂದ ತಮ್ಮ ಮೂಲಧರ್ಮವಾದ ಜೈನಧರ್ಮವನ್ನು ಬಿಟ್ಟು ಸಾದರಾಗಿ ನಾಮಾಂತರವಾದರೂ ಸಹ ತಮ್ಮ ಮೂಲ ಸಂಸ್ಕೃತಿಯಾದ ಜೈನ ಸಂಸ್ಕೃತಿಯ ಆಚಾರ-ವಿಚಾರ, ರೂಢಿ, ಸಂಪ್ರದಾಯಗಳನ್ನು ಸಾಧ್ಯವಾದ ಮಟ್ಟಿಗೆ ಅನುಸರಿಕೊಂಡು ಬಂದಿದ್ದಾರೆ. ಏಕೆಂದರೆ ಮೂಲತಃ ಕೃಷಿಕರಾದ ಸಾದರು ಜೈನಧರ್ಮದ ನಿಯಮಗಳನ್ನೆಲ್ಲಾ ಚಾಚೂ ತಪ್ಪದೇ ಪಾಲಿಸುವುದು ಸುಲಭದ ಮಾತಾಗಿರಲಿಲ್ಲ.

ಸಾದರು ವೀರಶೈವ ಧರ್ಮದ ಒಂದು ಒಳಪಂಗಡವೆಂಬ ವಾದವೂ ಇದೆ.

"ಮರಳುಸಿದ್ದನ ಸಂಪ್ರದಾಯವ....................'ಇಲ್ಲಿ ಸಂಪ್ರದಾಯ' ಶುದ್ದವಾದ ಪದ. 'ಸಾಂಪ್ರದಾಯ' ಅಶುದ್ದ ಪ್ರಯೋಗ. ವೀರಶೈವರ ಒಳಪಂಗಡವೊಂದನ್ನು 'ಸಾಧುವೆಂಬ ಹೆಸರಿನಿಂದ ಕರೆಯುತ್ತಾರೆ. ಇದನ್ನು ಶ್ರೀಶೈಲ ಜಗದ್ಗುರುಗಳವರು 'ಸೋದರ' ಎಂದು ಮಾಡಿರುತ್ತಾರೆ. ಇದು ಅಪಭ್ರಂಶವಾಗಿ 'ಸಾಧರ' ಎಂದಾಗಿದೆ ಎನ್ನುತ್ತಾರೆ. ಅಪಭ್ರಂಶವಾದ ಮಾತ್ರಕ್ಕೇ ಅರ್ಥಭೇದವಾಗಬೇಕಾಗಿಲ್ಲ.

'ಸಾಧು' ಶಬ್ಧವು ಕನ್ನಡದಲ್ಲಿ 'ಸಾಧು' ಅಪಭ್ರಂಶದಲ್ಲಿ 'ಸಾದ' ಬಹುವಚನದಲ್ಲಿ 'ಸಾದರು' ಸೋದರ ಶಬ್ಧವು ಸಮಾನ ಉದರವುಳ್ಳವನೆಂಬರ್ಥವನ್ನು ಸೂಚಿಸಿದರೆ 'ಸಾದರ' ಶಬ್ಧವು ಸಮಾನ ಆದರ ಉಳ್ಳವನು ಎಂಬರ್ಥವನ್ನು ಸೂಚಿಸುತ್ತದೆ. ಈ ಎರಡು ಪದಗಳು ಈ ಪಂಗಡಕ್ಕೆ ಸಂಬಂಧಪಟ್ಟವೇ ಅಲ್ಲ. ಈ ಅಪ್ರಬುದ್ಧತನವೂ ಪಕ್ಕಾ ನಂದೀಶನದೋ ಪ್ರಚ್ಛನ್ನ ನಂದೀಶನದೋ?"[೪೨] ಎಂಬ ವಿವರಣೆಯು ಮಹದೇವ ಬಣಕಾರ ವಿರಚಿತ ವಿಶ್ವಬಂಧು ಮರುಳಸಿದ್ಧಕಾವ್ಯದಲ್ಲಿ ದೊರೆಯುತ್ತದೆ. ಸಾದರು ಪದದ ಅರ್ಥವಿವರಣೆಯಲ್ಲಿ ಉಂಟಾದ ಗೊಂದಲವನ್ನು ಪ್ರಸ್ತುತ ಭಾಮಿನಿ ಷಟ್ಪದಿಯ ಕಾವ್ಯ ಬಿಂಬಿಸುತ್ತದೆ.

"ಸಾದರು, ಸಾದು ಗೌಡ, ಸಾದು ಮತಸ್ಥರು ಎಂದು ಈ ಜನಾಂಗವನ್ನು ಕರೆಯುತ್ತಾರೆ. ನಂಜುಂಡಯ್ಯ ಹಾಗೂ ಐಯ್ಯರ್‌ರವರು ಸಾದರು ಮೂಲತಃ ಜೈನಧರ್ಮದವರೆಂದು ತಿಳಿಸುತ್ತಾರೆ ಹಾಗೂ ವಿಷ್ಣುವರ್ಧನನು ರಾಮಾನುಜಾಚಾರ್ಯರಿಂದ ವೈಷ್ಣವನಾಗಿ ಮತಾಂತರ ಹೊಂದಿದಾಗ ಕೆಲವರು ಮತಾಂತರ ಹೊಂದದೆ ಹಾಗೆಯೇ ಉಳಿದರು. ಇನ್ನು ಕೆಲವರು ವೈಷ್ಣವಧರ್ಮವನ್ನು ಒಪ್ಪಿಕೊಂಡರು. ಕೆಲವರು ಬಸವಣ್ಣನ ತತ್ವವನ್ನು ಒಪ್ಪಿಕೊಂಡು ವೀರಶೈವ ತತ್ವವನ್ನು ಅನುಸರಿಸಿದರು. ಈ ಜನಾಂಗದವರು ಮುದಿಗೆರೆ, ಗುಮ್ನಹಳ್ಳಿ, ಬಾಲೇನಹಳ್ಳಿ, ನಾದೂರು, ದೊಡ್ಡ ಅಗ್ರಹಾರ ಮೊದಲಾದ ಕಡೆ ಕಂಡು ಬರುತ್ತಾರೆ"[೪೩].

ಸಾದರು ಮೂಲತಃ ಒಂದು ಸಣ್ಣ ಬುಡಕಟ್ಟು ಜಾತಿಯಾಗಿದ್ದು, ಎಂಟು-ಒಂಭತ್ತನೆಯ ಶತಮಾನದಲ್ಲಿ ಜೈನಧರ್ಮದ ಪ್ರಭಾವದಿಂದ ಕೆಲವರು ಜೈನಧರ್ಮದ ಅನುಯಾಯಿಗಳಾದರು. ನಂತರ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಸಮಕಾಲೀನರಾದ ಮರಳುಸಿದ್ದರ ಪ್ರಭಾವದಿಂದ ಲಿಂಗಾಯಿತ ಧರ್ಮವನ್ನು ಅನುಸರಿಸಿರಬಹುದು. ಆದರೆ ಈ ಎರಡು ಧರ್ಮಗಳ ಪ್ರಭಾವದಿಂದ ದೂರ ಉಳಿದ ಕೆಲವರು ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ತಮ್ಮನ್ನು ಹಿಂದೂಸಾದರು ಎಂದು ಕರೆದುಕೊಂಡಿದ್ದಾರೆ. ಸಾದರು ಮೂಲತಃ ಸಸ್ಯಹಾರಿಗಳು; ಕಾರಣ ಜೈನ ಧರ್ಮದ ಪ್ರಭಾವ ಮತ್ತು ಹಿನ್ನೆಲೆಯಿಂದ ಬಂದಿರುವುದೇ ಆಗಿದೆ ಎಂದೆನ್ನಬಹುದು.

"ಜೈನರಲ್ಲಿ ಬೋಧನೆ ಅಧ್ಯಯನ ಕಾರ್ಯ ಕೈಗೊಳ್ಳುವವರು ಉಪಾಧ್ಯಾಯರು, ಅರಿತು ನಿತ್ಯ ಆಚರಿಸುವವರು ಸಾಧುಗಳು-'ಸಾಧಕರು'-ಈ ಸಾಧಕರೇ ಹೆಚ್ಚಾಗಿ ಮತಾಂತರಗೊಂಡಾಗ ಇವರು 'ಸಾದರು' ಜನಾಂಗದವರಾದರು.

ಇತರೆ ಕೋಮಿನವರು ವೀರಶೈವ ಧರ್ಮಕ್ಕೆ ಮತಾಂತರಗೊಂಡಿರಬಹುದು. ಆದರೆ ಪ್ರಾಚೀನ ಕಾಲದ ಜೈನರೇ ಸಾದರಾಗಿ ಮತಾಂತರಗೊಂಡಿರುವುದು ಕಂಡುಬರುವುದು"[೪೪].

ಸಾಧು ಎಂಬ ಸಂಸ್ಕೃತ ಪದದಿಂದ ಬಂದದ್ದೆ ಸಾದ [SADARU>SADA] ಇದರರ್ಥ ಸಭ್ಯ, ಉದಾರ, ಮೃದು, ದಯಾಪರ, ಒಳ್ಳೆಯ ಸ್ವಭಾವದ, ಕೋಮಲ ಅಥವಾ ನಮ್ರ ಪಳಗಿದ ಎಂದಾಗುತ್ತದೆ. [Gentle or Tame]

ಸಾದರ ಜಾತಿಯು ಸ್ಥಳೀಯ ಸಂಸ್ಕೃತಿಯೊಡನೆ ಅನನ್ಯವಾಗಿ ಬೆರೆತು ಧರ್ಮಸಮನ್ವಯವನ್ನು, ಸಾಂಸ್ಕೃತಿಕ ಸಮತೋಲನವನ್ನು ಸಾಧಿಸುವಲ್ಲಿ ಯಶಸ್ವಿಯಾಯಿತಲ್ಲದೆ ಅಲ್ಪಸಂಖ್ಯಾತರಾದರೂ, ಆರ್ಥಿಕವಾಗಿ ಮಧ್ಯಮವರ್ಗದಲ್ಲಿದ್ದರೂ ಇಲ್ಲಿಯ ಪ್ರಮುಖ ಜಾತಿಯಾಗಿ ರೂಪುಗೊಂಡಿತು. ಇದಕ್ಕೆ ಕಾರಣ ಇವರಲ್ಲಿನ ಸಾರ್ವತ್ರಿಕ ಮೌಲ್ಯವುಳ್ಳ, ಸತ್ಯ, ಅಹಿಂಸೆ, ನ್ಯಾಯ, ನಿಷ್ಠೆ ಮುಂತಾದ ತತ್ವಗಳು ಇವು ಇಂದಿಗೂ ಪ್ರಸ್ತುತವಾಗಿವೆ.

ಸಾದರು ಜೈನಧರ್ಮದ ಪ್ರಭಾವಕ್ಕೆ ಒಳಗಾಗಲು ಮುಖ್ಯ ಕಾರಣವೆಂದರೆ ಅಲ್ಲಿನ ಧಾರ್ಮಿಕ ತತ್ವಗಳು–ತತ್ವಾಕರ್ಷಣೆಯಿಂದಾಗಿ ಜೈನಧರ್ಮಕ್ಕೆ ಮತಾಂತರ ಹೊಂದಿದ ಜಾತಿಯ ಕೆಲವರು ತಮ್ಮ ಕುಲಕಸುಬಾದ ವ್ಯವಸಾಯದಿಂದಾಗಿ ಹೆಚ್ಚುಕಾಲ ಆ ಧರ್ಮದಲ್ಲಿ ಉಳಿಯಲಾರದೆ ಮತ್ತೆ ತಮ್ಮ ಮೂಲ ಸಂಸ್ಕೃತಿಗೆ ಮರಳಿಬಂದರು.

"ಕರ್ನಾಟಕದಲ್ಲಿ ಜೈನಧರ್ಮವೆಂದರೆ ದಿಗಂಬರ ಸಂಪ್ರದಾಯದ ಜೈನ ಧರ್ಮವೆಂಬ ಅರ್ಥ ಭದ್ರಬಾಹು ಭಟ್ಟಾರರ ಮೂಲಕ ಆಗಮಿಸಿದ ಈ ಪಂಥವು ರಾಜಾಶ್ರಯ ಪಡೆದು ಇಡೀ ಕರ್ನಾಟಕದ ತುಂಬಾ ಜನಪ್ರಿಯತೆಯನ್ನು ಗಳಿಸಿತ್ತು"[೪೫].

"ಧರ್ಮ ಮತ್ತು ಸಮಾಜದಲ್ಲಿ ಶಾಂತಿ ಸಾಮರಸ್ಯಗಳು ನೆಲೆಗೊಂಡಾಗ ಸಂಸ್ಕೃತಿಯು ಗರಿಗೆದರಿ ತನ್ನ ಕೊಡುಗೆಗಳನ್ನು ನೀಡುತ್ತದೆ. ವಿಜಯನಗರ ಸಾಮ್ರಾಜ್ಯ ಅಸ್ತಂಗತವಾಗುವವರೆಗೆ ರಾಜಕೀಯ ರಂಗದಲ್ಲಿ ಜೈನಧರ್ಮಕ್ಕೆ ಯಾವ ಬಾದಕವೂ ಉಂಟಾಗಿರಲಿಲ್ಲ. ಸುಮಾರು ಒಂದೂವರೆ ಸಾವಿರ ವರ್ಷಗಳ ಕಾಲ ಅದು ಈ ನಾಡಿನ ಮಣ್ಣಿನ ಸಾರವನ್ನು ಹೀರಿಕೊಂಡು ಪ್ರಮುಖ ಧರ್ಮವಾಗಿ ಮೆರೆಯಿತು. ಅನೇಕ ಮೌಲಿಕವಾದ ಕೊಡುಗೆಗಳನ್ನು ನೀಡಿ ತನ್ನ ಪರಂಪರೆಯನ್ನು ಸೃಷ್ಠಿಸಿತು".

"ತುಳುನಾಡಿನ ಜೈನಧರ್ಮದ ಸ್ವರೂಪವು ಕರ್ನಾಟಕದ ಇತರ ಭಾಗಗಳಲ್ಲಿರುವ ಜೈನಧರ್ಮದ ಸ್ವರೂಪಕ್ಕಿಂತ ಭಿನ್ನವಾದುದು ಕರ್ನಾಟಕದ ಇತರ ಭಾಗಗಳಲ್ಲಿ ಜೈನ ಬೋಗಾರರು, ಕಾಸಾರ, ಪಂಚಮ, ಚತುರ್ಥ, ಸೇತುವಾಳ, ಸಾದ, ಗೌಡ, ನಾಯಕ ಇತ್ಯಾದಿ ಒಳಪಂಗಡಗಳಿವೆ"[೪೬].

ಅತಿ ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತದಲ್ಲಿ ವಾಸಿಸುತ್ತಿರುವ ಜನ ಸಮುದಾಯಗಳಲ್ಲಿ ಸಾದರು ಪ್ರಮುಖರು ಮತ್ತು 'ಅಲ್ಪಸಂಖ್ಯಾತರು' ಆಗಿದ್ದಾರೆ.

"ಕ್ರಿ.ಪೂ ೬ನೇ ಶತಮಾನದಲ್ಲಿ ಮಹಾವೀರರಿಂದ ಸ್ಥಾಪನೆಯಾದ ಜೈನಧರ್ಮದ ದಿಗಂಬರ ಪಂಥ ಕ್ರಿ.ಪೂ. ೩ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಕಾಲೂರಿತು. ಶ್ರಮ ಸಂಸ್ಕೃತಿಯ ಒಕ್ಕಲಿಗ ಮೂಲದಿಂದ ಬಂದ ರಾಜ ಮಹಾರಾಜರು, ಮಂತ್ರಿಗಳು, ಹೆಗ್ಗಡೆ, ಗೌಡ, ನಾಡಗೌಡರು ಜೈನಧರ್ಮ ಸ್ವೀಕರಿಸಿದರು. ಗಂಗ ಮನೆತನದ ದುರ್ವಿನೀತ ಮಾರಸಿಂಹ, ನೀತಿಮಾರ್ಗ, ರಾಷ್ಟ್ರಕೂಟ ಮನೆತನದ ಅಮೋಘವರ್ಷ ನೃಪತುಂಗ, ಹೊಯ್ಸಳ ಮನೆತನದ ವಿಷ್ಣುವರ್ಧನ ಮೊದಲಾದ ಒಕ್ಕಲಿಗ ರಾಜರು ಜೈನಧರ್ಮೀಯರಾದರು. ಶಾಂತಲೆ ಚಾವುಂಡರಾಯರಂತಹ ಗಣ್ಯರೂ ಇದರ ಪ್ರಭಾವಕ್ಕೆ ಒಳಗಾದರು. ಇದೇ ಮೇಲ್ಪಂಕ್ತಿಯನ್ನು ಒಕ್ಕಲಿಗ ಪ್ರಜೆಗಳು ಅನುಸರಿಸಿದರು.

ಬಯಲು ನಾಡಿನ ಗಂಗಡಿಕಾರರು, 'ಸಾದರು', 'ಕುಂಚಿಟಿಗರು', ಮಲೆನಾಡಿನ ನಾಮಧಾರಿ ಒಕ್ಕಲಿಗರು ಸ್ವಲ್ಪ ಪ್ರಮಾಣದಲ್ಲಿ ಜೈನರಾದರು"[೪೭].

"ಶೂದ್ರಶಾಕ್ತ–ಕಾಪಾಲಿಕಶೈವ"ರಾಗಿದ್ದ ದ್ರಾವಿಡ ಪಶುಪಾಲಕ ವರ್ಗಗಳಲ್ಲಿ, ಅನೇಕ ಗುಂಪುಗಳು ಅತಿ ಪ್ರಾಚೀನದಲ್ಲಿ ಜೈನಧರ್ಮಕ್ಕೊಳಗಾಗಿ ಸಾತ್ವಿಕಗೊಂಡು ತದನಂತರದಲ್ಲಿ ಶೈವ–ವೀರಶೈವರಾಗಿ ಪರಿವರ್ತನೆಗೊಂಡಿವೆ. ಇಂದಿನ ಅನೇಕ ಲಿಂಗಾಯಿತ ಉಪಜಾತಿಗಳ ಧಾರ್ಮಿಕ ಜೀವನದ ಪರಿಭ್ರಮಣಿಕೆ ಇದೇ ಆಗಿದೆ. ಇದಕ್ಕೆ ಸಾದರು ಹೊರತಲ್ಲ, ಅಷ್ಟಾಗಿಯೂ ಬುಡಕಟ್ಟು ಸಮಾಜದ ಲಕ್ಷಣಗಳನ್ನು ಬೇರೆಲ್ಲ ಉಪಜಾತಿಗಳಿಗಿಂತ ಹೆಚ್ಚು ಗಟ್ಟಿಯಾಗಿ ಉಳಿಸಿಕೊಂಡಿರುವುದೇ ಸಾದರ ವೈಶಿಷ್ಟ್ಯತೆ"[೪೮].

ಹೀಗೆ ಜೈನಧರ್ಮದ ಪ್ರಭಾವದಿಂದ ಕೆಲ ಸಾದರು ಜೈನಧರ್ಮವನ್ನು ಸ್ವೀಕರಿಸಿದರು. ಹಲವರು ಯಾರಿಗೂ ಹೆಚ್ಚು ಪ್ರಾಧಾನ್ಯತೆಯನ್ನು ನೀಡದೆ "ಶಿವ ಮತ್ತು ವಿಷ್ಣುವಿನ" ಆರಾಧಕರಾದರು. ವೈಷ್ಣವ ಗುಂಪಿನ ಗುರು ತಾತಾಚಾರ್ಯರು ಒಟ್ಟಿನಲ್ಲಿ ಸಾದರೆಲ್ಲಾ ಮೂಲತಃ ಜೈನರು ಎಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಸಾದರ ಮೂಲದ ಬಗ್ಗೆ ದೊರೆತಿರುವ ಬಹುತೇಕ ಎಲ್ಲಾ ಆಧಾರಗಳು ತಾತಾಚಾರ್ಯರ ಅಭಿಪ್ರಾಯಕ್ಕೆ ಪುಷ್ಟಿ ನೀಡುವಂತಿವೆ.

೨.೪: ಜನಪದ ಕಥೆಗಳಲ್ಲಿನ ಉಲ್ಲೇಖಗಳು.

ಸಾದರ ಜಾತಿಗೆ ಸಂಬಂಧಿಸಿದಂತೆ ಕುಲ ಪುರಾಣಗಳು, ಕಥನಗಳು ಮುಂತಾದವುಗಳ ಕೊರತೆ ಇರುವುದನ್ನು ಗಮನಿಸಬಹುದು. ಗೊಲ್ಲರ ಹುಟ್ಟಿನ ಬಗ್ಗೆ ಜುಂಜಪ್ಪನ ಪುರಾಣವಿದೆ. ಕುರುಬರ ಜಾತಿಯ ಬಗ್ಗೆ ಹಾಲುಮತ ಪುರಾಣವಿದೆ. ಮಾದಿಗ ಜಾತಿಯ ಬಗ್ಗೆ ಜಾಂಬವಂತ ಪುರಾಣವಿದೆ. ಇಂತಹ ಕುಲ ಪುರಾಣಗಳು ಸಾದರಿಗೆ ಇರುವುದಿಲ್ಲ. ಯಾವುದೇ ದೀರ್ಘವಾದ ಕಥನ–ಗೀತೆಗಳನ್ನು ಸಾದರು ಜಾತಿಯು ಹೊಂದಿರುವುದಿಲ್ಲ. ಎಲ್ಲ ಜಾತಿಯವರಿಗೂ ಸಾಮಾನ್ಯವೆನಿಸುವ ಕೆಲವು ಕಥನ ಗೀತೆಗಳನ್ನು ಇವರು ಕೂಡ ಕಲಿತು ಹಾಡುತ್ತಾರೆ. ಜಾತಿಯ

ವೈಶಿಷ್ಟ್ಯತೆಯನ್ನು ಕುರಿತ, ಸಾದರನ್ನೇ ಕುರಿತ ಪ್ರತ್ಯೇಕ ಜನಪದ ಕಥೆಗಳಿರುವುದಿಲ್ಲ. ಕೃಷಿಯೇ ಇವರ ಪ್ರಧಾನ ಕಸುಬಾಗಿರುವುದರಿಂದ, ಕೃಷಿಯನ್ನೆ ಕುಲಕಸುಬಾಗಿ ಉಳ್ಳಂತ ಇತರ ಜಾತಿಗಳಂತೆ ಸಾಮಾನ್ಯವಾದ ಅಂಶಗಳನ್ನು ಮತ್ತು ಲಕ್ಷಣಗಳನ್ನು ಸಾದರು ಜಾತಿಯು ಒಳಗೊಂಡಿದೆ. ಆದ್ದರಿಂದ ಸಾದರಿಗೆ ಪ್ರತ್ಯೇಕವಾದ ಯಾವುದೇ ಕಥನ-ಗೀತೆಗಳಾಗಲಿ, ಕುಲಪುರಾಣಗಳಾಗಲಿ ಇರುವುದಿಲ್ಲವೆಂಬುದು ಸ್ಪಷ್ಟ ವಿಚಾರವಾಗಿದೆ. ಆದರೆ ಸಾದರ ಮೂಲವನ್ನು ಕುರಿತಂತೆ ಹಲವು ಐತಿಹ್ಯಗಳಿವೆ. ತಮ್ಮ ಜಾತಿಯ ಉಗಮವನ್ನು ಕುರಿತು ಈ ರೀತಿಯಾಗಿ ಹೇಳುತ್ತಾರೆ.

ಐತಿಹ್ಯ-1:- ಹಣೆಗೆ ಸಾಧುವನ್ನು ಇಡುವವರನ್ನು ಸಾಧರೆಂದು ಕರೆಯುತ್ತಾರೆ. ಸಾಧುವೆಂದರೆ ಕಪ್ಪುಬಣ್ಣದ ತಿಲಕ, ಇದನ್ನು ಜಾಲಿಕಾಯಿ, ಅಕ್ಕಿ, ರಾಗಿಯ ಕರುಕಿನಿಂದ ತಯಾರಿಸುತ್ತಾರೆ. ಕೆಲವೊಮ್ಮೆ ಮಕ್ಕಳ ದೃಷ್ಟಿ ಪರಿಹಾರಕ್ಕೆಂದು ಕೆನ್ನೆ ಅಥವಾ ಗಲ್ಲದ ಮೇಲೆ ಇದರ ಬೊಟ್ಟಿಡುವುದೂ ಉಂಟು. ಈ ನಿಟ್ಟಿನಲ್ಲಿ "ಸಾಧು" (ಕಪ್ಪುತಿಲಕ) ವನ್ನು ಕುರಿತಂತೆ ಹಲವು ನಾಣ್ಣುಡಿಗಳಿವೆ, "ಹಂಚಿಕಡ್ಡಿಯಷ್ಟು ಸಾದಿದರೆ ಕಂಚಿಯ ತನಕ ಇಟ್ಟುಕೊಂಡು ಬರಬಲ್ಲ", 'ಸಾದಿನ ಬೊಟ್ಟು ಹಣೆಯಾಗೆ ಇದ್ದವನೇ ಸಾದರವನು', 'ಸಾದಿಟ್ಟವನೇ ಸಾದ' ಎಂಬ ಗಾದೆಗಳು ಇವರಲ್ಲಿ ಪ್ರಚಲಿತವಿರುವುದನ್ನು ಗಮನಿಸಬಹುದು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು, ಗಾದೆ ವೇದಕ್ಕೆ ಸಮಾನ ಎಂಬ ಗಾದೆಗಳೇ ಗಾದೆಯ ಮಹತ್ವವನ್ನು ಸಾರುವಂತೆ ಸಾದರನ್ನು ಕುರಿತಂತೆ ಇರುವ ಗಾದೆಗಳು ಇವರ ಮೂಲವನ್ನು ಗುರುತಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತವೆ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಸಾಧುವನ್ನು ಇಟ್ಟವನೇ ಸಾಧ ಎಂಬ ಹೇಳಿಕೆಗಳು ಚಾಲ್ತಿಯಲ್ಲಿವೆ.

ಐತಿಹ್ಯ-2:- ಒಮ್ಮೆ ಋಷಿಮುನಿಗಳು ಕಾಡಿನಲ್ಲಿ ತಪಸ್ಸಿಗೆ ಕುಳಿತರು. ಆಗ ಕಾಡಿನಲ್ಲಿ ಜೇನು ಹುಳಗಳು ಝೇಂಕರಿಸುತ್ತಾ ಬಂದಾಗ ಅವುಗಳ ಝೇಂಕಾರದಿಂದ ಸ್ಫೂರ್ತಿ ಹೊಂದಿಯೋ, ಭಯದಿಂದಲೋ ಜೈ ಎಂದು ಎದ್ದು ಹೋದವರು ಜೈನರಾದರು ಯಾವುದೇ ಕಷ್ಟ ಕಾರ್ಪಣ್ಯಗಳಿಗೆ ಜಗ್ಗದೆ ಎಲ್ಲ ಉಪಸರ್ಗಗಳನ್ನು ಸಹಿಸಿ ಅಲ್ಲಿಯೇ ತಪಸ್ಸಿನಲ್ಲಿ ನಿರತರಾಗಿ ಸಿದ್ಧಿ ಸಾಧಿಸಿದವರೇ ಸಾದರಾದರು ಎಂಬೊಂದು ನಂಬಿಕೆಯು ಇವರಲ್ಲಿ ಇದೆ. ಸಾದರಲ್ಲಿನ ಈ ನಂಬಿಕೆಯು ಜೈನರು ಮತ್ತು ಸಾದರು ಒಂದೇ ಸಮಾಜದಿಂದ ಹೇಗೆ ಬೇರೆ-ಬೇರೆಯಾದರೆಂಬುದನ್ನು ಧ್ವನಿಸುತ್ತದೆ.

ಐತಿಹ್ಯ-3:- ಒಮ್ಮೆ ಯಾವುದೋ ಹಬ್ಬವೊಂದರಲ್ಲಿ ಸಾರ್ವಜನಿಕ ಪ್ರದರ್ಶನಕ್ಕೆಂದು ಸಾವಿರ ಗೊಂಬೆಗಳನ್ನಿಡಲಾಯಿತು, ಆ ಸಾವಿರ ಗೊಂಬೆಯಲ್ಲಿ ಬಾಗಿಲ ಬಳಿಯಲ್ಲೊಂದು ಗೊಂಬೆ ಇದ್ದಿತು. ಅದು ಪಂಚಭೂತಗಳಿಂದ ರಚಿಸಲ್ಪಟ್ಟಿದ್ದು, ನಿಸ್ವಾರ್ಥಮನೋಭಾವದಿಂದ ಕೂಡಿದಂತಹ ಆ ಗೊಂಬೆಯು ಸಾದುವಾಗಿದ್ದಿತು. ಆ ಸಾಧುಗೊಂಬೆಯಿಂದ ಸಾದರ ಉಗಮವಾಯಿತೆಂಬ ನಂಬಿಕೆಯು ಸಾದರ ಕೆಲ ಹಿರಿಯ ಚೇತನಗಳಲ್ಲಿದೆ.

ಸೂಕ್ಷ್ಮವಾಗಿ ಗಮನಿಸಿದಾಗ ಈ ದಂತಕಥೆಯು ಬ್ರಹ್ಮ ಒಂದು ಗೊಂಬೆಯನ್ನು ಸೃಷ್ಟಿಸಿ ಅದಕ್ಕೆ ಜೀವಕೊಟ್ಟನೆಂಬ ಸೃಷ್ಟಿ ಪುರಾಣದ ಹೇಳಿಕೆಗೆ ತುಂಬಾ ಸಾಮ್ಯತೆಯಿಂದ ಕೂಡಿದೆ. ಹೀಗೆ

ಉಗಮವಾದ ಸಾದರ ಏಳಿಗೆಯನ್ನು ಕಂಡು ಜೈನರು ಮತ್ತು ಲಿಂಗಾಯಿತರು ಸಾದರನ್ನು ತಮ್ಮ ತಮ್ಮ ಜಾತಿಗಳಿಗೆ ಸೆಳೆಯಲು ಯತ್ನಿಸಿದಾಗ ಕೆಲವರು ಜನಿವಾರ ಧರಿಸಿ ಜೈನಸಾದರಾದರು. ಮತ್ತೆ ಕೆಲವರು ಲಿಂಗಧರಿಸಿ ಸಾದರಲಿಂಗಾಯಿತರಾದರು. ಆದರೆ ಹಲವರು ಬಾಹ್ಯಲಿಂಗ ಕಟ್ಟಿದ್ದು ಆತ್ಮಲಿಂಗ ದೇವರು ಕೊಟ್ಟಿದ್ದು. ನಮಗೆ ದೇವರು ಜನ್ಮತಃ ಕೊಟ್ಟ ಆತ್ಮಲಿಂಗವೇ ಸಾಕೆಂದು ತಮ್ಮ ಮೂಲ ಸಂಸ್ಕೃತಿಯಲ್ಲೇ ಉಳಿದರು, ಮೂಲ ಸಂಸ್ಕೃತಿಯನ್ನು ಬೆಳೆಸಿದರು.

ಇತ್ತೀಚಿನ ದಿನಗಳಲ್ಲಿ ಸಾದರು ತಮ್ಮ ಸಂಸ್ಕೃತಿಯ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳಲು 'ಹಿಂದೂ ಸಾದರು' ಎಂದು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಅಲ್ಪಸಂಖ್ಯಾತರಾದ ಸಾದರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನವಿದಾಗಿದೆ ಎಂದೆನ್ನಬಹುದು.

ಐತಿಹ್ಯ-4:- ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಜೈನರಿಗೂ, ವೈಷ್ಣವರಿಗೂ ಜಗಳ ನಡೆದಾಗ ಬುಕ್ಕರಾಯನು ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿಸಿದ್ದು, ಜೈನ ಕ್ಷೇತ್ರಗಳಿಗೆ ರಕ್ಷಣೆ ನೀಡಿದ್ದು, ನೋಡಿದರೆ ಜೈನಧರ್ಮದ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿರಲಿಲ್ಲವೆಂಬುದು ತೋರುತ್ತದೆ. ಬಹುಶಃ ಈ ಕಾಲಘಟ್ಟದಲ್ಲಿಯೇ ಜೈನ ಸಮಾಜದಿಂದ ಕೆಲವು ಸಾದರು ತಮ್ಮ ಜನಿವಾರವನ್ನು ಕಿತ್ತೆಸೆದು ಬೇರೆಯಾಗಿರಬಹುದೆಂದು ಹೇಳಲಾಗುತ್ತದೆ.

ಐತಿಹ್ಯ-5: ಸಾದರು, ನೊಣಬರು, ಪಂಚಮಸಾಲಿಗಳ ಬಗ್ಗೆ ಇರುವ ಒಂದು ಐತಿಹ್ಯದಂತೆ ಯಜ್ಞದ ಎಡೆಯನ್ನು ಊಟಮಾಡುವಾಗ ಹಸಿವು ತಾಳದೆ ಉಂಡವನು ಪಂಚಮನಾದ, ತಾಳಿದವನು ಸಾದನಾದ, ಯಾರ ಎಡೆಗೆ ನೊಣ ಮುಟ್ಟಿತೋ ಅವನು ನೊಣಬನಾದ ಎಂಬುದಾಗಿ ಹೇಳಲಾಗುತ್ತದೆ.

ನಮಗೆ ಲಭ್ಯವಿರುವ ಎಲ್ಲಾ ಶಾಸನಧಾರಗಳು, ಸಾಹಿತ್ಯಾಧಾರಗಳು ಹಾಗೂ ಐತಿಹ್ಯಗಳಲ್ಲಿನ ವಿಚಾರಗಳನ್ನು ಗಮನಿಸಿದಾಗ ಸಾದರು ಜಾತಿಯು ಜೈನಧರ್ಮದ ಪ್ರಭಾವ ಮತ್ತು ಹಿನ್ನೆಲೆಯಿಂದ ಬಂದಿದೆ ಎಂಬ ವಾದಕ್ಕೆ ಹೆಚ್ಚು ಪುಷ್ಟಿ ದೊರೆಯುತ್ತದೆ.

'ಸಾದರು' ಪದವು ಆ ಜನತೆಯ ಗುಣಸ್ವಭಾವಗಳಿಗೆ ಅನುಗುಣವಾಗಿ ರೂಪುಗೊಂಡದ್ದೇ ಹೊರತು ಯಾವುದೇ ಕಸುಬಿನಿಂದಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ.

ದೊರೆತಿರುವ ಈ ಎಲ್ಲಾ ಆಧಾರಗಳ ಹಿನ್ನೆಲೆಯಲ್ಲಿ ಸಾದರ ಮೂಲವನ್ನು ತಿಳಿಯುವ ಹಾದಿಯಲ್ಲಿ ಸಾಗಬಹುದೇ ವಿನಃ ಸಂಪೂರ್ಣವಾಗಿ ಮೂಲವನ್ನು ಅರಿಯಲು ಮತ್ತಷ್ಟು ಆಧಾರಗಳ ಅಗತ್ಯವಿರುವುದು ತಿಳಿಯುತ್ತದೆ. ಈ ನಿಟ್ಟಿನಲ್ಲಿ ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ.

೨.೫:- ಹಿಂದೂಸಾದರು, ಜೈನಸಾದರು ಮತ್ತು ಸಾದರ ಲಿಂಗಾಯಿತರು, ಬೆಳ್ಳಿಸಾದರನ್ನು ಕುರಿತು ಸಂಕ್ಷಿಪ್ತ ವಿವರ

ಹಿಂದೂ ಸಾದರು:-

ಸಾದರ ಮೂಲ ಸಂಸ್ಕೃತಿಯ ಆರಾಧಕರೇ ಹಿಂದೂ ಸಾದರು. ಯಾವುದೇ ಆಸೆ, ಆಕಾಂಕ್ಷೆಗಳಿಗೆ ಒಳಗಾಗಿ ಮತಾಂತರ ಹೊಂದದೆ ತಮ್ಮ ಮೂಲ ಸಂಸ್ಕೃತಿಯಲ್ಲೇ ನಿಷ್ಠೆ ತಳೆದ ಅಲ್ಪಸಂಖ್ಯಾತರು. ಹಿಂದೂ ಧರ್ಮದ ಅನುಯಾಯಿಗಳೂ ಆದ ಇವರು ತಮ್ಮ ತನದ ಉಳುವಿಗಾಗಿ, ಜಾತಿಯ ಇತರೆ ಗುಂಪಿನಿಂದ ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಸಾದರು ಎಂದಿದ್ದ ಇವರ ಜಾತಿಯ ಹೆಸರನ್ನು 'ಹಿಂದೂ ಸಾದರು' ಎಂದು ಕರೆದುಕೊಂಡಿದ್ದಾರೆ.

ಸಾದರಿಗೆ ಹಲವು ಪರ್ಯಾಯ ಹೆಸರುಗಳಿವೆ. ಸಾದರು, ಸಾದಕುಲ, ಸಾದವಂಶ, ಸಾಧುಕುಳ, ಸಾದ ಕುಳ, ಸೊಂದೆವಂಶ, ಸಾಧುಮತ, ಸಾದರ್, ಸಾದುಗೌಡ, ಸಾಧುಗೌಡರ್, ಸಾದರಗೌಡ, ಸಾದರಿ, ಸಾದರ ಕಾಪು, ಸಾದರ ರೆಡ್ಡಿ ಎಂಬ ನಾನಾ ರೂಪಗಳೆಲ್ಲ ಸಾದಕುಲವನ್ನು ಸೂಚಿಸುತ್ತದೆ.

ಸಾದರು ಪ್ರಮುಖವಾಗಿ ಬೆಂಗಳೂರು ಜಿಲ್ಲೆ, ಬೆಂಗಳೂರು ಗ್ರಾಮಾಂತರ, ಮಾಗಡಿ, ತುಮಕೂರು, ಕೋಲಾರ, ಮೈಸೂರು, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಗಡಿಭಾಗಗಳಲ್ಲಿ ವಾಸಿಸುತ್ತಿದ್ದಾರೆ.

ಹಿಂದೂ ಸಾದರಲ್ಲಿ ಶೈವಧರ್ಮೀಯರು, ವೈಷ್ಣವಧರ್ಮೀಯರು ಜೊತೆಗೆ ಜಿನ ಆರಾಧಕರು (ಕಡಿಮೆ ಪ್ರಮಾಣದಲ್ಲಿ) ಇದ್ದಾರೆ. ಸರ್ವಧರ್ಮ ಸಮನ್ವಯದ ಮನೋಭಾವದಿಂದ ಬದುಕು ಸಾಗಿಸಿದ್ದಾರೆ, ಸಾಗಿಸಬಯಸುತ್ತಾರೆ.

ಜೈನ ಸಾದರು:-

ದಕ್ಷಿಣ ಕನ್ನಡ ಜಿಲ್ಲೆಯು ಧಾರ್ಮಿಕ ಪರಂಪರೆಯು ವಿಶಾಲ ಭಾರತದ ಪರಂಪರೆಗೆ ಹಿಡಿದ ಕೈಗನ್ನಡಿ ಎಂದರೆ ತಪ್ಪಾಗಲಾರದು. ಪ್ರಾಚೀನ ಕಾಲದಿಂದಲೂ ಭಾರತದ ಪ್ರಮುಖ ಧರ್ಮಗಳಾದ ವೈಷ್ಣವ, ಶೈವ ಮುಂತಾದ ಪಂಥಗಳೂ ಇಲ್ಲಿ ನೆಲೆಸಿದ್ದವು. ಬೌದ್ಧಮತದಂತೆ, ಜೈನ ಮತವೂ, ಉತ್ತರ ಭಾರತದಿಂದ ಆಗಮಿಸಿ ನೆಲೆ ನಿಂತು ತನ್ನ ವೈವಿದ್ಯಪೂರ್ಣವು, ವಿಶಿಷ್ಟವೂ, ವಿಭಿನ್ನವೂ ಆದ ಧಾರ್ಮಿಕ ಪರಂಪರೆಯೊಂದನ್ನು ಸೃಷ್ಟಿಸಿತು. ನಮ್ಮ ನಾಡಿಗೆ ಜೈನಧರ್ಮವು ಭದ್ರಬಾಹು ಭಟ್ಟಾರಕರ ಮತ್ತು ಸಂಪ್ರತಿ ಚಂದ್ರಗುಪ್ತರ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಪೂ ೨೩೦ ರಲ್ಲಿ ಆಗಮಿಸಿ ಇಲ್ಲಿ ನೆಲೆಯಾಗಿ ನಿಂತು ನಂತರ ಎಲ್ಲಡೆ ಪಸರಿಸಿರಬಹುದೆಂಬ ಅಭಿಪ್ರಾಯವಿದೆ.

ಕರ್ನಾಟಕದಲ್ಲಿ ಜೈನ ಧರ್ಮವೆಂದರೆ ದಿಗಂಬರ ಸಂಪ್ರದಾಯದ ಜೈನ ಧರ್ಮವೆಂದೇ ಭಾವಿಸಲಾಗುತ್ತದೆ. ಭದ್ರಬಾಹು ಭಟ್ಟಾರಕರ ಮೂಲಕ ಆಗಮಿಸಿದ ಈ ಫಂಥವು ರಾಜಾಶ್ರಯ ಪಡೆದು ಕರ್ನಾಟಕದ ಎಲ್ಲಡೆ ಜನಪ್ರಿಯತೆಯನ್ನು ಗಳಿಸಿತು.

ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತ ಐಯ್ಯರ್ ವಿರಚಿತ **'ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್'** ಎಂಬ ಕೃತಿಯಲ್ಲಿ ಸಾದರು ಮೂಲತಃ ಜೈನರು ಎಂದು ಹೇಳಲ್ಪಟ್ಟಿದೆ. ೧೯೦೧ರ

ಪಡೆದು ಕರ್ನಾಟಕದ ಎಲ್ಲಡೆ ಜನಪ್ರಿಯತೆಯನ್ನು ಗಳಿಸಿತು.

ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತ ಐಯ್ಯರ್ ವಿರಚಿತ **'ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್'** ಎಂಬ ಕೃತಿಯಲ್ಲಿ ಸಾದರು ಮೂಲತಃ ಜೈನರು ಎಂದು ಹೇಳಲ್ಪಟ್ಟಿದೆ. ೧೯೦೧ರ ಜನಗಣತಿಯಲ್ಲಿ ಸಾದರನ್ನು ಜೈನ ಗುಂಪಿಗೆ ಸೇರಿಸಲಾಗಿತ್ತು. ಆದರೆ ಮೂಲತಃ ಹಿಂದೂ ಧರ್ಮದ ಹಿನ್ನೆಲೆ ಮತ್ತು ಪ್ರಭಾವದಿಂದ ಬಂದ ಸಾದರ ಕೆಲವರು ಜೈನಧರ್ಮದಿಂದ ಪ್ರಭಾವಿತರಾದರು. ಅಲ್ಲಿನ ಕೆಲವು ಗ್ರಾಮೀಣ ಪ್ರದೇಶಗಳಿಗೆ ಜೈನಧರ್ಮದ ಪ್ರಭಾವಿ ವ್ಯಕ್ತಿಗಳು ತೆರಳಿ ಅಲ್ಲಿನ ಕೃಷಿಕ ಜನರಿಗೆ, ಅಂಬಲಿಯೇ ಪರಮಾನ್ನವೆಂದವರಿಗೆ ಹೋಳಿಗೆಯ ಊಟವನ್ನು ಹಾಕಿಸಿ ಅವರನ್ನೆಲ್ಲ ಜೈನಧರ್ಮದ ತೆಕ್ಕೆಗೆ ಸೆಳೆಯಲು ಪ್ರಯತ್ನಿಸಲಾಯಿತು. ಈ ಎಲ್ಲದರ ಪರಿಣಾಮವಾಗಿ ಜೈನ ಧರ್ಮದಲ್ಲಿ ನಿಷ್ಠೆ ತೋರಿದ ಸಾದರ ಕೆಲವರು ಜೈನ ಸಾದರಾದರು.

"ಜೈನಧರ್ಮದ ಮೊದಲ ತೀರ್ಥಂಕರ ವೃಷಭ ದೇವನ ನಂತರ ಬಂದ ಇಪ್ಪತ್ತಮೂರು ತೀರ್ಥಂಕರರು ತಮ್ಮ ತಮ್ಮ ಕಾಲದಲ್ಲಿ ಜೈನ ಧರ್ಮದ ಉಪದೇಶವನ್ನು ಮಾಡಿದರು. ಇಪ್ಪತ್ತಮೂರನೇ ತೀರ್ಥಂಕರನಾದ ಪಾರ್ಶ್ವನಾಥರು ತಮ್ಮ ಕಾಲದಲ್ಲಿ ಜೈನಧರ್ಮವನ್ನು ಸುಸಂಘಟಿಸುತ್ತಾರೆ. ಈತನ ನಂತರದ ತೀರ್ಥಂಕರ ಮಹಾವೀರ ಈ ಎಲ್ಲಾ ತೀರ್ಥಂಕರರು ಜೈನ ಧರ್ಮದ ಸುಧಾರಕರೆಂದು ಅಭಿಪ್ರಾಯಪಡಬಹುದು. ಹಿಂದುಗಳಲ್ಲಿ ದೇವಾಲಯಗಳಿರುವಂತೆ ಜೈನರಲ್ಲಿ ಬಸದಿಗಳು ಇವೆ"[೬].

ಬಾದಾಮಿ, ಐಹೊಳೆ, ಮೂಡಬಿದರೆ, ಕಾರ್ಕಳ, ಶ್ರವಣಬೆಳಗೊಳ ಮುಂತಾದ ಸ್ಥಳಗಳಲ್ಲಿ ಜೈನ ಬಸದಿಗಳು ಜೊತೆಗೆ ಗೊಮ್ಮಟೇಶ್ವರ ಮೂರ್ತಿಗಳು ಇವೆ. ಜೈನಧರ್ಮದಲ್ಲಿ ದಿಗಂಬರ, ಶ್ವೇತಾಂಬರ, ಯೊಪನೀಯ ಎಂಬ ಮೂರು ಪಂಗಡಗಳಿವೆ.

ದಿಗಂಬರರಲ್ಲಿ ಚತುರ್ಥ, ಬೊಗಾರ, ಸಾದ, ಪಂಚಮ್, ಪುರೋಹಿತ್ ಎನ್ನುವ ಉಪಪಂಗಡಗಳಿವೆ.

ಜೈನ ಸಾದರು ಮೈಸೂರು, ಕಡಕೊಳ ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಇವರು ಭೂಹಿಡುವಳಿಯನ್ನು ಹೊಂದಿದ್ದು ಕೃಷಿಮಾಡುತ್ತಿರುವುದನ್ನು ಗಮನಿಸಬಹುದು. ಮತ್ತೆ ಕೆಲವರು ವ್ಯಾಪಾರ, ವ್ಯವಹಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವರು ಕನ್ನಡ ಮಾತನಾಡುತ್ತಾರೆ, ಮತ್ತು ಕನ್ನಡ ಲಿಪಿಯನ್ನು ಬಳಸುತ್ತಾರೆ.

ಮದುವೆಯು ತಂದೆಯ ಸಹೋದರಿಯ ಮಗಳ ಜೊತೆ ನಡೆಯುತ್ತದೆ. ಏಕಪತ್ನಿತ್ವ/ಏಕಪತಿತ್ವ ಮದುವೆಯ ರೀತಿ. ಇವರಲ್ಲಿ ವಿಭಕ್ತ ಹಾಗೂ ಅವಿಭಕ್ತ ಕುಟುಂಬಗಳನ್ನು ಕಾಣಬಹುದು. ಹಿರಿಯ ಮಗ ತಂದೆಯ ನಂತರ ಮನೆಯ ಯಜಮಾನನಾಗುತ್ತಾನೆ. ಹೆಂಗಸರು ಮನೆಯ ಕಾರ್ಯಗಳನ್ನು ಮಾಡುತ್ತಾರೆ. ಕೆಲವು ಉದ್ಯೋಗಸ್ಥ ಮಹಿಳೆಯರು ತಮ್ಮ ಕುಟುಂಬದ ಆದಾಯಕ್ಕೆ

[illegible]

ಸಹಾಯಕರಾಗುತ್ತಾರೆ. 'ಸೀಮಂತ'ವನ್ನು ಗರ್ಭಿಣಿಯಾದ ಏಳನೇ ತಿಂಗಳಲ್ಲಿ ಮಾಡುತ್ತಾರೆ. ಜನನದ ಸೂತಕವನ್ನು ಹತ್ತು ದಿನಗಳವರೆಗೆ ಆಚರಿಸುತ್ತಾರೆ. ನಾಮಕರಣವನ್ನು ಹನ್ನೆರಡನೇ ದಿನ ಅಥವಾ ಹದಿನಾರನೇ ದಿನದಂದು ಮಾಡುತ್ತಾರೆ. ಜೈನಸಾದರು ಒಂದು ವರ್ಷದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಿಗೂ ಕಿವಿಯನ್ನು ಚುಚ್ಚಿಸುತ್ತಾರೆ. ಹೆಣ್ಣುಮಕ್ಕಳಿಗೆ ಋತುಮತಿ ಕಾರ್ಯ ಮಾಡುತ್ತಾರೆ. ಸೂತಕವು ಐದು ದಿನಗಳವರೆಗೆ ನಡೆಯುತ್ತದೆ. ಶವವನ್ನು ಸುಡುತ್ತಾರೆ. ಸುಟ್ಟ ದೇಹದ ಅಸ್ಥಿಗಳನ್ನು ಪವಿತ್ರ ನದಿಗಳ ನೀರಿನಲ್ಲಿ ವಿಸರ್ಜಿಸುವ ವಾಡಿಕೆಯಿದೆ. ಸಾವಿನ ಸೂತಕ ಹತ್ತು ದಿನಗಳ ಕಾಲ ಇದ್ದು ಪ್ರತಿ ವರ್ಷವೂ ಹಿರಿಯರ ಪೂಜೆ ಮಾಡುತ್ತಾರೆ.

ಜೈನರು ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಹಂಚಿಹೋಗಿದ್ದಾರೆ. ಆದರೆ ಬಳ್ಳಾರಿ ಮತ್ತು ದಾವಣಗೆರೆ, ಮೈಸೂರಿನ ಸಮೀಪವಿರುವ ಕಡಕೊಳದಲ್ಲಿ ಜೈನ ಸಾದರು ಹೆಚ್ಚಾಗಿ ಕಂಡುಬರುತ್ತಾರೆ.

ಶ್ರೀ ಆದಿಶಕ್ತಿ ವೀರಮಾಸ್ತಿ ದೇವಾಲಯವು ಪೆಮ್ಮನಹಳ್ಳಿಯಲ್ಲಿದ್ದು; ಆದಿಶಕ್ತಿ ವೀರಮಾಸ್ತಿ ಭಕ್ತರಲ್ಲಿ ಹಲವು ಕುಟುಂಬಗಳು ಕಂಡುಬರುತ್ತವೆ. ಮಾಗಡಿ ತಾಲ್ಲೂಕಿನ ಹುಲಿಕಲ್ಲು ಗ್ರಾಮದ ಜನಗಳಲ್ಲಿ ಅಂಗಡಿ ಗಂಗಣ್ಣನವರು ಮತ್ತು ಅವರ ಸಹೋದರರು ಸೊಂಡೆಕೊಪ್ಪ ಗ್ರಾಮದ (ಬೆಂಗಳೂರು ಜಿಲ್ಲೆ) ಕೋಳೂರು ನಂಜುಂಡಪ್ಪ ಹಾಗೂ ಅವರ ಸೋದರರು ಇನ್ನು ಮುಂತಾದವರು ಆದಿಶಕ್ತಿ ವೀರಮಾಸ್ತಿಯ ಆರಾಧಕರಾಗಿರುವುದನ್ನು ಗಮನಿಸಬಹುದು.

ಹರಪ್ಪನಹಳ್ಳಿ ತಾಲ್ಲೂಕಿನ ನಂದಿಕಂಬವೆಂಬ ಗ್ರಾಮದಲ್ಲಿ ಪ್ರತಿ ವರ್ಷ ಶ್ರಾವಣ ಮಾಸದ ಒಂದು ಭಾನುವಾರ ಗುಂಡುಬ್ರಹ್ಮದೇವರ ಆರಾಧನೆ ನಡೆಯುತ್ತದೆ. ಸಾಧುಗೌಡರ ಮನೆಯಿಂದ ಒಂದು ಖಡ್ಗ ಮೆರವಣಿಗೆಯಲ್ಲಿ ಅಲ್ಲಿಗೆ ಬರುವುದು. ಕರುಗಲ್ಲಿಗೆ ನೀರು ಎರೆದು ಪೂಜೆ ಸಲ್ಲಿಸುವರು. ಬ್ರಹ್ಮದೇವರಿಗೆ ರುಮಾಲು ಸುತ್ತಿ ಚಿಕ್ಕ ಶಲ್ಯದಿಂದ ಅಲಂಕರಿಸಿ ಹರಕೆ ಹೊತ್ತವರು ಬೆಳ್ಳಿ ಜನಿವಾರವನ್ನು ಅರ್ಪಿಸಿ ಪೂಜೆ ಮಾಡುವರು. ನಂತರ ಊರಿನ ಎಲ್ಲಾ ಕೋಮಿನ ಜನರು ಹೂಡೇವಿನ ಮುಂದೆ ಕುಳಿತು ಸಾಮೂಹಿಕವಾಗಿ, ಮಾದಲಿ, ಅನ್ನ-ಸಾರುವಿನ ಭೋಜನ ಮಾಡುವರು. ಜೊತೆಗೆ ದೇವರಿಗೆಂದೇ ಮಡಿಯಿಂದ ತಯಾರಿಸಿದ ಎಣ್ಣೆಹೋಳಿಗೆ ಮತ್ತು ಅಕ್ಕಿ ಪಾಯಸದ ಪ್ರಸಾದವನ್ನು ಎಲ್ಲರ ಊಟದ ಎಲೆಗಳಿಗೆ ನೀಡುವರು. ಇದೇ ರೀತಿ ಹೆಚ್ಚಾಗಿ ಸಾಧುಮತದವರೇ ವಾಸಿಸುತ್ತಿರುವ ಅಣಜಿಗೇರಿ, ಕಡಬಗೇರಿ, ಮೋರಿಗೆರೆ, ಮುಂತಾದ ಗ್ರಾಮಗಳಲ್ಲಿ ಗುಂಡುಬ್ರಹ್ಮದೇವರ ಆರಾಧನೆ ನಡೆಯುತ್ತದೆ.

ಬ್ರಹ್ಮದೇವರ ಪ್ರಿಯವಾದ ಆಹಾರ ಎಣ್ಣೆಹೋಳಿಗೆ, ಅಕ್ಕಿಪಾಯಸ. ಬ್ರಹ್ಮದೇವರ ಆರಾಧನೆಗೆ ಶ್ರೇಷ್ಠವಾದ ದಿನ ಆದಿತ್ಯವಾರ (ಭಾನುವಾರ) ಎಂಬುದು ಇವರ ನಂಬಿಕೆ. ಬ್ರಹ್ಮದೇವರ ಆರಾಧನೆಗೆ ಮೆರವಣಿಗೆಯಲ್ಲಿ ಬರುವ ಖಡ್ಗ ಸಾಮಾನ್ಯವಾಗಿ ಸಾಧುಗೌಡರ ಮನೆಗಳಿಗೆ ಸೇರಿದ್ದು. ಆದರೆ ಅಣಜಿಗೆರೆ ಗ್ರಾಮದ ಖಡ್ಗ ಬಣಕಾರರ ಮನೆಗೆ ಸೇರಿದ್ದು. ಬಹುಶಃ ಇವರೆಡೂ ಮನೆತನದವರು ಸಾದರ ಸಮಾಜದವರೆ ಇರಬಹುದೆಂಬುದು ಕೆಲವರ ಅಭಿಪ್ರಾಯ.

ಜೈನಸಾದರು ಅಹಿಂಸಾವಾದಿಗಳು, ಪ್ರಾಣಿವಧೆ, ಮಾಂಸಹಾರ, ಮದ್ಯಪಾನಗಳನ್ನು ವಿರೋಧಿಸುವ ಗುಣವುಳ್ಳವರಾಗಿದ್ದಾರೆ. ಇವರು ಆದಿ ತೀರ್ಥಂಕರರನ್ನು ತಮ್ಮ ಆದಿದೈವವನ್ನಾಗಿ ಪೂಜಿಸುತ್ತಾರೆ. ಬಸದಿಗಳಲ್ಲಿ ಮೂಲ ಆದಿ ತೀರ್ಥಂಕರ, ಯಕ್ಷ, ಯಕ್ಷಿ ವಿಗ್ರಹಗಳನ್ನು ಗಮನಿಸಬಹುದು. ಇವರು ಅಕ್ಕಿ ಪೂಜೆ, ನೋಂಪಿ ಮುಂತಾದ ಪೂಜೆಗಳನ್ನು ಭಕ್ತಿಯಿಂದ ಆಚರಿಸುತ್ತಾರೆ. ಇವರ ಒಟ್ಟು ಸಂಪಾದನೆಯಲ್ಲಿ ಶೇ.೧೦ ರಷ್ಟನ್ನು ಧರ್ಮಕಾರ್ಯಕ್ಕೆ ಮೀಸಲಿಡುತ್ತಾರೆ. ಇವರು ಸೂರ್ಯಾಸ್ತವಾದ ನಂತರ ಬೇಯಿಸಿದ ಆಹಾರವನ್ನು ಸೇವಿಸುವುದಿಲ್ಲ. ರಾತ್ರಿ ಫಲಹಾರದೊಂದಿಗೆ ತಮ್ಮ ದೈನಂದಿನ ಚಟುವಟಿಕೆಗಳಿಗೆ ಮುಕ್ತಾಯ ಹಾಡುತ್ತಾರೆ.

ಇತ್ತೀಚಿನ ದಿನಗಳಲ್ಲಿ ಜೈನಸಾದರು ಮತ್ತು ಹಿಂದೂ ಸಾದರಲ್ಲಿ ವೈವಾಹಿಕ ಸಂಬಂಧಗಳೇರ್ಪಡುತ್ತಿದ್ದು ಈ ಎರಡು ಗುಂಪುಗಳ ನಡುವಿನ ಅಂತರ ಕಡಿಮೆಯಾಗುತ್ತಿದೆ. ಇದು ಸಮಾಜದ ಏಳಿಗೆಗೆ ಪೂರಕವೂ, ಪ್ರೇರಕವೂ ಹೌದು ಎಂದರೆ ತಪ್ಪಾಗಲಾರದು.

ಸಾದರ ಲಿಂಗಾಯತರು:-

ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಧರ್ಮಧ ಪ್ರಭಾವ ಎಲ್ಲೆಡೆ ಪಸರಿಸಿದ ಸಂದರ್ಭದಲ್ಲಿ ಸಾಮಾಜೋಧಾರ್ಮಿಕ ಆಂದೋಲನದ ಕೇಂದ್ರ ಬಿಂದುವಾದ ಬಸವಣ್ಣನವರ ಸಮಕಾಲಿನರು, ಯತಿ, ಶಿವಯೋಗಿ, ಮಹಾಮಹಿಮ ಪುರುಷರೆಂಬ ಹೆಗ್ಗಳಿಕೆಗೆ ಪಾತ್ರರಾದವರು ಮರುಳಸಿದ್ಧರು. ಇವರ ಪ್ರಭಾವದಿಂದ ಬಹುತೇಕ ಸಾದರು ಲಿಂಗಾಯತರಾದರು ಇವರನ್ನೇ ಸಾದರ ಲಿಂಗಾಯತರಾದರೆಂದು ಕರೆಯಲಾಗುತ್ತದೆ.

ಲಿಂಗಾಯತರಲ್ಲೇ ಪಂಚಮಸಾಲಿ, ಬಣಜಿಗ, ಸಾದ, ನೊಣಬ ಇನ್ನೂ ಮುಂತಾದ ಹತ್ತು ಹಲವು ಒಳಪಂಗಡಗಳು ಇವೆ ಎಂಬುದು ಕೆಲ ವಿದ್ವಾಂಸರ ಅಭಿಪ್ರಾಯ.

"ಒಳ್ಳೆಯ, ಉತ್ತಮ, ಪ್ರಾಮಾಣಿಕ, ವಿಶ್ವಾಸಯೋಗ್ಯ, ಸೌಮ್ಯಸ್ವಭಾವದ ಎಂಬ ಅರ್ಥಗಳುಳ್ಳ 'ಸಾಧು' ಎಂಬ ಪದ 'ಲಿಂಗಾಯಿತ' ಪದದೊಡನೆ ಸೇರಿ 'ಸಾಧುಲಿಂಗಾಯಿತ', ಸಾಧು ವೀರಶೈವ ಎಂದಾಗಿದೆ. ಇವರಲ್ಲಿ 'ಚದರು ಸಾದರು', 'ಭವಿಸಾದರು' ಎಂಬ ಮತ್ತರೆಡು ಪ್ರಭೇದಗಳಿವೆ. ಮೊದಮೊದಲು ಒಟ್ಟಾಗಿದ್ದ ಇವರು ಅನುಕೂಲತೆಗಳನ್ನು ಪಡೆದು ಬೇರೆಡೆ ಚದುರಿ ಹೋದುದರಿಂದ 'ಚದುರು ಸಾದರು', ಲಿಂಗವನ್ನು ಬಿಟ್ಟುದರಿಂದ 'ಭವಿ ಸಾದರು' ಎಂಬ ಹೆಸರು ಬಂದಿದೆ. ಇವರೆಲ್ಲರ ಆಚಾರ-ವಿಚಾರಗಳನ್ನು ನೋಡಿದರೆ ಮೂಲತಃ ಇವರೆಲ್ಲರೂ ಒಂದೇ ಎಂಬುದು ತಿಳಿದು ಬರುತ್ತದೆ"[೫೦].

ಜಗತ್ತಿನಲ್ಲಿರುವ ಮೂಢನಂಬಿಕೆ, ಅಂಧಾನುಕರಣೆ, ಕಂದಾಚಾರ, ವಾಮಾಚಾರಗಳನ್ನು ಹೇಳ ಹೆಸರಿಲ್ಲದಂತೆ ಮಾಡಿ ಶುದ್ಧಾಂತರಂಗದಲ್ಲಿ ನೈಜಭಕ್ತಿ, ಸಮ್ಯಜ್ಞಾನ, ಶುದ್ಧಮಾನವತೆ, ಮಾನವ ಜೀವನಕ್ರಮಗಳು ನೆಲೆಗೊಂಡು, ಲೋಕದಲ್ಲಿನ ತರಳರೆಲ್ಲರೂ ಸುಖ-ಸಂತೋಷಗಳಿಂದ

ಬಾಳಬೇಕೆಂಬುದು ಮರುಳುಸಿದ್ಧರ ಆಶಯವಾಗಿತ್ತು. ಧರ್ಮವು ಜಾತಿಯ ಆಧಾರದಿಂದ ನಿರ್ಣಯಿಸಲ್ಪಡದೇ ವ್ಯಕ್ತಿಯ ವ್ಯಕ್ತಿತ್ವದಿಂದ ರೂಪುಗೊಳ್ಳಬೇಕೆಂಬುದು ಮರುಳುಸಿದ್ಧರ ನೀತಿಯಾಗಿತ್ತು. ಈ ನಿಟ್ಟಿನಲ್ಲಿ ಅವರು ಸದ್ಧರ್ಮ ಪೀಠವನ್ನು ಸ್ಥಾಪಿಸಿ, ಅಮರರಾದರು.

ಕವಿ ಮಹದೇವ ಬಣಕಾರರ ಅಭಿಪ್ರಾಯದಂತೆ ಮರುಳಸಿದ್ದರು

"ಎಲ್ಲರಂದದಿ ಹುಟ್ಟ ಮರುಳನು

ಎಲ್ಲರೊಳಗೊಂದಾಗಿ ಬೆಳೆದನು

ಎಲ್ಲರಂತಃಕರಣ ಶುದ್ಧಿಗೆ ಧರ್ಮಸಾರಿದನು....."[೫೧]

ಮರುಳಸಿದ್ದರ ವಿಚಾರಗಳನ್ನು ತಮ್ಮ ಕಾವ್ಯದಲ್ಲಿ ಕಾರಯತ್ರೀ ಪ್ರತಿಭೆಯ ಮುಖೇನ ತೆರೆದಿಡುತ್ತ ಜಾತಿವಾದ, ಪೊಳ್ಳು ಬೆದರಿಕೆಗೆ ದಿಟ್ಟುತನದಿಂದ ಈ ರೀತಿ ಹೇಳುತ್ತಾರೆ.

"ಕಂಡುದನು ಕಂಡಂತೇ ಹೇಳಲು

ಕೆಂಡಕಾರುವ ಜಾತಿ ಹುಳುಗಳ

ದಂಡು ಮುತ್ತವುದೆಂಬುದನು ಮನಗಂಡೆ ಬರೆದಿಹೆನು

ಉಂಡ ಮನೆಗೆರೆಡೆಣಿಸಲಾರೆನು

ಕಂಡುದನು ಮರೆಮಾಚಲಾರೆನು

ಷಂಡ ಗಂಡನ ತೆರೆದಿ ಎನ್ನಯ ಹರಣ ಸಾಗಿಸೆನು"[೫೨] ಎಂಬ ಅಭಿಪ್ರಾಯ ಬಣಕಾರರದ್ದು. ಕಗ್ಗಲ್ಲುಪುರದಲ್ಲಿ ಬಾಚಿಗೌಡ ಮತ್ತು ಮಲ್ಲಮ್ಮ ಎಂಬ ಸಾತ್ವಿಕ ದಂಪತಿಗಳಿದ್ದರು, ಅವರ ಬಳಿಯಲ್ಲಿ ಮಚ್ಚೆಯ ಕಾಯಕದ ಮಾರ ಮತ್ತು ಆತನ ಹೆಂಡತಿ ಸುಪ್ರಭೆ ಎಂಬ ಮಾದಿಗ ಜಾತಿಯ ದಂಪತಿಗಳಿದ್ದರು. ಇವರಿಗೆ ಯತಿಯೋರ್ವರ ವರದಿಂದ ಮಹಾಮಹಿಮನಾದ ಮಗುವೊಂದು ಜನಿಸುತ್ತದೆ. ಆ ಮಗು ಹುಟ್ಟಿದೊಡನೆ ತಂದೆ-ತಾಯಿಗಳು ಶಿವನ ಪಾದವನ್ನು ಸೇರುತ್ತಾರೆ. ತಬ್ಬಲಿ ಮಗುವನ್ನು ಬಾಚಿಗೌಡ ಮತ್ತು ಮಲ್ಲಮ್ಮ ದಂಪತಿಗಳು ತಮ್ಮ ಮಗನಂತೆಯೇ ಭಾವಿಸಿ ಕಾಪಾಡುತ್ತಾರೆ. ಮಗುವಿನ ತೇಜಸ್ಸು, ಕಾಂತಿಯು ಎಲ್ಲರನ್ನು ಮರುಳು ಮಾಡುವಂತಿದ್ದುರಿಂದ ಮರುಳನೆಂಬ ಹೆಸರನ್ನು ಆ ಮಗುವಿಗೆ ಇಡುತ್ತಾರೆ.

"ಸಾದರ ಗೌಡರು ಮಾದಿಗರ ಮಗುವನ್ನು ಸಾಕಿದ್ದಕ್ಕಾಗಿ ಸಮಾಜದಲ್ಲಿ ನಿಂದೆ, ಅಪಹಾಸ್ಯ ಅನುಭವಿಸಬೇಕಾಯಿತು"[೫೩].

ಹೀಗೆ ತಂದೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಮರುಳಸಿದ್ಧನಿಗೆ ಲಿಂಗಧಾರಣೆ ಮಾಡಲು ಜಂಗಮನು ಒಪ್ಪುವುದಿಲ್ಲ. ಇದರಿಂದ ಧೃತಿಗೆಡದ ಬಾಚಿಗೌಡರು ಮತ್ತು ಅವರ ಪತ್ನಿ

ಮಲ್ಲಮ್ಮ ತಾವೇ ಮಗುವಿಗೆ ಲಿಂಗಧಾರಣೆ ಮಾಡುತ್ತಾರೆ. ಇದರಿಂದ ಆ ದಂಪತಿಗಳು ಸಮಾಜದ ತಿರಸ್ಕಾರಕ್ಕೆ ಗುರಿಯಾಗುವಂತಾಯಿತು. ಮರುಳಸಿದ್ಧನು ಮಾದಿಗನೆಂಬ ಕಾರಣಕ್ಕೆ ಜನರು ತಿರಸ್ಕಾರದಿಂದ ಕಾಣತೊಡಗಿದರು. ಆದರೆ ಮರುಳಸಿದ್ಧರು ಬಾಲ್ಯದಲ್ಲಿಯೇ ದನಕರುಗಳನ್ನು ಕಾಯುತ್ತಾ ಜೊತೆಗಾರರೊಡನೆ ತುಂಟಾಟ ಮಾಡುತ್ತಾ ಬೆಳೆಗಳಿಗೆ ದನಗಳನ್ನು ಬಿಟ್ಟು ಮೇಯಿಸುತ್ತಾ ಬೆಳೆದರು. ನೂರಾರು ಪ್ರಾಣಿಗಳ ಮಾರಣಹೋಮಕ್ಕೆ ಇಂಬುಕೊಡಲಿರುವ ಮಾರಿಹಬ್ಬವನ್ನು ವಿರೋಧಿಸಿ, ಪ್ರಾಣಿವಧೆಯನ್ನು ನಿಲ್ಲಿನ, ಕಂದಾಚಾರ, ತತ್ವ ರಹಿತ ಭಕ್ತಿಯನ್ನು ಅಲ್ಲಗಳೆದು ಮಾರಿಹಬ್ಬವನ್ನು ನಿಲ್ಲಿಸಿದರು, ನಂತರ ಗ್ರಾಮಸ್ಥರ ವರ್ತನೆಗೆ ಬೇಸತ್ತ ಮರುಳಸಿದ್ಧರು ಆ ಊರನ್ನೇ ಬಿಟ್ಟು ಹೊರಟರು. ಮಗನಿಗಾಗಿ ಗೌಡರು ಎಲ್ಲೆಡೆ ಹುಡುಕಿ ಸಿಗದೇ ನಿರಾಶರಾಗಿ ಹಿಂತಿರುಗಿದಾಗ ಮಗನ ನೆನಪಲ್ಲೇ ಮಲ್ಲಮ್ಮ ಪ್ರಾಣಬಿಟ್ಟರು.

ಮರುಳಸಿದ್ಧರು ಕಗ್ಗಲ್ಲುಪುರವನ್ನು ದಾಟಿದ ಮೇಲೆ ತೂಲಹಳ್ಳಿ, ಊರುಲು ಗಟ್ಟ, ಉಳಪನ ಕಟ್ಟೆಗಳ ಮೂಲಕ ಚಿನ್ಮೂಲಾದ್ರಿಯನ್ನು ತಲುಪಿದರು. ಮಾರ್ಗಮಧ್ಯದಲ್ಲಿ ಉರುಲು ಗಟ್ಟದ ಮಹಾರಣ್ಯದಲ್ಲಿ ದನ-ಕರುಗಳನ್ನು ಹಿಂಸಿಸುತ್ತಿದ್ದ ಹುಲಿಯೊಡನೆ ಸೆಣಸಿ, ಅದನ್ನು ಸಂಹರಿಸುತ್ತಾರೆ. ನಂತರ ಚಿನ್ಮೂಲಾದ್ರಿಯ ಬೆಟ್ಟದಲ್ಲಿ ಕಾಳಾಮುಖರು, ಕಾಪಾಲಿಗಳು, ರಸಸಿದ್ಧರ ವಾಮಾಚಾರವನ್ನು ಖಂಡಿಸುತ್ತಾರೆ. ತದನಂತರ ಮರುಳಸಿದ್ಧರು ಗುರುರೇವಣಸಿದ್ಧರಿಂದ ಧರ್ಮಧೀಕ್ಷೆಯನ್ನು ಪಡೆದು ದೇಶ ಸಂಚಾರಕ್ಕೆ ಹೊರಟು ತೆಲಗುಬಾಳಿಗೆ ಬಂದಾಗ ಆ ಊರ ಗೌಡನ ಮಗ ಮೂಕನಾಗಿದ್ದನು. ಅದನ್ನು ಕಂಡು ಮರುಳಸಿದ್ಧರು ಆ ಹುಡುಗನಿಗೆ 'ಶಿವಾ' ಎಂಬ ಎರಡರಕ್ಷವನ್ನು ಉಚ್ಚರಿಸುವಂತೆ ಮಾಡಿ ಆತನನ್ನು (ತೆಲಗುಬಾಳು ಸಿದ್ಧನನ್ನು) ತನ್ನ ಶಿಷ್ಯನೆಂದು ತಮ್ಮ ಜೊತೆಯಲ್ಲೇ ಕರೆದೊಯ್ಯುತ್ತಾರೆ. ತಿಗರಿಹೊಳೆಯನ್ನು ಈಜಿ ದಾಟಿ ಬಿಸಲಹಳ್ಳಿ ಮಾರ್ಗವಾಗಿ ಸಿಂಧೋಗಿ ಮಾದಿಗರ ಕೇರಿಯನ್ನು ಪ್ರವೇಶಿಸಿ ಬರಗಾಲದಿಂದ ತತ್ತರಿಸಿದ್ದ ಆ ಊರಿನ ಜನತೆಗೆ ಒರತೆಯನ್ನು ಅಗಿದು ಜಲ ಉಕ್ಕುವಂತೆ ಮಾಡಿ, ಆ ಜನರ ಬಾಳು ಹಸನಾಗುವಂತೆ ಮಾಡಿದರು, ಇದರಿಂದ ಜನತೆ ಮರುಳಸಿದ್ಧರನ್ನು ಪವಾಡ ಪುರುಷನೆಂದು ಕರೆದರು.

ಮರುಳಸಿದ್ಧರು ಅಲ್ಲಿನ ಜನತೆಗೆ 'ಜಾತಿ ಜನರನ್ನು ಬೇರ್ಪಡಿಸುತ್ತದೆ; ಧರ್ಮ ಅಗಲಿದವರನ್ನು ಒಂದುಗೂಡಿಸುತ್ತದೆ' ಎಂಬ ತತ್ವವನ್ನುಪದೇಶಿಸಿ ಮುಂದೆ, 'ಸೀತಿಮನೆ'ಯವರೆಗೆ ಪ್ರಯಾಣ ಬೆಳೆಸಿ ಮಾರ್ಗಮಧ್ಯದಲ್ಲಿ ಬಾದಾಮಿ, ಬನಶಂಕರಿ, ಕೂಡಲಸಂಗಮ ಸ್ಥಳದಲ್ಲಿ ಸಂಚರಿಸಿ ಅಲ್ಲಿದ್ದ ಕಾಪಾಲಿ, ಕಾಳಮುಖರನ್ನು ಶಿವ ಶರಣರಾಗಿ ಪರಿವರ್ತಿಸಿದರು.

ಮರುಳಸಿದ್ಧರು ಮುದನೂರಿನಲ್ಲಿ ಜೇಡರದಾಸಿಮಯ್ಯನನ್ನು ಸಂಧಿಸಿ ಅವರೊಂದಿಗೆ ಲಿಂಗತತ್ವ ಮತ್ತು ಶರಣ ಮಾರ್ಗದ ಭಕ್ತಿಪಥದ ಬಗ್ಗೆ ಚರ್ಚಿಸಿ, ಹೆಗ್ಗನದೊಡ್ಡಿಯಲ್ಲಿ ಕೆಲಕಾಲ ತಪಸ್ಸುಗೈದು, ರೇವಣಸಿದ್ಧರ ಜನ್ಮಸ್ಥಳ ಕೊಲ್ಲಿಪಾಕಿಗೆ ಪ್ರವೇಶಿಸಿದರು. ಅದನ್ನು ಭೂಕೈಲಾಸವೆಂದು ಭಾವಿಸಿದ್ಧರು. ಅವರು ಮುಂದೆ ನಿಸ್ಸೀಮ ಭಕ್ತನಾದ ಗುಂಡಬ್ರಹ್ಮರನ್ನು ಭೇಟಿಮಾಡಿ ಲಿಂಗನಿಷ್ಠೆ,

ಪರಿಶುದ್ಧ ಭಕ್ತಿ ನಿರ್ಭೀತ ತತ್ವಾನುಷ್ಠಾನದ ಬಗ್ಗೆ ಚರ್ಚಿಸಿ, ಕಾಕತೀಯ ದೊರೆಯನ್ನು ಭೇಟಿಯಾದ ನಂತರ ಬುಲ್ಡಾನ ಜಿಲ್ಲೆಯ ಸಾಬರಖೇರ್ಡಾದಲ್ಲಿ ತಪಸ್ಸನ್ನು ಆಚರಿಸುತ್ತಾರೆ.

ತದನಂತರ ಸೊಲ್ಲಾಪುರಕ್ಕೆ ಬಂದು ಸಿದ್ಧರಾಮನನ್ನು ಕಂಡು ಅಲ್ಲಿಯ ಮಠದಲ್ಲಿಯೇ ಬಹುಕಾಲ ಕಳೆದು ಅಷ್ಟಾಂಗಯೋಗ, ಕರ್ಮಯೋಗ, ಶಿವಯೋಗಗಳ ಬಗೆ ಚರ್ಚಿಸಿ ವೀರಶೈವ ತತ್ವಾನುಷ್ಠಾನದ ಬಗ್ಗೆ ಯೋಜನೆಯನ್ನು ರೂಪಿಸಿದರು. ಆ ಸಂದರ್ಭದಲ್ಲಿ ಮರುಳಸಿದ್ಧರು ೬೮ ಸಾವಿರ ವಚನಗಳನ್ನು ಬರೆದರೆಂಬ ಪ್ರತೀತಿಯು ಇದೆ. ತದನಂತರ ಕಾಗತಿಗೆ ಬಂದು ಅಲ್ಲಿ ಮಾಯೆಯನ್ನು ಸೋಲಿಸುತ್ತಾರೆ. ಮಾಯೆ ಮರುಳಸಿದ್ಧರಿಂದ ಇಷ್ಟಲಿಂಗದ ದೀಕ್ಷೆ ಪಡೆಯುತ್ತಾಳೆ.

ಕಾಳುಜ್ಜನಿಯೆಂಬ ಸ್ಥಳದಲ್ಲಿ ಅಳೆತೆಯೆಂಬ ಪ್ರಭುದೇವರ ಬೆಟ್ಟದ ಮೇಲೆ ಹಲಕಾಲ ತಂಗಿದ್ದು, ಅಲ್ಲಿ ಪ್ರಭುದೇವರನ್ನು ಭೇಟಿಯಾದರೆಂಬ ಪ್ರತೀತಿಯೂ ಇದೆ.

ಮುಂದೆ ಮರುಳ ಸಿದ್ಧರು ಮೂಡೂರಿಗೆ ಬಂದಾಗ ಅಕ್ಕಮಹಾದೇವಿಯು ಸಹ ಕೌಶಿಕರ ಕಪಿಮುಷ್ಟಿಯಿಂದ ಬಿಡುಗಡೆಹೊಂದಿ ಪರಿತ್ಯಕ್ತೆಯಂತೆ ಅಡವಿಯಲ್ಲಿ ಅಲೆದು ಮೂಡುರಿಗೆ ಬರುತ್ತಾಳೆ. ಭಕ್ತಿಯೇ ಮೈವೆತ್ತ ಸ್ವರೂಪದಲ್ಲಿದ್ದ ಅಕ್ಕಮಹಾದೇವಿಯನ್ನು ಕಂಡ ಮರುಳಸಿದ್ಧರು ಆಕೆಯ ಶ್ರೀಶೈಲಕ್ಕೆ ಹೊರಡುವ ಅಭಿಲಾಷೆಯನ್ನು ಮನ್ನಿಸಿ, ಧರ್ಮೋಪದೇಶ ಮಾಡಿ ಲಿಂಗದೀಕ್ಷೆಯನ್ನು ಇತ್ತು ಹರಸುತ್ತಾರೆ.

ನಂತರ ಹೊಂಕಣವನ್ನು ಬಿಟ್ಟು ಮರುಳಸಿದ್ಧರು ಹೀರೆಕೆರೂರು ತಾಲ್ಲೂಕು ಕೋಡಗ್ರಾಮದ ಪಕ್ಕದಲ್ಲಿರುವ ಪುರ ಎಂಬ ಗ್ರಾಮಕ್ಕೆ ಬಂದು ಸಾಮಾನ್ಯ ಕೂಲಿ ಆಳಿನಂತೆ ನೆಲೆಸುತ್ತಾರೆ. ಮರುಳಸಿದ್ಧರ ಶಿಷ್ಯ ಜಟ್ಟಿಗನಿಂದ ಮರುಳಸಿದ್ಧರು ಮಹಾಜ್ಞಾನಿ ಎಂಬ ವಿಷಯ ಎಲ್ಲರಿಗೂ ತಿಳಿಯುತ್ತದೆ. ಇದರಿಂದ ಹರ್ಷೋದ್ಗಾರಗೈದ ಜನತೆ ಮರುಳಸಿದ್ಧರು ಕೆಲಕಾಲ ಅಲ್ಲಿಯೇ ನೆಲೆಸುವಂತೆ ಒತ್ತಾಯಿಸುತ್ತಾರೆ. ಇತ್ತೀಚೆಗೆ 'ಪುರ' ಉಜ್ಜನಿಪುರವೆಂದು ಮರುನಾಮಕರಣಗೊಂಡಿದೆ. ಇಲ್ಲಿ ಮರುಳಸಿದ್ಧರ ದೇವಾಲಯ ಮತ್ತು ಪಕ್ಕದಲ್ಲಿಯೇ ಜಟ್ಟಿಗನ ದೇವಾಲಯವೂ ಇದೆ. ಮರುಳಸಿದ್ಧರು ಮುಂದೆ ದ್ವಾರಸಮುದ್ರವನ್ನು ತಲುಪಿ ಕೆರೆಯ ಪದ್ಮರಸನೊಂದಿಗೆ ಚರ್ಚಿಸಿ ಎರಡನೇ ವೀರಬಲ್ಲಾಳನಿಗೆ ಪ್ರಜಾನಿಷ್ಠೆಯನ್ನು ಮೂಡಿಸಿದರು. ಅಷ್ಟೇ ಅಲ್ಲದೇ ನೀನು 'ಪ್ರಜಾಪರಿಪಾಲನೆಯಲ್ಲಿ ತಂದೆಯಂತೆ ವರ್ತಿಸು. ಆಗ ನೀನು ನರಪತಿಯಷ್ಟೇ ಅಲ್ಲ, ಸುರಪತಿಯೂ ಆಗಬಲ್ಲೇ' ಎಂದು ಬೋಧಿಸಿದರು.

ನಂತರ ಸಿಂಧಿಗೆರೆ ತಲುಪಿದ ಮರುಳಸಿದ್ಧರು ಊರಿನಿಂದ ಅನತಿ ದೂರದಲ್ಲಿರುವ ಬೆಟ್ಟದ ಗುಹೆಯಲ್ಲಿ ಕೆಲಕಾಲ ತಂಗಿದ್ದಾಗ ಊರಿನ ಹಸುವೊಂದು ನಿತ್ಯವೂ ಬೆಟ್ಟಕ್ಕೆ ಹೋಗಿ ಮರುಳಸಿದ್ಧರಿಗೆ ಹಾಲುಣಿಸುತ್ತಿತ್ತೆಂಬ ಪ್ರತೀತಿಯೂ ಇದೆ.

ಅವ್ವೆರಹಳ್ಳಿಯ ಪರಿಸರದಲ್ಲಿರುವ ರೇವಣಸಿದ್ಧ ಬೆಟ್ಟವನ್ನು ತಲುಪಿ ತದನಂತರ ತಮ್ಮ ಗುರು

ರೇವಣಸಿದ್ಧರನ್ನು ಭೇಟಿ ಮಾಡಿದಾಗ ಶಿಷ್ಯನ ಅದ್ಭುತ ಸಾಹಸಕ್ಕೆ ಮೆಚ್ಚಿದ ಗುರು ನೀನು ನಮ್ಮ ಶಿಷ್ಯನಲ್ಲ, ನನ್ನ ಮಗನೇ ಆಗಿರುವೆ' ಎಂದು ತಮ್ಮ ಮನೋಭಿಲಾಷೆಯನ್ನು ತಿಳಿಸಿ, ಧರ್ಮೋಪದೇಶವು ನಿರಂತರವಾಗಿ ನಡೆಯಲು ಸದ್ಧರ್ಮ ಪೀಠವೊಂದನ್ನು ಸ್ಥಾಪಿಸು ಎಂಬ ಆಣತಿಯನ್ನಿತ್ತು ಮರುಳಸಿದ್ಧರನ್ನು ಬೀಳ್ಕೊಡುತ್ತಾರೆ. ನಂತರ ಮರುಳಸಿದ್ಧರು ಸಾವನದುರ್ಗ, ಶಿವಗಂಗೆ, ಕಂಬಾಳು, ಮಸ್ಕಲ್ ಬೆಟ್ಟ, ನಿಜಗಲ್‌ಗಿರಿ, ಸಿದ್ಧಗಂಗೆ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಮುಂದೆ ಕೊರಟಗೆರೆ ತಾಲ್ಲೂಕಿನ ಸಿದ್ಧರ ಬೆಟ್ಟವನ್ನು ಸೇರಿ ಅಲ್ಲಿ ಹೇರಳವಾಗಿ ಬೆಳೆದಿದ್ದ ಗಿಡಮೂಲಿಕೆಗಳನ್ನು ಕಂಡು ರಸಸಿದ್ಧರನ್ನು ಸಂದರ್ಶಿಸಿ ಅಲ್ಲಿಯೇ ಕೆಲಕಾಲವಿದ್ದು ಮುಂದೆ ಚಿನ್ಮೂಲಾದ್ರಿಯಲ್ಲಿ ಶುದ್ಧ ಧರ್ಮಾಚರಣೆಯುಳ್ಳ, ಶಿವತತ್ವಾನುಯಾಯಿಗಳಾದ ಸಾಧು-ಸಂತರು, ಮತ್ತು ತನ್ನ ಶಿಷ್ಯನಾದ ತೆಲಗುಬಾಳು ಸಿದ್ಧನನ್ನು ಅಪ್ಪಿ ಆಶೀರ್ವದಿಸಿದರು.

ಮರುಳಸಿದ್ಧರು ಸದ್ಧರ್ಮವನ್ನು ಸ್ಥಾಪಿಸಲು ತೆಲಗುಬಾಳು ಸಿದ್ಧ, ಜಟ್ಟಿಗ, ಭೈರವ, ಹನುಮರನ್ನು ಒಡಗೂಡಿ ಉಜ್ಜನಿಯತ್ತ ಪ್ರಯಾಣ ಬೆಳೆಸಿ ಮಾರ್ಗಮಧ್ಯದಲ್ಲಿ ಬೇತೂರಿನಲ್ಲಿ ನಡೆಯಲಿರುವ ಯಜ್ಞವನ್ನು ತಡೆಯುವ ಸಲುವಾಗಿ ಬೇತೂರಿಗೆ ಬಂದು ಅಲ್ಲಿನ ಬ್ರಾಹ್ಮಣರೊಡನೆ ಚರ್ಚಿಸಿ ಹಸಿದವನಿಗೆ ಅನ್ನವನ್ನು ನೀಡಿದರೆ ತೃಪ್ತಿಯಾಗುವುದೇ ವಿನಃ ಅಗ್ನಿಯಲ್ಲಿ ಸುಡುವುದರಿಂದ ದೊರೆಯಲಾರದು. ಬೆಂಕಿಯಲ್ಲಿ ಬೆಂದ ಧಾನ್ಯದ ಹೊಗೆ ದೇವತೆಗಳಿಗೆ ತಲುಪಲು ಸಾಧ್ಯವೇ? ಎಂದು ಪ್ರಶ್ನಿಸಿದಾಗ ಕೋಪಗೊಂಡ ಬ್ರಾಹ್ಮಣರು ಮರುಳಸಿದ್ಧರನ್ನು ಕೈ-ಕಾಲು ಕಟ್ಟಿ ಅಣಜಿಯ ಕೆರೆಯಲ್ಲಿ ಎಸೆದಾಗ ಹೆಮ್ಮೀನುಗಳು ಹಗ್ಗವನ್ನು ಕಡಿದು ತುಂಡರಿಸಿದಾಗ ಮರುಳಸಿದ್ಧರು ಈಜಿದಡ ಸೇರುತ್ತಾರೆ. ಅಪಾಯದಿಂದ ಪಾರಾಗುತ್ತಾರೆ.

ಮರುಳಸಿದ್ಧರು ಬದುಕುಳಿದ ವಿಷಯ ತಿಳಿದ ಬ್ರಾಹ್ಮಣರು ನೊಣಬೇಶನ ಮೊರೆಹೊಕ್ಕರು, ಆತ ಮರುಳಸಿದ್ಧರನ್ನು ಕೊಲ್ಲಲು ಮಾಡಿದ ಪ್ರಯತ್ನಗಳು ವಿಫಲವಾದವು. ಮರುಳಸಿದ್ಧರು ಯಜ್ಞವನ್ನು ತಡೆದು ಯಜ್ಞ ಕುಂಡಕ್ಕೆ ನೀರು ಸುರಿದಾಗ ಮತ್ತಷ್ಟು ಕೋಪಗೊಂಡ ಬ್ರಾಹ್ಮಣರು ಮರುಳಸಿದ್ಧರ ಕೈ-ಕಾಲು ಕಟ್ಟಿ ಹಗೇವಿನೊಳಗೆ ಕುಳ್ಳರಿಸಿ ಸುಣ್ಣವನ್ನು ಸುರಿದು, ನೀರನ್ನು ಸುರಿಯುತ್ತಾರೆ. ಇದನ್ನು ತಿಳಿದ ಊರಿನ ಜನ, ಜಟ್ಟಿಗ, ಬೈರರು ಮರುಳಸಿದ್ಧರನ್ನು ಹೊರತಂದು ಅವರ ಮೈ ತುಂಬ ಗಾಯವಾಗಿರುವುದನ್ನು ಕಂಡು ಬೆಂದ ನೆತ್ತಿಗೆ ಮನೆ-ಮನೆಗಳಿಂದ ಎಣ್ಣೆಯನ್ನು ತಂದು ಸುರಿಯುತ್ತಾರೆ. (ಇದರ ಸಾಂಕೇತಿಕವಾಗಿ ಉಜ್ಜನಿ ಮರುಳಸಿದ್ಧ ದೇವಸ್ಥಾನದ ಗರ್ಭಗುಡಿಯ ಮೇಲಿನ ಕಳಸಕ್ಕೆ ಪ್ರತಿಮಾಘ ಶುದ್ಧ ಹುಣ್ಣಿಮೆಯ ದಿನ ಹಲವಾರು ಭಕ್ತರು ಎಣ್ಣೆಯನ್ನು ಸುರಿಯುತ್ತಾರೆ).

ತದನಂತರ ಮರುಳಸಿದ್ಧರು ಸದ್ಧರ್ಮ ಪೀಠವೊಂದನ್ನು ಸ್ಥಾಪಿಸಲು ನಿರ್ಧರಿಸಿ ಭಕ್ತರ ಬೇಡಿಕೆಯಂತೆ ಕಗ್ಗಲ್ಲುಪುರ, ಕೇತನಹಳ್ಳಿಯ ಮಧ್ಯಪ್ರದೇಶದಲ್ಲಿ ಒಂಭತ್ತು ಪಾದಗಳನಿತ್ತು ಅಲ್ಲಿ ಸದ್ಧರ್ಮ ಪೀಠವನ್ನು ಸ್ಥಾಪಿಸಿ ತೆಲಗುಬಾಳು ಸಿದ್ಧನಿಗೆ ಪಟ್ಟಗಟ್ಟಿ "ತರಳಬಾಳು" ಎಂದು

ಆಶೀರ್ವದಿಸಿ ಈ ಸದ್ಧರ್ಮ ಪೀಠವು ಗಾಳಿ, ಮಳೆ, ಬೆಳಕು, ಬಿಸಿಲು, ಬೆಂಕಿ, ನೀರು, ನೆಲ ಎಲ್ಲರನ್ನೂ ಸಮಾನತೆಯಿಂದ ಕಾಣುವಂತೆ, ಕುಲ ಜಾತಿಗಳನ್ನು ಎಣಿಸದೆ ಮಾನವರೆಲ್ಲ ಒಂದೇ ಎಂಬ ತತ್ವವನ್ನು ಹಿಡಿದು ಸದ್ಧರ್ಮ ಪೀಠವೆನಿಸಲಿ ಎಂದು ತಮ್ಮ ಸಂದೇಶವನ್ನು ಸಾರಿ ಶ್ರೀ ಮರುಳಸಿದ್ಧರು ಶಿವಯೋಗದಲ್ಲಿ ತಲ್ಲೀನರಾಗುತ್ತಾರೆ.

ಮಾಘಶುದ್ಧ ಹುಣ್ಣಿಮೆಯಂದು ವಿಶ್ವಬಂಧು ಮರುಳಸಿದ್ಧರು ತಮ್ಮ ಶಿಷ್ಯನನ್ನು 'ತರಳಾಬಾಳು' ಎಂದು ಹರಸಿದುದರ ಸ್ಮರಣಾರ್ಥ ನಡೆಯುವ ತರಳಬಾಳು ಹುಣ್ಣಿಮೆ ಆಚರಣೆಯು ಪ್ರಖ್ಯಾತಗೊಂಡಿದೆ. 'ತರಳಬಾಳು' ಎಂಬ ಪಂಚಾಕ್ಷರಿ ಮಂತ್ರದಲ್ಲಿ ಮಾನವ ಕುಲದ ಅಭ್ಯುದಯವೇ ಅಡಕವಾಗಿದೆ ಎಂದೇ ಹೇಳಬಹುದು.

ತೆಲಗುಬಾಳು ಸಿದ್ಧೇಶ್ವರರಿಂದ ಪ್ರಾರಂಭವಾದ ಉಜ್ಜಯನಿಯ ಗುರುಪರಂಪರೆಯನ್ನು ಕೆಳಗಿನಂತೆ ಗುರುತಿಸಬಹುದು.

"ಶ್ರೀ ವಿಶ್ವಬಂಧು ಮರುಳಸಿದ್ಧರು (ಉಜ್ಜಯನಿ ಸದ್ಧರ್ಮಪೀಠ ಸ್ಥಾಪಕರು).

1. ಶ್ರೀ ತರಳಬಾಳು ಜಗದ್ಗುರು.
2. ಶ್ರೀ ಗಡ್ಡದ ಸಿದ್ಧಲಿಂಗದೇವರು.
3. ಶ್ರೀ ಕೆಂಪಪ್ಪ ದೇವರು.
4. ಶ್ರೀ ಚೆನ್ನಬಸವದೇವರು.
5. ಶ್ರೀ ಗುರುಸಿದ್ಧದೇವರು.
6. ಶ್ರೀ ಶಿವಲಿಂಗದೇವರು.
7. ಶ್ರೀ ಗುರುಬಸವದೇವರು.
8. ಶ್ರೀ ಕರಿಸಿದ್ಧದೇವರು.
9. ಶ್ರೀ ಶಾಂತವೀರದೇವರು.
10. ಶ್ರೀ ಕರಿಸಿದ್ಧದೇವರು.
11. ಶ್ರೀ ಜಂಬಪ್ಪದೇವರು.

ಶ್ರೀ ಜಂಜಪ್ಪ ದೇವರು ಕಾರಣಾಂತರಗಳಿಂದ ಉಜ್ಜನಿಯನ್ನು ಬಿಟ್ಟು ಸಿರಿಗೆರೆಯಲ್ಲಿ ಬಂದು ನೆಲೆಸುತ್ತಾರೆ. ಇವರು ಉಜ್ಜನಿಯನ್ನು ಬಿಟ್ಟು ಬಂದ ಬಳಿಕ ಈ ಗುರು ಪರಂಪರೆಯು ಸಿರಿಗೆರೆಯಲ್ಲಿ ಮುಂದುವರೆಯುತ್ತದೆ.

12. ಶ್ರೀ ಗುರುಸಿದ್ಧದೇವರು.
13. ಶ್ರೀ ಸಿದ್ಧಲಿಂಗದೇವರು.
14. ಶ್ರೀ ಗುರುಸಿದ್ಧದೇವರು.

15. ಶ್ರೀ ಶಿವಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು.
16. ಶ್ರೀ ಗುರುಸಿದ್ಧ ದೇಶಿಕೇಂದ್ರ ಮಹಾಸ್ವಾಮಿಗಳವರು.
17. ಶ್ರೀ ಶಿವಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳವರು.
18. ಶ್ರೀ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು.
19. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು.
20. ಡಾ॥. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು"[೫೪].

ಪ್ರಸ್ತುತ ಗುರುಪರಂಪರೆಯ ಪಟ್ಟಿಯನ್ನು ಕುರಿತಂತೆ ವಿದ್ವಾಂಸರಲ್ಲಿಯೇ ಹಲವು ಭಿನ್ನಮತಗಳಿವೆ ಎಂದೇ ಹೇಳಬಹುದು.

ಒಟ್ಟಾರೆ ಮರುಳಸಿದ್ದರು ಹುಟ್ಟಿನ ಕಾರಣದಿಂದ ಹರಿಜನರಾದರೂ ಸಹ ಸಾದರ ಲಿಂಗಾಯಿತರು ಅವರೇ ತಮ್ಮ ಮೂಲಪುರುಷರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸಾದರ ಲಿಂಗಾಯಿತರು ಮೂಲತಃ ಶಿವಭಕ್ತರು. ಇವರು ಇಷ್ಟಲಿಂಗವನ್ನು ಧರಿಸಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳಿಗೆ ಅನುಗುಣವಾಗಿ ಬದುಕನ್ನು ಸಾಗಿಸುತ್ತಿದ್ದಾರೆ. ಸಾದರ ಲಿಂಗಾಯಿತರು 'ಕಟ್ಟಿದ ಲಿಂಗದೊಡನೆ ಬೆಟ್ಟದ ಲಿಂಗಕ್ಕೆ ನೆಡೆದುಕೊಳ್ಳುತ್ತಾರೆ'.

ಸಾದರ ಲಿಂಗಾಯಿತರಲ್ಲಿ ನೊರೆ ಹಾಲಿನವರು (ಪಶುಪಾಲನೆ), ಚಟ್ಟೆಲೆಯೋರು (ಕೃಷಿ ಹವ್ಯಾಸ), ಸಪ್ಪೆಲೆಯೋರು, ಮುತ್ತಿನುಂಗುರದೋರು, ಕೊಡ್ಲೇರು ಎಂಬಿತ್ಯಾದಿ ಬೆಡಗುಗಳಿವೆ. ಹೀಗೆ ಕರ್ನಾಟಕದ ದ್ರಾವಿಡ ವರ್ಗಗಳ ಆಧಿಮ ಬುಡಕಟ್ಟು ಸಮಾಜ ಸಂಘಟನೆಯ ಬಹುಮುಖ್ಯ ಲಕ್ಷಣವಾಗಿದ್ದ ಬೆಡಗು-ಕುಲಗಳನ್ನುಳ್ಳ ಲಿಂಗಾಯತ ಉಪಜಾತಿಯೆಂದರೆ ಸಾದರು ಎಂಬುದಾಗಿ ಬಸವರಾಜ್ ತೂಲಹಳ್ಳಿರವರು ಅಭಿಪ್ರಾಯಪಟ್ಟಿದ್ದಾರೆ.

ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು ಜಿಲ್ಲೆ, ಹಾವೇರಿ, ಗದಗ, ತಿಪಟೂರು, ಧಾರವಾಡ ಮುಂತಾದ ಸ್ಥಳಗಳಲ್ಲಿ ವಾಸಿಸುತ್ತಿರುವ ಇವರ ಮೂಲ ಕಸುಬು ಕೃಷಿ, ಇತ್ತೀಚಿನ ದಿನಗಳಲ್ಲಿ ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಕರ್ನಾಟಕದ ಉದ್ದಗಲಕ್ಕೂ ಮರುಳಸಿದ್ದರ ಹಲವು ದೇವಾಲಯಗಳಿವೆ. ಅವುಗಳಿಗೆ ಇವರು ನಡೆದುಕೊಳ್ಳುತ್ತಾರೆ. ಜೊತೆಗೆ ಬಸವೇಶ್ವರ, ನಾರದಮುನಿ, ರುದ್ರೇಶ್ವರ, ಕಲ್ಲೇಶ್ವರ, ವೀರಭದ್ರ, ಮಲ್ಲಿಕಾರ್ಜುನ, ಮಂಜುನಾಥ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ. ಅಷ್ಟೇ ಅಲ್ಲದೆ ಬನಶಂಕರಿ, ದ್ಯಾಮಲಾಂಬ, ಉಚ್ಚಂಗಮ್ಮ, ದುರ್ಗಾಂಬಿಕಾ ಮುಂತಾದ ಸ್ತ್ರೀ ದೇವತೆಗಳನ್ನು ಶ್ರದ್ಧಾ-ಭಕ್ತಿಗಳಿಂದ ಆರಾಧಿಸುತ್ತಾರೆ. ಇವರು ಶಿವರಾತ್ರಿ, ನಾಗಪಂಚಮಿ, ಗೌರಿ-ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ತರಳಬಾಳು ಹುಣ್ಣಿಮೆ ಮಹೋತ್ಸವ ಇವರಿಗೆ ಬಹು ವಿಶೇಷವಾದದ್ದು.

ಮೌಢ್ಯ, ಅಜ್ಞಾನ, ಅಂಧಕಾರಗಳಿಂದ ತುಂಬಿದ್ದ ಜನರ ಮನಸ್ಸಿನಲ್ಲಿ ಜ್ಞಾನದ ಬೆಳಕನ್ನು ಭಿತ್ತಿದವರು ಹಿಂದಿನ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಇವರು ರಾಜ್ಯದ ಹತ್ತಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ೧೫೦ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಶಾಲಾ–ಕಾಲೇಜುಗಳು, ಪ್ರಸಾದ ನಿಲಯಗಳನ್ನು ಸ್ಥಾಪಿಸಿ ಅವಕಾಶಗಳಿಂದ ವಂಚಿತರಾದ ಎಲ್ಲರಿಗೂ ಶಿಕ್ಷಣವನ್ನು ನೀಡಿದರು ಅಲ್ಲಿನ ಜನರ ಸರ್ವಾಂಗೀಣ ಅಭಿವೃದ್ದಿಗೆ ನೆರವಾದರು.

ಶಿವಮೊಗ್ಗ ಮತ್ತು ದಾವಣಗೆರೆ ಪ್ರದೇಶದ ಜಂಗಮರು ಸಾದರ ಲಿಂಗಾಯಿತರನ್ನು ಕೀಳಾಗಿ ಕಾಣುತ್ತಿದ್ದರು ಮತ್ತು ಅವರ ಮನೆಯಲ್ಲಿ ಊಟಮಾಡಲು ಹಿಂಜರಿಯುತ್ತಿದ್ದರು. "ಸಾದರ ಮನೆಗಳಿಗೆ ಹುಟ್ಟು ಜಂಗಮರೇ ಹೋಗಿ ಭಿನ್ನ ತೀರಿಸುತ್ತಿದ್ದರು. ಬಣಜಿಗ ಪಂಚಾಚಾರದವರ ಮತ್ತು ಜಂಗಮರ ವಶದಲ್ಲಿಯೇ ಚಿತ್ರದುರ್ಗದ ಮುರುಘಾಮಠವು ನಡೆಸುತ್ತಿದ್ದ ವಿದ್ಯಾರ್ಥಿ ನಿಲಯಗಳಿಗೆ ಸಾದರ ಹುಡುಗರನ್ನು ಸೇರಿಸುತ್ತಿರಲಿಲ್ಲ, ಜನಸಂಖ್ಯೆ, ಆಸ್ತಿಪ್ರಾಬಲ್ಯವಿದ್ದ ಸಾದರಲ್ಲಿ ಹುಟ್ಟು ಜಂಗಮರಿಗಿಂತ ತಾವೇನು ಕಡಿಮೆ ಅಲ್ಲ. ತಾವೂ ಮೇಲಕ್ಕೆ ಬರಬೇಕು ಎಂಬ ಛಲ ಮೂಡಿತು. ಆ ಛಲವನ್ನು ವಿಶೇಷವಾಗಿ ಬೆಳೆಯಿಸಿ ಸಾದರ ಜನಾಂಗವನ್ನು ಅಭಿವೃದ್ಧಿಪಡಿಸಿದವರು ಸಿರಿಗೆರೆಯ ಹಿಂದಿನ ಮಠಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಜಿಯವರು"[೫೫].

ಹಿಂದೆ ದಾವಣಗೆರೆ ಪ್ರದೇಶದ ಸಾದರು ಜನನ, ಮದುವೆ, ಹಬ್ಬ, ಸಾವು ಇವುಗಳಿಗೆ ಹುಟ್ಟು ಜಂಗಮರನ್ನೇ ಕರೆಯುತ್ತಿದ್ದರು. ಸಾದರು ಆರ್ಥಿಕವಾಗಿ ಪ್ರಾಬಲ್ಯ ಹೊಂದಿದ್ದರೆ, ಜಂಗಮರು ಧಾರ್ಮಿಕ ಸ್ಥಾನ ಪ್ರಾಬಲ್ಯ ಹೊಂದಿದ್ದು ಇವು ಒಂದನ್ನೊಂದು ನಿಯಂತ್ರಿಸುತ್ತಿದ್ದವು. ಆದರೆ ಶ್ರೀ ಶಿವಕುಮಾರ ಸ್ವಾಮಿಗಳ ಪ್ರಯತ್ನದ ಫಲವಾಗಿ ಸಾದರಲ್ಲಿಯೇ ಹೊಸದಾಗಿ "ಜಂಗಮ ಅಯ್ನೋರು" ಹುಟ್ಟಿಕೊಂಡರು, ಇದರಿಂದಾಗಿ ಸಾದರೆಲ್ಲ ಸಾದರ ಜಂಗಮರನ್ನೇ ತಮ್ಮ ಮನೆಯ ಪೌರೋಹಿತ್ಯಕ್ಕೆ ಆಹ್ವಾನಿಸಲಾರಂಭಿಸಿದರು. ಈ ಮುಖೇನ ಜಂಗಮ ಎಂಬಾತ ಹುಟ್ಟಿನಿಂದಲೇ ಆಗಬೇಕಾಗಿಲ್ಲ, ಸಂಸ್ಕಾರದಿಂದಲೂ ಆಗಬಹುದು ಎಂಬುದನ್ನು ಸಾಧಿಸಿ ತೋರಿಸಿದರು.

ಇವರಲ್ಲಿ ಸೂತಕದ ಆಚರಣೆಯಿಲ್ಲ. ಮಗುವಿನ ಜನನವಾಗುತ್ತಲೇ ಲಿಂಗಧಾರಣೆ ಮಾಡಿಸುತ್ತಾರೆ. ಗಂಡಸರು ಮತ್ತು ಹೆಂಗಸರಿಬ್ಬರಿಗೂ ಲಿಂಗಧಾರಣೆ ಮಾಡಿಸುತ್ತಾರೆ. ರುದ್ರಾಕ್ಷಿಯನ್ನು ಸಹ ಧರಿಸುತ್ತಾರೆ. ಇವರಿಗೆ ದೇವಾಲಯದ ಗರ್ಭಗುಡಿಯ ಒಳಗೆ ಹೋಗುವ ಅವಕಾಶವಿದೆ. ಶುದ್ಧ ಸಸ್ಯಾಹಾರಿಗಳಾಗಿರುವ ಇವರು ಲಿಂಗಾಯಿತ ಮತ್ತು ಜಂಗಮರ ಮನೆಗಳಲ್ಲಿ ಮಾತ್ರ ಊಟ–ತಿಂಡಿ ಮಾಡುತ್ತಾರೆ. ಇನ್ನು ಶವ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಗಮನಿಸುವುದಾದರೆ ಇವರಲ್ಲಿ ಸುಮಾರು ೪×೩ ನೆಲದಲ್ಲಿ ಗುಂಡಿ ತೋಡಿ, ಗುಂಡಿಯ ಒಂದು ಪಾರ್ಶ್ವದಲ್ಲಿ ಗೂಡು ಮಾಡಿ ಆ ಗೂಡಿನಲ್ಲಿ ಭೂಮಿಗೆ ಲಂಭಾಕಾರವಾಗಿ ಕುಳ್ಳರಿಸಿ ವಿಭೂತಿ–ಬಿಲ್ವ ಪತ್ರಗಳಿಂದ ಗೂಡನ್ನು ಮುಚ್ಚಿ ನಂತರ ಗುಂಡಿಯನ್ನು ಮಣ್ಣಿನಿಂದ ಮುಚ್ಚುತ್ತಾರೆ. ಸಾಧು ಲಿಂಗಾಯಿತರಿಗೆ ಶಿವನೇ ಆರಾಧ್ಯದೈವ. ಇವರು ಶಿವೋಪಾಸಕರು.

ಸಾಣೇಹಳ್ಳಿ ಶ್ರೀಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಅಡಿಗಡಿಗೆ ಸಮಾಜವನ್ನು ತಿದ್ದಿ, ತೀಡಿ ಸಮರ್ಥವಾಗಿ ಮುನ್ನಡೆಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆಂದರೆ ತಪ್ಪಾಗಲಾರದು.

ಸಾಧು ಲಿಂಗಾಯಿತರ ಇಂದಿನ ಪ್ರಗತಿ ಉತ್ತಮ ಸ್ಥಿತಿ-ಗತಿಗೆ ಕಾರಣಕರ್ತರೆಂದರೆ ಶ್ರೀ ತರಳಬಾಳು ಜಗದ್ಗುರುಗಳಾದ, ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಯವರು ಕುಸಿದು, ಕುಗ್ಗಿ ಹೋಗಿದ್ದ ಜನರ ಬದುಕಿನ ತೋಟದಲ್ಲಿ ಸಮಾನತೆಯ ಹೂವನ್ನು ಅರಳಿಸಲು, ನೊಂದವರ ಬದುಕಿನಲ್ಲಿ ಹೊಸ ಚೈತನ್ಯ ಮೂಡಿಸುವಲ್ಲಿ ನೆರವಾದರು. ಹೊಸ ವಿಚಾರಗಳನ್ನು ತಿಳಿಸುವಲ್ಲಿ ದಾರಿದೀಪವಾದರು. ಸದ್ಧರ್ಮ ನ್ಯಾಯಪೀಠವನ್ನು ಸ್ಥಾಪಿಸಿ ಎಲ್ಲರಿಗೂ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡಿದ ಜ್ಞಾನ ಸೂರ್ಯರೆಂದೇ ಹೇಳಬಹುದು.

ಆರ್ಥಿಕವಾಗಿ 'ಸಾದರ ಲಿಂಗಾಯಿತರು ಈಗಂತೂ ಚೆನ್ನಾಗಿದ್ದಾರೆ. ಇದಕ್ಕೆ ಕಾರಣ ಸಂಪ್ರದಾಯಿಕ ಕೃಷಿಪದ್ದತಿ ಜೊತೆಗೆ ಬದಲಾದ ಪರಿಸ್ಥಿತಿಗೆ ಅನುಸಾರವಾಗಿ ಆಧುನಿಕ ಬೇಸಾಯಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಇದರಿಂದ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸರ್ವಾಂಗೀಣ ಬೆಳವಣಿಗೆಯನ್ನು ಹೊಂದುತ್ತಿದ್ದಾರೆ.

ಇವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವ ಸಂದರ್ಭದಲ್ಲಿ 'ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಮತ್ತು 'ಶ್ರೀ ಮತ್ ಸಾಧುಸದ್ಧರ್ಮ ವೀರ ಶೈವ ಸಂಘಗಳು' ಈ ಸಮಾಜವೆಂಬ ಕಾಯದ ಎರಡು ಅಕ್ಷಿಗಳಂತೆ ಕಾರ್ಯನಿರ್ವಹಿಸುತ್ತಿವೆ. ಹಿಂದುಳಿದ ವರ್ಗಗಳವರು ಏಳ್ಗೆಗಾಗಿ ಶ್ರಮಿಸಿದವರಲ್ಲಿ ಅಗ್ರಗಣ್ಯರಾದ 'ಮೈಸೂರು ಬಸವಯ್ಯನವರು' ಒಬ್ಬರಾಗಿದ್ದಾರೆ. ಇವರು ಇದೇ ಜನ ಸಮುದಾಯದಿಂದ ಬಂದವರೆಂಬುದು ಅಭಿಮಾನದ ಸಂಗತಿಯಾಗಿದೆ.

ಒಟ್ಟಾರೆ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಏನೆಲ್ಲಾ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳಬಹುದೋ ಅದನ್ನೆಲ್ಲಾ ಅಳವಡಿಸಿಕೊಂಡು ಉತ್ತಮ ಸಾಧನೆಯನ್ನು ಮಾಡಿ ದೇಶ-ವಿದೇಶಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದಾರೆ. ಕಾಲಗತಿಗನುಗುಣವಾದ ಮನೋಧರ್ಮವನ್ನುಳ್ಳವರಾಗಿದ್ದು ಛಲಭರಿತ ಹೋರಾಟಗಾರರಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹಿಂದೂಸಾದರು ಮತ್ತು ಸಾದರ ಲಿಂಗಾಯಿತರ ನಡುವಿನ ಅಂತರ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಶ್ಲಾಘನೀಯವಾದ ವಿಚಾರವೇ ಆಗಿದೆ.

ಹೂವಿನವರು ಮತ್ತು ಹೊಂಗೆಯವರು:-

ಹಿಂದೂ ಸಾದರಲ್ಲಿಯೇ ಹೂವಿನವರು ಮತ್ತು ಹೊಂಗೆಯವರು ಎಂಬ ಎರಡು ವಿಭಾಗಗಳಿವೆ. ಇವರು ಕೊರಟಗೆರೆ ಪ್ರಾದೇಶಿಕ ಪರಿಸರದಲ್ಲಿ ಕಂಡುಬರುತ್ತಾರೆ.

ಇವರು ಹೊಂಗೆ ಮರವನ್ನು ದೈವ ಸಾದೃಶ್ಯ ವೃಕ್ಷವೆಂದು ಭಾವಿಸುತ್ತಾರೆ. ತಿರುಪತಿಯ ವೆಂಕಟರಮಣ ಸ್ವಾಮಿಯನ್ನು ತಮ್ಮ ಮನೆದೇವರನ್ನಾಗಿ ಹೊಂದಿರುವ ಜನರು ಹೊಂಗೆ ಎಣ್ಣೆಯನ್ನು ದೇವರ ದೀಪಕ್ಕೆ ಬಳಸುವುದರಿಂದ ಹೊಂಗೆಮರದ ಬಗ್ಗೆ ಪೂಜ್ಯಭಾವನೆ ಇದೆ ಎಂಬುದು ಕೆಲವರ ವಾದ. ಇವರು ಹೊಂಗೆ ಸೌದೆಯನ್ನು ಒಲೆಗೆ ಇಡುವುದಿಲ್ಲ, ಸುಡುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ 'The Mysore Tribes and Castes' ಕೃತಿಯಲ್ಲಿ ವಿವರಣೆಯನ್ನು ಗಮನಿಸುವುದಾದರೆ-"There are no exogamous clans among non-lingayets, though two sub-divisions known as Huvinavaru and Hongeyavaru are found near Koratagere. Those called Hongeyavaru do not burn Honge (Pongamia Glabra) wood, or use the oil, but have made an exception from necessity in favor of using leaves as manure"[೫೬].

ಹೂವಿನವರು ಮತ್ತು ಹೊಂಗೆಯವರು ಸಾದರಲ್ಲಿ ಕೆಲವಿಚಾರಗಳ ಹೊರತಾಗಿ ಮತ್ತಾವುದೇ ಭಿನ್ನತೆ ಇಲ್ಲದೆ ಬೆರೆತಿದ್ದಾರೆ.

ಸಾಧು ಒಕ್ಕಲಿಗರು:–

ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿಸಿಕೊಂಡವರು ಸಾಧು ಒಕ್ಕಲಿಗರು. ಇವರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಪೂಜಾರಹಳ್ಳಿ ಗ್ರಾಮದಲ್ಲಿ ಕಂಡುಬರುತ್ತಾರೆ. ಇವರನ್ನು 'ಮುಟ್ಟದ ಒಕ್ಕಲಿಗರು' ಎಂದು ಸಹ ಕರೆಯಲಾಗುತ್ತದೆ. ಏಕೆಂದರೆ ಒಕ್ಕಲಿಗರು ಸಾಮಾನ್ಯವಾಗಿ ಮಾಂಸಾಹಾರಿಗಳು, ಆದರೆ ಸಾಧು ಒಕ್ಕಲಿಗರು ಶುದ್ಧ ಸಸ್ಯಹಾರಿಗಳು ಆದ್ದರಿಂದ ಇವರನ್ನು ಮುಟ್ಟದ (ಮಾಂಸಾಹಾರವನ್ನು ಮುಟ್ಟದ) ಒಕ್ಕಲಿಗರು ಎಂದು ಕರೆಯುತ್ತಾರೆ. ಇವರು, ಹಿಂದು ಸಂಸ್ಕೃತಿಯನ್ನು ಪಾಲಿಸುವವರಾಗಿದ್ದಾರೆ. ಆದರೆ ಹಿಂದು ಸಾದರು ಮತ್ತು ಸಾಧು ಒಕ್ಕಲಿಗರಲ್ಲಿ ಯಾವುದೇ ರೀತಿಯ ಸಾಂಸ್ಕೃತಿಕ ಹೊಂದಾಣಿಕೆಯಿಲ್ಲ, ವೈವಾಹಿಕ ಸಂಬಂಧವು ಇರುವುದಿಲ್ಲ.

ಒಟ್ಟಾರೆ ಇವರು ಸಾದರ ಸಮುದಾಯ ಮತ್ತು ಒಕ್ಕಲಿಗ ಸಮುದಾಯಗಳಿಗಿಂತ ಭಿನ್ನವಾದ ಪರಂಪರೆಯನ್ನು ಹೊಂದಿದ ಜನಸಮುದಾಯದವರಾಗಿದ್ದಾರೆ.

ಬೆಳ್ಳಿ ಸಾದರು:–

ಸಾದರಲ್ಲಿಯೇ ಇರುವ ಮತ್ತೊಂದು ಒಳಪಂಗಡವೆಂದರೆ ಬೆಳ್ಳಿ ಸಾದರು. ಬೆಂಗಳೂರು ಗ್ರಾಮಾಂತರ ಪ್ರದೇಶವಾದ ಬೇಗೂರು, ಗೌರಿಬಿದನೂರು ತಾಲ್ಲೂಕಿನ ಉಡುಮರಹಟ್ಟಿಪಾಳ್ಯ, ಡಿ–ಪಾಳ್ಯ (ದ್ವಾರನಾಯಕನ ಪಾಳ್ಯ), ತಮಿಳುನಾಡಿನ ಹೊಸೂರು ಮುಂತಾದ ಪ್ರದೇಶಗಳಲ್ಲಿ ಬೆಳ್ಳಿ

ಸಾದರನ್ನು ಗಮನಿಸಬಹುದು ಬೆಳ್ಳಿ ಸಾದರನ್ನು ಕುರಿತಂತೆ ಜನಪದರಲ್ಲಿ ಹಲವು ಐತಿಹ್ಯಗಳಿರುವುದನ್ನು ಗಮನಿಸಬಹುದು.

ಐತಿಹ್ಯ–1:– ಸಾದರ ಜಾತಿಯ ವ್ಯಕ್ತಿಯು ಬೇರೆ ಜಾತಿಯ ಹೆಣ್ಣುಮಗಳನ್ನು ಮದುವೆಯಾದಾಗ ಅವರನ್ನು ಸಾದರ ಹಿರಿಯರು ತಮ್ಮ ಸಮುದಾಯದಿಂದ ಹೊರಹಾಕುತ್ತಿದ್ದರು. ಈ ರೀತಿ ಹೊರಹಾಕಲ್ಪಟ್ಟವರಿಂದ ಬೆಳೆದು ಬಂದ ಜನಸಮುದಾಯವನ್ನು ಬೆಳ್ಳಿಸಾದರು ಎಂದು ಕರೆಯಲಾಗುತ್ತಿದೆ.

ಐತಿಹ್ಯ–2:– ಸಾದರ ಜಾತಿಯ ಒಂದು ಗುಂಪಿನ ಜನ ಬೆಳ್ಳಿ ವ್ಯಾಪಾರವನ್ನು ಮಾಡುತ್ತಿದ್ದರು, ಆದ್ದರಿಂದ ವೃತ್ತಿಯಾಧಾರವಾಗಿ ಇವರಿಗೆ ಬೆಳ್ಳಿಸಾದರು ಎಂಬ ಹೆಸರು ಬಂದಿರಬಹುದು ಎಂಬ ಅಭಿಪ್ರಾಯವು ಇದೆ.

ಐತಿಹ್ಯ–3:– ಯಾವುದೋ ಒಂದು ಮನೆಯ ಹೆಣ್ಣು ಮಗಳು ಅನ್ಯ ಜಾತಿಯ ವ್ಯಕ್ತಿಯೊರ್ವನೊಂದಿಗೆ ಹೊರಟು ಹೋಗಿದ್ದಳು. ಆದರೆ ಅವಳ ತಂದೆ–ತಾಯಿ ಆ ಹುಡುಗಿಯನ್ನು ಮತ್ತೆ ತಮ್ಮ ಮನೆಗೆ ಕರೆದುಕೊಂಡುಬಂದಾಗ ಇತರ ಸಂಪ್ರದಾಯಸ್ಥ ಸಾದರ ಸಮುದಾಯವು ಆ ಮನೆಯ ಜನರನ್ನು ತಿರಸ್ಕೃತ ಭಾವನೆಯಿಂದ ನೋಡಿ ತಮ್ಮ ಸಮುದಾಯದಿಂದ ಹೊರಹಾಕಿ ಅವರನ್ನು ಬೆಳ್ಳಿಸಾದರು ಎಂದು ಕರೆದರು ಎಂಬ ವಾಡಿಕೆಯಿದೆ.

ಐತಿಹ್ಯ–4:– ಬಾಲ್ಯ ವಿವಾಹವನ್ನು ಮಾಡಿದ ಸಂದರ್ಭದಲ್ಲಿ ಹುಡುಗಿಯು ಚಿಕ್ಕವಯಸ್ಸಿನವಳಾಗಿರುವಾಗಲೇ ಆಕೆಯ ಪತಿಯು ಮರಣಹೊಂದಿದರೆ ಆ ಹೆಣ್ಣು ಮಗಳಿಗೆ ತಮ್ಮ ಸಮುದಾಯದಲ್ಲೇ ಹೆಂಡತಿಯನ್ನು ಕಳೆದುಕೊಂಡ ವ್ಯಕ್ತಿಯನ್ನು ಹುಡುಕಿ ಮದುವೆ ಮಾಡಲಾಗುತ್ತಿತ್ತು, ಈ ರೀತಿ ಪುನರ್ವಿವಾಹವಾದವರಿಗೆ ಹುಟ್ಟಿ ಬೆಳೆದು ಬಂದ ಪರಂಪರೆಯವರನ್ನು ಕೂಡಿಕೆಸಾಲು, ಬೆಳ್ಳಿಸಾದರು ಎಂದು ಕರೆಯುತ್ತಾರೆಂಬ ಅಭಿಪ್ರಾಯವಿದೆ, ಬೆಳ್ಳಿಸಾದರು ಸಹ ಹಿಂದೂ ಧರ್ಮದನುಯಾಯಿಗಳು.

ಐತಿಹ್ಯ–5:– ಬೆಳಗಾವಿ ಪ್ರಾಂತ್ಯದಿಂದ ವಲಸೆಬಂದ ಕಾರಣದಿಂದ ಇವರನ್ನು ಬೆಳ್ಳಿಸಾದರೆಂದು ಕರೆಯಲಾಗುತ್ತದೆ ಎಂಬ ಅಭಿಪ್ರಾಯವಿದೆ. ಹಿಂದೆ ಬೆಳ್ಳಿಸಾದರು ಮತ್ತು ಹಿಂದೂ ಸಾದರ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳಿರಲಿಲ್ಲ, ಆದರೆ ಇಂದಿನ ಸಂದರ್ಭದಲ್ಲಿ ಬೆಳ್ಳಿಸಾದರು ಆರ್ಥಿಕವಾಗಿ ಪ್ರಬಲರಾಗಿದ್ದು, ಸಮಾಜದಲ್ಲಿ ಉನ್ನತ ಸ್ಥಾನ–ಮಾನಗಳನ್ನು ಗಳಿಸಿರುವುದರಿಂದ ಹಿಂದೂ ಸಾದರು ಮತ್ತು ಬೆಳ್ಳಿಸಾದರಲ್ಲಿ ವೈವಾಹಿಕ ಸಂಬಂಧಗಳೇರ್ಪಡುತ್ತಿರುವುದನ್ನು ಗಮನಿಸಬಹುದು. ಕಾಲ ಚಕ್ರ ಉರುಳಿದಂತೆ, ಕಾಲನೆದೆ ಮರುಗದಂತೆ, ಯುಗಧರ್ಮಕ್ಕನುಗುಣವಾಗಿ ಸಮಾಜವು ಬದಲಾಗುತ್ತಾ ಸಾಗುತ್ತದೆ. ಉತ್ತಮ ಬದಲಾವಣೆಯು ಸರ್ವಕಾಲಕ್ಕೂ ಸರ್ವರಿಂದಲೂ ಸ್ವೀಕಾರಾರ್ಹವಾದದ್ದೇ ಸರಿ.

ನೀರಗಂಟಿ:-

ಸಾದರಲ್ಲಿಯೇ ನೀರಗಂಟಿ ಎಂಬೊಂದು ಒಳಪಂಗಡವಿದೆ. ಸಾದರು ಊರಗೌಡಿಕೆಯನ್ನು ಹೊಂದಿದ ಜಾತಿಯಾಗಿದ್ದು ಊರಿನ ಗೌಡನು ಯಾವುದಾದರೂ ಒಂದು ಮನೆಯವರಿಗೆ ಗ್ರಾಮದ ಎಲ್ಲಾ ಜನತೆಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸುವಂತೆ ಸೂಚಿಸಿದಾಗ ಅವರು ವಂಶಪಾರಂಪರ್ಯವಾಗಿ ಆ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಅವರನ್ನು ನೀರಗಂಟಿಯವರೆಂದು ಕರೆಯುತ್ತಿದ್ದರು. ಅಷ್ಟೇ ಅಲ್ಲದೆ ಅವರ ಹೆಸರಿನ ಮುಂದೆ ನೀರಗಂಟಿ ಎಂಬ ಪದವನ್ನು ಬಳಸುತ್ತಿದ್ದರು.

ಉದಾ:- ನೀರಗಂಟಿ ಸುಬ್ಬರಾಯಪ್ಪ (ಬಿನ್.ಗಂಗಪ್ಪ, ಕಲ್ಲೂಡಿ, ಕಲ್ಲೂಡಿ ಅಂಚೆ, ಗೌರಿಬಿದನೂರು ತಾಲ್ಲೂಕು), ನೀರಗಂಟಿಯವರನ್ನು ಊರಿನ ಜನತೆ ಬಹು ಗೌರವದಿಂದ ನೆಡೆಸಿಕೊಳ್ಳುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿರುವ ಕೆರೆ ಸಂಸ್ಕೃತಿಯೊಟ್ಟಿಗೆ ನೀರಗಂಟಿಯವರು ಪ್ರಮುಖ ಪಾತ್ರವಹಿಸುತ್ತಿದ್ದರು. ಕುಡಿಯುವ ನೀರಿನ ಸೌಲಭ್ಯವನ್ನು ಜನತೆಗೆ ಒದಗಿಸುವುದರ ಜೊತೆಗೆ ಕೆರೆಯ ನೀರನ್ನು ಸಮ-ಪ್ರಮಾಣದಲ್ಲಿ ನಷ್ಟವಾಗದಂತೆ ಎಲ್ಲ ಕೃಷಿಕರ ಭೂಮಿಗೆ ಹರಿಯಬಿಡುವ ಕಾರ್ಯವೂ ಇವರದ್ದೇ ಆಗಿರುತ್ತಿತ್ತು. ಊರಿನ ಹಬ್ಬ-ಹರಿದಿನಗಳಲ್ಲಿ ವಿಶೇಷವಾಗಿ ಜಾತ್ರೆ-ಉತ್ಸವಗಳಲ್ಲಿ ಇವರು ಪ್ರಮುಖಪಾತ್ರವನ್ನು ವಹಿಸುತ್ತಿದ್ದರು.

ಕೃಷಿಯನ್ನೇ ಪ್ರಧಾನ ಕಸುಬನ್ನಾಗಿ ಹೊಂದಿದ ಸಾದರು ಯಾವುದೇ ನದಿ ಬಯಲುಗಳಿಲ್ಲದ, ಸದಾ ಬರಗಾಲ ಪೀಡಿತ ಪ್ರದೇಶಗಳಲ್ಲಿ ಬಡತನದ ತೆಕ್ಕೆಯಲ್ಲಿರುವ ಜಿಲ್ಲೆಗಳಲ್ಲಿ ವಾಸಿಸುವರು. ಕೆರೆಗಳ ಆಶ್ರಯದಲ್ಲಿ ವ್ಯವಸಾಯವನ್ನು ಮಾಡುವಂತಹವರು ಮಳೆ ಬಂದರೆ ಬೆಳೆ ಇಲ್ಲವೆಂದರೆ ಸಂಕಷ್ಟಕ್ಕೆ ಸಿಲುಕುವ ಬದುಕು. ಇಂತಹ ಪರಿಸ್ಥಿತಿಯಲ್ಲಿರುವ ಇವರು ಇರುವ ಜೀವಜಲವನ್ನು ಸರಿಯಾದ ಕ್ರಮದಲ್ಲಿ, ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕಾದುದು ಅನಿವಾರ್ಯವೇ ಸರಿ. ಇಂತಹ ಸಂದರ್ಭದಲ್ಲಿ ನೀರಗಂಟಿಯ ಪಾತ್ರ ಬಹುಮುಖ್ಯವಾದದ್ದೆನ್ನಬಹುದು. ಹಿಂದು ಸಾದರ ಸಂಸ್ಕೃತಿಯ ಒಂದಂಗವೆಂಬಂತೆ ನೀರಗಂಟಿಯವರಿದ್ದಾರೆನ್ನಬಹುದು.

೨.೬:- ಸಾದರು ವಾಸಿಸುತ್ತಿರುವ ಪ್ರದೇಶಗಳು ಮತ್ತು ಜನಸಂಖ್ಯೆ

ಮನುಕುಲದ ವಿಕಾಸದ ಹಾದಿಯನ್ನು ಗಮನಿಸಿದಾಗ ತಿಳಿಯುವ ಪ್ರಮುಖ ಅಂಶವೆಂದರೆ; ಯಾವುದೇ ಒಬ್ಬ ವ್ಯಕ್ತಿಯು ತನ್ನ ಸೌಲಭ್ಯಾಕಾಂಕ್ಷೆಗೆ ತಕ್ಕಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು. ಅವರು, ಇವರೆನ್ನದೆ ಎಲ್ಲ ಮನುಷ್ಯರ ಪ್ರವೃತ್ತಿ. ಸಾದರು ಸಹ ಈ ಸ್ವಭಾವದಿಂದ ಹೊರತಲ್ಲ ಎಂದೆನ್ನಬಹುದು.

ಅಲ್ಪಸಂಖ್ಯಾತರಾಗಿರುವ ಸಾದರು ಕರ್ನಾಟಕದ ಕೆಲಭಾಗಗಳಲ್ಲಿ, ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಮತ್ತು ತಮಿಳುನಾಡಿನ ಗಡಿಭಾಗಗಳಲ್ಲಿ ವಾಸಿಸುತ್ತಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೆಕಲ್ ತಾಲ್ಲೂಕಿನ ಅತ್ತಿಬೆಲೆ, ಬೆಂಗಳೂರು ಉತ್ತರ ತಾಲ್ಲೂಕಿನ ಸೊಂಡೆಕೊಪ್ಪ, ಬೆಂಗಳೂರಿನ ಕೆಂಗೇರಿ, ವಿಜಯನಗರ, ಜಯನಗರ, ಹಲಗೆವಡೆರಹಳ್ಳಿಯಲ್ಲಿ ಪ್ರಸ್ತುತ ಜಾತಿಯ ಜನರು ಹಿಂದಿನಿಂದಲೂ ವಾಸವಿರುವದನ್ನು ಗಮನಿಸಬಹುದು. ಬೆಂಗಳೂರಿನಲ್ಲಿ ಬಹಳ ಹಿಂದಿನಿಂದಲೂ ಸಾದರು ವಾಸವಿರುವುದಕ್ಕೆ ಈಗಿನ ಪ್ರಸಿದ್ಧ ಎಸ್.ಪಿ.ರಸ್ತೆಯೇ ನಿದರ್ಶನ. ಎಸ್.ಪಿ.ಎಂಬುದು 'ಸಾದರ ಪತ್ರಪ್ಪ' ಹೆಸರಿನ ಸಂಕ್ಷಿಪ್ತ ರೂಪ.

ತುಮಕೂರು ಜಿಲ್ಲೆಯ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಸಾದರಿರುವುದನ್ನು ಗಮನಿಸಬಹುದು. ಅಣ್ಣೇನಹಳ್ಳಿ, ಶೆಟ್ಟಿಹಳ್ಳಿ, ಕ್ಯಾತ್ಸಂದ್ರ, ಬೆಳಧರ, ಅಮೃತಗಿರಿ, ಗೊಲ್ಲಹಳ್ಳಿ, ಗುಂಡಗಲ್ಲು, ರಾಮಗೊಂಡನಹಳ್ಳಿ ಮತ್ತು ಕೊರಟಗೆರೆಯಲ್ಲಿ ಸಾದರು ನೆಲೆಸಿದ್ದಾರೆ.

ಮಧುಗಿರಿ ತಾಲ್ಲೂಕಿನ ಕೋಡಿರಾಂಪುರ ಗ್ರಾಮದಲ್ಲಿ ಸಾದರು ಮಾತ್ರ ವಾಸವಾಗಿದ್ದು, ಅನ್ಯ ಜಾತಿಯವರು ಬಂದಾಗ ಇಲ್ಲಿ ನೆಲೆಸಲಾರದೇ ಸಂಕಷ್ಟಗಳಿಗೆ ಸಿಲುಕಿ ಬೇರೆಡೆಗೆ ಹೋದ ಹಲವು ನಿದರ್ಶನಗಳು ಜನಮಾನಸದಲ್ಲಿ ನೆಲೆಯಾಗಿ ನಿಂತಿವೆ. ಒಟ್ಟಾರೆ ಕೋಡಿರಾಂಪುರ–ಸಾದರು ಏಕಮಾತ್ರ ಜಾತಿಯಿರುವ ಗ್ರಾಮವಾಗಿದೆ. ಕಾಕಿ, ರಂಟವಾಳ, ಬ್ಯಾಡಗೆರೆ ಮುಂತಾದ ಗ್ರಾಮಗಳಲ್ಲಿಯೂ ಸಾದರು ವಾಸವಾಗಿದ್ದಾರೆ. ಕಾಕತೀಯ ಸಾಮ್ರಾಜ್ಯದಿಂದ ವಲಸೆ ಬಂದ ಸಾದರು ಕಾಕಿಯಲ್ಲಿ ನೆಲಸಿದರೆಂಬುದು ಕೆಲವು ಹಿರಿಯ ವಕ್ತೃಗಳ ಅಭಿಪ್ರಾಯವಾಗಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿರುವ ಕಾಕಿಯು ಸಾದರ ಪ್ರಮುಖ ಕಟ್ಟೇಮನೆಯಾಗಿದ್ದು ಜಾತಿಯ ಹಿರಿಯರು ತಲತಲಾಂತರಗಳಿಂದ ಬಾಳಿ–ಬದುಕಿದ ಪ್ರದೇಶವಾಗಿದೆ. ಅದೇ ರೀತಿ ತುಮಕೂರು ಜಿಲ್ಲೆಯ, ಶಿರಾ ತಾಲ್ಲೂಕಿನ ಕಡವಗೆರೆಯು ಸಹ ಸಾದರ ಕಟ್ಟೆಮನೆಯಾಗಿದ್ದು ಸಾಕಷ್ಟು ಪ್ರಾಮುಖ್ಯತೆ ಪಡೆದ ಪ್ರದೇಶವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನ ಸಾದಾರ್ಲಹಳ್ಳಿ ಗ್ರಾಮದಲ್ಲಿ ಸಾದರಷ್ಟೇ ವಾಸವಿದ್ದು ಕೋಟೆಗಳಂತೆ ಮನೆಗಳನ್ನು ನಿರ್ಮಿಸಿ ಪಾಳೆಗಾರಿಕೆಯನ್ನು ನಡೆಸಿದ ಕುರುಹುಗಳಿವೆ. ಅಲ್ಪಸಂಖ್ಯಾತರಾಗಿರುವ ಸಾದರು ನೆಲೆನಿಂತ ಕೆಲವು ಪ್ರಮುಖ ಪ್ರದೇಶಗಳಲ್ಲಿ ತುಮಕೂರು ಜಿಲ್ಲೆಯು ಒಂದಾಗಿದೆ.

<u>ತುಮಕೂರು:–</u>

ತುಮಕೂರು ಜಿಲ್ಲೆಯು ಕಲ್ಪತರುವಿನ ನಾಡು. ತುಂಬೆ ಹೂಗಳಬೀಡು ಎಂದೇ ಪ್ರಸಿದ್ಧವಾಗಿದ್ದು, ಇಲ್ಲಿನ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಇತಿಹಾಸದಿಂದ ಪ್ರಖ್ಯಾತಿ ಹೊಂದಿದೆ. ತುಮ್ಮೇಗೌಡನೆಂಬ ರಾಜ ಇಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ಈ ಪ್ರಾಂತ್ಯಕ್ಕೆ ತುಮಕೂರು ಎಂಬ ಹೆಸರು ಬಂದಿರಬಹುದು, ಅಥವಾ ತುಂಬೆಗಿಡಗಳು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಈ ಹೆಸರು ಪ್ರಾಪ್ತವಾಗಿರಬಹುದು, ಅಥವಾ ತೆಂಗಿನ ಮರಗಳು ಹೇರಳವಾಗಿರುವುದರಿಂದ ಈ ಹೆಸರು

ಬಂದಿರಬಹುದು ಎಂಬ ಊಹೆಯ ಜೊತೆಗೆ ಗೂಳೂರು ಪಾಳೇಗಾರರು ಮನರಂಜನೆಗಾಗಿ ನೃತ್ಯ ಮಾಡಿಸುತ್ತಿದ್ದಾಗ ಯಾವುದೇ ವಾದ್ಯ ಸಿಗದೆ ಇದ್ದ ಕಾರಣ ಟುಮುಕಿಯನ್ನು ಭಾರಿಸುತ್ತಿದ್ದವರನ್ನು ಕರೆಯಿಸಿ ನೃತ್ಯಕ್ಕೆ ಟುಮುಕಿ ಬಾರಿಸಿ ಕುಣಿಸಿದರು. ಇದನ್ನು ಕಂಡು ಸಂತೋಷಗೊಂಡ ಪಾಳೇಗಾರರು ಈ ಊರನ್ನು ಅವರಿಗೆ ಬಳುವಳಿಯಾಗಿ ಕೊಟ್ಟರು ಎಂಬ ಐತಿಹ್ಯವಿದೆ. ಬ್ರಿಟೀಷರ ಕಾಲದಲ್ಲಿ ತುಂಕೂರು ಆಗಿ ನಂತರ ತುಮಕೂರು ಎಂಬ ಹೆಸರನ್ನು ಪಡೆದುಕೊಂಡಿದೆ.

ತುಮಕೂರು ಜಿಲ್ಲೆಯು ಕರ್ನಾಟಕದ ಆಗ್ನೇಯ ಭಾಗದಲ್ಲಿದ್ದು ೧೦.೫೯೮ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು ಅಭಿವೃದ್ದಿಶೀಲ ಜಿಲ್ಲೆಗಳಲ್ಲೊಂದಾಗಿದೆ. ಸುತ್ತಮುತ್ತಲೂ ಹಬ್ಬಿರುವ ಬೆಟ್ಟ-ಗುಡ್ಡಗಳ ಹಚ್ಚ ಹಸಿರಿನ ಪರಿಸರದ ನಡುವಿರುವ ಈ ಪ್ರದೇಶದಲ್ಲಿ ಹಲವು ರಾಜಮಹಾರಾಜರ ವಂಶಸ್ಥರು ರಾಜ್ಯಭಾರಮಾಡಿ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿರುವ ಕುರುಹನ್ನು ಇಂದಿಗೂ ಕಾಣಬಹುದು. ಇಂತಹ 'ತುಮಕೂರು' ಈಗ ಜಿಲ್ಲೆಯ ಆಡಳಿತ ಕೇಂದ್ರವಾಗಿದ್ದು ಸರ್ವತೋಭಿಮುಖ ಬೆಳವಣಿಗೆ ಹೊಂದುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ಹಲವು ಜಾತಿ-ಧರ್ಮಗಳ ಜನತೆ ವಾಸಿಸುತ್ತಿದ್ದು; ಅವುಗಳಲ್ಲಿ ಸಾದರು ಜಾತಿಯು ಒಂದಾಗಿದೆ. ಜಿಲ್ಲೆಯ ಕೆಲ ತಾಲ್ಲೂಕುಗಳಲ್ಲಿ ಸಾದರು ಕಂಡುಬರುತ್ತಾರೆ. ಈ ಜಿಲ್ಲೆಯಲ್ಲಿ ಇವರನ್ನು ಸಾದರು, ಸಾದ್ರು, ಸಾದರುಮತಸ್ಥರು ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಇವರು ಒಂದು ಊರಿನಿಂದ ಮತ್ತೊಂದು ಊರಿಗೆ ಹಿಂದಿನ ಕಾಲದಲ್ಲಿ ಬಂದು ನೆಲೆಸಿದ್ದು ಕೃಷಿಯನ್ನೇ ತಮ್ಮ ಕುಲಕಸುಬನ್ನಾಗಿ ರೂಢಿಸಿಕೊಂಡಿರುವುದನ್ನು ಗಮನಿಸಬಹುದು.

ಕೆಲವರು ನಗರ-ಹಳ್ಳಿಗಳಲ್ಲಿ ವ್ಯಾಪಾರ-ವಾಣಿಜ್ಯವನ್ನು ನಿರ್ವಹಿಸುತ್ತಿದ್ದು ಮತ್ತೆ ಕೆಲವರು ಖಾಸಗಿ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿದ್ದು ಮಧ್ಯಮವರ್ಗದ ಜೀವನವನ್ನು ನಡೆಸುತ್ತಿದ್ದಾರೆ. ಬೆರಳೆಣಿಕೆಯಷ್ಟು ಜನ ಕಡುಬಡವರಾಗಿದ್ದು ಬಡತನದ ರೇಖೆಯ ಕೆಳಗೆ ಜೀವನ ಸಾಗಿಸುತ್ತಿದ್ದಾರೆ. ಸಂಸಾರವನ್ನು ಸಾಕುವ ಹೊಣೆಗಾರಿಕೆ ಮನೆಯ ಯಾಜಮಾನನದ್ದಾಗಿದ್ದು ಕುಟುಂಬದ ಉಳಿದ ಸದಸ್ಯರು ಕೈಜೋಡಿಸುತ್ತಾರೆ. ಇವರು ತಮ್ಮದೇ ಆದ ರೂಢಿ-ಸಂಪ್ರದಾಯ, ಆಚಾರ-ವಿಚಾರಗಳು, ಹಬ್ಬ-ಹರಿದಿನಗಳು, ನಂಬಿಕೆಗಳು, ಕೃಷಿ ಸಂಬಂಧಿ ಆಚರಣೆಗಳನ್ನು ಹೊಂದಿದ್ದಾರೆ.

ಸಾದರು ಜಿಲ್ಲೆಯ ಕೆಲವೊಂದು ಊರುಗಳಲ್ಲಿ ಮಾತ್ರ ನೆಲೆಸಿದ್ದು, ಅಲ್ಪಸಂಖ್ಯಾತರಾಗಿದ್ದರೂ ತಮ್ಮದೇ ಆದ ಆರ್ಥಿಕ, ಸಾಮಾಜಿಕ ಸ್ಥಾನಮಾನ ಹೊಂದಿದ್ದು ಊರಿನ ಇತರ ಎಲ್ಲಾ ಜಾತಿಯ ಜನರ ಗೌರವ-ಅಭಿಮಾನ, ಮನ್ನಣೆಗಳಿಗೆ ಪಾತ್ರರಾಗಿದ್ದು, ಊರಿನ ಇತರ ಎಲ್ಲಾ ವರ್ಗದ ಜನರೊಟ್ಟಿಗೆ ಪರಸ್ಪರ ಸ್ನೇಹ, ಸೌಹಾರ್ದಯುತ ಬಾಳ್ವೆ ನಡೆಸುತ್ತಿದ್ದಾರೆ, ನಡೆಯಿಸಬಯಸುತ್ತಾರೆ. ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡು ತಮ್ಮವರ ಶ್ರೇಯೋಭಿಲಾಷೆಗೆ ಶ್ರಮಿಸುವ ಮುಖೇನ ತಮ್ಮ ಜನರ ಸರ್ವತೋಮುಖ ಬೆಳವಣಿಗೆಯನ್ನು ಕಂಡುಕೊಳ್ಳುತ್ತಿದ್ದಾರೆ. ತುಮಕೂರು ಜಿಲ್ಲೆಯ

ತುಮಕೂರು, ಸಿರಾ, ಗುಬ್ಬಿ, ಕೊರಟಗೆರೆ, ಮಧುಗಿರಿ, ಪಾವಗಡ ತಾಲ್ಲೂಕುಗಳಲ್ಲಿ ಸಾದರು ಕಂಡುಬರುತ್ತಾರೆ.

ತೆಂಗು-ಕಂಗುಗಳ ಆಗರವಾಗಿರುವ ತುಮಕೂರು ಪರಂಪರೆಯ ಇತಿಹಾಸವನ್ನು ಹೊಂದಿದ್ದು ಇಡೀ ಜಿಲ್ಲೆಗೆ ಹೆಬ್ಬೆರಳಿನಂತಿದ್ದು ಕಲೆ, ಸಾಹಿತ್ಯ, ಸಂಸ್ಕೃತಿಯ ಮಡಿಲಲ್ಲಿ ಮಿನುಗುತ್ತಿರುವ ಈ ತಾಲ್ಲೂಕು ಸಾದರ ನೆಲೆವೀಡಾಗಿದೆ. ಇಲ್ಲಿನ ಜನರ ಜೀವನವು ಮುಂದುವರೆದಿದ್ದು, ನಾಗರೀಕತೆಯಿಂದ ಕೂಡಿದೆ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ ಮತ್ತು ಕನ್ನಡ ಲಿಪಿಯನ್ನೇ ಬಳಸುತ್ತಾರೆ. ಜೊತೆಗೆ ಶಾಂತಿಯುತ ಸಹಬಾಳ್ವೆ ನಡೆಸುವವರಾಗಿದ್ದಾರೆ.

ತುಮಕೂರು ತಾಲ್ಲೂಕಿನಲ್ಲಿ ಸಾದರು ಜಾತಿಯ ಜನರಿರುವ ಗ್ರಾಮಗಳನ್ನು ಗಮನಿಸುವುದಾದರೆ- (ಅನುಬಂಧ-1) ನೋಡಬಹುದು.

<u>ಗುಬ್ಬಿ:-</u>

ಅಮರಗೊಂಡ ಸಂಕಟಪುರವೆಂದು ಕರೆಸಿಕೊಳ್ಳುವ ಗುಬ್ಬಿಯು ಒಂದು ಅದ್ಭುತ ಇತಿಹಾಸವನ್ನೇ ಒಳಗೊಂಡಿದೆ. ಮಲ್ಲಣಾರ್ಯ ಪಂಡಿತನ ಪುರಾಣ ವಾಚನವನ್ನು ಕೇಳಿದ ಎರಡು ಗುಬ್ಬಿಗಳು ಆತನ (ಮಲ್ಲಣಾರ್ಯನ) ಪಾದದ ಬಳಿಯಲ್ಲಿ ಬಿದ್ದು ಸಾವನಪ್ಪುತ್ತವೆ. ಅದಕ್ಕಾಗಿ 'ಗುಬ್ಬಿ' ಎಂಬ ಹೆಸರು ಉಳಿದು ಬಂದಿದೆ. ಪ್ರಸ್ತುತ ತಾಲ್ಲೂಕಿನಲ್ಲಿ ಸಾದರು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತಾರೆ. ಆರು ಹೋಬಳಿಗಳನ್ನು ಹೊಂದಿರುವ "ಈ ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣವು ೧೧೨೨೦೫೭ (೯೪-೯೫) ಚ.ಕಿ.ಮೀ ನಷ್ಟಿದೆ"[೫೭]. ಜೇಡಿಮಣ್ಣು-ಮರಳು ಮಿಶ್ರಿತ, ಕೆಂಪು ಮಣ್ಣಿನಿಂದ ಕೂಡಿದ ಈ ಪ್ರದೇಶದಲ್ಲಿ ತೆಂಗು, ಅಡಿಕೆ, ರಾಗಿ, ಭತ್ತ, ದ್ವಿದಳದಾನ್ಯಗಳನ್ನು ಬೆಳೆಯುತ್ತಾರೆ. ಈ ಪ್ರಾಂತ್ಯದಲ್ಲಿನ ಸಾದರು ಗುಬ್ಬಿ ಚನ್ನಬಸವೇಶ್ವರ, ಯಡಿಯೂರು ಸಿದ್ದಲಿಂಗೇಶ್ವರ, ಗ್ರಾಮದೇವತೆಗಳನ್ನು, ಮನೆದೇವರುಗಳನ್ನು ಪೂಜಿಸುತ್ತಾರೆ. ಇವರು ತಮ್ಮದೇ ಆದ ಆಚಾರ-ವಿಚಾರ, ಸಂಪ್ರದಾಯ, ಸಂಸ್ಕೃತಿಯನ್ನು ಹೊಂದಿದ್ದು ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಿಸಿರುವುದು ಕಂಡುಬರುತ್ತದೆ. ಗುಬ್ಬಿ ತಾಲ್ಲೂಕಿನಲ್ಲಿ ಸಾದರಿರುವ ಪ್ರಮುಖ ಗ್ರಾಮಗಳೆಂದರೆ-ದೇವರಹಳ್ಳಿ ಮತ್ತು ಶೇಷನಹಳ್ಳಿ.

<u>ಸಿರಾ:-</u>

ಸಿರಾ ತಾಲ್ಲೂಕು ಹಲವು ವೈಶಿಷ್ಟ್ಯಗಳಿಂದ ಕೂಡಿದ ವಿಶಾಲವಾದ ಪ್ರದೇಶವಾಗಿದೆ. "ಈ ತಾಲ್ಲೂಕು ೧೫.೫೩೭೭ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು, ಐದು ಹೋಬಳಿಗಳನ್ನು ಹೊಂದಿದೆ"[೫೮]. ಇದು ಕೇವಲ ವಿಸ್ತೀರ್ಣದಲ್ಲಿ ಮಾತ್ರ ದೊಡ್ಡದಲ್ಲದೆ ಸಾಂಸ್ಕೃತಿಕ ಶ್ರೀಮಂತಿಕೆಯಲ್ಲೂ ತನ್ನ ದೊಡ್ಡತನವನ್ನು ಮೆರೆದಿದೆ. ನಮ್ಮ ನಾಡಿನ ಸಂಸ್ಕೃತಿಯ ಬೊಕ್ಕಸಕ್ಕೆ ತನ್ನದೇ ಆದ

ಕಾಣಿಕೆಯನ್ನು ನೀಡಿದೆ. ಸಿರಾ ತಾಲ್ಲೂಕಿನಲ್ಲಿರುವ ನೆಲಕೋಟೆಯು ನಮ್ಮ ನಾಡಿನಲ್ಲಿಯೇ ವಿಶಿಷ್ಟವಾದದ್ದು.

ಸೀಬಿಯ ನರಸಿಂಹಸ್ವಾಮಿ ದೇವಾಲಯವು ತನ್ನದೇ ಆದ ಪರಂಪರೆಯನ್ನು ಹೊಂದಿದ್ದು ಸುಂದರವಾದ ಭಿತ್ತಿಚಿತ್ರಗಳಿಂದ ಕೂಡಿದೆ. ದೇಶದಲ್ಲಿಯೇ ಪ್ರಸಿದ್ಧವಾದ ಗುರುಗುಂಡ ಬ್ರಹ್ಮೇಶ್ವರ ಮಠವಿದೆ. ಅಷ್ಟೇ ಅಲ್ಲದೆ ಮುಸ್ಲಿಂ ಸ್ಮಾರಕಗಳಿವೆ. ಜಾನಪದ ಕಲೆಯ ತವರೂರಾಗಿರುವ ಸಿರಾ ತಾಲ್ಲೂಕಿನಾದ್ಯಂತ ಜನಪದ ಕಲಾವಿದರಿದ್ದಾರೆ. ಜಾನಪದ ವೀರನಾದ ಜುಂಜಪ್ಪನ ನೆಲೆ ಇರುವ ಕಳುವರಹಳ್ಳಿ ಇರುವುದು ಇದೇ ತಾಲ್ಲೂಕಿನಲ್ಲಿಯೇ.

ಸಾದರು, ಸಾದ್ರು, ಸಾದು ಮತಸ್ಥರು ಎಂದು ಕರೆಯಲ್ಪಡುವ ಸಾದರು ಜಾತಿಯು ಪ್ರಸ್ತುತ ತಾಲ್ಲೂಕಿನಲ್ಲಿ ಕೃಷಿಯನ್ನೇ ನಂಬಿ ಬದುಕುವವರಾಗಿದ್ದು ನೀರಾವರಿ ಸೌಲಭ್ಯ ಕಡಿಮೆ ಇರುವುದರಿಂದ ಮಳೆರಾಯನನ್ನೇ ನಂಬಿ ಬದುಕು ಸಾಗಿಸುತ್ತಿದ್ದಾರೆ. ಈ ಪ್ರದೇಶ ಜಾಲಿಮುಳ್ಳಿನ ಬಯಲು ಪ್ರದೇಶವಾಗಿದ್ದು ಇಲ್ಲಿ ಅಡಿಕೆ, ತೆಂಗು, ವೀಳ್ಯದೆಲೆ, ಕಡಲೇಕಾಯಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ.

ಸಾದರು ತಮ್ಮ ಮನೆದೇವರುಗಳನ್ನು ಹಾಗೂ ಆಯಾ ಊರಿನ ಗ್ರಾಮದೇವತೆಗಳನ್ನು ಪೂಜಿಸುತ್ತಾರೆ. ಊರಿನ ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಸಡಗರ ಸಂಭ್ರಮದಿಂದ ಎಲ್ಲರೊಟ್ಟಿಗೆ ಪಾಲ್ಗೊಳ್ಳುತ್ತಾರೆ. ಪ್ರಸ್ತುತ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳಿಗೆ- (ಅನುಬಂಧ-2ನ್ನು ಗಮನಿಸಬಹುದು)

ಕೊರಟಗೆರೆ:-

'ಸಿದ್ಧರನಾಡು' ಎಂದೇ ಕರೆಸಿಕೊಳ್ಳುವ 'ಸಿದ್ಧರಬೆಟ್ಟದಿಂದ ಇತಿಹಾಸ ಪ್ರಸಿದ್ದವಾಗಿರುವ ಕೊರಟಗೆರೆ ತಾಲ್ಲೂಕು, ಮಧುಗಿರಿಗೆ ಹತ್ತಿರವಿದ್ದು ಹೊಂದಿಕೊಂಡಂತಿದೆ. ಈ ತಾಲ್ಲೂಕಿನಲ್ಲಿ ಸಿಗುವ ಸಂಜೀವಿನಿ ಸಸ್ಯಗಳು ನಾಡಿನಾದ್ಯಂತ ಹೆಸರುವಾಸಿಯಾಗಿವೆ. ಇಲ್ಲಿನ ಮಣ್ಣು ಸಹ ಫಲವತ್ತತೆಯ ಸಂಜೀವಿನಿತನದಿಂದ ಕೂಡಿದೆ. ಕೃಷಿಯನ್ನೇ ಪ್ರಧಾನ ಕಸುಬನ್ನಾಗಿ ಹೊಂದಿರುವ ಇಲ್ಲಿನ ಸಾದರು ವ್ಯವಸಾಯದ ಜೊತೆಗೆ ಪಶುಸಂಗೋಪನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಿದ್ದಾರೆ. ತುಮಕೂರಿಗೆ ಹೊಂದಿಕೊಂಡಂತಿರುವ ಕೊರಟಗೆರೆಯು ೪ ಹೋಬಳಿಗಳನ್ನು ಒಳಗೊಂಡಿದೆ. ಈ ಭಾಗದಲ್ಲಿ ಜನಪದ ವೈದ್ಯ ಪದ್ಧತಿಯು ಪ್ರಮುಖವಾಗಿ ಕಂಡುಬರುವಂತದ್ದಾಗಿದೆ. ಸಾದರು ಅಲ್ಲಿನ ಪರಿಸರಕ್ಕನುಗುಣವಾಗಿ ಜನಪದ ವೈದ್ಯದಲ್ಲಿ ತಮ್ಮನ್ನ ತೊಡಗಿಸಿಕೊಂಡಿರುವದನ್ನು ಕಾಣಬಹುದು.

ನಿಜಾಮರ ಆಳ್ವಿಕೆಯ ಕಾಲದಲ್ಲಿ ಅವರ ದಬ್ಬಾಳಿಕೆಯಿಂದ ರೋಸಿಹೋದ ಅನೇಕ ಸಾದರು ಸಕುಟುಂಬ-ಸಪರಿವಾರ ಸಮೇತರಾಗಿ, ಆಂಧ್ರದಿಂದ ತಲೆಮರೆಸಿಕೊಂಡು ಬಂದ ಕೆಲವು

ಕುಟುಂಬಗಳು ಕೊರಟಗೆರೆ ತಾಲ್ಲೂಕಿನ ಅನೇಕ ಊರುಗಳಲ್ಲಿ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ತಮ್ಮದೇ ಆದ ಆಸ್ತಿ-ಪಾಸ್ತಿಯನ್ನು ಸಂಪಾದಿಸಿಕೊಂಡು ಜೀವನ ಮಾಡುತ್ತಿರುವುದನ್ನು ಕಾಣಬಹುದು.

ಇಲ್ಲಿನ ಜನರು ತಮ್ಮ ಕೃಷಿ ಚಟುವಟಿಕೆಗಳು ಸಾಂಗವಾಗಿ ನೆರವೇರಿ ಒಳ್ಳೆಯ ಬೆಳೆಬಂದರೆ ಒಂದು ಮೂಟೆ ಅಥವಾ ಇಂತಿಷ್ಟು ಭತ್ತವನ್ನು ಸಿದ್ಧರ ಬೆಟ್ಟದ ಸಿದ್ದೇಶ್ವರ ಸ್ವಾಮಿಗೆ ಹರಕೆಯಾಗಿ ಸಲ್ಲಿಸುತ್ತಾರೆ. ಸಾದರ ರೈತರು ಪ್ರತಿವರ್ಷವು ಸಿದ್ಧರಬೆಟ್ಟಕ್ಕೆ ಹರಕೆ ಹೊತ್ತು ಅದರಂತೆ ನಡೆದುಕೊಳ್ಳುತ್ತಾರೆ. ತೋಟವಿರುವವರು ತೆಂಗಿನಕಾಯನ್ನು ಹರಕೆಯಾಗಿ ದೇವರಿಗೆ ಸಲ್ಲಿಸುತ್ತಾರೆ. ಮತ್ತೆ ಕೆಲವರು ಕಾಳು-ಕಡ್ಡಿ ಸಲ್ಲಿಸುತ್ತಾರೆ. ಇದರಿಂದ ದೇವಾಲಯದಲ್ಲಿ ನಿತ್ಯ ಅನ್ನದಾಸೋಹವಿದ್ದು ದೂರದಿಂದ ದಣಿದುಬಂದ ಭಕ್ತಾಧಿಗಳಿಗೆ ಬೆಟ್ಟದ ಮೇಲಿನ ಪವಿತ್ರ ಸಂಜೀವಿನಿ ಜಲದ ಸ್ನಾನ-ಪಾನದೊಂದಿಗೆ ಪ್ರಸಾದವೂ ದೊರೆಯುತ್ತದೆ. ಪ್ರಸ್ತುತ ತಾಲ್ಲೂಕಿನಾದ್ಯಂತ ಇರುವ ಪ್ರತಿಯೊಂದು ಊರಿಗೂ ವಿಶಿಷ್ಟವಾದ ಹೆಸರುಗಳಿವೆ. ಹುಲಿಕುಂಟೆ-ಬೆಟ್ಟದಿಂದ ಹುಲಿಗಳು ಬಂದು ಇಲ್ಲಿ ನೀರನ್ನು ಕುಡಿದು ಮಲಗುತ್ತಿದ್ದವು ಎನ್ನಲಾಗುತ್ತದೆ. ಅಕ್ಕಿರಾಂಪುರ-ಕೆರೆಯ ಹಿಂದೆ ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಿದ್ದರೆ ಎನ್ನಲಾಗಿದೆ.

ಈ ತಾಲ್ಲೂಕಿನ ಅನೇಕ ಸಾದರ ಮನೆದೇವರು ಸಿದ್ಧರಬೆಟ್ಟದ ಸಿದ್ಧೇಶ್ವರನೇ ಆಗಿದ್ದಾನೆ. ತಮ್ಮ ಮನೆದೇವರುಗಳ ಜೊತೆಗೆ ಗ್ರಾಮದೇವತೆಗಳನ್ನು ಪೂಜಿಸುತ್ತಾರೆ. ಜೊತೆಗೆ ಗೊರವನಹಳ್ಳಿ ಮಹಾಲಕ್ಷ್ಮೀಯ ಸನ್ನಿಧಾನಕ್ಕೂ ಹೋಗುತ್ತಾರೆ. ಪ್ರತಿಯೊಬ್ಬರ ಮನೆಯಲ್ಲಿಯೂ ಪೂಜಿಸುತ್ತಾರೆ, ಆರಾಧಿಸುತ್ತಾರೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿಗೆ ಮುಂದುವರೆದಿರುವ ಇಲ್ಲಿನ ಸಾದರು ಸ್ವಲ್ಪ ಪ್ರಮಾಣದಲ್ಲಿ ಖಾಸಗಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿದ್ದು, ಹೆಚ್ಚಿನ ಪ್ರಮಾಣದಲ್ಲಿ ಕೃಷಿ, ಪಶುಸಂಗೋಪನೆ, ಜೊತೆಗೆ ವ್ಯಾಪಾರ-ವಾಣಿಜ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಇಳೆಯೇ ದೈವವೆಂದು ನಂಬಿ ಮಳೆಯನ್ನು ಆಶ್ರಯಿಸಿ, ಬೆಳೆಯನ್ನು ಕಾಯುತ್ತಾ ಬಾಳನ್ನು ಸಾಗಿಸುತ್ತಿದ್ದಾರೆ. ರಾಗಿ, ಭತ್ತ, ಕಡಲೆಕಾಯಿ ಪ್ರಮುಖ ಬೆಳೆಗಳ ಜೊತೆಗೆ ನಿರಾವರಿ ಸೌಲಭ್ಯವಿರುವವರು ಅಡಿಕೆ-ತೆಂಗು, ಬಾಳೆಯನ್ನು ಬೆಳೆಯುತ್ತಾರೆ.

ಒಟ್ಟಾರೆ ಪ್ರಸ್ತುತ ಪ್ರಾಂತ್ಯದ ಶ್ರಮಜೀವಿಗಳಾಗಿರುವ ಸಾದರು ಅಭಿವೃದ್ದಿಯ ಪಥದೆಡೆಗೆ ಮಂದಗತಿಯಲ್ಲಿ ಸಾಗುತ್ತಿದ್ದಾರೆ. ಕೊರಟಗೆರೆ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳನ್ನು ಗಮನಿಸುವುದಾದರೆ-

ಅರಸಾಪುರ

ಅಮ್ಮನಹಳ್ಳಿ

ಅಳಾಲಸಂದ್ರ..................(ಅನುಬಂಧ-3 ರಲ್ಲಿ ಗಮನಿಸಬಹುದು)

ಮಧುಗಿರಿ:-

ದೇಶದಲ್ಲೇ ಅತಿ ದೊಡ್ಡ ಏಕಶಿಲಾಗಿರಿ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು ಮಧುಗಿರಿ ಬೆಟ್ಟ. ಇದು ಭಾರತ ಮಾತ್ರವಲ್ಲ, ಏಷ್ಯಾ ಖಂಡದಲ್ಲೇ ಅತಿ ಎತ್ತರವಾದದ್ದು. ವಿಶ್ವದಲ್ಲೇ ಎರಡನೆಯ ಸ್ಥಾನವನ್ನು ಪಡೆದಿದೆ. ಬೆಟ್ಟದಲ್ಲಿ ಸುತ್ತಲೂ ಜೇನಿನಗೂಡಿದ್ದು, ಇದು ಜೇನಿನ ಬೀಡೆಂದೆ ಹೆಸರುವಾಸಿಯಾಗಿದೆ. ಆದ್ದರಿಂದಲೇ ಮಧುಗಿರಿ ಎಂಬ ಹೆಸರು ಬಂದಿದೆ. ಮಧುಗಿರಿಯಲ್ಲಿ ಹಿಂದೆ ನಿರ್ಮಿಸಿರುವ ವೈಭವದ ದೇಗುಲಗಳು, ಜೈನ ಬಸದಿ, ಪಂಚ ಕಲ್ಯಾಣಿಗಳು ಇಂದಿಗೂ ಕಾಣಬಹುದು. ಮಾಸ್ತಿಯವವರ 'ಧರೆಯೊಳೆಲ್ಲೇ ಇರಲಿ ನಾನು ಮರೆಯಲಾರೆ ಮಧುಗಿರಿ' ಎಂಬ ಕವಿತೆಯನ್ನು ಸ್ಮರಿಸಬಹುದು. ಮಧುಗಿರಿಯು ನದಿ, ಹಳ್ಳ, ಕೊಳ್ಳ, ಕೆರೆ-ಕಟ್ಟೆ, ಕಾಡು, ಬೆಟ್ಟ-ಗುಡ್ಡಗಳಿಂದ ಕೂಡಿದ ಸಮೃದ್ಧ ತಾಣವಾಗಿದೆ. ಪ್ರಸ್ತುತ ತಾಲ್ಲೂಕು ಆಂಧ್ರಪ್ರದೇಶಕ್ಕೆ ಸಮೀಪವಿರುವ ಕಾರಣ ಸಾಮಾನ್ಯವಾಗಿ ಇಲ್ಲಿನ ಜನರು ದ್ವಿಭಾಷಿಗರು ತಮ್ಮ ಮಾತೃಭಾಷೆಯಾದ ಕನ್ನಡ ಜೊತೆಗೆ ತೆಲುಗು ಭಾಷೆಯನ್ನು ಸಹ ಮಾತನಾಡುತ್ತಾರೆ.

ಇಲ್ಲಿನ ಸಾದರಲ್ಲಿ ಕೆಲವರು ಬೇರೆ ಪ್ರಾಂತ್ಯಗಳಿಂದ ವಲಸೆಬಂದು ಇಲ್ಲಿ ನೆಲೆಸಿದವರಾದರೆ ಮತ್ತೆ ಕೆಲವರು ಇಲ್ಲಿನ ಮೂಲ ನಿವಾಸಿಗಳಾಗಿದ್ದಾರೆ. ಕೃಷಿ ಇವರ ಪ್ರಧಾನ ಕಸುಬಾಗಿದ್ದು ಜೊತೆಗೆ ಪಶುಸಂಗೋಪನೆ, ವ್ಯಾಪಾರ-ವಾಣಿಜ್ಯದಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಬಹುತೇಕರು ಜೈನ ಸಂಪ್ರದಾಯಕ್ಕೆ ಒಳಗಾಗದೆ ತಮ್ಮ ತನವನ್ನು ಉಳಿಸಿ-ಬೆಳೆಸಿಕೊಂಡು ಬಂದವರಾಗಿದ್ದಾರೆ. ಇವರು ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಊರಿನ ಇತರೆ ಎಲ್ಲಾ ಜಾತಿಗಳೊಂದಿಗೆ ಹೊಂದಿಕೊಂಡು ಬಾಳುತ್ತಾರೆ. ಎಲ್ಲರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದವರಾಗಿದ್ದಾರೆ. ಊರಿನ ಗೌಡಿಕೆಯು ಸಾದರದ್ದೇ ಆಗಿರುತ್ತದೆ. ಒಟ್ಟಾರೆ ಶಾಂತಿ-ಸೌಹಾರ್ದತೆಯಿಂದ ಬಾಳ್ವೆ ನಡೆಸಿದ್ದಾರೆ. ಪ್ರಸ್ತುತ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳನ್ನು ಗಮನಿಸುವುದಾದರೆ-(ಅನುಬಂಧ-೪ ರಲ್ಲಿ ಗಮನಿಬಹುದು)

ಪಾವಗಡ:-

ಪಾವಗಡವು ಒಂದು ಐತಿಹಾಸಿಕ ಹಿನ್ನೆಲೆಯುಳ್ಳ ಪ್ರದೇಶವಾಗಿದೆ. ಪಾಮಕೊಂಡ ಎಂದು ಇದನ್ನು ಕರೆಯಲಾಗುತ್ತದೆ. ಅಂದರೆ ಹಾವಿನ ಬೆಟ್ಟ ಎಂಬ ಅರ್ಥವಿದೆ.

ಇಲ್ಲಿ ಪಾಲನಾಯಕ ಎಂಬ ಪಾಳೇಗಾರನು ಆಳ್ವಿಕೆ ನಡೆಸುತ್ತಿದ್ದು, 'ಪಾಮರಕೊಂಡ' ಎಂಬುದು ಸರಿಯಲ್ಲವೆಂದು 'ಪಾವಗಡ'ವೆಂದು ಕರೆದಿರಬಹುದೆಂಬ ಊಹೆ ಇದೆ. ಪಾವಗಡವು ಬೆಟ್ಟ-ಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಆಂಧ್ರಪ್ರದೇಶಕ್ಕೆ ಸಮೀಪವಿದೆ. ಇಲ್ಲಿನ ಬಹುತೇಕರು ತೆಲುಗು ಭಾಷೆಯನ್ನು ತಮ್ಮ ಸಂವಹನ ಮಾಧ್ಯಮವಾಗಿಸಿಕೊಂಡಿದ್ದಾರೆ. ಪಾವಗಡವು ಕರ್ನಾಟಕದ ತುಮಕೂರು ಜಿಲ್ಲೆಗೆ ಸೇರಿರುವುದರಿಂದ ಇವರು ಕನ್ನಡ ಭಾಷೆಯನ್ನು ಬಲ್ಲವರಾಗಿದ್ದಾರೆ. ಇಲ್ಲಿನ ಬಹುತೇಕರು ಕೃಷಿಯಾಧಾರಿತ ಬದುಕನ್ನು ಸಾಗಿಸುತ್ತಿದ್ದು, ಕೃಷಿಯು ಮಳೆಯಾಧಾರಿತವಾಗಿದೆ.

ಮಳೆಯ ಪ್ರಮಾಣಕ್ಕನುಗುಣವಾಗಿ ಬೆಳೆ. ಕಡಲೆಕಾಯಿ, ಸೂರ್ಯಕಾಂತಿ ಇಲ್ಲಿನ ಪ್ರಮುಖ ಬೆಳೆಯಾಗಿವೆ. ಬಹುತೇಕ ಸಾದರು ತಾವು ಬಹಳ ಹಿಂದೆ ಆಂಧ್ರದಿಂದ ವಲಸೆಬಂದು ಇಲ್ಲಿ ನೆಲೆಸಿರುವುದಾಗಿ ಹೇಳುತ್ತಾರೆ. ವಿದ್ಯಾವಂತರ ಸಂಖ್ಯೆಯು ಕಡಿಮೆಯಿದ್ದು ಶೈಕ್ಷಣಿಕವಾಗಿ ಸ್ವಲ್ಪಮಟ್ಟಿಗೆ ಹಿಂದುಳಿದಿರುವುದನ್ನು ಗಮನಿಸಬಹುದು. ಪಾವಗಡವು ಒಣ ಭೂ ಪ್ರದೇಶದಿಂದ ಕೂಡಿದೆ. ಇದರಿಂದಾಗಿ ಇಲ್ಲಿನ ಜನರು ಆರ್ಥಿಕವಾಗಿ ಮಧ್ಯಮ ವರ್ಗದಲ್ಲಿರುವುದನ್ನು ಗಮನಿಸಬಹುದು.

ಪಾವಗಡ ತಾಲ್ಲೂಕಿನ 'ದೇವಲಕೆರೆ' ಯಲ್ಲಿ ಸಾದರು ಕಂಡು ಬರುತ್ತಾರೆ. ಹಿಂದೆ ಸಮೃದ್ಧಿಯ ತವರಾಗಿದ್ದ ಪಾವಗಡ ಇಂದು ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಶೋಚನೀಯ ಸಂಗತಿಯಾಗಿದೆ.

ಗೌರಿಬಿದನೂರು:-

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿರುವ ಗೌರಿಬಿದನೂರು ತಾಲ್ಲೂಕು ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿದ ಪ್ರದೇಶವಾದರೂ ಬರದ ಹೊರೆಯಿಂದ ನರಳುವ ಪ್ರದೇಶವಾಗಿದೆ. ಪ್ರಸ್ತುತ ಪ್ರಾಂತ್ಯದಲ್ಲಿ ಗೋರಿಗಳು ಅಧಿಕ ಪ್ರಮಾಣದಲ್ಲಿ ಇದ್ದುದರಿಂದ ಇದನ್ನು ಗೋರಿಬಿದನೂರು ಎಂದು ಕರೆಯಲಾಗುತ್ತಿತ್ತು, ಕಾಲನಂತರ 'ಬೊಮ್ಮಶೆಟ್ಟಿಹಳ್ಳಿ' ಎಂಬ ಗ್ರಾಮದಿಂದ 'ಗೌರಿ' ಎಂಬ ಕನ್ಯೆಯನ್ನು ಈ ಗೋರಿಬಿದನೂರಿಗೆ ಕನ್ಯಾಧಾನ ಮಾಡಿಕೊಡಲಾಯಿತು, ಅಂದಿನಿಂದ ಗೌರಿಯ ಊರು ಗೌರಿಬಿದನೂರು ಎಂದಾಯಿತು ಎಂಬ ಐತಿಹ್ಯವು ಗೌರಿಬಿದನೂರಿನ ಸ್ಥಳನಾಮದ ಬಗ್ಗೆ ಬೆಳಕು ಚೆಲ್ಲುತ್ತದೆ.

ಪ್ರಸ್ತುತ ಪ್ರದೇಶವು ಆಂಧ್ರಪ್ರದೇಶದ ಗಡಿಭಾಗದ ಸಮೀಪವಿರುವುದರಿಂದ ಇಲ್ಲಿ ಬಹುತೇಕರು ದ್ವಿಭಾಷಿಗರಾಗಿದ್ದಾರೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಸಾದರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಹಿಂದೆ ನಂದಿ ಬೆಟ್ಟದಿಂದ ಹರಿದು ಬರುತ್ತಿದ್ದ 'ಉತ್ತರ ಪಿನಾಕಿನಿ' ನದಿಯು ನಗರದ ಮಧ್ಯವೇ ಹರಿಯುತ್ತಿದ್ದುದರಿಂದ ಇಲ್ಲಿನ ಬಹುತೇಕ ರೈತರು ಕಬ್ಬು, ಮೆಣಸಿಕಾಯಿ, ಮುಸುಕಿನ ಜೋಳ, ಹೂವು, ತರಕಾರಿಗಳನ್ನು ಹೇರಳವಾಗಿ ಬೆಳೆಯುತ್ತಿದ್ದರು. ಇದಕ್ಕೆ ಪೂರಕವಾಗಿ ನಗರದಲ್ಲಿಯೇ ಸಕ್ಕರೆ ಕಾರ್ಖಾನೆಯು ಇದ್ದು, ರೈತರ ಬದುಕು ಹಸನಾಗಿತ್ತು. ಆದರೆ ಇಂದು ದುರ್ವಿಧಿ ಮಳೆ ಬಾರದೆ ನದಿಯು ಬತ್ತಿ ಕುಡಿಯಲು ನೀರಿಲ್ಲದೆ ಬರಪೀಡಿತ ಪ್ರದೇಶಗಳಲ್ಲಿ ಒಂದೆಂದು ಗುರುತಿಸಿಕೊಂಡಿದೆ.

ಇತ್ತೀಚಿನ ದಿನಗಳಲ್ಲಿ ಪ್ರಾರಂಭವಾಗಿರುವ ರೈಮಂಡ್ ಕಾರ್ಖಾನೆ ಮತ್ತು ತೊಂಡೆಬಾವಿಯಲ್ಲಿನ ಸೀಮೆಂಟ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಅನ್ನದಾತನಿಂದು ದುಡಿದು ಬದುಕು ಸಾಗಿಸುವಂತಾಗಿದೆ.

ಗೌರಿಬಿದನೂರು ಪ್ರಾಂತ್ಯದ ಬಹುತೇಕ ಸಾದರು ವೈಷ್ಣವ ಪರಂಪರೆಯನ್ನು ಹೊಂದಿದ್ದು ವಿಷ್ಣುವಿನ ಆರಾಧಕರಾಗಿದ್ದಾರೆ. ಜೊತೆಗೆ ವಿದುರಾಶ್ವತ್ಥ, ಮುದುಗಾನಕುಂಟೆ, ಮಿಣಕಣಗುರ್ಕಿ, ಘಾಟಿ,

[illegible]

ಕಲ್ಲಂತೇಶ್ವರ ದೇವಾಲಯಗಳು ಗೌರಿಬಿದನೂರು ಪ್ರಾದೇಶಿಕ ಪರಿಸರಕ್ಕೆ ಹೊಂದಿಕೊಂಡಂತಿದ್ದು ಅಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಪ್ರಸ್ತುತ ಪ್ರಾಂತ್ಯದ ಸಾದರು ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ. ಇದೇ ತಾಲ್ಲೂಕಿನ ಜ್ಞಾನಸೂರ್ಯರಾದ ಡಾ.ಹೆಚ್.ನರಸಿಂಹಯ್ಯರವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಸಾದರಲ್ಲಿಯೂ ವಿದ್ಯಾವಂತರ ಸಂಖ್ಯೆ ಹೆಚ್ಚಿದ್ದು ಇಂದು ಬಹುತೇಕರು ಖಾಸಗೀ ಮತ್ತು ಸರಕಾರಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಗಮನಿಸಬಹುದು.

ಪ್ರಸ್ತುತ ಪ್ರಾಂತ್ಯದ ಸಾದರು ತಮ್ಮದೇ ಆದ ವಿಶಿಷ್ಟ ರೂಢಿ–ಸಂಪ್ರದಾಯ, ಆಚಾರ–ವಿಚಾರಗಳನ್ನು ಹೊಂದಿದೆ. ಬಹುತೇಕರು ತೆಲುಗು ಭಾಷೆಯನ್ನೇ ತಮ್ಮ ಮನೆ ಮಾತಾಗಿಸಿಕೊಂಡಿದ್ದಾರೆ.

ಒಟ್ಟಾರೆ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ. ಗೌರಿಬಿದನೂರು ತಾಲ್ಲೂಕಿನಲ್ಲಿರುವ ಸಾದರು ಜಾತಿಯಿರುವ ಗ್ರಾಮಗಳನ್ನು ಗಮನಿಸುವುದಾದರೆ– (ಅನುಬಂಧ–5 ರಲ್ಲಿ ಗಮನಿಸಬಹುದು).

<u>ಮಾಗಡಿ:–</u>

ಮಾಗಡಿಯು ಐತಿಹಾಸಿಕ ಹಿನ್ನೆಲಯುಳ್ಳ ಪ್ರದೇಶವಾಗಿದೆ. ಯಲಹಂಕ ನಾಡಪ್ರಭುಗಳ ಮನೆತನದ ಪ್ರಮುಖ ದೊರೆಯಾದ ಇಮ್ಮಡಿ ಕೆಂಪೇಗೌಡನು ಮಾಗಡಿಯನ್ನು ವಶಪಡಿಸಿಕೊಂಡು ಅದನ್ನು ತನ್ನ ಉಪರಾಜ್ಯಧಾನಿಯನ್ನಾಗಿ ಮಾಡಿಕೊಂಡಿದ್ದನೆಂಬುದು ಇತಿಹಾಸಕಾರರಾದ ಪ್ರೋ.ಗಿಲ್ಬರ್ಟ್ ಸಿಕ್ವೇರಾ ರವರ ಅಭಿಪ್ರಾಯವಾಗಿದೆ.

"ಕ್ರಿ.ಶ.೧೬೨೩ ರಲ್ಲಿ ಇಮ್ಮಡಿ ಕೆಂಪೇಗೌಡನು ಮಾಗಡಿಯನ್ನು ಆಕ್ರಮಿಸಿ ೧೮ ವರ್ಷಗಳ ಕಾಲ ಮಾಗಡಿಯಿಂದ ರಾಜ್ಯಭಾರ ಮಾಡಿದನು. ಇವನ ನಂತರ ಬಂದ ಅರಸರಿಗೆ ಮಾಗಡಿಯ ಕೆಂಪೇಗೌಡರೆಂದು ಹೆಸರು ಬಂತು"[೫೯]. ಇಮ್ಮಡಿ ಕೆಂಪೇಗೌಡರು ಮಾಗಡಿಯ ಪ್ರಸಿದ್ದ ರಂಗನಾಥ ದೇವಸ್ಥಾನವನ್ನು ಜೀರ್ಣೋದ್ಧಾರವನ್ನು ಮಾಡಿಸಿದನು. ಮಾಗಡಿ ಪ್ರಾಂತ್ಯದ ಬಹುತೇಕ ಸಾದರು ರಂಗನಾಥನನ್ನು ತಮ್ಮ ಮನೆದೇವರನ್ನಾಗಿ ಹೊಂದಿದ್ದು ರಂಗನಾಥ ಸ್ವಾಮಿಯ ಹೆಸರನ್ನೇ ಬಹುತೇಕರು ತಮ್ಮ ಮನೆಯ ಮಕ್ಕಳಿಗಿಡುತ್ತಾರೆ.

ಕೆಬ್ಬೇ ಮಣ್ಣಿನಿಂದ ಕೂಡಿದ ಇಲ್ಲಿನ ಭೂ ಪ್ರದೇಶವು ಕೃಷಿಗೆ ಯೋಗ್ಯವಾದುದಾಗಿದೆ. ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಹೊಂದಿರುವ ಸಾದರು ಹಣ್ಣು, ಹೂವು, ತರಕಾರಿ, ತೊಗರಿ, ಅವರೆ ಮುಂತಾದ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ.

ಜಾತಿಯಲ್ಲಿನ ಹಿರಿಯರು ಮಣ್ಣಿನಿಂದಲೇ ಹೊನ್ನು ಎನ್ನುತ್ತಾರೆ. ಶ್ರಮಜೀವಿಗಳಾಗಿರುವ ಇವರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ತಮ್ಮ ಕಸುಬಾನ್ನಾಗಿಸಿಕೊಂಡಿದ್ದಾರೆ. ಇವರು ದೆವ್ವ-ಭೂತ, ಮಾಟ-ಮಂತ್ರಗಳ ನಂಬಿಕೆಯುಳ್ಳವರಾಗಿದ್ದಾರೆ. ತಮ್ಮದೇ ಆದ ವಿಶಿಷ್ಟ ಆಚಾರ-ವಿಚಾರ, ರೂಢಿ-ಸಂಪ್ರದಾಯ, ನಂಬಿಕೆಗಳನ್ನು ಹೊಂದಿರುವ ಇವರು ಕಲಾರಾಧಕರಾಗಿದ್ದಾರೆ. ಯಕ್ಷಗಾನ, ನಾಟಕಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುವ ಇವರು ಸುಗ್ಗಿ ಬಂತೆಂದರೆ ನಾಟಕಗಳ ಸರಧಿ ಬಂತೆಂದೆ ಹೇಳುತ್ತಾರೆ. ಪ್ರಸ್ತುತ ಪ್ರಾಂತ್ಯದಲ್ಲಿನ ಸಾದರಿರುವ ಗ್ರಾಮಗಳನ್ನು ಗಮನಿಸುವುದಾದರೆ-

ಅಣ್ಣಾಜಪ್ಪನಪಾಳ್ಯ

ಉಡುಕುಂಟೆ

ಕಲ್ಯ

ಕಳ್ಳಿಪಾಳ್ಯ

ಕುದೂರು----------(ಅನುಬಂಧ-6 ರಲ್ಲಿ ಗಮನಿಸಬಹುದು)

ಆನೇಕಲ್:-

ಬೆಂಗಳೂರು ಸಮೀಪವಿರುವ ಆನೇಕಲ್ ಪ್ರಾಂತ್ಯದಲ್ಲಿ ಕಡಿಮೆ ಪ್ರಮಾಣದಲ್ಲಿ ಸಾದರಿರುವುದನ್ನು ಗಮನಿಸಬಹುದು. ಪ್ರಸ್ತುತ ಪ್ರಾಂತ್ಯದ ಬಹುತೇಕ ಸಾದರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಅವಲಂಬಿಸಿದ್ದು ಹಣ್ಣು, ತರಕಾರಿ, ಹೂಗಳನ್ನು ಬೆಳೆಯುತ್ತಾರೆ. ಪ್ರಸ್ತುತ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳನ್ನು (ಅನುಬಂಧ-7 ರಲ್ಲಿ) ಗಮನಿಸಬಹುದು.

ಸಾಂಸ್ಕೃತಿಕ ನಗರಿ ಮೈಸೂರಿನ 'ಕಡಕೊಳ', ದೊಡ್ಡಬಳ್ಳಾಪುರ ತಾಲ್ಲೂಕಿನ ಕನ್ನಕುಂಟೆ, ಕೋಳೂರು, ಮಲ್ಲಸಂದ್ರದಲ್ಲಿ ಸಾದರು ಜಾತಿಯ ಜನರಿದ್ದಾರೆ. ಹಾಗೆಯೇ ತಮಿಳುನಾಡಿನ ಹೊಸೂರು ತಾಲ್ಲೂಕಿನ ಬೇಗೇನಹಳ್ಳಿ, ಮೊತ್ತಂ ಅಗ್ರಹಾರದಲ್ಲಿಯೂ ಪ್ರಸ್ತುತ ಜನಾಂಗವಿದೆ.

ಆಂಧ್ರಪ್ರದೇಶದ ಪೆನುಗೊಂಡ ತಾಲ್ಲೂಕಿನಲ್ಲಿಯೂ ಸಾದರಿದ್ದಾರೆ. ಅನಂತಪುರ ಜಿಲ್ಲೆಯ, ಮಡಕಶಿರಾ ತಾಲ್ಲೂಕಿನ ಹೇಮಾವತಿಯಲ್ಲಿ ಹೆಂಜೇರು ಸಿದ್ದೇಶ್ವರಸ್ವಾಮಿ ದೇವಾಲಯವಿದೆ. ಹೆಂಜೇರು ಸಿದ್ದೇಶ್ವರ ಸ್ವಾಮಿಯು ಕೆಲ ಸಾದರ ಮನೆದೇವರಾಗಿದೆ. ಪ್ರಸ್ತುತ ಪ್ರಾಂತ್ಯಕ್ಕೆ ಸಮೀಪವಿರುವ ಮದ್ಯ ಶಿವರಂ ಗ್ರಾಮದಲ್ಲಿ ಮೈಲಾರ ಲಿಂಗೇಶ್ವರ ದೇವಾಲಯವಿದ್ದು ಸಾದರೇ ಮೈಲಾರ ಲಿಂಗೇಶ್ವರ ದೇವಾಲಯದ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಲಾರ ಲಿಂಗೇಶ್ವರ ಸ್ವಾಮಿಯು ಬಹುತೇಕ ಶೈವ ಪರಂಪರೆಯ ಸಾದರ ಮನೆದೇವರಾಗಿದೆ.

ಹೇಮಾವತಿಯು ನೊಳಂಬರ ರಾಜಧಾನಿಯಾಗಿದ್ದು ಕ್ರಿ.ಶ.೮೭೨ರಲ್ಲಿ ನೊಳಂಬರ ಮಹೇಂದ್ರವರ್ಮನಿಂದ ನಿರ್ಮಾಣವಾದ ಮೈಲಾರಲಿಂಗೇಶ್ವರ ದೇವಾಲಯವು ತನ್ನದೇ ಆದ

ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಈ ದೇವಾಲಯದಲ್ಲಿ ಪ್ರಾರಂಭದಲ್ಲಿ ಕುರುಬರು ಅರ್ಚಕರಾಗಿದ್ದು ಕಾಲಾನಂತರದಲ್ಲಿ ಸಾದರು ಮಧ್ಯಶಿವರಕ್ಕೆ ಒಂದು ನೆಲೆನಿಂತಂದಿನಿಂದ ಸಾದರು ಅರ್ಚಕವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಪ್ರದೇಶದಲ್ಲಿ ಕಡಲೆಕಾಯಿ, ಭತ್ತ, ರೇಷ್ಮೆ, ತೊಗರಿ ಮುಂತಾದ ಬೆಳೆಗಳನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಈ ಪ್ರಾಂತ್ಯದ ಎಲ್ಲಾ ಜನರು ದ್ವಿಭಾಷಿಗರಾಗಿದ್ದಾರೆ. ಇವರು ತೆಲುಗನ್ನೇ ತಮ್ಮ ಮನೆಮಾತಾಗಿಸಿಕೊಂಡಿದ್ದು ಕನ್ನಡ ಭಾಷೆಯನ್ನು ಬಲ್ಲರಾಗಿದ್ದಾರೆ.

ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಸಾದರಿದ್ದಾರೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕಿನಲ್ಲೂ ಪ್ರಸ್ತುತ ಜಾತಿಯ ಜನರಿದ್ದಾರೆ. ಹೀಗೆ ಅಲ್ಪಸಂಖ್ಯಾರಾಗಿರುವ ಸಾದರು ಕರ್ನಾಟಕದ ಕೆಲ ಭಾಗಗಳು ಮತ್ತು ಆಂಧ್ರಪ್ರದೇಶದ ಗಡಿಭಾಗ ಮತ್ತು ತಮಿಳುನಾಡಿನ ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ.

"೧೯೦೧ ರ ಜನಗಣತಿಯಲ್ಲಿ 'ಸಾದರನ್ನು' ಜೈನರ ಗುಂಪಿಗೆ ಸೇರಿಸಿ ಅವರ ಸಂಖ್ಯೆಯಲ್ಲಿ ಗಂಡಸರು ೧೭೩ ಮತ್ತು ಹೆಂಗಸರು ೨೧೪ ಎಂದು ನಮೂದಿಸಿದೆ. ಆದರೆ ಈ ಅಂಕಿ ಅಂಶಗಳು ತಪ್ಪು ದಾರಿಗೆ ಏಳೆಯುವಂತಹವೆಂದು ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತ ಐಯ್ಯರ್ ರವರರು ರಚಿಸಿರುವ **"ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್"** ಕೃತಿಯಲ್ಲಿ ಅಭಿಪ್ರಾಯಪಡಲಾಗಿದೆ.

ಅಲ್ಪಸಂಖ್ಯಾತರಾದ "ಸಾದರು ಜಾತಿಯು ೧.೫ ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯ ಪಥದತ್ತ ಹೆಜ್ಜೆಹಾಕುತ್ತಿದೆ"[೬೦]. ಈ ನಿಟ್ಟಿನಲ್ಲಿ ಸಾದರು ಜಾತಿಯನ್ನು ಕರ್ನಾಟಕ ಸರ್ಕಾರವು ೧೯೯೪ ರಲ್ಲಿ ಪ್ರವರ್ಗ-IIA ಗೆ ಸೇರಿಸಿದರೆ, ಭಾರತ ಸರ್ಕಾರವು ೨೦೦೬ ರಲ್ಲಿ ಓ.ಬಿ.ಸಿ ಪಟ್ಟಿಯಲ್ಲಿ ಸೇರಿಸಿತು. ಇದರಿಂದ ಅಧಿಕೃತವಾಗಿ ನೆಲೆಯಿಲ್ಲದ ಸಾದರು ಜಾತಿಯ ಜನರಿಗೆ ಸೂಕ್ತ ಸ್ಥಾನಮಾನಗಳು ದೊರೆತಂತಾಯಿತು ಎಂದರೆ ಖಂಡಿತ ತಪ್ಪಾಗಲಾರದು.

ಸರ್ವಕ್ಷೇತ್ರಗಳಲ್ಲಿಯೂ ಹಿಂದುಳಿದ ಸಾದರು ಜಾತಿಯ ಜನತೆಗೆ ಸಮಾಜದ ಇತರೆ ಜನಸಮುದಾಯಗಳೊಂದಿಗೆ ಮುಂದಡಿ ಇಡಲು ಇದೊಂದು ಸುವರ್ಣಾವಕಾಶ ದೊರೆತಂತಾಯಿತು ಎಂದೇ ಹೇಳಬಹುದು.

ಅಡಿಟಿಪ್ಪಣಿಗಳು:-

೧. ಡಾ.ಕೆ.ಜಿ.ಗುರುಮೂರ್ತಿ-'ಜನಪದ ಸಮಾಜ ಮತ್ತು ಸಂಸ್ಕೃತಿ'-ಪುಟ ಸಂಖ್ಯೆ-೦೧.
೨. ಡಾ.ಹಂಪನಾಗರಾಜಯ್ಯ-'ಚಂದ್ರಕೊಡೆ'-ಪುಟ ಸಂಖ್ಯೆ-೧೬೪.
೩. (ಸಂ) ಎಚ್.ಎಲ್.ನಾಗೇಗೌಡ-'ಕನ್ನಡ ಜಾನಪದ ಕೋಶ'-ಪುಟಸಂಖ್ಯೆ-೭೨೮.
೪. ಅದೇ ಪು. ಪುಟ ಸಂಖ್ಯೆ-೭೨೮.
೫. ಅದೇ ಪು. ಪುಟ ಸಂಖ್ಯೆ-೭೨೯.
೬. ಪ್ರೊ.ಜಿ.ವೆಂಕಟಸುಬ್ಬಯ್ಯ -'ಸಂಕ್ಷಿಪ್ತ ಕನ್ನಡ ನಿಘಂಟು'-ಪುಟ ಸಂಖ್ಯೆ-೮೩೩.
೭. ಅದೇ ಪು. ಪುಟ ಸಂಖ್ಯೆ-೮೩೮.
೮. ಅದೇ ಪು. ಪುಟ ಸಂಖ್ಯೆ-೮೬೨.
೯. ಅದೇ ಪು. ಪುಟ ಸಂಖ್ಯೆ-೮೬೩.
೧೦. ಡಾ. ಹಂಪ ನಾಗರಾಜಯ್ಯ-'ಚಂದ್ರಕೊಡೆ'-ಪುಟ ಸಂಖ್ಯೆ-೧೬೧.
೧೧. ಅದೇ. ಪು.ಪುಟ ಸಂಖ್ಯೆ-೧೬೧.
೧೨. ಅದೇ ಪು. ಪುಟ ಸಂಖ್ಯೆ-೧೬೨.
೧೩. ಅದೇ ಪು. ಪುಟ ಸಂಖ್ಯೆ-೧೬೩.
೧೪. ಅದೇ ಪು. ಪುಟ ಸಂಖ್ಯೆ-೧೬೩.
೧೫. ಅದೇ ಪು. ಪುಟ ಸಂಖ್ಯೆ-೧೬೩.
೧೬. ಅದೇ ಪು. ಪುಟ ಸಂಖ್ಯೆ-೧೬೪.
೧೭. ಮಹದೇವ ಬಣಕಾರ-'ವಿಶ್ವಬಂಧು ಮರುಳಸಿದ್ದಕಾವ್ಯ'-ಪುಟ ಸಂಖ್ಯೆ-೪೭, ೪೮.
೧೮. ಬಸವರಾಜ್ ತೂಲಹಳ್ಳಿ.ಟಿ.-'ಆಲದ ಮರ-ಪು.ಸಂಖ್ಯೆ.೨೮೩.
೧೯. ಅದೇ.ಪು.ಪುಟ ಸಂಖ್ಯೆ-೨೮೩.
೨೦. ಅದೇ ಪು.ಪುಟ ಸಂಖ್ಯೆ-೨೮೩.
೨೧. ಅದೇ ಪು.ಪುಟ ಸಂಖ್ಯೆ-೨೮೪.
೨೨. ಅದೇ ಪು.ಪುಟ ಸಂಖ್ಯೆ-೨೮೫.
೨೩. ಅದೇ ಪು.ಪುಟ ಸಂಖ್ಯೆ-೨೮೬.
೨೪. ಎ.ಕ.ಸಂ-೩, ಪುಟ ಸಂಖ್ಯೆ-೧೩೩.
೨೫. ಬಸವರಾಜ್ ತೂಲಹಳ್ಳಿ.ಟಿ.-'ಆಲದ ಮರ-ಪು.ಸಂಖ್ಯೆ.೨೮೭.
೨೬. ಎ.ಕ.ಸಂ-೪, ಪುಟ ಸಂಖ್ಯೆ-೪೯೯.
೨೭. ಎ.ಕ.ಸಂ-೬, ಪುಟ ಸಂಖ್ಯೆ-೧೬೯.
೨೮. ಎ.ಕ.ಸಂ-೬, ಪುಟ ಸಂಖ್ಯೆ-೨೭.
೨೯. ಬಸವರಾಜ್ ತೂಲಹಳ್ಳಿ.ಟಿ.-'ಆಲದ ಮರ-ಪು.ಸಂಖ್ಯೆ.೨೮೭.

೩೦. ಅದೇ ಪು.ಪುಟ ಸಂಖ್ಯೆ-೨೮೭, ೨೮೮.

೩೧. ಅದೇ ಪು.ಪುಟ ಸಂಖ್ಯೆ-೨೮೮.

೩೨. ಎ.ಕ.ಸಂ-೧೦, ಪುಟ ಸಂಖ್ಯೆ-೩೫೯.

೩೩. ಎ.ಕ.ಸಂ-೧೧, ಪುಟ ಸಂಖ್ಯೆ-೧೨೧/೧೨೫.

೩೪. H.V.Nanjundaiah & L.K.Ananathakrishnaiyar-'The Mysore Tribes and Castes-P.No.526, 227.

೩೫. (ಪ್ರ.ಸಂ) ಪಂಡಿತ್. ಹೆಚ್.ಹನುಮಂತರಾಯಪ್ಪ-ಸಾದರ ಸುದ್ದಿ (ಮಾಸ ಪತ್ರಿಕೆ)-ಪುಟ ಸಂಖ್ಯೆ-೨೬ (ದಿನಾಂಕ: ೦೧-೦೪-೨೦೦೩).

೩೬. Edgar Thurston-Castes and Tribes of Southern India-P.No.260.

೩೭. The People of India Series. (Volume-VI) P.No.3062.

೩೮. (ಸಂ). ಹೆಚ್.ಡಿ ಪ್ರಶಾಂತ್-ಕರ್ನಾಟಕ ರಾಜ್ಯಕೋಶ;೪-'ಜನಸಮುದಾಯ ಸಂಪುಟ'-ಪುಟ ಸಂಖ್ಯೆ-೧೧೫.

೩೯. ಡಾ. ಹಂಪ ನಾಗರಾಜಯ್ಯ-'ಚಂದ್ರಕೊಡೆ'-ಪುಟ ಸಂಖ್ಯೆ-೧೬೪.

೪೦. K.S.Singh-'People of India; Karnataka'-P.No.943, 944.

೪೧. ಮಲ್ಲಿಕಾರ್ಜುನ.ಎಸ್.ಗುಡಿಹಿಂದಲ-ಸಾದರೆಲ್ಲರೂ ಮೂಲತಃ ಜೈನರು (ಅಪ್ರಕಟಿತ ಲೇಖನ ಪುಟ ಸಂಖ್ಯೆ-೦೧).

೪೨. ಮಹದೇವ ಬಣಕಾರ-'ವಿಶ್ವಬಂಧು ಮರುಳಸಿದ್ದಕಾವ್ಯ'-ಪುಟ ಸಂಖ್ಯೆ-೫೬ & ೫೭.

೪೩. ಡಾ.ಎನ್. ನಂದೀಶ್ವರ-'ಸಿರಾ ತಾಲ್ಲೂಕು ದರ್ಶನ'-ಪುಟ ಸಂಖ್ಯೆ-೧೧೩ & ೧೧೪.

೪೪. ಮಲ್ಲಿಕಾರ್ಜುನ.ಎಸ್.ಗುಡಿಹಿಂದಲ- 'ಸಾದರೆಲ್ಲರೂ ಮೂಲತಃ ಜೈನರು-ಪುಟ ಸಂಖ್ಯೆ-೦೨.

೪೫. ಡಾ. ಎಸ್. ಡಿ. ಶೆಟ್ಟಿ- 'ದಕ್ಷಿಣ ಕನ್ನಡ ಜಿಲ್ಲೆಯ ಜೈನಧರ್ಮ ಪರಂಪರೆ ಮತ್ತು ಅದರ ವಿಶಿಷ್ಟ ಸಂಪ್ರದಾಯಗಳು'-ಪುಟ ಸಂಖ್ಯೆ-೪.

೪೬. ಅದೇ ಪು. ಪುಟ ಸಂಖ್ಯೆ-೦೬.

೪೭. ಎಂ. ಹೆಚ್. ನಾಗರಾಜು-'ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ'-ಪುಟ ಸಂಖ್ಯೆ-೪೬.

೪೮. ಬಸವರಾಜ್ ತೂಲಹಳ್ಳಿ.ಟಿ.-'ಆಲದ ಮರ-ಪು.ಸಂಖ್ಯೆ-೩೦೪.

೪೯. (ಸಂ). ಹೆಚ್.ಡಿ ಪ್ರಶಾಂತ್-'ಜನಸಮುದಾಯ ಸಂಪುಟ'-ಪುಟ ಸಂಖ್ಯೆ-೨೫, (ಕರ್ನಾಟಕ ರಾಜ್ಯಕೋಶ:೪).

೫೦. ನಾ.ಲೋಕೇಶ್ ಒಡೆಯರ್-'ಸಾದ ಲಿಂಗಾಯಿತರು'-ಪುಟ ಸಂಖ್ಯೆ-೩೪೮.

೫೧. ಮಹದೇವ ಬಣಕಾರ-'ವಿಶ್ವಬಂಧು ಮರುಳಸಿದ್ದಕಾವ್ಯ'-ಪುಟ ಸಂಖ್ಯೆ-೦೬.

೫೨. ಅದೇ ಪು. ಪುಟ ಸಂಖ್ಯೆ–೦೬.

೫೩. ಹರ್ಷ ಪುರೋಹಿತ–“ವಿಶ್ವಬಂಧುತ್ವದ ಸಾಕಾರರೂಪ ತರಳಬಾಳು ಹುಣ್ಣಿಮೆ”–ವಿಜಯವಾಣಿ (ದಿನಪತ್ರಿಕೆ, ದಿನಾಂಕ–೬ನೇ ಫೆಬ್ರವರಿ ೨೦೧೪).

೫೪. ದುರ್ಗಶೋಧನ–(ತರಳಬಾಳು ಪಟ್ಟವಲ್ಲರಿ–ಕೆಲವು ಸಂಗತಿಗಳು)–ಪುಟ ಸಂಖ್ಯೆ–೨೨೧

೫೫. ಡಾ॥.ಚಿದಾನಂದ ಮೂರ್ತಿ.ಎಂ.–‘ವೀರಶೈವ ಧರ್ಮ–ಭಾರತೀಯ ಸಂಸ್ಕೃತಿ’ –ಪುಟ ಸಂಖ್ಯೆ–೧೫೨.

೫೬. H.V.Nanjundaiah and L.K.Ananathakrishnaiyar-‘The Mysore Tribes and Castes (Volume-4)-P.No.527.

೫೭. ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ–ಜಿಲ್ಲಾ ಪಂಚಾಯತ್–ಪುಟ ಸಂಖ್ಯೆ–೧೬.

೫೮. ಅದೇ ಪು.ಪುಟ ಸಂಖ್ಯೆ–೧೫

೫೯. ಪ್ರೋ.ಗಿಲ್ಬರ್ಟ್ ಸಿಕ್ವೇರಾ–‘ಕರ್ನಾಟಕ ಇತಿಹಾಸ’–ಪುಟ ಸಂಖ್ಯೆ–೨೭೧.

೬೦. ಸಂಜೆವಾಣಿ–‘ಸಾದರ ಜನಾಂಗದ ಮೀಸಲಾತಿ ಅನ್ಯರಿಂದ ದುರುಪಯೋಗ’ (ದಿನಪತ್ರಿಕೆ, ದಿನಾಂಕ–೩೦–೦೯–೨೦೦೨).

ಅಧ್ಯಾಯ-೩

ಸಾದರ ಜೀವನ ವಿಧಾನ

ಅಧ್ಯಾಯ-೩
ಸಾದರ ಜೀವನ ವಿಧಾನ

೩.೧:- ಸಾಮಾಜಿಕ ವ್ಯವಸ್ಥೆ

ಯಾವುದೇ ಒಂದು ಜಾತಿ, ಕುಲ, ಗುಂಪಿನ ಜನರೆಲ್ಲರೂ ಒಂದಾಗಿ ಕೂಡಿ ಬಾಳುವುದೇ ಸಮಾಜ. ಸಾಮಾಜಿಕ ಸಂಬಂಧಗಳು ಮತ್ತು ಹೊಂದಾಣಿಕೆಯ ದೃಷ್ಟಿಯಿಂದ ಒಟ್ಟಿಗೆ ಜೀವಿಸುವುದನ್ನು ಸಮಾಜವೆಂದು ಕರೆಯಲಾಗುತ್ತದೆ.

ಸಮಾಜದ ಉಗಮದೊಂದಿಗೆ ಸಂಸ್ಕೃತಿಯ ಉಗಮವೂ ಪ್ರಾರಂಭವಾಯಿತೆನ್ನಬಹುದು. ಸಂಸ್ಕೃತಿಯು ಮಾನವ ಸೃಷ್ಟಿಯಾದರೂ; ಅದು ಮಾನವ ಸಮಾಜದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಆದರೆ ಮಾನವ ಸಂಸ್ಕೃತಿಯ ಗುಲಾಮನಲ್ಲ. ಕಾಲದ ಅಗತ್ಯಕ್ಕೆ ತಕ್ಕಂತೆ ಸಂಸ್ಕೃತಿಯನ್ನು ತಿದ್ದಿ-ತೀಡುವ ಸಾಮರ್ಥ್ಯ ಮಾನವ ಸಮಾಜಕ್ಕಿದೆ.

ಕೃಷಿ ಪ್ರಧಾನ ಸಮುದಾಯಗಳಲ್ಲಿ ಪ್ರಮುಖರಾಗಿರುವ ಸಾದರು ಶ್ರಮ ಸಂಸ್ಕೃತಿ ಮತ್ತು ಊರಗೌಡಿಕೆಯ ವರ್ಗದಲ್ಲಿ ಗುರುತಿಸಲ್ಪಟ್ಟಿದ್ದಾರೆ. ಜೈನ ಸಂಸ್ಕೃತಿ ಪ್ರಭಾವವಿದ್ದರೂ ಸಾದರು ಮೂಲತಃ ಹಿಂದೂ ಸಂಸ್ಕೃತಿಯನ್ನು ಅನುಸರಿಸುತ್ತಾ ಬಂದವರು. ಇವರು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿದ್ದು ಅದನ್ನು ಸರಿಯಾದ ಕ್ರಮದಲ್ಲಿ ಪಾಲಿಸಿಕೊಂಡು, ಅಭಿವೃದ್ಧಿಪಡಿಸಿಕೊಂಡು ಹೋಗುವ ಹೊಣೆಗಾರಿಕೆಯನ್ನು ಹೊಂದಿದ್ದಾರೆ.

ಮಾನವ ಸಮಾಜ ಜೀವಿ, ಆತ ಒಂಟಿಯಾಗಿ ಜೀವಿಸಲು ಸಾಧ್ಯವಿಲ್ಲ. ಆದ್ದರಿಂದ ಒಂದು ಮಗು ಹುಟ್ಟಿತೆಂದರೆ ಅದು ತನ್ನದೇ ಆದ ಕುಟುಂಬದಲ್ಲಿ, ಸಮಾಜದಲ್ಲಿ, ಸಂಸ್ಕೃತಿಯಲ್ಲಿ ಹುಟ್ಟಿತೆಂದೇ ಹೇಳಬಹುದು. ಹೀಗಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಜಾತಿಯಲ್ಲಿಯೇ, ಒಂದೊಂದು ಸಮಾಜವನ್ನು ನಿರ್ಮಿಸಿಕೊಂಡು ಜೀವನ ಸಾಗಿಸುತ್ತಾರೆ. ಸಾದರು ಕೂಡ ಹೀಗೆಯೇ. ಸಾದರ ಸಮಾಜದಲ್ಲಿ ವ್ಯಕ್ತಿಯ ಆರೋಗ್ಯ-ಅಭಿವೃದ್ಧಿ ಮುಂತಾದವುಗಳೆಲ್ಲವಕ್ಕೂ ಧರ್ಮವೇ ಕಾರಣವೆಂಬ ನಂಬಿಕೆ ಇರುವುದರಿಂದ ಧರ್ಮಕ್ಕೆ ವಿಶಿಷ್ಟವಾದ ಸ್ಥಾನವಿದೆ.

ಸಮಾಜವು ಪ್ರತಿಯೊಬ್ಬ ವ್ಯಕ್ತಿಗೂ ಉತ್ತಮ ನಡೆ-ನುಡಿ, ರೀತಿ-ನೀತಿ, ರೂಢಿ-ಸಂಪ್ರದಾಯಗಳನ್ನು ತಿಳಿಸುತ್ತದೆ. ಸಮಾಜದಲ್ಲಿನ ನಿಯಮಗಳಿಗೆ ತಪ್ಪಿ ನಡೆದ ವ್ಯಕ್ತಿಗೆ ಸಮಾಜದಿಂದ ಬಹಿಷ್ಕರಿಸಿ ಶಿಕ್ಷೆಗೆ ಗುರಿಪಡಿಲಾಗುತ್ತದೆ.

ಇನ್ನು ಸಾದರ ಸಮಾಜದಲ್ಲಿ ವಿವಾಹವು ಮಕ್ಕಳಿಗೆ ಸಾಮಾಜಿಕ ಮತ್ತು ಕಾನೂನು ರೀತಿಯ ಹಕ್ಕನ್ನು ತರುತ್ತದೆ. ಮಕ್ಕಳು ತಮ್ಮ ತಂದೆ-ತಾಯಿಗಳ ಸ್ಥಾನ-ಮಾನವನ್ನು, ಆಸ್ತಿ ಮತ್ತು ಹಿರಿಯರ ಪೂಜೆಯ ಹಕ್ಕು ಪಡೆಯಲು ಅವರ ತಂದೆ-ತಾಯಿಗಳ ವಿವಾಹ ಸಂಬಂಧವು ಕಾನೂನು ರೀತಿಯದ್ದಾಗಿರಬೇಕು. ಸಮಾಜದ ಒಪ್ಪುಗೆಯನ್ನು ಪಡೆದಿರಬೇಕು. ಇದರಿಂದ ಮಕ್ಕಳು ತಂದೆ-ತಾಯಿಯಿಂದ ಸ್ಥಾನವನ್ನು ಪಡೆಯುತ್ತಾರೆ.

ಅಂದರೆ ಗೌಡನ ಮಗ ಮುಂದೆ ಗೌಡನಾಗುತ್ತಾನೆ. ಸಮಾಜದಲ್ಲಿ ಎಲ್ಲರ ಗೌರವ, ಮನ್ನಣೆಗಳಿಗೆ ಪಾತ್ರನಾಗುತ್ತಾನೆ. ಸಾದರ ಸಮಾಜದಲ್ಲಿ ಏಕಪತ್ನಿತ್ವ ಪದ್ಧತಿ ರೂಢಿಯಲ್ಲಿದೆ. ಹಿಂದೆ ಬಾಲ್ಯವಿವಾಹ ಪದ್ಧತಿ ಇದ್ದು ಇಂದು ಪ್ರೌಢವಿವಾಹ ಪದ್ಧತಿ ಜಾರಿಯಲ್ಲಿದೆ.

ಸಾದರ ಸಮಾಜವು ಪಿತೃ ಪ್ರಧಾನ ವ್ಯವಸ್ಥೆಯನ್ನು ಹೊಂದಿದ್ದು, ಪಿತ್ರಾರ್ಜಿತ ಆಸ್ತಿ ಹಕ್ಕು ಗಂಡುಮಕ್ಕಳಿಗಿರುತ್ತದೆ. ಹೆಣ್ಣುಮಕ್ಕಳಿಗೆ ಆಸ್ತಿಯ ಅಧಿಕಾರವಿರುವುದಿಲ್ಲ. ಇವರು ತಮ್ಮ ಹಾಗು ಇತರ ಸಮುದಾಯದ ಉಪಯೋಗಕ್ಕಾಗಿ ಕೆರೆ, ಬಾವಿ, ರಸ್ತೆಗಳ ನಿರ್ಮಾಣ ಮುಂತಾದ ಕಾರ್ಯಗಳನ್ನು ಮಾಡಲು ಪ್ರತಿಕುಟುಂಬದಿಂದಲೂ ಒಬ್ಬೊಬ್ಬ ಸದಸ್ಯನನ್ನು ತೆಗೆದುಕೊಂಡು ಒಟ್ಟಾರೆಯಾಗಿ ಆ ಕೆಲಸ-ಕಾರ್ಯಗಳನ್ನು ಮಾಡಿ ಮುಗಿಸುತ್ತಾರೆ.

ಸಾರ್ವಜನಿಕ ಆಸ್ತಿಗಳಾದ ಕೆರೆ, ಬಾವಿ, ರಸ್ತೆಯನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಂಡವರನ್ನು ಸಾದರ ಸಮಾಜವು ಶಿಕ್ಷಿಸುತ್ತದೆ.

ಉದಾಹರಣೆಗೆ:- ಸಿಹಿನೀರ ಬಾವಿಯ ಬಳಿಯಲ್ಲೇ ಬಟ್ಟೆ, ಪಾತ್ರೆ, ದನಕರುಗಳನ್ನು ತೊಳೆಯುವುದು, ಕೆರೆಯ ನೀರನ್ನು ದುರುಪಯೋಗ ಪಡಿಸಿಕೊಳ್ಳುವುದು ಇಂತಹ ನೀತಿ ಬಾಹಿರ ಕಾರ್ಯವನ್ನು ಮಾಡಿದರೆ ಅಂತಹವರನ್ನು ಸಮಾಜವು ಶಿಕ್ಷಿಸುತ್ತದೆ.

ಸಾದರ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆಯು ಗಣನೀಯವಾಗಿ ಕಡಿಮೆ ಇದೆ. ಆದ್ದರಿಂದ ಸಾಧುಮತದ ವಿದ್ಯಾಭಿವೃದ್ಧಿ ಸಂಘವನ್ನು ಸ್ಥಾಪಿಸಿ ಆ ಮುಖೇನ ವಿದ್ಯಾವಂತರ ಸಂಖ್ಯೆಯನ್ನು ಗಣನೀಯವಾಗಿ ವೃದ್ಧಿಸುವ ಕಾರ್ಯವೂ ಅವ್ಯಾಹತವಾಗಿ ಸಾಗುತ್ತಿದೆ.

ಸಾದರು ಧರಣಿಯ ಒಡೆಯರಾಗಿ, ಊರಿನಗೌಡರಾಗಿ, **'ಕಾಳು ಕೂಡಿಕ್ಕೊ, ಕೂಳು ಚೆಲ್ಲಾಡು'** ಎಂಬಂತೆ ದವಸಧಾನ್ಯಗಳ್ನು ಬೆಳೆದು ನಾಡಿನ ಅನ್ನಧಾತರಾಗಿದ್ದರು. ಶ್ಯಾನುಭೋಗ, ತೋಟಿ, ತಳವಾರ, ನೀರುಗಂಟಿ, ಅಗಸ, ಅಕ್ಕಸಾಲಿಗ, ಕ್ಷೌರಿಕ ಮೊದಲಾದವರಿಗೆ ಅವರಿಂದ ಪಡೆದ ಸೇವೆಗೆ ದವಸ-ಧಾನ್ಯಗಳನ್ನು ನೀಡಿ ಎಲ್ಲರೊಂದಿಗೆ ಅನ್ಯೋನ್ಯತೆಯಿಂದ ಬಾಳಿ-ಬದುಕಿದ್ದಾರೆ.

೩.೨:- ಕುಟುಂಬ ವ್ಯವಸ್ಥೆ

ಸಮಾಜಶಾಸ್ತ್ರಜ್ಞರು ಕುಟುಂಬವನ್ನು ವಿಭಕ್ತ ಮತ್ತು ಅವಿಭಕ್ತ ಕುಟಂಬ ಎಂಬ ಎರಡು ಪ್ರಕಾರಗಳನ್ನಾಗಿ ವಿಂಗಡಿಸಿದ್ದಾರೆ. ವಿಭಕ್ತ ಕುಟುಂಬದಲ್ಲಿ ಕೇವಲ ಗಂಡ-ಹೆಂಡತಿ, ಮಕ್ಕಳು ಮಾತ್ರ ಇರುತ್ತಾರೆ. ಆದರೆ ಅವಿಭಕ್ತ ಕುಟುಂಬಗಳಲ್ಲಿ ಅಜ್ಜಿ, ತಾತ, ತಂದೆ, ತಾಯಿ, ದೊಡ್ಡಪ್ಪ, ಚಿಕ್ಕಪ್ಪ, ದೊಡ್ಡಮ್ಮ, ಚಿಕ್ಕಮ್ಮ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹೀಗೆ ಮೂರು ನಾಲ್ಕು ತಲೆಮಾರಿನ ಜನರು ಒಂದೇ ಸೂರಿನಡಿ ವಾಸಿಸುತ್ತಿರುತ್ತಾರೆ.

ಸಾದರಲ್ಲಿ ಅವಿಭಕ್ತ ಕುಟುಂಬಗಳೇ ಅಧಿಕ. ಆದರೆ ಇತ್ತೀಚಿನ ದಿನಗಳಲ್ಲಿ ಇವರಲ್ಲಿಯೂ ಸಹ ವಿಭಕ್ತ ಕುಟುಂಬಗಳು ಕಂಡಬರುತ್ತವೆ. ಪಿತೃಪ್ರಧಾನ ವ್ಯವಸ್ಥೆಯನ್ನು ಹೊಂದಿರುವ ಸಾದರಲ್ಲಿ

ಕುಟುಂಬದ ಜವಾಬ್ದಾರಿ, ಮನೆಯ ಎಲ್ಲಾ ಆಗು–ಹೋಗುಗಳನ್ನು ಯಜಮಾನನೇ ನೋಡಿಕೊಳ್ಳುತ್ತಾನೆ. ತಂದೆಯ ತರುವಾಯ ಮನೆಯ ಹಿರಿಯ ಮಗನೇ ಯಾಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ. ಒಂದು ವೇಳೆ ತಂದೆ ಇಲ್ಲವಾದರೆ, ಗಂಡು ಸಂತಾನವೂ ಇಲ್ಲದಿದ್ದರೆ, ಜವಾಬ್ದಾರಿಯನ್ನೆಲ್ಲಾ ಯಜಮಾನತಿಯೇ ನೋಡಿಕೊಳ್ಳುವುದುಂಟು.

ಮನೆಯ ಯಜಮಾನ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದು, ಉಳಿದ ಪುರುಷರು ಹೊಲಗದ್ದೆಗಳಲ್ಲಿ ದುಡಿಯಲು ತೆರಳುತ್ತಿದ್ದರು. ಹೆಂಗಸರು ಮನೆಯ ಎಲ್ಲಾ ಕೆಲಸ–ಕಾರ್ಯಗಳನ್ನು ಬೇಗನೆ ಮುಗಿಸಿ ಊಟ ಹೊತ್ತು ಹೊಲದ ಕಡೆ ಹೋಗುತ್ತಿದ್ದರು. ಈ ನಿಟ್ಟಿನಲ್ಲಿ 'ಗೌಡ ಗದ್ದೆಗೆ, ಗೌಡ್ತಿ ಮುದ್ದೆಗೆ' ಎಂಬ ನಾಣ್ನುಡಿ ಇವರಲ್ಲಿ ಚಾಲ್ತಿಯಲ್ಲಿದೆ. ಕುಟುಂಬದ ಸ್ವಾಸ್ಥ್ಯಕ್ಕೆ ಈ ಎರಡೂ ಕಾರ್ಯಗಳು ಅನಿವಾರ್ಯವೇ ಆಗಿದ್ದವು ಮತ್ತು ಅವರವರ ಜವಾಬ್ದಾರಿಯನ್ನು ನಿರ್ದೇಶಿಸುತ್ತಿದ್ದವು.

ಸಾದರಲ್ಲಿ ಕುಟುಂಬವು ವ್ಯಕ್ತಿಗೆ ತನ್ನ ಕರ್ತವ್ಯ, ಹೊಣೆ, ನಡವಳಿಕೆ, ಕಾನೂನು ಮುಂತಾದವುಗಳನ್ನು ತಿಳಿಯ ಹೇಳಿ ಅವನು ದಾರಿ ತಪ್ಪದಂತೆ ನೋಡಿಕೊಳ್ಳುತ್ತದೆ. ಒಂದು ವೇಳೆ ಅವನು ದಾರಿ ತಪ್ಪಿದಲ್ಲಿ ಅವನನ್ನು ಶಿಕ್ಷಿಸುವ ಹೊಣೆಯನ್ನು ಸಹ ಕುಟುಂಬವೇ ಹೊಂದಿರುತ್ತದೆ. ಏಕೆಂದರೆ ಕುಟುಂಬದ ಯಾವ ಸದಸ್ಯ ಈ ಕೆಲಸ ಮಾಡಿದರೂ ಅದು ಇಡೀ ಕುಟುಂಬಕ್ಕೆ ಅನ್ವಯಿಸುತ್ತದೆ. ಆದ್ದರಿಂದ ತಮ್ಮ ಸ್ಥಾನ–ಮಾನ ಮತ್ತು ಘನತೆಯನ್ನು ಕಾಪಾಡಿಕೊಳ್ಳಲು ಕುಟುಂಬವು ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನಿಟ್ಟುಕೊಂಡು, ಅವರು ಸರಿಯಾಗಿ ನಡೆದುಕೊಳ್ಳುವಂತೆ ಮಾಡುವುದರಿಂದ ಇದು ಇಡೀ ಸಮಾಜಕ್ಕೆ ಒಳಿತಾಗಿ ಪರಿಣಮಿಸುತ್ತದೆ. ಕೆಲವೊಮ್ಮೆ ಕುಟುಂಬದ ಯಾರಾದರೊಬ್ಬ ವ್ಯಕ್ತಿಗೆ ಸಮಾಜವು ಕೊಟ್ಟ ಶಿಕ್ಷೆ, ಇಡಿಯಾಗಿ ಕುಟುಂಬಕ್ಕೆ ಅನ್ವಯಿಸುತ್ತದೆ. ಅಲ್ಲದೆ ವ್ಯಕ್ತಿಗೆ ಅಗೌರವವಾದರೆ ಅದು ಕುಟುಂಬಕ್ಕೆ ಅಗೌರವ ತರುತ್ತದೆ. ಅದ್ದರಿಂದ ಈ ಎಲ್ಲಾ ವಿಷಯಗಳಲ್ಲಿಯೂ ಹೆಚ್ಚಿನ ಪ್ರಜ್ಞೆಯುಳ್ಳಂತಹ ಸಾದರ ಕುಟುಂಬಗಳು ತನ್ನ ಸದಸ್ಯರನ್ನು ಸರಿ ದಾರಿಯಲ್ಲಿ ನಡೆಯುವಂತೆ ಮಾಡಿ ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ.

ಹೀಗೆ ಸಾದರ ಕುಟುಂಬವು ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನು ಹೊಂದುವುದರ ಜೊತೆಗೆ ಅವರನ್ನು ಇತರರ ಅನೇಕ ರೀತಿಯ ಆಕ್ರಮಣಗಳಿಂದ ರಕ್ಷಿಸುತ್ತದೆ. ಅನ್ಯರಿಂದ ತನ್ನ ಸದಸ್ಯರಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ಕುಟುಂಬವು ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ರಕ್ಷಣೆ ಮಾಡುತ್ತದೆ.

ಕುಟುಂಬ ಜೀವನಕ್ಕೆ ವಿವಾಹವೇ ಅಡಿಗಲ್ಲು. ಸಾದರ ಸಮಾಜದಲ್ಲಿ ಏಕಪತ್ನಿತ್ವ ವಿವಾಹಗಳಿಗೆ ಅನುಮೋದನೆ ಇದ್ದು, ಬಹುಪತ್ನಿತ್ವ ಮತ್ತು ಅಂತರ್ಜಾತಿ ವಿವಾಹಗಳಿಗೆ ಅವಕಾಶವಿರಲಿಲ್ಲ. ಹೆಣ್ಣು ಮಗಳನ್ನು ಮದುವೆ ಮಾಡಿ ಕಳಿಸುವ, ಸೊಸೆಯನ್ನು ಕರೆತರುವ ಪದ್ಧತಿ ಇವರಲ್ಲಿದೆ. ಆಸ್ತಿಯೆಲ್ಲವೂ ಗಂಡು ಮಕ್ಕಳಿಗೆ ಸೇರಿದ್ದು; 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಎಂಬ ಭಾವನೆ ರೂಢಿಯಲ್ಲಿದ್ದು,

ಗಂಡು ಸಂತಾನವಿರದಿದ್ದರೆ ಆಗ ಆಸ್ತಿಗೆ ಮಗಳು ವಾರಸುದಾರಳಾಗುತ್ತಿದ್ದಳು. ಮನೆವಾಳ್ತನಕ್ಕೆ ಅಳಿಯನನ್ನು ಆಹ್ವಾನಿಸಿ ಅವರಿಂದ ವಂಶ ಬೆಳೆಸುವ ಪದ್ಧತಿ ಇದೆ. ಎಷ್ಟೋ ಕುಟುಂಬಗಳಲ್ಲಿ ಮನೆಯ ಯಜಮಾನ ಸಂಸಾರ ಸಾಗಿಸುವಲ್ಲಿ ದುರ್ಬಲವಾದಾಗ, ಯಜಮಾನತಿಯು ಅದನ್ನು ಮುನ್ನಡೆಸಿದ್ದಾಳೆ. ಮನೆಯ ಒಳಗೆ, ಹೊರಗೆ ದುಡಿದು ಗಂಡ, ಮಕ್ಕಳು, ಅತ್ತೆ, ಮಾವಂದಿರನ್ನು ಪೋಷಿಸಿದ್ದಾಳೆ. ಗಂಡಸಿಗೆ ಸರಿಸಮಾನವಾಗಿ ಹೊಲಗದ್ದೆಗಳಲ್ಲಿ ದುಡಿದು ಸಂಸಾರದ ನೊಗ ಹೊತ್ತು ಬದುಕಿನ ಬಂಡಿಯನ್ನು ಎಳೆದಿದ್ದಾಳೆ.

ಹೀಗೆ ಕುಟುಂಬ ಜೀವನಕ್ಕೆ ಅಡಿಗಲ್ಲಾದ ವಿವಾಹದಲ್ಲಿ ಹಿಂದೆ ಅಕ್ಕನ ಮಗಳು ಅಥವಾ ಸೋದರ ಮಾವನ ಮಗಳನ್ನು ವಿವಾಹ ಮಾಡಿಕೊಳ್ಳುವ ಪದ್ಧತಿಯೇ ಚಾಲ್ತಿಯಲ್ಲಿತ್ತು. ಇದರಿಂದ ಅವಿಭಕ್ತ ಕುಟುಂಬವು ಬಹುಕಾಲ ಬಾಳುತ್ತಿತ್ತು. ಈ ನಿಟ್ಟಿನಲ್ಲಿ 'ಕಟ್ಟೆ ಕಲ್ಲನ್ನು ಕಟ್ಟೆಗೆ ಸೇರಿಸು' ಎಂಬ ಗಾದೆ ಸಾದರಲ್ಲಿ ಚಾಲ್ತಿಯಲ್ಲಿದೆ. ವಂಶದ ಜ್ಯೋತಿ ಬೆಳಗಲು ಮಕ್ಕಳು ಅನಿವಾರ್ಯ ಎಂಬ ಭಾವ ಇವರಲ್ಲಿತ್ತು. ಹಿಂದೆ ಕುಟುಂಬದಲ್ಲಿ ಮಕ್ಕಳ ಸಂಖ್ಯೆಗೆ ಮಿತಿಯಿರಲಿಲ್ಲ. ಇದಕ್ಕೆ ಅವಿಭಕ್ತ ಕುಟುಂಬ ಒಂದು ಕಾರಣವಾದರೆ, ಮಕ್ಕಳಿದ್ದರೆ ಕೃಷಿ ಕಾರ್ಯ ಸಾಂಗವಾಗಿ ನಡೆಯುತ್ತದೆಂಬುದು ಮತ್ತೊಂದು ಕಾರಣವಾಗಿತ್ತು.

ಆಧುನೀಕರಣದ ಪ್ರಭಾವದಿಂದಾಗಿ ಇಂದಿನ ದಿನಗಳಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗಿತ್ತಿವೆ. ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿವೆ. ಮತ್ತೊಂದೆಡೆ ಅವಿಭಕ್ತ ಕುಟುಂಬಗಳ ಅಗತ್ಯತೆಯು ಕಡಿಮೆಯಾಗುತ್ತಿದೆ.

ಉದಾಹರಣೆ:– ಹಿಂದೆ ವಿದ್ಯುತ್ ಮತ್ತು ಯಂತ್ರ ಸೌಲಭ್ಯವಿಲ್ಲದೆ ಇರುವ ಸಂದರ್ಭದಲ್ಲಿ ಏತ ಎತ್ತುವುದು, ಗೂಡೆ ಹಾಕುವುದು, ಮತ್ತು ಕಪಿಲೆ ಹೊಡೆಯುವುದರ ಮೂಲಕ ಹೊಲಗದ್ದೆಗೆ ನೀರುಣಿಸಬೇಕಿತ್ತು. ಆದ್ದರಿಂದ ಹೆಚ್ಚಿನ ಪ್ರಮಾಣದ ಶ್ರಮಶಕ್ತಿ ಅಗತ್ಯವಿತ್ತು. ಆದರೆ ಇಂದು ಕೈಗಾರೀಕರಣದ ಪ್ರಭಾವದಿಂದ, ಯಂತ್ರ ಶಕ್ತಿಯ ಆಗಮನದಿಂದ ಶ್ರಮಶಕ್ತಿಯ ಅಗತ್ಯ, ಅವಶ್ಯ, ಅನಿವಾರ್ಯ ಕಡಿಮೆಯಾಗುತ್ತಿದೆ. ಹತ್ತು ಜನರ ಕೆಲಸವನ್ನು ಒಂದು ಯಂತ್ರ ಮಾಡುತ್ತದೆ ಕಡಿಮೆ ಕಾಲಾವಧಿಯಲ್ಲಿ.

ಇನ್ನು ಅವಿಭಕ್ತ ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿರುತ್ತದೆ, ಕೆಲವರು ದುಡಿದರೆ ಹಲವರು ಕೆಲಸವಿಲ್ಲದೆ ವ್ಯರ್ಥ ಕಾಲಹರಣ ಮಾಡುತ್ತಾರೆ. ಇದರಿಂದ ಕುಟುಂಬದ ಖರ್ಚು ಹೆಚ್ಚಿ ಆದಾಯ ಕಡಿಮೆಯಾಗುತ್ತಿದೆ. ಪರಿಣಾಮವಾಗಿ, ವ್ಯಕ್ತಿಯ ತಲಾ ಆದಾಯ ಕಡಿಮೆಯಾಗುತ್ತಿದೆ. ತಲಾ ಆದಾಯ ಕಡಿಮೆಯಾದರೆ, ರಾಷ್ಟ್ರದ ಒಟ್ಟು ಆದಾಯ ಕಡಿಮೆಯಾಗಿ ರಾಷ್ಟ್ರದ ಪ್ರಗತಿ ಕುಂಟಿತವಾಗುತ್ತದೆ. ಇದನ್ನು ತಪ್ಪಿಸಲು ಪ್ರತಿಯೊಬ್ಬ ವ್ಯಕ್ತಿಯು ಜವಾಬ್ದಾರಿಯುತಾವಾಗಿ ದುಡಿಯಬೇಕು. ಆಗ ರಾಷ್ಟ್ರದ ಪ್ರಗತಿ ಸಾಧ್ಯವಾಗುತ್ತದೆ.

ಅವಿಭಕ್ತ ಕುಟುಂಬ ಪದ್ಧತಿಯ ನಾಶದಿಂದ ನಮ್ಮ ಹಿಂದಿನ ಸಂಸ್ಕೃತಿ ನಾಶವಾಗುತ್ತಿದೆ

ಎಂಬುದು ಹಲವರ ವಾದ, ಆದರೆ ವಾಸ್ತವವಾಗಿ ನಮ್ಮ ಸಂಸ್ಕೃತಿ ನಾಶಹೊಂದುತ್ತಿಲ್ಲ, ಅದು ವಿಭಕ್ತ ಕುಟುಂಬ ಪದ್ಧತಿಯಲ್ಲಿ ಹೊಸ ಹುಟ್ಟು ಪಡೆಯುತ್ತಿದೆ. ಆ ಮೂಲಕ ಅದು ಸದಾ ಜೀವಂತವಾಗಿರುತ್ತದೆ.

೩.೩:– ಆಹಾರ ಪದ್ಧತಿ

ಆಹಾರ ಪದ್ಧತಿಯು ಪ್ರಾಚೀನ ಕಾಲದಷ್ಟು ಇತಿಹಾಸವನ್ನು ಹೊಂದಿದೆ. ಇದು ಪರಂಪರಾಗತವಾಗಿ ಹರಿದು ಬಂದ ಸಂಸ್ಕೃತಿ. ಪ್ರತಿಯೊಂದು ಜೀವರಾಶಿಯ ಸೃಷ್ಟಿಗೆ ಪ್ರಕೃತಿ ಹೇಗೆ ಕಾರಣವೋ ಹಾಗೆಯೇ ಅವು ಬದುಕುಳಿಯಲು ಆಹಾರವನ್ನು ಸಹ ಪ್ರಕೃತಿಯೇ ಒದಗಿಸಿದೆ. ಹಿಂದೆ ಮಾನವನು ಪ್ರಕೃತಿ ಸಹಜವಾಗಿಯೇ ದೊರೆಯುವ ಗೆಡ್ಡೆ–ಗೆಣಸು, ಸೊಪ್ಪು–ಸೆದೆ (ಸೊದೆ–ಸುಧೆ–ಜೇನು) ಯನ್ನು ತಿಂದು ಜೀವಿಸಿದ್ದ, ನಂತರ ಕಾಲಚಕ್ರ ಉರುಳಿದಂತೆ ಆತನಲ್ಲಿ ಪ್ರಜ್ಞಾಪ್ರವಾಹ ಮೂಡಿದಂತೆ, ನಾಗರೀಕತೆಯನ್ನು ಮೈಗೂಡಿಸಿಕೊಂಡಂತೆ ತನ್ನದೇ ಆದ ಆಹಾರ ಪದ್ಧತಿಯನ್ನು ರೂಢಿಸಿಕೊಂಡನು.

ನಮ್ಮ ರಾಷ್ಟ್ರವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಶೇಕಡಾ.೭೦ರಷ್ಟು ಜನ ಕೃಷಿಯನ್ನೇ ಅವಲಂಬಿಸಿ ಜೀವಿಸುತ್ತಿದ್ದಾರೆ. ಸಾದರ ಆಹಾರ ಪದ್ಧತಿಯು ಇತರರಿಗಿಂತ ಭಿನ್ನವಾಗಿಲ್ಲವಾದರೂ ನೆಲಮೂಲ ಸಂಸ್ಕೃತಿಯ ಆರಾಧಕರಾಗಿರುವ ಇವರು ತಾವು ನೆಲೆನಿಂತ ನೆಲದಲ್ಲಿ ಬೆಳೆಯುವ ಬೆಳೆಗಳು ಮತ್ತು ಕಾಲಮಾನಕ್ಕನುಗುಣವಾಗಿ ತಮಗೆ ಯಾವ ಬಗೆಯ ಆಹಾರಬೇಕು, ಯಾವ ಬಗೆಯ ಆಹಾರ ಬೇಡ ಎಂಬುದನ್ನು ತಮ್ಮ ಅನುಭವದಿಂದಲೇ ಗುರುತಿಸಿಕೊಂಡಿದ್ದಾರೆ.

ಉದಾಹರಣೆ:– ತುಮಕೂರು ಜಿಲ್ಲೆಯಲ್ಲಿ ರಾಗಿ, ಭತ್ತವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಭತ್ತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವ ಧಾನ್ಯ ರಾಗಿ, ಈ ನಿಟ್ಟಿನಲ್ಲಿ 'ಹೊಟ್ಟೆ ತುಂಬ ಹಿಟ್ಟು, ಬಾಯಿ ತುಂಬ ಪ್ರಸಾದ' ಎಂಬ ಗಾದೆಯ ಮಾತಿತ್ತು. ಅನ್ನವನ್ನು ಪ್ರಸಾದ ಎಂದು ಕರೆದಿರುವುದು ಅದರ ಅಪರೂಪತೆ ಮತ್ತು ಉನ್ನತಸ್ಥಾನವನ್ನು ಸೂಚಿಸುತ್ತದೆ. ಈ ಕಾರಣದಿಂದಲೇ ಅನ್ನದೇವರ ಮುಂದೆ ಇನ್ನು ದೇವರಿಲ್ಲ ಎಂದು ಹೇಳಲಾಗುತ್ತದೆ. ಒಟ್ಟಿನಲ್ಲಿ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವು ಬಹುಮುಖ್ಯವಾದದ್ದು. ಆಹಾರವಿಲ್ಲದೆ ಜಗತ್ತಿನ ಯಾವೊಂದು ಜೀವಿಯು ಸಹ ಜೀವಂತವಾಗಿರಲಾರದು.

ಆದ ಕಾರಣ ಪ್ರಾದೇಶಿಕ ಪರಿಸರದಲ್ಲಿ ತಾವು ಬೆಳೆಯುವ ಧಾನ್ಯಗಳನ್ನು ಬಳಸಿಕೊಂಡು ಆಹಾರವನ್ನು ತಯಾರಿಸುವ ರೀತಿ–ನೀತಿಗಳು, ವೈವಿಧ್ಯ–ವೈಶಿಷ್ಟ್ಯಗಳು ಅಂದಿನಿಂದ ಇಂದಿನವರೆಗೆ ಜೀವಂತವಾಗಿಯೇ ಮುಂದುವರೆಯುತ್ತಿವೆ. ಕಾಲಗತಿಯಲ್ಲಿ ಅನೇಕ ರುಚಿಗಳ ಆವಿಷ್ಕಾರವಾದರೂ ಸಹ ತಮ್ಮ ಸಾಂಪ್ರದಾಯಿಕ ಅಡುಗೆ ಪದ್ಧತಿಯನ್ನು ಕೈಬಿಡದೆ ಮುಂದುವರೆಸಿಕೊಂಡು ಬರಲಾಗಿದೆ, ಸಾಂಪ್ರದಾಯಿಕ ಆಡುಗೆ ಪದ್ಧತಿಯು ಸಹ ತನ್ನ ತನವನ್ನು ಬಿಡದೆ ಸುಭದ್ರವಾಗಿ ಜನಮಾನಸದಲ್ಲಿ ನೆಲೆಯಾಗಿ ನಿಂತಿದೆ.

ಜಾತಿಗಳ ಆಧಾರದಿಂದಲೂ ಸಾಂಪ್ರದಾಯಿಕ ಅಡುಗೆಪದ್ಧತಿಯನ್ನು ಗುರುತಿಸಬಹುದು ಎನ್ನುವಷ್ಟರಮಟ್ಟಿಗೆ ನಮ್ಮ ನಾಡಿನಲ್ಲಿ ಅಡುಗೆ ಪದ್ಧತಿಯು ವಿಶೇಷವೂ, ವ್ಯಾಪಕವೂ ಆಗಿ ಬೆಳೆದು ನಿಂತಿದೆ. 'ಗೌಡ ಗದ್ದೆಗೆ, ಗೌಡ್ತಿ ಮುದ್ದೆಗೆ' ಎಂಬ ಗಾದೆಯು ಇವರ ಆಹಾರ ಕ್ರಮವನ್ನು ತಿಳಿಸಿದರೆ, 'ಗೂಳೂರು ಗಟ್ಟಿ ಏಳೂರು ಅನ್ನ ಕೆಡಿಸ್ತು' ಎಂಬ ಗಾದೆಯು ವಿಭೂತಿಯನ್ನು ಧರಿಸಿ ಊಟ ಸಿಗದ ವ್ಯಕ್ತಿ ಪಟ್ಟ ಪಾಡನ್ನು ತಿಳಿಯಪಡಿಸುತ್ತದೆ.

ಆಹಾರವು ವಿವಿಧ ಜನರ ನಡುವಿನ ಅಂತರ್ ಸಂಬಂಧಗಳನ್ನು ನಿರ್ಧರಿಸುವಲ್ಲಿ ಪ್ರಮುಖಪಾತ್ರವಹಿಸುತ್ತದೆ. ಆಹಾರ ಸ್ವೀಕಾರಕ್ಕೆ ಸಂಬಂಧಿಸಿದ ಕಠಿಣ ನಿಯಮಗಳು ಇಂದು ಬಹುಮಟ್ಟಿಗೆ ಸಡಿಲವಾಗಿದ್ದರೂ, ಸಂಪ್ರದಾಯಬದ್ಧ ಕುಟುಂಬಗಳು ಆಹಾರ ಸಂಬಂಧಿ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಆಚರಿಸುವುದನ್ನು ಇಂದಿಗೂ ಕಾಣಬಹುದು. ಜೈನಧರ್ಮದ ಹಿನ್ನೆಲೆ ಮತ್ತು ಪ್ರಭಾವದಿಂದ ಬಂದ ಸಾದರು ಶುದ್ಧ ಸಸ್ಯಾಹಾರವನ್ನು ಸ್ವೀಕರಿಸುವವರಾಗಿದ್ದು, ಇತರೆ ಜನರಿಂದ ಆಹಾರವನ್ನು ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಹಲವು ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಇಂದಿಗೂ ಸಾದರಲ್ಲಿ ಕಾಣಬಹುದು. ಈ ನಿರ್ಬಂಧಗಳು ತಮ್ಮ ಜಾತಿಯ ಪರಿಶುದ್ಧತೆಯನ್ನು ಕಾಪಾಡುವ ದೃಷ್ಟಿಯಿಂದ ಸಮರ್ಥನೀಯ ಎಂಬುದು ಸಾದರ ಹಿರಿಯರ ವಾದ.

ಆದರೆ ಆಹಾರದ ಸ್ವೀಕಾರಕ್ಕೆ ಸಂಬಂಧಿಸಿದ ನಿರ್ಬಂಧಗಳು ಇಂದು ಸಡಿಲಗೊಳ್ಳುತ್ತಿವೆ. ಹೋಟೆಲುಗಳಲ್ಲಿ ಉಪಹಾರವನ್ನೋ, ಭೋಜನವನ್ನೋ ತೆಗೆದುಕೊಳ್ಳುವುದು ಅನೇಕ ಜನರಿಗೆ ಅನಿವಾರ್ಯವಾಗಿರುವಂತಹ ಸಂದರ್ಭದಲ್ಲಿ ಕಠಿಣ ನಿಲುವುಗಳನ್ನು ಬಿಡಬೇಕಾಗಿದೆ. ನಗರಗಳಲ್ಲಂತೂ ಜಾತಿಸಂಬಂಧಿ ನಿರ್ಬಂಧಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ಆಚರಿಸುವುದು ಬಹುಮಟ್ಟಿಗೆ ಕಡಿಮೆಯಾಗಿದೆ. ಆಧುನೀಕರಣದ ಪ್ರಭಾವದಿಂದಲೋ, ಸ್ವತಃ ಇಂತಹ ಅರ್ಥಹೀನ ಸಂಪ್ರದಾಯಗಳ ಬಗ್ಗೆ ಇರುವ ಜಿಗುಪ್ಸೆಯಿಂದಲೋ, ಮಾನವೀಯ ಮೌಲ್ಯಗಳಿಗೆ ತಾವು ನೀಡುವ ಪ್ರಾಶಸ್ತ್ಯದಿಂದಲೋ, ಸಾದರ ಹಲವರು ಸಂಕುಚಿತ ಭಾವನೆಗಳನ್ನು ಮೆಟ್ಟಿ ನಿಂತಿದ್ದಾರೆ. ಅದ್ಯಾಗೂ ಇಂದಿಗೂ ಆಹಾರಸಂಬಂಧಿ ನಿರ್ಬಂಧಗಳನ್ನು ಪಾಲಿಸುವವರನ್ನು ಸಾದರಲ್ಲಿ ಗಮನಿಸಬಹುದು.

ಸಾದರು ಶುದ್ಧ ಸಸ್ಯಾಹಾರಿಗಳಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಹಾಲು, ಹಣ್ಣು, ಗೆಡ್ಡೆ-ಗೆಣಸು ಮುಂತಾದವನ್ನು ಸೇವಿಸುತ್ತಾರೆ. ಈ ಬಗೆಯ ಆಹಾರಗಳು ಶುದ್ಧವಷ್ಟೇ ಅಲ್ಲ ಸಾತ್ವಿಕ ಗುಣಗಳನ್ನು ಬೆಳೆಸುತ್ತವೆ ಎಂಬುದು ಇವರ ವಾದವಾಗಿದೆ. ಅಷ್ಟೇ ಅಲ್ಲದೆ ಆ ಆಹಾರದಲ್ಲಿನ ಗುಣಗಳು ಅವರ ನಡೆ, ನುಡಿಗಳು, ಜೀವನಶೈಲಿಯನ್ನು ಪ್ರಭಾವಿಸುತ್ತವೆ ಎಂದೇ ಹೇಳಬಹುದು.

ನೆಲಮೂಲ ಸಂಸ್ಕೃತಿಯ ಆರಾಧಕರೂ, ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಹೊಂದಿರುವವರೂ ಆದ ಸಾದರು ಹಗಲಿರುಳೆನ್ನದೆ ಹೊಲ-ಗದ್ದೆಗಳಲ್ಲಿ ಶ್ರಮವಹಿಸಿ ದುಡಿದು ಬೆಳೆಯನ್ನು ಬೆಳೆದು ಕಣದಲ್ಲಿ ರಾಶಿ ಮಾಡಿ, ಧಾನ್ಯಗಳ ಗುಡ್ಡೆಯ ಸುತ್ತಲೂ ಹುಲುಸಿಟ್ಟು ತದನಂತರ

ಆ ಧಾನ್ಯದಲ್ಲಿ ಮೊದಲು ದೇವಗೊಳಗ, ಧರ್ಮಗೊಳಗ ಮತ್ತು ಆಯಗಾರರಿಗೆ ತೆಗೆದು ಮಿಕ್ಕ-ಉಳಿದ ಧಾನ್ಯವನ್ನು ತಮ್ಮ ಬಳಕೆಗೆ ಇರಲಿ ಎಂದು ಶೇಖರಿಸುತ್ತಾರೆ.

ಆಹಾರ ಸಾಮಾಗ್ರಿಗಳ ಸಂಗ್ರಹಣ ವಿಧಾನಗಳು:-

ಸಾದರು ತಾವು ಬೆಳೆದ ಧಾನ್ಯಗಳನ್ನು ಕಣಜ, ಹಗೇವು, ವಾಡೆ, ಇತ್ತೀಚಿನ ದಿನಗಳಲ್ಲಿ ಚೀಲಗಳಲ್ಲಿ ಸಂಗ್ರಹಿಸಿ ಇಡುತ್ತಾರೆ.

ಕಣಜ:-

ಮನೆಯನ್ನು ನಿರ್ಮಿಸುವಾಗಲೇ ಮನೆಯ ಒಂದು ಕೋಣೆಯಲ್ಲಿ ಕಣಜವನ್ನು ನಿರ್ಮಿಸುತ್ತಾರೆ. ಇದು ಚೌಕಾಕಾರದಲ್ಲಿರುತ್ತದೆ. ಕಲ್ಲು ಅಥವಾ ಇಟ್ಟಿಗೆಯಿಂದ ಒಂದು ನಿರ್ದಿಷ್ಟ ಸ್ಥಳದಲ್ಲಿ ಕಣಜವನ್ನು ನಿರ್ಮಾಣಮಾಡಲಾಗುತ್ತದೆ. ಕಣಜದ ಒಂದು ಮೂಲೆಯಲ್ಲಿ ಬಾಗಿಲನಿಟ್ಟಿರುತ್ತಾರೆ. ಇದರಿಂದ ಧಾನ್ಯವನ್ನು ಹೊರ ತೆಗೆದುಕೊಳ್ಳಬಹುದು. ಕಣಜದ ಮೇಲ್ಭಾಗವನ್ನು ಕಲ್ಲುಚಪ್ಪಡಿಯಿಂದ ಮುಚ್ಚಿರುವುದರಿಂದ ಇದು ಸಾಮಾನ್ಯ ಕೋಣೆಯಂತಿರುತ್ತದೆ. ಕಣಜವು ಧೀರ್ಘಾಯಸ್ಸು ಉಳ್ಳದ್ದು, ಮನೆಯಷ್ಟೇ ಧೀರ್ಘಕಾಲ ಇದು ಬಾಳಿಕೆ ಬರುತ್ತದೆ. ರೈತರು ತಾವು ಬೆಳೆಯುವ ಧಾನ್ಯದ ಪ್ರಮಾಣಕ್ಕುಗುಣವಾಗಿ ಕಣಜವನ್ನು ನಿರ್ಮಿಸಿಕೊಳ್ಳುತ್ತಾರೆ. ಅವಿಭಕ್ತ ಕುಟುಂಬಗಳಲ್ಲಿ ಎರಡು-ಮೂರು ಕಣಜಗಳನ್ನು ನಿರ್ಮಿಸಿಕೊಂಡಿರುವುದು ಉಂಟು. ಧಾನ್ಯವನ್ನು ಹೊರತೆಗೆದುಕೊಳ್ಳುವಾಗ ಕಣಜದ ಮುಚ್ಚಿದ ಬಾಗಿಲನ್ನು ಸ್ವಲ್ಪ ಹೊತ್ತು ತೆರೆದು ನಂತರ ಅದರಲ್ಲಿನ ಧಾನ್ಯವನ್ನು ಹೊರತೆಗೆಯಬೇಕಾಗುತ್ತದೆ. ಏಕೆಂದರೆ ಕಣಜದಲ್ಲಿ ವಾಯುಸಂಚಾರಕ್ಕೆ ಸ್ಥಳವಿರುವುದಿಲ್ಲವಾದ ಕಾರಣ ಬಾಗಿಲು ತೆರೆದ ತಕ್ಷಣ ಒಳಪ್ರವೇಶಿಸಿದರೆ ಉಸಿರು ಕಟ್ಟಿದ ವಾತಾವರಣ ನಿರ್ಮಾಣವಾಗುತ್ತದೆ. ಆದರೆ ಕಣಜದಲ್ಲಿನ ಧಾನ್ಯಗಳು ವರ್ಷಾನುಗಟ್ಟಲೇ ಕೆಡದಂತೆ ಸುಕ್ಷೇಮವಾಗಿರುತ್ತವೆ.

ಹಗೇವು:-

ಆಹಾರ ಸಾಮಗ್ರಿಗಳ ಶೇಕರಣಾ ಸಾಧನಗಳಲ್ಲಿ ಹಗೇವು ಪ್ರಮುಖವಾದದ್ದು. ಹಗೇವನ್ನು ಹೊಲಗದ್ದೆಗಳು, ಮನೆಯ ಅಂಗಳ, ಹಿತ್ತಲುಗಳಲ್ಲಿ ಗುಂಡಾಕಾರದಲ್ಲಿ ದೊಡ್ಡ ಗುಳಿಯನ್ನು ತೆಗೆಸಿ ಅದರ ಒಳಾಂಗಣವನ್ನು ಕೆಬ್ಬೆಮಣ್ಣು ಅಥವಾ ಜೇಡಿಮಣ್ಣಿನಿಂದ ಸಾರಿಸಿ ಅದು ಒಣಗಿದ ನಂತರ ಅದರಲ್ಲಿ ರಾಗಿ, ಭತ್ತವನ್ನು ತುಂಬಿ ಮೇಲೆ ಸೊಪ್ಪು-ಸೆದೆಯಿಂದ ಮುಚ್ಚಿ ಅದರ ಮೇಲೆ ಮಣ್ಣನ್ನು ಹಾಕಿ ಏನೂ ಇಲ್ಲವೆಂಬಂತೆ ಹಗೇವಿನ ಮೇಲೆ ಬೆಳೆ ಬೆಳೆಯುತ್ತಾರೆ. ತಮಗೆ ಧಾನ್ಯ ಬೇಕೆಂದಾಗ ಹಗೇವನ್ನು ತೆರೆದು ಒಂದೆರಡು ಗಂಟೆಗಳನ್ನು ಬಿಟ್ಟು ತದನಂತರ ಅದರಲ್ಲಿನ ಧಾನ್ಯಗಳನ್ನು ತೆಗೆದು ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ ಹಗೇವಿನ ಬಾಯನ್ನು ಕಲ್ಲುಚಪ್ಪಡಿಯಿಂದ ಮುಚ್ಚಿ ಮೇಲೆ ಮಣ್ಣನ್ನು ಹಾಕಲಾಗಿರುತ್ತದೆ. ಕೆಲವೊಮ್ಮೆ ಅತೀವೃಷ್ಟಿಯಿಂದಾಗಿ ಹಗೇವಿನಲ್ಲಿ ನೀರು ನುಗ್ಗಿ ದವಸ ಧಾನ್ಯ

ಹಗೇವನ್ನು ತೆರೆದು ಒಂದೆರಡು ಗಂಟೆಗಳನ್ನು ಬಿಟ್ಟು ತದನಂತರ ಅದರಲ್ಲಿನ ಧಾನ್ಯಗಳನ್ನು ತೆಗೆದು ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ ಹಗೇವಿನ ಬಾಯನ್ನು ಕಲ್ಲುಚಪ್ಪಡಿಯಿಂದ ಮುಚ್ಚಿ ಮೇಲೆ ಮಣ್ಣನ್ನು ಹಾಕಲಾಗಿರುತ್ತದೆ. ಕೆಲವೊಮ್ಮೆ ಅತೀವೃಷ್ಟಿಯಿಂದಾಗಿ ಹಗೇವಿನಲ್ಲಿ ನೀರು ನುಗ್ಗಿ ದವಸ ಧಾನ್ಯ ನಾಶವಾದ ನಿದರ್ಶನಗಳನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ. ಮತ್ತೆ ಕೆಲವೊಮ್ಮೆ ನಾಲ್ಕೈದು ವರ್ಷಕಳೆದರು ಹಗೇವನ್ನು ತೆರೆಯದೆ, ತದನಂತರ ಹಗೇವಿನಲ್ಲಿ ಬಿಟ್ಟ ರಾಗಿಯನ್ನು ಗೊಬ್ಬರವಾಗಿ ಮತ್ತೆ ಹೊಲಕ್ಕೆ ಹಾಕಿದ ಸಮೃದ್ಧಕಾಲವನ್ನು ನೆನಪಿಸಿಕೊಳ್ಳುತ್ತಾರೆ ಸಾದರ ಹಿರಿಯರು.

ವಾಡೆ:–

ಕುಂಬಾರರು ಮಣ್ಣಿನಿಂದ ವಾಡೆಯನ್ನು ತಯಾರಿಸುತ್ತಾರೆ. ಸುಮಾರು ನೂರು ಇನ್ನೂರು ಸೇರುಗಳಷ್ಟು ಧಾನ್ಯವನ್ನು ವಾಡೆಗಳಲ್ಲಿ ತುಂಬಬಹುದು. ಒಂದೇ ದೊಡ್ಡ ವಾಡೆಯು ಇರುತ್ತದೆ. ಕೆಲವೊಮ್ಮೆ ಬಳೆಯಾಕಾರದ ಎರಡರಿಂದ ನಾಲ್ಕೈದು ಬಿಡಿ ಭಾಗಗಳಿರುತ್ತವೆ. ವಾಡೆಯ ಕೆಳಭಾಗ ಮತ್ತು ಮೇಲುಭಾಗ ಕಿರಿದಾಗಿದ್ದು ಮಧ್ಯದ ಭಾಗ ಹಿರಿದಾಗಿರುತ್ತದೆ. ಬಳೆಯಾಕಾರದ ಭಾಗಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ಅಂಟು ಹಾಕಿ ಮೇಲು ತುದಿಯಲ್ಲಿ ಕೆಲವೊಮ್ಮೆ ವಾಡೆಯ ಕೆಳಭಾಗದಲ್ಲಿ ಕೈ ಹಾಕಿ ಧಾನ್ಯ ತೆಗೆದುಕೊಳ್ಳುವಷ್ಟು ಜಾಗವನ್ನು (ಬಾಯಿ) ಬಿಟ್ಟಿರುತ್ತಾರೆ. ವಾಡೆಯ ಬಾಯನ್ನು ನೆಲ್ಲುಹುಲ್ಲಿನಿಂದ ಮುಚ್ಚಿ ಗೋಣಿ ತಾಟನ್ನು ಹಾಸಿ ಸಗಣಿ ಮೆತ್ತುತ್ತಾರೆ.

ಹೀಗೆ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಹಲವು ವಿಧಾನಗಳು ಸಾದರಲ್ಲಿ ಈಗಲೂ ಬಳಕೆಯಲ್ಲಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಗೋಣಿ ಚೀಲ ಮತ್ತು ಪ್ಲಾಸ್ಟಿಕ್ ಚೀಲಗಳಲ್ಲಿ ಧಾನ್ಯಗಳನ್ನು ಶೇಖರಿಸುವುದನ್ನು ಗಮನಿಸಬಹುದು. ತರಕಾರಿ, ಹಣ್ಣು, ಹಂಪಲುಗಳನ್ನು ಶೇಖರಿಸಲು ಕೃಷಿ ಉತ್ಪನ್ನ ಮಾರುಕಟ್ಟೆಗಳು, ಶೈತ್ಯಾಗಾರಗಳನ್ನು ನಿರ್ಮಿಸಿದ್ದಾರೆ. ರೈತರಿಂದ ನಿರ್ದಿಷ್ಟ ಕಾಲಾವಧಿಗೆ ಬಾಡಿಗೆಯನ್ನು ಪಡೆದು ಶೈತ್ಯಾಗಾರದಲ್ಲಿ ತಮ್ಮ ವಸ್ತುಗಳನ್ನಿಡಲು ಅವಕಾಶಮಾಡಿಕೊಡಲಾಗುತ್ತದೆ. ಅಷ್ಟೇ ಅಲ್ಲದೆ ಉಗ್ರಾಣಗಳ ನಿರ್ಮಾಣಕ್ಕಾಗಿಯೇ ಭಾರತ ಸರ್ಕಾರ "Food Corporation of India" (ರಾಜ್ಯ ಉಗ್ರಾಣ ನಿಗಮ) ಸಂಸ್ಥೆಯನ್ನು ಸ್ಥಾಪಿಸಿದೆ.

ಅಡುಗೆ ಮನೆ:–

ಸಾದರಲ್ಲಿ ಅಡುಗೆ ಮನೆಗೆ ತನ್ನದೇ ಆದ ಪಾವಿತ್ರ್ಯವಿದೆ. ದೇವರ ಮನೆಯ ನಂತರ ಅತಿ ಹೆಚ್ಚು ಪಾವಿತ್ರ್ಯತೆಯನ್ನು ಪಡೆಯುವ ಸ್ಥಳ ಅಡುಗೆ ಮನೆ. ಇದು ಮನೆಯ ಅಗ್ನಿಮೂಲೆಯಲ್ಲಿರುತ್ತದೆ. ಯಾರೇ ಬಂದರು ತಕ್ಷಣ ಅಡುಗೆ ಮನೆ ಕಾಣದಂತೆ ಇದನ್ನು ರೂಪಿಸಲಾಗಿರುತ್ತದೆ. ಅನ್ಯಜಾತಿಯವರಷ್ಟೇ ಅಲ್ಲದೇ ತಮ್ಮ ಜಾತಿಯವರೂ ಸಹ ನೇರ ಅಡುಗೆಮನೆಯನ್ನು ಪ್ರವೇಶಿಸುವಂತಿಲ್ಲ. ಮನೆಯಲ್ಲಿನ ಸದಸ್ಯರೂ ಸಹ ಕೈ, ಕಾಲು ತೊಳೆಯದೆ ಅಡುಗೆ ಮನೆಗೆ ಬರುವಂತಿಲ್ಲ. ಕೆಲವೊಮ್ಮೆ ಖಾಯಿಲೆ–ಕಸಾಲೆಗೆ ತುತ್ತಾದವರೂ ಸಹ ಬರುವಂತಿಲ್ಲ.

ಮಹಿಳೆಯರಿಗೆ ಅಡುಗೆ ಮನೆ ಬಗ್ಗೆ ವಿಶೇಷ ಆಸಕ್ತಿ. ಬಹಳ ಭಯ, ಭಕ್ತಿ, ಗೌರವಗಳಿಂದ ಕಾಣುತ್ತಾರೆ. ಬೆಳಗ್ಗೆ ಎದ್ದ ಕೂಡಲೆ ಅಡುಗೆ ಮನೆಯನ್ನು ಸಾರಿಸಿ ಒಲೆಗೆ ನಮಸ್ಕರಿಸುತ್ತಾ ಬೆಂಕಿಯನ್ನು ಹಾಕುತ್ತಾರೆ. ಬಹುತೇಕ ಸಾದರ ಮನೆಗಳಲ್ಲಿ ಮೂಗೊಲೆಯನ್ನು ಗಮನಿಸಬಹುದು. ಇದರಲ್ಲಿ ಮೂರು ಒಲೆಗಳಿದ್ದು ಒಂದೇ ದ್ವಾರದಿಂದ ಉರಿಯನ್ನು ಹಾಕಿದರೆ ಉರಿಯು ಮೂರು ಕಡೆಗೂ ತಲುಪುತ್ತದೆ. ಎರಡು ಕಡೆಗಳಲ್ಲಿ ಅಡುಗೆ ಮಾಡುತ್ತಾ ಒಂದು ಕಡೆ ದೊಡ್ಡ ಅರವಿಯಲ್ಲಿ ನೀರನ್ನು ಇಟ್ಟಿರುತ್ತಾರೆ. ಇದರಲ್ಲಿ ಹೊರಗಿನಿಂದ ಹೊಲ–ಗದ್ದೆಗಳಲ್ಲಿ ದುಡಿದು, ದಣಿದು ಬಂದವರು ಕೈ–ಕಾಲು ತೊಳೆಯಲು ಸದಾಕಾಲವೂ ಬಿಸಿನೀರಿರುತ್ತದೆ. ಮತ್ತೆರೆಡು ಕಡೆ ಅನ್ನ, ಸಾರು ಪಲ್ಯಗಳನ್ನು ತಯಾರಿಸಿಕೊಳ್ಳುವ ಸೌಲಭ್ಯವಿರುತ್ತದೆ. ಒಮ್ಮೊಮ್ಮೆ ಬೇಸಿಗೆಯ ಸಮಯದಲ್ಲಿ ಮನೆಯ ಅಂಗಳದಲ್ಲಿ ಮೂರು ಕಲ್ಲಿಟ್ಟು ಕಲ್ಲಿನ ಒಲೆಯನ್ನು ನಿರ್ಮಿಸಿ ಅದರಲ್ಲಿಯೇ ಅಡುಗೆ ಮಾಡುತ್ತಾರೆ.

ಇನ್ನು ನೂರಾರು ಜನರಿಗೆ ಅಡುಗೆ ಮಾಡುವಾಗ ಸಾರೊಲೆ (ಮಣ್ಣೊಲೆ), ತಯಾರಿಸುತ್ತಾರೆ. ಇದನ್ನು ಮನೆಯ ಅಂಗಳ ಅಥವಾ ಹೊಲ ಗದ್ದೆಯಲ್ಲಿ ಮಣ್ಣನ್ನು ಹೋಣಿಯಂತೆ ತೆಗೆದು ಅದರಲ್ಲಿ ಉರಿಯನ್ನಿಟ್ಟು ಅದರ ಮೇಲೆ ಕೊಳಗಗಳಿಂದ ಅಡುಗೆ ಮಾಡುತ್ತಾರೆ. ಧಾನ್ಯಗಳ ಕೊಯ್ಲು ಮಾಡುವಾಗ ಹೊಲದ ದೇವರನ್ನು ಮಾಡುತ್ತಾರೆ. ಇದನ್ನು ಮುನಿಯಪ್ಪನನ್ನು ಮಾಡುವುದು ಎಂದು ಕರೆಯುತ್ತಾರೆ. ಅಂತಹ ಸಮಯದಲ್ಲಿ ಹೋಣಿಯಾಕಾರದ ಸಾರೊಲೆಯಲ್ಲಿಯೇ ಅಡುಗೆ ಮಾಡುತ್ತಾರೆ.

ಹೀಗೆ ಮಣ್ಣು ಒಲೆಯನ್ನು ಮಾಡಿ ಅದನ್ನು ಸಗಣಿಯಿಂದ ಸಾರಿಸಿ ಅದಕ್ಕೆ ಅರಿಶಿನ, ಕುಂಕುಮವನ್ನಿಟ್ಟು ಮನೆದೇವರನ್ನು ನೆನೆದು ತದನಂತರವೇ ಆ ಒಲೆಯಲ್ಲಿ ಬೆಂಕಿಯನ್ನು ಹಾಕುತ್ತಾರೆ.

ಇನ್ನು ಅಡುಗೆ ಮನೆಯಲ್ಲಿ ಹಸೆಕಲ್ಲು, ರುಬ್ಬುವಗುಂಡು, ಒಳಕಲ್ಲುಗಳಿರುತ್ತವೆ,. ಇವು ಅಡುಗೆ ತಯಾರಿಕೆಯಲ್ಲಿ ಪ್ರಮುಖಪಾತ್ರ ವಹಿಸುತ್ತವೆ. ಇವರಲ್ಲಿ ಹಸೆಕಲ್ಲಿನ ಬಗ್ಗೆ ಸಾಕಷ್ಟು ನಂಬಿಕೆಯಿದೆ. ಹಸೆಕಲ್ಲನ್ನು ಯಾರೂ ತುಳಿಯಬಾರದು. ಅದು ದೇವರಿದ್ದಂತೆ ಎನ್ನುತ್ತಾರೆ. ಯಾವುದೇ ಕಾರಣಕ್ಕೂ ಅದು ಬೋರಲು ಬೀಳಬಾರುದು. ಅಡುಗೆ ಮನೆಯಲ್ಲಿ ಹಸೆಕಲ್ಲನ್ನು ಹೂಳುವಾಗಲೇ ಅದರ ಅಡಿಯಲ್ಲಿ ಪಂಚಲೋಹವನ್ನಿಡುತ್ತಾರೆ. ಇದರಿಂದ ಮನೆಯಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ ಎಂಬುದು ಇವರ ನಂಬಿಕೆ. ಸ್ವಲ್ಪವೂ ಮುಕ್ಕಾಗಿರದ, ಛಿದ್ರವಾಗಿರದ ನಾಲ್ಕು ಮೂಲೆಯೂ ಹಸನಾಗಿರುವ ಹಸೆಕಲ್ಲನ್ನು ಬಳಸುತ್ತಾರೆ. ಇವರು ಅಡುಗೆ ಸಾಮಾಗ್ರಿಗಳಾಗಿ ಮಣ್ಣಿನ ಮಡಕೆಗಳು, ಬಿದಿರಿನ ಸಿಬ್ಬು, ಹಿತ್ತಾಳೆ, ತಾಮ್ರ, ಕಂಚು ಮತ್ತು ಇತ್ತೀಚಿನ ದಿನಗಳಲ್ಲಿ ಸ್ಟೀಲ್ ಪಾತ್ರಗಳನ್ನು ಬಳಸುತ್ತಾರೆ.

ಅಡುಗೆ:–

ಜೈನ ಧರ್ಮದ ಹಿನ್ನೆಲೆ ಮತ್ತು ಪ್ರಭಾವದಿಂದ ಬಂದಿರುವ ಸಾದರು ಶುದ್ಧ ಸಸ್ಯಾಹಾರಿಗಳು 'ಕಾಳು ಕೂಡಿಕ್ಕು, ಕೂಳು ಚೆಲ್ಲಾಡು' ಎಂಬ ಗಾದೆಯಂತೆ ಕೃಷಿಕರಾದ ಸಾದರು ಶ್ರಮವಹಿಸಿ ದುಡಿದ

ದುಡಿಮೆ ಎಲ್ಲವನ್ನು ತಾವೇ ತಿನ್ನದೆ ಹಂಚಿ ತಿನ್ನುವ ಮನೋಭಾವದವರು, ಅಷ್ಟೇ ಅಲ್ಲದೇ 'ತುಸ ತಿಂದ್ರು ಕಸ ತಿನ್ನಬಾರದು' ಎಂಬಂತೆ ತುಂಬ ರುಚಿಕರವಾದ ಆಹಾರವನ್ನು ತಯಾರಿಸುವಲ್ಲಿ ನಿಪುಣರೆಂದೇ ಹೇಳಬಹುದು.

ಸಾದರ ಅಡುಗೆ ಪದ್ಧತಿಯು ತನ್ನದೇ ಆದ ರುಚಿ, ಶುಚಿಯನ್ನು ಹೊಂದಿದ್ದು, ವೈವಿಧ್ಯತೆಯಿಂದ ಕೂಡಿದೆ. ಇವರ ಅಡುಗೆ ತಯಾರಿಕೆಯ ವಿಧಾನವನ್ನು ಉಪಹಾರ, ಊಟ, ಪಾನೀಯ ಎಂಬುದಾಗಿ ಮೂರು ಬಗೆಯಾಗಿ ವಿಂಗಡಿಸಬಹುದು. ಆಹಾರ ವಿಧಾನದಲ್ಲಿ ಸಾಮಾನ್ಯ ಅಡುಗೆ, ಹಬ್ಬದ ಅಡುಗೆಗಳುಂಟು. ಇವರ ಅಡುಗೆಯಲ್ಲಿ ಪ್ರಮುಖ ಸ್ಥಾನ ಪಡೆದಿರುವುದು ಮುದ್ದೆ, ಅನ್ನ, ರೊಟ್ಟಿ, ಅವಲಕ್ಕಿ, ಸೊಪ್ಪಿನ ಸಾರು, ಮೊಳಕೆಕಾಳಿನ ಸಾರು, ಅದರಲ್ಲಿಯೂ ಮುದ್ದೆಗೆ ಹೆಚ್ಚಿನ ಪ್ರಾಶಸ್ತ್ಯ. 'ಹೊಲ-ಗದ್ದೆಗಳಲ್ಲಿ ದುಡಿಯೊ ಮಂದಿ ನಾವು ಮುದ್ದೆ ಬಿಟ್ರೆ ಮುಂದೆ ಗತಿ ಏನು? ಬಿಸಿ ಮುದ್ದೆ ಸಪ್‌ನೀರ್ ತಿಂದ್ರೆ ಎಂಥ ಜ್ವರಾನೂ ಕ್ಷಣಾರ್ಧದಲ್ಲಿ ಬಿಟ್ಹೋಗ್ದೇ ಏನ್ ಮಾಡೀತು' ಎಂಬುದು ಸಾದರ ಹಿರಿಯರ ಅಭಿಪ್ರಾಯ. 'ಹಿಟ್ಟಂ ತಿಂದಂ ಬೆಟ್ಟಂ ಕಿತ್ತಂ' ಎನ್ನುತ್ತಾರೆ ಸಾದರು.

<u>ರಾಗಿ ಮುದ್ದೆ:-</u>

'ಗೌಡ ಗದ್ದೆಗೆ, ಗೌಡ್ತಿ ಮುದ್ದೆಗೆ' ಎಂಬುದು ಸಾದರಲ್ಲಿರುವ ಜನಪ್ರಿಯ ಗಾದೆ ಮಾತು. 'ರಾಗಿ ತಿನ್ನೋರ್ಗೆ ರೋಗಾನೇ ಇಲ್ಲ' ಎಂಬುದು ಇವರ ಅಭಿಪ್ರಾಯ. ತುಮಕೂರು ಪ್ರಾದೇಶಿಕ ಪರಿಸರದಲ್ಲಿ ಮುದ್ದೆಗೆ ಬದಲು 'ಹಿಟ್ಟು' ಎಂಬ ಪದವನ್ನು ಬಳಸುತ್ತಾರೆ. 'ಹಿಟ್ಟಂ ತಿಂದಂ ಬೆಟ್ಟಂ ಕಿತ್ತಂ, ಬಿಟ್ಟಂ ಕೆಟ್ಟಂ' ಎಂಬ ಮಾತು ಹಿಟ್ಟಿನ ಮಹತ್ವ ಎಂತಹದ್ದೆಂಬುದನ್ನು ಧ್ವನಿಸುತ್ತದೆ. ಕನಕದಾಸರು ರಚಿಸಿರುವ ರಾಮಧಾನ್ಯಚರಿತೆಯಲ್ಲಿ ರಾಗಿ ಮತ್ತು ಭತ್ತದ ವಾದ-ವಿವಾದವನ್ನು ಇದೇ ಹಿನ್ನೆಲೆಯಲ್ಲಿಯೇ ಚರ್ಚಿಸಿದ್ದಾರೆ.

ಬಹುಜನರಿಗೆ ಪ್ರಿಯವಾದ, ರೋಗ-ರುಜಿನೆಗಳಿಗೆ ಎಡೆ ಕೊಡದೆಯಿರುವುದು ಮುದ್ದೆ. ಮುದ್ದೆಯನ್ನು ತಯಾರಿಸುವುದು ಬಹುಸುಲಭದ ಕಾರ್ಯ. ಹಿಟ್ಟು ಅಥವಾ ಮುದ್ದೆಯು ರಾಗಿಯಿಂದ ತಯಾರಾಗುವ ಪದಾರ್ಥವಾಗಿದ್ದು, ಪ್ರತಿಯೊಂದು ಮನೆಯಲ್ಲಿಯೂ ಆ ಮನೆಯ ಜನಸಂಖ್ಯೆಯಂತೆ ಹಿಟ್ಟಿನ ಮಡಕೆ ಅಥವಾ ತಪ್ಪಲೆ ಇರುತ್ತವೆ. ಅದನ್ನು ಒಲೆಯ ಮೇಲಿಟ್ಟು ಅಳತೆಯಂತೆ ನೀರು ಹಾಕಬೇಕು. ಈ ನೀರಿಗೆ ಸ್ವಲ್ಪ ಹಸಿಟ್ಟನ್ನು ಸುರಿದು ಚೆನ್ನಾಗಿ ಗಂಟಾಗದಂತೆ ಕದರಬೇಕು. ಹೀಗೆ ಕದರಿದ ನೀರು ಚೆನ್ನಾಗಿ ಕಾಯ್ದು ಉಕ್ಕಿಬರುತ್ತದೆ. ಆಗ ಈ ಕುದಿಯುವ ನೀರಿನಲ್ಲಿ ಸ್ವಲ್ಪವನ್ನು ಬಸಿದಿಡಬೇಕು. ಆ ನಂತರ ತಮಗೆ ಬೇಕಾದಷ್ಟು ಹಸಿಟ್ಟನ್ನು ಈ ಕುದಿಯುವ ನೀರಿಗೆ ಸುರಿದು, ನಂತರ ಹಿಟ್ಟಿನ ಕೋಲನ್ನು ತಪ್ಪಲೆಯಲ್ಲಿಟ್ಟು, ಕವೆಗೋಲಿನಿಂದ ತಪ್ಪಲೆ ಅಲಗದಂತೆ ಹಿಡಿದು ಕೋಲಿನಿಂದ ಹಸಿಟ್ಟು ಗಂಟಾಗದಂತೆ ತಿರುವಿ ನಂತರ ಅದನ್ನು ಬೇಯಲು ಬಿಡಬೇಕು. ಬೆಂದು ಹದವಾದ ಹಿಟ್ಟಿನ ಘಮಘಮಿಸುವ ವಾಸನೆ ಬರತೊಡಗಿದಾಗ ಹಿಟ್ಟಿನ ಮಡಕೆಯನ್ನು ಕೆಳಗೆ ಇಳುಕಿ ಹಸೆಕಲ್ಲಿನ ಪಕ್ಕದಲ್ಲಿ ಇಲುಕಿನ ಮೇಲೆ ಇಟ್ಟು ತಿರುವಿ ಹೊಂದಿಸಬೇಕು. ಏನಾದರೂ ಹಿಟ್ಟು

ಗಟ್ಟಿಯಾಯಿತೆಂದರೆ ಬಸಿದಿಟ್ಟ ಕುದಿಯನ್ನು ಹದವರಿತು ಸುರಿದು ಹೊಂದಿಸಿ ತದನಂತರ ತಮಗೆ ಬೇಕಾದ ಪ್ರಮಾಣದಲ್ಲಿ ಮುದ್ದೆ ಕಟ್ಟಬೇಕು. ಮುದ್ದೆಯ ಮಡಕೆಯನ್ನು ಮುಚ್ಚಿ ದೇವರೆ ಶಿವನೇ ಎನ್ನುತ್ತಾ ದೇವರ ನಾಮಸ್ಮರಣೆಯೊಂದಿಗೆ ಎತ್ತಿ ಇಡುತ್ತಾರೆ.

ಅನ್ನ:-

ಮುದ್ದೆಯ ನಂತರ ಸ್ಥಾನವನ್ನು ಪಡೆಯುವುದು ಅನ್ನ. ಭತ್ತವನ್ನು ಮಿಲ್ಲಿನಿಂದ ಅಕ್ಕಿ ಮಾಡಿಸಿ ತರುತ್ತಾರೆ. ಸಾದರು ಹಿಂದಿನಿಂದಲೂ ಸಣ್ಣಕ್ಕಿಯನ್ನು (ಸೋನಾಮಸೂರಿ) ಹೆಚ್ಚಿನ ಪ್ರಮಾಣದಲ್ಲಿ ಬಳಸುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಸಣ್ಣಕ್ಕಿ ಮನೆಯವರೆಂದೇ ಪ್ರಸಿದ್ಧಿ ಪಡೆದ ಸಾದರ ಹಿರಿಯರು ಗಂಗಸಂದ್ರ ಗ್ರಾಮದಲ್ಲಿರುವುದನ್ನು ಇಂದಿಗೂ ಕಾಣಬಹುದು. ಕಾಕತಾಳೀಯವೆಂಬಂತೆ ಬಹುತೇಕರು ಇಂದಿಗೂ ಸಣ್ಣಕ್ಕಿಯನ್ನೇ ಬೆಳೆಯುತ್ತಾರೆ, ಬಳಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಸಣ್ಣಕ್ಕಿ ಜೊತೆಗೆ ಹಂಸ, ದಡ್ಡಿಭತ್ತವನ್ನು ಬಳಸುತ್ತಾರೆ. ದಡ್ಡಿ ಭತ್ತವೂ ಸಹ ಬಹು ಹಿಂದಿನಿಂದಲೂ ಸಾದರಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಇನ್ನು ಅನ್ನ ಮಾಡುವುದು ಕಷ್ಟಸಾಧ್ಯ ಕೆಲಸವೇನು ಅಲ್ಲ. ತಮಗೆ ಬೇಕಾಗುವ ಪ್ರಮಾಣದ ಅನ್ನದ ಮಡಕೆ ಅಥವಾ ಪಾತ್ರೆಯನ್ನು ಒಲೆಯ ಮೇಲಿಡಬೇಕು. ಅಕ್ಕಿಯ ಪ್ರಮಾಣಕ್ಕನುಸಾರವಾಗಿ ನೀರು ಹಾಕಬೇಕು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಇಂಗಿಸುವ ಅನ್ನವಾದರೆ ನೀರು ಸರಿಯಾದ ಅಳತೆಗಿರಬೇಕು. ಬಸಿಯುವುದಾದರೆ ಅದು ಹೆಚ್ಚಿದ್ದರೂ ತೊಂದರೆಯಿಲ್ಲ. ಉದಾಹರಣೆಗೆ ಒಂದು ಸೇರು ಅಕ್ಕಿಗೆ ಎರಡು ಸೇರು ನೀರು ಹಾಕಿದರೆ ಅದು ಹದವಾಗಿ ಇಂಗಿ ಹದವಾದ ಅನ್ನವಾಗುತ್ತದೆ, ಬಸಿಯುವ ಅನ್ನವಾದರೆ ಒಂದು, ಅಗುಳು ತೆಗೆದು ಬೆಂದಿರುವುದನ್ನು ತಿಳಿದು ನಂತರ ಬಸಿದು ಪಾತ್ರೆಯನ್ನು ಮುಚ್ಚಿಡಬೇಕು. ಶಾಖಕ್ಕೆ ಅದು ಚೆನ್ನಾಗಿ ಅರಳಿ ಮೃದುವಾಗುತ್ತದೆ.

ಹಲಬಗೆಯ ಸಾರುಗಳು:-

ಸಾದರು ಪ್ರತಿನಿತ್ಯದ ಅಡುಗೆಯಲ್ಲಿ ಬಗೆ, ಬಗೆಯ ಸಾರುಗಳನ್ನು ಮಾಡುತ್ತಾರೆ. ಹೊಲ, ತೋಟ, ಬದು, ಬೀಳುಗಳಲ್ಲಿ ಬೆಳೆಯುವ ದಂಟಿನಸೊಪ್ಪು, ಕೀರೆಸೊಪ್ಪು, ಹನಗೊನೆಸೊಪ್ಪು, ಅಣ್ಣೆಸೊಪ್ಪು, ಗಣಿಕೆಸೊಪ್ಪು, ಮೆಂತ್ಯೆಸೊಪ್ಪು, ಕುಂಬಳ ಚಿಗುರು, ಕಾಚಮಾಚಿಸೊಪ್ಪು, ಅಗಸೆ ಸೊಪ್ಪು, ಟೊಮೆಟೋ, ಬದನೆಕಾಯಿ ಇವೆಲ್ಲವನ್ನು ಸೇರಿಸಿ ಮಾಡುವ 'ಹುಳಿಸೊಪ್ಪಿನ ಸಾರು' ಎಂಥವರೂ 'ಎರಡು ಮುದ್ದೆ ತಿನ್ನಬೇಕೆನ್ನಿಸುವಷ್ಟು' ರುಚಿಕರವಾಗಿರುತ್ತದೆ. ಅಷ್ಟೇ ಅಲ್ಲದೆ ಬೇಳೆಸಾರು, ಮಜ್ಜಿಗೆ ಸಾರು, ಮೊಳಕೆ ಕಾಳಿನ ಸಾರು, ಕಾಳಿನ ಹುಳಿ, ಬಸ್ಸಾರು, ಕೆತ್‌ಹಲಸಿನಕಾಯಿಸಾರು, ಅಷ್ಟೇ ಅಲ್ಲದೇ ಟೊಮೇಟೊ, ಬದನೆಕಾಯಿಯನ್ನು ಒಲೆಯಲ್ಲಿ ಸುಟ್ಟು ಅದಕ್ಕೆ ಸುಟ್ಟ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಸ್ವಲ್ಪ ಹುಣಸೆ ಹಣ್ಣು, ಬೆಳ್ಳುಳ್ಳಿಯನ್ನು ಹಾಕಿ ಬಜ್ಜಿ ಕಿವುಚಿದರೆ ಸರಳ ಸಾರಾದರೂ ರುಚಿ

ಅಮೋಘವಾದದ್ದು, ನೆನೆದವರ ಬಾಯಲ್ಲಿ ನೀರು ಖಚಿತ. ಹೀಗೆ ಇನ್ನೂ ಮುಂತಾದ ಬಗೆ ಬಗೆಯ ಸಾರುಗಳನ್ನು ಮಾಡುತ್ತಾರೆ.

ತಿಂಡಿಗಳು:–

ಸಾದರಲ್ಲಿ ಹಲಬಗೆಯ ತಿಂಡಿಗಳನ್ನು ಮಾಡುತ್ತಾರೆ. ಇವರಲ್ಲಿ ಹಿಂದೆ ಅಕ್ಕಿರವೆಯ ಉಪ್ಪಿಟ್ಟು ಮಾಡುತ್ತಾರೆಂದರೆ ಅಂದು ಮನೆಯಲ್ಲಿ ಏನಾದರೊಂದು ವಿಶೇಷವಿದೆ ಎಂದು ತಿಳಿಯಲಾಗುತ್ತಿತ್ತು. ಸಾದರಲ್ಲಿ ಮತ್ತೊಂದು ವಿಶೇಷ ತಿಂಡಿಯೆಂದರೆ ಅವಲಕ್ಕಿ. ಪ್ರತಿಭಾರಿ ಸುಗ್ಗಿಯಲ್ಲಿಯು ಅವಲಕ್ಕಿಗೆಂದೇ ಒಂದು ಮೂಟೆ ಭತ್ತವನ್ನು ಮೀಸಲಿಡುತ್ತಾರೆ. ಹಿಂದೆ ಆ ಭತ್ತವನ್ನು ಬಿಸಿನೀರಿನಲ್ಲಿ ಬೇಯಿಸಿ ಗುಂಡಲ್ಲಿ ರುಬ್ಬಿಸಿ ಅವಲಕ್ಕಿ ತಯಾರಿಸುತ್ತಿದ್ದರು, ಆದರೆ ಇಂದು ಯಂತ್ರ ಸೌಲಭ್ಯವಿದೆ.

ಇವರು ರಾಗಿರೊಟ್ಟಿ–ಉಚ್ಚೆಳ್ಳು ಚೆಟ್ನಿ, ಅಕ್ಕಿರೊಟ್ಟಿ–ಕೆಂಪುಖಾರ, ಜೋಳದ ರೊಟ್ಟಿ, ಮಸಾಲರೊಟ್ಟಿಗಳನ್ನು ಮಾಡುತ್ತಾರೆ. ಜೊತೆಗೆ ಇಡ್ಲಿ, ದೋಸೆ, ಚಿತ್ರಾನ್ನ, ಪುಳಿಯೋಗರೆ ಮುಂತಾದ ತಿಂಡಿಗಳನ್ನು ಮಾಡುತ್ತಾರೆ.

ಸಿಹಿ ಅಡುಗೆಗಳು:–

ಹಬ್ಬ–ಹರಿದಿನಗಳಲ್ಲಿ ವಿಶೇಷವಾಗಿ ಹಲವು ಸಿಹಿ ತಿನಿಸುಗಳನ್ನು ಮಾಡಲಾಗುತ್ತದೆ. ಅವುಗಳೆಂದರೆ ಬೇಳೆ ಒಬ್ಬಟ್ಟು, ಕಾಯಿ ಒಬ್ಬಟ್ಟು, ಹಾಲು ಒಬ್ಬಟ್ಟು, ಕಡಲೆಬೀಜದ ಒಬ್ಬಟ್ಟು, ಎಳ್ಳು ಒಬ್ಬಟ್ಟು, ಅಕ್ಕಿ ಹಿಟ್ಟಿನ ಕಡುಬು, ಕರಿದ ಕಡುಬು, ಪಾಯಸ, ಶಾವಿಗೆ, ತಂಬಿಟ್ಟು, ಹುಗ್ಗಿ ಅನ್ನ, ಸಜ್ಜಿಗೆ, ಕಜ್ಜಾಯ, ಸಿಹಿ ಅನ್ನ (ಪೊಂಗಲ್), ತೊಗರಿ ಪಿಡಸೆ, ಖರ್ಜಿಕಾಯಿ, ಕುರುಕು ತಿಂಡಿಗಳಾದ ಚಕ್ಲಿ, ಕೋಡುಬಳೆ, ನಿಪ್ಪಟ್ಟು, ರವೆಉಂಡೆ ಮುಂತಾದ ಸಿಹಿ ತಿಂಡಿಗಳನ್ನು ಹಬ್ಬ–ಹರಿದಿನಗಳಲ್ಲಿ, ಮದುವೆಗಳಲ್ಲಿ ಮಾಡುತ್ತಾರೆ.

ಸಾದರ ಪಾನೀಯಗಳು:–

ಸಾದರು ಬಳಸುವ ಪ್ರಮುಖ ಪಾನೀಯಗಳೆಂದರೆ ಕಾಫಿ, ಟೀ, ರಾಗಿಮಾಲ್ಟ್, ನಿಂಬೆ ಹಣ್ಣಿನ ಶರಬತ್ತು, ಬೇಲದ ಹಣ್ಣಿನ ಪಾನಕ, ಕೆಕ್ಕರಿಕೆ ಹಣ್ಣಿನ ಪಾನಕ, ನೀರು ಮಜ್ಜಿಗೆ, ಜೀರಿಗೆ ಶರಭತ್ತು ಇನ್ನು ಮುಂತಾದ ಪಾನೀಯಗಳನ್ನು ಇವರು ಬಳಸುತ್ತಾರೆ. ಅಷ್ಟೇ ಅಲ್ಲದೆ ಅಂಬಲಿಯೂ ಇವರ ಪ್ರಮುಖ ಪಾನೀಯಗಳಲ್ಲಿ ಒಂದು.

ಅಂಬಲಿ:–

ಅಂಬಲಿಯು ಜನಪದರ ಪ್ರಮುಖ ಪಾನೀಯಗಳಲ್ಲಿ ಒಂದಾಗಿದೆ. ರಾಗಿಯ ಹಸಿಟ್ಟನ್ನು ಹೆಚ್ಚುನೀರಿನಲ್ಲಿ ಕಲಸಿ ಅದನ್ನುಬೆಂಕಿಯ ಮೇಲೆ ಕುದಿಸಿ ಕುಡಿಯಲಾಗುತ್ತದೆ. ರಾಗಿ ಅಂಬಲಿಯು ಉಷ್ಣಾಂಶವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಅದನ್ನು ಕುಡಿಯುವುದು

ಒಂದು ಪರಿಯಾದರೆ, ಕಡು ಬಡತನದ ಬೇಗೆಯಲ್ಲಿ ಬೇಯುವವರ ಮನೆಗಳಲ್ಲಿ, ಸಮೃದ್ಧ ಆಹಾರ ಧಾನ್ಯಗಳು ಇಲ್ಲದೇ ಇರುವಾಗ ಇರುವ ಅಲ್ಪಪ್ರಮಾಣದ ರಾಗಿ ಹಸಿಟ್ಟನ್ನೇ ಅಂಬಲಿಯನ್ನಾಗಿ ಮಾಡಿ ಹೊಟ್ಟೆತುಂಬಿಸಿಕೊಳ್ಳುವ ಪರಿ ಇನ್ನೊಂದು ಬಗೆ. ಒಟ್ಟಾರೆ ರಾಗಿ ಅಂಬಲಿಯು ನಮ್ಮ ಸಂಸ್ಕೃತಿಯಲ್ಲಿ ಒಂದಾಗಿ ಬೆರೆತಿದೆ.

ಸಾದರು ಹಿಂದೆ ಬೀಟ್ರೋಟ್, ಕೆಂಪುದಂಟನ್ನು ಸೇವಿಸುತ್ತಿರಲಿಲ್ಲ, ಏಕೆಂದರೆ ಅವು ರಕ್ತವರ್ಣದಿಂದ ಕೂಡಿದೆ ಎಂಬ ಕಾರಣದಿಂದ ಇವರು ಅವನ್ನು ಸೇವಿಸುತ್ತಿರಲಿಲ್ಲ. ಆದರೆ ಇಂದು ಕಾಲಗತಿಗನುಗುಣವಾಗಿ ಕೆಲವರು ಸೇವಿಸುತ್ತಾರೆ. ಮತ್ತೆ ಹಲವರು ವರ್ಜಿಸುತ್ತಾರೆ.

ಇನ್ನು ಸಾಮಾನ್ಯ ಮತ್ತು ವಿಶೇಷ ಅಡುಗೆಗೆ ನೆಂಚಿಕೊಳ್ಳಲು ಚಿನಕುರಳಿ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮೊಳಕೆಕಾಳು, ಕಾರದ ಕಡಲೆಬೀಜ, ಹುರಿಗಾಳು ಮುಂತಾದವುಗಳನ್ನು ಸೇವಿಸುತ್ತಾರೆ. ಅಷ್ಟೇ ಅಲ್ಲದೆ ತೋಟ ಹೊಲಗಳಲ್ಲಿ ಬೆಳೆಯುವ ಹಲವು ಬಗೆಯ ಗೆಣಸುಗಳಾದ ಮರಗೆಣಸು, ಬಳ್ಳಿಗೆಣಸು, ತೋಟದ ಗೆಣಸುಗಳನ್ನು ಬೇಯಿಸಿ ಸಿಹಿ ಪಾನಕದೊಂದಿಗೆ ತಿನ್ನುತ್ತಾರೆ. ಜೊತೆಗೆ ಹಲವು ಬಗೆಯ ಹಣ್ಣುಗಳನ್ನು ಹಾಕಿ ಮಾಡಿದ ಹಲಸು, ಮಾವು, ಬಾಳೆಹಣ್ಣು, ಕಾಯಿ, ಜೇನು ತುಪ್ಪ ಹಾಕಿ ಮಾಡಿದ ರಸಾಯನವೆಂದರೆ ಇವರಿಗೆ ಬಲುಪ್ರೀತಿ, ಆಯಾ ಕಾಲದಲ್ಲಿ ದೊರೆಯುವ ಹಣ್ಣುಗಳಿಂದ ರಸಾಯನವನ್ನು ಮಾಡಲಾಗುತ್ತದೆ. ಪ್ರತಿ ಶನಿವಾರವೂ ಮನೆದೇವರ ನೈವೇದ್ಯಕ್ಕೆ ತಪ್ಪದೇ ರಸಾಯನವನ್ನು ಮಾಡಲಾಗುತ್ತದೆ. ಹೀಗೆ ಸಾದರಲ್ಲಿನ ಆಹಾರ ಪದ್ಧತಿಯು ವಿಭಿನ್ನವೂ, ವಿಶಿಷ್ಟವೂ ವೈವಿಧ್ಯತೆಯಿಂದಲೂ ಕೂಡಿದೆ. ಆಧುನಿಕ ಸಂದರ್ಭದಲ್ಲಿ ಹಲವು ಹೊಸ ರುಚಿಗಳ ಶೋಧವೂ ಅವ್ಯಾಹತವಾಗಿ ನಡೆಯುತ್ತಿದ್ದರೂ ಸಹ ಸಾದರು ತಮ್ಮ ಸಾಂಪ್ರದಾಯಿಕ ಅಡುಗೆ ರುಚಿಯನ್ನು ಉಳಿಸಿಕೊಂಡು ತಮ್ಮ ಅಡುಗೆ ಪದ್ದತಿಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ. ಒಟ್ಟಾರೆ ಸಾದರ ಆಹಾರ ಪದ್ಧತಿಯು ಶುಚಿ-ರುಚಿ, ಸಂಪ್ರದಾಯಗಳಿಂದ ಕೂಡಿದ್ದು, ಸಾದರ ರುಚಿ-ಅಭಿರುಚಿಗನುಗುಣವಾಗಿ, ಭಿನ್ನ-ವಿಭಿನ್ನವಾಗಿ ರೂಪುಗೊಂಡಿದೆ.

೩.೪:- ಉಡುಗೆ-ತೊಡುಗೆಗಳು

'ತನ್ನ ಅರಿವು ತನಗೆ ಗುರು' ಎನ್ನುವ ಅರ್ಥದಲ್ಲಿ ನಿಸರ್ಗಕ್ಕೆ ಒಗ್ಗಿದ ಮಾನವ ಚಳಿ-ಮಳೆ-ಗಾಳಿಯಿಂದ ರಕ್ಷಿಸಿಕೊಳ್ಳಲು ಗಿಡದ ತೊಗಟೆಯನ್ನು ಸುತ್ತಿಕೊಳ್ಳಲು ತೊಡಗಿದ್ದವ, ನಾರು ಬಟ್ಟೆಯ ಮೊರೆ ಹೊಕ್ಕ; ತರುವಾಯದ ದಿನಗಳಲ್ಲಿ ಹತ್ತಿಯ ಆವಿಷ್ಕಾರವಾಯಿತು, ಇದರೊಂದಿಗೆ ಉಡುಪಿನಲ್ಲಿ ವೈವಿಧ್ಯವುಂಟಾಯಿತು.

ಭಾರತೀಯ ಸಂಸ್ಕೃತಿಯಲ್ಲಿ ಜಾತಿಗನುಗುಣವಾಗಿ ಬಟ್ಟೆ-ಬರೆ ಒಡವೆಗಳು ಬಳಕೆಯಾಗುತ್ತಾ ಬಂದಿದೆ. ಹಿಂದೂ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಂದ ಸಾದರು ತಮ್ಮ ವಿಶಿಷ್ಟ ರೀತಿಯ ಉಡುಗೆ-ತೊಡುಗೆಗಳಿಂದ ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಪ್ರದರ್ಶನ ಮಾಡಿದ್ದಾರೆ. ಸಾದರು ಉಡುತ್ತಿದ್ದಂತಹ ಉಡುಗೆಗಳು ಇತರೆ ಜಾತಿಗಳಿಗಿಂತ ಭಿನ್ನವಾಗಿದ್ದವು. ಪುರುಷರು ದಿನನಿತ್ಯದ

ಸಂದರ್ಭದಲ್ಲಿ ಮುಂದೆ ಜೇಬು ಇರುವ ಉದ್ದನೆಯ ನಿಲುವಂಗಿ ಮತ್ತು ಕಚ್ಚೆ ಪಂಚೆಯನ್ನು ಧರಿಸುತ್ತಿದ್ದರು. ವಿಶೇಷ ಸಭೆ-ಸಮಾರಂಭಗಳಲ್ಲಿ ಉದ್ದನೆಯ ಬಿಳಿಯ ನಿಲುವಂಗಿ, ಕೋಟು, ಕಚ್ಚೆಪಂಚೆ ಮತ್ತು ಕಂಬಿ ಪೇಟವನ್ನು ಧರಿಸುತ್ತಿದ್ದರು. ತಾವು ಸುಂದರವಾಗಿ ಕಾಣುವುದಕ್ಕೆ ಮಾತ್ರ ಸೀಮಿತವಾಗದೇ ತಲೆಯ ಮೇಲೆ ಗೌರವ ಸೂಚಕವಾಗಿ ರುಮಾಲು, ಟೊಪ್ಪಿಗೆ, ಕಂಬಿಪೇಟ, ಟವೆಲ್ ಅನ್ನು ಸುತ್ತಿಕೊಂಡು ಲಕ್ಷಣವಾಗಿ ಕಾಣುವುದರ ಮೂಲಕ ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಮೆರೆದರೆ, ಸ್ತ್ರೀಯರು 'ಹದಿನಾರು ಮೊಳದ ಸೀರೆಯುಟ್ಟು, ಸೆರಗನ್ನು ತಲೆಯ ತುಂಬ ಹೊದ್ದು, ಮೈತುಂಬ ಕುಪ್ಪಸ ತೊಟ್ಟು ಗೃಹಿಣಿಯ ಸಂಸ್ಕೃತಿಯನ್ನು ಮೆರೆದಿದ್ದಾಳೆ. ಇನ್ನು ಮದುವೆ ಮುಂತಾದ ಮಂಗಳ ಕಾರ್ಯದಲ್ಲಿ ತುರುಬನ್ನು ಕಟ್ಟಿ ತಲೆಯ ತುಂಬ ಹೂವನ್ನು ಮುಡಿಯುತ್ತಿದ್ದರು.

ಇಂದಿಗೂ ಸಹ ಗೃಹಿಣಿಯರು ಕೇಶವನ್ನು ಕಟ್ಟುವುದು, ಜಡೆ ಎಣೆಯುವುದು, ಮುಡಿ ಹಾಕುವುದನ್ನು ನೋಡಿ ಇವರು ಇಂತ ಪ್ರದೇಶಕ್ಕೆ ಸೇರಿದವರು ಎಂದು ಹೇಳಬಹುದು.

ಇನ್ನು ಯುವಕರು ಅಂಗಿ, ಕಾಕಿ ನಿಕ್ಕರ್ ಮತ್ತು ಒಂದು ಟವೆಲನ್ನು ಧರಿಸುತ್ತಿದ್ದರು. ಸ್ವಲ್ಪ ವಿದ್ಯಾವಂತ ಯುವಕರಾದರೆ ಪಟಾಪಟಿ ನಿಕ್ಕರ್ ಧರಿಸುತ್ತಿದ್ದರು. (ಕಾಕಿ ನಿಕ್ಕರ್ ಬದಲಾಗಿ), ಯುವತಿಯರು ಲಂಗ-ಕುಪ್ಪಸ ಮತ್ತು ಲಂಗ-ದಾವಣಿಯನ್ನು ಧರಿಸುತ್ತಿದ್ದರು.

ಸಾದರು ಪುರುಷ ಮತ್ತು ಸ್ತ್ರೀಯರಿಬ್ಬರೂ ಹಲಬಗೆಯ ತೊಡುಗೆಗಳನ್ನು ಧರಿಸುತ್ತಿದ್ದರು. ಪುರುಷರು ಧರಿಸುತ್ತಿದ್ದ ತೊಡುಗೆಗಳೆಂದರೆ ಕಡಗ, ಕಿವಿಗೆ ಒಂಟಿ, ಕೊರಳಿಗೆ ಸರ, ಬೆರಳಿಗೆ ಉಂಗುರ ಇನ್ನು ಮೊದಲಾದ ಆಭರಣಗಳನ್ನು ಧರಿಸಿದರೆ, ಆಭರಣ ಪ್ರಿಯರಾದ ಸ್ತ್ರೀಯರು ಓಲೆ-ಜುಮುಕಿ, ಮೂಗುನತ್ತು, ಬೆಂಡೋಲೆ, ಬುಗುಡಿ, ಕೊರಳಲ್ಲಿ ಮಾಂಗಲ್ಯ, ಕೈಬಳೆ, ಉಂಗುರ, ಕಾಲ್ಪಿಲ್ಲೆ, ಮಿಂಚು, ಕಾಲುಂಗುರ, ಕಾಸಿನಸರ, ಅವಲಕ್ಕಿಸರ, ಪದಕದಸರ, ಚಿಂತಾಕು, ವಂಕಿ, ಡಾಬು, ಅಡ್ಡಿಕೆ, ನಾಗರಬಿಲ್ಲೆ, ತೋಳಿಗೆ ಮತ್ತು ಕಾಲಿಗೆ ಕಡಗ, ಬೈತಲೆಬೊಟ್ಟು, ಕುಚ್ಚು ಮುಂತಾದ ತೊಡಿಗೆಗಳನ್ನು ಧರಿಸುತ್ತಿದ್ದರು.

ಆದರೆ ಇಂದು ಸ್ತ್ರೀ-ಪುರುಷರಾಧಿಯಾಗಿ ಉಡುವ ಉಡುಗೆ ಮತ್ತು ತೊಡುವ ತೊಡುಗೆಗಳು ಬದಲಾದ ಮನಸ್ಸುಗಳಿಗೆ ಅನುಗುಣವಾಗಿ ಬದಲಾಗತೊಡಗಿವೆ, ನವೀನ ಮಾದರಿಯ ಉಡುಗೆ-ತೊಡಿಗೆಗಳು ರೂಪುಗೊಳ್ಳುತ್ತಿವೆ. ಬಂಡವಾಳಗಾರರ ಅಥವಾ ಉದ್ದಿಮೆದಾರರ ಹೆಚ್ಚು-ಹೆಚ್ಚು ಲಾಭಗಳಿಸುವ ದೃಷ್ಟಿಯಿಂದ ಮೌಲ್ಯಾಧಾರಿತ ಉಡುಗೆ-ತೊಡುಗೆಗಳನ್ನು ತಯಾರಿಸಿದರು. ಅವೆಲ್ಲವೂ ನವ-ನಾಗರೀಕತೆಯ ಸಂಸ್ಕೃತಿಯ ಪ್ರತೀಕವಾಗಿ ಹೊರಹೊಮ್ಮಿದವು. ಹಾಗಾಗಿ ಸಾದರ ಉಡುಗೆ-ತೊಡುಗೆಗಳಲ್ಲಿಯೂ ಸ್ವಲ್ಪ ಪ್ರಮಾಣದ ವ್ಯತ್ಯಾಸಗಳುಂಟಾದವು.

ನವನಾಗರೀಕತೆಯ ಉಡುಗೆ-ತೊಡುಗೆಗಳು ಪ್ರಾರಂಭದಲ್ಲಿ ನಗರ ಪ್ರದೇಶದಲ್ಲಿ ತಮ್ಮ ಪ್ರಭಾವವನ್ನು ಬೀರಿ ತದನಂತರ ಗ್ರಾಮೀಣ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಬೀರತೊಡಗಿದವು, ಈ ನಿಟ್ಟಿನಲ್ಲಿ ೧೬ ಮೊಳದ ಸೀರೆ ೮ ಮೊಳಕ್ಕಿಳಿಯಿತು.

ಒಟ್ಟಾರೆ ಸಾದರಲ್ಲಿನ ಉಡುಗೆ-ತೊಡುಗೆಗಳು ಇಂದಿಗೂ ಸಹ ಸ್ವಲ್ಪ ಮಟ್ಟಿಗೆ ತನ್ನ ತನವನ್ನು ಕಳೆದುಕೊಳ್ಳದೆ ಜೀವಂತವಾಗಿರುವುದನ್ನು ಕಾಣಬಹುದು.

೩.೫:-ಆರ್ಥಿಕ ಸ್ಥಿತಿ-ಗತಿ

ಸಾದರ ಆರ್ಥಿಕ ಸ್ಥಿತಿಗತಿಯು ಅವರ ಮೂಲವೃತ್ತಿಯಾದ ಕೃಷಿಯನ್ನೇ ಅವಲಂಬಿಸಿದೆ. ಸಾದರು ಆರ್ಥಿಕವಾಗಿ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಸಾದರ ಆರ್ಥಿಕ ಸ್ಥಿತಿ-ಗತಿ, ವರಮಾನ, ಜನರ ಜೀವನ ಮಟ್ಟ, ಬದುಕು-ಬವಣೆ, ಏಳು-ಬೀಳು, ಎಲ್ಲವೂ ಕೃಷಿಯ ಮೇಲೆ ಅವಲಂಬಿತವಾಗಿದೆ. ಪ್ರಾಚೀನ ಕಾಲದಿಂದಲೂ ತಮ್ಮ ಕುಲಕಸುಬಾದ ಕೃಷಿಯನ್ನೇ ನಂಬಿ-ನೆಚ್ಚಿ ಬದುಕು ಸಾಗಿಸಿದ್ದಾರೆ.

ಹಿಂದಿನಿಂದ ಇಂದಿನವರೆಗೂ ಸಾದರು ವ್ಯವಸಾಯ, ಪಶುಸಂಗೋಪನೆ, ತೋಟಗಾರಿಕೆ, ವ್ಯಾಪಾರವನ್ನು ಅನುಸರಿಸಿದರೆ, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಹಾಗು ಖಾಸಗಿ ನೌಕರಿಗಳನ್ನು ಹೊಂದಿ ಬದುಕು ನಡೆಯಿಸಿದ್ದಾರೆ. ಸದಾ ಮಳೆ-ಬೆಳೆಯನ್ನು ಕುರಿತು ಮಾತನಾಡುತ್ತಾ, ಯೋಚಿಸುತ್ತಾ ನೂರಾರು ತಲೆಮಾರುಗಳ ಸಾವಿರಾರು ವರ್ಷಗಳ ಬದುಕನ್ನು ಸವೆಸುತ್ತಾ ಬಂದಿರುವ ಸಾದರು ನಂಬಿದ್ದು ಮಣ್ಣನ್ನೇ.

ಉತ್ಪಾದನೆ:- ವ್ಯವಸಾಯ:

ಆರಂಭ, ವ್ಯವಸಾಯ, ಕೃಷಿ ಎಂಬೆಲ್ಲಾ ಹೆಸರಿನಿಂದ ಕರೆಯುವ ಕೃಷಿಯು ಸಾದರ ಕುಲಕಸುಬು. ಕೃಷಿಯ ಪ್ರಮುಖ ಉತ್ಪಾದನಾ ಅಂಗಗಳು ಭೂಮಿ, ನೀರು, ಶ್ರಮ.

ಭೂಮಿ:-

ಕೃಷಿಯ ಬಹುಮುಖ್ಯ ಉತ್ಪಾದನಾ ಅಂಗಗಳಲ್ಲಿ ಭೂಮಿ ಅತಿಮುಖ್ಯವಾದದ್ದು.

"ಏಳುತಾಲೇ ಎದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳಾ-ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು"[7]

ಎಂಬ ಜನಪದರ ಆಶಯದಂತೆ ಸಾದರು ಭೂಮಿಗೆ ವಿಶೇಷ ಮಹತ್ವವನ್ನು ನೀಡುತ್ತಾರೆ. ಇವರು ತಾವು ಕೃಷಿಗೆ ಬಳಸುವ ಭೂಮಿಯನ್ನು ಕೆಂಪುನೆಲ, ಎರೆನೆಲ, ಜೇಡಿ ಮಣ್ಣು, ಮರಳುನೆಲ, ಕಪ್ಪು ನೆಲ, ಗದ್ದೆ ಎಂಬುದಾಗಿ ಹಲವಿಧಗಳಾಗಿ ವಿಂಗಡಿಸುತ್ತಾರೆ.

ಇನ್ನು ಒಣ ಭೂಮಿ ಮಳೆ ಆಶ್ರಿತ ಭೂಮಿಗಿಂತಲೂ ಕೆರೆಯ ಹಿಂದಿರುವ ಭೂಪ್ರದೇಶ ಕೃಷಿಗೆ ಸರ್ವಕಾಲಕ್ಕೂ ಯೋಗ್ಯವಾದದ್ದು. ಈ ಭೂಮಿಯು ಭತ್ತದ ಬೆಳೆ, ತೆಂಗು, ಅಡಿಕೆ ತೋಟ

ಅಥವಾ ಮತ್ಯಾವುದೇ ಬೆಳೆಗೆ ಯೋಗ್ಯವಾದುದಾಗಿರುತ್ತದೆ. ಈ ಭೂಮಿಯಿಂದ ಹೆಚ್ಚಿನ ಬೆಳೆಯನ್ನು ಬೆಳೆಯಲು, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು, ಕೃಷಿಕರಾದ ಸಾದರು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಹಾಯಕವಾಗಿದೆ. ಅಷ್ಟೇ ಅಲ್ಲದೇ ಹಿಂದಿನ ದಾನಿಗಳು ಧಾರ್ಮಿಕ ಕೇಂದ್ರಗಳಿಗೆ, ವಿಧ್ವಾಂಸರಿಗೆ, ವೀರರಿಗೆ ಧಾನವನ್ನಾಗಿ ಕೆರೆಯ ಹಿಂದಿನ ಭೂಮಿಯನ್ನೇ ಕೊಡುತ್ತಿದ್ದರು. ಒಟ್ಟಾರೆ ಕೃಷಿಯಲ್ಲಿ ಭೂಮಿಯ ಪಾತ್ರ ಬಹುಮುಖ್ಯವಾದದ್ದಾಗಿದೆ.

<u>ನೀರು:-</u>

ಸಕಲ ಜೀವರಾಶಿಗಳಿಗೂ ಅತ್ಯಾವಶ್ಯಕವಾಗಿ ನೀರು ಬೇಕೆ ಬೇಕು, ಹಾಗೆಯೇ ಕೃಷಿಗೂ ಸಹ ಜೀವ ಜಲವಾದ ನೀರು ಅತಿಮುಖ್ಯವಾದದ್ದು. ನೀರಾವರಿಯ ದೃಷ್ಟಿಯಿಂದ ಕೃಷಿಯನ್ನು ಕಾಡಾರಂಭ, ನೀರಾರಂಭ ಎಂದು ವಿಂಗಡಿಸಲಾಗಿದೆ, ಕಾಡಾರಂಭವು ಮಳೆಯನ್ನೇ ಆಶ್ರಯಿಸದರೆ, ನೀರಾರಂಭವು ಕೆರೆ, ಕುಂಟೆ, ಬಾವಿ, ಕಟ್ಟೆ-ಮಳೆಯನ್ನು ಅವಲಂಬಿಸಿದೆ.

ಈ ನಿಟ್ಟಿನಲ್ಲಿ ಶ್ರಮಜೀವಿಗಳಾದ ಸಾದರು ತಲತಲಾಂತರ ಬಾಳುವಂತೆ, ತಮ್ಮ ಕೃಷಿಗೂ, ಕುಡಿಯಲು ಬಳಕೆಯಾಗಲು ಜಲದ ಮೂಲವನ್ನು ತಿಳಿದು ನೂರಾರು ಕಲ್ಲಿನ ಬಾವಿಗಳನ್ನು ನಿರ್ಮಿಸಿದ್ದಾರೆ. ಇವು ಇಂದಿಗೂ ಜೀವಂತಿಕೆಯಿಂದಿದ್ದು, ಸಾದರ ಬದುಕನ್ನು ಹಸನಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಇವರು ನಿರ್ಮಿಸಿರುವ ಬೃಹತ್ ಬಾವಿಗಳು ನೋಡುಗರ ಕಣ್ಮನಗಳನ್ನು ಸೆಳೆದು ಎಂತಹವರನ್ನು ಮೂಕ ವಿಸ್ಮಿತರನ್ನಾಗಿಸುತ್ತದೆ. ಅಷ್ಟು ವ್ಯವಸ್ಥಿತವಾಗಿ ಯೋಜನೆಯನ್ನು ರೂಪಿಸಿದ್ದಾರೆ. ಬೃಹತ್ ಗಾತ್ರದ ಕಾಡು ಬಂಡಯನ್ನೇ ಇಟ್ಟಿಗೆಯಂತೆ ಪೇರಿಸಿ, ನಿರ್ಮಿಸಿದ ಬಾವಿಗಳೇ ಇಂದಿನ ಬಹುತೇಕ ಕೃಷಿಕ ಸಾದರ ಹಾಗೂ ಊರಿನ ಇತರ ಜನರ ಕುಡಿಯುವ ನೀರಿನ ಬವಣೆಯನ್ನು ನೀಗಿಸುವಲ್ಲಿ ಸಹಾಯಕವಾಗುತ್ತಿವೆ.

ಇನ್ನು ಸಾದರ ಜಾತಿಯ ಹಿರಿಯರು ತಮ್ಮ ಜಾನುವಾರುಗಳಿಗಷ್ಟೇ ಅಲ್ಲದೇ ಊರಿನ ಎಲ್ಲಾ ಜಾನುವಾರುಗಳು ಬಿಸಿಲಿನಬೇಗೆಯಿಂದ ನೀರಿಗಾಗಿ ಅಲೆಯದಿರಲೆಂದು ಹಲವಾರು ಗೋಕುಂಟೆಗಳನ್ನು ನಿರ್ಮಿಸಿದ್ದಾರೆ. ಆದರೆ ಇಂದು ಮಳೆರಾಯನ ಕೃಪೆಯಿಲ್ಲದೆ, ಆ ಗೋಕುಂಟೆಗಳು ಆಕಾಶದೆಡೆಗೆ ಮುಖಮಾಡಿನೋಡುತ್ತಾ, ಬಾಯ್ತೆರೆದು ಮಳೆಗಾಗಿ ಕಾಯುತ್ತಾ ಕುಳಿತಿರುವಂತೆ ಭಾಸವಾಗುತ್ತದೆ.

<u>ಶ್ರಮ:-</u>

ಶ್ರಮಜೀವಿಗಳಾಗಿರುವ ಸಾದರು ಅನಾದಿಕಾಲದಿಂದಲೂ ಕೃಷಿಯನ್ನೇ ನಂಬಿ ಬದುಕಿದ್ದಾರೆ. 'ವ್ಯವಸಾಯ ಮನೆಮಕ್ಕಳೆಲ್ಲಾ ಸಾಯ' ಎಂಬಂತೆ ಕುಟುಂಬದಲ್ಲಿ ಮಕ್ಕಳಿಂದ ಹಿಡಿದು ಎಲ್ಲಾ ಸದಸ್ಯರೂ ಕೂಡ ಸಕ್ರಿಯವಾಗಿ ತಮ್ಮನ್ನು ತಾವು ಕೃಷಿಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ.

ಸಾದರು ಸೋಮಾರಿಗಳಾಗದೆ, ವ್ಯರ್ಥ ಕಾಲಹರಣಮಾಡದೆ ಬುದ್ಧಿವಂತಿಕೆಯಿಂದ, ಜಾಣ್ಮೆಯಿಂದ, ಚತುರತೆಯಿಂದ, ಕಷ್ಟ-ಕಾರ್ಪಣ್ಯಗಳಿಗೆ ಜಗ್ಗದೆ ಕಷ್ಟಪಟ್ಟು ದುಡಿದು ಜೀವನ ನಡೆಸಿದ ಸ್ವಾಭಿಮಾನಿಗಳು. ಸಹನಾಶೀಲರಾದ ಇವರು ದುಡಿಮೆಯನ್ನೇ ಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಮಾಡುತ್ತಾ ಬಂದವರು. ತಾವು ಹಿಡಿದ ಕೆಲಸವನ್ನು ಬಿಡದೆ ವೃತ್ತಿಯಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಸದಾ ಪ್ರಯತ್ನಿಸುವವರು ಸಾದರು. ಬಹುಶಃ ಈ ಎಲ್ಲಾ ಅಂಶಗಳಿಂದಾಗಿ ಇತರೆ ಜಾತಿಯವರಿಗಿಂತ ವಿಶೇಷವಾಗಿ ಸಾದರನ್ನು ಕುರಿತು 'ಅರಿವೇ ಬೀಜಕ್ಕೆ ಒಂಬತ್ತು ಹೆಜ್ಜೆ ಹಾಕಿದೋರು ಸಾದರು' ಎಂದು ಅಭಿಮಾನ ಮತ್ತು ಅಸೂಯೆಯಿಂದಲೂ ಹೇಳುವುದುಂಟು.

ಹೀಗೆ ಕೃಷಿಯ ಉತ್ಪಾದನಾ ಅಂಗಗಳಾದ ಭೂಮಿ, ನೀರು, ಶ್ರಮವನ್ನು ಬಳಸಿಕೊಂಡು ಪ್ರಕೃತಿಯ ಮಡಿಲಲ್ಲಿ ವಾಸಿಸುತ್ತಿರುವ ಸಾದರು ಕೃಷಿಯ ಕೈಂಕರ್ಯವನ್ನು ಬಹುಪ್ರೀತಿಯಿಂದ ನಿರ್ವಹಿಸುತ್ತಾ ಬಂದಿದ್ದಾರೆ. ಇವರು ಮಳೆಯ ಆಶ್ರಯದಲ್ಲಿ ವರ್ಷಕ್ಕೆ ಎರಡು ಬೆಳೆಯನ್ನು ಮತ್ತು ನೀರಾವರಿ ಸೌಲಭ್ಯವಿರುವವರು ಎರಡು-ಮೂರು ಬೆಳೆಗಳನ್ನು ಬೆಳೆಯುತ್ತಾರೆ.

ಈ ನಿಟ್ಟಿನಲ್ಲಿ ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು ತಾಲ್ಲೂಕುಗಳಲ್ಲಿ ತೆಂಗನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಕೊಳವೆ ಬಾವಿಗಳ ಪ್ರಭಾವದಿಂದ ಕುಣಿಗಲ್, ಕೊರಟಗೆರೆ ತಾಲ್ಲೂಕುಗಳಲ್ಲಿಯೂ ತೆಂಗು ಕಾಣತೊಡಗಿದೆ. ಇನ್ನು ರಾಗಿ, ಭತ್ತ, ಜೋಳವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಪಾವಗಡ, ಶಿರಾ, ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಕಡಲೇಕಾಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

ಬರಪೀಡಿತ ಪ್ರದೇಶವೆಂದು ಗುರುತಿಸಲ್ಪಟ್ಟಿರುವ ಕೋಲಾರ ತಾಲ್ಲೂಕಿನಲ್ಲಿ ರಾಗಿ, ಸೂರ್ಯಕಾಂತಿ, ಕಬ್ಬು, ಮುಸುಕಿನ ಜೋಳ, ಹಿಪ್ಪುನೇರಳೆ, ಹೂವು, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ.

ತುಮಕೂರು ಮತ್ತು ಕೊರಟಗೆರೆಯಲ್ಲಿ ಅಡಕೆ, ರಾಗಿ, ಭತ್ತದ ಬೆಳೆಗಳನ್ನು ಕಾಣಬಹುದು. ಇನ್ನು ರೇಷ್ಮೆ ಬೆಳೆ ಬೆಳೆಗಾರರಾಗಿಯು ಸಾದರು ಪ್ರಮುಖಪಾತ್ರ ವಹಿಸುತ್ತಾರೆ. ಕರ್ನಾಟಕವು ರೇಷ್ಮೆ ಉತ್ಪಾದನೆಯಲ್ಲಿ ಭಾರತದಲ್ಲೇ ಪ್ರಥಮ ಸ್ಥಾನ ಪಡೆದಿದೆ. ಬಹುತೇಕ ಸಾದರು ಹಿಪ್ಪುನೇರಳೆಯನ್ನು ಸಮೃದ್ಧವಾಗಿ ಬೆಳೆದು ರೇಷ್ಮೆ ಉತ್ಪಾದನೆಯಲ್ಲಿ ಪ್ರಮುಖಪಾತ್ರ ವಹಿಸಿ ರಾಜ್ಯದ ಪ್ರಥಮ ರೇಷ್ಮೆ ಬೆಳೆಗಾರರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಅಷ್ಟೇ ಅಲ್ಲದೇ ಹೂವು, ಹಣ್ಣು, ತರಕಾರಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. 'ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆ ಮೇಲು' ಎಂಬಂತೆ ಇವರು ಬಾಳೆ, ಸೀಬೆ, ಮಾವು, ಮಾದವಾಳ, ಹಲಸು, ಕಿತ್ತಲೆ ಮುಂತಾದ ಹಣ್ಣುಗಳನ್ನು ಜೊತೆಗೆ ಆಲೂಗಡ್ಡೆ, ಬದನೆಕಾಯಿ, ಟೊಮೆಟೋ, ಈರುಳ್ಳಿ, ಮೆಣಸಿನಕಾಯಿ, ಸೌತೆ, ಬೆಂಡೆ, ಸೊಪ್ಪು ಇತ್ಯಾದಿ ತರಕಾರಿಗಳನ್ನು ಮತ್ತು ಹಲವಿಧದ ದ್ವಿದಳ ಧಾನ್ಯಗಳನ್ನು ಬೆಳೆಯುವುದರಲ್ಲಿ ಸಿದ್ಧಹಸ್ತರು. ತಮ್ಮ ದಿನನಿತ್ಯದ ಬದುಕಿಗೆ ಬೇಕಾದ ಎಲ್ಲಾ ದವಸ-ಧಾನ್ಯಗಳು, ಕಾಳು-ಕಡ್ಡಿ, ಸಾಂಬಾರು ಪದಾರ್ಥಗಳನ್ನು ತಾವೇ ಬೆಳೆಯುತ್ತಾ ಬಂದಿದ್ದಾರೆ, ಇದರಿಂದ ಬಹುತೇಕ ಎಲ್ಲಾ ಕುಟುಂಬಗಳು ಆರ್ಥಿಕ ಸ್ವಾವಲಂಬಿಯಾಗಿವೆ.

ಹಲಸು, ಕಿತ್ತಲೆ ಮುಂತಾದ ಹಣ್ಣುಗಳನ್ನು ಜೊತೆಗೆ ಆಲೂಗಡ್ಡೆ, ಬದನೆಕಾಯಿ, ಟೊಮೆಟೋ, ಈರುಳ್ಳಿ, ಮೆಣಸಿನಕಾಯಿ, ಸೌತೆ, ಬೆಂಡೆ, ಸೊಪ್ಪು ಇತ್ಯಾದಿ ತರಕಾರಿಗಳನ್ನು ಮತ್ತು ಹಲವಿಧದ ದ್ವಿದಳ ಧಾನ್ಯಗಳನ್ನು ಬೆಳೆಯುವುದರಲ್ಲಿ ಸಿದ್ಧಹಸ್ತರು. ತಮ್ಮ ದಿನನಿತ್ಯದ ಬದುಕಿಗೆ ಬೇಕಾದ ಎಲ್ಲಾ ದವಸ-ಧಾನ್ಯಗಳು, ಕಾಳು-ಕಡ್ಡಿ, ಸಾಂಬಾರು ಪದಾರ್ಥಗಳನ್ನು ತಾವೇ ಬೆಳೆಯುತ್ತಾ ಬಂದಿದ್ದಾರೆ, ಇದರಿಂದ ಬಹುತೇಕ ಎಲ್ಲಾ ಕುಟುಂಬಗಳು ಆರ್ಥಿಕ ಸ್ವಾವಲಂಬಿಯಾಗಿವೆ.

ಮುಂಗಾರು(ಹೊನ್ನಾರು):-

ಧವಸ-ಧಾನ್ಯಗಳನ್ನು ಬೆಳೆಯುವ ಪವಿತ್ರ ಕಾರ್ಯವಾದ ಕೃಷಿಯು ಸಾದರ ರೈತರಿಗೆ ಕೇವಲ ಒಂದು ವೃತ್ತಿಯಷ್ಟೇ ಅಲ್ಲ, ಅದು ಅವನಿಗೆ ದೇವರು ನೇಮಿಸಿದ ಜವಾಬ್ದಾರಿಯೂ ಆಗಿದೆ. ಬಹುಶಃ ವ್ಯವಸಾಯಗಾರನಾದವನು ತಾನು ಮಾಡುವ ವ್ಯವಸಾಯವನ್ನು ಬಿಟ್ಟು ಇತರೆ ವಿಷಯವನ್ನು ಯೋಚಿಸುವುದೇ ಕಡಿಮೆ. ಆತನ ಎಲ್ಲಾ ಯೋಚನೆ, ಮಾತು, ವರ್ತನೆ ಅದರ ಸುತ್ತಲೇ ಸುತ್ತುತ್ತಿರುತ್ತದೆ. ದಿನವಿಡಿ ಹೊಲವನ್ನುತ್ತು, ಬಿತ್ತ ರೈತ ರಾತ್ರಿಯು, ತನ್ನ ಸಕ್ಕರೆಯ ನಿದ್ರೆಯಲ್ಲಿಯೂ ತನ್ನ ಜೀವನಾಡಿಯಾಗಿರುವ ದನ ಅಥವಾ ಎತ್ತುಗಳೊಡನೆ ಸಂಭಾಷಿಸುತ್ತಾನೆಂದರೆ; ಅದು ಆತನ ಕಾಯಕದ ಬಗೆಗಿರುವ ಆತನ ನಂಟು ಎಂತಹದ್ದೆಂಬುದನ್ನು ಧ್ವನಿಸುತ್ತದೆಂದರೆ ಖಂಡಿತ ಅತಿಶಯೋಕ್ತಿ ಎಂದೆನ್ನಿಸಲಾರದು.

ಇವರ ವ್ಯವಸಾಯ ಚಕ್ರವು ಜೂನ್, ಜುಲೈ ತಿಂಗಳಿನಿಂದ ಪ್ರಾರಂಭವಾಗುತ್ತದೆ. ಮುಂಗಾರು ಮಳೆಯು ಪ್ರಾರಂಭವಾದ ತರುವಾಯ ಸಗಣಿಯಿಂದ ಪಿಳ್ಳೆರಾಯನನ್ನು ಮಾಡಿ ಹರಿಶಿನ-ಕುಂಕುಮ, ಗರಿಕೆಯಿಂದ ಪೂಜಿಸಿ, ನೆನೆಯ ಹಾಕಿರುವ ಅಕ್ಕಿ-ಬೆಲ್ಲ, ಕಾಯನ್ನು ಅಲ್ಲಿರುವ ಮನೆಯ ಸದಸ್ಯರಿಗೆ ಮತ್ತು ಇತರರಿಗೆ ಪ್ರಸಾದವಾಗಿ ಕೊಟ್ಟು ನಂತರ ಆ ವರ್ಷದ ಮೊದಲ ದಿನ ನೇಗಿಲನ್ನು ಕಟ್ಟಿ (ಹೊನ್ನಾರು) ಕೃಷಿ ಕಾಯಕಕ್ಕೆ ಹಸಿರು ನಿಷಾನೆಯನ್ನು ತೋರಿಸುತ್ತಾರೆ. ಜೇಷ್ಟ, ಆಷಾಡ, ಶ್ರಾವಣದಲ್ಲಿ ಬರುವ ಮಳೆಗೆ ಭೂಮಿಯನ್ನು ಹಸನು ಮಾಡಿ ಕೃಷಿ ಕಾರ್ಯ ಕೈಗೊಳ್ಳುತ್ತಾರೆ. ವ್ಯವಸಾಯಕ್ಕೆ ಅಗತ್ಯವಾಗಿ ಬೇಕಾದ ನೇಗಿಲು, ಮರಮುಟ್ಟು, ದನಕರು, ಆಳು-ಕಾಳು, ಎತ್ತು, ನೊಗ, ಹಗ್ಗ-ಹುರಿ, ಮೇಟಿ-ಮೇಣಿ, ಕುಡುಗೋಲು, ಗೊಬ್ಬರ-ಗೋಡು, ಬಿತ್ತನೆಬೀಜ, ಕೂರಿಗೆ, ಕುಂಟೆ, ಹಲುವೆ, (ಮುಳ್ಳು ಹಲುವೆ, ಮರದ ಹಲುವೆ), ಹೆಗ್ಗುಂಟೆ, ಕಳೆಕೂಡ್ಲು, ಗುದ್ದಲಿ, ಹಾರೆ, ಪಿಕಾಸಿ, ಮಚ್ಚು, ಪ್ಲೇಟ್ ಕೊಡಲಿ, ಗಂಡುಕೊಡಲಿ, ಕೊಡಲಿ, ಬಾಚಿ, ರಂಪ, ಕುಳಗುದ್ದಲಿ, ಇತ್ಯಾದಿ ನೂರಾರು ಪರಿಕರಗಳನ್ನು ಹೊಂದಿಸಿಕೊಳ್ಳುತ್ತಾರೆ.

ಮುಂಗಾರು ಮಳೆಗೆ ಉಕ್ಕೆ ಒಡೆದು, ಹೊಲ ಉತ್ತು, ಭೂಮಿಯನ್ನು ಹದಗೊಳಿಸಿ ಜೇಷ್ಟ, ಆಷಾಡದಲ್ಲಿ ಮಿಶ್ರ ಬೆಳೆಯಾಗಿ ರಾಗಿ, ತೊಗರಿ, ಅವರೆ, ಅಲಸಂದೆ, ಹುರುಳಿ, ಜೋಳ, ಉಚ್ಚೆಳ್ಳು, ಅರಳು ಮುಂತಾದ ಬೆಳೆ ಬೆಳೆಯುತ್ತಾರೆ. ಮಹಾನವಮಿ ಹಬ್ಬದ ವೇಳೆಗೆ ಹೊಲ ಮುಸುಕು ಮೇಯುತ್ತಿರುತ್ತದೆ. ಒಳ್ಳೆಯ ಆರೈಕೆಯಿಂದ ಉತ್ತಮ ಬೆಳೆ ಬರುತ್ತದೆ.

ಸುಗ್ಗಿಯ ಸಂಭ್ರಮ:-

ಸುಗ್ಗಿಯ ಕಾಲದಲ್ಲಿ ಸಾದರ ಸಂಭ್ರಮ ಮುಗಿಲುಮುಟ್ಟುತ್ತದೆ. ತಮ್ಮ ವರ್ಷದ ಪರಿಶ್ರಮಕ್ಕೆ ಭೂಮಿತಾಯಿ ಒಳ್ಳೆಯ ಫಸಲನ್ನೇ ನೀಡಿರುತ್ತಾಳೆ, ರಾಗಿಯ ಹೊಲ ಕುಯ್ದು ಬಣವೆ ಹಾಕುತ್ತಾರೆ. ಕಣಮಾಡಿ ತೆನೆ ಹರಡಿ, ಒಣಗಿದ ನಂತರ ತೆನೆ ಬಡಿದು ರಾಗಿಯನ್ನು ಬೇರ್ಪಡಿಸುತ್ತಾರೆ. ರಾಗಿಯನ್ನು ರಾಶಿ ಮಾಡಿ ಉಲುಸಿಟ್ಟು, ರಾಶಿ ಪೂಜೆ ಮಾಡಿ ಅಲ್ಲಿರುವವರಿಗೆ ನೆನೆಸಿದ ಅಕ್ಕಿ, ಕಾಯಿ, ಬೆಲ್ಲ ಪ್ರಸಾದ ಕೊಟ್ಟು ನಂತರ ದೇವಗೊಳಗ, ಧರ್ಮಗೊಳಗವನ್ನು ತೆಗೆದು ನಂತರ ಆಯಗಾರರು, ಕುಳುವಾಡಿಗಳಿಗೆ ಆಯವನ್ನು ನೀಡಿ ಕಣದ ಬಳಿಗೆ ಬೇಡಿ ಬಂದವರಿಗೆ ಒಂದಿಷ್ಟು ಧಾನ್ಯವನ್ನು ನೀಡಿ ಉಳಿದಿದ್ದನ್ನು ಮನೆಗೆ ಸಾಗಿಸಿ ಹಗೇವು, ಕಣಜ, ಚೀಲಗಳಲ್ಲಿ ತುಂಬುತ್ತಾರೆ. ಇನ್ನು ಕಾಳು ಬೇರ್ಪಟ್ಟು ಹುಲ್ಲನ್ನು ದನಗಳಿಗಾಗಿ ಧಾನ್ಯದಷ್ಟೇ ಜೋಪಾನ ಮಾಡಿ ಬಣವೆ ಹಾಕಿ ಸಂರಕ್ಷಿಸುತ್ತಾರೆ. ಇನ್ನು ಬೇಸಿಗೆಯಲ್ಲಿ ಒಂದರೆಡು ತಿಂಗಳು ಕೃಷಿಯ ವಿರಾಮದ ಸಮಯ ಹಬ್ಬ-ಹರಿದಿನಗಳು, ಜಾತ್ರೆ-ಉತ್ಸವಗಳಲ್ಲಿ ಮದುವೆ ಮತ್ತಿತರ ಶುಭಕಾರ್ಯಗಳಿಗೆಂದು ತಮ್ಮ ಸಮಯವನ್ನು ಸದ್ವಿನಿಯೋಗಿಸುತ್ತಾರೆ.

ತೋಟಗಾರಿಕೆ:-

ಸಾದರಲ್ಲಿ ಬಹುತೇಕರು 'ಬೆಳಗೆದ್ದು ಬದುಕು ನೋಡಬೇಕು' ಎಂಬ ಉತ್ಕಟ ಬಯಕೆಯಿಂದ ಊರಿನಿಂದ ಸ್ವಲ್ಪ ದೂರವಿರುವ ತಮ್ಮ ಹೊಲ-ಗದ್ದೆ-ತೋಟಗಳ ಬಳಿಯಲ್ಲಿಯೇ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಾರೆ.

ಸಾದರು ದಾಯಕ್ಕನುಗುಣವಾಗಿ, ಹೇಗೆ ನೋಡಿದರೂ ಒಮ್ಮುಖವಾಗಿ ಸಾಲು ಕಾಣುವಂತೆ ಅಡಕೆಯ ಗಿಡಗಳನ್ನು ನೆಟ್ಟು ತೋಟದ ಕೊನೆಯಲ್ಲಿ ತೆಂಗಿನ ಮರವನ್ನು ನೆಡುತ್ತಿದ್ದರು. ಇನ್ನು ಖಾಲಿ ಇರುವ ಜಾಗದಲ್ಲಿ (ಅಡಕೆ ಗಿಡದ ಮಧ್ಯೆ) ಅರಿಶಿನ, ಶುಂಠಿ, ಬಾಳೆ, ಅಗಸೆ ಗಿಡವನ್ನು ನೆಡುತ್ತಾರೆ. ಇದರಿಂದ ಅಡಕೆಯ ಸಸಿಗಳಿಗೆ ತಗುಲುವ ಬಿಸಿಲಿನ ತೀಕ್ಷ್ಣತೆ ಕಡಿಮೆಯಾಗುತ್ತದೆ. ಅಡಕೆ ಗಿಡದಿಂದ ಸ್ವಲ್ಪ ದೂರದಲ್ಲಿ ತೋಟದ ಗೆಣಸನ್ನು ನೆಡುತ್ತಾರೆ. ಇದರಿಂದಾಗುವ ಅನುಕೂಲವೆಂದರೆ, ತೋಟವನ್ನು ಅಗೆಯುವಾಗ ಗೆಣಸಿನ ಆಸೆಗೆ ತೋಟವನ್ನು (ಭೂಮಿಯನ್ನು) ಆಳವಾಗಿ ಅಗಿಯುತ್ತಾರೆ. ಇದರಿಂದ ತೋಟಕ್ಕೆ ಒಳ್ಳೆಯ ಬೇಸಾಯವಾದಂತಾಗುತ್ತದೆ. ಅಲ್ಲದೆ ತಿನ್ನಲು ರುಚಿಕರ ಮತ್ತು ಪೌಷ್ಟಿಕವಾದ ತೋಟದ ಗೆಣಸು ದೊರೆಯುತ್ತದೆ.

ಪಶುಸಂಗೋಪನೆ:-

ಕೃಷಿಯಂತೆ ಪಶುಪಾಲನೆಯು ಸಹ ಗ್ರಾಮೀಣ ಸಾದರ ರೈತರ ಜೀವನದ ಅವಿಭಾಜ್ಯ ಅಂಗವಾಗಿದೆ. ಕೃಷಿಗೆ ಪೂರಕವಾದ ಉಪವೃತ್ತಿಯಾದ ಪಶುಪಾಲನೆಯು ಅವರ ಏಳಿಗೆಗೆ, ಆರ್ಥಿಕ ಭದ್ರತೆಗೆ, ಜೀವನ ಮಟ್ಟದ ಸುಧಾರಣೆಗೆ ಕಾರಣವಾಗಿದೆ. ಹಿಂದೆ ಸಾಟಿಪದ್ಧತಿ ರೂಢಿಯಲ್ಲಿದ್ದ ಸಂದರ್ಭದಲ್ಲಿ ಸಾಕುಪ್ರಾಣಿಗಳನ್ನು ವಿನಿಮಯ ಸಾಧನವನ್ನಾಗಿ ಬಳಸುತ್ತಿದ್ದರು. ಒಂದು ಕುಟುಂಬದ ಆರ್ಥಿಕ ಮಟ್ಟವನ್ನು ಆ ಮನೆಯ ಜಾನವಾರುಗಳು ನಿರ್ಧರಿಸುತ್ತಿದ್ದವು. ಎತ್ತು, ಹಸು, ಎಮ್ಮೆ,

ಕರುಗಳನ್ನು ಸಾಕುತ್ತಿದ್ದರು. ಕೃಷಿಕಾರ್ಯದಲ್ಲಿ ಜಾನುವಾರುಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ರೈತರಿಗೆ ವ್ಯವಸಾಯಕ್ಕೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಜಗದೊಡೆಯನಾದ ಶಿವನು ತನ್ನ ವಾಹನವಾದ ನಂದಿಯನ್ನು ಬಳುವಳಿಯಾಗಿ ನೀಡಿದ ಎಂಬ ನಂಬಿಕೆ ಸಾದರಲ್ಲಿದೆ. ಇವರು ತಮ್ಮ ಕೃಷಿ ಕಾರ್ಯದಲ್ಲಿ ಅಂದಿನಿಂದ ಇಂದಿನವರೆಗೆ ನೆರವಾಗುತ್ತಿರುವ ಬಸವಣ್ಣನನ್ನು (ನಂದಿಯನ್ನು) ಮನೆಯ ದೇವರನ್ನಾಗಿ ಆರಾಧಿಸುತ್ತಾರೆ.

ಪಶುಪಾಲನೆಯಲ್ಲಿ ಪ್ರಮುಖವಾಗಿದ್ದ ಹಸು, ಎಮ್ಮೆಗಳು ಹೈನುಗಾರಿಕೆಯಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತಿದ್ದವು. ಹೈನುಗಾರಿಕೆಯು ಜನರ ದೈಹಿಕ ಸ್ವಾಸ್ಥ್ಯ ಮತ್ತು ಕೌಟುಂಬಿಕ ಪ್ರಗತಿಗೆ ಪೂರಕವಾಗಿತ್ತು. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಗಿಣ್ಣು ಇತ್ಯಾದಿ ಉತ್ಪನ್ನಗಳು ರೈತರಿಗೆ ವರದಾನವಾಗಿದ್ದವು. ಇವುಗಳಿಂದ ಹೊಲಗದ್ದೆಗಳಿಗೆ ಉತ್ತಮ ಗೊಬ್ಬರ ದೊರೆತು, ಒಳ್ಳೆಯ ಬೆಳೆ ಬೆಳೆಯಲು ನೆರವಾಗುತ್ತಿದ್ದವು. ಜೊತೆಗೆ ಸಾದರ ಆರ್ಥಿಕ ಅಭಿವೃದ್ಧಿಯಲ್ಲಿ ಪಶುಪಾಲನೆಯು ಪ್ರಮುಖಪಾತ್ರ ವಹಿಸುತ್ತಾ ಬಂದಿದೆ ಎಂದರೆ ಖಂಡಿತ ಅತಿಶಯೋಕ್ತಿ ಎನ್ನಿಸಲಾರದು.

ಮಾರಾಟದ ವ್ಯವಸ್ಥೆ:-

ಸಾದರ ರೈತರು ತಮ್ಮ ಬೆಳೆಯನ್ನು ವರ್ಷವಿಡೀ ಕಷ್ಟಪಟ್ಟು, ಶ್ರಮವಹಿಸಿ, ಹಗಳಿರುಳೆನ್ನದೆ, ನೂರುಯಾತನೆಯನ್ನು ಅನುಭವಿಸಿ ಬೆಳೆದ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯಿಲ್ಲದೆ, ಸೂಕ್ತ ಬೆಲೆದೊರೆಯದೆ, ಪರದಾಡುವ ಪರಿಸ್ಥಿತಿಯಿದೆ. ಮತ್ತೆ ಕೆಲವೊಮ್ಮೆ ಬೆಲೆ ಇದ್ದಾಗ ಬೆಳೆ ಇಲ್ಲ; ಬೆಳೆ ಬಂದಾಗ ಬೆಲೆ ಇಲ್ಲ ಎಂಬ ಪರಿಸ್ಥಿತಿಯಿಂದಾಗಿ ರೈತರು ಟೊಮೇಟೋ, ರೇಷ್ಮೆಗೂಡು, ಬದನೆಕಾಯಿ, ಹೂವು ಮುಂತಾದ ತಾವು ಬೆಳೆದ ಬೆಳೆಯನ್ನು ರಸ್ತೆಗೆ ಚೆಲ್ಲಿ ಖಾಲಿ ಚೀಲದೊಂದಿಗೆ ತುಂಬಿದ ಕಣ್ಣೀರಿನೊಂದಿಗೆ ಮನೆಗೆ ಮರಳುವ ಪರಿಸ್ಥಿತಿಯನ್ನು ಇಂದು ರೈತರು ಎದುರಿಸಬೇಕಾಗಿದೆ. ಅಷ್ಟೇ ಅಲ್ಲದೇ ಮಾರುಕಟ್ಟೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಧ್ಯವರ್ತಿ ಕಾಟದಿಂದ ರೈತರು ತಮ್ಮ ಬೆಳೆಗಳ ಮೇಲೆ ತಾವೇ ಹಿಡಿತ ಕಳೆದುಕೊಳ್ಳುವಂತಾಗುತ್ತಿದೆ. ನಮ್ಮ ಬಹುತೇಕ ರೈತರು ಅನಕ್ಷರಸ್ಥರಾದ ಕಾರಣ ಅವರು ಮಧ್ಯವರ್ತಿಗಳು ಮತ್ತು ಬಂಡವಾಳಶಾಹಿಗಳ ಶೋಷಣೆಗೆ ಒಳಗಾಗುತ್ತಿದ್ದಾರೆ. ರೈತರೆಲ್ಲರೂ ಸಂಘಟಿತರಾಗಿ ಈ ಶೋಷಣೆಯ ಜಾಲದಿಂದ ಹೊರಬರುವ ತುರ್ತು ಅಗತ್ಯವಿದೆ. ಸರ್ಕಾರವು ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ನಿಗದಿಪಡಿಸುವ ಅವಶ್ಯಕತೆ ಇದೆ. ಇದರಿಂದ ರೈತರ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ.

ವ್ಯಾಪಾರ; ವರ್ತಕರು:-

ಸಾದರಲ್ಲಿ ಬಹುತೇಕ ಹಲವರು ಕೃಷಿಕರಿದ್ದರೆ, ಕೆಲವರು ವರ್ತಕರಿದ್ದಾರೆ. ವ್ಯಾಪಾರವೆಂಬುದು ಕೇವಲ ಲಾಭಗಳಿಸುವ ಒಂದು ವೃತ್ತಿಯಲ್ಲ. ವ್ಯಾಪಾರದ ಮೂಲಕ ಸಹ ಸಮಾಜಸೇವೆಯನ್ನು ಮಾಡಬಹುದೆಂಬುದನ್ನು ತಮ್ಮ ಜನಕ್ಕೆ ಆ ಮುಖೇನ ನಮ್ಮ ನಾಡಿಗೆ ತಿಳಿಯಪಡಿಸಿದವರು, ಸಾದರು

ಜಾತಿಯ ಪ್ರಾತಃಸ್ಮರಣೀಯರಲ್ಲಿ ಒರ್ವರೆನಿಸಿದ ಮಂಡಿ ಹರಿಯಣ್ಣನವರು. ಇವರು ಸಾದರಲ್ಲಿನ ಪ್ರಮುಖ ವರ್ತಕರಾಗಿದ್ದು, ಇತರೆ ಎಲ್ಲ ವರ್ತಕರ ಅಭಿಮಾನ, ಗೌರವಗಳಿಗೆ ಪಾತ್ರರಾಗಿದ್ದರು.

ಇತ್ತೀಚಿನ ಸಂದರ್ಭದಲ್ಲಿ ಸಾದರಲ್ಲಿ ಬಹುತೇಕ ವರ್ತಕರಿದ್ದು ಇವರೆಲ್ಲರು ಹಣ್ಣು, ಹೂವು, ತರಕಾರಿಯ ವ್ಯಾಪಾರ ಮಾಡುವುದನ್ನು ಗಮನಿಸಬಹುದು. ಇವರ ಆರ್ಥಿಕ ಸ್ಥಿತಿಯು ಕೃಷಿಕರಿಗಿಂತ ಬಹುಪಾಲು ಸುಧಾರಿಸಿದ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಹಿಂದೆ ಇವರಲ್ಲಿ ಸಾಟಿ ವಿನಿಮಯ ಪದ್ಧತಿ ಇದ್ದು ಇಂದು ಬದಲಾದ ಪರಿಸ್ಥಿತಿಗನುಗುಣವಾಗಿ ಹಣ ವಿನಿಮಯ ಪದ್ಧತಿ ಇದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಸಾಟಿ ವಿನಿಮಯ ಪದ್ಧತಿ ಇರುವುದನ್ನು ಕಾಣಬಹುದು.

ಪ್ರಸ್ತುತ ಸಂದರ್ಭದಲ್ಲಿ ಸಾದರ ಆರ್ಥಿಕ ಪರಿಸ್ಥಿತಿಯು ಹಲವು ಸಂಕಷ್ಟಗಳಿಗೆ ಗುರಿಯಾಗುತ್ತಿದೆ. ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಅನ್ನದಾತನ ಬದುಕು ಅಯೋಮಯವಾಗುವ ಪರಿಸ್ಥಿತಿ ಬಂದೊದಗಿದೆ. ಬೆಲೆ ಸಮಸ್ಯೆ, ಮಧ್ಯವರ್ತಿಗಳ ಶೋಷಣೆ; ಜೊತೆಗೆ ಆಧುನಿಕ ವ್ಯವಸಾಯಕ್ಕೆ ಬಳಸುವ ಯಂತ್ರೋಪಕರಣಗಳು, ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷದಿಗಳೆಲ್ಲವೂ ತುಂಬಾ ದುಬಾರಿಯಾಗಿದ್ದು ಸಕಾಲಕ್ಕೆ ದೊರೆಯುದೆ ಇರುವುದು. ಮತ್ತೆ ಕೆಲವೊಮ್ಮೆ ಕಳಪೆ ಬಿತ್ತನೆ ಬೀಜಗಳ ಜಾಲದಿಂದ ಶೋಷಣೆಗೆ ಒಳಗಾಗುವುದು. ಸಾಲದ ಬಾಧೆ, ಅತಿವೃಷ್ಟಿ, ಸಾಲ-ಸೋಲಗಳಿಂದ ಮಾನಸಿಕ ಹಿಂಸೆ. ವಿದ್ಯುತ್ ಸೌಲಭ್ಯ ಸರಿಯಾಗಿಲ್ಲದೆ ರಾತ್ರಿ ಪಾಳಿಯಲ್ಲಿ ಹೊಲಗದ್ದೆಗಳಿಗೆ ನೀರುಣಿಸಲೆಂದು ಹೋಗಿ ಹಲವು ಕಾಡುಪ್ರಾಣಿಗಳಿಂದ ತೊಂದರೆ ಅನುಭವಿಸುತ್ತಿರುವುದು.

ಹೀಗೆ ಹೇಳುತ್ತಾ ಹೋದರೆ ಪಟ್ಟಿಬೆಳೆಯುತ್ತಾ ಹೋಗುತ್ತದೆ. ನೂರಾರು ಸಮಸ್ಯೆಗೆ ಸಿಲುಕಿರುವ ಅನ್ನದಾತನನ್ನು ಈ ಸಂಕಷ್ಟಗಳಿಂದ ಪಾರುಮಾಡಿದಾಗ ಮಾತ್ರವೇ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಾಧ್ಯವಿದೆ.

೩.೬:- ರಾಜಕೀಯ ಹಾಗೂ ನ್ಯಾಯ ವ್ಯವಸ್ಥೆ.

೩.೬: ಅ. ರಾಜಕೀಯ ವ್ಯವಸ್ಥೆ

ರಾಜಕೀಯವೆಂಬುದು ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ನಮ್ಮ ನಾಡು ಭೌಗೋಳಿಕವಾಗಿ ವಿಸ್ತಾರವಾಗಿದ್ದು. ಅಷ್ಟೇ ವಿಸ್ತಾರವಾದ ರಾಜಕೀಯ ಹಿನ್ನೆಲೆಯನ್ನು, ಇತಿಹಾಸವನ್ನು ಹೊಂದಿದೆ. ರಾಜಕೀಯ ಇತಿಹಾಸಕ್ಕೆ ದೇಶವನ್ನಾಳಿದ ರಾಜಮಹಾರಾಜರು, ಮಂತ್ರಿಮಾನ್ಯರು, ಪಾಳೆಗಾರರು, ಸ್ಥಾನಿಕ ಪ್ರಭುಗಳು ನೀಡಿದ ಕೊಡುಗೆ ಅಪಾರವಾಗಿದೆ. ಅಷ್ಟೇ ಮಹತ್ವದ್ದಾಗಿದೆ. ಆದರೆ ಸಮಾಜದಲ್ಲಿ ಮೇಲ್ವರ್ಗಕ್ಕೆ ಸೇರಿದ ಪ್ರತಿಷ್ಠಿತ ವರ್ಗದ ಇವರುಗಳ ಕೊಡುಗೆ ಮಾತ್ರವೇ ಒಂದು ದೇಶದ ಪರಿಪೂರ್ಣ ಇತಿಹಾಸವಾಗುವುದಕ್ಕೆ ಸಾಧ್ಯವಿಲ್ಲ.

ಆಳರಸರ ಖಡ್ಗಕ್ಕೆ ಹಿಡಿಯಾದ, ತೋಳಿಗೆ ಬಲವಾದ ಜನಸಾಮಾನ್ಯರ ಬೆಂಬಲ, ರಾಜಕೀಯ ಇಚ್ಛಾಶಕ್ತಿಯೂ ಬಹುಮುಖ್ಯವಾದ ಇತಿಹಾಸದ ಒಂದು ಭಾಗವಾಗಿದೆ. ಜನಸಾಮಾನ್ಯರ

ಪ್ರಜಾವರ್ಗದ ಪ್ರಾಮಾಣಿಕ ಬೆಂಬಲವಿಲ್ಲದೆ ರಾಜನ ಸಿಂಹಾಸನ ಸ್ಥಿರವಾಗಿರಲಾರದು. ಕಾಲಕಾಲಕ್ಕೆ ತೆರಿಗೆ ನೀಡಿ ಒತ್ತಾಸೆಯಾಗಿ ನಿಂತು ಅಭಿಮಾನ ತೋರಿ, ಆಡಳಿತದ ಸ್ಥಿರತೆಗೆ, ಅವರ ಮೇಲ್ಮೆಗೆ ಕಾರಣರಾದವರಲ್ಲಿ ಸಾದರು ಒಬ್ಬರಾಗಿದ್ದಾರೆ. ನಮ್ಮ ನಾಡಿನ ರಾಜಕೀಯ ಇತಿಹಾಸಕ್ಕೆ ಸಾದರ ಕೊಡುಗೆ ಅನುಪಮವಾದುದಾಗಿದೆ.

ಸಾದರು ಸ್ಥಾನಿಕ ಪ್ರಭುಗಳಾಗಿ, ಸಾಮಂತ ದೊರೆಯಾಗಿ ಆಳ್ವಿಕೆ ಮಾಡಿದ ವಿವರಗಳು ಶಾಸನಗಳಲ್ಲಿ ದೊರೆಯುತ್ತದೆ. ಈ ಕುರಿತು ನದಿಹರಳಹಳ್ಳಿ ಶಾಸನದಲ್ಲಿ ಸಾದರು ಜಾತಿಯ ಪ್ರದೀಪಕನಾದ ನಾಗಗಾವುಂಡನು, ಕಳಚೂರ್ಯ ಚಕ್ರವರ್ತಿ ವೀರ ಬಿಜ್ಜಣ ದೇವನ ಸಾಮಂತನಾಗಿ ಆಳ್ವಿಕೆ ನಡೆಸಿದ ವಿವರ ದೊರೆಯುತ್ತದೆ. ಇದರಿಂದ ತಿಳಿಯುವ ಪ್ರಮುಖ ಅಂಶವೆಂದರೆ ಸಾದರು ಜಾತಿಯು ಅಂದಿನ ದಿನಗಳಲ್ಲಿಯೇ ಪ್ರತಿಷ್ಠಿತ ಕುಲವಾಗಿದ್ದ ಅಂಶ ತಿಳಿಯುತ್ತದೆ.

ಇನ್ನು ಸಾದರು ಪಾಳೇಗಾರರಾಗಿ ಆಳ್ವಿಕೆ ನಡೆಸಿದ್ದಾರೆಂಬುದಕ್ಕೆ ಹಲವು ಕುರುಹುಗಳು ದೊರೆಯುತ್ತವೆ. ಚಿಕ್ಕಬಳ್ಳಾಪುರ ಜಿಲ್ಲೆಯ, ಗೌರಿಬಿದನೂರು ತಾಲ್ಲೂಕಿನ ಸಾದರ್ಲಹಳ್ಳಿ ಗ್ರಾಮದಲ್ಲಿ ಸಾದರು ಪಾಳೇಗಾರಿಕೆ ನಡೆಸಿರುವ ಕುರುಹುಗಳಿವೆ.

ಸಾದರು ಅಲ್ಪಸಂಖ್ಯಾತರಾದರೂ ಗ್ರಾಮಾಡಳಿತದಲ್ಲಿ ಬಹುಸಂಖ್ಯಾತರಿಗಿಂತ ಹೆಚ್ಚಿನ ಸ್ಥಾನ, ಮನ್ನಣೆ, ಗೌರವಗಳನ್ನು ಹೊಂದಿದ್ದಾರೆ. ಊರಿಗೆ ಒಂದೇ ಸಾದರ ಮನೆಯಿದ್ದರೂ ಆ ಊರಿನ ಗೌಡನ ಸ್ಥಾನವನ್ನು ಸಾದರೇ ಪಡೆಯುತ್ತಿದ್ದರು. ತಾವು ನೆಲೆಸಿರುವ ಗ್ರಾಮಗಳಲ್ಲಷ್ಟೇ ಅಲ್ಲದೇ ತಮ್ಮ ಜಾತಿಯು ಜನರಿಲ್ಲದ ನೆರೆಯ ಗ್ರಾಮದ ದೇವಾಲಯ, ಕೆರೆ ಮುಂತಾದ ಸಾರ್ವಜನಿಕ ಕ್ಷೇತ್ರಗಳಿಗೆ ಧಾನ-ಧರ್ಮಗಳನ್ನು ನೀಡುವ ಮುಖೇನ ಆ ಗ್ರಾಮದಲ್ಲಿಯೂ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಳ್ಳುತ್ತಿದ್ದರು, ವ್ಯಾಪಿಸಿಕೊಳ್ಳುತ್ತಿದ್ದರು. ಸಾದರು ಉದಾರತೆಗೆ ಹೆಸರುವಾಸಿಯಾಗಿ, ಎಲ್ಲ ಜನತೆಯೊಂದಿಗೆ ಸೌಹಾರ್ದತೆಯಿಂದ ಜೀವನ ನಡೆಸಿದವರು. ಉತ್ತಮ ರೀತಿಯಿಂದ ಗ್ರಾಮಡಳಿತ ನಡೆಸಿ; ಹಲವು ಗೋಕುಂಟೆಗಳು, ಕೆರೆ, ಬಾವಿಗಳನ್ನು ನಿರ್ಮಿಸಿದರು.

ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಸೌಲಭ್ಯವಿಲ್ಲದ ಸಂದರ್ಭದಲ್ಲಿ ಗ್ರಾಮಕ್ಕೆ ಪ್ರಥಮ ಬಾರಿಗೆ ವಿದ್ಯುತ್ ಸೌಲಭ್ಯ ಒದಗಿಸಿದ, ಜನತೆಯ ಬಾಳಿನ ಕತ್ತಲೆಯನ್ನು ಕಳೆದ ಪ್ರದೀಪಕರನ್ನು ಗ್ರಾಮದ ಜನತೆ ಇಂದಿಗೂ ಮನಸಾ ಸ್ಮರಿಸುತ್ತಾರೆ, ಗೌರವಿಸುತ್ತಾರೆ.

ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾದರ ಕೆಲ ಪ್ರಮುಖ ಗಣ್ಯರುಗಳಾದ ಗಂಗಸಂದ್ರದ ಗೌರಮ್ಮ, ಮುಖ್ಯಮಂತ್ರಿ ಚಂದ್ರು, ಲಕ್ಷ್ಮೀನರಸಿಂಹಯ್ಯನವರು ಗಮನಾರ್ಹರಾಗಿದ್ದಾರೆ.

ಲಕ್ಷ್ಮೀನರಸಿಂಹಯ್ಯರವರು:-

ರಾಮಕೃಷ್ಣಹೆಗ್ಗಡೆರವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ, ಅವರ ಸಚಿವಸಂಪುಟದಲ್ಲಿ ವಿದ್ಯುತ್ ಸಚಿವರಾಗಿ ಲಕ್ಷ್ಮೀನರಸಿಂಹಯ್ಯರವರು ಸೇವೆಸಲ್ಲಿಸಿದ್ದಾರೆ. ಇವರು ತುಮಕೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿದ್ದರು. ಸಮಾಜಸೇವೆಯಲ್ಲಿ ವಿಶೇಷ

ಒಲವುಳ್ಳ ಇವರು ಸಾದರ ಜಾತಿಯನ್ನು ಪ್ರವರ್ಗ "IIA" ಗೆ ಸೇರಿಸಲು ಸಾಕಷ್ಟು ಹೋರಾಟ ನಡೆಸಿದ್ದರು. ಅಷ್ಟೇ ಅಲ್ಲದೇ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೇಂದ್ರಸರ್ಕಾರದ ಅಧಿಕಾರಶಾಹಿ–ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟ ಮಾಡಿ ಸೆರೆವಾಸವನ್ನು ಅನುಭವಿಸಿದ್ದರು. ಹೀಗೆ ಸಾದರಲ್ಲಿ ಮಿಂಚಿ ಮರೆಯಾದ ಧೃವತಾರೆಗಳಲ್ಲಿ ಲಕ್ಷ್ಮೀನರಸಿಂಹಯ್ಯನವರು ಒಬ್ಬರಾಗಿದ್ದಾರೆ.

೩.೬:– ಆ. ನ್ಯಾಯ ವ್ಯವಸ್ಥೆ

ಸಾದರಲ್ಲಿ ತಮ್ಮದೇ ಆದ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಯನ್ನು ಹೊಂದಿದ್ದರು. ಈ ನಿಟ್ಟಿನಲ್ಲಿ ನ್ಯಾಯತೀರ್ಮಾನಕ್ಕಾಗಿ ಕಟ್ಟೆಮನೆಗಳನ್ನು ಸ್ಥಾಪಿಸಿಕೊಂಡಿದ್ದರು. ಜಾತಿಯಲ್ಲಿ ತಲೆದೂರಬಹುದಾದ ವ್ಯವಹಾರ–ವಹಿವಾಟು, ಜಮೀನು, ಹಣಕಾಸು, ದಾಂಪತ್ಯ, ವಿವಾಹ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸೃಷ್ಟಿಯಾಗುವ ವಿವಾದಗಳನ್ನು ಊರಿನ ಹಿರಿಯರೆಲ್ಲರೂ ಕಟ್ಟೆಮನೆಯಲ್ಲಿ ಸೇರಿ ಚರ್ಚಿಸಿ ಬಗೆಹರಿಸುತ್ತಿದ್ದರು.

ಸುಮಾರು ೧೫–೨೦ ಗ್ರಾಮಗಳಿಗೆ ಒಂದೊಂದು ಕಟ್ಟೆಮನೆಗಳಿದ್ದವು. ಇವು ಜಾತಿಯಲ್ಲಿನ ಎಲ್ಲಾ ರೀತಿಯ ಒಳಜಗಳ, ಅಂತಃಕಲಹಗಳನ್ನು ಬಗೆಹರಿಸುತ್ತಿದ್ದವು. ಕಟ್ಟೆಮನೆಯಲ್ಲಿ ದೂರುಗಳನ್ನು 'ದಾಖಲಿಸಲೋಸುಗ' ಒಬ್ಬ ಶಾನುಭೋಗನನ್ನು ನೇಮಿಸಲಾಗಿದ್ದಿತು. ಇವರು ದೂರುಗಳನ್ನು ದಾಖಲಿಸಿಕೊಂಡು ಪ್ರಮುಖರ ಗಮನಕ್ಕೆ ತರುತ್ತಿದ್ದರು. ಮತ್ತು ಕಕ್ಷಿದಾದರಿಗೆ ವಿಚಾರಣೆಯ ದಿನವನ್ನು ತಿಳಿಯಪಡಿಸುತ್ತಿದ್ದರು.

ಈ ನಿಟ್ಟಿನಲ್ಲಿ 'ಕಾಕಿ'ಯು ಅಂದಿನ ದಿನಗಳಲ್ಲಿಯೇ ಸಾದರ ಪ್ರಮುಖ ಕಟ್ಟೆಮನೆಯಾಗಿತ್ತು. ಅಷ್ಟೇ ಅಲ್ಲದೇ ಸಾದರಲ್ಲಿನ ವಿವಾದಗಳನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಹಾಗೆಯೇ ಬ್ಯಾಡಗೆರೆ ಸಹ ಸಾದರ ಕಟ್ಟೆಮನೆಯಾಗಿ ಎಲ್ಲರ ಗಮನ ಸೆಳೆದಿತ್ತು.

ಹೀಗೆ ಇಂದಿನ ನ್ಯಾಯಲಯಗಳಿಗಿಂತ ಹಿಂದಿನ ಕಟ್ಟೆಮನೆಗಳಲ್ಲಿಯೇ ಸಕಾಲಕ್ಕೆ, ಸುಲಭವಾಗಿ, ಸರಿಯಾದ ರೀತಿಯಲ್ಲಿ ನ್ಯಾಯದೊರೆತು; ವಿವಾದಗಳೆಲ್ಲವೂ ಬಹುಬೇಗನೆ ಇತ್ಯರ್ಥಗೊಳ್ಳುತ್ತಿದ್ದವೆಂಬುದು ಸಾದರ ಹಲವು ಹಿರಿಯ ವಕ್ತೃಗಳ ಅಭಿಪ್ರಾಯವಾಗಿದೆ.

೩.೭:– ಶೈಕ್ಷಣಿಕ ಸ್ಥಿತಿ–ಗತಿ.

ಯಾವುದೇ ಒಂದು ಜನಸಮುದಾಯದ ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ಶಿಕ್ಷಣ ಬಹುಮುಖ್ಯವಾದ ಸಾಧನವಾಗಿದೆ. ವಿದ್ಯೆಯು ವ್ಯಕ್ತಿಯಲ್ಲಿ ಜ್ಞಾನಾಭಿವೃದ್ಧಿಯಾಗಿಸುವುದರ ಜೊತೆಗೆ, ಬದುಕಿನ ದಾರಿದೀಪವಾಗಿಯೂ ಕಾರ್ಯನಿರ್ವಹಿಸುತ್ತದೆ. ಕೃಷಿಯು ತಮ್ಮ ಪ್ರಧಾನ ಕಸುಬನ್ನಾಗಿಸಿಕೊಂಡ ಸಾದರ ಹಿಂದಿನ ಶಿಕ್ಷಣ ವ್ಯವಸ್ಥೆಯನ್ನು ಗಮನಿಸಿದಾಗ; ವಿದ್ಯಾವಂತ ವ್ಯಕ್ತಿಯೋರ್ವನ ಮನೆಯ ದೀಪಕ್ಕೆ ಎಣ್ಣೆಯನ್ನು ಕೊಟ್ಟು, ಆ ದೀಪದ ಬೆಳಕಿನಲ್ಲಿ ಆಸಕ್ತರೆಲ್ಲರೂ

ಕುಳಿತು ಪಾಠ, ಪ್ರವಚನ, ಸಾಧಕ ವಿದ್ಯೆಯನ್ನು ಕಲಿಯುತ್ತಿದ್ದರು. ಇದರಿಂದ ಜನರ ಜ್ಞಾನಮಟ್ಟ ವೃದ್ಧಿಯಾಗುತ್ತಿದ್ದಿತು. ಆದರೂ ಸಾದರಲ್ಲಿನ ಸಾಕ್ಷರತೆಯ ಪ್ರಮಾಣ ಬಹಳ ಕಡಿಮೆ ಇದೆ.

ಇಂದಿನ ಸ್ಪರ್ಧಾಜಗತ್ತಿನಲ್ಲಿ ಎಲ್ಲರಂತೆ ಪ್ರಜ್ಞಾವಂತನಾಗಿ, ಮುಕ್ತವಾದ ಬದುಕನ್ನು ಹೊಂದಲು, ಮಾರುಕಟ್ಟೆಯಲ್ಲಿನ ಶೋಷಣೆಯ ವಿರುದ್ಧ ಹೋರಾಡಲು, ಒಟ್ಟಾರೆ ತಮ್ಮ ಬದುಕನ್ನು ಹಸನಾಗಿಸಿಕೊಳ್ಳಲು ಶಿಕ್ಷಣದ ಅಗತ್ಯವಿದೆ.

ಇನ್ನು ಸಾದರನ್ನು ಕುರಿತು ದೊರೆತಿರುವ ಎಲ್ಲಾ ವರದಿಗಳು ಮತ್ತು ಕ್ಷೇತ್ರಕಾರ್ಯದ ಆಧಾರದಿಂದ, ಸಾದರಲ್ಲಿನ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆ ಎಂಬ ಅಂಶ ತಿಳಿಯುತ್ತದೆ. ನಮ್ಮ ಸಂವಿಧಾನದಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ, ಸಾಕ್ಷರತಾಂದೋಲನ ಕಳೆದ ಐವತ್ತು ವರ್ಷಗಳಿಂದ ನಿರಂತರ ನಡೆಯುತ್ತಿದ್ದರೂ ಸಹ ಸಾಕ್ಷರತೆಯ ಪ್ರಮಾಣ ರಾಷ್ಟ್ರಮಟ್ಟದಲ್ಲಿಯೇ ಶೇ. ೬೦ ಮಾತ್ರ ಇದೆ ಎಂದು ಸರ್ಕಾರದ ಅಂಕಿ-ಅಂಶಗಳು ಹೇಳುತ್ತಿವೆ. ಸಾದರಲ್ಲಿಯೂ ಸಾಕ್ಷರತೆಯ ಪ್ರಮಾಣ ಕಡಿಮೆ ಇರಲು ಕಾರಣ ಬಹುತೇಕರು ಶಾಲಾ-ಕಾಲೇಜುಗಳ ಕಡೆ ಹೋಗದೆ ಹೊಲಗದ್ದೆ, ತೋಟಗಳಲ್ಲಿ ದುಡಿಯಲು ತಮ್ಮನ್ನು ತಾವು ತೊಡಗಿಸಿಕೊಳ್ಳುವುದೇ ಆಗಿದೆ. ಹೀಗಾಗಿ ಸಾಕ್ಷರತೆಯ ಪ್ರಮಾಣವೇ ಕಡಿಮೆ ಇರುವ ಪರಿಸ್ಥಿತಿಯಲ್ಲಿ ಉನ್ನತ ಶಿಕ್ಷಣ ಕೇವಲ ಕೆಲವೇ ಮಂದಿ ಮಾತ್ರ ಪಡೆದಿದ್ದಾರೆ.

"ಸಾಮಾಜಿಕ ಶಿಕ್ಷಣ ಇಲಾಖೆಯ ಅಧಿಕಾರಿಣಿಯಾಗಿದ್ದ ಶ್ರೀಮತಿ ರಂಗಮ್ಮನವರು ತಮ್ಮ ಇಲಾಖಾ ವರದಿಯೊಂದರಲ್ಲಿ ಈ ವಿಷಯದ ಬಗ್ಗೆ ಬರೆದಿರುವ ಮಾತುಗಳು ಉಲ್ಲೇಖನಾರ್ಹ, "೧೯೬೧ರಿಂದಲೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಯೋಜನೆ ಜಾರಿಯಲ್ಲಿ ಇದ್ದಾಗ್ಯೂ ಸಹ ಕೆಲವು ಜಾತಿಯ ಜನರು ತಮ್ಮ ಗುಂಪಿನ ಪ್ರಮಾಣಕ್ಕೆ ತಕ್ಕಂತೆ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿಲ್ಲ. ಕೆಲವರು ಆರ್ಥಿಕವಾಗಿ ತೀರಾ ಹಿಂದುಳಿದಿದ್ದು ಮಕ್ಕಳನ್ನು ಶಾಲೆಗೆ ಕಳುಹಿಸಲು ಅಶಕ್ತರಾಗಿದ್ದಾರೆ. ಜೊತೆಗೆ ತಮ್ಮ ಕಸುಬುಗಳಿಗೆ ತಮ್ಮ ಮಕ್ಕಳನ್ನು ಸೇರಿಸಿಕೊಂಡು, ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಕಡೆಗೆ ಅವರ ಒಲವು. ಮುಂದುವರಿದ ಜಾತಿಯ ಜನರು ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಉಚಿತ ವಸತಿ ಗೃಹಗಳನ್ನು ತೆರೆದು ತಮ್ಮ ಜಾತಿಯ ವಿದ್ಯಾರ್ಥಿಗಳಿಗೇ ಈ ಸೌಲಭ್ಯಗಳನ್ನು ಒದಗಿಸಿದ್ದಾರಲ್ಲದೇ ವಿದ್ಯಾರ್ಥಿವೇತನಗಳನ್ನು ನೀಡುತ್ತಾರೆ. ಅನಿಶ್ಚಿತ ಹಾಗೂ ಕಡಿಮೆ ಆದಾಯವುಳ್ಳ ರೈತರು ಹಾಗೂ ಇತರ ಕೆಳದರ್ಜೆಯ ಉದ್ಯೋಗಗಳಲ್ಲಿ ತೊಡಗಿರುವ ಜನತೆಯು ತಮ್ಮ ಮಕ್ಕಳನ್ನು ಜಮೀನಿನ ಮೇಲೆ ಅಥವಾ ಇತರ ಪರಂಪರಾನುಗತವಾಗಿ ಬಂದ ಕಸುಬುಗಳಲ್ಲಿ ತೊಡಗಿಸುತ್ತಾರೆ. ಶಾಲೆಗಳು ಪ್ರಾರಂಭವಾದಾಗ ಗಣನೀಯ ಪ್ರಮಾಣದಲ್ಲಿ ಮಕ್ಕಳು ಶಾಲೆಗಳಿಗೆ ಸೇರಿದರೂ ಕಾಲ ಕಳೆದಂತೆ ಹೆಚ್ಚಿನ ಮಕ್ಕಳು ಶಾಲೆಗಳನ್ನು ಬಿಡುತ್ತಾರೆ"[3].

ಸಾದರ ಪರಿಸ್ಥಿತಿಯು ಇದರಿಂದ ಹೊರತಲ್ಲ, ಸಾದರಿಗೆ ಸಿಕ್ಕ ಕಡಿಮೆ ಅವಕಾಶಗಳನ್ನೇ ಸರಿಯಾದ ಕ್ರಮದಲ್ಲಿ ಸದುಪಯೋಗ ಪಡಿಸಿಕೊಂಡು ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ

ಮುನ್ನೆಡೆಗೆ ಅಡಿ ಇಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸ್ತ್ರೀಯರು ಸಹ ಶೈಕ್ಷಣಿಕ ಕ್ಷೇತ್ರದಲ್ಲಿ ಪುರುಷರಿಗಿಂತ ಹೆಚ್ಚಿನ ಮಟ್ಟದಲ್ಲಿ ಸಾಧನೆಗೈದಿದ್ದಾರೆ.

ಇನ್ನು ಹಿಂದೂ ಸಾದರ ಕ್ಷೇಮಾಭಿವೃದ್ದಿಸಂಘ, ಪುಟ್ಟನಂಜಮ್ಮ ಟ್ರಸ್ಟ್, ಸಾದರ ವಿದ್ಯಾರ್ಥಿ ನಿಲಯಗಳು ಸಾದರ ಶೈಕ್ಷಣಿಕ ಪ್ರಗತಿಗೆ ಪೂರಕ ಪಾತ್ರ ವಹಿಸುತ್ತಿವೆ. ಹೀಗೆ ಸಾದರ ಶಿಕ್ಷಣ ವ್ಯವಸ್ಥೆಯು ಸದಾ ಚಲನಶೀಲತೆಯಿಂದ ಕೂಡಿದೆ ಎಂದು ಹೇಳಬಹುದು.

ಸಂಘ ಸಂಸ್ಥೆಗಳು:-

ಜಾತಿಯೊಂದರ ಆರ್ಥಿಕ ಮತ್ತು ಸರ್ವತೋಭಿಮುಖ ಬೆಳವಣಿಗೆಯು ರಾಷ್ಟ್ರದ ಪ್ರಗತಿಗೆ ಪೂರಕವೂ, ಪ್ರೇರಕವೂ, ಪೋಷಕವೂ ಆಗಿರುವಂತಹದ್ದು. ಈ ದಿಸೆಯಲ್ಲಿ ಸಾದರು ಸಂಘಟಿತರಾಗಿ ತಮ್ಮ ಬದುಕಿಗೆ ಅಗತ್ಯವಾದ ಅವಶ್ಯಕತೆಗಳನ್ನು ಇತರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಪಡೆಯುವ ನಿಟ್ಟಿನಲ್ಲಿ ಸಾದರ ಸಂಘ ಸ್ಥಾಪನೆಯ ಕನಸನ್ನು ಕಂಡರು. ಈ ಸಂಘವು ಅಲ್ಪಸಂಖ್ಯಾತರಾದ ಇವರು ನಮ್ಮ ರಾಜ್ಯ ಮತ್ತು ನೆರೆರಾಜ್ಯ ಗಡಿಭಾಗಗಳಲ್ಲಿ ಹರಿದು ಹಂಚಿಹೋಗಿರುವ ಕಾರಣ ಸಂಘ ಸ್ಥಾಪನೆಯ ಮುಖೇನ ಜಾತಿಯ ಸದಸ್ಯರೆಲ್ಲರೂ ಒಂದೆಡೆ ಸೇರಲು, ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ನೆರವಾಯಿತು.

ಹಿಂದೂ ಸಾದರ ಕ್ಷೇಮಾಭಿವೃದ್ದಿಸಂಘ:-

ಹಿಂದೂ ಸಾದರ ಕ್ಷೇಮಾಭಿವೃದ್ದಿ ಸಂಘವು ೧೯೪೩ ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಕೆಲವು ಪ್ರಮುಖ ಧ್ಯೇಯೋಧ್ದೇಶಗಳ ಈಡೇರಿಕೆಗಾಗಿ ಸಂಘವು ಪ್ರಾರಂಭವಾಯಿತು. ಸಂಘದ ಪ್ರಮುಖ ಉದ್ದೇಶಗಳೆಂದರೆ-

ಸಾದರ ಸಮಾಜದವರ ಹಾಗೂ ಇತರೆಯವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ, ನೈತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅಭಿವೃದ್ದಿ ಹೊಂದಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

ಸಮಾಜದ ವಿದ್ಯಾಭಿವೃದ್ದಿಗೋಸ್ಕರ ವಿದ್ಯಾ ಸಂಸ್ಥೆಗಳನ್ನು ವೃತ್ತಿ ಶಿಕ್ಷಣ ಶಾಲೆಗಳನ್ನು ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರ ನಿಲಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಸ್ಥಾಪಿಸಿ ನಡೆಸಿಕೊಂಡು ಬರುವುದು.

ಸಾದರ ಸಮಾಜದಲ್ಲಿ ಪರಸ್ಪರ ಮೈತ್ರಿಯನ್ನು ವೃದ್ದಿಪಡಿಸಿಕೊಂಡು ತಮ್ಮ ತಮ್ಮೊಳಗೆ ಬರಬಹುದಾದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು, ಐಕಮತ್ಯದಿಂದ ಬಾಳಲು ಪ್ರೋತ್ಸಾಹಿಸುವುದು, ಮತ್ತು ಎಲ್ಲಾ ಕುಂದು ಕೊರತೆಗಳನ್ನು ಸರ್ಕಾರದ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಅವುಗಳ ನಿವಾರಣೆಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗೋಸ್ಕರ ಸರ್ಕಾರದಿಂದ ಪಡೆಯಬಹುದಾದ ಪ್ರಯೋಜನಗಳನ್ನು ಪಡೆಯಲು ಅವಶ್ಯಕವಾದ ಕಾರ್ಯಕ್ರಮಗಳನ್ನು ರೂಪಿಸುವುದು. ಸಾದರ ಸಮಾಜದ ಗಣ್ಯವ್ಯಕ್ತಿಗಳನ್ನು ಮತ್ತು ಪ್ರತಿಭಾಶಾಲಿಗಳನ್ನು ಆಹ್ವಾನಿಸಿ ಗೌರವಿಸುವುದು, ಹಾಗೂ ನಾಡಿನ ಅನುಭವಸ್ತರೂ, ಪ್ರಸಿದ್ಧರೂ, ಸಾಹಿತಿಗಳೂ, ತಜ್ಞರೂ ಮತ್ತು ಪ್ರತಿಭಾಶಾಲಿಗಳನ್ನು ಆಹ್ವಾನಿಸಿ ಅವರ ಭಾಷಣಗಳನ್ನು ಮತ್ತು ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಸಾದರ ಜನರ ಜ್ಞಾನಾಭಿವೃದ್ಧಿಗೆ ನೆರವಾಗುವುದು. ಸಾದರ ಜ್ಞಾನಾಭಿವೃದ್ಧಿಗಾಗಿ ವಾಚನಾಲಯಗಳು ಮತ್ತು ಪುಸ್ತಕ ಭಂಡಾರಗಳನ್ನು ಸ್ಥಾಪಿಸುವುದು. ಸಾದರ ಸಮಾಜದ ಜನತೆಯು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು.

ಸಮಾಜದ ಯುವಕರು ಸ್ವಯಂ ಉದ್ಯೋಗ ಮತ್ತು ವೃತ್ತಿಪರ ಉದ್ಯೋಗಗಳಲ್ಲಿ ನಿರತವಾಗಿ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಉತ್ತೇಜನ ನೀಡುವುದು. ರೇಷ್ಮೆ, ತೋಟಗಾರಿಕೆ, ಹೈನುಗಾರಿಕೆ ಇವೇ ಮುಂತಾದ ವ್ಯವಸಾಯಕ್ಕೆ ಹೊಂದುವ, ಆರ್ಥಿಕಾಭಿವೃದ್ಧಿಗೆ ನೆರವಾಗುವ ಕಸುಬುಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು. ಅಗತ್ಯ ಮಾಹಿತಿಯನ್ನುಳ್ಳ ಪತ್ರಿಕೆಯನ್ನು ಅಚ್ಚುಹಾಕಿಸಿ ಜಾತಿಯ ಎಲ್ಲರಿಗೂ ಹಂಚುವುದು.

ವರದಕ್ಷಿಣೆ ಎಂಬ ಸಾಂಕ್ರಾಮಿಕ ಪಿಡುಗುಗಳನ್ನು ನಾಶಪಡಿಸಲು ಸರಳ, ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲು ಪ್ರೋತ್ಸಾಹಿಸುವುದು.

ಮಹಿಳೆಯರ, ಯುವಕರ ಹಾಗೂ ಸರ್ಕಾರಿ ನೌಕರರ, ನೌಕರೇತರ ಶಾಖೆಗಳನ್ನು ತೆರೆಯುವುದು, ಜಾತಿಯ ಮಹಿಳೆಯರ ಕಲೆ, ಇತಿಹಾಸ, ಸಂಗೀತ, ಕರಕುಶಲತೆ, ಗೃಹ ಕೈಗಾರಿಕೆ ಇವೇ ಮುಂತಾದ ಸಾಂಸ್ಕೃತಿಕ ಮತ್ತು ಕರಕುಶಲ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು. ಹೀಗೆ ಸಂಘವು ಹಲವು ಧ್ಯೇಯೋದ್ದೇಶಗಳನ್ನು ಹೊಂದಿದ್ದು ಸಾದರು ಜಾತಿಯ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

ಆಡಳಿತ:–

ಕೇಂದ್ರ ಸಂಘದ, ಕ್ಷೇತ್ರಗಳ ಮತ್ತು ಶಾಖೆಗಳ ವಿಶಿಷ್ಟ ಆಡಳಿತವನ್ನು ಒಂದು ಕಾರ್ಯಕಾರಿ ಸಮಿತಿಯಿಂದ ನಡೆಸಲಾಗುತ್ತದೆ. ಕೇಂದ್ರ ಸಂಘದ ಕಾರ್ಯಕಾರಿ ಸಮಿತಿಗೆ ೪೯ ಸದಸ್ಯರಿದ್ದು ಈ ಕಾರ್ಯಕಾರಿ ಸಮಿತಿಯು ೪೯ ಸದಸ್ಯರಲ್ಲೇ ಕೆಳಕಂಡಂತೆ ಆಡಳಿತ ಸಮಿತಿಯನ್ನು ಚುನಾಯಿಸಲಾಗುತ್ತದೆ. ಒಬ್ಬ ಅಧ್ಯಕ್ಷರು, ನಾಲ್ವರು ಉಪಾಧ್ಯಕ್ಷರು, ಒಬ್ಬ ಪ್ರಧಾನ ಕಾರ್ಯದರ್ಶಿ, ಒಬ್ಬ ಸಹಾಯಕ ಕಾರ್ಯದರ್ಶಿ, ಒಬ್ಬ ಖಜಾಂಚಿ ಮತ್ತು ಒಬ್ಬ ಲೆಕ್ಕ ಪರಿಶೋಧಕರನ್ನು ಒಟ್ಟು ೪೯ ಸದಸ್ಯರನ್ನು ಸಾದರಿರುವ ಬೆಂಗಳೂರು, ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ, ಆನೇಕಲ್, ಮೈಸೂರು, ಮಂಡ್ಯ, ತುಮಕೂರು, ಗುಬ್ಬಿ, ಕೊರಟಗೆರೆ, ಮಧುಗಿರಿ, ಶಿರಾ, ಪಾವಗಡ,

ಗೌರಿಬಿದನೂರು, ಮಡಕಶಿರಾ, ಹಿಂದೂಪುರ, ಪೆನುಗೊಂಡ, ಹೊಸೂರು (ತಮಿಳುನಾಡು) ತಾಲ್ಲೂಕುಗಳಿಂದ ಚುನಾಯಿಸಲಾಗುತ್ತದೆ.

ಸಾದರ ವಿದ್ಯಾರ್ಥಿ ನಿಲಯ (ಸಾದರ ವಿದ್ಯಾಭಿವೃದ್ಧಿ ಸಂಘ):-

ಬೆಂಗಳೂರು ನಗರದಲ್ಲಿ ೪೦ ವರ್ಷಗಳ ಕಾಲ ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಯಿಸಿ, ಸಹಸ್ರಾರು ಜನ ವಿದ್ಯಾರ್ಥಿಗಳಿಗೆ ಅನ್ನದಾನ, ವಿದ್ಯಾದಾನ ಮಾಡಿದವರು ಧರ್ಮಾತ್ಮರು, ವರ್ತಕ ಪ್ರಿಯರು, ಮೈಸೂರು ಶಾಸನ ಸಭೆಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುವವರು ಜಾತಿಯ ಪ್ರಾತಃ ಸ್ಮರಣೀಯರಾದ ಪೂಜ್ಯ ಮಂಡಿಹರಿಯಣ್ಣನವರು ೧೯೧೭ ರಲ್ಲಿ ತಮ್ಮ ಸ್ವಂತ ಖರ್ಚಿನಿಂದ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಇದರಿಂದ ಅನೇಕ ಬಡವಿದ್ಯಾರ್ಥಿಗಳ ಬಾಳು ಹಸನಾಯಿತು. ಇವರ ಪರಿಶ್ರಮದಿಂದ ಪ್ರಾರಂಭವಾದ ಸಾದರ ವಿದ್ಯಾಭಿವೃದ್ಧಿ ಸಂಘವು ಬೃಹತ್ತಾಗಿ ಬೆಳೆಯಲು ಅಭಿವೃದ್ಧಿ ಹೊಂದಲು ಮಹನೀಯರಾದ ಮಂಡಿಹರಿಯಣ್ಣನವರು ಸಾಕಷ್ಟು ಶ್ರಮಿಸಿದ್ದಾರೆ. ಇಂಥಹ ಮಹನೀಯರ ಜೊತೆ ಸಾದರ ಇತರ ಗಣ್ಯ ವ್ಯಕ್ತಿಗಳು ಸೇರಿ ಸಂಘದ ಮಹತ್ವವನ್ನು ಮನಗಂಡು ೧೯೪೩ರಲ್ಲಿ ಸಾದರ ವಿದ್ಯಾಭಿವೃದ್ಧಿ ಸಂಘವನ್ನು ಪ್ರಾರಂಭಿಸಿದರು. ನಂತರ ೧೯೬೬ರಲ್ಲಿ ಶ್ರೀ.ಎಂ.ಎಸ್.ಮಲ್ಲಯ್ಯನವರು ಸಂಘಧ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದರು. ಜೊತೆಗೆ ಜಿ.ವೆಂಕಟರಮಣಪ್ಪ, ಆರ್.ಚಿಕ್ಕಣ್ಣಪ್ಪ, ಪುರದ ತಮ್ಮಣ್ಣಪ್ಪ, ಚೌಡಯ್ಯ ಮತ್ತು ಎಸ್.ನಂಜುಂಡಗೌಡ ಮುಂತಾದವರು ಗೌರಿಬಿದನೂರು ತಾಲ್ಲೂಕು ಅಲಕಾಪುರದಲ್ಲಿ ಸಾದರು ಜಾತಿಯವರನ್ನೆಲ್ಲಾ ಒಟ್ಟುಗೂಡಿಸಿ ಸಭೆ ನಡೆಸಿ ಸಂಘದ ಅಧ್ಯಕ್ಷರಾಗಿ ಜಿ.ವೆಂಕಟರಮಣಪ್ಪನವರನ್ನು ಆರಿಸಿ ಇವರ ನಾಯಕತ್ವದಲ್ಲಿ ವಿದ್ಯಾರ್ಥಿನಿಲಯಕ್ಕೆ ಬೆಂಗಳೂರಿನಲ್ಲಿ ನಿವೇಶನವನ್ನು ಖರೀದಿಸಿದರು. ನಂತರ ಅದನ್ನು ಮಾರಿ ಆಗಿನ ಬೆಂಗಳೂರು ಟ್ರಸ್ಟ್ ಬೋರ್ಡ್ ಸದಸ್ಯರಾಗಿದ್ದ ಮಂಡಿ ಹರಿಯಣ್ಣನವರ ಮಗ ಎಂ.ಹೆಚ್. ರಾಜು ಮತ್ತು ಇಂಜಿನಿಯರ್ ಬಿ.ಕೆ.ಶಿವಲಿಂಗಯ್ಯನವರ ಸಹಕಾರದಿಂದ ರಾಜಾಜಿನಗರ ಮಹಾಲಕ್ಷ್ಮೀ ಲೇಔಟ್‌ನಲ್ಲಿ ಸೈಟ್ ಖರೀದಿಸಿ ೧೯೮೦ರಲ್ಲಿ ವಿದ್ಯಾರ್ಥಿನಿಲಯದ ನಿರ್ಮಾಣ ಮಾಡಲಾಯಿತು.

ಪ್ರಸ್ತುತ ವಿದ್ಯಾರ್ಥಿನಿಲಯದ ಪ್ರಾರಂಭ ಸಮಯದಲ್ಲಿ ಶ್ರೀ.ಜಿ.ವಿ.ಶಾಂತರಾಜುರವರು ಅಧ್ಯಕ್ಷರಾಗಿಯೂ ಮತ್ತು ಎಂ.ಎಸ್.ಮಲ್ಲಯ್ಯನವರು ಕಾರ್ಯದರ್ಶಿಯಾಗಿಯೂ ಅಪಾರ ಸೇವೆ ಸಲ್ಲಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿನಿಲಯದ ಜೊತೆಗೆ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಈ ವಿದ್ಯಾರ್ಥಿನಿಲಯದಲ್ಲಿದ್ದು ವ್ಯಾಸಂಗ ಮಾಡುತ್ತಿದ್ದಾರೆ.

ಸಾದರ ಪತ್ರಿಕೆ:-

ಸಾದರಲ್ಲಿ ಯಾವುದೇ ದಿನ, ವಾರ, ಮಾಸ ಪತ್ರಿಕೆಗಳಿಲ್ಲದೆ ಇರುವಂತಹ ಸಂದರ್ಭದಲ್ಲಿ ಸಾದರ ಪ್ರಗತಿಯ ಮುನ್ಸೂಚನೆಯಂತೆ ಪ್ರಾರಂಭವಾದ ಮೊದಲ ಮಾಸ ಪತ್ರಿಕೆ **"ಸಾದರ ವಾಣಿ"**.

ಶ್ರೀ.ಎನ್.ತಿಮ್ಮಪ್ಪರವರು ಸಾದರ ವಾಣಿ ಎಂಬ ಮಾಸ ಪತ್ರಿಕೆಯನ್ನು ೨೦೦೦ನೇ ಇಸವಿಯಲ್ಲಿ ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಪ್ರಕಟಗೊಳ್ಳುತ್ತಾ ಬರುತ್ತಿವೆ. ಪತ್ರಿಕೆಯಲ್ಲಿನ ಪರಿಣಾಮಕಾರಿ ಬರವಣಿಗೆಗಳು ಎಲ್ಲರ ಅಭಿಮಾನ ಮತ್ತು ವಿಶ್ವಾಸಕ್ಕೆ ಪಾತ್ರವಾಗಿವೆ. ಸ್ವತಃ ವಕೀಲರಾಗಿರುವ ತಿಮ್ಮಪ್ಪರವರು "ಸಾದರ ವಾಣಿ"ಯ ವ್ಯವಸ್ಥಾಪಕ ಸಂಪಾದಕರು, ಪ್ರಕಾಶಕರು ಆಗಿದ್ದಾರೆ. ಇವರು ತಮ್ಮ ಪತ್ರಿಕೆಯಲ್ಲಿ ಜನತೆಗೆ ಕಾನೂನಿನ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಪತ್ರಿಕೆಯಲ್ಲಿ ಸಾದರ ಬಹುತೇಕ ಹಿರಿಯರ ಸಾಧನೆ ಗುಣ-ವಿಶೇಷತೆಗಳನ್ನು ಕುರಿತು ಸಮಾಜಕ್ಕೆ ಪರಿಚಯಿಸುವ ಕಾರ್ಯವು ಅವ್ಯಾಹತವಾಗಿ ಸಾಗುತ್ತಿದೆ. ಒಟ್ಟಾರೆ ಸಾದರ ಮೊದಲ ಮಾಸಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಾದರವಾಣಿಯು ಸಾದರ ಹೆಮ್ಮೆಯ ಕೂಸಿನಂತೆ ಬೆಳೆಯುತ್ತಿದೆ.

ಸಾದರಲ್ಲಿಯೇ ಪ್ರಾರಂಭವಾದ ಮತ್ತೊಂದು ಮಾಸ ಪತ್ರಿಕೆ **'ಸಾದರ ಸುದ್ದಿ'**. ಆಯುರ್ವೇದ ವೈದ್ಯರಾದ ಪಂಡಿತ್ ಹನುಮಂತರಾಯಪ್ಪನವರು ದಿನಾಂಕ-೧-೦೩-೨೦೦೩ ರಲ್ಲಿ ಸಾದರ ಸುದ್ದಿ ಪತ್ರಿಕೆಯ ಮೊದಲ ಸಂಚಿಕೆಯನ್ನು ಹೊರತಂದರು. ಈ ಪತ್ರಿಕೆಯಲ್ಲಿ ಸಾದರ ಹಲವಾರು ಉದಯೋನ್ಮುಖ, ಪ್ರತಿಭಾವಂತ ಬರಹಗಾರರು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು 'ಸಾದರ ಸುದ್ದಿ' ನೆರವಾಯಿತು. ಅಷ್ಟೇ ಅಲ್ಲದೇ ಕುರೂಡಿ 'ಶಾಂತರಾಜು' ರಂತಹ ಅನೇಕ ಪ್ರತಿಭಾನ್ವಿತ ಬರಹಗಾರರು ಓದುಗರ ಕಣ್ಮನ ಸೂರೆಗೊಳ್ಳುವಂತೆ 'ಸಾದರ ಸುದ್ದಿ' ಪತ್ರಿಕೆಯಲ್ಲಿ ತಮ್ಮ ಬರವಣಿಗೆಯ ಛಾಪು ಮೂಡಿಸಿದರು. ಸಾದರಲ್ಲಿ ಹೊಸಪ್ರಜ್ಞೆ, ಎಚ್ಚರಿಕೆಯನ್ನು ಮೂಡಿಸುವಲ್ಲಿ ನೆರವಾಯಿತು. ದುರಾದೃಷ್ಟವಶಾತ್ ದಿನಾಂಕ ೦೧-೦೪-೨೦೦೮ರಲ್ಲಿ ಸಾದರ ಸುದ್ದಿ ಪತ್ರಿಕೆಯು ನಿಂತುಹೋದದ್ದು ಬೇಸರದ ಸಂಗತಿಯೇ ಸರಿ.

ವಿದ್ಯಾ ಸಂಸ್ಥೆಗಳು:-

ಸಾದರ ಹಿರಿಯರು ಶಿಕ್ಷಣದ ಮಹತ್ವವನ್ನು ಮನಗಂಡು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇಂತಹ ಪ್ರಜ್ಞಾವಂತ ಮನೋಭಾವ ಉಳ್ಳವರಲ್ಲಿ ಪ್ರಮುಖರು, ಹಿರಿಯರು, ಮಾಜಿ ಕೌನ್ಸಲರ್ ಆದಂತಹ ಲೇಟ್.ಶ್ರೀ.ಕೆ.ಎಲ್.ರಾಮಯ್ಯನವರು ಗೌರಿಬಿದನೂರಿನ ಹೃದಯಭಾಗದಲ್ಲಿ **'ಬಾಲವಿದ್ಯಾಭವನ'** ಎಂಬ ನರ್ಸರಿ ಮತ್ತು ಪ್ರೈಮರಿ ಕನ್ನಡ ಮಾಧ್ಯಮ ಶಾಲೆಯನ್ನು ಸ್ಥಾಪಿಸಿದರು. ನಂತರ ಹಗಲಿರುಳು ಶ್ರಮಿಸಿ, ನೂರು ಯಾತನೆಗಳನ್ನು ಅನುಭವಿಸಿ ತಮ್ಮ ಕನಸಿನ ಕೂಸಾದ **'ಶ್ರೀಮತಿ ಸ್ಟೆಲ್ಲಾ ಕಾನ್ವೆಂಟ್'**ನ್ನು ೧೪ ಡಿಸೆಂಬರದ ೧೯೭೬ ರಲ್ಲಿ ಸ್ಥಾಪಿಸಿದರು. ಬಾಲವಿದ್ಯಾಭವನ ಶಾಲೆಯು ಸರ್ಕಾರಿ ಅನುಧಾನಿತ ಶಾಲೆಯಾಗಿದ್ದು, 'ಶ್ರೀಮತಿ ಸ್ಟೆಲ್ಲಾ ಕಾನ್ವೆಂಟ್' ಆಂಗ್ಲ ಮಾಧ್ಯಮದ ಖಾಸಗಿ ಶಾಲೆಯಾಗಿದೆ.

ಈ ಎರಡು ವಿದ್ಯಾಸಂಸ್ಥೆಗಳ ಸ್ಥಾಪನೆಯಲ್ಲಿ ಅವಿರತ ಶ್ರಮಿಸಿದ ಕೆ.ಎಲ್.ರಾಮಯ್ಯ ರವರ ಸಾಧನೆಯು ಶ್ಲಾಘನೀಯವಾದದ್ದೇ ಸರಿ. ಪ್ರಸ್ತುತ ಸಂದರ್ಭದಲ್ಲಿ ಈ ವಿದ್ಯಾಸಂಸ್ಥೆಗಳೆರಡು ಶೇ.೧೦೦ ರಷ್ಟು ಫಲಿತಾಂಶ ಪಡೆಯುತ್ತಿವೆ. ಅಜ್ಞಾನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕನ್ನು ನೀಡುವಲ್ಲಿ

ಸಮರ್ಪಕವಾಗಿ ಸೇವೆ ಸಲ್ಲಿಸುತ್ತಿವೆ.

ಪ್ರಸ್ತುತ ಈ ವಿದ್ಯಾಸಂಸ್ಥೆಗಳ ಕಾರ್ಯದರ್ಶಿಯಾಗಿ ಕೆ.ಎಲ್.ರಾಮಯ್ಯ ರವರ ಪತ್ನಿಯಾದ ಶ್ರೀಮತಿ ಎಸ್.ಪಂಕಜರವರು ಸೇವೆ ಸಲ್ಲಿಸುತ್ತಿದ್ದಾರೆ. ಸೇವಾ ಮನೋಭಾವವುಳ್ಳ ಈ ವಿದ್ಯಾಸಂಸ್ಥೆಗಳ ಪ್ರಾಂಶುಪಾಲರಾದ ಶ್ರೀ.ಕೆ.ಆರ್.ಸಪ್ತಗಿರಿರವರು ಪ್ರಸ್ತುತ ವಿದ್ಯಾಸಂಸ್ಥೆಗಳನ್ನು ಅಭಿವೃದ್ಧಿಯ ಪಥದೆಡೆಗೆ ಕೊಂಡೊಯ್ಯುವಲ್ಲಿ ಸಾಕಷ್ಟು ಶ್ರಮಿಸುತ್ತಿದ್ದಾರೆ.

ಎಲ್ಲಾ ಹಂತಗಳಲ್ಲಿಯು ಸ್ಪರ್ಧಾತ್ಮಕವಾಗಿ ಮುನ್ನಡೆಯುತ್ತಿರುವ ಈ ವಿದ್ಯಾಸಂಸ್ಥೆಗಳು ಲಕ್ಷಾಂತರ ಮಕ್ಕಳ ಬಾಳನ್ನು ಹಸನುಗೊಳಿಸುವಲ್ಲಿ ನೆರವಾಗಿವೆ. ಇಂಥ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದ ಕೆ.ಎಲ್.ರಾಮಯ್ಯ ರವರ ಸಾಧನೆ ನಿಜಕ್ಕೂ ಚಿರಸ್ಮರಣೀಯವೇ ಸರಿ.

ಹಾಗೆಯೇ ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ **'ಸಮತ ವಿದ್ಯಾಸಂಸ್ಥೆ'**ಯನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ವಿದ್ಯಾಸಂಸ್ಥೆಯು ಸಹ ಗೌರಿಬಿದನೂರಿನಲ್ಲಿ ಸ್ಥಾಪಿಸಲ್ಪಟ್ಟಿದ್ದು ಶೈಕ್ಷಣಿಕವಾಗಿ ಸಾದರ ಮುನ್ನಡೆಗೆ ನೆರವಾಗುತ್ತಿದೆ. ಹೀಗೆ ಸಾದರಲ್ಲಿನ ವಿದ್ಯಾಸಂಸ್ಥೆಗಳು ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕವಾಗುತ್ತಿವೆ.

ಹಕ್ಕೊತ್ತಾಯಗಳಿಗಾಗಿ ಹೋರಾಟ:-

ಹಿಂದೂ ಸಾದರು ಐತಿಹಾಸಿಕ ಮಹತ್ವ ಪಡೆದಿದ್ದು ಹಿಂದಿನಿಂದಲೂ ಸಮಾಜಕ್ಕೆ ಮತ್ತು ದೇಶಕ್ಕೆ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆದರೂ ಸಹ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದು ಮುಂದುವರೆದ ವರ್ಗಗಳೊಂದಿಗೆ ಸೆಣಸಾಡಲು ಸಾಧ್ಯವಾಗದ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗದ ಕಾರಣ ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘದ ಮುಖಂಡರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಗಮನಕ್ಕೆ ಈ ಅಂಶವನ್ನು ತಂದು ಕೋರಿಕೆ ಸಲ್ಲಿಸಿ, ಒತ್ತಾಯ ಹೇರಿದ್ದರ ಫಲವಾಗಿ ಕರ್ನಾಟಕ ಸರ್ಕಾರ ಸಾದರು ಜಾತಿಯನ್ನು ಪ್ರವರ್ಗ "IIA" ಪಟ್ಟಿಯಲ್ಲಿ ೧೯೯೪ ರಲ್ಲಿ ಸೇರಿಸಿ ಸಾದರ ಪ್ರಗತಿಗೆ ನೆರವಾಯಿತು. ಹಾಗೆಯೇ ಭಾರತ ಸರ್ಕಾರ ಹಿಂದುಳಿದ ವರ್ಗಗಳ (ಓ.ಬಿ.ಸಿ) ಪಟ್ಟಿಯಲ್ಲಿ ೨೦೦೬ ರಲ್ಲಿ ಸೇರಿಸಿ ಸಾದರ ಏಳಿಗೆಗೆ ದಾರಿಯನ್ನು ಸುಗಮ ಮಾಡಿಕೊಟ್ಟಿದೆ. ಹೀಗೆ ಸಾದರ ಅಗತ್ಯಕ್ಕನುಗುಣವಾಗಿ ಸಂಘವು ಸಮರ್ಪಕವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ.

ಸುವರ್ಣ ಮಹೋತ್ಸವ ಮತ್ತು ಮಹಾಸಮ್ಮೇಳನ:-

ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘವು ಪ್ರಾರಂಭವಾಗಿ ಐದು ವರ್ಷಗಳು ಕಳೆದ ಹಿನ್ನೆಲೆಯಲ್ಲಿ ಸುವರ್ಣಮಹೋತ್ಸವವನ್ನು ಆಚರಿಸಲಾಯಿತು. ಸಾದರ ಎಲ್ಲಾ ಹಿರಿಯ ಧುರೀಣರ ನೇತೃತ್ವದಲ್ಲಿ ವಿಜೃಂಭಣೆಯಿಂದ ಸುವರ್ಣಮಹೋತ್ಸವ ಕಾರ್ಯಕ್ರಮ ನೆರವೇರಿತು. ವಿದ್ಯಾರ್ಥಿನಿಲಯದ ಪಕ್ಕದಲ್ಲಿಯೇ ಇರುವ ಕಲ್ಯಾಣ ಮಂಟಪದ ಊಟದ ಸಭಾಂಗಣವನ್ನು

೧೯೬೪ ರ ಜುಲೈ ತಿಂಗಳಿನಲ್ಲಿ ಉದ್ಘಾಟಿಸಲಾಯಿತು. ಈ ಸಂದರ್ಭದ ಸವಿನೆನಪಿಗಾಗಿ ಸುವರ್ಣಮಹೋತ್ಸವ ಸ್ಮರಣ ಸಂಚಿಕೆಯನ್ನು ಸಹ ಹೊರತರಲಾಯಿತು.

ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ ಪ್ರಾರಂಭದ ತರುವಾಯ ವರ್ಷಂಪ್ರತಿಯು ಸಹ ಮಹಾಸಮ್ಮೇಳನ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಪ್ರಸ್ತುತ ೨೦೧೩ ನೇ ಸಾಲಿನ ಮಹಾಸಮ್ಮೇಳನವು ಗೌರಿಬಿದನೂರು ಆಚಾರ್ಯ ಕಾಲೇಜು ಆವರಣದಲ್ಲಿ ನೆರವೇರಿತು. ಸಹಸ್ರಾರು ಸಂಖ್ಯೆಯಲ್ಲಿ ಸಾದರು ಸಮ್ಮೇಳನಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ನಿಟ್ಟಿನಲ್ಲಿ ಸಂಘವು ಜಾತಿಯ ಎಲ್ಲ ಜನರ ಸಂಘಟನೆಯ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

೩.೮: ಧಾರ್ಮಿಕ ವ್ಯವಸ್ಥೆ:-

ಸಾದರರಲ್ಲಿನ ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ತಿಳಿಯುವ ಪ್ರಮುಖ ಅಂಶಗಳೆಂದರೆ ಮೂಲತಃ ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಹೊಂದಿರುವ ಸಾದರು ಯಾವುದೇ ಒಂದು ಧರ್ಮಕ್ಕೇ, ಸಿದ್ಧಾಂತಕ್ಕೆ ಕಟ್ಟುಬಿದ್ದವರಲ್ಲ. ಯಾವುದೇ ಒಂದೇ ದೇವರನ್ನು ಪೂಜಿಸಿದವರಲ್ಲ, ಅಥವಾ ಯಾವುದೇ ಒಂದು ಮಠಕ್ಕೆ ನಡೆದುಕೊಂಡವರಲ್ಲ, ಇವರ ಪ್ರತಿನಿತ್ಯದ ಬದುಕಿನಲ್ಲಿ ಧರ್ಮಾಚರಣೆ ಮತ್ತು ದೈವಭಕ್ತಿಗಳು ವಿವಿಧ ರೂಪಗಳಲ್ಲಿ ಕಾಣಸಿಗುತ್ತವೆ.

ಸಾದರಲ್ಲಿ ಧರ್ಮದ ಪರಿಕಲ್ಪನೇ ವಿಶಿಷ್ಟವೂ, ವಿಭಿನ್ನವೂ ಆದದ್ದಾಗಿದೆ. ಇವರು ಧರ್ಮಾ-ಕರ್ಮ ಎಂಬುದನ್ನು ಒಳ್ಳೆಯದ್ದು, ಕೆಟ್ಟದ್ದು ಎಂಬರ್ಥದಲ್ಲಿ ದೇವರು-ದಿಂಡರು, ಆಚಾರ-ವಿಚಾರ, ಪೂಜೆ-ಪುನಸ್ಕಾರ ಎಂಬರ್ಥದಲ್ಲಿ ಬಳಸುತ್ತಾರೆ. ಸಾದರನ್ನು ನೀವು ಯಾವ ಧರ್ಮವೆಂದರೆ ಉತ್ತರಿಸುವಲ್ಲಿ ಗೊಂದಲಕ್ಕೊಳಗಾಗುತ್ತಾರೆ. ಬದಲಿಗೆ ತಮ್ಮ ಮನೆ ದೇವರ ಹೆಸರನ್ನು ಹೇಳಿ ಇಂತಹ ದೇವರ ಒಕ್ಕಲು ಎಂದು ಹೇಳುತ್ತಾರೆ.

ಸಾದರು ಮೂಲತಃ ಹಿಂದೂ ಧರ್ಮಾನುಯಾಯಿಗಳಾದರೂ, ಅವರಲ್ಲಿ ಜೈನಧರ್ಮ, ಶೈವಧರ್ಮ, ವೈಷ್ಣವಧರ್ಮ ಮಿಳಿತಗೊಂಡಿರುವುದಕ್ಕೆ ಹಲವು ಸ್ಪಷ್ಟ ನಿದರ್ಶನಗಳು ದೊರೆಯುತ್ತವೆ.

ಜೈನಧರ್ಮ:-

ಸಾದರಲ್ಲಿ ಕೆಲವರು ಜೈನಧರ್ಮಾನುಯಾಯಿಗಳಿದ್ದು, ಸಾದರು ಜೈನಧರ್ಮದ ಪ್ರಭಾವ ಮತ್ತು ಹಿನ್ನೆಲೆಯಿಂದ ಬಂದವರೆಂಬುದಕ್ಕೆ ಹಲವು ನಿದರ್ಶನಗಳು ದೊರೆಯುತ್ತವೆ. ಸಾದರಲ್ಲಿ ಹಿಂದಿನಿಂದಲೂ ಜೈನಧರ್ಮಾನುಯಾಯಿಗಳಿದ್ದುದಕ್ಕೆ ಶಾಸನಗಳಲ್ಲಿ ಉಲ್ಲೇಖ ದೊರೆಯುತ್ತದೆ.

"ನದಿಹರಳಹಳ್ಳಿಯ ಶಾಸನದಲ್ಲಿ ತಿಳಿಯುವಂತೆ ಕಳಚೂರ್ಯ ದೊರೆ ಪ್ರತಾಪಚಕ್ರವರ್ತಿಯ ಸಾಮಂತನಾದ ನಾಗಗಾವುಂಡನು ಗೊಟ್ಟಗಡಿ ಎಂಬ ಪ್ರದೇಶದಲ್ಲಿ ಜಿನಭಕ್ತನಾಗಿ ಹೆಸರುವಾಸಿಯಾಗಿದ್ದು; ಆತನು ಜಿನಭವನವನ್ನು ಕಟ್ಟಿಸಿ, ಆ ಜಿನದೇವಾಲಯಕ್ಕೆ ನಾಗಗಾವುಂಡ

ಮತ್ತು ಆತನ ಪತ್ನಿ ಅರಸಿಗಾವುಂಡಿಯರು ಅಪಾರವಾದ ಧಾನ-ಧರ್ಮವನ್ನು ಮಾಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ".

ಹಾಗೆಯೇ ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕು ಗುತ್ತಲಿನ ಶಾಸನದಲ್ಲಿ ಸೊಂದೆ ವಂಶ (ಸಾದ ವಂಶ) ಲಲಾಮವಾದ ವಡ್ಡಬ್ಯವಹಾರಿ ಕೇತಿ ಸೆಟ್ಟಿಯು ಪಾರ್ಶ್ವದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದನೆಂಬ ವಿವರವಿದೆ. ಈತನಿಗೆ ಸೊಂದೆ ವಂಶ ಲಲಾಮ, ಅಭಿಮಾನರಾಮ, ಜಿನಸಮಯ ಸಮುದ್ಧರಣ ಚೂಡಾಮಣಿ ಎಂಬೆಲ್ಲಾ ಬಿರುದುಗಳಿದ್ದು ಈ ಬಿರುದಾವಳಿಯು ಜೈನಧರ್ಮದ ಹಿನ್ನೆಲೆಯಿಂದ ಬಂದ ಪದಪಂಕ್ತಿಗಳಿಂದ ಕೂಡಿರುವುದು ತಿಳಿಯುತ್ತದೆ.

ಅಷ್ಟೇ ಅಲ್ಲದೇ ಮೂಕನೂರು ಶಾಸನದಲ್ಲಿ "ಮುಸುವಡಿಯ ಸಾಂದಗುಲದೊಳ್ ಪೆಸರೆನಿಸಿದ ಬಾಲವಂಶದೊಳ್, ಪುಟ್ಟಿದ ಮೂಕನೂರು ಬೋಪಣ್ಣನು ಬೋಪಣ್ಣೇಶ್ವರ ದೇವರನ್ನು ಮಾಡಿಸಿ ತನ್ನ ಮೂವರು ಸೋದರರೊಂದಿಗೆ ನೆಲದಾನವಿತ್ತ" ವಿವರವಿದೆ.

ಹೀಗೆ ಶಾಸನಗಳಲ್ಲಿನ ವಿವರಣೆಯು ಸಾದರ ಹಿರಿಯರು, ಪೂರ್ವಿಕರು ಜೈನಧರ್ಮದ ಬಗ್ಗೆ ತಳೆದ ಅಪಾರವಾದ ಒಲವು-ನಿಲುವುಗಳನ್ನು ಕುರಿತು ಬೆಳಕು ಚೆಲ್ಲುತ್ತದೆ.

ಸಾದರು ಶುದ್ಧ ಸಸ್ಯಾಹಾರಿಗಳು, ಕಾರಣ ಜೈನಧರ್ಮದ ಪ್ರಭಾವ ಮತ್ತು ಹಿನ್ನೆಲೆ. ಜೈನಸಾದರು ತಮ್ಮ ಮನೆಯಲ್ಲಿ ಆದಿತೀರ್ಥಂಕರನ ಭಾವಚಿತ್ರವನ್ನಿಟ್ಟು ಪೂಜಿಸುತ್ತಾರೆ. ಸಂಜೆಯಾಗುವಷ್ಟರಲ್ಲಿ ಊಟಮಾಡುತ್ತಾರೆ. ಜೈನಸಾದರಷ್ಟೇ ಅಲ್ಲದೇ ಕೆಲವು ಹಿಂದೂ ಸಾದರ ಮನೆಗಳಲ್ಲಿಯೂ ಜಿನನ ವಿಗ್ರಹವನ್ನಿಟ್ಟುಕೊಂಡು ಪೂಜಿಸುತ್ತಾರೆ.

ಮೈಸೂರು, ಕಡಕೊಳ ಪ್ರಾಂತ್ಯದಲ್ಲಿ ಬಹುತೇಕ ಸಾದರು ಜೈನಧರ್ಮೀಯರೇ ಆಗಿದ್ದಾರೆ. ಇವರು ತಮ್ಮ ಮನೆಯ ಮಕ್ಕಳಿಗೆ ಆದಿರಾಜಯ್ಯ, ಬ್ರಹ್ಮಾನಂದ, ನಾಭಿರಾಜ, ಚಂದ್ರಕಾಂತ ಎಂಬಿತ್ಯಾದಿ ಹೆಸರುಗಳನ್ನಿಡುತ್ತಾರೆ. ಈ ನಾಮಧೇಯಗಳೆಲ್ಲವೂ ಜೈನಧರ್ಮದ ಹಿನ್ನೆಲೆಯಿಂದ ಬಂದವುಗಳೇ ಆಗಿವೆ.

ಶ್ರಾವಂಡಳ್ಳಿಯಲ್ಲಿನ ಸಾದರು ಜೈನಧರ್ಮವನ್ನು ಅನುಸರಿಸುತ್ತಾರೆ. ಹಾಗೆಯೇ ವಿರುಪಸಂದ್ರದಲ್ಲಿರುವ ಸಾದರನ್ನು 'ಬಸ್ತಿ ದೇವರ ಒಕ್ಕಲು' ಎಂದು ಕರೆಯಲಾಗುತ್ತದೆ. ಕಾರಣ ವಿರುಪಸಂದ್ರದಲ್ಲಿ ಜೈನಧರ್ಮೀಯರಿದ್ದು; ಜಿನ ದೇವಾಲಯಗಳನ್ನು ಬಸದಿಗಳೆಂದು ಕರೆಯಲಾಗುತ್ತಿದೆಯಾದ್ದರಿಂದ ಇವರನ್ನು ಬಸ್ತಿದೇವರ ಒಕ್ಕಲು ಎಂದು ಕರೆಯಲಾಗುತ್ತದೆ.

ಹಾಗೆಯೇ ಬಳ್ಳಾರಿ ಮತ್ತು ದಾವಣಗೆರೆ ಪ್ರಾಂತ್ಯದಲ್ಲಿನ ಸಾದರು ಬಹುತೇಕರು ಜೈನಧರ್ಮದ ಆರಾಧಕರಾಗಿದ್ದಾರೆ. ಇವರಲ್ಲಿ ಬಹುತೇಕರು 'ಬ್ರಹ್ಮ' ದೇವರ ಆರಾಧಕರಾಗಿದ್ದಾರೆ. ಇಂದಿಗೂ ಸಹ ಸಾಧುಕುಲದವರ ಮನೆಗಳಲ್ಲಿ ನಡೆಯುವ ವಿವಾಹ, ಗೃಹಪ್ರವೇಶ ಮುಂತಾದ ಪ್ರಮುಖ ಸಮಾರಂಭಗಳಲ್ಲಿ ಕಡ್ಡಾಯವಾಗಿ ಗುಂಡು ಬ್ರಹ್ಮದೇವರಿಗೆ ಅಗ್ರಪೂಜೆ ಸಲ್ಲಿಸುವ ವಾಡಿಕೆ ಇರುವುದನ್ನು ಗಮನಿಸಬಹುದು.

ಬಳ್ಳಾರಿ ಮತ್ತು ದಾವಣಗೆರೆಗಳಲ್ಲಿ ಬ್ರಹ್ಮನನ್ನು ವಿಶೇಷವಾಗಿ ಆರಾಧಿಸಲಾಗುತ್ತದೆ. ಜೈನ ಸಂಪ್ರದಾಯದಲ್ಲಿ ಹತ್ತನೆಯ ತೀರ್ಥಂಕರನಾದ ಶೀತಲನಾಥನ ಯಕ್ಷನ ಹೆಸರು ಬ್ರಹ್ಮ ಅಥವಾ ಬ್ರಹ್ಮದೇವ. ಯಕ್ಷಿಯ ಹೆಸರು ಗೌರಿ. ಜೈನರಲ್ಲಿ ಇವರ ಬಗ್ಗೆ ಭಯ ಮಿಶ್ರಿತವಾದ ಭಕ್ತಿಯಿದೆ. ವೈದಿಕ ಕಲ್ಪನೆಯಲ್ಲಿ ಬೆಳೆದು ಬಂದಿರುವ ಚತುರ್ಮುಖ ಬ್ರಹ್ಮನ ಸ್ವರೂಪದಲ್ಲಿ ಈ ತೀರ್ಥಂಕರನು ಬ್ರಹ್ಮ ಯಕ್ಷನಾಗಿ ಗೋಚರಿಸುತ್ತಾನೆ. ಭಿನ್ನ, ವಿಭಿನ್ನ ಸ್ವರೂಪದ ಬ್ರಹ್ಮನ ವಿಗ್ರಹಗಳು ಇದ್ದು, ಇವನ್ನು ಗೆಜ್ಜೆ ಬ್ರಹ್ಮ, ತ್ಯಾಗದ ಬ್ರಹ್ಮ, ಬೆಟ್ಟದ ಬ್ರಹ್ಮ, ಕೊಡೆಬ್ರಹ್ಮ, ಗುಂಡದ ಬ್ರಹ್ಮ, ಗುಂಡು ಭರ್ಮಪ್ಪ, ಗುಂಡು ಭರ್ಮ (ಬ್ರಹ್ಮ) ಎಂಬ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಇವನ ಮೈಬಣ್ಣ ಶ್ವೇತವೆಂಬುದು ಇವರ ಕಲ್ಪನೆ. ಬ್ರಹ್ಮನ ವಿಗ್ರಹಕ್ಕೆ ಚಂದನವನ್ನು ಲೇಪಿಸಿ ಚಂದನವರ್ಣವನ್ನಾಗಿಸುತ್ತಾರೆ. ಕಮಲಾಸನ, ಹಂಸವಾಹನನೆಂದು ವರ್ಣಿತವಾಗಿದ್ದರು, ತುರಗವಾಹನನಾಗಿ ಕಾಣಿಸಿಕೊಂಡಿದ್ದಾನೆ. ಅಷ್ಟಬಾಹು, ಚತುರ್ಮುಖನೆಂದು ಹೇಳಿದ್ದರೂ ದ್ವಿಭುಜ, ಏಕವಕ್ತ್ರನಾಗಿದ್ದಾನೆ. ಪ್ರತಿಯೊಂದು ಮನೆಯಲ್ಲೂ ಭರ್ಮದೇವರ ಹೆಸರಿನ ಒರ್ವ ವ್ಯಕ್ತಿ ಇರಲೇಬೇಕು.

ಅಣಜಿಗೆರೆ ಗಂಗವ್ವನವರ ಹೇಳಿಕೆಯ ಪ್ರಕಾರ ಅವರ ಮನೆಯಲ್ಲಿ ಕಿರಿಯ ಮಗನಿಗೆ ಬೇರೆ ಹೆಸರು ನಾಮಕರಣ ಮಾಡಿ ಕರೆದಾಗ ಆ ಮಗು ಅಳು ಪ್ರಾರಂಭ ಮಾಡಿ ನಿಲ್ಲಿಸಲಿಲ್ಲ. ನಂತರ ಆ ಮಗುವಿಗೆ ಭರ್ಮದೇವರ ಹೆಸರು ಇಟ್ಟ ದಿನವೇ ಅಳು ನಿಲ್ಲಿಸಿತು. ಆದುದರಿಂದ ಭರಮಪ್ಪ, ಭರಮನಗೌಡ ಎಂಬ ಹೆಸರುಗಳು ಸಾದರ ಮನೆಗಳಲ್ಲಿ ಸರ್ವೇಸಾಮಾನ್ಯ. ಭರಮ ದೇವರ ಹೆಸರಿಲ್ಲದ ಮನೆಗೆ ಕೆಡುಕಾಗುತ್ತದೆ ಎಂಬ ನಂಬಿಕೆ ದಾವಣಗೆರೆ ಪ್ರಾದೇಶಿಕ ಪರಿಸರದಲ್ಲಿನ ಸಾದರಲ್ಲಿದೆ.

ಬಹುತೇಕ ಸಾದರ ಮನೆಗಳಲ್ಲಿ ಜೈನವಿಗ್ರಹಗಳನ್ನಿಟ್ಟುಕೊಂಡು ಆರಾಧಿಸುವುದನ್ನು ಗಮನಿಸಬಹುದು. ಇದರಿಂದ ಸಾದರ ಜಾತಿಯ ಮೇಲೆ ಜೈನಧರ್ಮದ ಪ್ರಭಾವ ಮತ್ತು ಆಚರಣೆ ಇರುವುದನ್ನು ತಿಳಿಯಬಹುದು.

ಶೈವ ಧರ್ಮ:-

ಸಾದರಲ್ಲಿ ಶೈವಧರ್ಮಾನುಯಾಯಿಗಳು ಇರುವುದನ್ನು ಗಮನಿಸಬಹುದು. ಮೂಲತಃ ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿಸಿಕೊಂಡಿರುವ ಸಾದರಲ್ಲಿ ಮೂರು ಕಲ್ಲುಗಳನ್ನಿಟ್ಟು ಅದಕ್ಕೆ ಅರಿಶಿನ-ಕುಂಕುಮವನ್ನಿಟ್ಟು ಪೂಜಿಸುವುದು ರೂಢಿಯಲ್ಲಿದೆ. ಹೀಗೆ ಪೂಜಿಸಿದ ಕಲ್ಲುಗಳನ್ನು 'ಬೊಮ್ಮಪ್ಪ' ದೇವರೆಂದು ಕರೆಯುವ ವಾಡಿಕೆಯಿದೆ. ಹಾಗೆಯೇ ಸಗಣಿಯಿಂದ ಬೆನಕನನ್ನು ಮಾಡಿ ಗರಿಕೆಯನ್ನಿಟ್ಟು ಪೂಜಿಸುವ ಪದ್ಧತಿಯು ಇವರಲ್ಲಿದೆ. ಭಾರತದ ಸನಾತನ ಧರ್ಮಗಳಲ್ಲಿ ಒಂದಾಗಿರುವ ಶೈವಧರ್ಮದ ಆಚರಣೆಯು ಸಾದರಲ್ಲಿದೆ. ಶಿವ, ಭೈರವ, ರುದ್ರ, ಮೈಲಾರಲಿಂಗ ಎಂಬೆಲ್ಲಾ ಹೆಸರುಗಳಿಂದ ಕರೆಯಲ್ಪಡುವ ಶಿವನನ್ನು ಇವರು ಭಕ್ತಿಯಿಂದ ಆರಾಧಿಸುತ್ತಾರೆ. ಹಿಂದೂ ಸಾದರು ಲಿಂಗವನ್ನು ಕಟ್ಟಿಕೊಳ್ಳುವುದಿಲ್ಲ. ಆದರೆ ತಮ್ಮ ಮನೆಯ ಗರ್ಭಗುಡಿಯಲ್ಲಿ ಲಿಂಗವನ್ನಿಟ್ಟು ಪೂಜಿಸುತ್ತಾರೆ, ವಿಭೂತಿಯನ್ನು ಧರಿಸುತ್ತಾರೆ, ಮನೆಯಲ್ಲಿ ಹಿರಿಯರು ವಿಭೂತಿ ಧರಿಸದೆ ಭೋಜನಮಾಡುವುದಿಲ್ಲ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿನ ಹೇಮಾವತಿಯಲ್ಲಿರುವ ಹೆಂಜೇರು ಸಿದ್ದೇಶ್ವರ ಸ್ವಾಮಿ ದೇವಾಲಯಕ್ಕೆ ಬಹುತೇಕ ಸಾದರ ಭಕ್ತರಿದ್ದಾರೆ. ಅಷ್ಟೇ ಅಲ್ಲದೆ ಬಹುತೇಕ ಸಾದರು ಹೆಂಜೇರು ಸಿದ್ದೇಶ್ವರ ಸ್ವಾಮಿಯನ್ನು ತಮ್ಮ ಮನೆದೇವರನ್ನಾಗಿ ಹೊಂದಿದ್ದಾರೆ. ಹೇಮಾವತಿ ಪ್ರದೇಶದ ಸಮೀಪವೇ ಇರುವ ಶಿವರ ಗ್ರಾಮದಲ್ಲಿ ಮೈಲಾರಲಿಂಗ ದೇವಾಲಯವಿದ್ದು; ಆ ದೇವಾಲಯದ ಅರ್ಚಕರಾಗಿ ಸಾದರೇ ಸೇವೆ ಸಲ್ಲಿಸುತ್ತಿದ್ದಾರೆ. ಮೈಲಾರಲಿಂಗ ಸ್ವಾಮಿ ಬಹುತೇಕ ಸಾದರ ಮನೆದೇವರಾಗಿದೆ.

ಮೈಲಾರಲಿಂಗ ಸ್ವಾಮಿ ಮತ್ತು ವಿಷ್ಣು ಅಥವಾ ತಿರುಪತಿಯ ತಿಮ್ಮಪ್ಪನನ್ನು ಕುರಿತಂತೆ ದಂತಕಥೆಯೊಂದು ಪ್ರಚಲಿತವಿದೆ. ಅದೆಂದರೆ ತಿರುಪತಿಯ ತಿಮ್ಮಪ್ಪ ಒಮ್ಮೆ ಮೈಲಾರ ಲಿಂಗನ ಬಳಿ ಏಳು ಕೋಟಿ ಹಣವನ್ನು ಸಾಲಪಡೆದಿದ್ದನಂತೆ ನಂತರ ಸಾಲವನ್ನು ಕೊಡದೆ ಏಳು ಬೆಟ್ಟಗಳ ಹಿಂದೆ ಅವಿತು ಕುಳಿತನಂತೆ ಆಗ ಮೈಲಾರಲಿಂಗನು ತನ್ನ ಸಾಲದ ಹಣವನ್ನು ಕೊಡು ಎಂದು ಕೇಳಿದಾಗ ತಿಮ್ಮಪ್ಪ ಮುಂದೆ ನನ್ನ ಏಳು ಕೋಟಿ ಭಕ್ತರೇ ನಿನ್ನ ಸಾಲ ತೀರಿಸುತ್ತಾರೆ ಎಂದನಂತೆ. ಕೋಪಗೊಂಡ ಮೈಲಾರ ಲಿಂಗನು ತನ್ನ ಭಕ್ತರಿಗೆ ಸಾಲದ ಹಣ ಕೇಳುವಂತೆ ಹೇಳಿದನಂತೆ, ಆದ ಕಾರಣ ಪ್ರತಿವರ್ಷವೂ ಮೈಲಾರ ಲಿಂಗನ ಜಾತ್ರೆಯಲ್ಲಿ ಭಕ್ತಸಮೂಹವೆಲ್ಲವೂ ಏಳುಕೋಟಿ–ಏಳುಕೋಟಿ ಎಂದು ಜೋರಾಗಿ ಕೂಗುತ್ತದೆ. ಆದರೆ ತಿಮ್ಮಪ್ಪನ ಭಕ್ತರು ಅಷ್ಟೇ ಏರುಧ್ವನಿಯಲ್ಲಿ ಗೋವಿಂದ–ಗೋವಿಂದ ಎನ್ನುತ್ತಾರೆ. ಹೀಗೆ ಭಕ್ತಪ್ರಿಯರಾದ ಮೈಲಾರಲಿಂಗನನ್ನು ಸಾದರು ವಿಶೇಷ ಭಕ್ತಿಭಾವದಿಂದ ಆರಾಧಿಸುತ್ತಾರೆ.

ಕೃಷಿ ಪ್ರಧಾನ ಜಾತಿಯಾದ ಸಾದರು ತಮ್ಮ ಕೃಷಿಕಾರ್ಯದಲ್ಲಿ ನೆರವಾಗುವ ನಂದಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ. ಬಸವಣ್ಣ (ನಂದಿ) ನನ್ನು ಬಹುತೇಕರು ತಮ್ಮ ಮನೆದೇವರನ್ನಾಗಿ ಹೊಂದಿದ್ದು ಯಾವುದೇ ಶುಭಕಾರ್ಯಕ್ಕೆ ಕೈಹಾಕುವ ಮುನ್ನ ನಂದಿಯನ್ನು ಪೂಜಿಸಿ ನಂತರ ಕೆಲಸ ಪ್ರಾರಂಭಿಸುತ್ತಾರೆ. ತುಮಕೂರು ಸಮೀಪವಿರುವ ಗೌತಮಾರನ ಹಳ್ಳಿಯಲ್ಲಿನ ಬಸವಣ್ಣ (ನಂದಿ) ಸ್ವಾಮಿಯು ಬಹುತೇಕ ಸಾದರ ಆರಾಧ್ಯದೈವವಾಗಿದೆ. ವರ್ಷಕ್ಕೊಮ್ಮೆ ಗೌತಮಾರನಹಳ್ಳಿಯಲ್ಲಿ ಜಾತ್ರಾಮಹೋತ್ಸವ ನಡೆಯುತ್ತದೆ. ಆಗ ಹರಕೆ ಹೊತ್ತ ಸಾದರು ಬರುವ ಸಹಸ್ರಾರು ಭಕ್ತಾದಿಗಳಿಗೆ ಹೆಸರುಬೇಳೆ, ಪಾನಕ, ಊಟವನ್ನು ನೀಡುವ ಮುಖೇನ ತಮ್ಮ ಭಕ್ತಿ ಪಾರಮ್ಯವನ್ನು ಮೆರೆಯುತ್ತಾರೆ. ಜಾತ್ರೆಯಂದು ತೇರನ್ನು ಎಳೆಯಲಾಗುತ್ತದೆ. ಬಸವಣ್ಣನ ಎಲ್ಲಾ ಒಕ್ಕಲು ತಪ್ಪದೇ ಭಾಗವಹಿಸುತ್ತಾರೆ. ಇನ್ನು ಜಾತ್ರೆಯಲ್ಲಿ ಎತ್ತಿನ ಭಂಡಿಯ ಸ್ಪರ್ಧೆಯು ಸಮಾರಂಭಕ್ಕೆ ವಿಶೇಷ ಮೆರಗು ನೀಡುತ್ತದೆ.

ಹಾಗೆಯೇ ತುಮಕೂರು ಸಮೀಪವೇ ಇರುವ ಸಿದ್ದಗಂಗೆಯ ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯಕ್ಕೆ ಹಲವು ಸಾದರ ಭಕ್ತರಿದ್ದಾರೆ. ಸಿದ್ದಗಂಗಾ ಮಠದಲ್ಲಿನ ಜಾತ್ರಾ ಮಹೋತ್ಸವದಲ್ಲಿ ಸಾದರು ಹಿಂದಿನಿಂದಲೂ ಪಾಲ್ಗೊಳ್ಳುತ್ತಾ ಬಂದಿದ್ದಾರೆ. ಜಾತ್ರೆಯಲ್ಲಿ ಭಾಗವಹಿಸಿದ ಸಾದರ ಭಕ್ತರಿಗೆ ಪ್ರಸಾದ ವಿನಿಯೋಗಿಸಲು 'ಸಾದರ ಕೊಪ್ಪಲು' ಸಿದ್ದಗಂಗೆಯಲ್ಲಿ ನಿರ್ಮಿಸಲಾಗಿದ್ದು, ಹಿಂದೆ

ಜಾತ್ರೆಯಲ್ಲಿ ಗಂಧದ ಸೌದೆಯನ್ನಿಟ್ಟು ಪ್ರಸಾದವನ್ನು ಬೇಯಿಸಲಾಗುತ್ತಿತ್ತು ಎಂಬುದು ಸಾದರ ಹಿರಿಯರ ಅಭಿಪ್ರಾಯ.

ಹಾಗೆಯೇ ಗೌರಿಬಿದನೂರು ಪ್ರಾದೇಶಿಕ ಪರಿಸರಕ್ಕೆ ಹೊಂದಿಕೊಂಡಂತೆ ಕಲ್ಲಂತೇಶ್ವರ ಸ್ವಾಮಿಯ ಭಕ್ತರಲ್ಲಿ ಸಾದರು ಹೆಚ್ಚಿನ ಪ್ರಮಾಣದಲ್ಲಿದ್ದು ಸ್ವಾಮಿಯು ತಮ್ಮೆಲ್ಲ ಕಷ್ಟಗಳನ್ನು ಬಹುಬೇಗ ನಿವಾರಿಸುತ್ತಾರೆಂಬ ನಂಬಿಕೆಯು ಸಾದರ ಹಿರಿಯರಲ್ಲಿದೆ.

ಹೀಗೆ ಸಾದರಲ್ಲಿ ಶೈವಧರ್ಮದ ಆರಾಧಕರಿರುವುದನ್ನು ಗಮನಿಸಬಹುದು.

ವೈಷ್ಣವ ಧರ್ಮ:-

ಸಾದರು ಮೂಲತಃ ಜೈನರು ಎಂದು ಹೇಳಲ್ಪಟ್ಟರೂ ಶೈವ ಧರ್ಮದ ಪ್ರಭಾವ ಸಾದರಲ್ಲಿದ್ದರು ಸಹ ರಾಮಾನುಜಾಚಾರ್ಯರ ಪ್ರಭಾವದಿಂದ ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನು ಸ್ವತಃ ವೈಷ್ಣವ ಮತಾನುಯಾಯಿಯಾಗಿ ಪರಿವರ್ತಿತನಾಗಿ ವಿಷ್ಣುದೇವಾಲಯಗಳನ್ನು ಕಟ್ಟಿಸಿ ಧತ್ತಿಗಳನ್ನು ಬಿಟ್ಟು ವೈಷ್ಣವ ಧರ್ಮ ಪ್ರಚಾರಕನಾಗುತ್ತಾನೆ. ಆಗ ಬಹುತೇಕ ಜಾತಿಗಳು ವೈಷ್ಣವ ಧರ್ಮದ ಪ್ರಭಾವಕ್ಕೆ ಒಳಗಾದವು. ಅವುಗಳಲ್ಲಿ ಸಾದರು ಒಂದೆಂದರೆ ತಪ್ಪಾಗಲಾರದು. ಸಾದರು ಈ ಮೊದಲೇ ಜೈನ, ಶೈವ ಧರ್ಮಗಳೆರಡರ ಪ್ರಭಾವಕ್ಕೆ ಒಳಗಾದಂತೆ ವೈಷ್ಣವ ಧರ್ಮದ ಪ್ರಭಾವಕ್ಕೂ ಒಳಗಾಗಿದ್ದಾರೆ. ಅದರಲ್ಲಿಯೂ ದಕ್ಷಿಣ ಕರ್ನಾಟಕದಲ್ಲಿನ ಸಾದರು ವೈಷ್ಣವ ಧರ್ಮದ ಪ್ರಭಾವಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒಳಗಾದರು.

ಈ ಹಿನ್ನೆಲೆಯಲ್ಲಿ ಗೌರಿಬಿದನೂರು, ಬೆಂಗಳೂರು, ಆಂಧ್ರಪ್ರದೇಶ ಮತ್ತು ತಮಿಳುನಾಡು ಗಡಿಭಾಗಗಳಲ್ಲಿ ಬಹುತೇಕ ಸಾದರು ವೈಷ್ಣವ ಧರ್ಮಾನುಯಾಯಿಗಳಾಗಿರುವುದು ಕಂಡು ಬರುತ್ತದೆ.

ವಿಷ್ಣು ಇವರ ಆರಾಧ್ಯದೈವವಾಗಿದ್ದು, ತಿಮ್ಮಪ್ಪ, ರಂಗನಾಥ, ಅನಂತಪದ್ಮನಾಭ, ವಿಷ್ಣು, ಕೃಷ್ಣ, ವೆಂಕಟರಮಣ, ಗೋವಿಂದ ಎಂಬಿತ್ಯಾದಿ ನಾಮಗಳಿಂದ ಕರೆಯಲ್ಪಡುವ ವಿಷ್ಣುವನ್ನು ಭಕ್ತಭಾವದಿಂದ ಆರಾಧಿಸುತ್ತಾರೆ. ಶ್ರಾವಣ ಮಾಸವೆಂದರೆ ವಿಶೇಷವಾದ ಪೂಜೆಗೆ ಪ್ರಶಸ್ತ ದಿನಗಳೆಂದೇ ಇವರು ಭಾವಿಸುತ್ತಾರೆ. ಶ್ರಾವಣ ಶನಿವಾರದಂದು ಮನೆಯನ್ನೆಲ್ಲಾ ಸಾರಿಸಿ, ಮನೆಯ ಅಂಗಳವನ್ನು ಸಗಣಿಯಿಂದ ಸಾರಿಸಿ, ರಂಗವಲ್ಲಿಯನ್ನಿಟ್ಟು, ತಳಿರು-ತೋರಣವನ್ನು ಕಟ್ಟಿ ಶೃಂಗರಿಸಿ ಸ್ನಾನ ಮಾಡಿ ಮಡಿಯುಟ್ಟು ಮನೆಯ ಕಿರಿಯ ಮಗುವನ್ನು ತಮ್ಮ ಕುಲಬಾಂಧವರ ಮನೆಗಳಿಗೆ ಬಿಕ್ಷೆಗೆಂದು ಕಳುಹಿಸುತ್ತಾರೆ. ಅದೆಂತೆಂದರೆ:-

'ಕರದಿ ಕಪ್ಪರವುಂಟು ಹಿರಿದೊಂದು ನಾಡುಂಟು

ಹರನೆಂಬ ದೈವ ನಮಗುಂಟು, ತಿರಿವರಿಂ

ಸಿರಿವಂತರಾರು ಸರ್ವಜ್ಞ"!

ಎಂಬ ದೇವಸಾಲೆಯ ಉಕ್ತಿಯಂತೆ ಪ್ರತಿಯೊಬ್ಬರು ತಮ್ಮ ಮನೆಯ ಮಗುವನ್ನು ಶ್ರಾವಣ ಶನಿವಾರದಂದು ಬಿಕ್ಷೆಗೆ ಕಳುಹಿಸುತ್ತಾರೆ. ಆ ಮಗು ಮನೆ-ಮನೆಗಳಲ್ಲಿ ಬೇಡಿತಂದ ಧಾನ್ಯದಿಂದ ಅಡುಗೆ ಮಾಡಿ ಮೊದಲು ದೇವರಿಗೆ ನೈವೇಧ್ಯವನ್ನರ್ಪಿಸಿ ತದನಂತರ ಮನೆಯ ಸದಸ್ಯರು ಸೇವಿಸುತ್ತಾರೆ. ಕೆಲವೊಮ್ಮೆ ಮನೆಯ ಹಿರಿಯರು ದಿನವಿಡೀ ಉಪವಾಸವಿದ್ದು, ರಾತ್ರಿ ಉಪಾಹಾರವನ್ನು ಸೇವಿಸುತ್ತಾರೆ.

ಪ್ರತಿಶ್ರಾವಣ ಶನಿವಾರವೂ ಸಹ ದೇವಾಲಯದ ಅರ್ಚಕರು ಮನೆ-ಮನೆಗೆ ತೆರಳಿ ತಿರುಮಣ್ಣನ್ನು (ನಾಮದಮಣ್ಣು) ಕೊಡುತ್ತಾರೆ. ದೇವಾಲಯದ ಪ್ರಸಾದವಾದ ತಿರುಮಣ್ಣನ್ನು ತಿಮ್ಮಪ್ಪನ ಒಕ್ಕಲು ಭಕ್ತಿಯಿಂದ ಹಣೆಗೆ ಧರಿಸಿ, ಪ್ರಸಾದವಾಗಿಯೂ ಸ್ವಲ್ಪ ಸ್ವೀಕರಿಸುತ್ತಾರೆ. ಹೀಗೆ ಇವರು ಮೇಲುಕೋಟೆಯ ಚೆಲುವನಾರಾಯಣಸ್ವಾಮಿ, ತಿರುಪತಿಯ ತಿಮ್ಮಪ್ಪ, ರಂಗನಾಥಸ್ವಾಮಿಯನ್ನು ಭಕ್ತಿ-ಭಾವದಿಂದ ಪೂಜಿಸುತ್ತಾರೆ, ಆರಾಧಿಸುತ್ತಾರೆ.

ಹೀಗೆ ವೈಷ್ಣವ, ವೀರಶೈವ, ಜೈನ ಮೂರು ಧರ್ಮಗಳ ಪ್ರಭಾವವೂ ಸಾದರ ಮೇಲಾಗಿರುವುದನ್ನು ಗಮನಿಸಬಹುದು. ಹನ್ನೆರಡನೆಯ ಶತಮಾನದ ವೀರಶೈವರ ಸಾಮಾಜಿಕ ಕ್ರಾಂತಿಯ ಪರಿಣಾಮವಾಗಿ ಸಾದರು ಲಿಂಗಾಯಿತರಾಗಿ ಪರಿವರ್ತಿರಾಗಿರುವುದಿದೆ. ಹೀಗೆ ಪರಿವರ್ತಿತರಾದ ಸಾದರು 'ಲಿಂಗಾಯಿತ ಸಾದರಾಗಿ; ಹೋದರು. ಜೈನ, ವೈಷ್ಣವ ಪ್ರಭಾವಕ್ಕೆ ಒಳಗಾದ ಸಾದರು ಜೈನ, ವೈಷ್ಣವ ಮತಾನುಯಾಯಿಗಳಾದರೇ ಹೊರತು ತಮ್ಮ ಜಾತಿ, ವೃತ್ತಿಯನ್ನು ಬಿಡಲಿಲ್ಲ. ಸಾದರೆಂಬ ಜಾತಿಯಿಂದ ಹೊರಬರಲಿಲ್ಲ. ಲಿಂಗಾಯಿತರಾದ ಸಾದರು ಜಾತಿಯಿಂದ ಹೊರಬಂದು ವೀರಶೈವಧರ್ಮದವರಾದರು.

ಹಿಂದೂಸಾದರು ಜಿನ, ಶಿವ, ವಿಷ್ಣುವನ್ನು ಪೂಜಿಸುವುದರ ಜೊತೆಗೆ ತಾವು ನೆಲೆನಿಂತ ಪ್ರಾದೇಶಿಕ ಪರಿಸರದಲ್ಲಿನ ಎಲ್ಲಾ ದೇವ-ದೇವತೆಗಳನ್ನು ಆರಾಧಿಸುತ್ತಾರೆ. ವಿಶೇಷವಾಗಿ ಗ್ರಾಮದೇವತೆಗಳಾದ ಮಾರಮ್ಮ, ಮರಿಗಮ್ಮ, ಕಾವಲ್ಲಮ್ಮ, ಕುಚ್ಚಂಗಮ್ಮ, ದೊಡ್ಡಮ್ಮ, ಚಿಕ್ಕಮ್ಮ, ಚೌಡಮ್ಮ ಮುಂತಾದ ದೇವತೆಗಳನ್ನು ಮತ್ತು ಸಿದ್ದಪ್ಪ, ನರಸಿಂಹಸ್ವಾಮಿ ಮುಂತಾದ ದೇವರುಗಳನ್ನು ಭಕ್ತಿಭಾವದಿಂದ ಪೂಜಿಸುತ್ತಾರೆ. ಹೀಗೆ ಸಾದರ ಧಾರ್ಮಿಕ ವ್ಯವಸ್ಥೆಯು ವಿಭಿನ್ನತೆಯಿಂದ ಕೂಡಿದೆಯಾದರೂ, ಶಿವ, ವಿಷ್ಣು, ಮಹಾವೀರ ಹೀಗೆ ಎಲ್ಲ ದೇವರ ಪೂಜೆಯನ್ನು ಮಾಡುವ ಸಾದರು ಜಾತ್ಯಾತೀತವಾದ, ಧರ್ಮಾತೀತವಾದ ಪ್ರಗತಿಪರ ಮನೋಭಾವನೆಯನ್ನು ಹೊಂದಿದವರಾಗಿದ್ದು, ಸರ್ವಧರ್ಮಸಮನ್ವಯದ ಭಾವನೆಯನ್ನು ಹೊಂದಿದವರಾಗಿದ್ದಾರೆ.

ಅಡಿಟಿಪ್ಪಣಿಗಳು

೧. (ಸಂ). ದೇ.ಜವರೇಗೌಡ-'ಜಾನಪದ ಗೀತಾಂಜಲಿ'-ಪುಟ.ಸಂಖ್ಯೆ-೫೪

೨. ಡಾ.ನಲ್ಲೂರು ಪ್ರಸಾದ್-'ಗಂಗಡಿಕಾರ ಒಕ್ಕಲಿಗರು'-ಪುಟ.ಸಂಖ್ಯೆ-೨೦೪-೨೦೫.

ಅಧ್ಯಾಯ-೪

ಆಚರಣೆ ಮತ್ತು ಸಂಪ್ರದಾಯಗಳು

೪.೧: ಹುಟ್ಟು.

೪.೨: ಮದುವೆ.

೪.೩: ಹಬ್ಬಗಳು.

೪.೪: ಸಾವು.

೪.೫: ನಂಬಿಕೆಗಳು.

ಅಧ್ಯಾಯ-4
ಆಚರಣೆ ಮತ್ತು ಸಂಪ್ರದಾಯಗಳು

ಆಚರಣೆ ಮತ್ತು ಸಂಪ್ರದಾಯಗಳು:-

ಸಾದರ ಆಚಾರ ಮತ್ತು ಸಂಪ್ರದಾಯಗಳು ಈ ಜನಸಮುದಾಯದ ಮೂಲಭೂತ ಗುಣಾವಗುಣಗಳತ್ತ ಬೊಟ್ಟು ಮಾಡುತ್ತವೆ. ಮನುಕುಲ ಉಗಮದಷ್ಟೇ ಪ್ರಾಚೀನತೆಯನ್ನು ಪಡೆದವುಗಳು ಆಚಾರ ಮತ್ತು ಸಂಪ್ರದಾಯಗಳು. ಸಾದರ ಪರಂಪರಾನುಗತ ಆಚರಣೆಗಳೇ ಮುಂದೆ ಸಂಪ್ರದಾಯಗಳಾಗಿವೆ. ಈ ಆಚಾರ ಮತ್ತು ಸಂಪ್ರದಾಯಗಳೇ ಸಂಸ್ಕೃತಿಯ ಸೃಷ್ಟಿಗೆ ನಾಂದಿಯಾಡುತ್ತವೆ. ಸಾದರಲ್ಲಿನ ಆಚರಣೆ ಮತ್ತು ಸಂಪ್ರದಾಯಗಳು ಇತರರಿಗಿಂತ ತೀರಾ ಭಿನ್ನವಾಗಿಲ್ಲವಾದರೂ ಇವುಗಳ ಅಧ್ಯಯನವು ಹಲವು ವಿಶೇಷ ಮಾಹಿತಿಯನ್ನು ತಿಳಿಯಪಡಿಸುತ್ತದೆ.

ಆಚರಣೆ ಮತ್ತು ಸಂಪ್ರದಾಯಗಳು ಕಾಲಗತಿಗನುಗುಣವಾಗಿ ಬದಲಾವಣೆಯನ್ನು ಹೊಂದುತ್ತಿರುತ್ತವೆ. ಪರಂಪರಾನುಗತವಾಗಿ ರೂಢಿಗೆ ಬಂದಿರುವ ಆಚರಣೆ ಮತ್ತು ಸಂಪ್ರದಾಯಗಳು ತಮ್ಮದೇ ಆದ ಮಹತ್ವವನ್ನು ಹೊಂದಿವೆ. ಅಷ್ಟೇ ಅಲ್ಲದೇ ಇವೆರಡೂ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ಸಾದರ ಜಾತಿಯು ತನ್ನ ಸಂಸ್ಕೃತಿಯ ಹಂದರದಲ್ಲಿ ಹಲವು ಆಚಾರ-ವಿಚಾರ, ರೂಢಿ, ಸಂಪ್ರದಾಯ, ನಂಬಿಕೆಗಳನ್ನು ಹೊಂದಿದೆ.

ಹೀಗೆ ಸಾದರಲ್ಲಿ ಪರಂಪರಾನುಗತವಾಗಿ ರೂಢಿಗೆ ಬಂದ ಕೆಲವು ಪ್ರಮುಖ ಆಚರಣೆಗಳೆಂದರೆ ಜನನ ಸಂಸ್ಕಾರ, ಮಂಡೆ ತೆಗೆಸುವುದು, ನಾಮಕರಣ, ಋತುಮತಿಯಾದಾಗ ಮಾಡುವಂತಹ ಆಚರಣೆಗಳು, ಮದುವೆ, ಅಂತ್ಯ ಸಂಸ್ಕಾರ-ಹೀಗೆ ಹಲವಾರು ಸಾಂಸ್ಕೃತಿಕ ಆಚರಣೆಗಳ ಗುಚ್ಛವೇ ಸಾದರಲ್ಲಿದೆ. ಈ ಎಲ್ಲಾ ಆಚರಣೆಗಳಲ್ಲಿಯೂ ಹತ್ತು-ಹಲವು ಸಂಪ್ರದಾಯಗಳು ಔಚಿತ್ಯ ಪೂರ್ಣವಾಗಿ ಧ್ವನಿತವಾಗುತ್ತಿರುತ್ತವೆ.

೪.೧:- ಹುಟ್ಟು

ವಿಶ್ವದ ಸೃಷ್ಟಿಯ ಎಲ್ಲಾ ಜೀವಿಗೂ ಸಂತಾನದ ಅಪೇಕ್ಷೆ ಸಹಜವಾದದ್ದೇ ಸರಿ. ಅದರಲ್ಲಿಯೂ ಮನುಕುಲಕ್ಕೇ ಅತಿ ವಿಶೇಷವೂ, ಮಹತ್ವವೂ ಆದದ್ದು ಹುಟ್ಟು, ಹುಟ್ಟು ಅನಿಶ್ಚಿತ, ಸಾವು ನಿಶ್ಚಿತವೆಂಬ ಸಾರ್ವಕಾಲಿಕ ಸತ್ಯ ಎಲ್ಲರಿಗೂ ತಿಳಿದಿರುವಂತೆದ್ದೇ ಸರಿ. ಆದರೂ ಸಹ ಪ್ರತಿಯೊಬ್ಬ ವ್ಯಕ್ತಿಯೂ ವಂಶೋದ್ಧಾರಕ್ಕೆಂದೋ, ವ್ಯವಸಾಯಕ್ಕೆ ನೆರವಾಗಲೆಂದೋ, ಆಸ್ತಿಗೆ ವಾರಸುದಾರರು ಬೇಕೆಂದೋ, ತಮ್ಮ ಪ್ರತಿಷ್ಠೆಯ ಪಡಿಯಚ್ಚಾಗಿರಲೆಂದೋ, ತಮ್ಮ ಕೊನೆಯ ದಿನಗಳಲ್ಲಿ ತಮಗೆ ಆಸರೆಯಾಗಲೆಂದೋ, ಮರಣ ಹೊಂದಿದಾಗ ತಮ್ಮ ಅಂತಿಮ ವಿಧಿಗಳನ್ನು ಪೂರೈಸಿ ಮೋಕ್ಷ ಪ್ರಾಪ್ತಿಗೆ ನೆರವಾಗಲೆಂದೋ; ಒಟ್ಟಿನಲ್ಲಿ ಪ್ರತಿಯೊಬ್ಬರೂ ಮಕ್ಕಳ ಅಪೇಕ್ಷೆಯನ್ನು ಹೊಂದಿರುತ್ತಾರೆ. ವಂಶಾಭಿವೃದ್ದಿಗಾಗಿ ಮಗನನ್ನು, ಮತ್ತು ದಾನಗಳಲ್ಲಿ ಶ್ರೇಷ್ಠವಾದ ದಾನ ಕನ್ಯಾದಾನ ಮಾಡಲು ಪುತ್ರಿಯನ್ನು ಅಪೇಕ್ಷಿಸುತ್ತಾರೆ.

ಹೆಣ್ಣಿನ ಜೀವನ ಸಾರ್ಥಕತೆ ಹೊಂದುವುದು ಅವಳು ತಾಯ್ತನವನ್ನು ಪಡೆದಾಗ ಅಂದರೆ ಹೆಣ್ಣಿಗೆ ಮದುವೆ ಎಷ್ಟು ಮುಖ್ಯವೋ, ತಾಯ್ತನದ ಹಿರಿಮೆಯು ಕೂಡ ಅಷ್ಟೇ ಮುಖ್ಯವಾದುದು. ಕೆಲವೊಮ್ಮೆ ಮಕ್ಕಳಾಗದಾಗ–

'ಕಂದಾನ ಕೊಡು ಶಿವನೇ ಬಂಧಾನ ಪಡಲಾರೆ,

ಬಂಜೆಂಬ ಶಬ್ಧ ಹೊರಲಾರೆ!'

ಎಂದು ಶಿವನನ್ನು ಬೇಡುತ್ತಾ ಗಂಡೋ, ಹೆಣ್ಣೋ ಮಕ್ಕಳಾದರೆ ಸಾಕು ಎಂದು ದೇವರು, ದಿಂಡರನ್ನು ಬೇಡುವುದು, ನಾಗರಕಲ್ಲು ನೆಡುವುದು, ಹರಕೆಹೊರುವುದು, ಅರಳಿಮರ, ಬೇವಿನಮರ ಸುತ್ತುವುದು ಮೊದಲಾಗಿ ದೇವರಿಗೆ ಮೊರೆ ಹೋಗುತ್ತಾರೆ.

ಸಾದರು ಗರ್ಭವತಿಯಾದ ಹೆಣ್ಣನ್ನು ಬಿಮ್ಮನಸೆ, ಬಸುರಿ, ಗರ್ಭಿಣಿ ಎಂದು ಕರೆಯುತ್ತಾರೆ. ತಾಯಿಯ ಗರ್ಭದಲ್ಲಿರುವ ಹೊಸಜೀವವನ್ನು ಅತ್ಯಂತ ಜತನ ಮತ್ತು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಆಚರಣೆಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸುತ್ತಾರೆ.

ಚೊಚ್ಚಲ ಬಸಿರು:–

ಸಾದರು ಮದುವೆಯಾದ ಹೆಣ್ಣು ಮಗಳು ಮೊದಲು ಗರ್ಭ ಧರಿಸಿದ್ದನ್ನು 'ಚೊಚ್ಚಲ ಬಸಿರು' ಎಂದು ಕರೆಯುತ್ತಾರೆ. ತಮ್ಮ ವಂಶದ ಕುಡಿಯನ್ನು ಒಡಲಲ್ಲಿ ಹೊತ್ತಳೆಂದು ಅತ್ತೆ, ಮಾವ, ಗಂಡ, ನಾದಿನಿಯಾದಿಯಾಗಿ ಬಸಿರಿಯನ್ನು ಎಲ್ಲರೂ ಅತ್ಯಂತ ಎಚ್ಚರದಿಂದ ನೋಡಿಕೊಳ್ಳುತ್ತಾರೆ. ಕೊಟ್ಟಮನೆಯ ಗೌರವವನ್ನು ಹೆಚ್ಚಿಸಿದಳೆಂದು; ಹುಟ್ಟಿದ ಮನೆಗೂ ಮೆಟ್ಟಿದ ಮನೆಗೂ ಕೀರ್ತಿತಂದಳೆಂದು ಹೆತ್ತವರು ಹಿಗ್ಗುತ್ತಾರೆ. ಗರ್ಭಿಣಿಯಾದ ಹೆಣ್ಣಿನ ಬಯಕೆಗಳು ಹಲವು. ಆಕೆ ಬಯಸುವ ವಸ್ತುಗಳನ್ನು ಆಧರಿಸಿ ಆಕೆಗೆ ಹುಟ್ಟುವ ಮಗು ಗಂಡೋ, ಹೆಣ್ಣೋ ಎಂದು ಹಿರಿಯ ಅನುಭವಿ ಹೆಂಗಸರು ನಿರ್ಧರಿಸುತ್ತಾರೆ. ಉದಾಹರಣೆಗೆ; ಗರ್ಭಿಣಿಯು ಚೆನ್ನಾಗಿ ಅಲಂಕರಿಸಿಕೊಳ್ಳುವುದು, ಅಲಂಕಾರಿಕ ವಸ್ತುಗಳನ್ನು ಬಯಸುವುದು, ಆಕೆಗೆ ಹೆಣ್ಣು ಮಗುವಾಗುತ್ತದೆಯೆಂಬುದನ್ನು ಸೂಚಿಸಿದರೆ, ಆಕೆಯು ಹೊಲ ಗದ್ದೆ, ತೋಟ, ಎತ್ತು ಮುಂತಾದವುಗಳಲ್ಲಿ ಆಸಕ್ತಿ ತೋರಿದರೆ ಹುಟ್ಟುವ ಮಗು ಗಂಡು ಎಂದು ನಿರ್ಧರಿಸುತ್ತಾರೆ. ಗರ್ಭಿಣಿಯಾದ ಸ್ತ್ರೀಯು ಚಿಕ್ಕ–ಪುಟ್ಟ ಕೆಲಸಗಳನ್ನು ಮಾಡಿದರೆ ಹೆರಿಗೆಯು ಸುಸೂತ್ರವಾಗಿ ಆಗುವುದೆಂಬುದು ಇವರ ನಂಬಿಕೆ. ಈ ನಿಟ್ಟಿನಲ್ಲಿ 'ಬಸಿರೀಲಿ ಗೇದು ಉಣ್ಣು; ಬಾಣಂತೀಲಿ ಕೂತು ಉಣ್ಣು' ಎನ್ನುವ ಗಾದೆ ಮಾತಿದೆ.

ಮನೆಯ ಎಲ್ಲಾ ಸದಸ್ಯರು ಹೆಜ್ಜೆ–ಹೆಜ್ಜೆಗೂ ಗರ್ಭಿಣಿಯಾದ ಸ್ತ್ರೀಯನ್ನು ಅತ್ಯಂತ ಎಚ್ಚರಿಕೆ ಮತ್ತು ಜವಾಬ್ದಾರಿಯುತವಾಗಿ ನೋಡಿಕೊಳ್ಳುತ್ತಾ ಆಕೆಯ ಬಸುರಿ ಬಯಕೆಯನ್ನು ಈಡೇರಿಸುತ್ತಾರೆ.

ಸೀಮಂತ ಕಾರ್ಯ:-

ಗರ್ಭಿಣಿ ಸ್ತ್ರೀಗೆ ನೆಂಟರಿಷ್ಟರು, ಬಂಧುಮಿತ್ರರು ಆಕೆ ಬಯಸಿದ್ದೆಲ್ಲವನ್ನು ಪೂರೈಸುವ ಕಾರ್ಯಕ್ಕೆ ಸೀಮಂತಕಾರ್ಯ, ಮಾಡಿಕ್ಕುವುದು, ಅಟ್ಟಿಕ್ಕುವುದು ಎಂದು ಕರೆಯುತ್ತಾರೆ. ಸಾದರು ಐದು ತಿಂಗಳಿಗೆ ಮತ್ತೆ ಕೆಲವೊಮ್ಮೆ ಒಂಭತ್ತನೆಯ ತಿಂಗಳಿನ ಒಂದು ಶುಭ ದಿನ ಬಸಿರಿಯಾದ ಮಗಳನ್ನು ತವರಿಗೆ ಕರೆತರಲು ತಂದೆ-ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಬಂಧು-ಬಾಂಧವರು ಎಲ್ಲರೂ ಬೀಗರ ಮನೆಗೆ ಬರುತ್ತಾರೆ. ಅಂದು ರಾತ್ರಿ ಹಬ್ಬದ ಊಟದ ವ್ಯವಸ್ಥೆಯನ್ನು ತಾವೇ ಮಾಡುತ್ತಾರೆ.

ಇನ್ನು ಮುತ್ತೈದೆಯರೆಲ್ಲರೂ ಸೇರಿ ಗರ್ಭಿಣಿ ಸ್ತ್ರೀಗೆ ಎಣ್ಣೆಸ್ನಾನ ಮಾಡಿಸಿ ತವರಿನಿಂದ ತಂದ ಹಸಿರು ಸೀರೆ, ರವಿಕೆಯನ್ನು ಉಡಿಸಿ, ಗಾಜಿನ ಬಳೆಯನ್ನು ತೊಡಿಸಿ ಹೂವನ್ನು ಮುಡಿಸಿ, ಒಡವೆಗಳಿಂದ ಶೃಂಗರಿಸುತ್ತಾರೆ. ರಾತ್ರಿ ಬೀಗರ ಊರಿನ ಬಂಧು-ಬಾಂಧವರನ್ನು ಊಟಕ್ಕೆ ಆಹ್ವಾನಿಸಿ, ಊಟದ ನಂತರ ಗರ್ಭಿಣಿ ಸ್ತ್ರೀಯರನ್ನು ಒಂದು ಕುರ್ಚಿಯ ಮೇಲೆ ಕುಳ್ಳರಿಸಿ ತಾವು ತಂದ ಎಲ್ಲಾ ಒಡವೆ, ವಸ್ತ್ರ, ತಿಂಡಿ, ತಿನಿಸುಗಳನ್ನೆಲ್ಲಾ ಆಕೆಯ ಮುಂದೆ ಸಾಲಾಗಿ ಜೋಡಿಸಿ; ಒಂಭತ್ತು ಜನ ಮುತ್ತೈದೆಯರು ಗರ್ಭಿಣಿ ಸ್ತ್ರೀಗೆ ಅರಿಶಿನ-ಕುಂಕುಮವನ್ನಿಟ್ಟು, ಬಳೆತೊಡಿಸಿ, ಹೂವು ಮುಡಿಸಿ, ಅಕ್ಷತೆಯನ್ನು ಹಾಕಿ ಆಕೆಗೆ ಶುಭವಾಗಲೆಂದು ದೇವರು ಒಳ್ಳೆದು ಮಾಡಲೆಂದು ಹಾರೈಸುತ್ತಾರೆ.

ಇಂತ ಸಂದರ್ಭದಲ್ಲಿ ಹೆಣ್ಣಿನ ಸೊಬಗು ಸೌಂದರ್ಯವನ್ನು ಕುರಿತಂತೆ ಮತ್ತು ಹುಟ್ಟಲಿರುವ ಮಗುವಿನ ಸೌಂದರ್ಯವನ್ನು ಕುರಿತಂತೆ ಸೋಬಾನೆ ಪದಕಟ್ಟಿ ಹಾಡುತ್ತಾರೆ. ಮಾರನೆ ದಿನ ಗರ್ಭಿಣಿಯು ಅತ್ತೆ-ಮಾವಂದಿರಿಗೆ, ಗಂಡನಿಗೆ ನಮಸ್ಕರಿಸಿ ಆರ್ಶಿವಾದ ಪಡೆದು ಬಾಣಂತನಕ್ಕೆ ತವರಿಗೆ ಹೊರಡುತ್ತಾಳೆ.

ಚೊಚ್ಚಲ ಹೆರಿಗೆ, ಕೆಲವೊಮ್ಮೆ ಎರಡನೆಯ ಹೆರಿಗೆಯು ತವರಿನಲ್ಲಿಯೇ ನಡೆಯಬೇಕೆಂಬುದು ಒಂದು ಸಂಪ್ರದಾಯ. ಇದಕ್ಕೆ ಕಾರಣ ಬಸಿರಿ ಹೆಣ್ಣಿಗೆ ಪರಿಚಿತ ವಾತಾವರಣದಲ್ಲಿ, ತನ್ನವರ ಮಧ್ಯೆ ಹೆರಿಗೆ ಸುಲಭವಾಗಿ ಆಗುತ್ತದೆ ಎಂಬುದೇ ಆಗಿದೆ. ಹೆಂಡತಿ ಗರ್ಭಿಣಿಯಾಗಿದ್ದಾಗ ಗಂಡನು ಹೆಣ ಹೊರುವುದು, ಹಾಲು ಕಂಬವನ್ನು ಮುಟ್ಟುವುದು ಮುಂತಾದ ವಿಧಿಗಳನ್ನು ಮಾಡುವಂತಿಲ್ಲ. ಅಷ್ಟೇ ಅಲ್ಲದೇ ಏಳನೆಯ ತಿಂಗಳಿನ ನಂತರ ತನ್ನ ತಲೆ ಕೂದಲನ್ನು ಕೂಡ ಕತ್ತರಿಸುವುದಿಲ್ಲ.

ಇನ್ನು ಮನೆಗೆ ಕರೆತಂದಂತಹ ಬಸುರಿ ಮಗಳಿಗೆ ಆಕೆಯ ಬಸುರಿ ಬಯಕೆ ಏನೆಂದು ತಿಳಿದು ಆಕೆ ಇಷ್ಟಪಡುವಂತಹ ತಿಂಡಿ ತಿನಿಸುಗಳನ್ನು ಕೇಳಿ ಮಾಡಿಕೊಡುತ್ತಾರೆ. ಕಾರಣ ಬಸುರಿ ಬಯಕೆಯಿಟ್ಟರೆ ಹೆರಿಗೆ ಬೇಗ ಆಗುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ. ಗರ್ಭಿಣಿ ಸ್ತ್ರೀಗೆ ಪ್ರತಿದಿನವೂ ಹಾಲಿಗೆ ಕೇಸರಿಯನ್ನು ಹಾಕಿ ಕುಡಿಯಲು ಕೊಡುತ್ತಾರೆ. ಹೀಗೆ ಮಾಡಿದರೆ ಹುಟ್ಟುವ ಮಗು ಕೆಂಪಗೆ ಹುಟ್ಟುತ್ತದೆ ಎಂಬುದು ಇವರ ನಂಬಿಕೆ.

ಪಿತೃಪ್ರಧಾನ ವ್ಯವಸ್ಥೆ ರೂಢಿಯಲ್ಲಿರುವ ಸಾದರಲ್ಲಿ ಮೊದಲ ಮಗು ಗಂಡು ಮಗುವೇ ಆಗಬೇಕೆಂದು ಬಯಸುತ್ತಾರೆ. ಇದಕ್ಕಾಗಿ ಮನೆದೇವರಲ್ಲಿ ಹರಕೆ ಹೊರುತ್ತಾರೆ. ತಮ್ಮ ಅಭೀಷ್ಟೆ ಫಲಿಸಿದರೆ ಸಂಭ್ರಮಿಸುತ್ತಾರೆ. ಹೆಣ್ಣು ಮಗುವಾದರೆ ಅಯ್ಯೋ ಖರ್ಚಿಗೆ ಮೂಲವಾಯಿತು ಎನ್ನುತ್ತಾರೆ ಕೆಲವರು; ಮನೆಗೆ ಮಹಾಲಕ್ಷ್ಮೀ ಬಂದಳೆಂದು ಆನಂದಪಡುತ್ತಾರೆ ಹಲವರು. ತಮ್ಮ ಮಗಳಿಗೆ ಸುಸೂತ್ರವಾಗಿ ಹೆರಿಗೆಯಾಗಲೆಂದು ದೇವರಲ್ಲಿ ಹರಕೆ ಹೊರುತ್ತಾರೆ, ಪ್ರಾರ್ಥಿಸುತ್ತಾರೆ.

ಚೊಚ್ಚಲ ಹೆರಿಗೆ:-

ಗರ್ಭಿಣಿ ಸ್ತ್ರೀಗೆ ಹೇರಿಗೆ ನೋವು ಕಾಣಿಸಿಕೊಂಡಾಗ ಊರಿನ ಸೂಲಗಿತ್ತಿಯನ್ನು ಕರೆಸುತ್ತಾರೆ. ಆಸ್ಪತ್ರೆಯ ವೈದ್ಯರಿಗಿಂತ ಗ್ರಾಮೀಣ ಪ್ರದೇಶದಲ್ಲಿನ ಸೂಲಗಿತ್ತಿಯರು ಹೆರಿಗೆ ಮಾಡಿಸುವ ವಿಚಾರದಲ್ಲಿ ಹೆಚ್ಚಿನ ಅನುಭವವನ್ನು ಹೊಂದಿರುತ್ತಾರೆ. ಹೊಕ್ಕಳಿನ ಸುತ್ತ ಕೈ ಎಣ್ಣೆಯನ್ನು ನೀವುತ್ತಾರೆ. ತೆಳುಗಂಜಿ, ಕಷಾಯವನ್ನು ಕುಡಿಯಲು ಮಾಡಿಕೊಡುತ್ತಾರೆ. ನೋವು ತೀವ್ರವಾದಾಗ ಹೆರಿಗೆ ಮಾಡಿಸಲು ಒಂದು ಪ್ರಶಸ್ತ ಸ್ಥಳವನ್ನು ಆಯ್ಕೆ ಮಾಡುತ್ತಾರೆ. ಮನೆಯ ಹೊರಾಂಗಣದಲ್ಲಿರುವ ಕೋಣೆಯೊಂದರಲ್ಲಿ ಸಿದ್ಧತೆಗಳು ನಡೆಯುತ್ತದೆ. ನೆಲಕ್ಕೆ ನೆಲ್ಲ ಹುಲ್ಲನ್ನು ಹಾಕಿ, ಚಾಪೆ, ಹಳೆಬಟ್ಟೆಗಳನ್ನು ಹಾಸುತ್ತಾರೆ. ಕುಡುಗೋಲು, ಮೊರ, ಪರಕೆ, ಮಡಿಬಟ್ಟೆಗಳನ್ನು ಸೂಲಗಿತ್ತಿ ಅಣಿಗೊಳಿಸಿಕೊಳ್ಳುತ್ತಾಳೆ. ಮಗು ತಾಯಿಯ ಗರ್ಭದಿಂದ ಹೊರಬಂದಾಗ ಅದರ ಹೊಕ್ಕಳ ಬಳ್ಳಿಯನ್ನು ಒಂದೆರಡು ಅಂಗುಲ ಬಿಟ್ಟು ಕತ್ತರಿಸಿ ತೆಗೆಯಲಾಗುತ್ತದೆ. ನಂತರ ಮಗುವನ್ನು ಮೊರಕ್ಕೆ ಹಾಕುತ್ತಾಳೆ. ಹೀಗೆ ಮೊರಕ್ಕೆ ಹಾಕುವ ಸ್ತ್ರೀಯು ಯೋಗ್ಯವಂತಳಾಗಿರಬೇಕೆಂಬ ನಿಯಮವಿದೆ. ಮುಂದೆ ಆ ಮಗು ದೊಡ್ಡವನಾಗಿ ಏನಾದರೂ ತಪ್ಪು ಮಾಡಿದರೆ 'ಯಾವೋಳು ನಿನಗೆ ಮೊರ ಕೊಟ್ಟೋಳು?' ಎಂದು ಬೈಯ್ಯುವುದುಂಟು. ಮಗುವಿನ ಕತ್ತರಿಸಿದ ಹೊಕ್ಕಳು ಬಳ್ಳಿ ಮತ್ತು ಮಾಸನ್ನು ಪ್ರಾಣಿ, ಪಕ್ಷಿಗಳಿಗೆ ಸಿಗದಂತೆ ಗುಂಡಿ ತೆಗೆದು ಹೂಳುತ್ತಾರೆ. ಮಗು ಜನಿಸಿದ ಶುಭ ಗಳಿಗೆ, ವಾರ, ನಕ್ಷತ್ರವೆಲ್ಲವನ್ನು ಬರೆದಿಡುತ್ತಾರೆ.

ಹೆರಿಗೆ ಮುಗಿದ ನಂತರ ತಾಯಿಗೆ ಬಿಸಿನೀರಿನ ಸ್ನಾನ ಮಾಡಿಸಿ ಶೀತವಾಗದಂತೆ ಬಾಂಡ್ಲಿಯಲ್ಲಿ ಕೆಂಡವನ್ನಿಟ್ಟು ಅದರ ಮೇಲೆ ಮಂಕ್ರಿಯನ್ನು ಬೋರಲಾಗಿ ಹಾಕಿ ಬರುವ ಬಿಸಿ ಹೊಗೆಯಿಂದ ಬಾಣಂತಿಯ ತೇವದ ತಲೆಯನ್ನು ಒಣಗಿಸುತ್ತಾರೆ. ಕೆಲವೊಮ್ಮೆ ಆ ಬೆಂಕಿಯಲ್ಲಿ ಅರಿಶಿನ ಮತ್ತು ಬೆಳ್ಳುಳ್ಳಿ ಸಿಪ್ಪೆಯನ್ನು ಹಾಕುತ್ತಾರೆ. ಇದರಿಂದ ಬಾಣಂತಿಗೆ ಶೀತವಾಗದೆಂಬ ನಂಬಿಕೆ ಇವರದು.

ಹೀಗೆ ಅರಿಶಿನ, ಬೆಳ್ಳುಳ್ಳಿ ಸಿಪ್ಪೆ, ಕೆಂಡದಿಂದ ಬರುವ ಹೊಗೆಯಿಂದ ಬಾಣಂತಿಯ ಕೂದಲನ್ನು ಚೆನ್ನಾಗಿ ಒಣಗಿಸಿ ನಂತರ ತಲೆಗೆ ಕಿವಿಗೆ ಬಟ್ಟೆಕಟ್ಟುತ್ತಾರೆ. ಹಾಗೆಯೇ ಬಾಣಂತಿಯ ಹೊಟ್ಟೆಗೆ ಒಂದು ಬಟ್ಟೆಯನ್ನು ಬಿಗಿಯಾಗಿ ಕಟ್ಟುತ್ತಾರೆ. ಇದರಿಂದ ಹೊಟ್ಟೆ ಮುಂದೆ ಬರುವುದು, ಸೊಂಟ ನೋವು ಬರುವುದು ತಪ್ಪುತ್ತದೆ ಎಂಬುದು ಇವರ ಅಭಿಪ್ರಾಯ. ಮಗುವನ್ನು ಹೇಗೆ

ನೋಡಿಕೊಳ್ಳಬೇಕು ಎಂಬ ಬಗ್ಗೆ ಅನುಭವೀ ಸ್ತ್ರೀಯರು ತಾಯಿಗೆ ಹೇಳಿಕೊಡುತ್ತಾರೆ. ಒಂದು ಮೆತ್ತನೆಯ ಬಟ್ಟೆಯನ್ನು ಸಿಂಬೆಯಂತೆ ಸುತ್ತಿ ಮಗುವಿನ ತಲೆಯ ಅಡಿ ಇಡುತ್ತಾರೆ. ಜೊತೆಗೆ ಮಗುವಿನ ತಲೆಯ ಅಕ್ಕ-ಪಕ್ಕ ಚಿಕ್ಕ ದಿಂಬುಗಳನ್ನಿಡುತ್ತಾರೆ. ಕಾರಣ ಮಗುವಿನ ತಲೆಯ ಆಕಾರ ಗುಂಡಾಗಿರಲಿ ಎಂಬ ದೃಷ್ಟಿಯಿಂದ ಹೀಗೆ ಮಾಡುವುದುಂಟು. ಹಿರಿಯ ಹೆಂಗಸು ಮಗುವನ್ನು ಎತ್ತಿಕೊಂಡು, ತನ್ನ ಕಾಲುಗಳನ್ನು ನೀಡಿ ಕಾಲಮೇಲೆ ಮಕಾಡೆ ಮಲಗಿಸಿ ಹರಳೆಣ್ಣೆಯನ್ನು ಮಗುವಿಗೆ ನೀವುತ್ತಾಳೆ. ನಂತರ ಅಂಗಾತ ಮಲಗಿಸಿದ ಮಗುವಿಗೆ ಎಣ್ಣೆಯನ್ನು ನೀವಿ ಸ್ನಾನ ಮಾಡಿಸಿ, ನಂತರ ಸಾಂಬ್ರಾಣಿ ಹೊಗೆಯನ್ನು ಹಾಕುತ್ತಾರೆ.

ಮಣ್ಣಿನ ದೀಪದಲ್ಲಿ ಸೂಜಿಯನ್ನು ಕಾಯಿಸಿ ಮಗುವಿಗೆ ಹೊಕ್ಕಳ ಸುತ್ತಲು '+' ಆಕಾರದಲ್ಲಿ ಬರೆಗಳನ್ನು ಹಾಕುತ್ತಾರೆ. ಈ ರೀತಿ ಮಗುವಿಗೆ ಬರೆ ಹಾಕುವುದರಿಂದ ಚಳುಕು, ಹೊಟ್ಟೆನೋವು ಬರುವುದಿಲ್ಲ ಎಂಬ ನಂಬಿಕೆ ಸಾದರಲ್ಲಿದೆ.

ಒಂಭತ್ತನೆಯ ದಿನ ಒಂಭತ್ತು ತರದ ಸೊಪ್ಪುಗಳನ್ನು ತಂದು (ನಿಂಬೆ ಸೊಪ್ಪು, ಬೇವಿನ ಸೊಪ್ಪು, ಕಿತ್ತಲೆ ಸೊಪ್ಪು, ಹರಳಿ ಸೊಪ್ಪು, ಗೆಜ್ಜಗದ ಸೊಪ್ಪು, ಊಡುಗುದ್ ಸೋಪ್ಪು, ಬಿಕ್ಕೆ ಸೊಪ್ಪು, ಬಿಲ್‌ಪತ್ರೆ) ಹಂಡೆಯಲ್ಲಿನ ನೀರಿಗೆ ಹಾಕಿ ನೀರನ್ನು ಚೆನ್ನಾಗಿ ಕುದಿಯುವಂತೆ ಕಾಯಿಸುತ್ತಾರೆ.

ಬಾಣಂತಿಯನ್ನು ಸ್ನಾನಕ್ಕೆ ಕರೆತರುವ ಮುನ್ನ 'ಕೊಂಡ್ಲು ದೇವರು' ಎಂಬ ಶಾಸ್ತ್ರವನ್ನು ಮಾಡಿಸುತ್ತಾರೆ. ಈ ಶಾಸ್ತ್ರದಲ್ಲಿ ಹಾಲು, ಮೆಣಸನ್ನು ಕಲಸಿ ಬಾಣಂತಿಯ ಬೆನ್ನು ತಲೆ, ಕೈ, ಕಾಲಿಗೆ ಸವರುತ್ತಾರೆ. ನಂತರ ಒಂದು ಕುಡ್ಲು ಮತ್ತು ಬೇವಿನಸೊಪ್ಪನ್ನು ಬಾಣಂತಿಯ ಕೈಗೆ ಕೊಡುತ್ತಾರೆ. ಆಕೆಯು ಅದನ್ನು ಭಯ-ಭಕ್ತಿಯಿಂದ ಹಂಡೆಯ ಮೇಲಿಟ್ಟು ನಮಸ್ಕರಿಸುತ್ತಾಳೆ. ನಂತರ ಮುತ್ತೈದೆಯರು ಬಾಣಂತಿಗೆ ಸ್ನಾನ ಮಾಡಿಸಿ ಮಡಿ ಬಟ್ಟೆಯನ್ನುಡಿಸಿ ಕರೆತಂದು ಒಂದು ಪಾತ್ರೆಯಲ್ಲಿ ಸ್ವಲ್ಪ ಕೆಂಡವನ್ನಿಟ್ಟು ಕೆಂಡಕ್ಕೆ ಸ್ವಲ್ಪ ಸಾಂಬ್ರಾಣಿ, ಬೆಳ್ಳುಳ್ಳಿ ಸಿಪ್ಪೆ, ರಾಗಿ ಹಸಿಟ್ಟು, ಅರಶಿನವನ್ನು ಹಾಕಿ ಅದರ ಮೇಲೆ ಮಂಕರಿ (ಬಿದಿರಿನ ಬುಟ್ಟಿ)ಯನ್ನು ಬೋರಲಾಗಿ ಹಾಕಲಾಗುತ್ತದೆ. ಬಿದಿರಿನ ಮಂಕರಿಯ ಸಂದಿನಿಂದ ಬರುವ ಬಿಸಿಯ ಹೊಗೆಯಿಂದ ಬಾಣಂತಿಯ ಕೇಶವನ್ನು ಒಣಗಿಸುತ್ತಾರೆ.

ಹೆರಿಗೆಯಾದ ಒಂಭತ್ತು ದಿನಗಳವೆರೆಗೆ ಬಾಣಂತಿಗೆ ತಿನ್ನಲು ಆಹಾರವಾಗಿ, ಕುಡಿಯಲು ಬಿಸಿನೀರು, ಬಿಸಿ ಆಹಾರವನ್ನು ತಾಟಿ ಬೆಲ್ಲದೊಂದಿಗೆ ಕೊಡುತ್ತಾರೆ. ಮತ್ತೆ ಗಂಜಿಯನ್ನು ಕಾಯಿಸಿಕೊಡುತ್ತಾರೆ. ಒಂಭತ್ತು ದಿನದ ನಂತರವೂ ಕುಡಿಯಲು ಬಿಸಿನೀರು, ಅನ್ನ, ಬೇಳೆಯ ಸಪ್ಪೆ ಸಾರನ್ನು ಕೊಡಲಾಗುತ್ತದೆ. ಬಾಣಂತಿ ಯಾವುದೇ ಗಟ್ಟಿ ಪದಾರ್ಥ ತಿನ್ನುವಂತಿಲ್ಲ. ತಿಂದರೆ ಮಗುವಿಗೆ ಹೊಟ್ಟೆ ನೋಯುತ್ತದೆಂಬ ನಂಬಿಕೆ ಇದೆ.

ಹೆರಿಗೆಯ ನಂತರ ಬಾಣಂತಿಯನ್ನು ಹತ್ತು ದಿನಗಳವರೆಗೆ ಮೈಲಿಗೆ ಎಂದು ಪರಿಗಣಿಸಿ ಪ್ರತ್ಯೇಕ ಕೊಠಡಿಯಲ್ಲಿಟ್ಟಿರುತ್ತಾರೆ. ಈ ಹತ್ತು ದಿನಗಳು ದಾಯದಿಗಳಿಗೆ ಆಂಶಿಕ ಸೂತಕವಿರುತ್ತದೆ. ಆ

ಅವಧಿಯಲ್ಲಿ ಅವರು ದೇವಾಲಯಗಳಿಗೆ ಹೋಗಬಹುದು ಮತ್ತು ವ್ಯವಸಾಯ ಸಂಬಂಧಿ ಕಾರ್ಯಗಳಲ್ಲಿ ತೊಡಗಬಹುದು.

ಆದರೆ ಒಂದೇ ಮನೆದೇವರಿಗೆ ಕಲೆತ ಒಕ್ಕಲೆಲ್ಲರೂ ಹೆರಿಗೆಯಾಗಿ ಬಾಣಂತಿಗೆ ಸೂತಕದ ನೀರು ಹಾಕುವವರೆಗೂ ಮನೆಯಲ್ಲಿ ದೇವರಿಗೆ ದೀಪ ಹಚ್ಚುವುದಾಗಲಿ, ದೇವಸ್ಥಾನಗಳಿಗೆ ಹೋಗುವುದಾಗಲಿ, ಯಾವುದೇ ಶುಭಕಾರ್ಯಗಳನ್ನು ಮಾಡುವುದಾಗಲಿ ಮಾಡುವುದಿಲ್ಲ. ಏಕೆಂದರೆ ಆ ದಿನಗಳು ತಮಗೆ ಸೂತಕವೆಂಬುದು ಅವರ ನಂಬಿಕೆಯಾಗಿದೆ.

ಹನ್ನೊಂದನೆಯ ದಿನ ಮನೆಯ ಅಂಗಳದಲ್ಲಿ ಗಂಡನಿಂದ ತೋಡಲ್ಪಟ್ಟ ಸಣ್ಣ ಗುಂಡಿಯ ಮೇಲಿಟ್ಟಿರುವ ಪೀಠದ ಮೇಲೆ ಬಾಣಂತಿ ಮತ್ತು ಮಗುವನ್ನು ಕೂಡಿಸಿ ಅಕ್ಕಪಕ್ಕದ ಮನೆಯವರಿಂದ ಕೊಡಲ್ಪಟ್ಟ ಗಡಿಗೆ ನೀರು ಮತ್ತು ಸೀಗೆ ಪುಡಿಯಿಂದ ಮುತ್ತೈದೆಯರು ಸ್ನಾನ ಮಾಡಿಸುತ್ತಾರೆ. ನಂತರ ಮಗುವನ್ನು ಒಳಕ್ಕೆ ಕರೆದೊಯ್ಯುವ ಮುನ್ನ ಹಿರಿಯ ಮುತ್ತೈದೆಯೊಬ್ಬರು ಲೋಹದ ತಟ್ಟೆಯನ್ನು ಜಾಗಟೆಯಿಂತೆ ಬಾರಿಸುತ್ತಾ 'ಧೈರ್ಯವಿದ್ದರೆ ಮಗುವನ್ನು ಕಸಿದುಕೊಂಡು ಹೋಗಿ, ಮಗುವನ್ನು ಒಳಗೆ ಕರೆದೊಯ್ದ ಮೇಲೆ ಅದು ಮನೆದೇವರ ರಕ್ಷಣೆಯಲ್ಲಿರುತ್ತದೆ. ಆಗ ನಿಮ್ಮ ಆಟ ಸಾಗದು' ಎಂದು ದುಷ್ಟಶಕ್ತಿಗಳಿಗೆ ಎಚ್ಚರಿಕೆಯ ಸವಾಲನ್ನು ಹಾಕುತ್ತಾಳೆ.

ಈ ಸಂದರ್ಭದಲ್ಲಿ ಸಾದರಲ್ಲಿ ಹಲವು ನಂಬಿಕೆಗಳು ರೂಢಿಯಲ್ಲಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೇ ಹಲವು ಸಾಂಪ್ರದಾಯಿಕ ಆಚರಣೆಗಳನ್ನು ಆಚರಿಸುತ್ತಾರೆ. ಅವುಗಳೆಂದರೆ:–

ಬಾಣಂತಿ ಒಬ್ಬಂಟಿಯಾಗಿ ಆಚೆ ಎಲ್ಲೂ ಓಡಾಡುವಂತಿಲ್ಲ. ತಿಂಗಳು ತುಂಬುವವರೆಗೆ ಮಗು ಮತ್ತು ಬಾಣಂತಿ ಇಬ್ಬರನ್ನೇ ಒಂಟಿಯಾಗಿ ಬಿಡುವಂತಿಲ್ಲ. ಜೊತೆಯಲ್ಲಿ ಯಾರಾದರೊಬ್ಬರು ಇರಬೇಕು ಇಲ್ಲವಾದರೆ ಪಿಶಾಚಿಗಳು ಕಾಟಕೊಡುತ್ತವೆ ಎಂಬ ನಂಬಿಕೆ ಇವರಲ್ಲಿದೆ.

ಇವರು ತಮ್ಮ ನಂಬಿಕೆಗೆ ನೀಡುವ ಕಾರಣ ಅಲೌಕಿಕವಾದುದಾದರೂ ಸಹ ಆ ಸಮಯದಲ್ಲಿ ತಾಯಿ–ಮಗುವಿನ ಸ್ಥಿತಿ ಸೂಕ್ಷ್ಮವಾಗಿರುವ ಕಾರಣ, ಮಗುವಿನ ತಾಯಿಗೆ ಹಿರಿಯ ಸ್ತ್ರೀಯರ (ಅನುಭವೀ ಸ್ತ್ರೀಯರ) ಸಹಾಯ–ಸಹಕಾರದ ಅವಶ್ಯಕತೆ ಇರುವುದಂತೂ ಸ್ಪಷ್ಟವಿಚಾರವೇ ಸರಿ.

ಇನ್ನು ಮಗುವಿನ ತಾಯಿ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುವಂತಿಲ್ಲ ಎಂಬ ನಂಬಿಕೆ ಇದೆ. ಹಾಗೇನಾದರೂ ನೋಡಿಕೊಂಡರೆ ಮಗು ತನ್ನ ಮುಖ ಪರಚಿಕೊಂಡು ಗಾಯಮಾಡಿಕೊಳ್ಳುತ್ತದೆ ಎಂಬ ವಾಡಿಕೆಯು ಇವರಲ್ಲಿದೆ.

ತಾಯಿಯು ತನ್ನ ಅಲಂಕಾರ, ಶೃಂಗಾರದ ಬಗ್ಗೆ ಗಮನ ನೀಡಿದರೆ ಮಗುವಿನ ಕಡೆ ಎಲ್ಲಿ ಗಮನ ಕಡಿಮೆ ಆಗುವುದೇ ಎಂಬ ಭಾವನೆಯಿಂದ ಹಿರಿಯರು ಇಂತ ಒಂದು ನಂಬಿಕೆಯನ್ನು ಸೃಷ್ಟಿಸಿರಬಹುದು.

ಸಾದರಲ್ಲಿರುವ ಮತ್ತೊಂದು ನಂಬಿಕೆಯೆಂದರೆ ಎಳೆಯ ಮಗುವಿರುವ ಕಡೆ ಜೋರಾಗಿ ಮಾತನಾಡುವಂತಿಲ್ಲ. ಕೈ-ಕಾಲುಗಳನ್ನು ತೊಳೆಯದೆ ಮನೆಯ ಒಳಗೆ ಮನೆಯ ಯಾವುದೇ ಸದಸ್ಯರಿರಲಿ, ಹೊರಗಿನವರಿರಲಿ ಪ್ರವೇಶಿಸುವಂತಿಲ್ಲ. ಮಗುವಿನ ಮತ್ತು ತಾಯಿಯ ಆರೋಗ್ಯದ ದೃಷ್ಟಿಯಿಂದ ಈ ಎಲ್ಲಾ ಅಂಶಗಳು ಬಹುಪ್ರಮುಖವಾದವೇ ಸರಿ.

ಬಾಣಂತಿ ಕೋಣೆಯಲ್ಲಿ ರಾತ್ರಿ ಇಡೀ ದೀಪ ಆರುವಂತಿಲ್ಲ. ಕಾರಣ ರಾತ್ರಿಯಲ್ಲಿ ಮಗುವಿನ ಹಣೆಬರಹವನ್ನು ಬರೆಯಲು ವಿಧಿಯಮ್ಮ ಬರುತ್ತಾಳೆ. ಮನೆಯಲ್ಲಿ ಕತ್ತಲಿದ್ದರೆ ಆಕೆಗೆ ಕಾಣದೆ ತಪ್ಪು-ತಪ್ಪಾಗಿ ಬರೆದು ಬಿಡುತ್ತಾಳೆ. ಹೀಗೆ ತಪ್ಪು ಬರಹ ಬರೆದರೆ ಮುಂದೆ ಆ ಮಗುವಿಗೆ ಕಷ್ಟಬರುತ್ತದೆ. ಆದ್ದರಿಂದ ದೀಪ ಆರಬಾರದು ಎಂಬೊಂದು ನಂಬಿಕೆ ಇವರಲ್ಲಿದೆ.

ಅಷ್ಟೇ ಅಲ್ಲದೇ ಹೆರಿಗೆಯಾದ ಒಂಭತ್ತನೆಯ ದಿನದಲ್ಲಿ ಗೋಮೂತ್ರವನ್ನು ತಂದು ಮನೆಯಲ್ಲಿ ಎಲ್ಲ ಕಡೆಯಲ್ಲಿ ಚುಮುಕಿಸುವುದರಿಂದ ಸೂತಕ ಕಳೆಯುತ್ತದೆ. ನಂತರ ದೇವರ ಪೂಜೆ ಮಾಡಬಹುದು ಎಂಬ ವಾಡಿಕೆಯು ಇವರಲ್ಲಿದೆ. ಜೊತೆಗೆ ಮಗುವಿಗೆ ಕುಡಿಯಲು ಬಾಣಂತಿ ತಾಯಿಯ ಎದೆಯಲ್ಲಿ ಹಾಲಿಲ್ಲವಾದರೆ ಗಂಗಮ್ಮನಿಗೆ, ಮನೆದೇವರಿಗೆ ಹರಕೆ ಹೊರುತ್ತಾರೆ.

ಹಾಗೆಯೇ ತಾಯಿ-ಮಗು ಮಲಗುವಲ್ಲಿ ಹಾಸಿಗೆ ಬಳಿಯಲ್ಲಿ ಹಳೆಯ ಚಪ್ಪಲಿ, ಪೊರಕೆ ಇಡುತ್ತಾರೆ. ಕಾರಣ ಹಸಿಮೈ ಬಾಣಂತಿಯಾದ ಕಾರಣ ದೆವ್ವ, ಪೀಡೆ, ಪಿಶಾಚಿಗಳು ಬರದಂತಿರಲಿ ಎಂಬ ಕಾರಣದಿಂದ ಹೀಗೆ ಮಾಡುತ್ತಾರೆ. ಇದು ಇವರಲ್ಲಿನ ದುಷ್ಟಶಕ್ತಿಗಳನ್ನು ಕುರಿತು ಇರುವ ನಂಬಿಕೆಗಳನ್ನು ತೋರ್ಪಡಿಸುತ್ತದೆಯಷ್ಟೇ ಅಲ್ಲದೆ ನಂಬಿಕೆಗಳಲ್ಲಿ-ಮೂಢನಂಬಿಕೆಗಳೂ ಸಹ ಹೇಗೆ ಉಳಿದು ಬಂದಿವೆ ಎಂಬುದು ತಿಳಿಯುತ್ತದೆ.

ಇನ್ನು ತಾಯಿ-ಮಗುವನ್ನು ನೋಡಲು ಬರುವ ಸಂಬಂಧಿಕರು, ಬಂಧು-ಬಾಂಧವರು ಬರಿಗೈಯಲ್ಲಿ ಮಗುವನ್ನು ನೋಡಬಾರದೆಂದು ಅಕ್ಕಿ, ಬೆಲ್ಲ, ಕೊಬ್ಬರಿ, ಮಗುವಿಗೆ ಬಟ್ಟೆ, ಕೆಲವರು ಚಿನ್ನದ ಒಡವೆಗಳನ್ನು ತಂದು ಮಗುವಿಗೆ ಕೊಟ್ಟು ಮಗುವಿನ ಮತ್ತು ತಾಯಿಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಾರೆ.

ಲಿಂಗಾಯತ ಸಾದರು ಹಿಂದೂಸಾದರಂತೆ ಮೈಲಿಗೆಯನ್ನು ಪರಿಗಣಿಸುವುದಿಲ್ಲ. ಬಾಣಂತಿ ಮತ್ತು ಮಗು ಒಂದು ವಾರ ಪರ್ಯಂತ ಹಾಸಿಗೆಯಲ್ಲಿದ್ದು ನಂತರ ಮಂಗಳ ಸ್ನಾನ ಮಾಡುತ್ತಾರೆ. ಪ್ರಥಮ ದಿನದಂದು ಜಂಗಮ ಪುರೋಹಿತರು ಮಗುವಿಗೆ ಲಿಂಗಪ್ರದಾನ ಮಾಡುತ್ತಾರೆ. ಅದನ್ನು ತಾಯಿ ತನ್ನ ವಶದಲ್ಲಿಟ್ಟುಕೊಂಡು ಮೂರ್ನಾಲ್ಕು ವರ್ಷಗಳ ನಂತರ ಮಗುವಿಗೆ ಕಟ್ಟುತ್ತಾಳೆ.

<u>ನಾಮಕರಣ:-</u>

ಹೆರಿಗೆಯಾದ ಹನ್ನೊಂದನೇ ದಿನ ಸೂತಕ ತೆಗೆಯಲಾಗುತ್ತದೆ. ನಂತರ ಮಗವಿಗೆ ಹೆಸರಿಡುವ ಕಾರ್ಯಕ್ರಮವೂ ಅಂದೇ ನಡೆಯುತ್ತದೆ. ಕೆಲವೊಮ್ಮೆ ಮಗುವಿಗೆ ಒಂಭತ್ತು ತಿಂಗಳು

ತುಂಬಿದ ನಂತರ ಅಥವಾ ಗಂಡನ ಮನೆಗೆ ಕಳುಹಿಸುವಾಗ; ಕಳುಹಿಸುವ ಹತ್ತಿರದ ದಿನಗಳಲ್ಲಿಯೇ ಮಗುವಿಗೆ ನಾಮಕರಣ ಮಾಡಲಾಗುತ್ತದೆ.

ಬ್ರಾಹ್ಮಣ ಪುರೋಹಿತರನ್ನು ಕರೆಸಿ ಶುಭದಿನವನ್ನು ಗೊತ್ತುಪಡಿಸಲಾಗುತ್ತದೆ. ಅವರ ಬೇಡಿಕೆಯಪಟ್ಟಿಯಂತೆ ಎಲ್ಲ ವಸ್ತುಗಳನ್ನು ಅನುಗೊಳಿಸಿ ಬಂಧು ಬಾಂಧವರೆಲ್ಲರ ಸಮ್ಮುಖದಲ್ಲಿ ಮನೆದೇವರಿಗೆ ಪೂಜೆಸಲ್ಲಿಸಿ ಮಗುವಿನ ತಂದೆ-ತಾಯಿಯರು ಮಗುವಿಗೆ ಓಂ ಅಕ್ಷರವನ್ನು ಬರೆಸುತ್ತಾರೆ. ನಂತರ ಮಗುವಿನ ಸೋದರ ಮಾವ ಅಕ್ಕಿ ತುಂಬಿದ ತಟ್ಟೆಯಲ್ಲಿ ಮಗುವಿಗೆ ಇಡುವ ಹೆಸರನ್ನು ಬರೆಯುತ್ತಾನೆ. ನಂತರ ಮಗುವಿನ ಹೆಸರನ್ನು ಮೂರುಬಾರಿ ಗಟ್ಟಿಯಾಗಿ ಮಗುವಿನ ಕಿವಿಯಲ್ಲಿ ಕೂಗಿ ನಂತರ ಮೊದಲೇ ಶೃಂಗರಿಸಿದ ತೊಟ್ಟಿಲಲ್ಲಿ ಮಗುವನ್ನು ಇಡುತ್ತಾರೆ. ಕೆಲವೊಮ್ಮೆ ಶೃಂಗರಿಸಿ ಪೂಜೆ ಮಾಡಿದ ತೊಟ್ಟಿಲಿಗೆ ಮೊದಲು ಒಂದು ಗುಂಡು ಕಲ್ಲನ್ನಿಟ್ಟು ಪೂಜಿಸಿ ನಂತರ ಮಗುವನ್ನು ಮಲಗಿಸಿ ಪೂಜಿಸುತ್ತಾರೆ. ಇದನ್ನು ಸಾದರು 'ತೊಟ್ಲುಶಾಸ್ತ್ರ' ಎಂದು ಕರೆಯುತ್ತಾರೆ. ನಂತರ ನೆರೆದಿರುವವರೆಲ್ಲರಿಗೂ ಸಿಹಿಯನ್ನು ಹಂಚಲಾಗುತ್ತದೆ.

ಸಾದರು ಸಾಮಾನ್ಯವಾಗಿ ತಮ್ಮ ಮನೆದೇವರ ಹೆಸರಿನ ಮೊದಲ ಅಕ್ಷರದಿಂದ ಪ್ರಾರಂಭವಾಗುವ ಹೆಸರನ್ನೇ ಮಕ್ಕಳಿಗೆ ಇಡುತ್ತಾರೆ. ಮತ್ತೆ ಕೆಲವರು ತಾವು ಹರಕೆ ಹೊತ್ತಿರುವ ದೇವರ ಹೆಸರು, ತಮ್ಮ ಇಷ್ಟದೇವರ ಹೆಸರು, ತಮ್ಮ ಹಿರಿಯರ ಹೆಸರನ್ನು ತಮ್ಮ ಮಕ್ಕಳಿಗೆ ಇಡುವ ರೂಢಿಯನ್ನು ಇವರು ಉಳಿಸಿಕೊಂಡಿದ್ದಾರೆ.

ಉದಾ:- ಬಸವರಾಜು, ಬಸಣ್ಣ, ಬಸಪ್ಪ ಇತ್ಯಾದಿಯಾಗಿ ಗಮನಿಸಬಹುದು.

ಇತ್ತೀಚಿನ ದಿನಗಳಲ್ಲಿ ಆಧುನಿಕತೆ ಎಂಬುದು ಇಡುವ ಹೆಸರಿನಲ್ಲಿಯೂ ತಲೆಹಾಕುತ್ತಿರುವುದು ಸಹಜವೇ ಆಗಿದೆ.

ಹೊಸಲು ಪೂಜೆ:-

ಸಾದರಲ್ಲಿ ಹೊಸಲು ಪೂಜೆಯು ಬಹು ವಿಶೇಷ ಸ್ಥಾನವನ್ನು ಹೊಂದಿದೆ. ಮಗು ತನ್ನ ಎಳೆಯ, ಅಸಹಾಯಕ ಸ್ಥಿತಿಯಲ್ಲಿ ಮುಂಬಾಗಿಲಿನ ಹೊಸಿಲಿನಿಂದ ಒಳಗೆ ಇರುತ್ತದೆ. ಅದು ಬೆಳೆದು ಮೊದಲ ಬಾರಿಗೆ ತನಗೆ ತಾನೇ ಮುಂಬಾಗಿಲಿನ ಹೊಸಲನ್ನು ದಾಟಿದ್ದನ್ನು ಮಗುವಿನ ಒಂದು ಉಪವಿದಿಯಾಗಿ ಆಚರಿಸಲಾಗುತ್ತದೆ. ಸಾದರು ಇದನ್ನು ಹೊಸಲು ಪೂಜೆ ಎಂದು ಕರೆಯುತ್ತಾರೆ. ಹೊಸ್ತಿಲನ್ನು ಪೂಜಿಸಿ, ಕಡ್ಡಿ ಬೆಳಗಿಸಿ, ಕಾಯಿ ಹೊಡೆದ ನಂತರವೇ ಮಗುವನ್ನು ಮನೆಯಿಂದ ಹೊರತಂದು, ಕಾಯಿ ಅಥವಾ ಕೊಬ್ಬರಿಯನ್ನು ಓಣಿಯಲ್ಲಿನ ಎಲ್ಲಾ ಮನೆಗಳಿಗೆ ಮಕ್ಕಳಿಗೆ ಹಂಚುವರು. ಇದರಿಂದ ರಸ್ತೆಗೆ ದನಕರು, ಬಂಡಿಬೇಸಾಯ ಬಿಡುವ ನೆರೆಹೊರೆಯವರೆಲ್ಲರಿಗೂ, ತನಗೆ ತಾನೆ ರಸ್ತೆಗೆ ಇಳಿಯಬಲ್ಲ ಇನ್ನೊಂದು ಮಗು ಈ ಓಣಿಯಲ್ಲಿದೆ ಎಂದು ತಿಳಿದಂತಾಗುತ್ತದೆ ಎಂಬುದೇ ಈ ಪೂಜೆಯ ಉದ್ದೇಶ.

ಇಲ್ಲಿ ಮಗು ದಾಟಿದ್ದು ಕೇವಲ ಹೊಸಲನ್ನು ಮಾತ್ರವಲ್ಲ. ಇಲ್ಲಿಯವರೆಗೆ ಅದಕ್ಕೆ ಇದ್ದ ಧಾರ್ಮಿಕ, ಸಾಮಾಜಿಕ ಸಂಪರ್ಕದ ಎಲ್ಲೆಯನ್ನು ಕೂಡ. ಹೀಗಾಗಿ ನೆರೆಹೊರೆಗೆ ತಿಳಿದ ವಿಚಾರ ಕೇವಲ ಮಗು ಹೊಸ್ತಿಲನ್ನು ತಾನೇ ದಾಟಿತು ಎಂಬುದು ಮಾತ್ರವಲ್ಲ, ಇಲ್ಲಿಯವರೆಗೆ ಕೇವಲ ಕುಟುಂಬದ ಸದಸ್ಯರ ಸಂಪರ್ಕದಲ್ಲಿದ್ದ ಮಗು ಈ ನಂತರ ಹೊರಗಿನವರ ಸಂಪರ್ಕಕ್ಕೂ ಬರುತ್ತದೆ. ಅವರಿಂದ ಒಳ್ಳೆಯದು, ಕೆಟ್ಟದ್ದು, ಹೀಗೆ ಅನೇಕ ಹೊಸ-ಹೊಸ ವಿಚಾರಗಳನ್ನು ಕಲಿಯುತ್ತದೆ.

ಮಂಡೆ ತೆಗೆಸುವುದು:-

ಸಾದರಲ್ಲಿ ಮಂಡೆ ತೆಗೆಸುವುದು ಪ್ರಮುಖ ಆಚರಣೆಯಾಗಿದೆ. ಸಾಮಾನ್ಯವಾಗಿ ತಾಯಿ ತನ್ನ ಬಾಣಂತನ ಮುಗಿಸಿಕೊಂಡು ತಾಯಿ-ಮಗು ಗಂಡನ ಮನೆಗೆ ಹೋದಾಗ ನಡೆಯುವ ಕಾರ್ಯ ಇದಾಗಿದೆ. ಮಗುವಿಗೆ ಒಂದು ವರ್ಷತುಂಬುವ ಮೊದಲು ಮುಡಿಯನ್ನು ತಮ್ಮ ಮನೆದೇವರಿಗೆ ಹರಕೆಯಾಗಿ ನೀಡುವ ವಾಡಿಕೆ ಇವರಲ್ಲಿದೆ. ಅಂದು ಸ್ನಾನಾದಿಗಳನ್ನು ಮಾಡಿ ಪೂಜೆ ಪುನಸ್ಕಾರಾಧಿಗಳನ್ನು ಮುಗಿಸಿ, ಮಗುವಿಗೆ ದೇವರ ತೀರ್ಥವನ್ನು ಹಾಕಿಸಿಕೊಂಡು ದೇವಾಲಯಕ್ಕೆ ಕಾಣಿಕೆ ನೀಡಿ ನಂತರ ಕ್ಷೌರಿಕನಿಗೆ ಒಂದು ಸೇರು ಅಕ್ಕಿ, ಬಾಳೆಹಣ್ಣು, ಬೆಲ್ಲ, ಎಲೆ, ಅಡಿಕೆ, ದಕ್ಷಿಣೆಯೆಲ್ಲವನ್ನೂ ನೀಡಿ ಮಗುವಿನ ಕೂದಲನ್ನು ತೆಗೆಸುವ ಕಾರ್ಯ ಮಾಡಿಸಲಾಗುತ್ತದೆ. ಇದು ಬಾಣಂತನದ ಅಂತಿಮ ಘಟ್ಟವೆಂದೇ ಹೇಳಬಹುದು.

ಋತುಮತಿ ಆಚರಣೆ:-

ಬೆಳವಣಿಗೆ ಪ್ರಕೃತಿಯ ನಿಯಮ. ಮಗುವೊಂದು ಬೆಳೆದು, ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಅಡಿ ಇರಿಸಿದಾಗ ಕೆಲವು ಗ್ರಂಥಿಗಳ ಸ್ರವಿಸುವಿಕೆಯಿಂದ ಕೆಲವೊಂದು ದೈಹಿಕ ಹಾಗೂ ಮಾನಸಿಕ ಬದಲಾವಣೆಗಳಾಗುವುದು ಸಹಜವಾದದ್ದು. ಈ ಬದಲಾವಣೆಯು ಗಂಡು-ಹೆಣ್ಣು ಮಕ್ಕಳಿಬ್ಬರಲ್ಲೂ ಸಹಜವಾಗಿದ್ದರೂ ಕೂಡ ಹೆಣ್ಣು ಮಕ್ಕಳಿಗೆ ಈ ಹಂತದಲ್ಲಿ ಕೆಲವು ವಿಶೇಷವಾದಂತಹ ಆಚರಣೆಗಳನ್ನು ಮಾಡುವುದರ ಮೂಲಕ ಸಮಾಜದ ಗಮನಕ್ಕೆ ತರುವುದು ಬಹುತೇಕ ಎಲ್ಲಾ ಜನಾಂಗದಲ್ಲಿಯೂ ಕಂಡು ಬರುತ್ತದೆ.

ಸಾದರು ಹೆಣ್ಣು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರುವ ಕ್ರಿಯೆಯನ್ನು ಮೈನೆರೆಯುವುದು, ದೊಡ್ಡವಳಾಗುವುದು, ಋತುಮತಿಯಾಗುವುದು, ಹೆಣ್ಣಾಗುವುದು ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಹಲವು ವಿಶಿಷ್ಟ ಆಚರಣೆಗಳನ್ನು ಆಚರಿಸಲಾಗುತ್ತದೆ.

ಸಾದರು ಹೆಣ್ಣು ಮೈನೆರೆದಾಗ ಆಕೆಯನ್ನು ಮನೆಯ ಹೊರಗೆ ನಿಲ್ಲಿಸಿ ಐದು ಜನ ಮುತ್ತೈದೆಯರನ್ನು ಕರೆಯಿಸಿ ಆಕೆಗೆ ನೀರು ಹಾಕಿಸಲಾಗುತ್ತದೆ. ಆಗ ಆ ಹೆಣ್ಣುಮಗಳು ಮಡಿವಾಳರು ತಂದು ಕೊಟ್ಟ ಬಿಳಿಸೀರೆಯನ್ನು ಉಟ್ಟು ಬಾಗಿಲ ಹಿಂದೆ ಮೂಲೆಯಲ್ಲಿ ಚಾಪೆಯ ಮೇಲೆ ಕುಳಿತುಕೊಳ್ಳುತ್ತಾಳೆ. ಮನೆಯ ಹಿರಿಯ ಮುತ್ತೈದೆಯು ಒಂದು ಕೊಬ್ಬರಿ ಬಟ್ಟಲಿನ ತುಂಬ

ತುಪ್ಪವನ್ನು ತಂದು ಆಕೆಗೆ ಕುಡಿಯಲು ಕೊಡುತ್ತಾಳೆ. ತದನಂತರ ಕಡ್ಲೆ, ಖರ್ಜುರ, ಬಾಳೆಹಣ್ಣು, ತಂಬಿಟ್ಟು, ಚಿಗಳಿ ಎಲ್ಲವನ್ನು ಮುತ್ತೈದೆಯರು ಆ ಹೆಣ್ಣು ಮಗಳಿಗೆ ಮಡ್ಲು ತುಂಬುತ್ತಾರೆ. ಹೀಗೆ ಮಡ್ಲು ತುಂಬಿದ ಎಲ್ಲವನ್ನು ಆಕೆಯೊಬ್ಬಳೇ ಯಾರಿಗೂ ಕೊಡದಂತೆ ತಿಂದು ಮುಗಿಸಬೇಕೆಂಬ ನಿಯಮವಿದೆ. ತದನಂತರ ಜೋಯಿಸರನ್ನು ಕೇಳಿ ಒಳ್ಳೆಯ ಶುಭ ಸಮಯದಲ್ಲಿ ಗುಡ್ಲು ಹಾಕಲು ನಿಶ್ಚಯಿಸುತ್ತಾರೆ. ಆ ಸಮಯದಲ್ಲಿ ಹುಡುಗಿಯ ಸೋದರಮಾವ ಗುಡ್ಲು ಹಾಕಲು ಬೇಕಾದ ಎಲ್ಲ ಬಗೆಯ ಸೊಪ್ಪುಗಳನ್ನು; ಮುಖ್ಯವಾಗಿ ಹೂಡಗದ ಸೊಪ್ಪು, ಹತ್ತಿಸೊಪ್ಪು, ಬೇವಿನ ಸೊಪ್ಪು, ತೆಂಗಿನಗರಿಯನ್ನು ತಂದು ಗುಡ್ಲು ಹಾಕುತ್ತಾರೆ. ಮೈನೆರೆದ ಹೆಣ್ಣುಮಗಳಿಗೆ ಸ್ನಾನ ಮಾಡಿಸಿ ಆಕೆಯನ್ನು ನೆಲಕ್ಕೆ ಕಾಲಿರಿಸದಂತೆ ಮಣೆಯ ಮೇಲೆ ಕರೆತಂದು ಗುಡ್ಲ ಬಳಿ ನಿಲ್ಲಿಸಿ ಗುಡ್ಲು ಶಾಸ್ತ್ರ ಪ್ರಾರಂಭಿಸುತ್ತಾರೆ.

ಮೊದಲು ಹುಡುಗಿಯ ಸೋದರಮಾವನನ್ನು ಗುಡ್ಲು ಒಳಗೆ ಕುಳ್ಳರಿಸಿ ಅವರಿಗೆ ಒಸಗೆ ಹಾಕುತ್ತಾರೆ. ನಂತರ ಅವರು ಹೊರಬಂದಮೇಲೆ ಹೆಣ್ಣು ಮಗಳು ಒಂದು ಕೈಯಲ್ಲಿ ಗೊಂಬೆ, ಮತ್ತೊಂದು ಕೈಯಲ್ಲಿ ಚೊಂಬನ್ನು ಹಿಡಿದು ಗುಡ್ಲು ಒಳಗೆ ಪ್ರವೇಶಿಸುತ್ತಾಳೆ. ಆಗ ಆಕೆಗೆ ತಂಬಿಟ್ಟು, ಚಿಗಳಿ, ಕೊಬ್ಬರಿ, ಬೆಲ್ಲ ಮುಂತಾದವನ್ನಿಟ್ಟು ಮಡಿಲು ತುಂಬುತ್ತಾರೆ. ತದನಂತರ ಒಂದು ಚಿಕ್ಕ ಕಲ್ಲಿನ ಮೇಲೆ ತುಪ್ಪ ಅನ್ನವನ್ನು ಕಲಿಸಿಟ್ಟು ಅದನ್ನು ಮೂರೇ ಬೆರಳಲ್ಲಿ ಮೂರುಬಾರಿಗೆ ತಿನ್ನುವಂತೆ ಹೇಳುತ್ತಾರೆ. ಬಂದ ನೆಂಟರಿಷ್ಟರೆಲ್ಲರೂ ಹಬ್ಬದ ಅಡುಗೆಯನ್ನು ಮಾಡಿ ಊಟ ಮಾಡಿ ಇಡೀ ರಾತ್ರಿ ಸೋಬಾನೆ ಪದಗಳನ್ನು ಹಾಡುತ್ತಾ ಆ ಹೆಣ್ಣು ಮಗಳು ಮಲಗದಂತೆ ಗುಡ್ಲು ಕಾಯುತ್ತಾರೆ. ಎರಡನೇ ದಿವಸ ಬೆಳಗಿನ ಜಾವ 'ಕಲ್ಲು ನೀರು ಕರಗೋ ಹೊತ್ನಲ್ಲಿ' ಗುಡಿಸಲನ್ನೆಲ್ಲ ಕಿತ್ತು ಹೊರೆ ಕಟ್ಟಿ ಹುಡುಗಿಯ ಕೈಯ್ಯಲ್ಲೇ ಹೊರಿಸಿಕೊಂಡು ಊರಿನ ಹೊರಗಡೆಗೆ ಬಂದು ಹೊತ್ತು ತಂದ ಗರಿ, ಸೊಪ್ಪು, ಎರಡು ದಿನದಲ್ಲಿ ಆಕೆ ಮುಡಿದ ಹೂವ, ಬಾಚಿದ ತಲೆಕೂದಲು ಎಲ್ಲವನ್ನು ಸುಟ್ಟು ಹಿಂದೆ ತಿರುಗಿ ನೋಡದಂತೆ ಮನೆಗೆ ಬರುತ್ತಾರೆ.

ನಂತರ ಆ ಹೆಣ್ಣು ಮಗಳಿಗೆ ಮುತ್ತೈದೆಯರೆಲ್ಲಾ, ಸೇರಿ ಮಂಗಳಸ್ನಾನ ಮಾಡಿಸಿ ಒಸಗೆಯನ್ನು ಹಾಕುತ್ತಾರೆ. ನಂತರ ಹದಿನಾರು ದಿನಗಳವರೆಗೆ ಪ್ರತಿದಿನವೂ ಒಸಗೆಯನ್ನು ಹಾಕುತ್ತಿರುತ್ತಾರೆ. ಹದಿನಾರನೇ ದಿನಕ್ಕೆ ಎಕ್ಕದ ಗಿಡಕ್ಕೆ ಹಂಗ್ದಾರವನ್ನು (ಅರಿಶಿನದ ದಾರ) ಬಿಡಿಸಿ ಆ ಹೆಣ್ಣು ಮಗಳು 'ನಿನ್ನ ಫಲ ನನಗೆ ಕೊಡು–ನನ್ನ ಫಲ ನೀನ್ ತಗೋ' ಎಂದು ಕೇಳುತ್ತಾರೆ. ತದನಂತರ ಗೊತ್ತಾದ ದಿನದಂದು ಕೊನೆಯ ಒಸಗೆ ಅಥವಾ ದೊಡ್ಡ ಒಸಗೆ ಹಾಕುತ್ತಾರೆ. ನಂತರವೂ ಕೆಲ ಆಪ್ತ ನೆಂಟರಿಷ್ಟರು ಹುಡುಗಿಗೆ ಒಸಗೆಯನ್ನು ತರುವ ಕಾರ್ಯಕ್ರಮ ನಡೆಯುತ್ತಿರುತ್ತದೆ.

ಈ ಎಲ್ಲಾ ರೀತಿಯ ಆಚರಣೆಗಳನ್ನು ಮಾಡುವುದರಿಂದ ತಮ್ಮ ಮಗಳು ಮದುವೆಗೆ ಸಿದ್ಧಳಾಗಿದ್ದಾಳೆಂದು ಸಾಂಪ್ರದಾಯಿಕವಾದಂತಹ ಚೌಕಟ್ಟಿನಲ್ಲಿ ತಿಳಿಸುವುದಾಗಿದೆ. ಸಾದರಲ್ಲಿ ಹಿಂದೆ ಹೆಣ್ಣು ಮಕ್ಕಳು ಮೈನೆರೆಯೋ ಮುನ್ನವೇ ವಿವಾಹ ಮಾಡಲಾಗುತ್ತಿತ್ತು. ಆಗ ಆಕೆಯನ್ನು ಒಂದು

ತಿಂಗಳು ಮನೆಯ ಒಳಕೊಠಡಿಗಳಿಗೆ ಪ್ರವೇಶ ಮಾಡಿಸುತ್ತಿರಲಿಲ್ಲ. ಋತುಮತಿಯಾದ ನಂತರ ಮದುವೆಯಾದ ಹುಡುಗಿಯನ್ನು ಮೂರು ತಿಂಗಳು ಗಂಡನೊಂದಿಗೆ ಇರಲು ಬಿಡುತ್ತಿರಲಿಲ್ಲ. ಆಕೆಯ ಆರೋಗ್ಯ ಸುಧಾರಿಸಲೆಂಬುದು ಅವರ ಆಶಯವಾಗಿದ್ದಿತು.

ಇನ್ನು ಸಾದರಲ್ಲಿ ಭರಣಿ ಮಳೆಯಲ್ಲಿ ದೊಡ್ಡವರಾಗಬಾರದು ಎಂಬ ನಂಬಿಕೆ ಇದೆ. ಇವರಲ್ಲಿ 'ಭರಣಿಲಿ ದೊಡ್ಡವರಾದ್ರೆ ಧರಣಿಲಿ ಉಳಿಯಲ್ಲ' ಎಂಬ ಗಾದೆಯು ಪ್ರಚಲಿತದಲ್ಲಿರುವುದನ್ನು ಗಮನಿಸಬಹುದು.

೪.೨: ಮದುವೆ:-

ವಿವಾಹ ಅಥವಾ ಮದುವೆ, ಲಗ್ನವೆಂದರೆ ಲೈಂಗಿಕ ಸಂಬಂಧವನ್ನು ಕ್ರಮಪಡಿಸುವ, ಮಕ್ಕಳಿಗೆ ಸಾಮಾಜಿಕ ಸ್ಥಾನಮಾನ ತರುವ ಮತ್ತು ಎರಡು ಗುಂಪುಗಳ ನಡುವೆ ಉತ್ತಮವಾದ ಸಂಬಂಧವನ್ನು ತರುವ ಒಂದು ಆಚರಣೆ ಎನ್ನಬಹುದು. ಸಾದರಲ್ಲಿ ವಿವಾಹವು ಸರಳ ಸಮಾರಂಭವಾದರೂ ಅದಕ್ಕೆ ವಿಶೇಷವಾದ ಅರ್ಥವಿದೆ. ಸಾದರಲ್ಲಿ ಮದುವೆಗೆ ಸಂಬಂಧಿಸಿದ ಸಂಪ್ರದಾಯದ ಆಚರಣೆಗಳು ವೈಶಿಷ್ಟ್ಯಪೂರ್ಣವಾಗಿವೆ.

ಮದುವೆಯಾದ ವ್ಯಕ್ತಿ ಸಮಾಜದಲ್ಲಿ ಜವಾಬ್ದಾರಿಯುತ ನಾಗರೀಕನಾಗುತ್ತಾನೆ ಎಂಬ ಆಶಯ ನಮ್ಮ ಹಿರಿಯರದ್ದು. ಅಷ್ಟೇ ಅಲ್ಲದೇ ವಿವಾಹವಾಗದ ಹೊರತು ಯಾವುದೇ ವ್ಯಕ್ತಿಗೆ ಸದ್ಗತಿದೊರಕದು ಎಂಬ ನಂಬಿಕೆ ಇವರಲ್ಲಿದೆ. ಅಲ್ಪಸಂಖ್ಯಾತರಾದ ಸಾದರು ಮುಂದುವರೆಯಲು, ಬದುಕಿಗೆ ಭದ್ರತೆಯನ್ನೊದಗಿಸಲು ಸಮಾಜ ರೂಪಿಸಿದ ಆಚರಣೆಯೇ ವಿವಾಹ. ಹಿಂದೆ ಸಾದರಲ್ಲಿ ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿದ್ದು ಇಂದು ಅದು ಪೂರ್ಣಬದಲಾಗಿ ಪ್ರಾಪ್ತವಯಸ್ಕರಾದ ಮೇಲೆ ವಿವಾಹ ಕಾರ್ಯವನ್ನು ಮಾಡಲಾಗುತ್ತದೆ.

ಸಾದರು ಜಾತಿಯಲ್ಲಿ ಏಕಪತ್ನಿತ್ವ ಪದ್ಧತಿ ರೂಢಿಯಲ್ಲಿದೆ. ಆದರೆ ಕೆಲವೊಮ್ಮೆ ಹೆಂಡತಿಯು ಮರಣಹೊಂದಿದರೆ, ಅಥವಾ ಗಂಡನಿಂದ ದೂರವಾದರೆ ಎರಡನೇ ಮದುವೆಯನ್ನು ಮಾಡಿಕೊಳ್ಳುತ್ತಿದ್ದರು.

ಹೆಣ್ಣು ನೋಡುವುದು:-

ಮನೆಯ ಹಿರಿಯರು ತಮ್ಮ ಮನೆ, ಮನೆತನಕ್ಕೆ, ಘನತೆ, ಗೌರವಕ್ಕೆ ಸರಿ ಹೊಂದುವಂತಹ ವರನ ಅನ್ವೇಷಣೆ, ವಧುವಿನ ಅನ್ವೇಷಣೆಯನ್ನು ಆರಂಭಿಸುತ್ತಾರೆ. ಸಾಮಾನ್ಯವಾಗಿ ಗಂಡಿನ ಮನೆಗೆ ಹೆಣ್ಣಿನವರು ಮೊದಲು ಹೋಗುವುದಿಲ್ಲ. ಗಂಡಿನ ಕಡೆಯವರೇ ಹೆಣ್ಣನ್ನು ನೋಡಲು ಹೆಣ್ಣಿರುವ ಮನೆಗೆ ಬರುತ್ತಾರೆ. ಹೆಣ್ಣು ಹುಡುಕುವಾಗ ಹೆಸರು ಬಲ, ಮನೆತನ, ಹುಡುಗಿಯ ಗುಣ, ರೂಪ, ಬೀಗರಾಗುವ ವ್ಯಕ್ತಿಯ ಹಿನ್ನೆಲೆ, ಯೋಗ್ಯತೆ, ಅಂತಸ್ತು, ಘನತೆ ಇವೆಲ್ಲವನ್ನು ಗಮನಿಸುತ್ತಾರೆ. ಬಂಧು-ಬಾಂಧವರು, ನೆಂಟರಿಷ್ಟರು ಮದುವೆಗೆ ಸಿದ್ಧವಿರುವ ವಧು-ವರನನ್ನು ಕುರಿತು

ಮಾಹಿತಿಯನ್ನು ನೀಡುತ್ತಾರೆ. 'ಇಲ್ಲೊಂದು ಹೆಣ್ಣೈತೆ ನೋಡಿ, ಋಣಾನುಬಂಧ ಇದ್ರೆ ಆಗ್ಲಿ' ಎಂದೋ ಅಥವಾ ಇಂತ ಊರ್ನಲ್ಲಿ ಒಂದು ಗಂಡೈತೆ ನೋಡಿ ಎಂದು ಹೇಳಿ ಒಂದಿಷ್ಟು ವಿವರಗಳನ್ನು ನೀಡುತ್ತಾರೆ. ಅಲ್ಪಸಂಖ್ಯಾತರಾದ ಸಾದರಲ್ಲಿ ಹಿಂದೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇದ್ದಿತು, ಆದ ಕಾರಣ ಕನ್ಯೆ ಹುಡುಕುವವರಿಗೆ ತಮಗೆ ಇಷ್ಟವಾಗುವಂತಹ ಹುಡುಗಿಯನ್ನು ಹುಡುಕುವುದು ತುಂಬಾ ಕಷ್ಟದ ಕೆಲಸವಾಗಿದ್ದಿತು.

ಈ ಹಿನ್ನೆಲೆಯಲ್ಲಿ 'ಒಂದು ಹೆಣ್ಣು ಹುಡುಕೋಕೆ ಏಳು ಜೊತೆ ಎಕ್ಕಡ ಸವಿತಿದ್ದೊ' ಎನ್ನುತ್ತಾರೆ ಸಾದರ ಹಿರಿಯರು. ಹಿಂದೆ ತೆರ ಕೊಟ್ಟು ಹೆಣ್ಣು ತರುವ ಪದ್ಧತಿ ಸಾದರಲ್ಲಿದ್ದು; ಅದು ಇಂದು ವರದಕ್ಷಿಣೆಯಾಗಿ ಮಾರ್ಪಟ್ಟಿದೆ. ಸಾದರ ವಿವಾಹಗಳೆಲ್ಲವೂ ಕಟ್ಟೆಮನೆಯಲ್ಲಿ ಗೌಡರ ಸಮ್ಮುಖದಲ್ಲಿ ತೀರ್ಮಾನವಾಗುತ್ತಿದ್ದವು. ಆದರೆ ಇಂದು ಮನೆಯಲ್ಲಿ ಗುರು-ಹಿರಿಯರ, ಬಂಧು-ಬಾಂಧವರ ಸಮ್ಮುಖದಲ್ಲಿ ನಿರ್ಧಾರವಾಗುತ್ತವೆ.

ಸಾದರಲ್ಲಿ ಸೋದರ ಸಂಬಂಧಕ್ಕೆ ವಿಶೇಷ ಪ್ರಾಮುಖ್ಯತೆ ಇದ್ದಿತು. ಇಲ್ಲಿ ಸೋದರತ್ತೆ, ಸೋದರಮಾವ, ಅಕ್ಕನ ಮಗಳು ಮತ್ತು ತಂಗಿಯ ಮಗಳನ್ನು ವಿವಾಹವಾಗುವುದು ಸಾಮಾನ್ಯ ರೂಢಿ. ಈ ಹಿನ್ನೆಲೆಯಲ್ಲಿ 'ಕಟ್ಟೆ ಕಲ್ಲನ್ನು ಕಟ್ಟೆಗೆ ಸೇರಿಸು' ಎಂಬ ನಾಣ್ನುಡಿ ಇವರಲ್ಲಿದೆ. ಈ ರೀತಿಯ ಸೋದರ ಸಂಬಂಧದಿಂದ ಅವಿಭಕ್ತ ಕುಟುಂಬ ಅಥವಾ ಕೂಡು ಕುಟುಂಬ ಒಡೆಯದಂತೆ ಕಾಪಾಡುವುದು ಇವರಿಗೆ ಮಹತ್ವದ ವಿಷಯವಾಗಿದ್ದಿತು.

ಆದರೂ ಸಹ ದೂರದಿಂದಲೇ ಹೆಣ್ಣು ತರಬೇಕು ಎಂಬ ಅಭಿಪ್ರಾಯವೂ ಇವರಲ್ಲಿದೆ. 'ಹತ್ತಿರದಿಂದ ದನ ತರಬೇಕು ದೂರದೂರಿಂದ ಹೆಣ್ಣು ತರಬೇಕು' ಎಂಬ ಗಾದೆಯು ಇದೆ. ವಧುವಿನ ಅನ್ವೇಷಣೆಯು ಮನೆಯ ಹಿರಿಯರ ಜವಾಬ್ದಾರಿಯಾಗಿದ್ದು ಅವರು ಒಪ್ಪಿದರೆ ವರನು ಅದನ್ನು ತಿರಸ್ಕರಿಸುವಂತಿಲ್ಲ. ಶಾಸ್ತ್ರ, ಸಂಪ್ರದಾಯವಾಗಿ ಹೆಣ್ಣನ್ನು ನೋಡುವ ಮೊದಲೇ ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಹೆಣ್ಣಿನ ಚಲನವಲನ, ಆಕೆಯ ನಡೆ-ನುಡಿಯನ್ನು ನೋಡಿ ನಂತರ ಮನೆಯ ಹಿರಿಯರು ವಧುವಿನ ಮನೆಗೆ ಹೋಗಿ ಅವರಿಗೆ ಒಪ್ಪಿಗೆಯಾದರೆ ನಂತರ ಜೋಯಿಸರ ಬಳಿ ಸಾಲವಳಿಯನ್ನು ಕೇಳಿ ತಮಗೆ ಸರಿ ಬಂದರೆ ವಧುವನ್ನು ನೋಡಲು ವರನನ್ನು ಕಳುಹಿಸುತ್ತಾರೆ.

ಎಲ್ಲ ವಿಷಯಗಳಲ್ಲಿಯೂ ತಮಗೆ ಒಪ್ಪಿಗೆಯಾದರೆ, ಮನೆ ನೋಡುವ ಕಾರ್ಯಮುಗಿಸಿ ಮಾತುಕತೆಯನ್ನಾಡಿ ಇಂತಹ ದಿವಸ ನಿಶ್ಚಿತಾರ್ಥಕ್ಕೆ ಬರುತ್ತೇವೆಂದು ತಿಳಿಸುತ್ತಾರೆ. ಆ ದಿನ ವರನ ಕಡೆಯವರನ್ನು ಸ್ವಾಗತಿಸಲು ಹೆಣ್ಣಿನವರು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ.

ನಿಶ್ಚಿತಾರ್ಥ-ವೀಳ್ಯಶಾಸ್ತ್ರ:-

ಹೆಣ್ಣು ಒಪ್ಪಿಗೆಯಾದ ಮೇಲೆ ಒಂದು ಶುಭದಿನ ಗಂಡಿನ ಕಡೆಯವರು ನಿಶ್ಚಿತಾರ್ಥ ಅಥವಾ ವೀಳ್ಯಶಾಸ್ತ್ರಕ್ಕೆ ಹೆಣ್ಣಿನ ಮನೆಗೆ ಬರುತ್ತಾರೆ. ವೀಳ್ಯಶಾಸ್ತ್ರಕ್ಕೆ ಗಂಡಿನ ಕಡೆಯವರು ಹೂವು, ಹಣ್ಣು,

ಅಡಿಕೆ, ವೀಳ್ಯದೆಲೆ, ಅರಿಶಿನ-ಕುಂಕುಮ, ಒಡವೆ ವಸ್ತ್ರ ಮುಂತಾದ ವಸ್ತುಗಳನ್ನು ತಂದಿರುತ್ತಾರೆ. ಬಂದ ಬೀಗರನ್ನು ಹೆಣ್ಣಿನವರು ಕೈ-ಕಾಲಿಗೆ ನೀರು ಕೊಟ್ಟು, ಕುಡಿಯಲು ತಂಪಾದ ಪಾನಕವನ್ನು ಕೊಟ್ಟು ಸತ್ಕರಿಸುತ್ತಾರೆ. ನಂತರ ಗಂಡು-ಹೆಣ್ಣನ್ನು ಹಸೆಮಣೆಯಮೇಲೆ ಕುಳ್ಳರಿಸುತ್ತಾರೆ. ಹಿರಿಯ ಮುತ್ತೈದೆಯರು ಸೋಬಾನೆ ಪದವನ್ನು ಹಾಡುತ್ತಾರೆ. ವಧು-ವರರ ತಂದೆ-ತಾಯಿಗಳು ತಾಂಬೂಲವಿರುವ ವೀಳ್ಯದ ತಟ್ಟೆಗಳನ್ನು ಬದಲಾಯಿಸಿಕೊಳ್ಳುತ್ತಾರೆ. ವೀಳ್ಯದೆಲೆಯ ಪ್ರಮಾಣವಾಗಿ ನಮ್ಮ ಹೆಣ್ಣನ್ನು ನಿಮಗೆ ಕೊಡುತ್ತೇವೆಂದು ಹೆಣ್ಣಿನವರು; ನಿಮ್ಮ ಹೆಣ್ಣೇ ನಮ್ಮ ಮನೆಗೆ ಸೊಸೆಯಾಗಿ ಸ್ವೀಕರಿಸುತ್ತೇವೆಂದು ಗಂಡಿನವರು ಪರಸ್ಪರ ಪ್ರಮಾಣ ಮಾಡುತ್ತಾರೆ. ಭಾವೀ ವಧುವರರನ್ನು ಹಸೆಮಣೆಯ ಮೇಲೆ ಕೂರಿಸಿ ಕುಲಸ್ಥರ ಸಭೆಯಲ್ಲಿ (ಹಿಂದೆ) ಹನ್ನೆರಡರಿಂದ ಇಪ್ಪತ್ತು ರೂಪಾಯಿಗಳ 'ತೆರ'ವನ್ನು ಪಾವತಿಸುತ್ತಾರೆ. ವಧುವಿಗೆ ಒಂದು ಹೊಸ ಸೀರೆ ಮತ್ತು ಒಂದು ಒಡವೆಯನ್ನು ಕೊಡುತ್ತಾರೆ. ವಧುವು ಅವುಗಳನ್ನು ಧರಿಸಿ ಬರುತ್ತಾಳೆ.

ಮುತ್ತೈದೆಯರು ವಧುವರರ ಕೈ-ಕಾಲುಗಳಿಗೆ ಅರಿಶಿನ ಹಚ್ಚುತ್ತಾರೆ. ಜೊತೆಗೆ ಬಂದಿರುವ ಎಲ್ಲ ಮುತ್ತೈದೆಯರಿಗೆ ಅರಿಶಿನ, ಕುಂಕುಮ, ಹೂವನ್ನು ಕೊಟ್ಟು ಸಿಹಿಯನ್ನು (ಕಡಲೆ-ಸಕ್ಕರೆ)ಯನ್ನು ಹಂಚುತ್ತಾರೆ.

ನಂತರ ಎಲ್ಲರೂ ಹಬ್ಬದ ಊಟವನ್ನು ಸವಿಯುತ್ತಾರೆ. ಮದುವೆಗೆ ಪ್ರಶಸ್ತ ದಿನವನ್ನು ಕುರಿತು ಚರ್ಚಿಸುತ್ತಾರೆ. ತದನಂತರ ನೆಂಟರಿಷ್ಟರು ತಮ್ಮ ಸ್ವಸ್ಥಳಕ್ಕೆ ಹಿಂದಿರುಗುತ್ತಾರೆ.

ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ನಿಶ್ಚಿತಾರ್ಥವೆಂದರೆ ಕೇವಲ ರಿಂಗ್ ಎಕ್ಸ್‌ಚೇಂಜ್ ಅಷ್ಟೇ ಎಂದು ಭಾವಿಸಲಾಗುತ್ತಿದೆ. ಬದಲಾವಣೆ ಎಂಬುದು ಯಾವುದೇ ಒಂದು ಜಾತಿಗೆ ಸೀಮಿತವಾದುದಲ್ಲ. ಅದು ಎಲ್ಲವನ್ನು ತನ್ನಲ್ಲಿ ಒಳಗೊಳ್ಳುವಂತಹದ್ದು. ಹಿಂದಿನ ಆಚರಣೆಗಳು ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿರುತ್ತಿದ್ದವು. ಆದರೆ ಇಂದಿನ ಎಲ್ಲ ಆಚರಣೆಗಳು ಆರ್ಥಿಕ (ಹಣದ) ಶ್ರೀಮಂತಿಕೆಯ ಪ್ರಭಾವಕ್ಕೆ ಒಳಗಾಗುತ್ತಿವೆ. ಆದರೂ ಸಹ ಸಾದರಲ್ಲಿನ ಆಚರಣೆಗಳು ಇಂದಿಗೂ ತಮ್ಮ ತನವನ್ನು ಕಾಯ್ದುಕೊಂಡಿವೆ.

ಲಗ್ನ ಕಟ್ಟಿಸುವುದು:-

ನಿಶ್ಚಿತಾರ್ಥವಾದ ನಂತರ ವಧು-ವರರ ಕಡೆಯ ಹಿರಿಯರು ಬ್ರಾಹ್ಮಣ ಜೋಯಿಸರ ಬಳಿಗೆ ತಾಂಬೂಲ ಸಮೇತರಾಗಿ ಬಂದು, ದಕ್ಷಿಣೆ-ತಾಂಬೂಲವನ್ನು ಜೋಯಿಸರಿಗೆ ನೀಡಿ ಮದುವೆಗೆ ಪ್ರಶಸ್ತ ದಿನವನ್ನು ನೋಡಿ ಹೇಳುವಂತೆ ಕೇಳುತ್ತಾರೆ. ಜೋಯಿಸರು ವಧು-ವರರ ಹೆಸರು ಬಲಕ್ಕೆ ಹೊಂದುವ ಎರಡು-ಮೂರು ದಿನಗಳನ್ನು ತಿಳಿಸುತ್ತಾರೆ. ಹಿರಿಯರು ಎಲ್ಲರಿಗೂ, ಒಪ್ಪಿಗೆಯಾಗುವ ಒಂದು ದಿನವನ್ನು ನಿಶ್ಚಯಿಸಿ ಜೋಯಿಸರಿಗೆ ತಿಳಿಸುತ್ತಾರೆ. ಜೋಯಿಸರು ಬೀಗರಿರ್ವರ ಒಪ್ಪಿಗೆಯಂತೆ ಲಗ್ನಪತ್ರಿಕೆಯನ್ನು ಬರೆದು ಅದಕ್ಕೆ ಅರಿಶಿನ-ಕುಂಕುಮವನ್ನಿಟ್ಟು ಒಳ್ಳೆಯದಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತಾ ಹಿರಿಯರಿಗೆ ಕೊಡುತ್ತಾರೆ.

ಲಗ್ನ ಕಟ್ಟಿಸಿದ ನಂತರ ಹಿಂದೆ ಸಾದರಲ್ಲಿ ವರನ ಕಡೆಯವರು ವಧುವಿನ ತಂದೆ-ತಾಯಿಗಳಿಗೆ ಮದುವೆಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ಆ ವಸ್ತುಗಳ ಪ್ರಮಾಣವೆಂದರೆ ೩೦೦ ಸೇರು ಅಕ್ಕಿ, ೨೫ ಸೇರು ಬೇಳೆ, ೩ ಮಣ ಬೆಲ್ಲ, ೨೦ ಸೇರು ತುಪ್ಪ, ಒಂದು ಮಣ ಅಡಿಕೆ ಮತ್ತು ೫ ಕಟ್ಟು (೫೦೦) ವೀಳ್ಯದೆಲೆಯನ್ನು ಕೊಡುತ್ತಿದ್ದರು. ಆದರಿಂದು ಈ ಪದ್ಧತಿ ಚಾಲ್ತಿಯಲ್ಲಿಲ್ಲ.

ಮದುವೆ ಸಿದ್ಧತೆಗಳು:-

ಸಾದರಲ್ಲಿ ಹಿಂದೆ ಮದುವೆ ಎಂಟು ದಿನಗಳ ಕಾಲ ಸಾಂಘವಾಗಿ ನಡೆಯುತ್ತಿದ್ದಿತು ಎಂದು ಹಿರಿಯರು ಈಗಲೂ ನೆನಪಿಸಿಕೊಳ್ಳುತ್ತಾರೆ. ಆದರೆ ಈಗ ಮದುವೆ ಎರಡು ದಿನಕ್ಕಿಳಿದಿದೆ. ದಿನಗಳಷ್ಟೇ ಕಡಿಮೆಯಾಗಿಲ್ಲ. ಎಷ್ಟೋ ಶಾಸ್ತ್ರಗಳು ಕಣ್ಮರೆಯಾಗುತ್ತಿವೆ. ಮದುವೆ ದಿನ ತೀರ್ಮಾನವಾದ ನಂತರ ವಧು-ವರರಿಬ್ಬರೂ ಒಬ್ಬಂಟಿಯಾಗಿ ಎಲ್ಲೂ ಹೆಚ್ಚು ಓಡಾಡುವಂತಿಲ್ಲ. ಮದುವೆ ಸಮೀಪಿಸುತ್ತಿದ್ದಂತೆ ಪೂರ್ವಸಿದ್ಧತೆಗಳು ಎರಡೂ ಕಡೆ ಸಂಭ್ರಮ-ಸಡಗರದಿಂದ ಪ್ರಾರಂಭವಾಗುತ್ತದೆ.

ಸೌದೆ ಒಡೆಯುವುದು:-

ಮದುವೆ ನಿಶ್ಚಿತವಾದ ದಿನಾಂಕಕ್ಕಿಂತ ೧೫ ದಿನ ಮುಂಚಿತವಾಗಿ ಈ ಸೌದೆ ಒಡೆಯುವ ಕಾರ್ಯ ನಡೆಯುತ್ತದೆ. ಹೆಣ್ಣಿನ ಮನೆಯ ಹಿರಿಯರೋರ್ವರು ಊರಿನ ಚಾಕರಿಯನ್ನು ಮಾಡುವವರನ್ನು, ಆ ಕಾಲಾವಧಿಯಲ್ಲಿರುವಂತಹ ಹಿರಿಯ ವ್ಯಕ್ತಿಗೆ ತಿಳಿಸುತ್ತಾರೆ. ಆಗ ಚಾಕರಿ ಮನೆಯ ಯಜಮಾನರು ತಮ್ಮ ಜಾತಿಯ ಪ್ರತಿಯೊಂದು ಮನೆಯಿಂದ ಒಬ್ಬೊಬ್ಬರೆಂಬಂತೆ ೨೦/೩೦ ಜನರನ್ನು ಕರೆತರುತ್ತಾರೆ. ಅವರೆಲ್ಲರೂ ಸಂಭ್ರಮದಿಂದ ಒಟ್ಟಿಗೆ ಸೇರಿ ಕೆಲವೇ ಗಂಟೆಗಳಲ್ಲಿ ಹಲವು ಮರಗಳನ್ನು ಕಡಿದು ಸೌದೆ ಹೊಡೆದು ಮದುವೆ ಮನೆಯ ಸಮೀಪ ಸೌದೆಯನ್ನೆಲ್ಲಾ ತಂದೊಟ್ಟುತ್ತಾರೆ.

ಮದುವೆ ಮನೆಯಲ್ಲಿ ಸೌದೆ ಒಡೆಯುವವರಿಗಾಗಿ ಸಿಹಿ ಅಡುಗೆಯನ್ನು ಮಾಡಿರುತ್ತಾರೆ. ಆಗ ಚಾಕರಿಯವರೆಲ್ಲ ಒಟ್ಟಿಗೆ ಊಟ ಮಾಡಿ ತೆರಳುತ್ತಾರೆ. ಅವರ ಶ್ರಮಕ್ಕೆ ಪ್ರತಿಯಾಗಿ ಮದುವೆಯಲ್ಲಿ ಅವರೆಲ್ಲರಿಗೂ ಹೊಸಬಟ್ಟೆಯನ್ನು ಕೊಡಿಸುವ ವಾಡಿಕೆಯು ಸಾದರಲ್ಲಿದೆ.

ಹೀಗೆ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಶುಭಕಾರ್ಯದಲ್ಲಿ ಅವರು-ಇವರೆನ್ನದೇ ಎಲ್ಲರೂ ಶ್ರಮಿಸುತ್ತಾರೆ. ಆ ಮುಖೇನ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ತಳೆಯುತ್ತಾರೆ.

ಅಕ್ಕಿ-ರಾಗಿ ಮಾಡುವುದು:-

ಮದುವೆಗೆ ಬೇಕಾದಂತಹ ಅಕ್ಕಿ-ರಾಗಿ ಮಾಡಲು ಹಳ್ಳಿಯಲ್ಲಿರುವ ಕುಲಬಾಂಧವರಿಗೆಲ್ಲ 'ಅಕ್ಕಿ ಮಾಡಕ್ ಬನ್ನಿ' ಎಂದು ಮನೆಮನೆಗೆ ಹೋಗಿ ಹೇಳಿಬರಬೇಕು. ಅಕ್ಕಿ ಮಾಡುವ ಸಂದರ್ಭದಲ್ಲಿ ಬಾಂಧವರಿಗೆ ಹೇಳಿ ಕಳುಹಿಸದಿದ್ದರೆ, ಮದುವೆ ಊಟಕ್ಕೆ ಕರೆದಾಗ 'ನಾವೇನು ಗತಿಗೆಟ್ಟಿದ್ದೀವ' ಎಂದು

ಊಟ ಮಾಡದೆ ಹಾಗೆಯೇ ಹೊರಟು ಬಿಡುತ್ತಾರೆ. ಆದ್ದರಿಂದ ಈ ಕೆಲಸಕ್ಕೆ ಕರೆಯಲು ಹೋಗುವವರನ್ನು ಮನೆಹಿರಿಯರು 'ಎಲ್ಲರಿಗೂ ಸರಿಯಾಗಿ ಹೇಳ್ಬನ್ನಿ' ಎಂದು ಎಚ್ಚರಿಸಿ ಕಳುಹಿಸುತ್ತಾರೆ. ಹೇಳಿ ಬಂದ ಮೇಲೆಯೂ ಮತ್ತೆ ಯಾರನ್ನಾದ್ರೂ ಮರೆತಿದ್ರೆ ನೋಡು ಎನ್ನುತ್ತಾರೆ. ಮತ್ತೆ ಕರೆಯಲು ಕಳಿಸುತ್ತಾರೆ. ಹೇಳಿ ಕಳಿಸಿದರೆ ಸಾಕು. ಹೋಗಿ ಭಾಗಿಯಾಗಬೇಕು ಎಂಬ ಕಾತುರ-ಆತುರ ಕರೆಸಿಕೊಂಡವರಿಗೆ. ಇದು ಅವರಲ್ಲಿನ ಅನ್ಯೋನ್ಯತೆಯ ಮನೋಭಾವವನ್ನು ಸೂಚಿಸುತ್ತದೆ. ಹಿಂದೆ ಆಧುನಿಕ ಯಂತ್ರಗಳ ಸೌಲಭ್ಯವಿಲ್ಲದೆ ಇರುವ ಸಂದರ್ಭದಲ್ಲಿ ಭತ್ತ ಕುಟ್ಟುವ, ರಾಗಿ ಬೀಸುವ ಕೆಲಸಕ್ಕಾಗಿ ಕುಲಬಾಂಧವರು, ಮನೆಗೊಂದು ಹೆಣ್ಣಾಳಿನಂತೆ ಭಾಗವಹಿಸುತ್ತಿದ್ದರು. ಸಂತಸ-ಸಂಭ್ರಮದಿಂದ ಎಲ್ಲ ಕೆಲಸ-ಕಾರ್ಯಗಳನ್ನು ಮಾಡಿ ಮುಗಿಸುತ್ತಿದ್ದರು.

ಅಕ್ಕಿ-ರಾಗಿ ಮಾಡುವ ಸಂದರ್ಭದಲ್ಲಿ ಹೆಣ್ಣು-ಗಂಡು ಅಕ್ಕಿಯನ್ನು ತಿನ್ನಬಾರದೆಂಬ ನಂಬಿಕೆ ಇದೆ. ಒಂದು ವೇಳೆ ತಿಂದರೆ ಮದುವೆಯಲ್ಲಿ ಮಳೆ ಬಂದು ಅಡ್ಡಿ ಮಾಡುವುದೆಂಬ ನಂಬಿಕೆ ಇವರಲ್ಲಿದೆ. ಮದುವೆಯ ದಿನಗಳು ಸಮೀಪವಾದಂತೆ ಹಪ್ಪಳ ಮಾಡುವುದು, ಉಪ್ಪಿನಕಾಯಿ ಮಾಡುವುದು, ಸಂಡಿಗೆ ಇಕ್ಕುವುದು, ಚಕ್ಲಿ, ಖರ್ಜಿಕಾಯಿ ಮಾಡುವುದು ಮಕ್ಕಳು-ಮರಿಗೆಲ್ಲ ಬಟ್ಟೆ-ಬರೆ ತರುವುದು ಹೀಗೆ ಮದುವೆಗೆ ಅಗತ್ಯವಾದ ಎಲ್ಲಾ ವಸ್ತುಗಳನ್ನು ವ್ಯವಸ್ಥಿತವಾಗಿ ತಯಾರಿ ಮಾಡಿಕೊಳ್ಳುತ್ತಾರೆ. ಮದುವೆಗೆ ಇನ್ನು ಒಂದು ವಾರವಿದೆ ಎಂಬಂತೆ ದೂರದ ನೆಂಟರು-ಬಂಧು, ಬಾಂಧವರೆಲ್ಲ ಬಂದು ಸೇರುತ್ತಾರೆ. ಸಾದರಲ್ಲಿ ಬಹುತೇಕ ಮದುವೆಗಳು ಹೆಣ್ಣಿನ ಮನೆಯಲ್ಲೇ ನಡೆಯುತ್ತದೆ. ಕುಲಬಾಂಧವರೆಲ್ಲರೂ ತಪ್ಪದೆ ಸಂಭ್ರಮದಿಂದ ಮದುವೆ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ.

ಚಪ್ಪರಶಾಸ್ತ್ರ:-

ಮದುವೆಗೆ ಮೂರು ದಿನ ಮುಂಚಿತವಾಗಿ ಕುಲಬಾಂಧವರೆಲ್ಲರೂ ಸೇರಿ ಚಪ್ಪರದ ಶಾಸ್ತ್ರ ಮಾಡುತ್ತಾರೆ. ಚಪ್ಪರಕ್ಕೆಂದು ಮೂಡುಗಡೆ ದಿಕ್ಕಿಗೆ ಒಂದು ಕಂಬನೆಟ್ಟು ವಧುವಿನ ಕೈಯಿಂದ ಆ ಕಂಬಕ್ಕೆ ಪೂಜೆಮಾಡಿಸಿ ಅರಿಶಿನದ ದಾರವನ್ನು ಕಟ್ಟಿಸುತ್ತಾರೆ. ನಂತರ ವಿಶಾಲವಾದ ಚಪ್ಪರವನ್ನು ಹಾಕಲಾಗುತ್ತದೆ. ಹಸಿತೆಂಗಿನ ಗರಿಯನ್ನು ಚಪ್ಪರಕ್ಕೆ ಹೊದಿಸುತ್ತಾರೆ. ನಂತರ ಧಾರೆ ಚಪ್ಪರವೆಂದು ಮತ್ತೊಂದು ಚಿಕ್ಕ ಚಪ್ಪರವನ್ನು ಕೆಲವರು ಮನೆ ಬಾಗಿಲಿಗೆ ನೇರವಾಗಿ ಹಾಕುತ್ತಾರೆ. ಚಪ್ಪರದ ನಾಲ್ಕು ಮೂಲಗೆ ತೆಂಗಿನ ಗರಿಯನ್ನು ಜಡೆಯಂತೆ ಹೆಣೆಯುತ್ತಾರೆ. ಚಪ್ಪರಕ್ಕೆ ಅಲಂಕಾರಕ್ಕಾಗಿ ಎಳನೀರಿನಗೊನೆ-ಮಾವಿನ ಪತ್ರೆ, ಗೊನೆಯಿರುವ ಬಾಳೆಗಿಡ, ಖತ್ತಿಹೂವಿನ ಸೊಪ್ಪನ್ನು ಕಟ್ಟುತ್ತಾರೆ. ಚಪ್ಪರದ ಶೃಂಗಾರವೆಲ್ಲವೂ ಮುಗಿದ ನಂತರ ಎಲ್ಲವನ್ನು ಶುಚಿಗೊಳಿಸಿ ಮದುವೆಗೆಂದು ತಂದಂತಹ ಒಡವೆ-ವಸ್ತ್ರವನ್ನು ದೇವರ ಮುಂದಿಟ್ಟು ತಮ್ಮ ಮನೆ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಮದುವೆ ಮನೆಯಲ್ಲಿ ತಮ್ಮೆಲ್ಲ ಕುಲಬಾಂಧವರಿಗಾಗಿ ಸಿಹಿ ಅಡುಗೆಯನ್ನು ಮಾಡಲಾಗಿರುತ್ತದೆ. ನೆರೆದಿರುವ ಎಲ್ಲರೂ ಊಟಮಾಡಿ ಮುಂದಿನ ಮದುವೆ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ.

ಸಾದರಲ್ಲಿ ಈ ಶಾಸ್ತ್ರವನ್ನು ಚಪ್ಪರ ಶಾಸ್ತ್ರವೆಂದು ಕೆಲವರು ಕರೆದರೆ ಮತ್ತೆ ಕೆಲವರು 'ದೇವರೂಟ' ಎಂದು ಕರೆಯುವ ವಾಡಿಕೆ ಇದೆ.

ಕಳಸ ಹೂಡುವುದು:-

ಮದುವೆ ಕಾರ್ಯದಲ್ಲಿ ಕಳಸ ಹೂಡುವುದು ಬಹು ಪ್ರಮುಖ ಕಾರ್ಯವಾಗಿದೆ. ಅನುಭವಿ ಮುತ್ತೈದೆ ಸ್ತ್ರೀಯು ಕಳಸ ಹೂಡುತ್ತಾಳೆ. ಅಗಲವಾದ ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹಾಕಿ ಅದರ ಮೇಲೆ ನೀರು ಮತ್ತು ಒಂದು ನಾಣ್ಯವಿರುವ ಕಳಸದ ಚೊಂಬನ್ನಿಟ್ಟು ಕಳಸದ ಚೊಂಬಿನಲ್ಲಿ ಅಡಿಕೆ ಹೊಂಬಾಳೆಯನ್ನಿಡಲಾಗುತ್ತದೆ. ಗಂಡಿನ ಕಡೆಯವರು (ದಿಬ್ಬಣದವರು) ಬರುವವರೆಗೆ ಕಳಸವನ್ನು ಹೆಣ್ಣಿನ ಕಡೆಯವರು ಹಿಡಿಯುತ್ತಾರೆ. ನಂತರ ವರನ ಸೋದರಿ ಕಳಸವನ್ನು ಹಿಡಿಯುತ್ತಾಳೆ. ಕಳಸದ ತಟ್ಟೆಯಲ್ಲಿ ಅರಿಶಿನ-ಕುಂಕುಮ, ಒಂದು ಚಿಕ್ಕ ಕನ್ನಡಿ ಇರುತ್ತವೆ. ವಿವಾಹದ ಪ್ರತಿ ಆಚರಣೆಯಲ್ಲಿಯು ವಾದ್ಯ ಮತ್ತು ಕಳಸ ಪ್ರಮುಖಪಾತ್ರವಹಿಸುತ್ತವೆ. ಕಳಸವನ್ನು ಹೂಡುವಾಗಲೇ ಭದ್ರವಾಗಿ ಹೂಡಲಾಗಿರುತ್ತದೆ. ಕಾರಣ ಕಳಸ ಯಾವುದೇ ಕಾರಣಕ್ಕೂ ವಾಲುವುದಾಗಲೀ, ಬೀಳುವುದಾಗಲಿ ಆಗಕೂಡದು. ಹಾಗಾದರೆ ಅದು ಮುಂದಿನ ಕೇಡಿನ ಮುನ್ಸೂಚನೆ ಎಂಬ ನಂಬಿಕೆ ಇವರಲ್ಲಿದೆ. ಒಟ್ಟಾರೆ ಕಳಸ ಶುಭದ ಸಂಕೇತವಾಗಿದ್ದು ಮದುವೆ ಕಾರ್ಯದಲ್ಲಿ ಪ್ರಮುಖಪಾತ್ರ ವಹಿಸುತ್ತದೆ.

ನಾಗರಶಾಸ್ತ್ರ:-

ಮದುವೆಯ ಹಿಂದಿನ ದಿನ ಮಾಡುವ ಆಚರಣೆ ಇದಾಗಿದೆ, ಮದುವೆಯ ಮುಂಚಿನ ದಿನ ಬೆಳಗ್ಗೆ ವಧು ಬೇಗನೆ ಎದ್ದು ಎಣ್ಣೆಸ್ನಾನ ಮಾಡಿಕೊಂಡು ಮನೆದೇವರನ್ನು ಪೂಜಿಸಿ, ಮದುವೆಗೆಂದು ಹೂಡಿರುವ ಕಳಸಕ್ಕೆ ವಂದಿಸಿ, ಹಿರಿಯರಿಗೆ ನಮಸ್ಕರಿಸಿ ನಂತರ ನಾಗರು ಮಾಡಲು ಹೊರಡುತ್ತಾಳೆ. ಸಕಲವಾದ್ಯಗಳೊಂದಿಗೆ, ಬಂಧು-ಬಳಗದೊಂದಿಗೆ ತನ್ನ ಸೋದರಿಯರೊಂದಿಗೆ ಪೂಜಾ ಸಾಮಾಗ್ರಿಗಳಾದ ಹೂವು, ಬಾಳೆಹಣ್ಣು, ತೆಂಗಿನಕಾಯಿ, ನೆನೆಸಿದ ಅಕ್ಕಿ, ಕಡ್ಲೆ ಬೇಳೆ, ಸೌತೆಕಾಯಿ, ಎಳ್ಳುಂಡೆ, ಅಕ್ಕಿತಂಬಿಟ್ಟು, ಬಳೆಬಿಚ್ಚೋಲೆ, ಸಪ್ಪನೂಲು, ಅರಿಶಿನ-ಕುಂಕುಮ ಇತ್ಯಾದಿಗಳೊಂದಿಗೆ ತಾವು ಪ್ರತಿವರ್ಷ ಗೌರಿಹಬ್ಬದಲ್ಲಿ ವಂಶಪಾರಂಪರ್ಯವಾಗಿ ನಾಗರು ಮಾಡುವ ಸ್ಥಳಕ್ಕೆ ಬಂದು ಅಲ್ಲಿ ನಾಗರುಕಲ್ಲಿಗೆ ಪೂಜೆಸಲ್ಲಿಸಿ ಹಾಲು-ತುಪ್ಪವನ್ನಿಟ್ಟು, ನಾಗರಿಗೆ ಒಂಭತ್ತು ಸುತ್ತು ಅರಿಶಿನದ ದಾರವನ್ನು ಸುತ್ತಿ ಆ ದಾರಕ್ಕೆ ತವರಿನವರು ಕೊಟ್ಟ ಹುಟ್ಟು ತಾಳಿಯನ್ನಿಟ್ಟು ಪೂಜಿಸುತ್ತಾಳೆ.

ಹೀಗೆ ಪೂಜಿಸಿದ ಹುಟ್ಟು ತಾಳಿ ಅಥವಾ ನಾಗರತಾಳಿಯನ್ನು ತವರಿನ ನೆನಪಾಗಿ ವಧುವಿನ ಸೋದರಿಯು ವಧುವಿನ ಕೊರಳಿಗೆ ಕಟ್ಟುತ್ತಾಳೆ. ನಂತರ ವಧುವು ನಾಗರಿಗೆ ಭಕ್ತಿಪೂರ್ವಕವಾಗಿ ವಂದಿಸುತ್ತಾ 'ಅಪ್ಪನ ಮನೆಯ ಶಾಸ್ತ್ರ ಇಂದಿಗೆ ಕೊನೆ ಇನ್ನು ಮುಂದೆ ಗಂಡನ ಮನೆ ನಾಗರಶಾಸ್ತ್ರ ಮಾಡ್ತೀವಿ ಕೈಬಿಡದೆ, ಕಷ್ಟಕೊಡದೆ ಕಾಪಾಡು' ಎಂದು ಭಿನ್ನೈಸಿಕೊಳ್ಳುತ್ತಾಳೆ.

ಸಾದರಲ್ಲಿ ನಾಗರು ಪೂಜೆಯನ್ನು ಭಯ-ಭಕ್ತಿಯಿಂದ, ಶ್ರದ್ಧೆಯಿಂದ ಆಚರಿಸುತ್ತಾರೆ.

ಅರುಣೆಶಾಸ್ತ್ರ:-

ನಾಗರು ಪೂಜೆ ನಂತರ ಅರುಣೆಶಾಸ್ತ್ರವನ್ನು ಮಾಡುತ್ತಾರೆ. ಅರುಣೆ ಎಂದರೆ ಹೊಸ ಮಡಕೆ ಎಂದರ್ಥ. ಶಾಸ್ತ್ರದ ದಿನ ಸಕಲವಾದ್ಯಗಳೊಂದಿಗೆ ಒಸಗೆ ಸಾಮಾಗ್ರಿಗಳು ಮತ್ತು ಅಡುಗೆ ಸಾಮಾಗ್ರಿಗಳೊಂದಿಗೆ ಒಂಭತ್ತು ಜನ ಮುತ್ತೈದೆಯರು ಆ ಊರಿನ ಕುಂಬಾರರ ಮನೆಗೆ ತೆರಳಿ ಅವರಿಗೆ ಒಸಗೆಯ ಮತ್ತು ಅಡುಗೆಯ ಸಾಮಾಗ್ರಿಗಳನ್ನು ಕೊಟ್ಟು ಅವರಿಂದ ಎರಡು ಹರವಿ, ಮೂರು ಊಜಿ, ಊಜಿಗೆ ಮುಚ್ಚಳ ಮತ್ತು ಮೂರು ಮಣ್ಣಿನ ದೀಪಗಳನ್ನು ತರುತ್ತಾರೆ.

ನಂತರ ಹತ್ತಿರವಿರುವ ಬಾವಿ, ಕೆರೆ, ಹೊಳೆ ಯಾವುದಾದರೊಂದರ ಬಳಿ ತೆರಳಿ ಅಲ್ಲಿ ಗಂಗೆ ಪೂಜೆಯನ್ನು ಮಾಡಿ ಅಲ್ಲಿ ನೆರೆದಿರುವ ಎಲ್ಲರಿಗೂ ಅಕ್ಕಿಯ ತಂಬಿಟ್ಟು ತಿನ್ನಲು ಕೊಟ್ಟು ನಂತರ ಐದು ಜನ ಮುತ್ತೈದೆಯರಿಗೆ ಮಡಿಲು ತುಂಬುವ ಶಾಸ್ತ್ರವನ್ನು ಮಾಡಿ ಆ ಐದು ಜನರು ಕೊಡದಲ್ಲಿ ಗಂಗೆಯನ್ನು ತುಂಬಿಟ್ಟು ಪೂಜಿಸಿರುವ ನೀರನ್ನು ತಲೆಯ ಮೇಲೆ ಹೊತ್ತು ತರುತ್ತಾರೆ. ದಾರಿಯುದ್ದಕ್ಕೂ ವಾದ್ಯಗಳ ನಾದದೊಂದಿಗೆ, ಈಡುಗಾಯಿ ಹೊಡೆಯುವ ಕಾರ್ಯದೊಂದಿಗೆ ಶಾಸ್ತ್ರೋಕ್ತವಾಗಿ ಶಾಸ್ತ್ರದ ನೀರನ್ನು ತರುತ್ತಾರೆ. ಹೀಗೆ ಶಾಸ್ತ್ರದ ನೀರನ್ನು ಶಾಸ್ತ್ರದ ರಾತ್ರಿಯ ಅಡುಗೆ ಮಾಡಲು ಬಳಸಿಕೊಳ್ಳುತ್ತಾರೆ.

ಕುಂದ್ಲಿಕೆ ಕುಟ್ಟುವ ಶಾಸ್ತ್ರ:-

ಈ ಶಾಸ್ತ್ರದಲ್ಲಿ ಮೂರು ಕಡಿ, ಐದು ಒನಕೆಯನ್ನಿಟ್ಟು ಅವನ್ನು ಪೂಜಿಸಿ, ಅರಿಶಿನ-ಕುಂಕುಮವನ್ನಿಟ್ಟು, ಹೂವನ್ನಿಟ್ಟು ಒಂಭತ್ತು ಸುತ್ತು ಅರಿಶಿನದ ದಾರವನ್ನು ಅವಕ್ಕೆ ಸುತ್ತುತ್ತಾರೆ. ನಂತರ ಕುಂದ್ಲಿಕೆ ಕುಟ್ಟಲು ಐದು ಜನ ಮುತ್ತೈದೆಯರು ಬಂದು ನಿಲ್ಲುತ್ತಾರೆ. ಅವರಿಗೆ ಅಕ್ಕಿ ತಂಬಿಟ್ಟು, ಎಲೆ-ಅಡಿಕೆ, ಬಾಳೆಹಣ್ಣು ಎಲ್ಲವನ್ನು ಮಡಿಲು ತುಂಬುತ್ತಾರೆ. ಒಂಭತ್ತು ಸೇರು ನೆಲ್ಲನ್ನು ಕಡಿಯ ಒಳಗೆ ಹಾಕಿ ಒಂದಕ್ಕಿ-ಒಂದುನೆಲ್ಲು ಇರುವಂತೆ ಕುಟ್ಟುತ್ತಾರೆ. ಕುಟ್ಟಿದ ನಂತರ ಮರಕ್ಕೆ ಹಾಕಿ ಪಟ-ಪಟ ಎಂಬ ಹಾಗೆ ಕೇರದೆ, ಪರಕೆಯಲ್ಲಿ ಗುಡಿಸದೆ ಮಡಿ ಬಟ್ಟೆಯಲ್ಲಿ ಒತ್ತಿ ತೆಗೆದು ಇಡುತ್ತಾರೆ. ಮುಂದೆ ಗಂಡಿಗೆ ಕಾಲು ತೊಳೆಯುವ ಶಾಸ್ತ್ರದಲ್ಲಿ ಇವನ್ನು ಬೀರುತ್ತಾರೆ. ಕುಂದ್ಲಿಕೆಗೆ ಸುತ್ತಿದಂತಹ ಒಂಭತ್ತು ಸುತ್ತು ಅರಿಶಿನದ ದಾರವನ್ನು ಜಾಗ್ರತೆಯಿಂದ ತೆಗೆದಿಡುತ್ತಾರೆ. ನಂತರ ಮಾಂಗಲ್ಯವನ್ನು ಅದೇ ದಾರದಲ್ಲಿಯೇ ಶಾಸ್ತ್ರೋಕ್ತವಾಗಿ ಪೋಣಿಸುತ್ತಾರೆ. ಹೀಗೆ ಸಾದರಲ್ಲಿ ಕುಂದ್ಲಿಕೆ ಶಾಸ್ತ್ರವನ್ನು ಬಹು ವಿಶೇಷವಾಗಿ ಆಚರಿಸುತ್ತಾರೆ.

ದಾರೆ ಕಂಬ ತರುವುದು:-

ಸಾದರು ತಮ್ಮ ಮನೆಯ ಮುಂದಿನ ಅಂಗಳದಲ್ಲಿಯೇ ಮದುವೆ ಕಾರ್ಯವನ್ನು ಮಾಡುತ್ತಿದ್ದರು. ಕೆಲ ವೃಕ್ಷಗಳನ್ನು ದೇವರ ಪ್ರತಿರೂಪವೆಂದು ನಂಬಿ ತಾವು ಮಾಡುವ ಶುಭಕಾರ್ಯಗಳಲ್ಲಿ ಆ ಮರಗಳ ಕೊಂಬೆಯನ್ನು ತಪ್ಪದೆ ಬಳಸುತ್ತಿದ್ದರು. ಇವರು ದಾರೆ ಕಂಬವೆಂದು ಅತ್ತಿಯ ಕೊನೆ, ತೆಂಗಿನ ಗರಿಯ ಸುಳಿ, ಅತ್ತಿ ಮಣೆಯನ್ನು ತರುತ್ತಿದ್ದರು. ಕಾರಣ ಅತ್ತಿಮರ

ದೀರ್ಘಾಯಸ್ಸುವುಳ್ಳದ್ದು, ಆದ ಕಾರಣ ವಧು-ವರರು ಅತ್ತಿ ಮರದಂತೆ ಧೀರ್ಘಾಯುಶಿಗಳಾಗಿ ಬಾಳಲೆಂದು ಅತ್ತಿಮರದ ಕೊನೆಯನ್ನು ಇವರು ಧಾರೆ ಕಂಬವಾಗಿ ಬಳಸುತ್ತಾರೆ. ಧಾರೆ ಕಂಬವಾಗಿ ತರುವ ಮೊದಲು ಊರಿನ ದೇವಸ್ಥಾನದ ಹತ್ತಿರ ಇಟ್ಟು ಪೂಜೆ ಮಾಡಿಕೊಂಡು ಮಂಗಳ ವಾದ್ಯಗಳೊಂದಿಗೆ; ಕಳಸದ ಸಹಯೋಗದೊಂದಿಗೆ ರಾಜ ಮರ್ಯಾದೆಯಲ್ಲಿ ತಂದು ಮಣ್ಣಿನ ಗದ್ದುಗೆಯನ್ನು ಮಾಡಿ ಧಾರೆಕಂಬದ ಬುಡಕ್ಕೆ ಒಂದು ನಾಣ್ಯ ಮತ್ತು ಹಾಲನ್ನು ಹಾಕಿ ನಿಲ್ಲಿಸಿ ಅದಕ್ಕೆ ಅಡಕೆ ಹೊಂಬಾಳೆಯನ್ನು ಕಟ್ಟಿ ಪೂಜಿಸಲಾಗುತ್ತದೆ.

ಗಂಡನ್ನು ಕರೆತಂದು ಬಿಡದಿ ಬಿಡುವುದು:-

ವಧುವಿನ ಗ್ರಾಮಕ್ಕೆ ಬಂದ ವರನನ್ನು ಮೊದಲು ದೇವಾಲಯ/ಅಶ್ವತ್ಥಕಟ್ಟೆಯ ಬಳಿ ಬಿಟ್ಟು ಅವರಿಗೆ ಕುಡಿಯಲು ಪಾನಕವನ್ನು ನೀಡಿ ನಂತರ ತಿನ್ನಲು ಚಕ್ಕುಲಿ, ತಂಬಿಟ್ಟು, ಬಾಳೆಹಣ್ಣನ್ನು ಕೊಡುತ್ತಾರೆ. ತದನಂತರ ವರನ ಶೃಂಗಾರಕ್ಕಾಗಿ ಕೈ-ಕಾಲಿಗೆ ನೀರು, ಸೋಪು, ಪೌಡರ್, ಬಾಚಣಿಗೆ, ಕನ್ನಡಿಯನ್ನು ಕೊಟ್ಟು ನಂತರ ಅಗಸರ ಪತ್ತು (ದೀವಿಗೆ), ಕಳಸ, ಫಲಪುಷ್ಪಗಳೊಂದಿಗೆ ಮುತ್ತೈದೆಯರು ವರನನ್ನು ಕರೆತಂದು ಬಾಗಿಲಲ್ಲಿ ಆರತಿ ಎತ್ತಿ ಮನೆದುಂಬಿಸಿಕೊಳ್ಳುತ್ತಾರೆ.

ಬಳೆಶಾಸ್ತ್ರ:-

ಶಾಸ್ತ್ರದ ದಿನದಂದೆ ಬಳೆಗಾರನನ್ನು ಬರಮಾಡಿಕೊಳ್ಳಲಾಗಿರುತ್ತದೆ. ಬಳೆಗಾರನಿಗೆ ಒಂದು ಸೇರು ಅಕ್ಕಿ, ಒಂದಚ್ಚು ಬೆಲ್ಲ, ಒಂದು ತೆಂಗಿನ ಕಾಯಿ, ಒಂದು ಚಿಪ್ಪು ಬಾಳೆಹಣ್ಣು, ಚಕ್ಕಲಿ, ತಂಬಿಟ್ಟು, ಎಲೆ-ಅಡಿಕೆ, ದಕ್ಷಿಣೆ ಎಲ್ಲವನ್ನು ಇಟ್ಟು ಬಳೆಗಳಿಗೆ ವಧುವು ಅರಿಶಿನ-ಕುಂಕುಮವನ್ನಿಟ್ಟು ಪೂಜೆಸಲ್ಲಿಸುತ್ತಾಳೆ. ನಂತರ ಬಳೆಗಳಿಗೆ ಭಕ್ತಿಯಿಂದ ವಂದಿಸುತ್ತಾ 'ನನ್ನ ಬಳೆಹಾಕುವ ಭಾಗ್ಯ ತನ್ನ ಜೀವನದ ಕೊನೆಯತನಕ ಇರಲಿ' ಎಂದು ದೇವರಲ್ಲಿ ಪ್ರಾರ್ಥಿಸುತ್ತಾ ವಧುವು ಬಳೆಗಾರನಿಂದ ಬಳೆಯನ್ನು ತೊಡಿಸಿಕೊಳ್ಳುತ್ತಾಳೆ. ನಂತರ ಬಂದಿರುವ ಎಲ್ಲ ಹೆಂಗಳೆಯರಿಗೆ ಶಾಸ್ತ್ರದ ಬಳೆಯನ್ನು ತೊಡಿಸಲಾಗುತ್ತದೆ. ಬಳೆಶಾಸ್ತ್ರವು ವಧು ಮತ್ತು ವರನ ಮನೆಗಳೆರಡರಲ್ಲಿಯೂ ಮಾಡಲಾಗುತ್ತದೆ.

ಹಸೆಶಾಸ್ತ್ರ:-

ಬಳೆಶಾಸ್ತ್ರದ ನಂತರ ಹಸೆಶಾಸ್ತ್ರವನ್ನು ಮಾಡಲಾಗುತ್ತದೆ. ಸಾದರು ಮೂರು ಬಗೆಯ ಹಸೆಶಾಸ್ತ್ರವನ್ನು ಮಾಡುತ್ತಾರೆ. ಅವೆಂದರೆ ಅಕ್ಕಿ ಹಸೆ, ತುಪ್ಪದ ಹಸೆ, ಎಣ್ಣೆ ಹಸೆ.

ಅಕ್ಕಿಯಲ್ಲಿ ರಂಗೋಲಿಯನ್ನು ಬರೆದು ಅದರ ಮೇಲೆ ಮಣೆ, ಮಣೆಯ ಮೇಲೆ ಬಿಳಿಯ ವಸ್ತ್ರವನ್ನು ಹಾಕಿ ವರ ಮತ್ತು ವರನ ಸೋದರಮಾವನನ್ನು ಕೂರಿಸಿ ಸೇಸೆ ಇಟ್ಟು ನಂತರ ವಧು ಮತ್ತು ವರನ ಸೋದರತ್ತೆಯನ್ನು ಕೂರಿಸಿ ಸೇಸೆ ಇಡುತ್ತಾರೆ. ಹೀಗೆ ಅಕ್ಕಿ ಹಸೆ ಮೂರುಬಾರಿಯಾದ ಮೇಲೆ ತುಪ್ಪದ ಹಸೆ ಮತ್ತು ಎಣ್ಣೆ ಹಸೆಯನ್ನು ಮೂರು-ಮೂರು ಬಾರಿ ಮಾಡುತ್ತಾರೆ. ಒಟ್ಟು

ಒಂಭತ್ತು ಬಾರಿ ಕೂರಿಸಿ ಎಬ್ಬಿಸಿ ಶಾಸ್ತ್ರಮಾಡುತ್ತಾರೆ. ನಂತರ ವಧು-ವರರಿಗೆ ಎಣ್ಣೆ, ಅರಿಶಿನವನ್ನು ಇಡುತ್ತಾರೆ. ನಂತರ ಗಂಡು-ಹೆಣ್ಣಿಗೆ ಮಲ್‌ನೀರ್ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ.

ಧಾರೆಶಾಸ್ತ್ರ:-

ವಧು-ವರರಿಗೆ 'ಮಲ್‌ನೀರು' ಸ್ನಾನಮಾಡಿಸಿ ವರನನ್ನು ದೇವಸ್ಥಾನಕ್ಕೆ ಕಳುಹಿಸಲಾಗುತ್ತದೆ. ಆಗ ವರನಿಗೆ ನೂತನ ವಸ್ತ್ರಧಾರಣೆ ಮಾಡಿಸಿ ಸೋದರ ಮಾವನು ವರನ ಹಣೆಗೆ 'ಬಾಸಿಂಗ' ಕಟ್ಟುತ್ತಾನೆ. ಮುತ್ತೈದೆಯರು ವರನಿಗೆ ಅರಿಶಿನ ಹಚ್ಚಿ ಆರತಿ ಮಾಡುತ್ತಾರೆ. ವಧುವಿಗೆ ತೆರಬೇಕಾಗಿರುವ ನೂತನ ವಸ್ತ್ರಗಳು, ಒಡವೆಗಳು ಮತ್ತು ಇತರೆ ವಸ್ತುಗಳನ್ನು ಒಂದು ಹರಿವಾಣ (ತಟ್ಟೆ) ಯಲ್ಲಿಟ್ಟು ಎರಡು ಬಾರಿ ಕಳುಹಿಸುತ್ತಾರೆ. ನಂತರ ಮೂರನೇ ಬಾರಿ ಕಳುಹಿಸುವಷ್ಟರಲ್ಲಿ ಮುತ್ತೈದೆಯರು ಕಲಶ, ಸಕಲವಾದ್ಯಗಳು, ಫಲಪುಷ್ಪಗಳೊಂದಿಗೆ ದೇವಾಲಯಕ್ಕೆ ತೆರಳಿ ವರನಿಗೆ ಅರಿಶಿನವನ್ನು ಹಚ್ಚಿ, ಆರತಿ ಮಾಡಿ ಶ್ವೇತಛತ್ರಿಯಡಿಯಲ್ಲಿ ವರನನ್ನು ಮದುವೆ ಮನೆಗೆ ಕರೆತರುತ್ತಾರೆ. ಆಗ ವಧುವಿನ ತಂದೆ-ತಾಯಿಯರು ತಮ್ಮ ಭಾವಿ ಅಳಿಯನ ಕಾಲುತೊಳೆಯುವ ಶಾಸ್ತ್ರಮಾಡುತ್ತಾರೆ. ವರನ ಪಾದಗಳನ್ನು ಹೊಸ ಹರಿವಾಣದಲ್ಲಿಟ್ಟು, ಹೊಸ ತಂಬಿಗೆಯಿಂದ ಪಾದವನ್ನು ತೊಳೆದು ಅರಿಶಿನ-ಕುಂಕುಮ, ಹೂವನ್ನಿಟ್ಟು ಪೂಜಿಸುತ್ತಾರೆ.

ಹೀಗೆ ಕಾಲುತೊಳೆಯುವ ಶಾಸ್ತ್ರವಾದ ಬಳಿಕ ವರನ ಭಾಮೈದುನ ಅಂದರೆ ವಧುವಿನ ಸೋದರ ವರನ ಕಾಲಿಗೆ ಹೊಸ ಚಪ್ಪಲಿಯನ್ನು ತೊಡಿಸುತ್ತಾನೆ. ತದನಂತರ ವಧುವಿನ ಕಡೆಯವರು ವರನಿಗೆ ತಂದಿರುವ ಉಡುಗೊರೆಯನ್ನು ಕೊಡುತ್ತಾರೆ. ಬಳಿಕ ವರನು ಮದುವೆ ಮಂಟಪದ ಮುಂಬಾಗಿಲಿಗೆ ಬಂದಾಗ ಹೆಂಗಳೆಯರು ವರನಿಗೆ ಆರತಿಯನ್ನೆತ್ತಿ ದಕ್ಷಿಣೆ ಹೆಚ್ಚು ಹಾಕಿದರೆ ಮಾತ್ರವೇ ಒಳ ಬಿಡುವುದಾಗಿ ತಡೆಯುತ್ತಾರೆ. ನಂತರ ವರನನ್ನು ಧಾರೆಮಂಟಪಕ್ಕೆ ಕರೆತರಲಾಗುತ್ತದೆ. ವಧುವಿನ ಸೋದರತ್ತೆ ವಧುವಿಗೆ ಭಾಸಿಂಗವನ್ನು ಕಟ್ಟಿ ಸೋದರತ್ತೆ ಮತ್ತು ಸೋದರಮಾವ ಇಬ್ಬರು ಸೇರಿ ವಧುವನ್ನು ಮದುವೆ ಮಂಟಪಕ್ಕೆ ಕರೆತರುತ್ತಾರೆ.

ಸಾಮಾನ್ಯ ಮದುವೆಯ ಶಾಸ್ತ್ರದಂತೆ ವಧು-ವರರು ಪರಸ್ಪರ ತಮ್ಮ ತಲೆಗಳ ಮೇಲೆ ಅಕ್ಕಿಯನ್ನು ಎರೆದುಕೊಳ್ಳುತ್ತಾರೆ. ಮಂಗಳ ವಾದ್ಯಗಳ ಧ್ವನಿಯೊಂದಿಗೆ ಎಲ್ಲ ಹಿರಿಯರ ಒಪ್ಪಿಗೆ ಪಡೆದ ವರನು ವಧುವಿನ ಕೊರಳಿಗೆ 'ತಾಳಿಕಟ್ಟುತ್ತಾನೆ'. ನಂತರ ದಂಪತಿಗಳು ಗಂಡಿನ ಉತ್ತರೀಯಕ್ಕೆ ಹೆಣ್ಣಿನ ಸೀರೆಯ ಸೆರಗಿನ ತುದಿಯನ್ನು ಕಟ್ಟಿಕೊಂಡು ಹಾಲ್ಕಂಬದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ.

ಬಳಿಕ ಬಾಳೆಯ ಎಲೆಯ ಮೇಲೆ ಅಕ್ಕಿಯಲ್ಲಿ ಏಳುಸಾಲುಗಳನ್ನು ಬರೆದು ಸಪ್ತಪದಿ ತುಳಿಯುವ ಶಾಸ್ತ್ರವನ್ನು ಮಾಡಲಾಗುತ್ತದೆ. ನಂತರ ವಧು-ವರನನ್ನು ಮದುವೆ ಮಂಟಪದ ಹೊರಕರೆತಂದು ಸೂರ್ಯನಮಸ್ಕಾರ ಮಾಡಿಸಿ 'ಅರುಂಧತಿ' ನಕ್ಷತ್ರ ದರ್ಶನ ಮಾಡಿಸುತ್ತಾರೆ. ತಮ್ಮ ತಲೆಗಳ ಮೇಲೆ ಇರುವ ಅಕ್ಕಿ ಕಾಳನ್ನು ಬೀಳಿಸಿಕೊಂಡು 'ಅರಿವೇಣಿ' ಕೊಡಗಳನ್ನಿಟ್ಟಿರುವ

ಕೋಣೆಯನ್ನು ಪ್ರವೇಶಿಸಿ ಕೊಡಗಳಿಗೆ ನಮಿಸುತ್ತಾ ತಮ್ಮ ಬಾಸಿಂಗಗಳನ್ನು ಬಿಚ್ಚಿ ಆಪ್ತಬಂಧುಗಳೊಡನೆ ಭೋಜನ (ಬುವ್ವ) ಮಾಡುತ್ತಾರೆ.

ಸಾದ ಲಿಂಗಾಯತರು ಮಾರನೆಯದಿನ 'ಗಿಂಡಿ ಪ್ರಸ್ತ' ಆಚರಿಸುವರು. ವರ ತಾನು ವಧುವಿಗೆ ಅತೃಪ್ತನಾದವನೋ ಎಂಬಂತೆ ನಟಿಸುತ್ತಾ ಮದುವೆ ಮನೆಯಿಂದ ಹೊರ ಹೋಗುತ್ತಾನೆ. ವಧುವು ನಳಿಕೆಯಿರುವ ಹಿತ್ತಾಳೆ ಗಿಂಡಿಯನ್ನು ತನ್ನೊಂದಿಗೆ ಒಯ್ದು ವರನನ್ನು ಪತ್ತೆ ಹಚ್ಚಿ ಅವನಿಗೆ ಹಿತ್ತಾಳೆ ಗಿಂಡಿಯನ್ನು ಕೊಟ್ಟು ಸಮಾಧಾನ ಪಡಿಸುತ್ತಾಳೆ. ಇಬ್ಬರನ್ನು ಒಟ್ಟಿಗೆ ಕೂಡಿಸಿ ಅರಿಶಿನ ಹಚ್ಚಿ ವಧುವಿನ ಮನೆಗೆ ಕರೆದೊಯ್ಯುತ್ತಾರೆ. ಅಂದು ರಾತ್ರಿ ವಧುವಿನ ಊರಿನಲ್ಲಿ ಮೆರವಣಿಗೆ ನಡೆಯುತ್ತದೆ.

ಮಾರನೆಯ ದಿನ ನಾಗೋಲಿ ಶಾಸ್ತ್ರದಲ್ಲಿ ಚಪ್ಪರದ ಕಂಬಗಳನ್ನು ಪೂಜಿಸಿ, ಕಂಕಣಗಳನ್ನು ತೆಗೆದು ಹಾಲು ಕಂಭಕ್ಕೆ ಕಟ್ಟುತ್ತಾರೆ. ನೂತನ ವಧು-ವರನನ್ನು, ಮದುವೆ ನಂತರ ರಾತ್ರಿ ಅದೇ ಮನೆಯಲ್ಲಿ ಇರಗೊಡುವುದಿಲ್ಲ. ನಂತರ ಗಂಡಿನ ಮನೆಗೆ ತೆರಳಿ ಒಂದೆರಡು ದಿನಗಳಿದ್ದು ವಾಪಸ್ಸು ಬರುತ್ತಾರೆ. ಒಂದು ವೇಳೆ ಗಂಡಿನ ಮನೆ ಬಹಳ ದೂರವಿದ್ದಲ್ಲಿ ಅವರನ್ನು ಪಕ್ಕದ-ಹತ್ತಿರವಿರುವ ಬಂಧುಗಳ ಮನೆಯಲ್ಲಿರಿಸಿ ಆ ರಾತ್ರಿ ಕಳೆಯುತ್ತಾರೆ.

ಹೀಗೆ ಸಾದರಲ್ಲಿ ಮದುವೆಯು ಹಲವು ಸಾಂಪ್ರದಾಯಿಕ ಆಚರಣೆಗಳೊಂದಿಗೆ ವಧು-ವರರ ಹೊಸ ಬದುಕಿಗೆ ನಾಂದಿಹಾಡಲಾಗುತ್ತದೆ. ಜೊತೆಗೆ ಜೀವನಕ್ಕೆ ಸಾಮಾಜಿಕ ಭದ್ರತೆಯನ್ನೊದಗಿಸುತ್ತದೆ.

೪.೩:- ಹಬ್ಬಗಳು:-

ಹಬ್ಬಗಳು ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ಅತಿಮುಖ್ಯವೂ, ಪರಿಚಿತವೂ ಆದ ವಿಷಯಗಳಾಗಿವೆ. ಅಷ್ಟೇ ಅಲ್ಲದೇ ಇಡೀ ಮನುಷ್ಯವರ್ಗಕ್ಕೆ ಸಹಜಪ್ರಿಯ ವಿಷಯಗಳೆಂದರೆ ಹಬ್ಬಗಳು. ಅವು ಮನುಷ್ಯ ಜೀವನದಲ್ಲಿ ಸಂತೋಷದ ಸಂದರ್ಭಗಳು. ಬಂಧು-ಬಳಗ, ಇಷ್ಟಮಿತ್ರರು ಮುಂತಾದವರು ಒಂದೆಡೆಯಲ್ಲಿ ಒಟ್ಟಾಗಿ ಸೇರಿ ರುಚಿರುಚಿಯಾದ ತಿಂಡಿತಿನಿಸುಗಳನ್ನು, ಪಾನೀಯಗಳನ್ನು ಸೇವಿಸುವುದು, ಕಷ್ಟ-ಕಾರ್ಪಣ್ಯಗಳನ್ನು ಮರೆತು ಹಬ್ಬಗಳನ್ನು ಆಚರಿಸಲಾಗುತ್ತದೆ.

ನಮ್ಮ ರಾಷ್ಟ್ರದ ಸರ್ವಧರ್ಮ ಸಮನ್ವಯದ ಸಹಿಷ್ಣುತೆಗೆ ಹಬ್ಬಗಳ ಆಚರಣೆ ಉತ್ತಮ ನಿದರ್ಶನ. ಹಬ್ಬಗಳ ಮುಖ್ಯ ಉದ್ದೇಶ ಮನುಷ್ಯರಿಗಿರುವ ದೇವರ ಬಗೆಗಿನ ಭಯ-ಭಕ್ತಿ, ನಿಯಮ, ನಿಷ್ಠೆಗಳನ್ನು ಜೀವಂತವಾಗಿಡುವುದೇ ಆಗಿದೆ.

ಸಾದರಲ್ಲಿ ಯುಗಾದಿಯಿಂದ ಮುಂದಿನ ಯುಗಾದಿಯವರೆಗೆ ಹತ್ತಾರು ಹಬ್ಬ-ಹರಿದಿನಗಳನ್ನು ಆಚರಿಸಲಾಗುತ್ತದೆ. ಕೃಷಿ ಪ್ರಧಾನ ಜಾತಿಯಾದ ಸಾದರು ತಮ್ಮ ಕೃಷಿ ಕಾಯಕದ ನಡುವೆಯೇ ಬಿಡುವು ಮಾಡಿಕೊಂಡು ಹಬ್ಬವನ್ನು ಆಚರಿಸಿ ಸಂಭ್ರಮಿಸುತ್ತಾರೆ.

ಆಚರಿಸಲಾಗುತ್ತದೆ. ಕೃಷಿ ಪ್ರಧಾನ ಜಾತಿಯಾದ ಸಾದರು ತಮ್ಮ ಕೃಷಿ ಕಾಯಕದ ನಡುವೆಯೇ ಬಿಡುವು ಮಾಡಿಕೊಂಡು ಹಬ್ಬವನ್ನು ಆಚರಿಸಿ ಸಂಭ್ರಮಿಸುತ್ತಾರೆ.

ಹಬ್ಬ-ಹರಿದಿನಗಳು ಆಚರಣೆಯು ಎಲ್ಲಾ ದೇಶ, ಜಾತಿ, ಮತ, ಸಂಪ್ರದಾಯ, ಸಂಸ್ಕೃತಿಗಳಲ್ಲಿ ಇದ್ದರೂ ಸಾದರಲ್ಲಿ ಆಚರಣೆಯಲಿರುವ ಹಬ್ಬ-ಹರಿದಿನಗಳಲ್ಲಿ ಹಲವು ವಿಶಿಷ್ಟತೆಗಳನ್ನು ಗಮನಿಸಬಹುದು.

ಸಾದರಲ್ಲಿ ವಿಶೇಷವಾಗಿ ಆಚರಿಸುವ ಪ್ರಮುಖ ಹಬ್ಬಗಳೆಂದರೆ-ಯುಗಾದಿ, ಶ್ರೀರಾಮನವಮಿ, ಹನುಮ ಜಯಂತಿ, ನಾಗರಪಂಚಮಿ, ವರಮಹಾಲಕ್ಷ್ಮೀವ್ರತ, ಗೌರಿಹಬ್ಬ, ಗಣೇಶ ಚತುರ್ಥಿ, ನವರಾತ್ರಿ, ಪಿತೃಪಕ್ಷ, ದೀಪಾವಳಿ, ಮಕರಸಂಕ್ರಾಂತಿ, ಮಹಾಶಿವರಾತ್ರಿ, ಬಸವ ಜಯಂತಿ ಇತ್ಯಾದಿ ಹಬ್ಬಗಳು ವ್ಯವಸಾಯ ಚಕ್ರದಲ್ಲಿ ಹಂತ-ಹಂತವಾಗಿ ಬರುತ್ತವೆ. ಜೊತೆಗೆ ರೈತಾಪಿ ಜನರ ಬೇಸರ ನೀಗಿಸಿ ಹೊಸ ಹುರುಪು ನೀಡಲು ಈ ಹಬ್ಬಗಳು ಸಹಕಾರಿಯಾಗಿವೆ.

ಯುಗಾದಿ:-

ಚೈತ್ರಮಾಸದಲ್ಲಿ ಪ್ರಥಮವಾಗಿ ಬರುವ ಹಬ್ಬ ಯುಗಾದಿ. ದೇಶದ ಎಲ್ಲ ಭಾಗಗಳಲ್ಲಿಯೂ ಆಚರಿಸಲ್ಪಡುವ ಮಹಾಪರ್ವ ಯುಗಾದಿ. 'ವರ್ಷ, ಋತು, ಮಾಸ, ಪಕ್ಷ, ಎಲ್ಲಕ್ಕೂ ಪ್ರಾರಂಭಮಂಗಳವಾಗಿ ಇಡಿಯ ಸಂವತ್ಸರಕ್ಕೆ ಪೀಠಿಕೆಯರೂಪದಲ್ಲಿರುವ ಪರ್ವ ಇದು.

ಯುಗಾದಿಯನ್ನು ಸಾದರಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ. ಯುಗಾದಿಯು ಹೊಸವರ್ಷದ ಪ್ರಾರಂಭದ ದಿನ; ಅಷ್ಟೇ ಅಲ್ಲದೇ ಪೌರಾಣಿಕ ಮಹತ್ವವನ್ನು ಪಡೆದಿರುವ ಹಬ್ಬವಿದಾಗಿದೆ. ಇನ್ನು ಋತುಗಳ ರಾಜನೆಂದೇ ಖ್ಯಾತಿಹೊಂದಿರುವ ವಸಂತ ಋತುವಿನಲ್ಲಿ ಬರುವ ಯುಗಾದಿಯು ಸಾದರ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಯುಗಾದಿಯಲ್ಲಿ ಪ್ರಕೃತಿಯು ಹೊಸ ಹೂ-ತಳಿರು, ತೋರಣಗಳಿಂದ ತನ್ನ ಸಿಂಗಾರ ಮಾಡಿಕೊಂಡು ಜಗತ್ತಿಗೆ ಹೊಸತನದ ಸಂದೇಶವನ್ನು ಸಾರುತ್ತಿರುತ್ತದೆ.

ಯುಗಾದಿಯಂದು ಪ್ರಾತಃಕಾಲದಲ್ಲಿ ಸಾದರು ಜಾತಿಯಲ್ಲಿನ ಹಿರಿಯ-ಕಿರಿಯರೆನ್ನದೆ ಮನೆಯಲ್ಲಿನ ಎಲ್ಲರೂ ಆಭ್ಯಂಜನ ಸ್ನಾನ ಮಾಡುವುದು ವಿಶೇಷವಾಗಿದೆ. ಎಣ್ಣೆ ಸ್ನಾನದ ಬಳಿಕ ಪುರುಷರು ತೋಟ, ಹೊಲ, ಗದ್ದೆಗಳಿಗೆ ತೆರಳಿ ಮಾವಿನ ಸೊಪ್ಪು, ಬೇವಿನ ಸೊಪ್ಪನ್ನು ತರುತ್ತಾರೆ. ಮನೆಗೆ ಬಂದವರೇ ಬಾಗಿಲಿಗೆ ಮಾವಿನ ಎಲೆಯ ತೋರಣವನ್ನು ಕಟ್ಟಿ, ಬೇವಿನ ಕುಚ್ಚನ್ನು ಬಿಡುತ್ತಾರೆ. ಹೆಂಗಸರು ಮನೆಯನ್ನು ಸಾರಿಸಿ, ಗುಡಿಸಿ ರಂಗವಲ್ಲಿ ಇಡುತ್ತಾರೆ. ಎಲ್ಲರೂ ಹೊಸಬಟ್ಟೆಯನ್ನು ಧರಿಸಿ ಸಂತೋಷದಿಂದಿರುತ್ತಾರೆ. ಅಂದು ಮನೆಯಲ್ಲಿ ಯಾರೂ ಕಣ್ಣೀರು ಹಾಕಬಾರದು, ಕೆಟ್ಟಮಾತಾಡಬಾರದು, ಕೋಪಿಸಿಕೊಳ್ಳಬಾರದು, ಯಾವುದೇ ಕೆಟ್ಟಕೆಲಸಗಳನ್ನು ಮಾಡಬಾರದು, ಬೈದಾಡಬಾರದು, ಏಕೆಂದರೆ ಹಾಗೆ ಮಾಡಿದರೆ ಇಡೀ ವರ್ಷ ಅದೇ

ಸ್ಥಿತಿಯಾಗುತ್ತದೆಂಬ ನಂಬಿಕೆ ಇವರದು. ಮನೆಯ ಹೆಣ್ಣು ಮಕ್ಕಳು ಬೇವಿನ ಹೂವು, ಬೆಲ್ಲ, ಕಡಲೆ, ಕೊಬ್ಬರಿಯನ್ನು ಬೆರೆಸಿ ಬೇವು–ಬೆಲ್ಲವನ್ನು ತಯಾರಿಸಿ ದೇವರ ಮುಂದಿಟ್ಟು ಪೂಜಿಸಿ ಎಲ್ಲರಿಗೂ ಪ್ರಸಾದವಾಗಿ ನೀಡುತ್ತಾರೆ.

ಹೀಗೆ ಬೇವು–ಬೆಲ್ಲವನ್ನು ತಿಂದು ಕಷ್ಟ–ಸುಖವನ್ನು ಸರಿಸಮಾನವಾಗಿ ಸ್ವೀಕರಿಸುವುದಾಗಿ, ಕಷ್ಟ ಬಂದರೆ ಕುಗ್ಗದೆ, ಸುಖ ಬಂದರೆ ಹಿಗ್ಗದೆ ಬಾಳುವುದಾಗಿ ಸಂಕಲ್ಪಮಾಡುತ್ತಾರೆ.

ಕೃಷಿ ಪ್ರಧಾನ ಜಾತಿಯಾದ ಸಾದರು ಮನೆದೇವರಿಗೆ ಪೂಜಿಸಿ ಪಂಚಾಂಗವನ್ನು ಓದಿ ಆ ವರ್ಷ ಮಳೆ–ಬೆಳೆ ಹೇಗಿದೆ ಎಂಬುದನ್ನು ತಿಳಿಯುತ್ತಾರೆ. ಅಷ್ಟರಲ್ಲಿ ಮನೆಯಲ್ಲಿನ ಹೆಂಗಳೆಯರು ಒಬ್ಬಟ್ಟನ್ನು ಮಾಡಿ ದೇವರಿಗೆ ಎಡೆ ಹಾಕಿ ನಂತರ ಮನೆಯವರಿಗೆಲ್ಲಾ ಊಟ ಬಡಿಸುತ್ತಾರೆ.

ನಂತರ ಇಡೀ ಗ್ರಾಮದಲ್ಲಿನ ಎಲ್ಲರೂ ಹಿರಿಯ–ಕಿರಿಯರೆನ್ನದೆ, ಸ್ತ್ರೀ–ಪುರುಷರನ್ನದೇ ಕ್ರೀಡೆಗಳಲ್ಲಿ ತೊಡಗುತ್ತಾರೆ. ಪುರುಷರು ಚೆಂಡಾಟ, ಚಿನ್ನಿದಾಂಡು, ಲಗೋರಿ ಮುಂತಾದ ಆಟಗಳನ್ನು ಆಡಿದರೆ ಸ್ತ್ರೀಯರು ಚೌಕಾಬಾರ, ಅಟ್ಟಗುಳಿ ಮುಂತಾದ ಆಟಗಳನ್ನು ಆಡುತ್ತಾರೆ. ಇನ್ನು ಚಿಕ್ಕ ಮಕ್ಕಳು ಉಯ್ಯಾಲೆ, ಕುಂಟಾಬಿಲ್ಲೆ ಮುಂತಾದ ಕ್ರೀಡೆಗಳನ್ನು ಆಡುತ್ತಾ ಸಂಭ್ರಮದಿಂದ ಹಬ್ಬವನ್ನು ಆಚರಿಸುತ್ತಾರೆ.

<u>ಶ್ರೀರಾಮನವಮಿ:–</u>

ಚೈತ್ರಮಾಸದಲ್ಲಿ ಯುಗಾದಿಯ ನಂತರ ಬರುವ ಅತಿಮುಖ್ಯವಾದ ಹಬ್ಬ ಶ್ರೀರಾಮನವಮಿ. ಮನುಷ್ಯನಾಗಿ ದೈವತ್ವಕ್ಕೆ ಏರಿದ ಮಹಾಪುರುಷನಾದ ಶ್ರೀರಾಮನನ್ನು ರಾಮನವಮಿಯಂದು ವಿಶೇಷವಾಗಿ ಪೂಜಿಸಲಾಗುತ್ತದೆ. ಪಿತೃವಾಕ್ಯ ಪರಿಪಾಲಕನಾದ, ಶ್ರೀರಾಮನ ಸವಿನೆನಪಿಗಾಗಿ, ಆತನ ತತ್ವ ಆದರ್ಶಗಳನ್ನು ನೆನಪಿಸಿಕೊಳ್ಳುವ ಸಲುವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಶ್ರೀರಾಮನವಮಿ ಹಬ್ಬವನ್ನು ಸಾದರು ಹಲವು ವಿಶಿಷ್ಟ ಆಚರಣೆಗಳೊಂದಿಗೆ ಶ್ರದ್ಧಾ–ಭಕ್ತಿಯಿಂದ ಆಚರಿಸುತ್ತಾರೆ.

ಅಂದು ಮನೆಯಲ್ಲಿ ಎಲ್ಲರೂ ಬೇಗನೆ ಎದ್ದು ಸ್ನಾನಮಾಡಿ ಮಡಿಯುಟ್ಟು ಶ್ರೀರಾಮನಿಗೆ ಪೂಜೆಸಲ್ಲಿಸಿ, ನಂತರ ತಮ್ಮ ಮನೆಯಲ್ಲಿ ಮರಣಹೊಂದಿರುವ ಹಿರಿಯರನ್ನು ಮಣ್ಣುಮಾಡಿರುವ ಗುಡ್ಡೆಯ ಬಳಿ ತೆರಳಿ, ಗುಡ್ಡೆಯ ಮೇಲಿನ ಕಸ–ಕಡ್ಡಿಯನ್ನು ತೆಗೆದು ಶುಚಿಗೊಳಿಸಿ, ತೆಂಗಿನ ಗರಿಯಿಂದ ಚಪ್ಪರವನ್ನು ಹಾಕಿ, ತಳಿರು–ತೋರಣಗಳಿಂದ ಶೃಂಗರಿಸಿ ತದನಂತರ ಗುಡ್ಡೆಯ ಮೇಲೆ ಸಗಣಿಯಿಂದ ಸಾರಿಸಿ; ಭಕ್ತಿಯಿಂದ ತಮ್ಮ ಹಿರಿಯರ ಆತ್ಮಕ್ಕೆ ಶಾಂತಿಸಿಗಲೆಂದು, ಅವರ ಹರಕೆ–ಆರೈಕೆ, ಆರ್ಶಿವಾದ ಸದಾ ತಮ್ಮ ಮೇಲಿರಲೆಂದು ಪ್ರಾರ್ಥಿಸುತ್ತಾ ಪೂಜಿಸುತ್ತಾರೆ. ಅಲ್ಲಿಯೇ (ಗುಡ್ಡೆಯ ಬಳಿಯಲ್ಲಿಯೇ) ಹೆಸರು ಬೇಳೆಯ ಕೋಸಂಬರಿ, ಪಾನಕವನ್ನು ಮಾಡಿ ಗುಡ್ಡೆಯ ಮೇಲೆ ಎಡೆ ಹಾಕಿ ನಂತರ ಮನೆ–ಮಕ್ಕಳಿಗೆಲ್ಲ ಪ್ರಸಾದವಾಗಿ ಹೆಸರುಬೇಳೆ, ಪಾನಕವನ್ನು ಕೊಡುತ್ತಾರೆ.

ಮನೆಯ ಮಕ್ಕಳು ಎಲ್ಲೇ ಇರಲಿ ಅಂದಿನ ಗುಡ್ಡೇ ಪೂಜೆಗೆ ತಪ್ಪದೆ ಪಾಲ್ಗೊಳ್ಳಬೇಕು ಇಲ್ಲವಾದರೆ ಏನಾದರೂ ತೊಂದರೆಯಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಇನ್ನು ಗ್ರಾಮದಲ್ಲಿನ ಎಲ್ಲಾ ದೇವಾಲಯಗಳಲ್ಲಿ ಅಂದು ವಿಶೇಷಪೂಜೆಯನ್ನು ಸಲ್ಲಿಸಿ ಊರಮುಂದಿನ ಅರಳಿಕಟ್ಟೆಯ ಬಳಿಯಲ್ಲಿ ಗ್ರಾಮದ ಸರ್ವರಿಗೂ ಹೆಸರುಬೇಳೆ, ಪಾನಕವನ್ನು ವಿನಿಯೋಗಿಸುವುದರೊಂದಿಗೆ; ಎಲ್ಲರೂ ಸಡಗರ ಸಂಭ್ರಮದಿಂದ ಶ್ರೀರಾಮನವಮಿಯನ್ನು ಆಚರಿಸುತ್ತಾರೆ.

ಹನುಮ ಜಯಂತಿ:-

ಚೈತ್ರಮಾಸದಲ್ಲಿ ಶ್ರೀರಾಮನವಮಿಯ ನಂತರ ಆಚರಿಸಲ್ಪಡುವ ಒಂದು ಮುಖ್ಯ ಹಬ್ಬವೆಂದರೆ ಹನುಮ ಜಯಂತಿ. ಅಂದು ಆರಾಧಿಸಲ್ಪಡುವ ದೇವರು ಹನುಮಂತ, ಆಂಜನೇಯ, ಮಾರುತಿ, ಪ್ರಾಣದೇವರು, ತಿರುವಡಿ, ರಾಮಬಂಟ, ದೊಡ್ಡಕಾಯಪ್ಪ ಎಂಬ ಮುಂತಾದ ಹೆಸರುಗಳಿಂದ ಪ್ರಸಿದ್ದನಾಗಿರುವ ಮಹಾತ್ಮ ಹನುಮಂತ. ರಾಮನವಮಿಯಂದು ಶ್ರೀರಾಮನನ್ನು ಪೂಜಿಸಿದ ನಂತರ ಅದಕ್ಕೆ ಹತ್ತಿರದಲ್ಲಿಯೇ ಬರುವ ಒಂದು ಪರ್ವದಲ್ಲಿ ರಾಮನ ಭಕ್ತಿಪರಿವಾರದಲ್ಲಿ ಪ್ರಮುಖನಾದವನೂ, ಭಕ್ತಜನ ಪ್ರಿಯನೂ, ಬುಧಜನ ಪ್ರಿಯನೂ, ಬಹುಜನ ಪ್ರಿಯನೂ ಆಗಿರುವ ಹನುಮಂತನನ್ನು ಆರಾಧಿಸುವ ವಾಡಿಕೆ ಸಾದರಲ್ಲಿದೆ.

'ಹನುಮನಿಲ್ಲದ ಹಳ್ಳಿಯೇ? ಗಣಪನಿಲ್ಲದ ಗ್ರಾಮವೇ?' ಎಂಬ ಹಿರಿಯರ ಮಾತಿನಂತೆ ಎಲ್ಲಾ ಗ್ರಾಮಗಳಲ್ಲಿಯೂ ಸರ್ವಜನರೂ ಸಹ ಹನುಮ ಜಯಂತಿಯಂದು ಹನುಮನನ್ನು ಭಕ್ತಿಭಾವದಿಂದ ಆರ್ಚಿಸುತ್ತಾರೆ. ಅಂದು ಹನುಮ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಅಷ್ಟೇ ಅಲ್ಲದೇ ಜಾತ್ರಾಮಹೋತ್ಸವವೂ ಇರುತ್ತದೆ. ಜಾತ್ರೆಯಲ್ಲಿ ಸುತ್ತೇಳಳ್ಳಿ ಜನ ಪಾಲ್ಗೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಕ್ಯಾಮೇನಹಳ್ಳ ಜಾತ್ರೆ, ಗೊಲ್ಲಳ್ಳಿ ಜಾತ್ರೆ ಬಹು ಪ್ರಸಿದ್ದಿ ಪಡೆದಿವೆ. ಜಾತ್ರೆಯಂದು ದೇವರ ಪೂಜೆ ಮುಗಿಸಿ ನಂತರ ತೇರನ್ನು ಸಿದ್ಧಗೊಳಿಸಿ ಎಳೆಯುವ ಮುಂಚೆ ಹನುಮನಿಗೆ ಜಯಕಾರವನ್ನು ಹಾಕಿ, ಭಕ್ತಿಭಾವದಿಂದ ವಂದಿಸಿ ಎಲ್ಲರೂ ಆಕಾಶದತ್ತ ಮುಖಮಾಡಿ ಕಾತುರದಿಂದ ಕಾಯುತ್ತಿರುತ್ತಾರೆ. ಕಾರಣ 'ಗರುಡ ಪಕ್ಷಿ'ಯು ಬಂದು ಆಗಸದಲ್ಲಿ ತೇರಿನ ಸುತ್ತಲೂ ಪ್ರದಕ್ಷಿಣೆ ಹಾಕುತ್ತದೆ. ಅದಾದ ಬಳಿಕವೇ ತೇರನ್ನು ಎಳೆಯಬೇಕೆಂಬ ನಂಬಿಕೆ ಇದೆ. ಸಾದರಲ್ಲಿ ಪ್ರತಿ ಮನೆಗೊಬ್ಬರಂತೆ ತಪ್ಪದೇ ಜಾತ್ರೆಗೆ ಆಗಮಿಸಿ ತೆರನ್ನು ಎಳೆಯುತ್ತಾರೆ. ಎಲ್ಲರೂ ಸೇರಿ ತೇರನ್ನು ಎಳೆದ ಬಳಿಕ ದೇವಾಲಯದ ಪ್ರಸಾದವನ್ನು ಸ್ವೀಕರಿಸಿ ಜಾತ್ರೆಯ ಕಡಲೆಪುರಿ, ಬತ್ತಾಸು, ಕಲ್ಯಾಣಸೇವೆಗಳನ್ನು ಮಕ್ಕಳಿಗೆಂದು ಕೊಂಡು ಮನೆಗೆ ತೆರಳುತ್ತಾರೆ.

ನಂತರ ಒಂದು ತಿಂಗಳವರೆಗೆ ಪ್ರತಿ ಶನಿವಾರವೂ ಇಂತಿಷ್ಟು ಮನೆಯ ಭಕ್ತಾಧಿಗಳ ಪೂಜೆ ಎಂದು ಅರ್ಚಕರು ಹೇಳಿ ಕಳುಹಿಸುತ್ತಾರೆ. ಆಗ ಭಕ್ತಾಧಿಗಳು ಸಡಗರ-ಸಂಭ್ರಮದಿಂದ ರಾತ್ರಿ ವೇಳೆ

ನಡೆಯುವ ಹನುಮನ ಪೂಜೆ ಮತ್ತು ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಸಾದರಲ್ಲಿ ಹನುಮ ಜಯಂತಿಯನ್ನು ಬಹು ವಿಶೇಷವಾಗಿ ಆಚರಿಸುತ್ತಾರೆ.

ನಾಗರ ಪಂಚಮಿ:-

ಸಾದರಲ್ಲಿ ಆಚರಿಸಲ್ಪಡುವ ಪ್ರಮುಖ ಹಬ್ಬಗಳಲ್ಲಿ ನಾಗರ ಪಂಚಮಿ ಹಬ್ಬವು ಒಂದಾಗಿದೆ. ಅಂದು ವಿಶೇಷವಾಗಿ ಆರಾಧಿಸಲ್ಪಡುವ ದೇವತೆ ನಾಗದೇವತೆ.

ಪಂಚಮಿ ಹಬ್ಬ ಇನ್ನು ಒಂದು ವಾರವಿರುವಾಗಲೇ ಗಂಡನ ಮನೆಯಲ್ಲಿರುವ ಹೆಣ್ಣು ಮಕ್ಕಳನ್ನು ಅವರ ಸೋದರ ಬಂದು ಹಬ್ಬಕ್ಕೆ ಕರೆತರುತ್ತಾನೆ. ಹಬ್ಬದಂದು ಪ್ರಾತಃಕಾಲದಲ್ಲೇ ಎದ್ದು ಸ್ನಾನಮಾಡಿ ಮಡಿಯುಟ್ಟು ಹುತ್ತ ಅಥವಾ ನಾಗರಕಲ್ಲಿನ ಬಳಿ ಬಂದು ಭಯ-ಭಕ್ತಿಯಿಂದ ಪೂಜೆಸಲ್ಲಿಸಿ ನಂತರ ಹಾಲು-ತುಪ್ಪವನ್ನು ತನಿ ಎರೆಯುತ್ತಾರೆ.

ಮತ್ತೆ ಕೆಲವರು ಮನೆಯಲ್ಲಿಯೇ ಚಿನ್ನ, ಬೆಳ್ಳಿ, ಜೇಡಿಮಣ್ಣಿನಿಂದ ಮಾಡಿರುವ ನಾಗರವಿಗ್ರಹಕ್ಕೆ ಪೂಜೆಮಾಡಿ ಅವುಗಳಿಗೆ ಕ್ಷೀರಾಭಿಷೇಕ ಮಾಡುತ್ತಾರೆ ನಂತರ ಪ್ರಧಾನವಾದ, ಹನ್ನೆರಡುಮಂದಿ ನಾಗದೇವತೆಗಳಾದ ಅನಂತ, ವಾಸುಕಿ, ಶಂಖ, ಪದ್ಮ, ಕಂಬಲ, ಕಾರ್ಕೋಟಕ, ಧೃತರಾಷ್ಟ್ರ, ಶಂಬಕ, ಕಾಳಿಯ, ತಕ್ಷಕ, ಪಿಂಗಳ ಮತ್ತು ಮಣಿಭದ್ರಕರನ್ನು ತಪ್ಪದೆ ಸ್ಮರಿಸುತ್ತಾರೆ, ಮನಸಾ ವಂದಿಸುತ್ತಾರೆ. ಅಂದು ದಿನ ಪೂರ್ತಿ ಉಪವಾಸವಿದ್ದು ರಾತ್ರಿ ಫಲಹಾರ ಸೇವಿಸುತ್ತಾರೆ.

ಹೀಗೆ ಸಾದರಲ್ಲಿ ಬಹು ಹಿಂದಿನಿಂದಲೂ ನಾಗರಪಂಚಮಿ ಹಬ್ಬದ ಆಚರಣೆ ರೂಢಿಯಲ್ಲಿರುವುದನ್ನು ಗಮನಿಸಬಹುದು.

ವರಮಹಾಲಕ್ಷ್ಮಿವ್ರತ:-

ಶ್ರಾವಣಮಾಸದ ಪ್ರಸಿದ್ಧ ಹಬ್ಬಗಳಲ್ಲಿ ಒಂದಾಗಿರುವ ವರಮಹಾಲಕ್ಷ್ಮಿವ್ರತವು ಸಾದರು ಆಚರಿಸುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ.

ಒಂದು ಕಂಚಿನ ಬಿಂದಿಗೆಯಲ್ಲಿ ನೀರು ತುಂಬಿ ಅದರಮೇಲೊಂದು ತಂಬಿಗೆಯನ್ನಿಟ್ಟು ತಂಬಿಗೆಯ ಮೇಲೆ ತೆಂಗಿನಕಾಯನ್ನು ಇಟ್ಟು ಅದಕ್ಕೆ ಲಕ್ಷ್ಮಿಯ ಮುಖವಾಡವನ್ನು ಕಟ್ಟಿ, ಅದಕ್ಕೆ ರೇಷ್ಮೆಸೀರೆಯನ್ನುಡಿಸಿ, ಸಕಲಾಭರಣಗಳಿಂದ ಶೃಂಗರಿಸಲಾಗುತ್ತದೆ. ಲಕ್ಷ್ಮಿಯನ್ನು ಕೂಡಿಸುವ ಪೀಠಕ್ಕೆ ಬಾಳೆಕಂದು, ಮಾವಿನ ತೋರಣ, ಕಬ್ಬು ಮುಂತಾದವುಗಳಿಂದ ಅಲಂಕರಿಸಲಾಗುತ್ತದೆ. ನಂತರ ಲಕ್ಷ್ಮಿಯ ಮುಂಭಾಗದಲ್ಲಿ ಬಗೆ-ಬಗೆಯ ತಿಂಡಿ ತಿನಿಸುಗಳು ಹಾಗೂ ಫಲಪುಷ್ಪಗಳನ್ನಿಡಲಾಗುತ್ತದೆ. ತದನಂತರ ಲಕ್ಷ್ಮಿಯ ಶತನಾಮಾವಳಿಯನ್ನು ಪಟಿಸುತ್ತಾ, ಶ್ರದ್ಧಾ-ಭಕ್ತಿಯಿಂದ ಪೂಜಿಸಿ ನಂತರ ನೆರೆದಿರುವ ಮುತ್ತೈದೆಯರಿಗೆಲ್ಲ ಅರಿಶಿನ-ಕುಂಕುಮವನ್ನು ಕೊಡುತ್ತಾರೆ. ಹೀಗೆ ಹಬ್ಬವನ್ನು ಆಚರಿಸಿ ಸಿಹಿ ಊಟ ಮಾಡಿ ಸಂತೋಷಿಸುತ್ತಾರೆ.

[illegible]

ಗೌರಿ–ಗಣೇಶ:–

ಭಾದ್ರಪದಮಾಸದಲ್ಲಿ ಬರುವ ಒಂದು ಅತಿಮುಖ್ಯವಾದ ಹಬ್ಬ ಗೌರಿ–ಗಣೇಶ ಹಬ್ಬ. ಗೌರಿಹಬ್ಬವನ್ನು ಹೆಂಗಸರ ಹಬ್ಬವೆಂದೇ ಕರೆಯಲಾಗುತ್ತದೆ. ಈ ನಿಟ್ಟಿನಲ್ಲಿ 'ಗಂಡಸರಿಗೇಕೆ ಗೌರಿ ದುಃಖ'? ಎಂಬ ಗಾದೆ ಇರುವುದನ್ನು ಗಮನಿಸಬಹುದು. ಈ ಹಬ್ಬದಲ್ಲಿ ಹೆಂಗಸರ ಸಡಗರ–ಸಂಭ್ರಮ ಹೆಚ್ಚಾಗಿರುತ್ತದೆ. ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿರುವ ಹೆಣ್ಣುಮಕ್ಕಳಿಗೆ ತವರಿನಿಂದ ಬಾಗಿನ ಕಳುಹಿಸಲಾಗುತ್ತದೆ. ಗೌರಿ ಹಬ್ಬ ಬಂತೆಂದರೆ ಎಲ್ಲ ಹೆಣ್ಣು ಮಕ್ಕಳು ತವರಿನ ಬಾಗಿನಕ್ಕಾಗಿಯೇ ಕಾತುರ, ಆತುರದಿಂದ ಕಾಯುತ್ತಿರುತ್ತಾರೆ. ಇನ್ನು ಮದುವೆಯಾದ ಮೊದಲನೇ ಗೌರಿ ಹಬ್ಬಕ್ಕೆ ಅಳಿಯ–ಮಗಳಿಬ್ಬರನ್ನು ಹಬ್ಬಕ್ಕೆ ತವರಿಗೆ ಕರೆದು ಉಡುಗೊರೆ ಕೊಡುವ ವಾಡಿಕೆಯು ಸಾದರಲ್ಲಿದೆ.

ದೂರದ ಊರಿನಲ್ಲಿರುವ ಅಕ್ಕ–ತಂಗಿಯರಿಗೆ ಸೀರೆ, ಹಣ, ಅರಿಶಿನ–ಕುಂಕುಮ, ಬಳೆ, ಹೂವು, ಹಣ್ಣನ್ನು ಬಾಗಿನ ಎಂದು ಕೊಡುತ್ತಾರೆ.

ಗೌರಿಹಬ್ಬದಂದು ಮನೆಯನ್ನು ಸಾರಿಸಿ, ರಂಗವಲ್ಲಿಯನ್ನಿಟ್ಟು ಮಡಿಯುಟ್ಟು ಹೆಂಗಸರು ನಾಗರಪೂಜೆಗೆ ಸಕಲ ಸಿದ್ಧತೆಗಳನ್ನು ಮಾಡುತ್ತಾರೆ. ಸಾದರಲ್ಲಿ ವಿಶೇಷವಾಗಿ ತಮ್ಮ ವಂಶದ ಪೂರ್ವಜರು ವಾಸಿಸುತ್ತಿದ್ದ ಸ್ಥಳಕ್ಕೆ ಹೋಗಿ ನಾಗರುಪೂಜೆ ಮಾಡುವುದು ರೂಢಿಯಲ್ಲಿದೆ. ಚಿಗಳಿ, ಅಕ್ಕಿ ತಂಬಿಟ್ಟು, ಅಕ್ಕಿ–ಕಡ್ಲೆ (ನೆನೆಸಿರುವುದು), ಬಳೆಬಿಚ್ಚಾಲೆ, ಅರಿಶಿನದ ದಾರ, ಬಾಳೆ ಎಲೆ, ಬಾಳೆಹಣ್ಣು, ಎಲೆ–ಅಡಿಕೆ, ಅರಿಶಿನ, ಕುಂಕುಮ, ಹೂವು, ಸೌತೆಕಾಯಿ, ತೆಂಗಿನಕಾಯಿ, ತುಪ್ಪದ ಭತ್ತಿ, ಹಾಲು, ತುಪ್ಪ ಮುಂತಾದ ಪೂಜಾ ಸಾಮಾಗ್ರಿಗಳೊಂದಿಗೆ ಮಡಿಯಿಂದ ತೆರಳಿ ಭಯ–ಭಕ್ತಿಯಿಂದ ನಾಗರು ಮಾಡಿ ತನಿ ಎರೆಯುತ್ತಾರೆ.

ಗೌರಿಹಬ್ಬದಂದು ಪ್ರಾತಃಕಾಲದಲ್ಲಿಯೇ ಹೊಲ, ಗದ್ದೆ, ತೋಟಗಳಿಗೆ, ತಿಪ್ಪೆಗಳಿಗೆ (ಗೊಬ್ಬರದ ರಾಶಿ) ಬೆಚ್ಚಿನ ಕಡ್ಡಿಯನ್ನಿಟ್ಟಿರುತ್ತಾರೆ. ನಾಗರ ನಂತರ ಬೆಚ್ಚಿನ ಕಡ್ಡಿಗೆ ಪೂಜೆ ಸಲ್ಲಿಸುತ್ತಾರೆ. ತಮ್ಮ ಹೊಲಕ್ಕೆ ದೃಷ್ಟಿತಾಗೀತು ಎಂಬ ಭಯದಿಂದ ಬೆಚ್ಚನ್ನಿಡುತ್ತಾರೆ. ತದನಂತರ ಗ್ರಾಮದೇವತೆಯಾದ ಗುಗ್ರಿಮಾರಮ್ಮನಿಗೆ ಪೂಜೆಸಲ್ಲಿಸಿ ಒಬ್ಬಟ್ಟು, ಮೊಸರು ಅನ್ನವನ್ನು ಬೇವಿನಸೊಪ್ಪಿನ ಮೇಲೆ ಎಡೆಯಿಟ್ಟು, ಪೂಜೆಮಾಡಿ ನಂತರ ಆ ಎಡೆಯ ಸ್ವಲ್ಪಭಾಗವನ್ನು ತಂದು ಅರಿಶಿನ–ಕುಂಕುಮವನ್ನು ಹಾಕಿ ಹೊಲ–ಗದ್ದೆಗಳಿಗೆ ಎರಚುತ್ತಾರೆ. ಗ್ರಾಮದೇವತೆಗೆ ಆ ವರ್ಷ ಮಳೆ–ಬೆಳೆ ಚೆನ್ನಾಗಿರಲಿ ಎಂದು ಬೇಡಿಕೊಳ್ಳುತ್ತಾರೆ.

ಹೀಗೆ ಎಡೆಪ್ರಸಾದವನ್ನು ಹೊಲಗದ್ದೆಗಳಿಗೆ ಎರಚುವುದರಿಂದ ಹಲವು ಅನುಕೂಲಗಳಿವೆ. ಅದೆಂದರೆ ಅನ್ನದ ಬಣ್ಣಕ್ಕೆ ಆಕರ್ಷಿತವಾದ ಹಕ್ಕಿ–ಪಕ್ಷಿಗಳು ಹೊಲಗಳಿಗೆ ಬಂದು ಅಲ್ಲಿರುವ ಹುಳು–ಹುಪ್ಪಟೆಗಳನ್ನು ಆಯ್ದು ತಿನ್ನುತ್ತವೆ. ಇದರಿಂದ ಬೆಳೆಗಳು ಹುಳು–ಹುಪ್ಪಟೆಗಳ ಹಾವಳಿಯಿಂದ ಮುಕ್ತವಾಗಿ ಸಮೃದ್ಧವಾದ ಬೆಳೆ ಬರುತ್ತದೆ.

ಮಧ್ಯಾಹ್ನ ಒಬ್ಬಟ್ಟಿನ ಊಟವನ್ನು ಬಾಳೆಯ ಎಲೆಯಲ್ಲಿ ಸವಿದು ಸಂತೋಷದಿಂದ ಗಣೇಶ ಹಬ್ಬಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ.

ಭಾರತದೇಶದಾದ್ಯಂತ ಆಚರಿಸಲ್ಪಡುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ ಗಣೇಶ ಚತುರ್ಥಿ ಗೌರಿಹಬ್ಬದ ಮಾರನೇ ದಿನ ಅಥವಾ ಕೆಲವೊಮ್ಮೆ ಗೌರಿಹಬ್ಬದ ದಿನವೇ ಬರುವ ಹಬ್ಬವಾಗಿದೆ, ಗೌರಿಹಬ್ಬವನ್ನು ಎಲ್ಲರೂ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಈ ಹಿನ್ನೆಲೆಯಲ್ಲಿಯೇ 'ಗಣಪನಿಲ್ಲದ ಗ್ರಾಮವಿಲ್ಲ' ಎಂಬ ಗಾದೆ ಪ್ರಸಿದ್ಧವಾಗಿದೆ.

ಗಣೇಶನು ಶಿವನ ಗಣಗಳ ಅಧಿಪತಿ, ಗೌರಿದೇವಿಯ ಪ್ರಿಯಪುತ್ರ, ವಿಘ್ನ ಪರಿಹಾರಕನಾದ ದೇವರು ಎಲ್ಲ ಕರ್ಮಗಳಲ್ಲೂ (ಕಾರ್ಯಗಳಲ್ಲಿಯು) ಮೊಟ್ಟಮೊದಲು ಪೂಜಿಸಲ್ಪಡುವ ಸ್ವಾಮಿ. ಗಣೇಶನನ್ನು ಕುರಿತು ಕೃಷಿಕರಾದ ಸಾದರು ಹಲವು ವಿಶಿಷ್ಟ ಕಲ್ಪನೆಯನ್ನು ಹೊಂದಿದ್ದಾರೆ. ಆನೆಗಳ ಹಿಂಡು ತಮ್ಮ ಹೊಲ-ಗದ್ದೆಗಳಿಗೆ ನುಗ್ಗಿ ಹಾವಳಿ ಮಾಡುತ್ತಿದ್ದುದನ್ನು ಕಂಡು ಆನೆಮುಖದ ಒಂದು ದೇವರನ್ನು ಕಲ್ಪಿಸಿಕೊಂಡು ಆತನನ್ನು ಪೂಜಿಸತೊಡಗಿದರು. ಅವನೇ ಗಜಾನನ.

ಇನ್ನು ಗಣಪತಿ ಎಂಬುದು ಒಂದು ಅಭಿಪ್ರಾಯ. ಅವನು ಧಾನ್ಯಗಳ ದೇವರು. ಅದಕ್ಕೆ ಅವನಿಗೆ ಧಾನ್ಯದ ತೊಂಬೆಗಳಂತಿರುವ ದೊಡ್ಡ ಹೊಟ್ಟೆ ಇರುವುದು. ಧಾನ್ಯ ಇರುವ ಜಾಗದಲ್ಲಿ ಅವನ್ನು ಕಡಿಯುವ ಇಲಿಗಳೂ ಇರುತ್ತವೆ. ಅದಕ್ಕೆ ಅವನಿಗೆ ಇಲಿಯು ವಾಹನವಾಗಿ ಕಲ್ಪಿತವಾಯಿತು. ಹಾವು ಇಲಿಯನ್ನು ತಿಂದುಹಾಕುತ್ತದೆ. ತೊಂಬೆಯನ್ನು ಕಟ್ಟುವ ಹಗ್ಗದಂತೆಯು ಇದೆ. ಆದ್ದರಿಂದ ಅವನ ಹೊಟ್ಟೆಯಲ್ಲಿ ಹಾವು ಕಟ್ಟಲ್ಪಟ್ಟಿರುವ ಭಾವನೆ ಬೆಳೆಯಿತು.

ವಿನಾಯಕ ವ್ರತದಲ್ಲಿ ಮೊದಲು ಸಗಣಿಯ ಚಿಕ್ಕಗೋಪುರವೊಂದನ್ನು ಮಾಡಿ ಅದಕ್ಕೆ ಪೂಜೆ ಸಲ್ಲಿಸುವ ರೂಢಿ ಇದೆ. ಈ ಗೋಪುರದ ಆಕಾರದ ಗಣೇಶನನ್ನು 'ಪಿಳ್ಳೇರಾಯ' ಎಂದು ಕರೆಯುತ್ತಾರೆ. ಪಿಳ್ಳೇರಾಯನಿಗೆ ಗರಿಕೆಯಿಂದ ಪೂಜೆಸಲ್ಲಿಸಲಾಗುತ್ತದೆ.

ಗಣೇಶನನ್ನು ಪ್ರಕೃತಿಯ ರೂಪವಾದ ಹಸಿಯ ಮಣ್ಣಿನಿಂದ ನಿರ್ಮಿಸಿ ಪ್ರಕೃತಿಯ ರೂಪವಾದ ನೀರಿನಲ್ಲಿ ವಿಸರ್ಜನೆ ಮಾಡುವ ಪದ್ಧತಿಯನ್ನು ನೋಡಿದರೆ ಗಣೇಶನು ಪ್ರಕೃತಿ ಉಪಾಸಕರಾದ ದ್ರಾವಿಡರ ಕಲ್ಪನೆ ಎಂಬುದು ಸ್ಪಷ್ಟವಾಗುತ್ತದೆ.

ಇನ್ನು ಗಣೇಶನಿಗೆ ಆನೆಯ ಮುಖ ಮತ್ತು ಮನುಷ್ಯನ ದೇಹವಿದೆ. ಅವುಗಳಲ್ಲಿ ಮುಖದ ಭಾಗವು ಪ್ರಕೃತಿಯ ಪೂಜಕರಾದ ದ್ರಾವಿಡ ಸಂಸ್ಕೃತಿಯ ಭಾಗ. ದೇಹದ ಉಳಿದ ಭಾಗವು ಮನುಷ್ಯಾಕಾರದ ದೇವತೆಗಳನ್ನು ಜಪಿಸುತ್ತಿದ್ದ ಆರ್ಯ ಸಂಸ್ಕೃತಿಯ ಪ್ರತೀಕ. ಆರ್ಯ-ದ್ರಾವಿಡ ಸಂಸ್ಕೃತಿಗಳ ಸಂಗಮವೇ ಗಣೇಶನೆಂಬುದನ್ನು ಗಣೇಶ ವಿಗ್ರಹವೇ ಸಾರುತ್ತದೆ.

ಇನ್ನು ಗೌರಿಹಬ್ಬದಂದು ಒಬ್ಬಟ್ಟು ವಿಶೇಷ ಅಡುಗೆಯಾದರೆ ಗಣೇಶ ಹಬ್ಬದಂದು ಕಡುಬು ವಿಶೇಷ ಅಡುಗೆಯಾಗಿರುತ್ತದೆ. ಬಹುತೇಕ ಎಲ್ಲ ಕಡೆಗಳಲ್ಲಿ ಗಣೇಶನನ್ನಿಟ್ಟು ವೈವಿಧ್ಯಮಯ

ಅಲಂಕಾರವನ್ನು ಮಾಡುತ್ತಾರೆ. ತಮಗಿಷ್ಟ ಬಂದಷ್ಟು ದಿನ ಗಣೇಶನನ್ನು ಅರ್ಚಿಸಿ-ಪೂಜಿಸಿ ನಂತರ ನೀರಿನಲ್ಲಿ ಬಿಡಲಾಗುತ್ತದೆ.

ಒಟ್ಟಾರೆ ಯಾವುದೇ ಜಾತಿ-ಮತ, ಭೇದ-ಭಾವವಿಲ್ಲದೇ ಎಲ್ಲರೂ ಸಡಗರ-ಸಂಭ್ರಮದಿಂದ ಒಟ್ಟಿಗೆ ಸೇರಿ ಆಚರಿಸುವ ಪ್ರಮುಖ ಹಬ್ಬ ಇದಾಗಿದೆ.

ವಿಜಯದಶಮಿ:-

ಸಾದರ ಜಾತಿಯಲ್ಲು ಆಚರಿಸುವ ಹಬ್ಬ-ಹರಿದಿನಗಳ ಮಾಲೆಯಲ್ಲಿ ಅತ್ಯಂತ ಮುಖ್ಯವಾದದ್ದು, ನಾಡಹಬ್ಬವಾಗಿರುವಂತಹದ್ದು ವಿಜಯದಶಮಿ. ಸಾದರು ಆ ದಿನ ಗ್ರಾಮದ ನರಸಿಂಹಸ್ವಾಮಿ ದೇವರನ್ನು ಮೆರವಣಿಗೆಯಲ್ಲಿ ಊರಿನ ಹೊರಭಾಗಕ್ಕೆ ತೆಗೆದುಕೊಂಡು ಬಂದು ಬಾಳೆಗಿಡವನ್ನು ಒಂದೇ ಏಟಿಗೆ ಕತ್ತರಿಸಿ ಅದಕ್ಕೂ, ದೇವರಿಗೂ ಪೂಜೆ ಸಲ್ಲಿಸುತ್ತಾರೆ.

ಆಯುಧಪೂಜೆಯಂದು ತಾವು ಉಪಯೋಗಿಸುವ ಎಲ್ಲ ಕೃಷಿ ಸಲಕರಣೆಗಳನ್ನು ಇಟ್ಟು ಅವುಗಳಿಗೆ ಪೂಜೆ ಸಲ್ಲಿಸುತ್ತಾರೆ. ತಮ್ಮ ದಿನನಿತ್ಯದಲ್ಲಿ ಕೃಷಿ ಕಾರ್ಯದಲ್ಲಿ ನೆರವಾಗುವ ನೇಗಿಲು, ಕುಂಟೆ, ಹಲುವೆ, ಮಚ್ಚು, ಗುದ್ದಲಿ, ಪಿಕಾಸಿ, ಹಾರೆಕೋಲು, ಭರ್ಜಿ, ಈಟಿ, ಕುಡುಗೋಲು, ಕಳೆಕುಡ್ಲು ಇತ್ಯಾದಿ ಆಯುಧಗಳನ್ನು-ಸಲಕರಣೆಗಳನ್ನು ತೊಳೆದು, ಬೊಟ್ಟಿಟ್ಟು, ಹೂವಿಟ್ಟು ಪೂಜಿಸಲಾಗುತ್ತದೆ. ಪೂಜಿಸಿದ ಈ ಆಯುಧಗಳನ್ನು ಹಬ್ಬದಂದು ಕೆಲಸಕ್ಕೆ ಬಳಸುವುದಿಲ್ಲ. ಹೀಗೆ ಸರಳ ಆಚರಣೆಯ ಹಬ್ಬವಾದರೂ ಸಡಗರವಂತೂ ಇದ್ದೇ ಇರುತ್ತದೆ.

ಪಿತೃಪಕ್ಷ:-

ಈ ಹಬ್ಬವನ್ನು ಮಹಾಲಯ ಅಮಾವಾಸ್ಯೆಯ ನಂತರ ಆಯುಧ ಪೂಜೆಯವರೆಗೂ ತಮ್ಮ ಅನುಕೂಲಕ್ಕೆ ತಕ್ಕದಿನದಂದು ಆಚರಿಸುತ್ತಾರೆ. ಮರಣಹೊಂದಿರುವ ಹಿರಿಯರ ಆತ್ಮಗಳನ್ನು ಪೂಜೆಮಾಡುವುದರಿಂದ, ಸಂತೃಸುವುದರಿಂದ ಯಾವ ತೊಂದರೆಗಳೂ ಬರುವುದಿಲ್ಲ ಎಂಬ ಕಲ್ಪನೆ ಇವರದ್ದಾಗಿದೆ. ಈ ಹಬ್ಬದಂದು ಮರಣಹೊಂದಿರುವ ತಮ್ಮ ಹಿರಿಯರ ಫೋಟೋವನ್ನಿಟ್ಟು ಅದರ ಮುಂದೆ ಹೊಂಬಾಳೆಯಿಂದ ಕಳಸವನ್ನು ಹೂಡಿ ಬಾಳೆಯ ಅಗ್ರದೆಲೆಯ ಮೇಲೆ ಅಕ್ಕಿಯನ್ನು ಹಾಕಿ ಅದರ ಮೇಲೆ ಕಳಸವನ್ನಿಡಲಾಗುತ್ತದೆ.

ಕಳಸದ ಮುಂದೆ ಆ ಹಿರಿಯರು ಬಳಸುತ್ತಿದ್ದ ನಮೂನೆಯ ಹೊಸವಸ್ತ್ರಗಳನ್ನು ಅವರಿಗೆ ಇಷ್ಟವಾದ ತಿಂಡಿ-ತಿನಿಸುಗಳು, ಎಲೆ-ಅಡಿಕೆಯನ್ನಿಟ್ಟು ಕಾಯಿ, ಕಡ್ಡಿ, ಕರ್ಪೂರದಿಂದ ಪೂಜಿಸಿ ಮನೆಮಂದಿ ಎಲ್ಲರೂ ಕಾಯಿ ಹೊಡೆದು ದೂಪ ಹಾಕಿ ಕೈಮುಗಿಯುತ್ತಾರೆ. ಮನೆಯಲ್ಲಿ ಹಿರಿಯರಿಗೆ ಇಷ್ಟವಾದ ಅಡುಗೆಯನ್ನು ಮಾಡಿ ಎಲ್ಲವನ್ನು ಎಡೆಹಾಕಿ ತದನಂತರ ಎಲ್ಲರೂ ಊಟಮಾಡುತ್ತಾರೆ.

[illegible]

[illegible]

[illegible]

[illegible]

[illegible]

[illegible]

ನಂತರ ಮಾರನೇ ದಿನ ಕಳಸದ ಅಡಿಯಲ್ಲಿ ಹಾಕಿರುವ ಅಕ್ಕಿಯಿಂದ ಹುಗ್ಗಿ-ಅನ್ನ ಮಾಡಿ ದೇವರಿಗೆ ನೈವೇಧ್ಯವಾಗಿ ಅರ್ಪಿಸಿ ನಂತರ ತಾವು ಸೇವಿಸುತ್ತಾರೆ.

ದೀಪಾವಳಿ:-

ನಾಡಿನ ಎಲ್ಲ ಭಾಗಗಳಲ್ಲಿಯೂ ಎಲ್ಲ ವರ್ಗಗಳ ಜನರೂ ಅತ್ಯಂತ ಸಂತೋಷ, ಸಂಭ್ರಮ, ಸಡಗರಗಳಿಂದ ಆಚರಿಸುವ ಹಬ್ಬವೆಂದರೆ ದೀಪಾವಳಿ. ಮನೆಯ ನಾನಾಭಾಗಗಳಲ್ಲಿ ಮಾತ್ರವಲ್ಲದೆ ದೇವಾಲಯ, ಆಶ್ರಮ, ಮಠ, ನದಿತೀರ, ಸಮುದ್ರತೀರ, ಚೌಕಗಳಲ್ಲಿಯೂ ದೀಪಗಳು ಹಚ್ಚಲ್ಪಡುತ್ತವೆ. ವಿಶಿಷ್ಟವಾದ ಆಕಾಶದೀಪವು ಹಚ್ಚಲ್ಪಡುತ್ತದೆ. ಎಣ್ಣೆ-ತುಪ್ಪಗಳ ದೀಪಗಳ ಪ್ರಕಾಶ ಮಾತ್ರವಲ್ಲದೆ, ಮದ್ದಿನ ಪಟಾಕಿ, ಬಾಣ-ಬಿರುಸುಗಳ ಪ್ರಕಾಶವೂ ಹರಡುತ್ತದೆ. ಹೀಗೆ ಎಲ್ಲ ರೀತಿಗಳಲ್ಲಿಯೂ ದೀಪಮಯವಾಗಿರುವ ಹಬ್ಬವಿದಾಗಿರುವುದರಿಂದ 'ದೀಪಾವಳಿ' ಎಂಬ ಹೆಸರು ಈ ಹಬ್ಬಕ್ಕೆ ಪ್ರಾಪ್ತವಾಗಿದೆ.

ದೀಪಾವಳಿಯಂದು ದೇವರ ಪೂಜೆಯೊಂದಿಗೆ ಹಸು-ಎತ್ತುಗಳ ಮೈತೊಳೆದು ಅವುಗಳನ್ನು ಅಲಂಕರಿಸಿ ಪೂಜಿಸಿ ಅವುಗಳಿಗೆ ಒಳ್ಳೆಯ ಆಹಾರವನ್ನು ಕೊಡಲಾಗುತ್ತದೆ.

ದೀಪಾವಳಿಯಂದು ಶಿವನು ಪಾವರ್ತಿಯೊಡನೆ ಪಗಡೆಯಾಟವಾಡಿದನು. ಆದ್ದರಿಂದ ಬಹುತೇಕರು ಹಬ್ಬದಂದು ಚೌಕಾಬಾರ, ಪಗಡೆಯನ್ನು ಸಹ ಆಡುತ್ತಾರೆ. ಅಂದು ಗೆದ್ದವರು ವರ್ಷಪೂರ್ತಿ ಜಯಗಳಿಸುತ್ತಾರೆ ಎಂಬ ನಂಬಿಕೆಯು ಇದೆ.

ಸಾದರು ಬೆಳಕಿನ ಹಬ್ಬವೆಂದೇ ಪ್ರಸಿದ್ಧಿಯಾಗಿರುವ ದೀಪಾವಳಿಯಂದು ತಮ್ಮ ಮನೆಯ ಎಲ್ಲ ಬಾಗಿಲುಗಳಿಗೆ ಜೇಡಿ ಮಣ್ಣಿನಿಂದ ತಯಾರಿಸಿದ ದೀಪಗಳನ್ನಿಟ್ಟು ಆ ದೀಪಗಳಿಗೆ ತಮ್ಮ ಹೊಲದಲ್ಲಿ ಬೆಳೆದ ಚೆಂಡು ಹೂ, ಹುಚ್ಚೆಳ್ಳು ಹೂ, ಚಿಂತಾಮಣಿ ಹೂ, ಅಣ್ಣೆ ಹೂಗಳನ್ನಿಟ್ಟು ಅಲಂಕರಿಸುತ್ತಾರೆ. ಹೊಸದಾಗಿ ಮದುವೆಯಾದ ಮಗಳು-ಅಳಿಯನನ್ನು ಹಬ್ಬಕ್ಕೆ ಆಹ್ವಾನಿಸಿ ಅವರಿಗೆ ಉಡುಗೊರೆಯನ್ನು ಕೊಡಲಾಗುತ್ತದೆ.

ಹಬ್ಬದೂಟಕ್ಕೆ ಸಿಹಿ ಅಡುಗೆ ಮಾಡುತ್ತಾರೆ. ದೀಪಾವಳಿಯು ಸರಳ ಆಚರಣೆ ಹಬ್ಬವಾದರೂ ಸಡಗರ-ಸಂಭ್ರಮದಿಂದ ಆಚರಿಸಲ್ಪಡುತ್ತದೆ.

ಸಂಕ್ರಾಂತಿ:-

ಸಂಕ್ರಾಂತಿ, ಮಕರ ಸಂಕ್ರಾಂತಿ, ಮಕರ ಸಂಕ್ರಮಣ, ಮಕರ ಸಂಕ್ರಮಯಾನ, ಉತ್ತರಾಯಣ ಪುಣ್ಯಕಾಲ ಎಂದು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಸಂಕ್ರಾಂತಿ ಸುಗ್ಗಿಯ ಹಬ್ಬವಾಗಿರುತ್ತದೆ. ಇಡೀ ವರ್ಷ ದುಡಿದು ಕಷ್ಟ ಪಟ್ಟು ಬೇಸಾಯ ಮಾಡಿ ತೆಗೆದ ಫಸಲು ಕಟಾವು ಮಾಡಿ ಸಂತಸ ಪಡುವ ಕಾಲವಿದು. ಕಣದಲ್ಲಿ ಭತ್ತ, ರಾಗಿಯ ಮೆದೆಗಳಿರುತ್ತವೆ, ರೈತನ ಪರಿಶ್ರಮದ,

ಪ್ರತಿಫಲದ ಫಸಲಿನ ಸುಗ್ಗಿಯನ್ನು ಪ್ರದರ್ಶಿಸುವ ವಿಶಿಷ್ಟತೆ ಎಲ್ಲ ಕಡೆ ಎದ್ದು ಕಾಣುತ್ತಿರುತ್ತದೆ. ಸಂಕ್ರಾಂತಿ ಎಲ್ಲರಿಗೂ ಸಂತಸ ತರುತ್ತದೆ. ಆದ್ದರಿಂದಲೇ 'ಸಂಕ್ರಾಂತಿ ಬಂದಿತು ನೆಮ್ಮದಿ ತಂದಿತು' ಎನ್ನುತ್ತಾರೆ ಹಿರಿಯರು.

ಎಳ್ಳಿನ ಹಬ್ಬವೆಂದೇ ಪ್ರಸಿದ್ಧವಾಗಿರುವ ಸಂಕ್ರಾಂತಿಯಂದು ಎಳ್ಳು-ಬೆಲ್ಲ, ಕಬ್ಬಿನ ಜೆಲ್ಲೆಯ ಚೂರು, ಸಕ್ಕರೆಯಿಂದ ಮಾಡಿದ ವಿಗ್ರಹಗಳನ್ನು ಹಂಚಲಾಗುತ್ತದೆ. ಎಳ್ಳು-ಬೆಲ್ಲಗಳನ್ನು ತಿಂದು ಮಧುರವಾದ ಮಾತುಗಳನ್ನೇ ಆಡಬೇಕು ಎಂದು ಜ್ಞಾಪಿಸಲು 'ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತಾಡು' ಎಂಬ ಲೋಕೋಕ್ತಿ ರೂಢಿಯಲ್ಲಿರುವುದನ್ನು ಗಮನಿಸಬಹುದು.

ಅಂದು ಗೋವುಗಳನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ಅವುಗಳಿಗೆ ಸ್ನಾನಮಾಡಿಸಿ, ಅವುಗಳ ಕೊಂಬುಗಳಿಗೆ ಬಣ್ಣ ಹಚ್ಚಿ ಅಲಂಕರಿಸಿ ಅವುಗಳಿಗೆ ಪ್ರಿಯವಾದ ಮೇವನ್ನು ಹಾಕಲಾಗುತ್ತದೆ, ಮತ್ತೆ ಕೆಲವೆಡೆಗಳಲ್ಲಿ ಕಿಚ್ಚುಹಾಯಿಸಲಾಗುತ್ತದೆ.

ಅಂದು ವಿಶೇಷ ಅಡುಗೆಯಾಗಿ ಗೆಣಸು, ಕಡಲೆಕಾಯಿ, ಅವರೆಕಾಯಿಯನ್ನು ಬೇಯಿಸಿ ದೇವರ ಪೂಜೆ ಮಾಡಿ, ಎಡೆಯಿಟ್ಟು ನಂತರ ಆ ಎಡೆಯನ್ನು ತಮ್ಮ ಮನೆಯ ದನಗಳಿಗೆ ಕೊಟ್ಟು ತದನಂತರ ಮನೆಯವರೆಲ್ಲರೂ ಸ್ವೀಕರಿಸುತ್ತಾರೆ.

ಉತ್ತರಾಯಣದಲ್ಲಿ ಮರಣಹೊಂದಿದವರಿಗೆ ಮುಕ್ತಿದೊರೆಯುತ್ತದೆ. ದಕ್ಷಿಣಾಯಣದಲ್ಲಿ ಮರಣಹೊಂದಿದವರಿಗೆ ಪುನರಾವೃತ್ತಿಯುಂಟಾಗುತ್ತದೆ ಎಂಬ ನಂಬಿಕೆಯು ಇವರಲ್ಲಿದೆ.

ಒಟ್ಟಾರೆ ಇದೊಂದು ಪುಣ್ಯಕಾಲ. ಅಂತೆಯೇ ಪರ್ವಕಾಲ. ಜೀವನದ ಬದಲಾವಣೆಯನ್ನು ಬಯಸುವ ಕಾಲವಿದು, ಎಳ್ಳು-ಬೆಲ್ಲವನ್ನು ಹಂಚುವ ಕಾಲ ಅಷ್ಟೇ ಅಲ್ಲದೇ ತ್ರಿಮೂರ್ತಿಗಳು ಒಂದಾಗಿ ಸೇರುವ ಸುಸಮಯವಿದು ಎಂಬ ನಂಬಿಕೆಯು ಇದೆ.

ಮಹಾಶಿವರಾತ್ರಿ:-

ಸಾದರು ಆಚರಿಸಲ್ಪಡುವ ಹಬ್ಬಹರಿದಿನಗಳಲ್ಲಿ ಅತ್ಯಂತ ಪ್ರಮುಖವಾದ ಹಬ್ಬವೆಂದರೆ ಮಹಾಶಿವರಾತ್ರಿ. 'ಶಿವನೇ' ಈ ಹಬ್ಬದ ಆರಾಧ್ಯದೈವ. ವರ್ಷದ ಪ್ರತಿ ಕೃಷ್ಣ ಪಕ್ಷದ ಚತುರ್ದಶಿಯು ಶಿವನಿಗೆ ಪ್ರಿಯವಾಗಿ 'ಶಿವರಾತ್ರಿ' ಎಂದು ಕರೆಯಲ್ಪಡುತ್ತದೆ. ಅದರಲ್ಲಿಯೂ ಮಾಘಮಾಸದ ಕೃಷ್ಣ ಪಕ್ಷದ ಚತುರ್ದಶಿಯು ಅತ್ಯಂತ ವಿಶೇಷವಾಗಿರುವುದರಿಂದ ಅದನ್ನು 'ಮಹಾಶಿವರಾತ್ರಿ' ಎಂದು ಕರೆಯಲಾಗುತ್ತದೆ. ಈ ದಿವಸದ ಆಚರಣೆಯಲ್ಲಿ ಉಪವಾಸವೂ ಒಂದು ಮುಖ್ಯವಾದ ಅಂಗವಾಗಿರುವುದರಿಂದ ಇದು 'ಉಪವಾಸದ ಹಬ್ಬ' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

ಸಾಮಾನ್ಯವಾಗಿ ಶಿವರಾತ್ರಿಯಂದು ಇಡೀ ರಾತ್ರಿ ಜಾಗರಣೆ ಇದ್ದು ಶಿವನನ್ನು ಆರಾಧಿಸಲಾಗುತ್ತದೆ. ಅಂದು ಸರ್ವಪಾಪಗಳು ಪರಿಹಾರವಾಗಲು ದಿನವಿಡೀ ಉಪವಾಸವಿದ್ದು ಜಾಗರಣೆಯನ್ನು ಮಾಡಿ ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸಿದರೆ ಎಲ್ಲಾ ಪಾಪಗಳು

ಪರಿಹಾರವಾಗುತ್ತದೆಂಬ ನಂಬಿಕೆ ಇದೆ. ಅಷ್ಟೇ ಅಲ್ಲದೇ ಶಿವರಾತ್ರಿಯಂದು ವ್ರತಾಚರಣೆಯನ್ನು ಮಾಡಿದರೆ ಇಡೀವರ್ಷದ ಪಾಪಗಳು ನಾಶಹೊಂದುತ್ತವೆ ಎಂಬ ನಂಬಿಕೆ ಸಾದರಲ್ಲಿದೆ.

ಶಿವರಾತ್ರಿಯಂದು ಆಚರಿಸುವ ಎರಡು ಮುಖ್ಯ ಆಚರಣೆಗಳೆಂದರೆ ಒಂದು ಉಪವಾಸ, ಮತ್ತೊಂದು ಜಾಗರಣೆ. 'ಸದಾಶಿವನಿಗೆ ಅದೇ ಧ್ಯಾನ' ಎಂಬಂತೆ ಅವನು ವಿಶೇಷವಾಗಿ ಧ್ಯಾನಪ್ರಿಯ. ಅಂತರಂಗದ ಪೂಜೆಯಲ್ಲಿ ಅವನಿಗೆ ಅತ್ಯಂತ ಪ್ರಿಯವಾದುದು ಆ ಪರಮಾತ್ಮನ ಧ್ಯಾನ. ಅದಕ್ಕೆ ಪೋಷಕವಾಗುವಂತೆ ಜಪ, ಕೀರ್ತನೆ, ಪೂಜೆ, ದಾನ, ಹೋಮ ಇತ್ಯಾದಿಗಳನ್ನು ಅಂದು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಮಾನಸಿಕ ಶುದ್ಧಿಗಾಗಿ ಉಪವಾಸ, ವಿಶೇಷವಾದ ಪೂಜೆಗಾಗಿ ರಾತ್ರಿಯ ಜಾಗರಣೆ ಇವುಗಳನ್ನು ಯಥಾಶಕ್ತಿ ಆಚರಿಸಲಾಗುತ್ತದೆ.

ರಾತ್ರಿ ಜಾಗರಣೆಯಲ್ಲಿ ಪೂಜೆಯ ಅಂಗವಾಗಿ ತ್ರಿಪುರಾಸುರ ಸಂಹಾರವೇ ಮುಂತಾದ ಶಿವನ ಮಹಾಮಹಿಮೆಯನ್ನು ಸಾರುವ ಪವಿತ್ರವಾದ ಕಥೆಗಳ ಶ್ರವಣ, ಕೀರ್ತನೆ, ಸಂಗೀತಗಳಿಂದಲೂ ಭಕ್ತಪ್ರಿಯನೂ, ನಾದಪ್ರಿಯನೂ ಆದ ಶಿವನ ತನ್ಮಯತೆಯನ್ನು ಸಾಧಿಸಬೇಕು ಎಂಬುದು ಹಿರಿಯರ ಅಭಿಪ್ರಾಯವಾಗಿದೆ.

ಇನ್ನು ಶಿವರಾತ್ರಿಯಂದು ವಿಶೇಷವಾಗಿ ತಂಬಿಟ್ಟನ್ನು ಮಾಡಲಾಗುತ್ತದೆ. ಅಕ್ಕಿ ತಂಬಿಟ್ಟು, ಜೋಳದ ತಂಬಿಟ್ಟು, ಕಡಲೆ ತಂಬಿಟ್ಟು ಹೀಗೆ ಹಲಬಗೆಯ ತಂಬಿಟ್ಟನ್ನು ಮಾಡಿ ದೇವರಿಗೆ ನೈವೇಧ್ಯ ಅರ್ಪಿಸಲಾಗುತ್ತದೆ. ಶಿವನಾಮ ಸ್ಮರಣೆಯಿಂದ ಬದುಕಿಗೆ ನೆಮ್ಮದಿ ಬಯಸಲಾಗುತ್ತದೆ.

ಕಾರಹಬ್ಬ:–

ಕೃಷಿಯನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಹೊಂದಿರುವ ಸಾದರು ಕಾರುಣ್ಣಿಮೆ ಅಥವಾ ಕಾರಹಬ್ಬವನ್ನು ವಿಶೇಷವಾಗಿ ದನ–ಕರುಗಳಿಗೆ ಸಂಬಂಧಿಸಿದಂತೆ ಆಚರಿಸಲಾಗುತ್ತದೆ. ಅಂದು ಪ್ರಾತಃಕಾಲದಲ್ಲಿಯೇ ಸ್ನಾನಮಾಡಿ ಮಡಿಯುಟ್ಟು ದೇವರಪೂಜೆ ಮುಗಿಸಿ ತಮ್ಮ ಕೃಷಿಕಾರ್ಯದಲ್ಲಿ ನೆರವಾಗುವ ದನ–ಕರುಗಳಿಗೆ ಮೈತೊಳೆದು, ಕೋಡುಗಳನ್ನು ನುಣುಪಾಗಿ ಎರೆದು ಅವುಗಳಿಗೆ ನೀಲಿ, ಕೆಂಪು, ಹಸಿರು ಬಣ್ಣವನ್ನು ಬಳಿದು, ಹಣೆಗೆ ಕುಂಕುಮವನ್ನಿಟ್ಟು ಕೋಡಿಗೆ ಕುಚ್ಚನ್ನು ಕಟ್ಟಿ, ಕೊರಳಿಗೆ ಗೆಜ್ಜೆಯನ್ನು ಕಟ್ಟಿ ವಿಶೇಷವಾಗಿ ಸಿಂಗರಿಸುತ್ತಾರೆ. ನಂತರ ಕೃಷಿಸಾಮಾಗ್ರಿಗಳನ್ನೆಲ್ಲ ತೊಳೆದು ಅವಕ್ಕೆ ವಿಭೂತಿ ಮತ್ತು ಕುಂಕುಮವನ್ನು ಬೆರೆಸಿ ತಯಾರಿಸಿದ ಲೇಪನದಿಂದ ಬೊಟ್ಟನ್ನಿಟ್ಟು ಪೂಜಿಸಿ; ನಂತರ ದನ–ಕರುಗಳಿಗೆ ಆರತಿಯನ್ನು ಬೆಳಗಿ ನಂತರ ಅವುಗಳಿಗೆ ತಿನ್ನಲು ಹಲಸಿನ ಹಣ್ಣನ್ನು ಎಡೆಯಾಗಿ ಕೊಡಲಾಗುತ್ತದೆ. ಈ ಹಬ್ಬವನ್ನು ಕೃಷಿ ಸಂಬಂಧಿ ಆಚರಣೆಯನ್ನಾಗಿ ಆಚರಿಸಲಾಗುತ್ತದೆ.

ಮಾರಿಹಬ್ಬ:–

ಸಾದರು ಆಚರಿಸುವ ಊರಹಬ್ಬಗಳಲ್ಲಿ ಮಾರಿಹಬ್ಬ ಪ್ರಮುಖವಾದುದು. ಮಾರಿದೇವತೆಯ ಕಲ್ಪನೆಯೇ ವಿಶಿಷ್ಟವಾದುದು. ಮಾರಮ್ಮನ ಪುರಾಣದಲ್ಲಿ ಕಂಡು ಬರುವ ಪ್ರಮುಖ ಅಂಶವೆಂದರೆ

ಶ್ರೀಗೌರಿಯು (ಮಾರಿಕಾಂಬ) ಬ್ರಹ್ಮನ ಏಕಮಾತ್ರ ಪುತ್ರಿಯಾಗಿದ್ದು ಬ್ರಾಹ್ಮಣ ಜನಾಂಗದ ಹೆಣ್ಣುಮಗಳು. ಆದರೆ ಆಕೆಯು ವಿಷ್ಣುವಿನ ತಂತ್ರಗಳಿಂದ, ವಿಧಿಯ ದೆಸೆಯಿಂದ ಮದುವೆಯಾಗುವುದು ದಲಿತ ಜನಾಂಗದ ಕದಿರನನ್ನು ಆತ ದಲಿತನೆಂಬುದು ಗೊತ್ತಾದ ತರುವಾಯ ಅವಳು ಅವನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ.

ಸಾದರಿರುವ ಊರುಗಳಲ್ಲಿ ಊರಗೌಡಿಕೆಯು ಇವರದ್ದೇ ಆಗಿರುತ್ತದೆ. ಆದ್ದರಿಂದ ಗ್ರಾಮದೇವತೆಯ ಆಚರಣೆಯಲ್ಲಿ ಇವರ ಪಾತ್ರ ಬಹುಮುಖ್ಯವಾದದ್ದಾಗಿರುತ್ತದೆ. ಮಾರಿ ಪರಿಸೆ ಮಾಡುವ ಮುನ್ನ ಗೌಡನ ನೇತೃತ್ವದಲ್ಲಿ ಮನೆಗೊಂದು ಆಳಿನಂತೆ ಚಾವಾಡಿಗೆ ಸಭೆ ಕರೆಯುತ್ತಾರೆ. ಊರಿನ ಎಲ್ಲ ಮುಖಂಡರ ಸಮ್ಮುಖದಲ್ಲಿ ಎಲ್ಲರ ಸಮ್ಮತಿಯ ಒಂದು ಒಳ್ಳೆಯ ದಿನವನ್ನು ಗೌಡ ಸೂಚಿಸುತ್ತಾನೆ. ಹಬ್ಬವಿನ್ನು ಹನ್ನೆರಡು ದಿನವಿರುವ ಮುನ್ನ ಇಂಥ ದಿನದಂದು ಮಾರಿಜಾತ್ರೆಯಿದೆ ಎಂದು ಸಾರಲಾಗುತ್ತದೆ. ಸಾರಿಗೆ ಸಿಕ್ಕ (ಸಾರುವಾಗ ಊರಿನಲ್ಲಿ ಇದ್ದ) ಯಾವುದೇ ನರ ಪ್ರಾಣಿಯು ಹಬ್ಬಕ್ಕೆ ತಪ್ಪಿಸಿಕೊಳ್ಳದಂತೆ ಪಾಲ್ಗೊಳ್ಳಬೇಕು, ಇಲ್ಲವಾದರೆ ಅಂತಹವರಿಗೆ ತೊಂದರೆಯಾಗುವುದೆಂಬ ನಂಬಿಕೆ ಹಲವರದ್ದು.

ಜಾತ್ರೆಯ ಪ್ರಾರಂಭದಲ್ಲಿಯು ಗೌಡನ ಪಾತ್ರ ಬಹುಮುಖ್ಯವಾದದ್ದಾಗಿರುತ್ತದೆ. ಅಂದು ಊರಗೌಡನು ದಿನವಿಡೀ ಉಪವಾಸವಿದ್ದು ಹೊಸ ಮಡಕೆಯಲ್ಲಿ ಅಕ್ಕಿ-ಬೇಳೆ, ನೀರನ್ನು ಸಮ ಪ್ರಮಾಣದಲ್ಲಿ ಹಾಕಿ ಮಡಕೆಯ ಬಾಯನ್ನು ಮುಚ್ಚಿ ಬೇಯಿಸಬೇಕು, ಒಮ್ಮೆಯೂ ಸಹ ಮಡಕೆಯನ್ನು ತೆರೆದು ನೋಡದೆ, ತಿರುವದೇ ಅನ್ನ ಮಾಡಬೇಕೆಂಬ ನಿಯಮವೂ ಇದೆ. ಹೀಗೆ ತಯಾರಿಸಿದ ಅನ್ನದ ಮಡಕೆಯನ್ನು 'ಬಾನ' ಎಂದು ಕರೆಯಲಾಗುತ್ತದೆ. ಉಪವಾಸದಲ್ಲಿರುವ ಊರಗೌಡನು ಬಾನವನ್ನು ತನ್ನ ತಲೆಯ ಮೇಲೆ ಹೊತ್ತು ತಂದು ಮಾರಮ್ಮ ದೇವರಿಗೆ ನೈವೇಧ್ಯವನ್ನು ಅರ್ಪಿಸಲಾಗುತ್ತದೆ. ಆ ನಂತರ ಕ್ರಮವಾಗಿ ಇತರ ಎಲ್ಲಾ ಆಚರಣೆಗಳು ಪ್ರಾರಂಭವಾಗುತ್ತವೆ. ಕೋಣವನ್ನು ಕಡಿದು ಹೊಲಕ್ಕೆ, 'ಸರಗ ಅಥವಾ ಚರಗ ಚೆಲ್ಲುವಾಗ' ಈ ಬಾನದಲ್ಲಿನ ಅನ್ನವನ್ನು ಬಳಸಲಾಗುತ್ತದೆ. ತದನಂತರ ಗ್ರಾಮದ ಎಲ್ಲರೂ ಮಾರಿದೇವತೆಗೆ ತಂಬಿಟ್ಟಿಗೆ ಎಕ್ಕದ ಹೂವನ್ನು ಅಲಂಕರಿಸಿ ಆರತಿ ಬೆಳಗುತ್ತಾರೆ. ಹೀಗೆ ಗ್ರಾಮದೇವತೆಯ ಹಬ್ಬದ ಆಚರಣೆಯ ಸಮಯದಲ್ಲಿ ಸಾದರು ಪ್ರಮುಖ ಪಾತ್ರ ವಹಿಸುವುದನ್ನು ಗಮನಿಸಬಹುದು.

ಇತ್ತೀಚಿನ ದಿನಗಳಲ್ಲಿ ಸಾದರಲ್ಲಿ ಶನಿಮಹಾತ್ಮ ಪೂಜೆ, ಕಾರ್ತೀಕ ಮಾಸದಲ್ಲಿ ವರ್ಷಕ್ಕೊಮ್ಮೆ ಕಥಾಶ್ರವಣ ಮಾಡಿಸಲಾಗುತ್ತದೆ. ಮತ್ತು ಸತ್ಯನಾರಾಯಣ ಪೂಜೆಯನ್ನು ಸಹ ಆಚರಿಸಲಾಗುತ್ತದೆ. ಒಟ್ಟಾರೆ ದಿನನಿತ್ಯದ ಬದುಕಿನೊಂದಿಗೆ ಹಲವು ಹಬ್ಬ-ಹರಿದಿನಗಳನ್ನು ಆಚರಿಸುತ್ತಾ ನೆಮ್ಮದಿಯ ಬದುಕು ಸಾಗಿಸುವ ನಿಟ್ಟಿನಲ್ಲಿ ಅಂದಿನಿಂದ ಇಂದಿನವರೆಗೂ ಹೆಜ್ಜೆ ಹಾಕುತ್ತಾ ಬಂದಿದ್ದಾರೆ.

೪.೪: ಸಾವು:-

ಹುಟ್ಟು ಅನಿಶ್ಚಿತವಾದರೆ, ಸಾವು ಖಚಿತ ಹಾಗೆಯೇ ಹುಟ್ಟು ಮನುಷ್ಯನಿಗೆ ಎಷ್ಟು ಸಹಜವೋ ಸಾವು ಅಷ್ಟೇ ಸಹಜವೂ, ಅನಿವಾರ್ಯವೂ ಆದದ್ದಾಗಿದೆ. ಇದು ಸರ್ವರಿಗೂ ತಿಳಿದ ಸಾರ್ವಕಾಲಿಕ ಸತ್ಯವೂ ಹೌದು. ಸಾವೆಂಬುದು ಎಂತವರಿಗೂ ಭಯ, ಆತಂಕ, ನಡುಕ, ಹುಟ್ಟಿಸುವಂತಹದ್ದಾಗಿದೆ. ಸಾದರಲ್ಲಿ ಯಾವುದೇ ಒಬ್ಬ ವ್ಯಕ್ತಿ ಮರಣಹೊಂದಿದಾಗ ತಮ್ಮೊಂದಿಗೆ ಬಾಳಿ-ಬದುಕಿದ ಆ ವ್ಯಕ್ತಿಯನ್ನು ಗೌರವದಿಂದ ಕಳುಹಿಸಿಕೊಡುವ ಆಚರಣೆ-ಸಂಪ್ರದಾಯ ಇವರಲ್ಲಿದೆ. ಇದನ್ನು ಮಣ್ಣುಮಾಡುವುದು ಎಂದು ಕರೆಯುತ್ತಾರೆ.

ಸಾವಿಗೆ ಸಂಬಂಧಿಸಿದಂತೆ ಹಲವು ಕಲ್ಪನೆಗಳು ಇವರಲ್ಲಿದೆ. ತಮ್ಮ ಕನಸಿನಲ್ಲಿ ಹಣ ಕಂಡರೆ, ನೀರು ಕಂಡರೆ ಏನೋ ಕೆಡುಕಾಗುತ್ತದೆ ಎಂಬ ಭಾವನೆ ಇವರದು. ಇನ್ನು ಮನೆಯ ಮೇಲೆ ಗೂಬೆ ಕೂತು ಕೂಗಿದರೆ ಮನೆಯ ಒಳಗೆ ಕಾಗೆ ಒಕ್ಕರೆ ಯಾರದೋ ಸಾವಾಗುವುದೆಂದು ಭಯಪಡುತ್ತಾರೆ. ನಾಯಿ ಒಂದೇ ಸಮನೆ ಊಳಿಡುವುದು ಸಾವಿನ ಸೂಚನೆ ಎಂದು ನಂಬುತ್ತಾರೆ. ಯಾವುದಾದರೊಬ್ಬ ವ್ಯಕ್ತಿ ಖಾಯಿಲೆಯಿಂದ ತೀರಾ ಜರ್ಜರಿತನಾದರೆ ಆ ವಿಚಾರವು ಎಲ್ಲರಲ್ಲೂ ಭಯ ಹುಟ್ಟಿಸುತ್ತದೆ. ಸಾದರಲ್ಲಿ ಆಚರಿಸುವ ಕೊನೆಯ ಸಂಸ್ಕಾರ ಅಂತ್ಯಸಂಸ್ಕಾರ. ಇದು ಇತರೆ ಜಾತಿಗಳಿಗಿಂತ ಹಲವು ಭಿನ್ನತೆಗಳಿಂದ ಕೂಡಿದೆ.

ಸಾವು ಸನಿಹವಾದಂತೆ ಆ ಮನೆಯಲ್ಲಿ ಶೋಕದ ವಾತಾವರಣ ಮಡುಗಟ್ಟುತ್ತದೆ. ಸಂಬಂಧಿಕರು, ಬಂಧು-ಬಾಂಧವರೆಲ್ಲರೂ ಬಂದು ಸೇರುತ್ತಾರೆ. ಸಾವಿಗಾಗಿ ಪರಿತಪಿಸುವ ಜೀವ ಯಾರದೋ ನೋಟಕ್ಕಾಗಿ, ಮಾತಿಗಾಗಿ ಕಾದಿದೆ ಎಂಬ ನಂಬಿಕೆ. ತಂದೆಗಾದರೆ ಹಿರಿಯ ಮಗನನ್ನು ನೋಡುವ ಆಸೆ, ತಾಯಿಗಾದರೆ ಕಿರಿಯ ಮಗನನ್ನು ನೋಡುವಾಸೆ. ಬಂದಂತಹ ಸಂಬಂಧಿಕರೆಲ್ಲರೂ, ಮಕ್ಕಳು, ಸೋದರ-ಸೋದರಿಯರು ನಲುಗಿದ ಜೀವಕ್ಕೆ ಗುಟುಕು ಹಾಲು-ನೀರು ಬಿಡುವುದು, ಅನಂತರವೂ ಪ್ರಾಣ ಬಿಡುವುದು ತಡವಾದರೆ ಆ ವ್ಯಕ್ತಿ ಮೊದಲಿನಿಂದಲೂ ಜಿಪುಣನಾಗಿದ್ದು, ಹಣದ ಆಸೆ ಇದ್ದರೆ, ಹಳೆಯ ನಾಣ್ಯ ತೇದು ಬಾಯಿಗೆ ಬಿಡುವ ರೂಢಿಯು ಇದೆ. ಸಾವು ಸಂಭವಿಸಿದಾಗ ಮನೆಯ ಹಿರಿಯರು ಮೊದಲಿಗೆ ಕುಲದವರಿಗೆಲ್ಲ ಸುದ್ದಿಯನ್ನು ಮುಟ್ಟಿಸುತ್ತಾರೆ. ನಂತರ ಆಳುಗಳ ಮುಖಾಂತರ ನೆಂಟರಿಷ್ಟರಿಗೆ, ಸುದ್ದಿಯನ್ನು ಮುಟ್ಟಿಸುತ್ತಾರೆ.

ಸಾವು ಸಂಭವಿಸಿದ ಆಧಾರದ ಮೇಲೆ ಹೆಣವನ್ನು ಕಾಡಹೆಣ ಮತ್ತು ಊರಹೆಣ ಎಂದು ಕರೆಯಲಾಗುತ್ತದೆ. ವ್ಯಕ್ತಿಯು ಮನೆಯಲ್ಲಿ ಅಥವಾ ಊರಿನ ಒಳಗೆ ಸತ್ತರೆ ಅದನ್ನು ಊರಹೆಣವೆಂದು, ಆಸ್ಪತ್ರೆ, ಕೆರೆ, ಬಾವಿ, ತೋಟ, ಇತರೆಡೆ ಸತ್ತಾಗ ಕಾಡಹೆಣ ಎಂದು ಕರೆಯುತ್ತಾರೆ. ಕಾಡಹೆಣವನ್ನು ಯಾವುದೇ ಕಾರಣಕ್ಕೂ ಊರಿನ ಒಳಗೆ ತರುವುದಿಲ್ಲ. ಕಾರಣ ವ್ಯಕ್ತಿಯು ದೆವ್ವ-ಭೂತದ ಕಾಟದಿಂದಲೂ, ಅಂಟುರೋಗದಿಂದಲೂ ಅಥವಾ ಖಾಯಿಲೆಯಿಂದಲೋ ಮರಣಹೊಂದಿರಬಹುದು ಎಂಬ ಭಯದಿಂದ ಮತ್ತು ಊರಿನ ಇತರರಿಗೆ ಅಪಾಯ ಸಂಭವಿಸಬಹುದೆಂದು ಊರಿಗೆ ತರುತ್ತಿರಲಿಲ್ಲ.

ಇನ್ನು ವ್ಯಕ್ತಿಯು ಮರಣಹೊಂದಿದ ಬಳಿಕ ಹೆಣವನ್ನು ಚಾಪೆಯ ಮೇಲೆ ಮಲಗಿಸಿ ಕೈ-ಕಾಲುಗಳನ್ನು ಮಡಚಿ ತಲೆಯ ಹಿಂದೆ ದೀಪವನ್ನು ಹಚ್ಚಲಾಗುತ್ತದೆ. ಮನೆಯ ಮುಂದೆ ಹೊಗೆಯನ್ನು ಹಾಕಲಾಗುತ್ತದೆ. ಇದರಿಂದ ಇತರರಿಗೆ ಸಾವು ಸಂಭವಿಸಿದ ಸುದ್ದಿ ತಿಳಿಯುತ್ತದೆ ಎಂಬ ಅಭಿಪ್ರಾಯವಿದೆ.

ಹರಿಜನರು ತಮಟೆ, ಜಾಗಟೆಗಳನ್ನು ಬಾರಿಸುವರು. ವಾದ್ಯಗಳನ್ನು ಬಾರಿಸುತ್ತಾ ಸತ್ತವರ ಗುಣಗಾನ ಮಾಡುವರು. ಗುಣಗಾನ ಮಾಡುತ್ತಾ ಯಮಧರ್ಮರಾಯನು ಬಂದಾಗಿನ ಪರಿಸ್ಥಿತಿಯನ್ನು ಕುರಿತು ಸಾವಿನ ಅನಿವಾರ್ಯತೆಯನ್ನು ಕುರಿತು ಹಾಡುವರು.

"ಏಳುಕೊಪ್ಪರಿಗೇಲಿ ಕಾದಿದೆ ಬಿಸಿನೀರು

ಏಳುಕೊಪ್ಪರಿಗೇಲಿ ಕಾದಿದೆ ಬಿಸಿನೀರು

ತುಸುಮಾತ್ರ ತಡೆ ಎಂದೆನು.

ನೀನು-ನಿನ್ನ ನೀರಿನ ಋಣವು ತೀರಿತು

ನಡೆ-ನಡೆ ಎಂದಾನು

ಸಣ್ಣಕ್ಕಿ ಅನ್ನ ಬೆಣ್ಣೆ ಕಾಯಿಸಿದ ತುಪ್ಪ

ಉಂಡು ಬರುವೆ ತಡೆ-ತಡೆ ಎಂದರೆ

ತಂದಕ್ಕಿ ಅನ್ನವು ತೀರಿತು ನಡೆ ನಡೆ ಎಂದರೋ

ಕೂಸುಮಗು ತೊಟ್ಟಿಲು ಅಳುತಿದೆ-ತುಸುಮಾತ್ರ ತಡೆ ಎಂದರೆ

ನೀನು ನಿನ್ನವರ್ಯಾರು ನಡೆನಡೆ ಎಂದಾನು".

ಹೀಗೆ ಯಮರಾಯ ಬಂದಾಗ ಆತನ ಆಜ್ಞೆಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಅನ್ನ, ನೀರು, ನಮ್ಮವರ ಋಣ ತೀರಿದಾಗ ಭೂಮಿಯಲ್ಲಿ ಬದುಕುಳಿಯಲಾಗದು ಎಂಬ ವಿಚಾರವನ್ನು ಈ ಗೀತೆಯು ಧ್ವನಿಸುತ್ತದೆ.

ನೆಂಟರಿಷ್ಟರು ಬರುವುದರೊಳಗೆ ಶವಸಂಸ್ಕಾರಕ್ಕೆ ಬೇಕಾದ ಗುಂಡಿತೆಗೆಯುವುದು, ಚಟ್ಟಕಟ್ಟುವುದು ಮೊದಲಾದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ.

ಹೆಣದ ಮನೆ ಮಾಡುವುದು:-

ಸಾದರಲ್ಲಿ ಮರಣಹೊಂದಿದವರನ್ನು ಭೂಮಿಯಲ್ಲಿ ಹೂಳುತ್ತಾರೆ. ಸಾದರು ಹೆಣವನ್ನು ಹೂಳುವಾಗ ತಮ್ಮ-ತಮ್ಮ ಹೊಲಗದ್ದೆಗಳಲ್ಲೇ ಹೂಳುವುದು ರೂಢಿಯಲ್ಲಿದೆ. ಕೆಲವೊಮ್ಮೆ ಸ್ಮಶಾನದಲ್ಲಿಯೂ ಹೂಳುತ್ತಾರೆ. ಕೆಲವೊಮ್ಮೆ ಮರಣಹೊಂದಿದ ವ್ಯಕ್ತಿಯು ತಾನು ಬದುಕಿರುವಾಗಲೇ

ತಾನು ಸತ್ತನಂತರ ಇಂತ ಜಾಗದಲ್ಲಿ ಹೂಳಬೇಕೆಂದು ಹೇಳಿದ್ದರೆ ಅವರ ಆಸೆಯಂತೆ ಅಲ್ಲಿಯೇ ಹೂಳುತ್ತಾರೆ. ಇಲ್ಲವಾದರೆ ಎಲ್ಲರೂ ಸೇರಿ ಎಲ್ಲಿ ಹೂಳಬೇಕೆಂದು ನಿಶ್ಚಯಿಸಿ ಕುಲ ಬಾಂಧವರ ನೆರವಿನೊಂದಿಗೆ ಉತ್ತರ-ದಕ್ಷಿಣಕ್ಕೆ ಎದುರಾಗಿ ೬ ಅಡಿ ಉದ್ದ ೩ ಅಡಿ ಅಗಲದ ಆಳದ ಗುಂಡಿಯನ್ನು ತೆಗೆಯುತ್ತಾರೆ. ಆ ಗುಂಡಿಯ ಒಳಗೆ ದಕ್ಷಿಣ ದಿಕ್ಕಿಗೆ ಹೆಣದ ತಲೆಯನ್ನು ಇಡಲು ಒಂದು ಚಿಕ್ಕ ಕಿಂಡಿಯನ್ನು ಮಾಡುತ್ತಾರೆ. ಗುಂಡಿ ತೆಗೆಯಲು ಹೋದವರು ಯಾರೂ ಸಹ ಹೆಣವನ್ನು ಮಣ್ಣುಮಾಡುವವರೆಗೂ ಮರಳಿ ಮನೆಗೆ ಬರುವುದಿಲ್ಲ. ಅವರು ಗುಂಡಿ ತೆಗೆಯಲು ಬಳಸಿದ ಸಲಕರಣೆಗಳಾದ ಗುದ್ದಲಿ, ಪಿಕಾಸಿ, ಹಾರೆಕೋಲು ಮುಂತಾದವುಗಳನ್ನು ಕಾವು ಕಳಚಿ ಅಲ್ಲೇ ಸ್ವಲ್ಪದೂರದಲ್ಲೇ ಬಿಸಾಡಲಾಗಿರುತ್ತದೆ. ಹೀಗೆ ಒಂದು ಗುಂಪು ಗುಂಡಿ ತೆಗೆದರೆ ಮತ್ತೆ ಕೆಲವರು ಚಟ್ಟ ಕಟ್ಟುತ್ತಾರೆ.

<u>ಚಟ್ಟ ಕಟ್ಟುವುದು:-</u>

ಸಾವು ಸಂಭವಿಸಿದಾಗ ಕುಲಬಾಂಧವರು ಅವರವರ ಶಕ್ತಿಗನುಸಾರ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಚಟ್ಟವೆಂದರೆ ಹೆಣವನ್ನು ಗುಂಡಿಯವರೆಗೆ ಸಾಗಿಸುವ ಸಾಧನ. ಇದನ್ನು 'ಸಿದಿಗೆ' ಎಂದು ಸಹ ಕರೆಯಲಾಗುತ್ತದೆ. ಚಟ್ಟವನ್ನು ಕಟ್ಟಲು ಬಿದಿರು-ಹಸಿರು ತೆಂಗಿನಗರಿಯನ್ನು ಬಳಸಿ ಚಟ್ಟವನ್ನು ಕಟ್ಟುತ್ತಾರೆ. ನಂತರ ಹೆಣಕ್ಕೆ ಸ್ನಾನಮಾಡಿಸಿ ಶುಚಿಗೊಳಿಸಲಾಗುತ್ತದೆ. ನಂತರ ಬಿಳಿಯ ಹೊಸ ವಸ್ತ್ರವನ್ನು ಹೊದಿಸಿ ಚಟ್ಟದ ಮೇಲೆ ಮಲಗಿಸಲಾಗುತ್ತದೆ.

ಎಲೆ-ಅಡಿಕೆ ಸುಣ್ಣವನ್ನು ಹಾಕಿ ಕುಟ್ಟಿದ ತಾಂಬೂಲವನ್ನು ಬಾಯಿಯಲ್ಲಿ ಹಾಕಲಾಗುತ್ತದೆ. ಮತ್ತೆ ಕೆಲವರು ಅಕ್ಕಿಕಾಳನ್ನು ಹಾಕುತ್ತಾರೆ. ತದನಂತರ ಶವಪೂಜೆ ಪ್ರಾರಂಭವಾಗುತ್ತದೆ. ತೆಂಗಿನಕಾಯಿ ಒಡೆದು ಗಂಧಧ ಕಡ್ಡಿ ಹಚ್ಚಿ, ಕರ್ಪೂರವನ್ನು ಬೆಳಗಲಾಗುತ್ತದೆ. ಆ ಸಮಯದಲ್ಲಿ ರಕ್ತಸಂಬಂಧಿಗಳೆಲ್ಲರೂ ಪೂಜೆ ಮಾಡುತ್ತಾರೆ. ಹೆಣ್ಣುಮಗಳು ಸಾವನಪ್ಪಿದ್ದರೆ 'ಮುತ್ತೈದೆ ಸಾವು' ಎಂದು ತಲೆಗೆ ಹೂ ಮುಡಿಸಿ ಅರಿಶಿನ-ಕುಂಕುಮ ಹಚ್ಚುತ್ತಾರೆ. ಬಂಧು-ಬಾಂಧವರೆಲ್ಲರೂ ಪೂಜೆಸಲ್ಲಿಸಿದ ಬಳಿಕ ಶವಸಂಸ್ಕಾರಕ್ಕೆ ಕೊಂಡೊಯ್ಯುತ್ತಾರೆ.

<u>ಶವಸಂಸ್ಕಾರ:-</u>

ಚಟ್ಟದ ನಾಲ್ಕು ಮೂಲೆಗಳಲ್ಲಿಯೂ ಒಬ್ಬೊಬ್ಬರಂತೆ ನಾಲ್ಕು ಜನ ಶವವನ್ನು ಹೊತ್ತು ಗುಂಡಿಯ ಕಡೆಗೆ ಸಾಗುತ್ತಾರೆ. ಮದುವೆಯಾದ ಪುರುಷಮಾತ್ರ ಚಟ್ಟವನ್ನು ಹೊರಬೇಕು. ಮಹಿಳೆಯರು, ಬ್ರಹ್ಮಚಾರಿಗಳು ಚಟ್ಟವನ್ನು ಹೊರುವಂತಿಲ್ಲ. ಹೆಣಕ್ಕೆಂದು ಬೇಯಿಸಿದ ಹೆಣದ ಕೊನೆಯ ಆಹಾರವನ್ನು (ಕೂಳನ್ನು) ತಂದೆ ಸತ್ತರೆ ಹಿರಿಯ ಮಗ, ತಾಯಿ ಸತ್ತರೆ ಕಿರಿಯ ಮಗ ಹಿಡಿಯುವುದು ವಾಡಿಕೆ ಕೂಳನ್ನು ಮಹಿಳೆಯರು ಹಿಡಿಯುವಂತಿಲ್ಲ. ಒಂದು ವೇಳೆ ಹೆಂಡತಿ ಸತ್ತಾಗ ಮಕ್ಕಳಿಲ್ಲದಿದ್ದರೆ ಗಂಡನೇ ಹಿಡಿಯುವುದನ್ನು ಗಮನಿಸಬಹುದು.

ಹೆಣವನ್ನು ಹೊತ್ತು ಸಾಗುವಾಗ ದಾರಿಯುದ್ದಕ್ಕೂ ಹೆಣದ ಮೇಲೆ ಕಡಲೆಪುರಿ, ಅರಿವೇ ಬೀಜ, ಚಿಲ್ಲರೆ ಕಾಸನ್ನು ಹಾಕುತ್ತಾರೆ. ಕಾರಣ ಕೆಲವೊಮ್ಮೆ ಅಕಾಲಿಕ ಮರಣಹೊಂದಿದರೆ ಅವರು ದೆವ್ವವಾಗುತ್ತಾರೆ. ಅವರು ಎದ್ದು ಬರುವಾಗ ಇವನ್ನೆಲ್ಲಾ ಎಣಿಸಿಕೊಂಡು ಬರುವಷ್ಟರಲ್ಲಿ ಬೆಳಗಾಗುತ್ತದೆ ಎಂಬ ನಂಬಿಕೆ. ಅಷ್ಟೇ ಅಲ್ಲದೇ ಹೀಗೆ ಮಾಡಿದರೆ ಭೂತದ ಕಾಟವಿರಿವುದಿಲ್ಲ ಎಂಬ ನಂಬಿಕೆಯು ಇದೆ.

ಸತ್ತ ವ್ಯಕ್ತಿಯೇನಾದರೂ ಪ್ರೇತವಾದರೆ ಆತನಿಗೆ ಮನೆಯ ದಾರಿ ತಿಳಿಯದಿರಲೆಂದು ಹೆಣವನ್ನು ಹೊತ್ತುಸಾಗುವಾಗ ಹೆಣದ ದಿಕ್ಕು ತಪ್ಪಿಸಲಾಗುತ್ತದೆ. ಶವವನ್ನು ಕೆಳಗೆ ಇಳಿಸಿ ಮತ್ತೆ ಎತ್ತಿ ಬೇರೆ ದಿಕ್ಕಿಗೆ ತಿರುಗಿಸುತ್ತಾರೆ. ಶವವನ್ನು ಇಳಿಸಿದ ಜಾಗದಲ್ಲಿ ಜಾಲಿ ಮುಳ್ಳನ್ನು ಎಳೆಯುತ್ತಾರೆ. ಮತ್ತೆ ಬಂದರೆ ಮುಳ್ಳಿನಲ್ಲಿ ಸಿಲುಕಿಕೊಳ್ಳಲಿ ಎಂಬ ಆಶಯ ಇವರದು.

ಹೀಗೆ ದಿಕ್ಕು ತಪ್ಪಿಸುವ ಶಾಸ್ತ್ರದ ನಂತರ ಶವವನ್ನು ಗುಂಡಿಯ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಮಾಡಿ ಗುಂಡಿಯ ಪೂರ್ವದಿಕ್ಕಿನ ದಿಬ್ಬದ ಮೇಲೆ ಶವವನ್ನಿಡುತ್ತಾರೆ. ಮತ್ತೆ ಮೂರುಬಾರಿ ಹೆಣವನ್ನು ಗುಂಡಿಗೆ ತೋರಿಸಿ ಗುಂಡಿಯಲ್ಲಿ ಹಾಕಿರುವ ಬಾಳೆ ಎಲೆಯ ಮೇಲೆ ಹೆಣವನ್ನು ಮಲಗಿಸಿ ಮೈ ಮೇಲಿರುವ ಒಡವೆ, ವಸ್ತ್ರವನ್ನು ಕಳಚಿ ಮನೆಯವರಿಗೆ ನೀಡಿ ಹೆಣದ ಮುಖವನ್ನು ನೋಡುವವರಿದ್ದರೆ ನೋಡಿ ಎಂದು ಹೇಳಿ ಎಲ್ಲರ ಒಪ್ಪಿಗೆ ಪಡೆದು ಮಣ್ಣು ಮಾಡಲಾಗುತ್ತದೆ. ನಂತರ ಗುದ್ದಲಿಯಿಂದ ಗುಂಡಿಯನ್ನು ಸಮಮಾಡಿ ಮಣ್ಣು ಮಾಡಲು ಬಳಸಿದ ಗುದ್ದಲಿಯನ್ನು ಕಾವಿನಿಂದ ಬೇರೆಮಾಡಿ ಗುಂಡಿಯಿಂದ ಆ ಕಡೆ, ಆ ಕಡೆಯಿಂದ ಈ ಕಡೆ ಎಸೆಯಲಾಗುವುದು. ಇದನ್ನು ಗುದ್ದಲಿ ಶಾಸ್ತ್ರ ಅಥವಾ ಗುದ್ದಲಿ ಸೂತಕ ತೆಗೆಯುವುದು ಎಂದು ಕರೆಯುತ್ತಾರೆ.

ನಂತರ ಗುಡ್ಡೆಯಮೇಲೆ ಒಂದು ತುಂಬೆಗಿಡವನ್ನು ನೆಟ್ಟು ಎಲ್ಲರೂ ನೀರುಮುಟ್ಟಿ ನೀರನ್ನು ತಲೆಯ ಮೇಲೆ ಚುಮುಕಿಸಿಕೊಂಡು ಮನೆಗೆ ಮರಳುವರು. ಅಷ್ಟರಲ್ಲಿ ಅಕ್ಕ–ಪಕ್ಕದ ಮನೆಯವರ್‍ಯಾರಾದರೂ ಸಾವಿನ ಮನೆಯನ್ನು ಸಾರಿಸಿ, ದೀಪವನ್ನು ಹಚ್ಚಿ ಮರವನ್ನು ಬೋರಲಾಗಿ ಹಾಕಿ ಅದರ ಮೇಲಿಟ್ಟಿರುತ್ತಾರೆ.

ಮನೆಯವರೆಲ್ಲರೂ ನೀರು ಮುಟ್ಟಿ ಮನೆಯಲ್ಲಿ ಇಟ್ಟಿರುವ ದೀಪವನ್ನು ನೋಡಿ ಮನೆ ಬಾಗಿಲಲ್ಲಿ ಇಟ್ಟಿರುವ ಎಲೆ–ಅಡಿಕೆಯನ್ನು ತೆಗೆದುಕೊಳ್ಳುತ್ತಾರೆ. ಕಾರಣ ಮರಣ ಹೊಂದಿದ ವ್ಯಕ್ತಿಗೆ ನೀರು, ದೀಪ, ವೀಳ್ಯದೆಲೆ ಮೇಲಾಣೆ ನಾವು ಮುಂದೆ ನಿನ್ನೊಂದಿಗೆ ಬರುತ್ತೇವೆ ಎಂದು ಪ್ರಮಾಣಿಸುತ್ತಾ ಮನೆಗೆ ಮರಳುವರು. ನಂತರ ಎಲ್ಲರೂ ಸ್ನಾನ ಮಾಡಿ ಮಡಿಬಟ್ಟೆಯನ್ನು ಧರಿಸಿ ಮತ್ತೆ ಸಾವಿನ ಮನೆಗೆ ಬರುತ್ತಾರೆ. ಕೇವಲ ಒಂದೇ ಕೂಳಿಗೆ ಕಲೆತವರು ಮಾತ್ರ ಬಂದು ಕೂಳನ್ನು ತೆಗೆದುಕೊಂಡು ಹೋಗಿ ಗುಡ್ಡೆ ಬಳಿಯಿಟ್ಟು ಪೂಜೆ ಮಾಡಿ ಕಾಗೆಗಾಗಿ ಕಾಯುತ್ತಾರೆ. ಕಾಗೆ ಬಂದು ಸ್ವೀಕರಿಸಿದರೆ ಮಾತ್ರ ಸತ್ತ ವ್ಯಕ್ತಿಗೆ ಮುಕ್ತಿ ಎಂಬ ನಂಬಿಕೆ. ಕಾಗೆ ಮುಟ್ಟಿದ ನಂತರ ಕೂಳಿಗೆ ಕಲೆತವರು ಬಂದು ಕೂಳನ್ನು ತಿನ್ನುತ್ತಾರೆ. ವಿಶೇಷವೆಂದರೆ ಸಾದರಲ್ಲಿ ಸಾವು ಸಂಭವಿಸಿದಾಗ ಮಾದಿಗ ಜಾತಿಯ

ವ್ಯಕ್ತಿಯು ಬಂದು ಕೂಳು ತಿನ್ನಬೇಕು. ಇಲ್ಲವೆಂದರೆ ಸತ್ತ ವ್ಯಕ್ತಿಗೆ ಸದ್ಗತಿ ಇಲ್ಲ ಎಂಬ ಆಚರಣೆಯು ಕೆಲವೆಡೆಗಳಲ್ಲಿದೆ.

ಪ್ರಸ್ತುತ ಆಚರಣೆಯ ಹಿನ್ನೆಲೆಯಲ್ಲಿರಬಹುದಾದ ಕೆಲ ಅಂಶಗಳನ್ನು ಗಮನಿಸುವುದಾದರೆ ಮೂಲತಃ ಸಾದರ ಕೆಲವರು ವೀರಶೈವ ಧರ್ಮದ ಪ್ರಭಾವದಿಂದ ಸಾದರ ಲಿಂಗಾಯತರಾದರು, ಆದರೆ ಮೂಲತಃ ಮಾದಿಗರಾಗಿದ್ದ ಮರುಳಸಿದ್ಧರು ಸಾದರ ಮನೆಯಲ್ಲೇ ಬೆಳೆದು, ಸಾದರಿಗೆ ಗುರುವಾಗಿ, ದೈವತ್ವದ ಮಟ್ಟಕ್ಕೆ ಏರಿದ ಮೇಲೆ ಅವರಿಗೆ ಗೌರವ ತೋರುವ ಸಲುವಾಗಿ ಈ ಆಚರಣೆ ರೂಢಿಯಲ್ಲಿರಬಹುದು ಅಥವಾ ಗುರುವಿನ ಜಾತಿಯ ವ್ಯಕ್ತಿಯೋರ್ವ ಕೂಳು ತಿಂದರೆ ಸತ್ತ ವ್ಯಕ್ತಿಗೆ ಸದ್ಗತಿ ದೊರೆಯುತ್ತದೆ ಎಂಬ ನಂಬಿಕೆ ಇವರಲ್ಲಿರಬಹುದು. ಅಥವಾ ಮರುಳಸಿದ್ಧರು ಸಾದರ ಮನೆ ಮಗನಾಗಿ ಬೆಳೆದಿದ್ದರಿಂದ ಆ ಋಣ ತೀರಿಸುವ ಸಲುವಾಗಿ ಪ್ರಸ್ತುತ ಆಚರಣೆ ರೂಢಿಯಲ್ಲಿರಬಹುದು. .

ತಿಥಿಕಾರ್ಯ:-

ಮಣ್ಣಾದ ಒಂದು ತಿಂಗಳ ಒಳಗಾಗಿ ಅಂದರೆ ೭, ೫, ೯, ೧೧, ೧೬ ದಿನಗಳಲ್ಲಿ ತಿಥಿಕಾರ್ಯವನ್ನು ಮಾಡಲಾಗುತ್ತದೆ. ತಿಥಿಯಂದು ಸಮಾಧಿಯನ್ನು ಸಾರಿಸಿ, ರಂಗೋಲಿ ಇಟ್ಟು ಅದರ ಮೇಲೆ ತುಳಸಿ ಗಿಡ, ತೆಂಗಿನ ಹೊಂಬಾಳೆಯನ್ನಿಟ್ಟು ಸತ್ತ ವ್ಯಕ್ತಿಗೆ ಇಷ್ಟವಾದ ಎಲ್ಲ ತಿಂಡಿ-ತಿನಿಸುಗಳನ್ನು ಹಾಗೂ ಸಿಹಿ ಅಡುಗೆಯನ್ನು ಇಡಲಾಗುತ್ತದೆ. ಮಣ್ಣಿಗೆ ಬಂದವರೆಲ್ಲರಿಗೂ ತಪ್ಪದೆ ತಿಥಿಗೆ ಆಹ್ವಾನಿಸಲಾಗುತ್ತದೆ. ಅಂದು ಕೂಳನ್ನು ಯಾರು ಹಿಡಿದಿದ್ದರೋ ಅವರಿಂದಲೇ ಗುಡ್ಡೆ ಪೂಜೆ ಮಾಡಿಸಲಾಗುತ್ತದೆ. ಅಂತ್ಯ ಸಂಸ್ಕಾರದ ದಿನ ಹೆಣವನ್ನು ಹೊತ್ತು ತಂದ ನಾಲ್ವರಿಗೆ ಕೂಳು ಹಿಡಿದಿದ್ದ ವ್ಯಕ್ತಿಯ ಮನೆಬಾಗಿಲಲ್ಲಿ ನಿಲ್ಲಿಸಿಕೊಂಡು ಅವರಿಗೆ ಹಾಲು, ತೆಂಗಿನ ಕಾಯಿ ಎಳನೀರು, ಗೋಮೂತ್ರವನ್ನು ತೀರ್ಥವಾಗಿ ಹೆಗಲಿಗೆ ಹಾಕುತ್ತಾ 'ಕಷ್ಟಕ್ಕೆ ಬರಬೇಡ, ಸುಖಕ್ಕೆ ಬಾ ಎಂದು' ಹೇಳುತ್ತಾ ಹೆಗಲು ತೊಳೆದು ಅವರನ್ನು ಮನೆಯ ಒಳಕ್ಕೆ ಬರಮಾಡಿಕೊಳ್ಳಲಾಗುತ್ತದೆ. ಮನೆಗೆಲ್ಲಾ ಗೋಮೂತ್ರವನ್ನು ಹಾಕಲಾಗುತ್ತದೆ.

ನಂತರ ಮನೆಯಲ್ಲಿ ಮಾಡಿರುವ ಎಲ್ಲಾ ತಿಂಡಿ-ತಿನಿಸುಗಳನ್ನು ಗುಡ್ಡೆಯ ಮುಂದಿಟ್ಟು ಪೂಜಿಸಿ, ಮತ್ತೆ ಕಾಗೆ ಬಂದು ಪ್ರಸಾದವನ್ನು ಸ್ವೀಕರಿಸುವವರೆಗೂ ಕಾಯುತ್ತಾರೆ. ಕಾಗೆ ಬಂದು ಗುಡ್ಡೆಯ ಮೇಲಿರುವ ತಿಂಡಿಯನ್ನು ಮುಟ್ಟಿದ ನಂತರ ಎಲ್ಲರೂ ಮನೆಗೆ ಬಂದು ಮುಂದಿನ ಕಾರ್ಯಗಳಲ್ಲಿ ತೊಡಗುತ್ತಾರೆ.

ಸಾದರಲ್ಲಿ ಮರಣಹೊಂದಿರುವ ವ್ಯಕ್ತಿಯ ಕುಲಬಾಂಧವರು ಯಾರೂ ಸಹ ತಿಥಿಯವರೆಗೆ ತಮ್ಮ ಮನೆಯಲ್ಲಿ ದೇವರಿಗೆ ದೀಪ ಹಚ್ಚುವುದಿಲ್ಲ. ತಿಥಿಕಾರ್ಯದ ದಿನ ಯಾರಾದರೊಬ್ಬರು ಎಲ್ಲ ಕುಲಬಾಂಧವರ ಮನೆಗೆ ತೆರಳಿ ಮಾವಿನೆಲೆಯ ಹಸಿರು ತೋರಣವನ್ನು ಕಟ್ಟಿ, ಜೋಯಿಸರು ಕೊಟ್ಟ

ತೀರ್ಥವನ್ನು ಮನೆಗೆ ಚಿಮುಕಿಸಿ ಬರುತ್ತಾರೆ. ಅಲ್ಲಿಗೆ ಸೂತಕ ಕಳೆಯಿತು ಎಂಬ ನಂಬಿಕೆ ಇವರದು. ತದನಂತರ ಎಲ್ಲರೂ ಒಟ್ಟಿಗೆ ಊಟಮಾಡಿ ತಮ್ಮ-ತಮ್ಮ ಮನೆಗಳಿಗೆ ತೆರಳುತ್ತಾರೆ.

೪.೫: ನಂಬಿಕೆಗಳು.

ಸಾದರಲ್ಲಿ ನಂಬಿಕೆಗಳು ಅಪಾರ ಸಂಖ್ಯೆಯಲ್ಲಿವೆ. ಇವರ ನಂಬಿಕೆಗಳಲ್ಲಿ ಕೆಲವು ವೈಜ್ಞಾನಿಕ ಮಹತ್ವವನ್ನು ಪಡೆದವುಗಳಾದರೆ, ಮತ್ತೆ ಕೆಲವು ಮೂಢನಂಬಿಕೆಗಳಾಗಿವೆ. ಆದರೆ ಇವರು ಒಪ್ಪಿ ನಂಬಿರುವ ನಂಬಿಕೆಗಳ ತಳಹದಿಯ ಮೇಲೆಯೇ ತಮ್ಮ ಬದುಕನ್ನು ರೂಪಿಸಿಕೊಂಡು, ರೂಢಿಸಿಕೊಂಡು ಬಂದಿದ್ದಾರೆಂದರೆ ಖಂಡಿತ ತಪ್ಪಾಗಲಾರದು. ಇವುಗಳೆಲ್ಲವೂ ತಮ್ಮ ಅನುಭವಮೂಲದಿಂದ ರೂಢಿಸಿಕೊಂಡವುಗಳಾಗಿವೆ.

ಸಾದರ ಪ್ರಧಾನ ಕಸುಬು ಕೃಷಿ. ತಮ್ಮ ಕೃಷಿಕಾರ್ಯಕ್ಕೆ ನೆರವಾದ, ಅಗತ್ಯವಾದ ಭೂಮಿ, ನೀರು, ದನ-ಕರುಗಳನ್ನು ಕುರಿತಂತೆ ಹಲವಾರು ನಂಬಿಕೆಗಳು ಇವರಲ್ಲಿದೆ. ಭೂಮಿಯನ್ನು 'ಭೂಮಿತಾಯಿ' ಎಂದಾಗಿಯೇ ಇವರು ಸಂಭೋದಿಸುತ್ತಾರೆ. ಕೃಷಿ ಮೂಲಾಧಾರವಾದ ಮಳೆಯನ್ನು ಕುರಿತು ಇವರಲ್ಲಿ ಹಲವಾರು ನಂಬಿಕೆಗಳಿರುವುದನ್ನು ಗಮನಿಸಬಹುದು.

ನಂಬಿಕೆಗಳು ಬದುಕಿಗೆ ಆಸರೆಯನ್ನು ಒದಗಿಸಿ ಧೈರ್ಯ ತುಂಬುತ್ತದೆ. ಮತ್ತೆ ಕೆಲವು ಹುಸಿ ವಿಶ್ವಾಸದಿಂದಲೂ ಬಂದಿರಬಹುದು ಅಥವಾ ಅನುಭವದಿಂದಲೂ ಬಂದಿರಬಹುದು. ಮಳೆಯನ್ನು ಕುರಿತು ಸಾದರಲ್ಲಿರುವ ನಂಬಿಕೆಗಳು ಹಲವಾರಿವೆ. ಈ ನಂಬಿಕೆಗಳ ಆಧಾರದ ಮೇಲೆ ತಮ್ಮ ಬೇಸಾಯದ ಕೆಲಸವನ್ನು ಹೀಗೆ ಮಾಡಬೇಕೆಂದಬುದನ್ನು ಅವರು ನಿರ್ಧರಿಸಿಕೊಳ್ಳುತ್ತಾರೆ. ಜೊತೆಗೆ ಆ ವರ್ಷ ತಮಗೆ ಸಿಗುವ ಬೆಳೆಯ ಪ್ರಮಾಣವನ್ನು ತಿಳಿಯಲು ಪ್ರಯತ್ನಿಸಲಾಗುತ್ತದೆ. ಈ ನಿಟ್ಟಿನಲ್ಲಿ ಮಳೆಯನ್ನು ಕುರಿತು ಇವರಲ್ಲಿರುವ ಕೆಲವು ನಂಬಿಕೆಗಳನ್ನು ಗಮನಿಸುವುದಾದರೆ 'ಭರಣಿ ಮಳೆಯಾದ್ರೆ ಧರಣಿಯೆಲ್ಲಾ ಸುಭಿಕ್ಷ' ಎಂಬ ನಂಬಿಕೆ ಇವರಲ್ಲಿದೆ. 'ಹುಬ್ಬೆ ಮಳೆಗೆ ಗುಬ್ಬಿ ತಲೆಕೂಡ ನೆನೆಯೊಲ್ಲ', 'ಕೆಮ್ಮುಗಿಲು ಎದ್ದರೆ ಮಳೆ ಕಡಿಮೆ ಬರುತ್ತದೆ', 'ಈಚಲುಹುಳ ಎದ್ದರೆ ಮಳೆಬರುತ್ತದೆ', 'ಸೂರ್ಯನ ಸುತ್ತ ಮೋಡ ಉಂಗ್ರ ಕಟ್ಟಿದರೆ ಮಳೆ ಬರುತ್ತದೆ', 'ಮಿಂಚು, ಗುಡುಗು ಬಂದಾಗ ಚೊಚ್ಚಿಲ ಬಸುರಿ ಹೊರಗೆ ಹೋಗಬಾರದು', 'ಅಶ್ವಿನಿ ಮಳೆ ಅರಿಶಿನದ ಬೆಳೆಗೆ ಒಳ್ಳೇದು', 'ಕೃತ್ತಿಕಾ ಎಲ್ಲ ಬೆಳೆಗೂ ಸಂಜೀವಿನಿ', 'ರೋಹಿಣಿ ಮಳೆಯಿಂದ ನೆಟ್ಟ ಬೆಳೆಯೆಲ್ಲಾ ಚಿನ್ನವಾಗುತ್ತದೆ' ಎಂಬ ನಂಬಿಕೆ ಇದೆ. 'ಮೃಗಶಿರಾ ಬಂದರೆ ಎಳ್ಳು ಭತ್ತದ ಬೆಳೆ ಚೆನ್ನಾಗಿ ಬೆಳೆಯುತ್ತದೆ' ಎಂಬ ನಂಬಿಕೆ ಇದೆ.

ಹೀಗೆ ಯಾವ ಮಳೆಯಿಂದ ಯಾವ ಬೆಳೆ ಸುಭಿಕ್ಷವಾಗಿರುತ್ತದೆ ಎಂಬ ಬಗ್ಗೆ ಸಾದರಲ್ಲಿ ಹಲವು ನಂಬಿಕೆಗಳಿವೆ. ಹಾಗೆಯೇ ಕೆಲವೊಮ್ಮೆ ಮಳೆ ಬರದೇ ಇರುವ ಸಂದರ್ಭದಲ್ಲಿ 'ಕುರಿ ಹಿಂಡು ಕನಸಿನಲ್ಲಿ ಬಂದರೆ ಮಳೆ ಬರುತ್ತದೆ, ಕತ್ತೆ ಮೆರವಣಿಗೆ ಮಾಡಿದರೆ ಮಳೆ ಬರುತ್ತದೆ' ಎಂಬ

ಕೆಲವೊಂದು ಮೂಢನಂಬಿಕೆಗಳು ಸಹ ಇವರಲ್ಲಿದೆ.

ಕೃಷಿ ಪ್ರಧಾನ ಕಸುಬಾದ ಸಾದರು ತಮ್ಮ ಕೃಷಿ ಕಾರ್ಯಕ್ಕೆ ಅಗತ್ಯವಿರುವ ಪ್ರತಿಯೊಂದು ವಸ್ತುವಿನಲ್ಲಿಯೂ ದೈವೀ ಸ್ವರೂಪವನ್ನು ಕಾಣುತ್ತಾರೆ. 'ಸೋಮವಾರ ಆರು (ನೇಗಿಲು) ಕಟ್ಟಿದ್ರೆ ಹುಟ್ಟು ದರಿದ್ರ ಬರುತ್ತೆ' ಎಂಬ ನಂಬಿಕೆ ಇವರಲ್ಲಿದೆ. ಕಾರಣ ತಮ್ಮ ಮನೆದೇವರೆಂದು ಪೂಜಿಸುವ ಬಸವಣ್ಣ (ನಂದಿಯ) ಪೂಜನೀಯವಾದ ವಾರ ಸೋಮವಾರ ಇವರು ನೇಗಿಲು ಕಟ್ಟುವುದಿಲ್ಲ. 'ಕಣದಲ್ಲಿ ಕೆರ ಹಾಕ್ಕೊಂಡು ಓಡಾಡಬಾರದು' ಎಂಬ ನಂಬಿಕೆಯು ಇವರಲ್ಲಿದೆ. ಎತ್ತನ್ನು, ನಾಯಿಯನ್ನು ಕಾಲಿನಲ್ಲಿ ಮುಟ್ಟಬಾರದು, ಎತ್ತು ನಂದಿಯಾದರೆ, ನಾಯಿ ನಾರಾಯಣ ಸ್ವರೂಪಿಯಾದದ್ದು ಎಂಬ ನಂಬಿಕೆ. ಪ್ರಾಣಿಗಳ ಬಗ್ಗೆ ಇವರಿಗಿರುವ ಅಕ್ಕರೆ, ಮಮತೆ, ಮರುಕ, ಪ್ರೀತಿಯನ್ನು ಬಿಂಬಿಸುತ್ತದೆ. ನೊಗವನ್ನು ಕೆಳಗೆ ಎಸಿಬಾರದು, ಮೇಟಿಯನ್ನು ಕಾಲಿನಲ್ಲಿ ಮುಟ್ಟಬಾರದು, ಕಬ್ಬಿಣ, ಗೊಬ್ಬರವನ್ನು ಕತ್ತಲಾದ ಮೇಲೆ ಯಾರಿಗೂ ಕೊಡಬಾರದು ಎಂಬ ನಂಬಿಕೆ ಇವರಲ್ಲಿದೆ. ಕಾರಣ ಕಬ್ಬಿಣ ಲಕ್ಷ್ಮಿ ಇದ್ದಂತೆ ಅದ್ದರಿಂದ ಅದನ್ನು ಕತ್ತಲಾದ ಮೇಲೆ ಯಾರಿಗೂ ಕೊಡಬಾರದು ಎಂಬ ನಂಬಿಕೆ ಇದೆ.

ಪಕ್ಷಿಗಳನ್ನು ಕುರಿತಂತೆ ಇವರಲ್ಲಿರುವ ನಂಬಿಕೆಗಳನ್ನು ಗಮನಿಸಬಹುದು. ಗೂಬೆ ಹೊಲ-ಗದ್ದೆಗಳಲ್ಲಿರುವ ಇಲಿಗಳನ್ನು, ಹಾವುಗಳನ್ನು ತಿಂದು ಬೆಳೆಯನ್ನು ರಕ್ಷಿಸುತ್ತದೆ. ಯಾರಿಗೂ ಯಾವ ತೊಂದರೆಯನ್ನು ಕೊಡದ ನಿಶಾಚರಿ ಪಕ್ಷಿ, ಆದರೆ ಅದು ಮನೆಯ ಮೇಲೆ ಕೂತು ಕೂಗಬಾರದು ಹಾಗೇನಾದರೂ ಕೂಗಿದರೆ ಯಾರಾದರೊಬ್ಬರ ಸಾವು ಸಂಭವಿಸುತ್ತದೆ ಎಂಬ ನಂಬಿಕೆಯಿದೆ. ಕೊರಳಲ್ಲಿ ಕಂಟಾಭರಣವಿರುವ 'ಮುತ್ತಿನ ಹಕ್ಕಿ' ಕೂಗಿದರೆ ಖಂಡಿತ ಮಳೆ ಬರುತ್ತದೆ ಎಂಬ ನಂಬಿಕೆ ಇದೆ. ಮಳೆಬರುವ ಮುನ್ಸೂಚನೆ ಈ ಪಕ್ಷಿಗೆ ತಿಳಿದಿದೆ ಎಂಬುದು ಇವರ ನಂಬಿಕೆ. ಕಾರಣ ಒಮ್ಮೆ ಮುತ್ತಿನ ಶೆಟ್ಟಿಯು ಮುತ್ತನ್ನು ಮಾರಿ ಬರುವಾಗ ಆಯಾಸ ಹೊಂದಿ ತೊರೆಯಲ್ಲಿ ಮಲಗಿಬಿಟ್ಟನಂತೆ ಆಗ ಆ ಪಕ್ಷಿಯು ಮಳೆಯಾಗಿ ಜೋರಾಗಿ ತೊರೆ ಬರುವುದನ್ನು ನೋಡಿ 'ಮುತ್ತಿನ ಶೆಟ್ಟಿ ತೊರೆ, ತೊರೆ' ಎಂದು ಕೂಗಿದಾಗ ಶೆಟ್ಟಿಯು ಪ್ರಾಣಾಪಾಯದಿಂದ ಪಾರಾಗಿ ಆ ಪಕ್ಷಿಗೆ ಒಂದು ಮುತ್ತಿನ ಸರವನ್ನು ಕೊರಳಿಗೆ ಹಾಕಿದನೆಂತಲೂ ಆ ಪಕ್ಷಿ ಇಂದಿಗೂ ಮಳೆಬರುವಂತಿದ್ದರೆ ಎಲ್ಲರನ್ನು ಎಚ್ಚರಿಸುತ್ತದೆಂತಲೂ ನಂಬಿಕೆ ಇದೆ.

ಕಾಗೆ ಮನೆಯ ಮುಂದೆ ಕೂಗಿದರೆ ಅಂದು ಮನೆಗೆ ಯಾರಾದರೂ ನೆಂಟರು ಬರುತ್ತಾರೆ. ಅದೇ ಕಾಗೆ ತಲೆಗೆ ತಾಕಬಾರದು ಒಳ್ಳೆಯದಲ್ಲ, ನಾಯಿ ಆಕಾಶಕ್ಕೆ ಮುಖಮಾಡಿ ಅಳಬಾರದು, ಎರಡು ಹಾವು ಒಟ್ಟಿಗೆ ಇರೋದನ್ನು ನೋಡಬಾರದು, ಹಲ್ಲಿ ಮೈ ಮೇಲೆ ಬೀಳಬಾರದು, ಏನಾದರೂ ಹೇಳೊವಾಗ ಹಲ್ಲಿ ನುಡಿದರೆ ಒಳ್ಳೆಯದು. ಹೀಗೆ ಒಂದಲ್ಲ ಎರಡಲ್ಲ ಹಲವಾರು ನಂಬಿಕೆಗಳು ಇವರಲ್ಲಿರುವುದನ್ನು ಗಮನಿಸಬಹುದು.

ಪ್ರಕೃತಿಯ ವಿಕೋಪಗಳಾದ ಭೂಕಂಪ, ಸುನಾಮಿಯಂತಹ ಅವಘಡಗಳು ಸಂಭವಿಸುವ ಮುನ್ಸೂಚನೆ ಪ್ರಾಣಿ ಪಕ್ಷಿಗಳಿಗೆ ಚೆನ್ನಾಗಿ ತಿಳಿಯುತ್ತದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಅಷ್ಟೇ ಅಲ್ಲದೇ ಈ ವಿಚಾರವನ್ನು ವಿಜ್ಞಾನವೂ ಒಪ್ಪುತ್ತದೆ.

ಮನುಷ್ಯನ ವರ್ತನೆಯ ಹಿನ್ನೆಲೆಯಲ್ಲಿಯೂ ಹಲವಾರು ನಂಬಿಕೆಗಳು ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು. ಮನುಷ್ಯ ಒಂಟಿ ಸೀನು ಸೀನಬಾರದು, ಶುಭಕಾರ್ಯಕ್ಕೆ ಹೊರಟಾಗ ಎಲ್ಲಿಗೆ? ಎಂದು ಕೇಳಬಾರದು, ದಾರಿಯಲ್ಲಿ ಗುದ್ದಲಿ, ಮಂಕರಿ, ಸೌದೆಯ ಹೊರೆ, ಕಾಲಿಕೊಡ ಎದುರು ಬರಬಾರದು, ಮನೆಯ ಒಳಗೆ ಬಾಯಿಬಡ್ಕೊಬಾರದು, ಶಿಳ್ಳೆ ಒಡೆಯಬಾರದು, ಬಾಗಿಲ ಚಿಲುಕ ಅಲುಗಾಡಿಸಬಾರದು, ಉರಿಯೊ ದೀಪವನ್ನು ಬಾಯಿಂದ ಊದಿ ಆರಿಸಬಾರದು, ಹಿಮ್ಮಡಿ ತೊಳೆಯದೆ ಮನೆ ಒಳಗೆ ಹೋಗಬಾರದು, ರಾಗಿ ಮುದ್ದೆ ಆಗಿದು ತಿನ್ನಬಾರದು, ಅನ್ನವನ್ನು ತೂಗಿ ತಿನ್ನಬಾರದು, ಒಂಟಿ ಬ್ರಾಹ್ಮಣ ಎದುರು ಬರಬಾರದು, ಶುಭಕಾರ್ಯಕ್ಕೆ ಹೊರಟಾಗ ಅಗಸರು ಎದುರಾಗಬಾರದು ಹೀಗೆ ಸಮಯಾಸಂದರ್ಭಕ್ಕೆ ತಕ್ಕಂತೆ ಹಲವಾರು ನಂಬಿಕೆಗಳು ಇವರಲ್ಲಿ ರೂಢಿಯಲ್ಲಿರುವುದನ್ನು ಗಮನಿಸಬಹುದು. ಗಂಡಸು ಅಳಬಾರದು, ಹೆಂಗಸು ಹೆಚ್ಚು ನಗಬಾರದು ಈ ಹಿನ್ನೆಲೆಯಲ್ಲಿ 'ಅಳೋ ಗಂಡಸನ್ನು ನಗೋ ಹೆಂಗಸನ್ನು ನಂಬಬಾರದು' ಎಂಬ ಗಾದೆಯು ಚಾಲ್ತಿಯಲ್ಲಿದೆ. ಹೆಂಗಸರಿಗೆ ಎಡಗಣ್ಣು, ಗಂಡಸರಿಗೆ ಬಲಗಣ್ಣು ಅದುರಿದರೆ ಶುಭವಾಗುತ್ತದೆ, ಒಳ್ಳೆಯದಾಗುತ್ತದೆ. ಮುತ್ತೈದೆ ಹೆಣ್ಣು ಮಕ್ಕಳು, ಬರಿ ಹಣೆ, ಬರಿಗೈಲಿ ಇರಬಾರದು, ಬಸುರಿ ಇರೋ ಮನೆಲಿ ಸಸೀ ಗುಂಡಿ ತೆಗಿಬಾರದು ಈ ನಂಬಿಕೆಗಳೆಲ್ಲವೂ ಮೂಢ, ಅಂಧನಂಬಿಕೆಗಳಾದರೂ ಸಾದರಲ್ಲಿ ಇವನ್ನು ನಂಬಲಾಗುತ್ತದೆ. ಇವೆಲ್ಲವೂ ರೂಢಿಯಲ್ಲಿರುವುದನ್ನು ನೋಡಬಹುದು.

ಹುಟ್ಟಿಗೆ ಸಂಬಂಧಿಸಿದಂತೆ ಮದುವೆಯಾದ ವರ್ಷವೇ ಮಗು ಆಗಬಾರದು ಎಂಬ ನಂಬಿಕೆ ಇವರಲ್ಲಿದೆ. ಶುಕ್ರವಾರ ಮತ್ತು ಮಂಗಳವಾರ ಹೆಣ್ಣು ಮಗು ಹುಟ್ಟಿದರೆ ಶುಭವಾಗುತ್ತದೆ. ಆ ಮಗು ಲಕ್ಷ್ಮೀಯ ಪ್ರತಿರೂಪವೆಂದು ನಂಬುತ್ತಾರೆ. ಹೆಣ್ಣು ಮಕ್ಕಳು ಭರಣಿ ಮಳೆಯಲ್ಲಿ ಋತುಮತಿಯಾಗಬಾರದೆಂಬ ನಂಬಿಕೆ ಇದೆ. ಬಸುರಿ ಕಪ್ಪು, ಕೆಂಪು, ಬಿಳಿಯ ಸೀರೆಯನ್ನು ಉಡಬಾರದು, ಗರ್ಭಿಣಿಯನ್ನು ಸಮ ತಿಂಗಳಿನಲ್ಲಿ ತವರಿಗೆ ಕರೆತರುವ ಹಾಗೂ ಕಳಿಸುವುದು ಒಳ್ಳೆಯದಲ್ಲ ಎಂಬ ನಂಬಿಕೆ ಇವರಲ್ಲಿದೆ.

ಗಂಡುಮಕ್ಕಳಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಅವರಿಗೆ ಇಬ್ಬರು ಹೆಂಡತಿಯರು, ಮನೆಯ ಓಲೆ ಬರೋ ಎಂದು ಶಬ್ದ ಮಾಡಿದರೆ ಮನೆಗೆ ಯಾರಾದರೂ ನೆಂಟರು ಬರುತ್ತಾರೆ, ಬೆಳಗಿನ ಸಮಯ ನರಿಯ ಮುಖವನ್ನು ನೋಡಿದರೆ ದಿನವೆಲ್ಲ ಶುಭವಾಗುತ್ತದೆ, ವ್ಯಕ್ತಿ ಕನಸಿನಲ್ಲಿ ಸತ್ತರೆ ಅವನಿಗೆ ಆಯಸ್ಸು ವೃದ್ದಿಯಾಗುತ್ತದೆ, ಮಹಾನವಮಿ ತಿಂಗಳಿನಲ್ಲಿ ಸತ್ತ ವ್ಯಕ್ತಿ ನೇರ ಸ್ವರ್ಗಕ್ಕೆ ಹೋಗುತ್ತಾನೆ ಎಂಬ ನಂಬಿಕೆಗಳೂ ಇವೆ. ಇಲ್ಲಿ ಕೆಲವೊಂದು ನಂಬಿಕೆಗಳು ವೈಚಾರಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ರೂಪುಗೊಂಡವುಗಳಾಗಿದ್ದರೆ ಮತ್ತೆ ಕೆಲವು ನಂಬಿಕೆಗಳು ಕಾಕತಾಳೀಯವೆಂಬಂತೆ ಸಂದರ್ಭೋಚಿತವಾಗಿ ರೂಢಿಗತವಾಗಿರುವ ನಂಬಿಕೆಗಳಾಗಿವೆ.

ಕೆಟ್ಟಗಳಿಗೆ ಅಥವಾ ನಕ್ಷತ್ರದಲ್ಲಿ ಮನೆಯಲ್ಲಿ ಯಾರಾದರೂ ಸತ್ತರೆ ಮನೆ ಬಿಡಬೇಕು, ಬ್ರಾಹ್ಮಣರಿಗೆ ದಾನ ಕೊಡಬೇಕು ಎಂಬ ನಂಬಿಕೆ ಇವರಲ್ಲಿದೆ. ಹಾಗೆಯೇ ಮನೆಯ ಒಳಕ್ಕೆ ಕಾಗೆ

ಹೊಕ್ಕರೆ ಅದು ಅಶುಭ, ಆಗಲೂ ಮನೆ ಬಿಟ್ಟು ಬೇರೆ ಮನೆಗೆ ಹೋಗಬೇಕು, ಇಲ್ಲವಾದರೆ ತೊಂದರೆಯಾಗುತ್ತದೆ, ಹಬ್ಬದ ದಿನದಂದು ಮನೆಯಲ್ಲಿ ಯಾರಾದರೂ ಸತ್ತರೆ ಮೂರು ವರ್ಷ ಆ ಮನೆಯಲ್ಲಿ ಹಬ್ಬ ಆಚರಿಸುವಂತಿಲ್ಲ ಎಂಬ ಹತ್ತು ಹಲವು ನಂಬಿಕೆಗಳು ಇವರಲ್ಲಿ ಚಾಲ್ತಿಯಲ್ಲಿವೆ. ಅಷ್ಟೇ ಅಲ್ಲದೆ ಸಂಕ್ರಾಂತಿಯಂದು ಸತ್ತರೆ ಸ್ವರ್ಗ ಸಿಗುತ್ತದೆ, ಅಮಾವಾಸ್ಯೆಯಂದು ಸಾಯಬಾರದು, ಭಾನುವಾರ ಸತ್ತರೆ ಬೆನ್ನ ಹಿಂದೆ ಹೆಣ ಬೀಳ್ತವೆ, ಸ್ವಪ್ನದಲ್ಲಿ ಹಣ ಕಂಡರೆ ಸಾವಿನ ಸುದ್ದಿ ಬರುತ್ತದೆ, ಅರ್ಧ ವಯಸ್ಸಿನಲ್ಲೇ ಆತ್ಮಹತ್ಯೆ ಮಾಡಿಕೊಂಡು ಸತ್ತರೆ ದೆವ್ವ ಆಗ್ತಾರೆ, ಹೀಗೆ ಸಾವಿನಲ್ಲಿಯೂ ನೂರಾರು ನಂಬಿಕೆಗಳು ಜನಮಾನಸದಲ್ಲಿ ಇಂದಿಗೂ ನೆಲೆಯಾಗಿ ನಿಂತಿರುವುದನ್ನು ಗಮನಿಸಬಹುದು.

ಇನ್ನು ಸಂಖ್ಯೆಗಳನ್ನು ಕುರಿತಂತೆ ಹಲವಾರು ನಂಬಿಕೆಗಳು ಇವರಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಬಹುದು. ೫, ೯ ಒಳ್ಳೆಯ ಸಂಖ್ಯೆಗಳೆಂದು ೭, ೧೧ ಅಶುಭ ಸಂಖ್ಯೆಗಳೆಂದು ನಂಬಲಾಗುತ್ತದೆ, ಧಾನ್ಯ ಅಳೆಯುವಾಗ ಆರು ಎಂದು ನಂತರ ೭ ಎನ್ನದೆ ಹೆಚ್ಚಲಿ ಎಂದು ಮುಂದೆ ಅಳೆಯುತ್ತಾರೆ. ಕಾರಣ ೭ ಅಶುಭವೆಂಬುದು ಇವರ ನಂಬಿಕೆಯಾಗಿದೆ.

ಹೀಗೆ ಹಿಂದಿನಿಂದಲೂ ಹಲವಾರು ರೂಢಿ, ಸಂಪ್ರದಾಯಗಳೊಂದಿಗೆ ನಂಬಿಕೆಗಳು ಜನಮಾನಸದಲ್ಲಿ ನೆಲೆಯಾಗಿ ನಿಂತಿರುವುದನ್ನು ಗಮನಿಸಬಹುದು. ಇಂದಿನ ವೈಜ್ಞಾನಿಕ ಯುಗದಲ್ಲಿಯೂ, ಬದುಕಿನ ಪ್ರತಿಹಂತಗಳಲ್ಲಿಯೂ ಹಲವು ನಂಬಿಕೆಗಳೊಂದಿಗೆ ಜೀವನ ಸಾಗಿಸುತ್ತಿರುವುದನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ವಾಸ್ತವ ಸತ್ಯದೊಂದಿಗೆ ಕೂಡಿದ್ದರೆ ಮತ್ತೆ ಕೆಲ ನಂಬಿಕೆಗಳು ಮೂಢನಂಬಿಕೆಗಳೂ ಆಗಿರಬಹುದು. ಆದರೆ ನಂಬಿಕೆಗಳಿಲ್ಲದ ಬದುಕೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಸಮಾಜದಲ್ಲಿ ನಂಬಿಕೆಗಳು ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ಅಧ್ಯಾಯ-೫

ಭಾಷೆ ಮತ್ತು ಸಾಹಿತ್ಯ

೫.೧: ಭಾಷೆ ಮತ್ತು ಪ್ರಭಾವ.

೫.೨: ಜನಪದ ಸಾಹಿತ್ಯ.

೫.೩: ಸಂಪ್ರದಾಯದ ಹಾಡುಗಳು.

೫.೪: ಗಾದೆಗಳು.

೫.೫: ಒಗಟುಗಳು.

೫.೬: ಕಥೆಗಳು.

೫.೭: ನುಡಿಗಟ್ಟುಗಳು.

೫.೮: ಶಿಷ್ಟ ಸಾಹಿತ್ಯ.

ಅಧ್ಯಾಯ-5
ಭಾಷೆ ಮತ್ತು ಸಾಹಿತ್ಯ

೫.೧:- ಭಾಷೆ ಮತ್ತು ಪ್ರಭಾವ

"ಭಾಷೆ ಎಂಬ ಬೆಳಕು ಜಗತ್ತಿನಲ್ಲಿ ಬೆಳಗದೇ ಹೋಗಿದ್ದರೆ ಮೂರು ಲೋಕಗಳು ಕಗ್ಗತ್ತಲೆಯಲ್ಲಿ ಮುಳುಗಿರುತ್ತಿದ್ದವು" ಎಂದು ಸಂಸ್ಕೃತದ ಅಲಂಕಾರಿಕ ದಂಡಿ ತನ್ನ "ಕಾವ್ಯಾದರ್ಶ" ಎಂಬ ಗ್ರಂಥದಲ್ಲಿ ಹೇಳಿರುವ ಮಾತು ಅಕ್ಷರಶಃ ಸತ್ಯವಾದದ್ದು. ಕತ್ತಲೆಯಲ್ಲಿರುವ ಪದಾರ್ಥಗಳು ಹೇಗೆ ಬೆಳಕಿನ ಸಹಾಯದಿಂದ ಪ್ರಕಾಶಕ್ಕೆ ಬರುತ್ತವೆಯೋ ಹಾಗೆಯೇ ಮನುಷ್ಯನ ಮನಸ್ಸಿನಲ್ಲಿರುವ ಭಾವನೆಗಳು ಭಾಷೆಯ ಮೂಲಕ ಹೊರಬರುತ್ತವೆ. ಯಾವುದೇ ಒಬ್ಬ ವ್ಯಕ್ತಿಯ ನೋವು-ನಲಿವು, ರಾಗ-ದ್ವೇಷ ಎಲ್ಲವೂ ಭಾಷೆಯ ಮೂಲಕವೇ ತಿಳಿಯುತ್ತದೆ. ಅಷ್ಟೇ ಅಲ್ಲದೇ ಒಬ್ಬರ ಮನಸ್ಸಿನಲ್ಲಿರುವ ಸೂಕ್ಷ್ಮವಿಚಾರಗಳನ್ನು ಇತರರಿಗೆ ಸುಲಭವಾಗಿ ತಿಳಿಸಲು ಮಾನವ ಪಟ್ಟ ಪ್ರಯತ್ನದ ಫಲವೇ ಭಾಷಾಸೃಷ್ಟಿ.

ಭಾಷೆಯು ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಪ್ರಧಾನ ಅಂಶಗಳಲ್ಲಿ ಒಂದಾಗಿದೆ. ಒಂದು ಜಾತಿಯ ವಿಶಿಷ್ಟತೆಯನ್ನು ಗುರುತಿಸುವಲ್ಲಿ ಆ ಜಾತಿಯ ಆಚಾರ-ವಿಚಾರ, ರೂಢಿ-ಸಂಪ್ರದಾಯ, ನಂಬಿಕೆಗಳು ಹೇಗೆ ನೆರವಾಗುತ್ತವೆಯೋ ಹಾಗೆಯೇ ಆ ಜಾತಿಯ ಭಾಷೆ ಮತ್ತು ಸಾಹಿತ್ಯವು ಸಹ ಆ ಜಾತಿಯ ವಿಶಿಷ್ಟತೆಯನ್ನು ಗುರುತಿಸಲು ಸಹಾಯಕವಾಗುತ್ತದೆ.

ಯಾವುದೇ ಒಂದು ಸಮಾಜದ ಅಭಿವೃದ್ದಿಯಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುವಂತೆ ಆ ಸಮಾಜದಲ್ಲಿನ ಒಂದು ಘಟಕವಾದ ಜಾತಿಯ ಅಭಿವೃದ್ದಿಯಲ್ಲಿಯು ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಕರ್ನಾಟಕದಲ್ಲಿ ವಾಸಿಸುತ್ತಿರುವ ಸಾದರ ಮಾತೃಭಾಷೆ ಕನ್ನಡ. ಜೊತೆಗೆ ತಾವು ವಾಸಿಸುತ್ತಿರುವ ಪ್ರಾದೇಶಿಕ ಪರಿಸರಕ್ಕನುಗುಣವಾಗಿ ಅಲ್ಲಿನ ಭಾಷಾ ಸೊಗಡನ್ನು ಅನುಸರಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಸಾದರಲ್ಲಿ ಜನಪದ ಸಾಹಿತ್ಯ ಹೇರಳವಾಗಿ ಆಧುನಿಕ ಕನ್ನಡ ಸಾಹಿತ್ಯ ವಿರಳವಾಗಿ ಕಂಡು ಬರುತ್ತದೆ. ಸಾಹಿತ್ಯದ ರಚನೆಯ ಪ್ರಮಾಣ ಕಡಿಮೆ ಇರಬಹುದು. ಆದರೆ ಗುಣಮಟ್ಟದಿಂದ ಉತ್ಕೃಷ್ಟವಾದುದಾಗಿದೆ. 'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎಂಬ ನಾಣ್ನುಡಿಯಂತಿದೆ ಸಾದರ ಸಾಹಿತ್ಯ.

ಕರ್ನಾಟಕದಲ್ಲಿರುವ ಸಾದರು ಕನ್ನಡ ಭಾಷೆಯನ್ನೇ ಮಾತನಾಡಿ, ಕನ್ನಡ ಲಿಪಿಯನ್ನೇ ಬರವಣಿಗೆಗಾಗಿ ಬಳಸುತ್ತಾರೆ. ಕರ್ನಾಟಕದ ಗಡಿಭಾಗದಲ್ಲಿರುವ ಆಂಧ್ರಪ್ರದೇಶ ಮತ್ತು ತಮಿಳುನಾಡು ಗಡಿಪ್ರದೇಶದಲ್ಲಿರುವ ಸಾದರ ಭಾಷೆಯ ಮೇಲೆ ತೆಲುಗು ಮತ್ತು ತಮಿಳು ಭಾಷೆಯ ಪ್ರಭಾವವಿರುವುದನ್ನು ಗಮನಿಸಬಹುದು. ಪ್ರಾದೇಶಿಕ ಪರಿಸರದ ದೃಷ್ಟಿಯಿಂದ ಇದು ಸಾಮಾನ್ಯ

ಸಂಗತಿಯಾದರೂ ಸಹ ಗಡಿಭಾಗಗಳಲ್ಲಿರುವ ಸಾದರು ದ್ವಿಭಾಷಿಗರಾಗಿದ್ದು ಕನ್ನಡ ಭಾಷೆಯೊಂದಿಗೆ ತಮಿಳು ಮತ್ತು ತೆಲುಗು ಭಾಷೆಯನ್ನು ಬಳಸುವುದನ್ನು ಗಮನಿಸಬಹುದು.

೫.೨:- ಜನಪದ ಸಾಹಿತ್ಯ

ಅನಕ್ಷರಸ್ಥ ಜನಸಮುದಾಯದಲ್ಲಿ ಬಾಯಿಂದ-ಬಾಯಿಗೆ ಮೌಖಿಕವಾಗಿ ಹರಿದು-ಹಬ್ಬಿಬಂದಿರುವ ಸಾಹಿತ್ಯವೇ ಜನಪದ ಸಾಹಿತ್ಯ. ಜಗತ್ತಿನ ಯಾವುದೇ ಮೂಲೆಯಲ್ಲಿ, ಯಾವುದೇ ಬುಡಕಟ್ಟಿನಲ್ಲಿ, ಯಾವುದೇ ಸಂಸ್ಕೃತಿಯಲ್ಲಿ, ಯಾವುದೇ ಪರಿಸರದಲ್ಲಿ ಬದುಕುತ್ತಿರುವ ಜಾತಿಯಾಗಿದ್ದರೂ ಈ ತೆರನಾದ ತಮ್ಮ ಬದುಕಿನ ಅನುಭವಗಳನ್ನು ಹಾಡಾಗಿ, ಗಾದೆಗಳಾಗಿ, ಒಗಟುಗಳಾಗಿ, ಕತೆಗಳಾಗಿ ಹೊರಹೊಮ್ಮಿಸಿರುವುದು ಕಂಡುಬರುತ್ತದೆ.

ಜಾನಪದ ಅಧ್ಯಯನದ ಬಹುಮುಖ್ಯಭಾಗವೇ ಸಂಸ್ಕೃತಿಯನ್ನೊಳಗೊಂಡಿರುವುದರಿಂದ ಅದನ್ನು ವಿಶ್ಲೇಷಣೆಗೊಳಪಡಿಸುವ ಸಂದರ್ಭದಲ್ಲಿ ಜಾತಿಯನ್ನು ಹೊರತುಪಡಿಸಲು ಸಾಧ್ಯವಿಲ್ಲ. ಹೀಗಾಗಿ ಜಾತಿಗೂ, ಸಂಸ್ಕೃತಿಗೂ, ಜಾನಪದಕ್ಕೂ ಅವಿನಾಭಾವ ಸಂಬಂಧವಿರುವುದನ್ನು ಗಮನಿಸಬಹುದು. ಸಾದರಲ್ಲಿರುವ ಜನಪದ ಸಾಹಿತ್ಯವು ಅವರ ರೂಢಿ-ಸಂಪ್ರದಾಯ, ಆಚಾರ-ವಿಚಾರ, ನಂಬಿಕೆ-ನಡವಳಿಕೆಗಳನ್ನು ಕುರಿತು ಸಾಕಷ್ಟು ಮಾಹಿತಿಯನ್ನೊದಗಿಸುತ್ತದೆ. ಈ ನಿಟ್ಟಿನಲ್ಲಿ ಸಾದರಲ್ಲಿ ಹೇರಳವಾಗಿರುವ ಜನಪದ ಸಾಹಿತ್ಯವು ಅಧ್ಯಯನಾರ್ಹವಾದುದೆಂದೇ ಹೇಳಬಹುದು.

೫.೩:- ಸಂಪ್ರದಾಯದ ಹಾಡುಗಳು

ಸಾದರ ಬದುಕಿನ ವಿವಿಧ ಹಂತಗಳಲ್ಲಿ ಅನುಸರಿಸುತ್ತಾ ಬಂದಿರುವ ಹಲವಾರು ಆಚರಣೆಗಳಿಗೆ ಹಿನ್ನೆಲೆಯಾಗಿ, ಪೂರಕವಾಗಿ, ಪ್ರೇರಕವಾಗಿ ಜಾತಿಯಲ್ಲಿ ಪ್ರಚಲಿತವಾಗಿರುವ ಸಂಪ್ರದಾಯದ ಹಾಡುಗಳು ಹೇರಳವಾಗಿ ಕಂಡುಬರುತ್ತವೆ. ಇವುಗಳು ಆಚರಣೆಗಳ ಸ್ವರೂಪ, ಉದ್ದೇಶಗಳನ್ನು ಸೂಕ್ಷ್ಮವಾಗಿ ಧ್ವನಿಸುತ್ತವೆ.

ಸಾದರಲ್ಲಿ ರಚನೆಯಾಗಿರುವ ಜನಪದ ಗೀತೆಗಳನ್ನು ಗಮನಿಸಿದಾಗ ಅವುಗಳು ಸಾಮಾನ್ಯವಾಗಿ ತಮ್ಮ ಮುಖ್ಯ ಕಸುಬಾದ ಕೃಷಿ ಕಾರ್ಯದ ಸಮಯದಲ್ಲಿ ತಮ್ಮ ಆಯಾಸವನ್ನು, ಬೇಸರವನ್ನು ನೀಗಿಸಿಕೊಳ್ಳಲು ಸೃಷ್ಟಿಯಾದಂತಹವುಗಳು. ಮತ್ತೆ ಕೆಲವು ಸಂಪ್ರದಾಯಗಳ ಹಿನ್ನೆಲೆಯಲ್ಲಿ ಜನ್ಮತಾಳಿ ಬಂದವುಗಳಾಗಿವೆ. ಸಾದರು ಸಂಪ್ರದಾಯವಾದಿಗಳಾಗಿದ್ದು ಅವರು ಆಚರಿಸುವಂತಹ ಎಲ್ಲಾ ಆಚರಣೆಗಳು ಸಹ ಸಂಪ್ರದಾಯಬದ್ಧವಾದವುಗಳಾಗಿರುತ್ತವೆ.

ಶಾಸ್ತ್ರೋಕ್ತವಾಗಿ ನಡೆಯುವ ಆಚರಣೆಗಳ ಸಂದರ್ಭದಲ್ಲಿ ಅವರು ಹಾಡುಗಳನ್ನು ಕಟ್ಟಿ ಹಾಡುವಂತಹ ಪದ್ಧತಿಯು ಹಿಂದಿನಿಂದಲೂ ರೂಢಿಯಲ್ಲಿರುವುದನ್ನು ಕಾಣಬಹುದು. ವಿಶ್ವದಾದ್ಯಂತ ಇರುವ ಜನಪದ ಸಮಾಜಗಳಲ್ಲಿರುವಂತೆ ಸಾದರಲ್ಲಿಯೂ ಮದುವೆ, ಜನನ, ಮರಣ ಮತ್ತು ಕೃಷಿ

ಸಂಬಂಧಿ ಹಾಡುಗಳು, ಹಬ್ಬ-ಹರಿದಿನಗಳನ್ನು ಕುರಿತ ಹಾಡುಗಳು ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ಗಮನಿಸಬಹುದು.

ಒಟ್ಟಾರೆ ಸಾದರಲ್ಲಿರುವ ಈ ಜನಪದ ಗೀತೆಗಳು ಶ್ರಮಸಂಸ್ಕೃತಿ ಮತ್ತು ಸಾಂಪ್ರದಾಯಿಕ ಆಚರಣೆಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಸಾದರಲ್ಲಿ ರೂಢಿಯಲ್ಲಿರುವ ಕೆಲವು ಹಾಡುಗಳನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

ಹೆಣ್ಣು ಮಕ್ಕಳು ಬೆಳವಣಿಗೆಯಾಗುವುದು, ಋತುಮತಿಯಾಗುವುದು ಎಲ್ಲವೂ ಪ್ರಕೃತಿಯಲ್ಲಿನ ಬದಲಾವಣೆಯ ಸಹಜ ನಿಯಮ. ಆ ನಿಯಮಕ್ಕನುಗುಣವಾಗಿ ಹಲವು ಸಾಂಪ್ರದಾಯಿಕ ಆಚರಣೆಗಳು ಸಾಂಗೋಪವಾಗಿ ನಡೆಯುತ್ತದೆ. ಆ ಸಂದರ್ಭದಲ್ಲಿ ಸೋಬಾನೆ ಪದಗಳನ್ನು ಹಾಡುವ ವಾಡಿಕೆ ರೂಢಿಯಲ್ಲಿದೆ. ಸೋಬಾನೆ ಎನ್ನುವ ಶಬ್ದವೇ ಶುಭವನ್ನು ಸೂಚಿಸುವಂಥದ್ದು. ಶುಭವನ್ನು ಕೋರುವ ಮತ್ತು ಹಾರೈಸುವ ಸಂದರ್ಭಗಳೆಲ್ಲಾ ಈ ಹಾಡುಗಳು ಬಳಕೆಯಾಗುತ್ತವೆ.

ಮೈನೆರೆದ ಹೆಣ್ಣುಮಗಳಿಗೆ ಸಕಲ ಅಲಂಕಾರಗಳನ್ನು ಮಾಡಿ ಶೃಂಗರಿಸಿ ಆಕೆಯನ್ನು ಮನೆಯ ಒಳಕೋಣೆಯಲ್ಲಿರಿಸಲಾಗಿರುತ್ತದೆ. ಇನ್ನು ಮನೆಯ ಅಂಗಳದಲ್ಲಿ ಹಿರಿಯ ಮುತ್ತೈದೆಯರೆಲ್ಲರೂ ಆ ಹೆಣ್ಣುಮಗಳಿಗೆ ಒಸಗೆಹಾಕಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಸೋಬಾನೆಪದದ ಮುಖೇನ ಆಕೆಯನ್ನು ಹೊರಬಂದು ಕುಳಿತುಕೊಳ್ಳುವಂತೆ ಹೇಳುವ ಸಂದರ್ಭದ ಚಿತ್ರಣವಿದು;

"ಕರೆವರು ಬಾರೆ ಹಸೆಗೆ ಕಾಂತಾಮಣಿ ॥ಪ॥

ಅಂಗಾನೆಯರ್ಕರೆವರು ಬಾರೆ

ಹಸೆಗೆ ಕಾಂತಾಮಣಿ

ಸಂಗೀತಗಳ್ ಪಾಡುವರು

ಮಂಗಳಾಂಗಿ ಬಂದು ಕೂಡೆ

ಕರೆವರು ಬಾರೆ ಹಸೆಗೆ ಕಾಂತಾಮಣಿ ॥ಪ॥

ಕರೆವರು ಬಾರೆ ಹಸೆಗೆ

ಜನಕನ ಮಗಳಿಗೆ ಜಾನಕಿ ದೇವಿಗೆ

ಮಾತೆಪಲಿಸಮ್ಮ ನೀನು

ಕರೆವರು ಬಾರೆ ಹಸೆಗೆ ಕಾಂತಾಮಣಿ". ॥ಪ॥

[illegible]

[illegible]

[illegible]

[illegible]

ಮನೆಯಲ್ಲಿ ಮದುವೆಗೆ ಪ್ರಸ್ತಾಪವಾದ ತರುವಾಯ ಗಂಡಿನ ಚೆಲುವನ್ನು, ಶಕ್ತಿ, ಸಾಮರ್ಥ್ಯವನ್ನು ಕುರಿತು ಭಾವಿ ವಧುವಿಗೆ ತಿಳಿಸುವ ಚಿತ್ರಣವನ್ನು ಗಮನಿಸುವುದಾದರೆ;

'ಎಂಥಾ ಚೆಲುವನಮ್ಮ ಸುಂದರಾಂಗ

ಮುಖನೋಡಿ ಕೃಪೆಮಾಡೆ ಕೋಮಾಲಾಂಗಿ ॥ಪ॥

ವಲಮನೆಗದ್ದೆ ತೋಟವಿದೆಯಮ್ಮ

ಒಂಕಿಸರ ಕೇಳಿದರೆ ಇಲ್ಲವಮ್ಮ

ಕೋಟುಪೇಟ ಆಕೋದ್ರಲ್ಲಿ ಧೀರನಮ್ಮ

ಎಂಥಾ ಚೆಲುವನಮ್ಮ ಸುಂದರಾಂಗ

ಮುಖನೋಡಿ ಕೃಪೆಮಾಡೆ ಕೋಮಲಾಂಗಿ. ॥ಪ॥

ಭಕ್ತಿಯಿಂದ ಭಗವಂತನನ್ನು ಸ್ಮರಿಸುವಾಗ, ನಮಿಸುವಾಗ, ಪೂಜಿಸುವಾಗ ಏನೆಲ್ಲಾ ಪರಿಕರಗಳನ್ನು ಬಳಸಿ ಪೂಜಿಸಿದರೆ ಶುಭವಾಗುತ್ತದೆ ಅಥವಾ ಜಯವಾಗುತ್ತದೆ ಎಂಬ ವಿಷಯವನ್ನು ತಿಳಿಸುವ ಸಂದರ್ಭದ ಚಿತ್ರಣವಿದು;

"ಬಾಕ ಬಾಕಲಿಗೆಲ್ಲ ಬಾಳೆಹಣ್ಣಿನ ಪೂಜೆ

ಬಾಳೆಹಣ್ಣಿನಪೂಜೆ ಗಲುಪೂಜೆ ಗಲುವಾದ

ಜಯಮಂಗಳ

ಜಗನ್ಮಾತೆ ಸೀತೆ ಜಯಮಂಗಳ

ಕಂಬ-ಕಂಬಕ್ಕೆಲ್ಲ ನಿಂಬೆಹಣ್ಣಿನ ಪೂಜೆ

ನಿಂಬೆಹಣ್ಣಿನ ಪೂಜೆ ಗಲುಪೂಜೆ ಗಲುವಾಗ

ಜಯಮಂಗಳ

ಜಗನ್ಮಾತೆ ಸೀತೆ ಜಯಮಂಗಳ

ತುಪ್ಪಸ್ಥಾನದ ಭತ್ತಿ ಹೊನ್ನದಿಂದುರಿವಾಗ

ಮಾಡುವೆ ಪ್ರಸ್ಥಾಪ ನೋಡಿರಿ ಧನ್ಯಾಳಾಟ

ಜಯಮಂಗಳ ಜಗನ್ಮಾತೆ ಸೀತೆ ಜಯಮಂಗಳ

ಎಣ್ಣೆಸ್ಥಾನದ ಭತ್ತಿ ಹೊನ್ನದಿಂದುರಿವಾಗ ಮಾಡುವೆ

ಪ್ರಸ್ಥಾಪ ನೋಡಿರಿ ಧನ್ಯಾಳಾಟ ಜಯಮಂಗಳ

ಜಗನ್ಮಾತೆ ಸೀತೆ ಜಯಮಂಗಳ

ಶಿರದಾಮ್ಯಾಗಳ ದಂಡೆ ಅದರ ಒಳಗೆ ನಾ ಕಂಡೆ

ಹಾಡಿರೆ ಪ್ರಸ್ಥಾಪ ನೋಡಿರಿ ಧನ್ಯಾಳಾಟ

ಜಯಮಂಗಳ ಜಗನ್ಮಾತೆ ಸೀತೆ ಜಯಮಂಗಳ".

ಜನಪದ ಗೀತೆಗಳು ಜನರ ಮನದ ಆಸರಿಕೆ–ಬೇಸರಿಕೆ ನೀಗಿಸಿಕೊಳ್ಳಲಷ್ಟೇ ಅಲ್ಲದೇ ಸಾಂಪ್ರದಾಯಿಕ ಹಿನ್ನೆಲೆಯ ಜೊತೆಗೆ ಕ್ರಿಯಾಪ್ರಧಾನ ಗೀತೆಗಳು ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು. ಬಿಡುವಿಲ್ಲದ ತಮ್ಮ ಕೃಷಿಕಾರ್ಯಗಳ ಮಧ್ಯೆ ಮನದ ಬೇಸರ ನೀಗಿಸಿಕೊಳ್ಳಲು ಈ ಕ್ರಿಯಾಪ್ರಧಾನ ಗೀತೆಗಳು ನೆರವಾಗುತ್ತವೆ. ಈ ಜನಪದ ಗೀತೆಗಳ ಹಿಂದೆ ಒಂದು ಬದುಕಿರುತ್ತದೆ. ಆ ಗೀತೆಗಳು ಹುಟ್ಟಿದ ಹಿನ್ನೆಲೆಯಲ್ಲಿ ಸಮಾಜವಿರುತ್ತದೆ. ಶ್ರಮಸಂಸ್ಕೃತಿಯ ಉಪಉತ್ಪನ್ನಗಳೇ ಈ ಗೀತೆಗಳು. ಶ್ರಮ ಬದಲಾದಂತೆ ಜನಪದ ಗೀತೆಗಳನ್ನು ಹಾಡುವ ಧಾಟಿಯು ಬದಲಾಗುತ್ತದೆ. ಅಣ್ಣ, ತಂಗಿ, ತಮ್ಮನ ನಡುವಿನ ಸಂಭಾಷಣೆಯ ಗೀತೆಯನ್ನು ಗಮನಿಸುವುದಾದರೆ;

"ತಮ್ಮ ತೆಂಗಿನ ಮರನೆಡೊ

ತಮ್ಮ ಸೀಬೆಯಮರ ನೆಡೊ

ಅಣ್ಣನ ಮನೆಗೆ ಹೆಣ್ಣಿಗೆ ನಾನೋದೆ

ಸುಣ್ಣದ ಗೋಡೆ ವರಗಿದೆ ॥ಪ॥

ಸುಣ್ಣದ ಗೋಡೆ ವರಗಿದೆ ಚಿಕ್ಕಬಾಲೆ

ಸುಮ್ಮನೆ ಆ ವೆಣ್ಣ ಕೊಡೆ ಬಾರೆ

ಇವತ್ತು ಬರೋ ತಂಗಿ ನೆನ್ನೇನು ಮಾಡುತಿದ್ದೆ

ನೆನ್ನಿಲ್ಲದ ಮೊನ್ನೆ ಅವಳೊರು

ನೆನ್ನಿಲ್ಲದ ಮೊನ್ನೆ ಅವಳೊರು ಬಂದಿದ್ರು ॥ಪ॥

ಬಣ್ಣುಡಿಸಿ ಬಳಿಯ ತೊಡಿಸ್ಯಾರೆ

ಬಣ್ಣಕ್ಕೆ ಬಾಯ ಬಿಡಿಸ್ಯಾರೊ

ಕೊಟ್ಟಾರೆ ಕೊಡಿರಣ್ಣ ಬಿಟ್ಟಾರೆ ಬಿಡಿರಣ್ಣ

ಸಿಟ್ಟು ಬಂದರೆ ಶಿವಗಂಗೆ

ಸಿಟ್ಟುಬಂದರೆ ಶಿವಗಂಗೆ ಪೇಟೆಯೊಳಗೆ

ಚಿಕ್ಕಣ್ಣನ ಮಗಳ ತರಬಲ್ಲೆ ॥ಪ॥

ಚಿಕ್ಕಣ್ಣನ ಮಗಳ ತಂದು ಲಗ್ನವ ಮಾಡಿ

ನಿನ್ನೊರ ಮುಂದೆ ಮೆರವಣಿಗೆ ಗಲುವಾಗ

ಸುಣ್ಣಕ್ಕೆ ನೂರಾಳ ಕಳುವೇನೆ

ತಮ್ಮ ತೆಂಗಿನಮರ ನೆಡೊ

ತಮ್ಮ ಸೀಬೆಯಮರ ನೆಡೊ

ತಮ್ಮ ಮಾಡುವ ಬದುಕಿನ ಮ್ಯಾಗೆ ಗ್ಯಾನವಿಡೋ". ॥ಪ॥

ತಮ್ಮನಿಗೆ ಬದುಕಿನ ನಿರ್ದೇಶನ ಮಾಡುತ್ತಲೇ, ಹೆಣ್ಣುಮಗಳೊಬ್ಬಳು ತಾನು ತನ್ನ ಹಿರಿಯಣ್ಣನ ಮನೆಗೋಗಿ ಹೆಣ್ಣು ಕೇಳಿದಾಗ ಆತ ಹಲವು ಕಾರಣಗಳನ್ನು ಹೇಳಿ ನಿರಾಕರಿಸಿದ್ದು; ಆಕೆ ತಾನು ಚಿಕ್ಕಣ್ಣನ ಮಗಳನ್ನು ತಂದು ಮಗನಿಗೆ ಮದುವೆ ಮಾಡುವುದಾಗಿ ತನ್ನಣ್ಣನಿಗೆ ಸವಾಲುಹಾಕಿದ ವಿಷಯವನ್ನು ಹೇಳುತ್ತಲೇ ತಾವು ಮಾಡುವ ಬದುಕಿನ ಮೇಲೆ ಗಮನವಿರಲೆಂದು ತಮ್ಮನನ್ನು ಎಚ್ಚರಿಸುವ ಪರಿಯನ್ನು ನಾವಿಲ್ಲಿ ಗಮನಿಸಬಹುದು.

ಜನಪದರಲ್ಲಿ ಹಾಸ್ಯಪ್ರಧಾನ ಸಂಭಾಷಣಾರೂಪದ ಗೀತೆಗಳು ಸಾಕಷ್ಟಿದ್ದು ಇವು ಮನದ ಬೇಗೆ–ಬೇಸರ ನೀಗಿಸುವಲ್ಲಿ ನೆರವಾಗುತ್ತವೆ. ಚತುರ ಗಂಡನ ಪ್ರಶ್ನೆಗೆ ಜಾಣಮಡದಿಯ ಉತ್ತರದ ಮಾದರಿಯ ಸಂಭಾಷಣಾರೂಪದ ಗೀತೆಯನ್ನು ಗಮನಿಸುವುದಾದರೆ;

"ಮನೇಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ

ಸೊಪ್ಪುಗಿಪ್ಪು ಇಲ್ಲ ಅಂತ ಸೊಪ್ಪುತರಕ್ ಹೋಗಿದ್ದೆ

ಸೊಪ್ಪುಗಿಪ್ಪು ತಂದ ಹೆಣ್ಣು ಸೊಪ್ಪ ಏನು ಮಾಡಿದೆ

ಬಾಡಿಗೀಡಿ ಹೋದಿತೆಂದು ಹೊಲೆಯಮೇಲೆ ಇಟ್ಟಿದ್ದೆ.

ಮನೆಲಿರ್ತೀನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ

ಕೋಳಿ–ಗೀಳಿ ಇಲ್ಲ ಅಂತ ಕೋಳಿತರಕ್ ಹೋಗಿದ್ದೆ

ಕೋಳಿ-ಗೀಳಿ ತಂದ ಹೆಣ್ಣು ಕೋಳಿ ಏನ ಮಾಡಿದೆ
ಹೋಡಿ-ಗೀಡಿ ಹೋದಿತೆಂದು ಕತ್ತುನುಲುಚಿ ಮಡಗಿದ್ದೆ.
ಮನೆಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ
ಸರ-ಗಿರ ಇಲ್ಲ ಅಂತ ಸರತರಕ್ ಹೋಗಿದ್ದೆ
ಸರ-ಗಿರ ತಂದ ಹೆಣ್ಣು ನೀನು ಸರ ಏನ ಮಾಡಿದೆ
ಕಳ್ದು-ಗೀಳ್ದು ಹೋದಿತೆಂದು ಕಳ್ಳನಕೈಗೆ ಕೊಟ್ಟಿದ್ದೆ.
ಮನೆಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ
ಮಡಕೆ-ಗಿಡಕೆ ಇಲ್ಲ ಅಂತ ಮಡಕೆ ತರಕ್ ಹೋಗಿದ್ದೆ
ಮಡಕೆ-ಗಿಡಕೆ ತಂದ ಹೆಣ್ಣು ಮಡಕೆ ಏನ ಮಾಡಿದೆ
ಹೊಡೆದು-ಗಿಡೆದು ಹೋದಿತೆಂದು ಕಲ್ಲಹೇರಿ ಮಡಗಿದ್ದೆ
ಮನೆಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ
ಎಮ್ಮೆ-ಗಿಮ್ಮೆ ಇಲ್ಲ ಅಂತ ಎಮ್ಮೆ ತರಕ್ ಹೋಗಿದ್ದೆ
ಎಮ್ಮೆ-ಗಿಮ್ಮೆ ತಂದ ಹೆಣ್ಣು ನೀನು ಎಮ್ಮೆನ ಏನ ಮಾಡಿದೆ
ಕಳ್ದು-ಗಿಳ್ದು ಹೋದಿತೆಂದು ಕಣ್ಣಿ ಕಚ್ಚಿ ಮಡಗಿದ್ದೆ
ಮನೆಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ
ಬೆಣ್ಣೆ-ಗಿಣ್ಣೆ ಇಲ್ಲ ಅಂತ ಬೆಣ್ಣೆ ತರಕ್ ಹೋಗಿದ್ದೆ
ಬೆಣ್ಣೆ-ಗಿಣ್ಣೆ ತಂದ ಹೆಣ್ಣು ನೀನು ಬೆಣ್ಣೆ ಏನ ಮಾಡಿದೆ
ಕರಗಿ-ಗಿರಗಿ ಹೋದಿತೆಂದು ಒಲೆಯ ಮೇಲೆ ಇಟ್ಟಿದ್ದೆ
ಮನೆಲಿರ್ತಿನಂತ ಹೆಣ್ಣು ನೀನು ಸಂತೆಗೇಕೆ ಹೋಗಿದ್ದೆ".

ಹೀಗೆ ಹಾಸ್ಯಪ್ರಧಾನವಾದ ಸಂಭಾಷಣಾರೂಪದ ಗೀತೆಗಳು ಜನಪದರಲ್ಲಿ ಹೇರಳವಾಗಿ ದೊರೆಯುತ್ತವೆ. ಮದುವೆಯ ಆಚರಣೆಯಲ್ಲಿ ಸಡಗರ-ಸಂಭ್ರಮಗಳೆಲ್ಲ ಮುಗಿದ ತರುವಾಯ ಮದುವೆಗೆಂದು ಬಂದಿದ್ದ ನೆಂಟರಿಷ್ಟರೆಲ್ಲರೂ ತಮ್ಮ-ತಮ್ಮ ಮನೆಗೆ ಮರಳಿದ ಬಳಿಕ ಕರುಳು ಹಿಂಡುವ ಪ್ರಸಂಗವೊಂದು ಎದುರಾಗುತ್ತದೆ. ತಮ್ಮ ಮನೆ ಮಗಳನ್ನು ಕಣ್ಣಿನ ರೆಪ್ಪೆಯಂತೆ ತಂದೆ-ತಾಯಿಗಳು ಬಹು ಪ್ರೀತಿಯಿಂದ ಸಾಕಿ ಸಲಹಿರುತ್ತಾರೆ. ಆ ಮಗಳನ್ನು ಗಂಡನ ಮನೆಗೆ ಕಳುಹಿಸಲೇ

ಬೇಕಾದ ಅನಿವಾರ್ಯ. ಆದರೆ ತಂದೆ-ತಾಯಿಯ ನೆರಳಲ್ಲಿ ಅಕ್ಕ-ತಂಗಿ, ಅಣ್ಣ-ತಮ್ಮರ ಮಮತೆ, ಪ್ರೀತಿ, ವಿಶ್ವಾಸಗಳ ನೆರಳಲ್ಲಿ ಬೆಳೆದ ಹೆಣ್ಣುಮಗಳು ತನ್ನವರನ್ನೆಲ್ಲ ಹಾಗೂ ತಾನು ಹುಟ್ಟಿ-ಬೆಳೆದ ಮಣ್ಣನ್ನು ಬಿಟ್ಟು ಕಂಡೂ-ಕಾಣದ ಪ್ರದೇಶಕ್ಕೆ ಅಪರಿಚಿತ ಕುಟುಂಬದೊಂದಿಗೆ ಬಾಳ್ವೆನಡೆಸಲು ಹೋಗಲೇಬೇಕಾದ ಅನಿವಾರ್ಯ ಉಂಟಾದಾಗ ಆಕೆಯು ದುಃಖದಿಂದ ತನ್ನ ಮನಸ್ಸಿನ ನೋವನ್ನು ಯಾರಿಗೂ ಹೇಳಲಾಗದೆ ಮೂಖವೇದನೆಯನ್ನು ಅನುಭವಿಸುತ್ತಾ ಕುಳಿತಾಗ ಅದನ್ನು ಮನಗಂಡ ತಾಯಿಯು ತನ್ನ ಕರುಳಿನ ಕುಡಿಗೆ ಗಂಡನ ಮನೆಯಲ್ಲಿ ಹೇಗೆ ಬಾಳಬೇಕೆಂಬುದನ್ನು ಮನಮಿಡಿಯುವಂತೆ ಹೃದಯತುಂಬಿ, ಕಣ್ತುಂಬಿ ಬರುವಂತೆ ತಿಳಿಸುವ ಚಿತ್ರಣ ಹೀಗಿದೆ;

“ನನ್ನ ಕರುಳಿನ ಕುಡಿ ನೀನು

ಹಿಂಗ ಅಳುಕುತ ಕುಂತ್ಯಾಕಾ

ನಿನ್ನ ಕೈಯ್ಯಾ ಹಿಡಿದವನಾ

ಮನೆಯನ್ನು ಸೇರಲಾಕಾ

ಮಡಿಲಾಗ ಹುಟ್ಟಿದ ಬಳ್ಳಿ

ಮಡಿಲಾಗ ಉಳಿದೆನಾ

ಕುಡಿಬಿಟ್ಟು ಹೊರಗೆ ಬಂದು

ಹೂ ಹಣ್ಣಾನ ಕೊಡಲೇನಾ.....

ಮನೆಯಿದ್ದಾಂಗ ಮನಸಿರಲಿ

ಬಿಡ ಬ್ಯಾಡವ್ವ ನೀ ಮರೆತಾ

ಅನುಗಾಲ ನಡೆದಂತೇ

ಹೆಣ್ಣು ಜನಮಾಕ ಈ ಮಾತಾ

ಅತ್ತೆಮಾವರಿಗೆಂದೂ ಎದುರುತ್ತಾರ ಹೇಳಬೇಡ

ಮತ್ತೆ ಸಂತೋಷ ಎನ್ನಿಸಿದರೂ

ಎಂದು ಜೋರಾಗಿ ನಗಬೇಡ

ನಿನ್ನ ಗಂಡಾಂಗೆಯಿರುತಾರೆ

ಚಂದ ಸಿರಿವಂತ ಗೆಳೆಯರು

ನಿನ್ನ ಚೆಲುವ ರೂಪವ ನೋಡಿ

ಅವರು ಮೋಹಿಸಿಬಿಟ್ಟಾರು

ಗಟ್ಟಿ ಇರಲವ್ವ ನಿನ್ನ ಶೀಲಾ

ಗಂಡ ಗುಟ್ಯಾಗ ಮೀಸಲು

ಇಟ್ಟಿ ಬಾಳಾವ್ವ ನನ್ನ ಮಗಳ

ಹೆಚ್ಚು ಹೇಳಾಕ ಏನಿಲ್ಲ".

'ಎಷ್ಟು ಜನರ ಕಾಲಿಗೆ ಬಿದ್ರು; ಗಂಡನ ಮನೆಗೋಗೊದು ತಪ್ಪಾಕಿಲ್ಲ' ಎಂಬ ನಾಣ್ಣುಡಿಯಂತೆ ಮದುವೆಯಾದ ಹೆಣ್ಣುಮಗಳು ತಾನು ಹುಟ್ಟಿ, ಆಡಿ, ಬೆಳೆದ ತವರನ್ನೂ, ತನ್ನವರೆಲ್ಲರನ್ನೂ ತೊರೆದು ಗಂಡನ ಮನೆಗೆ ಹೋಗಬೇಕಾದ ಸಂದರ್ಭದಲ್ಲಿ ದುಃಖದಿಂದ ಮೌನವಾಗಿ ಚಿಂತಿಸುತ್ತಾ ಕುಳಿತಾಗ, ಆ ಹೆಣ್ಣು ಮಗಳ ತಾಯಿಯು ತನ್ನ ಮಗಳು ಗಂಡನ ಮನೆಯಲ್ಲಿ ಹೇಗೆ ಅರಿತು ಬಾಳಬೇಕೆಂಬುದನ್ನು ಧ್ವನಿಪೂರ್ಣವಾಗಿ ತಿಳಿಸುತ್ತಾಳೆ.

ಬದುಕಿನಲ್ಲಿ ಎಲ್ಲವೂ, ಎಲ್ಲರೂ ಸರಿಯಿದ್ದರೆ ಸಮಸ್ಯೆಯಿಲ್ಲ. ಆದರೆ ಬದುಕು ಸೂತ್ರ ಹರಿದ ಗಾಳಿಪಟದಂತಾದಾಗ ಆ ಹೆಣ್ಣು ಮಗಳು ಬೇಸರದಿಂದ ತನ್ನ ಮನದಾಳದ ನೋವನ್ನು, ದುಗುಡ-ದುಮ್ಮಾನವನ್ನು ವ್ಯಕ್ತಪಡಿಸುವ ಪರಿ ಮನೋಜ್ಞವಾದದ್ದು.

"ನವಿಲೇ ನವಿಲೊಂದಾಡುತಾ

ನವಿಲೇ ಹಿಂದೆ ಓಡುತಾ ॥ಪ॥

ನುಗ್ಗೆಯ ಹಾಕಲಿಲ್ಲ

ಅವರ ಬುದ್ದಿ ತಿಳಿಯಲಿಲ್ಲ

ಬುದ್ದಿವಂತರಿಗೆ ನನ್ನ ಕೊಡಲಿಲ್ಲ ರಾಮ

ನನ್ನ ಕೊಡಲಿಲ್ಲ ರಾಮ

ಬುದ್ದಿವಂತರಿಗೆ ನನ್ನ ಕೊಡಲಿಲ್ಲ ತಾಯಿ-ತಂದೆ

ಎಷ್ಟೇ ಇದ್ದರೆ ನಿಮ್ಮ ಹಗೆತನ ರಾಮ ॥ಪ॥

ಹಗೆತನವಿಲ್ಲವಮ್ಮ

ಸಿರಿತನವಿಲ್ಲವಮ್ಮ

ಹಾದಿಯಲ್ಲಿ ಒಬ್ಬ ಹರಿಬ್ರಹ್ಮರಾಮ

ಹರಿಬ್ರಹ್ಮರಾಮ

ಜಾಲಿಯ ಹಾಕಲಿಲ್ಲ

ಅವರ ಜಾಡು ತಿಳಿಯಲಿಲ್ಲ

ಜಾಣವಂತರಿಗೆ ನನ್ನ ಕೊಡಲಿಲ್ಲರಾಮ

ನನ್ನ ಕೊಡಲಿಲ್ಲರಾಮ

ಜಾಣವಂತರಿಗೆ ನನ್ನ ಕೊಡಲಿಲ್ಲ ತಾಯಿತಂದೆ

ಎಷ್ಟೇ ಇದ್ದರೆ ನಿಮ್ಮ ಹಗೆತನ ರಾಮ

ಹಗೆತನ ರಾಮ ||ಪ||

ಹಗೆತನವಿಲ್ಲವಮ್ಮ

ಸಿರಿತನವಿಲ್ಲವಮ್ಮ

ಹಾದಿಯಲ್ಲಿ ಒಬ್ಬ ಹರಿಬ್ರಹ್ಮರಾಮ

ಹಾದಿಯಲ್ಲಿ ಒಬ್ಬ ಹರಿಬ್ರಹ್ಮ ಕುಳಿತುಕೊಂಡು

ಜ್ಞಾನ ಬಂದರಿಗೆ ಬರೆದಾನೆ ರಾಮ

ನವಿಲೇ ನವಿಲೊಂದಾಡುತಾ

ನವಿಲೆ ಹಿಂದೆ ಓಡುತಾ". ||ಪ||

ಹೀಗೆ ಜನಪದ ಹೆಣ್ಣುಮಗಳು ತನ್ನ ತಂದೆ-ತಾಯಿಯರು ತನ್ನನ್ನು ಯೋಗ್ಯವರನಿಗೆ ಕೊಡಲಿಲ್ಲವೆಂದು ಪರಿತಪಿಸುವಾಗ, ಆದಕ್ಕೆ ಉತ್ತರವಾಗಿ ಅಲೌಕಿಕವ್ಯಕ್ತಿಯೋರ್ವನು ಬ್ರಹ್ಮನು ಹಣೆಬರಹವನ್ನು ಬರೆದಂತೆ ಬದುಕು ಸಾಗುತ್ತದೆ. ವಿಧಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲವೆಂಬುದನ್ನು ತಿಳಿಸುತ್ತಾನೆ.

ಶತ-ಶತಮಾನಗಳಿಂದಲೂ ಎಲ್ಲ ವರ್ಗ-ವರ್ಣಗಳಿಗಿಂತಲೂ ಹೆಚ್ಚಿನ ಶೋಷಣೆಗೆ ಒಳಗಾದ ಸ್ತ್ರೀಯರು, ಈ ನಮ್ಮ ಜಗತ್ತಿನಲ್ಲಿ ಪಶು-ಪಕ್ಷಿಯಾದಿಯಾಗಿ ಸೃಷ್ಟಿಯ ಎಲ್ಲ ಜೀವಿಗಳಿಗೂ ಸ್ವತಂತ್ರವಿದೆ, ಸ್ವಚ್ಛಂದ ಬದುಕಿದೆ. ಆದರೆ ಹೆಣ್ಣಿಗೆ ಹಿಂದಿನಿಂದಲೂ ಅಭಿವ್ಯಕ್ತಿಯ ಸ್ವತಂತ್ರ್ಯವನ್ನೇ ಕೊಡದೆ ಶೋಷಣೆಯ ಕೇಂದ್ರಬಿಂದುವಾಗಿಸಿದ್ದನ್ನು ಪ್ರಸ್ತುತ ಜನಪದ ಗೀತೆಯಲ್ಲಿ ಗಮನಿಸಬಹುದು.

ಎಲ್ಲರ ಮನೆಯ ಮನದ ಕತ್ತಲೆಯನ್ನು ಕಳೆದು ಬೆಳಕು ನೀಡುವವಳು ಹೆಣ್ಣು. ಆಕೆ ತಾನೇ ದೀಪದಂತೆ ಉರಿದು ತನ್ನ ಸುತ್ತಲಿರುವವರಿಗೆಲ್ಲಾ ಬೆಳಕನ್ನೇ ನೀಡುವಳು ತ್ಯಾಗಮಯಿ ಹೆಣ್ಣು. ಅಂತಹ ಒಂದು ಚಿತ್ರಣ ಹೀಗಿದೆ:

"ಈ ಮನೆಯ ಅಂಗಳದ ಬೆಳಕು ನೀನಮ್ಮ

ಕಂಬನಿಯ ಕಾಣಿಕೆಯ ನೀ ಪಡೆದೆಯಮ್ಮ

ಈ ತ್ಯಾಗವೇ ನಿನ್ನ ಕಾಯಲಮ್ಮ ॥ಪ॥

ಆರತಿ ದೀಪ ನೀನಾದೆ

ಉರಿಯುತ ಎಲ್ಲರ ಮನೆಯ ಬೆಳಕಾದೆ

ಹಾದಿಯ ತುಂಬ ಮುಳ್ಳಿರಲಿ

ಯಾರಿಗೆ ಯಾರ ಬಲವಿರಲಿ ॥ಪ॥

ನೀರಿನ ಗುಳ್ಳೆ ನಿಜವಿಲ್ಲ

ಯಾರಿಗೆ ಯಾರ ತನವಿಲ್ಲ

ಹೆಣ್ಣಿನ ಒಡವೆಯೇ ತಾಳ್ಮೆ

ಇದೇ ಜನುಮದಾ ಹಿರಿಮೆ". ॥ಪ॥

ಹೀಗೆ ಜನಪದಗೀತೆಗಳು ಹೆಚ್ಚಿನ ಪ್ರಮಾಣದಲ್ಲಿ ನೀತಿ ಪ್ರಧಾನವಾದವುಗಳಾಗಿರುವುದನ್ನು ಗಮನಿಸಬಹುದು. ಮನುಷ್ಯನಿಗೆ ಇರಲೇಬೇಕಾದ ಅತ್ಯುತ್ತಮ ಗುಣಗಳಲ್ಲಿ ತಾಳ್ಮೆಯು ಒಂದು. ಅದು ಮನೆಯ ಬೆಳಕಾದ ಹೆಣ್ಣಿಗೆ ಅತಿಮುಖ್ಯವಾಗಿರಬೇಕಾದ ಒಡವೆ (ಗುಣ) ಎಂಬ ವಿಚಾರವನ್ನು ಪ್ರಸ್ತುತ ಜನಪದಗೀತೆಯು ಧ್ವನಿಸುತ್ತದೆ.

ತಾಯಿ ಮಗುವಿನ ಆತ್ಮೀಯಸಂಬಂಧ ಒಂದು ಸಾರ್ವಕಾಲಿಕ ಮೌಲ್ಯ ಎಂದೇ ಹೇಳಬಹುದು. ತಾಯಿಗೆ ಮಗುವಿನ ಬಗೆಗಿರುವ ಅಪಾರವಾದ ಪ್ರೀತಿ, ವಾತ್ಸಲ್ಯವನ್ನು ಪ್ರಸ್ತುತ ಜನಪದಗೀತೆಯಲ್ಲಿ ಗಮನಿಸಬಹುದು:

"ಅವ್ವಾಲಿ ಹವ್ವಿಮುದ್ದು, ಬೆಳ್ಳಿ ತಾವರೆ ಮುದ್ದು

ಹಣ್ಣುಳ್ಳ ಮರಕೆ ಗಿಳಿ ಮುದ್ದು

ಎನ್ನಯ್ಯ ನೀ ಮುದ್ದು ನಮ್ಮ ಮನಿಗೆಲ್ಲ.

ಬೆಟ್ಟಕ್ಕೆ ಬಿದಿರಾಸೆ, ಹೆಣ್ಣಿಗೆ ತವರಾಸೆ

ಬಿತ್ತಿದ ಬೆಳೆಗೆ ಮಳೆಯಾಸೆ

ಎನ್ನಯ್ಯ ನಿನ್ನಾಸೆ ನಮ್ಮ ಜಗಕೆಲ್ಲ.

ಶೃಂಗೇರಿ ಊರು ಚಂದ, ಬೇಲೂರು ಗುಡಿ ಚಂದ

ಶಾರದಾಂಬೆಯು ಚಂದ ಜಗಕೆಲ್ಲ

ಎನ್ನಯ್ಯ ನೀ ಚಂದ ನಮ್ಮ ಮನಿಗೆಲ್ಲ.

ಹಾದಿಯ ಹೊಲಚಂದ, ಬೀದಿಯ ಮನೆ ಚಂದ

ಉತ್ರಾಣಿಯಂತ ಮಗುಚಂದ

ಎನ್ನಯ್ಯ ನೀ ಚಂದ ನಮ್ಮ ಮನಿಗೆಲ್ಲ.

ಪಾಂಡವರು ಕೌರವರು ಜೂಜಾಡಿ ಸೋತರು

ಜೂಜಿಗೆ ಮನವ ಕೊಡದಿರು

ಎನ್ನಯ್ಯ ಜೂಜಿಗೆ ಮನವ ಕೊಡದಿರೋ".

ಇಲ್ಲಿ ತಾಯಿಯು ತನ್ನ ಕಂದಮ್ಮನ ಬಗೆಗೆ ತೋರಿದ ಪ್ರೀತಿ, ಅಕ್ಕರೆ, ಅಭಿಮಾನ ಮತ್ತು ತಾಯಿಯು ತನ್ನ ಮಗುವಿಗೆ ದುಷ್ಟ ಚಟಗಳನ್ನು ಕಲಿಯದಂತಿರೆಂದು ಹೇಳುವ ಪರಿ ಸಹಜಸುಂದರವಾಗಿ ಮೂಡಿಬಂದಿದೆ.

ಹೀಗೆ ಸಾದರ ಬದುಕಿನ ಒಳಸುಳಿಗಳನ್ನು ಈ ಜನಪದ ಗೀತೆಗಳು ಅತ್ಯಂತ ಸಮರ್ಥವಾಗಿ ಧ್ವನಿಸುತ್ತವೆ. ಇವರ ಬದುಕಿನ ವಿವಿಧ ಹಂತಗಳಲ್ಲಿ ಮೂಡಿಬಂದಿರುವ ಗೀತೆಗಳು ಅಥವಾ ಹಾಡುಗಳೇ ಸಾದರಲ್ಲಿ ಬೆಳೆದುಬಂದಿರುವ ಸಂಸ್ಕೃತಿಯ ಆಳ-ಅಗಲವನ್ನು, ಶ್ರೀಮಂತಿಕೆಯನ್ನು ತೆರೆದು ತೋರಲು ಸಹಾಯಕವಾದುವುಗಳಾಗಿವೆ ಎಂದೇ ಹೇಳಬಹುದು.

ಒಟ್ಟಾರೆ ಸಾದರಲ್ಲಿನ ಈ ಜನಪದ ಗೀತೆಗಳು ಸಂಸ್ಕೃತಿಯ ಅವಿಭಾಜ್ಯ ಅಂಗವೆಂಬಂತೆ ಕಾರ್ಯನಿರ್ವಹಿಸುತ್ತಿರುವುದು ಅಕ್ಷರಶಃ ಸತ್ಯ ಸಂಗತಿಯೇ ಆಗಿದೆ.

೫.೪:- ಗಾದೆಗಳು

ಗಾಳಿ-ಬೆಳಕಿನಂತೆ ಸರ್ವವ್ಯಾಪ್ತಿತ್ವವನ್ನು ಪಡೆದಿರುವ ಗಾದೆಗಳು ಜನಪದ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲಿ ಒಂದಾಗಿದೆ. ಗಾದೆಗಳು ಬದುಕಿನ ಎಲ್ಲ ಭಾಗಗಳಲ್ಲಿ ಆವರಿಸಿವೆ. ಗಾದೆಗಳು ಜನಸಾಮಾನ್ಯರ ವಿಶ್ವಕೋಶದಂತಿವೆ. ಇವು ಸಾದರನ್ನು ಕುರಿತಂತೆಯು ಬಳಕೆಯಲ್ಲಿವೆ; ಇವು ಜಾತಿಯಲ್ಲಿನ ವಿಧಿನಿಷೇಧ, ಜೀವನದರ್ಶನ, ಸೌಂದರ್ಯಾಭಿರುಚಿ, ವ್ಯವಹಾರ, ರೀತಿ-ನೀತಿ ಮುಂತಾದ ವಿಷಯಗಳನ್ನು ಕುರಿತಂತೆ ವಿಶೇಷ ಮಾಹಿತಿಯನ್ನೊದಗಿಸುತ್ತದೆ.

'ಗಾದೆ ವೇದಕ್ಕೆ ಸಮಾನ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು', ಎಂಬ ಗಾದೆಗಳೇ ಗಾದೆಯ ಮಹತ್ವವನ್ನು ಸಾರಿ ಹೇಳುತ್ತವೆ. ಸಂಕ್ಷಿಪ್ತತೆ, ಅರ್ಥಗರ್ಭಿತತೆ, ಚುರುಕುತನ, ಜನಪ್ರಿಯತೆ ಗಾದೆಯ ಬಹುಮುಖ ಲಕ್ಷಣಗಳಾಗಿವೆ. ಗಾದೆ ಒಳಗೊಳ್ಳದ ವಿಷಯವೇ ಇಲ್ಲವಾದ್ದರಿಂದ ಒಂದೊಂದು ಗಾದೆಯೂ ಬದುಕಿಗೆ ಹೊಸ ತಿಳುವಳಿಕೆಯನ್ನು ನೀಡುತ್ತವೆ. ಒಂದು ಜಾತಿಯ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರವನ್ನೊಳಗೊಂಡ, ಅನಕ್ಷರಸ್ಥ ಸಮುದಾಯ ಸೃಷ್ಟಿಸಿದ ಅಲಿಖಿತ ಇತಿಹಾಸವೆಂದೇ ಹೇಳಬಹುದು.

"ಜನಾಂಗದಲ್ಲಿ ಪ್ರಚಾರದಲ್ಲಿರುವ ತಿಳಿವು ತಕ್ಕ ಮನಸ್ಸಿನಲ್ಲಿ ಬಿದ್ದಾಗ ನಾಲ್ಕು ಮಾತಿನಲ್ಲಿ ಘನಿಸಿ ಮುತ್ತಿನಂತಾಗುತ್ತದೆ. ಹಲವರ ಭಾವ ಒಬ್ಬನ ಮಾತಿನಲ್ಲಿ ಕಂಡು ಆ ಮಾತು ಹಲವರ ಮಾತಾಗುತ್ತದೆ. ಗಾದೆಗಳನ್ನು ನೋಡಿದರೆ ಜನಾಂಗದ ಮನಸ್ಸು ಎಂಥದೆಂದು ಊಹಿಸಲು ಸಾಧ್ಯವಾಗುವುದಕ್ಕೆ ಇದೇ ಕಾರಣ."[7] ಎಂಬ ಮಾಸ್ತಿಯವರ ಅಭಿಪ್ರಾಯದ ಗಾದೆಗಳು ಸಾದರ ಮನಸ್ಸು ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಕುರಿತು ವಿಶ್ಲೇಷಿಸಲು ನೆರವಾಗುತ್ತವೆ.

ಗಾದೆಗಳು ಪ್ರಾಸಬದ್ಧವಾಗಿಯೂ, ಸೂತ್ರರೂಪವಾಗಿಯೂ ಇರುವುದರಿಂದ ಇವು ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ, ನೆನಪಿನಂಗಳದಲ್ಲುಳಿದು-ಬೆಳೆದು ಬಂದಿವೆ. ಈ ಹಿನ್ನೆಲೆಯಲ್ಲಿ ಸಾದರ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡ ಗಾದೆಗಳ ಅಧ್ಯಯನ ಅತ್ಯಂತ ಮಹತ್ವಪೂರ್ಣವಾದದ್ದು. ಜನಪದ ಸಂಸ್ಕೃತಿಯ ಒಂದು ಲಕ್ಷಣವಾಗಿ ಜಾತಿಯನ್ನು ಕುರಿತ ವಿಶ್ಲೇಷಣೆ ಆಗೊಮ್ಮೆ-ಈಗೊಮ್ಮೆ ಕಂಡುಬರುವುದುಂಟು. ಒಂದೊಂದು ಜಾತಿಗೂ ಕೆಲವೊಂದು ನಿರ್ದಿಷ್ಟ ಗುಣಲಕ್ಷಣಗಳನ್ನು ಆರೋಪಿಸಿರುವುದು ಉಂಟು. ಜಾತಿ-ಜಾತಿಗಳ ಸಂಘರ್ಷ, ದ್ವೇಷ, ಅಸೂಯೆ, ವೈಷಮ್ಯ ಮುಂತಾದ ಭಾವನೆಗಳ ಪರಿಣಾಮದಿಂದ ಮೂಡಿಬಂದ ಕೆಲಗಾದೆಗಳನ್ನು ಹೊರತುಪಡಿಸಿದರೆ, ಮತ್ತೆ ಕೆಲ ಗಾದೆಗಳು ಇವರಲ್ಲಿನ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಸಾದರು ಜಾತಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ಹಲವು ಗಾದೆಗಳಲ್ಲಿ ಕೆಲವು ಪ್ರಮುಖ ಗಾದೆಗಳನ್ನು ಚರ್ಚಿಸಲಾಗಿದೆ.

"ಸಾಧಿಟ್ಟವನೇ ಸಾದ"

ಜಾಲಿಕಾಯಿ, ಅಕ್ಕಿ, ರಾಗಿಯ ಕರುಕಿನಿಂದ ತಯಾರಿಸಿದ ಮಿಶ್ರಣವನ್ನು 'ಸಾದು' ಎಂದು ಕರೆಯಲಾಗುತ್ತದೆ. ಈ ಸಾದುವನ್ನು ಹಣೆಗೆ ಧರಿಸಿದವನೇ ಸಾದು ಎಂಬೊಂದು ಗಾದೆ ಇವರಲ್ಲಿ ಬಳಕೆಯಲ್ಲಿದೆ. ಪ್ರತಿನಿತ್ಯವೂ ಚಿಕ್ಕಮಕ್ಕಳಿಂದಿಡಿದು, ವೃದ್ಧರವರೆಗೆ ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಸಾದನ್ನು ಧರಿಸುತ್ತಾರೆ. ಸಾದರು ಎಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರದಂತಿದೆ ಈ ನಾಣ್ನುಡಿ. ಸಾದುವನ್ನು ಧರಿಸುವವನೇ ಸಾದ ಎಂಬರ್ಥವನ್ನು "ಸಾಧಿಟ್ಟವನೇ ಸಾದ" ಎಂಬ ಲೋಕೋಕ್ತಿಯು ಸ್ಫುರಿಸುತ್ತದೆ.

"ಸಾದಿನಬೊಟ್ಟು ಹಣೆಯಾಗೆ"

ಸಾದರನ್ನು ಗುರುತಿಸುವಲ್ಲಿ ನೆರವಾಗುವ ಪ್ರಮುಖ ಅಂಶಗಳಲ್ಲಿ 'ಸಾದು' ಒಂದಾಗಿದೆ. ಈ ಹಿನ್ನೆಲೆಯಲ್ಲಿ 'ಸಾದಿನಬೊಟ್ಟು ಹಣೆಯಾಗೆ' ಎಂಬ ಗಾದೆ ಬಳಕೆಯಲ್ಲಿದೆ. ಸಾಧುವನ್ನು ಧರಿಸುವುದು ಸಾದರ ಪ್ರಮುಖ ಆಚರಣೆಗಳಲ್ಲಿ ಒಂದಾಗಿರುವುದರ ಜೊತೆಗೆ ಸಾದರನ್ನು ಗುರುತಿಸುವಲ್ಲಿ ನೆರವಾಗುತ್ತದೆ.

"ಹಂಚಿಕಡ್ಡಿಯಷ್ಟು ಸಾದಿದರೆ ಕಂಚಿತನಕ ಇಟ್ಟಕೊಂಡು ಬರಬಲ್ಲ"

ಹಣೆಗಿಡುವ ಸಾದುವನ್ನು ಸ್ವಲ್ಪಪ್ರಮಾಣದಲ್ಲಿ ಸಾದಿದರೂ ಅದನ್ನೇ ಎಲ್ಲರಿಗೂ ಇಡುವ ಬುದ್ಧಿವಂತಿಕೆ, ಜಾಣ್ಮೆ ಇವರಲ್ಲಿದೆ. ಅಷ್ಟೇ ಅಲ್ಲದೇ ತಮ್ಮಲ್ಲಿರುವ ಸ್ವಲ್ಪಪ್ರಮಾಣದ ವಸ್ತುವನ್ನೇ ಅಥವಾ ದ್ರವ್ಯವನ್ನೇ ಇತರರೆಲ್ಲರಿಗೂ ಹಂಚುವ ಪರೋಪಕಾರಿ ಸ್ವಭಾವವನ್ನು ಈ ಗಾದೆ ಧ್ವನಿಸುತ್ತದೆ. ಜೊತೆಗೆ ಒಂದು ಮನೆಯ ಹಿರಿಯ ಸ್ತ್ರೀಯು ತಯಾರಿಸಿದ ಸಾಧುವನ್ನೇ ತಮ್ಮ ಜಾತಿಯ ಇತರ ಸಂಬಂಧಿಗಳಿಗೂ, ಬಂಧು-ಬಾಂಧವರಿಗೂ ಕೊಡುವ ವಾಡಿಕೆಯು ಇವರಲ್ಲಿದೆ. "ಹಾಸಿಗೆ ಇರುವಷ್ಟರಲ್ಲೇ ಕಾಲು ಚಾಚು" ಎಂಬಂತೆ ತಮ್ಮಲ್ಲಿರುವಷ್ಟರಲ್ಲೇ ಸಮೃದ್ಧ ಬದುಕು ಸಾಗಿಸುವ ಪ್ರವೃತ್ತಿಯುಳ್ಳವರು ಇವರಾಗಿರುವ ಹಿನ್ನೆಲೆಯಲ್ಲಿ ಈ ಗಾದೆ ರೂಢಿಯಲ್ಲಿದೆ.

"ಊರ್‌ಗೊಂದು ಸಾದ್ರು ಮನೆ"

ಅಲ್ಪಸಂಖ್ಯಾತರಾಗಿರುವ ಸಾದರು ಒಂದೆಡೆ ನೆಲೆಸದೆ ತಮ್ಮ ಸೌಲಭ್ಯಕ್ಕೆ ತಕ್ಕಂತೆ ಹಲವೆಡೆಗಳಲ್ಲಿ ಹರಿದು-ಹಂಚಿಹೋಗಿ ನೆಲೆಸಿರುವುದನ್ನು ಗಮನಿಸಬಹುದು. ಗ್ರಾಮದ ಏಳಿಗೆಗಾಗಿ ಸದಾ ಶ್ರಮಿಸುವ ಮನೋಭಾವವುಳ್ಳ ಸಾದರು ಊರಿಗೊಂದು ಮನೆಯಾದರೂ ಇರಬೇಕೆಂಬ ಹಂಬಲ ಇತರ ಜನರಲ್ಲಿದೆ. ಅಷ್ಟೇ ಅಲ್ಲದೇ ಸಾದರು ಸದಾ ತಮ್ಮ ಬದುಕು-ಬಾಳು ಎಂದು ಶ್ರಮವಹಿಸಿ ದುಡಿಯುತ್ತಾರೆ. ಇದು ಇತರರಿಗೆ ಮಾದರಿಯಾಗಿರಲೆಂದು ಊರಿಗೆ ಒಂದು ಮನೆಯವರು ಇರಬೇಕೆಂಬ ಅಭಿಪ್ರಾಯದಿಂದ 'ಊರಿಗೊಂದು ಸಾದ್ರು ಮನೆ' ಎಂಬ ಗಾದೆ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

"ಹರಿವೇ ಬೀಜಕ್ಕೆ ಒಂಭತ್ತು ಎಜ್ಜೆ ಹಾಕೋನು ಸಾದ್ರು"

'ಶಕ್ತಿಗಿಂತ ಯುಕ್ತಿ ಮೇಲು' ಎಂಬಂತೆ ಬುದ್ಧಿವಂತಿಕೆ, ಜಾಣ್ಮೆ, ಯೋಚನಾಶಕ್ತಿ ಇವೆಲ್ಲವೂ ಜೀವನ ಸುಗಮವಾಗಿ ಸಾಗಲು ಬಹುಮುಖ್ಯ ಸಾಧನಗಳಾಗಿವೆ. ಅಂತೆಯೇ ಸಾದರು ತಮ್ಮೆಲ್ಲ ಕೆಲಸ-ಕಾರ್ಯಗಳನ್ನು ಜಾಣ್ಮೆಯಿಂದ, ಚತುರತೆಯಿಂದ, ಬಲುಶ್ರದ್ಧೆಯಿಂದ ನಿರ್ವಹಿಸುತ್ತಾರೆ. ಅದನ್ನು ಗಮನಿಸಿದ ಇತರೆ ಜನರು ಕಣ್ಣಿಗೆ ಕಾಣುವಷ್ಟು ಮಾತ್ರವೇ ತೀರಾ ಸಣ್ಣ ಪ್ರಮಾಣದ ಸೊಪ್ಪಿನ ಬೀಜವಾದ ಅರಿವೇ ಬೀಜಕ್ಕೆ ಒಂಭತ್ತು ಎಜ್ಜೆಯನ್ನು (ತೂತು, ರಂಧ್ರ) ಹಾಕುವಷ್ಟು ಜಾಣ್ಮೆ, ಚತುರತೆ, ಇವರಲ್ಲಿದೆ ಎಂಬುದನ್ನು ಪ್ರಸ್ತುತ ಗಾದೆಯ ಮುಖೇನ ತಿಳಿಸುವ ಪ್ರಯತ್ನವನ್ನು ನಾವಿಲ್ಲಿ ಗಮನಿಸಬಹುದು.

"ಸಾದಣ್ಣ ಉದ್ದಣ್ಣ"

ಸಾದರು ಬಹುತೇಕ ಕೃಷಿಕರಾಗಿದ್ದು ಇವರು ದೈಹಿಕವಾಗಿ ಸಧೃಢತೆಯಿಂದ ಕೂಡಿದವರಾಗಿದ್ದು ಗೋಧಿ ಮೈಬಣ್ಣವನ್ನು ಹೊಂದಿದ್ದಾರೆ. ಇವರಲ್ಲಿ ಪುರುಷರು ೫, ೬, ೭ ಅಡಿಗಳ ಎತ್ತರವಿದ್ದರೆ ಸ್ತ್ರೀಯರು ೪, ೫, ೬ ಅಡಿ ಎತ್ತರವಿರುತ್ತಾರೆ. ಈ ನಿಟ್ಟಿನಲ್ಲಿ ಸಾದರ ದೈಹಿಕ ಎತ್ತರಕ್ಕನುಗುಣವಾಗಿ ಪ್ರಸ್ತುತ ಗಾದೆ ರಚನೆಗೊಂಡಿರಬಹುದು. ಜೊತಗೆ ಇವರು ಯಾರ ಗೊಂದಲು–ಗೋಜಲುಗಳಿಗೂ ತಲೆಹಾಕದೆ ತನ್ನ ಪಾಡಿಗೆ ತಾನಾಯ್ತು–ತನ್ನ ಕೆಲಸವಾಯ್ತು ಎಂದಿರುವ ಇವರ ಸ್ವಭಾವದ ಹಿನ್ನೆಲೆಯಲ್ಲಿ ಈ ನಾಣ್ನುಡಿ ಮೂಡಿಬಂದಿರುವುದನ್ನು ಕಾಣಬಹುದು.

"ಸಾದ್ರುಗ್ ಕುಲ ಇಲ್ಲ ಮ್ಯಾದರೀಗ್ ಕದ ಇಲ್ಲ"

ಪ್ರಸ್ತುತ ಗಾದೆಯಲ್ಲಿ ಎರಡು ಜಾತಿಗಳ ಹೆಸರು ಉಲ್ಲೇಖವಾಗಿರುವುದನ್ನು ಗಮನಿಸಬಹುದು. ಸಾದರಲ್ಲಿ ಕುಲಪದ್ಧತಿಯೆಂಬುದು ಬಳಕೆಯಲಿಲ್ಲ ಎಂಬುದಾಗಿ ಸಾದರ ಹಿರಿಯರು ಅಭಿಪ್ರಾಯ. ಅದೇ ರೀತಿ ಸದಾಕಾಲವೂ ಬಿದಿರಿನಲ್ಲೇ ಕೆಲಸ ಮಾಡಿ ಬುಟ್ಟಿ, ಮಂಕರಿಗಳನ್ನು ಹಣೆದು ಜೀವನಸಾಗಿಸುವ ಜಾತಿಯಾದ ಮ್ಯಾದರು ತಮ್ಮ ಮನೆಗೆ ಒಂದು ಕದವನ್ನು ಮಾಡಿಕೊಳ್ಳುವುದಿಲ್ಲ. ಕಾರಣ ತಮ್ಮ ಕೆಲಸಕ್ಕಿಂತ ಹಣಬರುವ ಇತರರ ಕೆಲಸವೇ ತಮಗೆ ಮುಖ್ಯವಾದ ಕಾರಣ ತಮ್ಮ ಮನೆಗಾಗಿ ಒಂದು ಕದ ಮಾಡಿಕೊಳ್ಳುವ ಸಮಯವೂ ಅವರಿಗಿರುವುದಿಲ್ಲ ಎಂಬ ಅಂಶವನ್ನು ಪ್ರಸ್ತುತಗಾದೆಯು ಧ್ವನಿಸುತ್ತದೆ.

"ಗೌಡ ಗದ್ದೆಗೆ ಗೌಡ್ತಿ ಮುದ್ದೆಗೆ"

ಮೂಲತಃ ಕೃಷಿಕರಾದ ಸಾದರು ಹಿಂದಿನಿಂದಲೂ ಊರಗೌಡಿಕೆಯನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಕೃಷಿಕಾರ್ಯಕ್ಕೆ ವಿರಾಮವೆಂಬುದಿಲ್ಲ. ದುಡಿದಷ್ಟೂ, ಮಾಡಿದಷ್ಟೂ ಕೆಲಸಗಳಿರುತ್ತದೆ. ಇಂತಹ ಸಂದರ್ಭದಲ್ಲಿ ಗೌಡನಾದರೂ ತಾನು ಮಾಡಬೇಕು, ಆಳುಕಾಳುಗಳಿಂದಲೂ ಮಾಡಿಸಬೇಕು. ಗೌಡ ಸರಿಯಾಗಿ ನಿಗಾವಹಿಸದಿದ್ದರೆ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ತನ್ನ ಬದುಕನ್ನು ಗಮನಿಸಲು ಜೀವಿತದ ಬಹುಪಾಲು ಅವಧಿಯನ್ನು ತನ್ನ ಕೃಷಿ ಕಾರ್ಯದಲ್ಲೇ ಕಳೆಯುತ್ತಾನೆ. ದಿನದ ಬಹುಪಾಲು ಆವಧಿಯನ್ನು ಗದ್ದೆಯಲ್ಲೋ, ಹೊಲ–ತೋಟದಲ್ಲೋ ಕಳೆಯುತ್ತಾನೆ. ಹೀಗೆ ಹಗಲಿರುಳು ಶ್ರಮಿಸುವ ತನ್ನ ಗಂಡನಿಗೂ, ಆಳುಗಳಿಗೂ ಆಹಾರ ಪೂರೈಸುವ ಕಾರ್ಯವನ್ನು ಗೌಡನ ಹೆಂಡತಿ ಮಾಡುತ್ತಾಳೆ. ಹೀಗೆ ಗೌಡನಾದರೂ, ಗೌಡನ ಹೆಂಡತಿಯಾದರೂ, ವ್ಯರ್ಥಕಾಲಕಳೆಯದೆ ಶ್ರಮವಹಿಸಿ ದುಡಿಯಬೇಕೆಂಬ ವಿಚಾರವನ್ನು ಪ್ರಸ್ತುತಗಾದೆ ಧ್ವನಿಸುತ್ತದೆ.

"ಕಟ್ಟೆ ಕಲ್ಲನ್ನು ಕಟ್ಟೆಗೆ ಸೇರ್‌ಸು"

ಸಾದರಲ್ಲಿ ಸೋದರ ಸಂಬಂಧಕ್ಕೆ ಹೆಚ್ಚು ಪ್ರಾಶಸ್ತ್ಯನೀಡುತ್ತಾರೆ. ಅಕ್ಕನ ಮಗ ತಂಗಿಯ ಮಗಳನ್ನು ಮದುವೆಯಾಗುವ ವಾಡಿಕೆ ಇವರಲ್ಲಿದೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬಂತೆ ಒಮ್ಮೆ ಹೆಣ್ಣು ಮಕ್ಕಳು ಮದುವೆಯಾಗಿ ಬೇರೊಂದು ಕುಟುಂಬಕ್ಕೆ ಸೇರಿದ ತರುವಾಯ ತನ್ನ ತವರಿನ ನಂಟನ್ನು ಮತ್ತೆ ಮುಂದುವರೆಸುವ ಸಲುವಾಗಿ ತನ್ನ ಮಗಳನ್ನು ತಮ್ಮನಿಗೆ ಕೊಟ್ಟು ವಿವಾಹ ಮಾಡುವ ವಾಡಿಕೆ ಇವರಲ್ಲಿದೆ. ತಾನು ಬಂದ ಕುಟುಂಬಕ್ಕೆ ಮತ್ತೆ ತನ್ನ ಮಗಳನ್ನು ಸೇರಿಸುತ್ತಾಳೆ. ಈ ಹಿನ್ನೆಲೆಯಲ್ಲಿ 'ಕಟ್ಟೆ ಕಲ್ಲನ್ನು ಕಟ್ಟೆಗೆ ಸೇರಿಸು' ಎಂಬೊಂದು ಗಾದೆ ಇವರಲ್ಲಿ ಚಾಲ್ತಿಯಲ್ಲಿದೆ.

'ಗೌಡಾ ಅಂದ್ರೆ ಓ ಅಂದ ಇಬ್ರಾಳಿಗೆ ಊಟ ಅಂದ್ರೆ ಸಲ್ಲೇ ಇಲ್ಲ'

ಊರಗೌಡಿಕೆಯನ್ನು ಹೊಂದಿರುವ ಸಾದರು ಜಾತಿಯ ಹಿರಿಯನನ್ನು (ಗೌಡನನ್ನು) ಗೌಡಾ! ಎಂದು ಕರೆದರೆ ಹೆಮ್ಮೆಯಿಂದ ಓ ಎನ್ನುವ, ಆದರೆ ಇಬ್ರಾಳಿಗೆ ಊಟ ಎಂದರೆ ಯೋಚಿಸುತ್ತಾ ಖರ್ಚಿಗೆ ಮೂಲವಾಯ್ತೆಂದು ಮೌನ ತಳೆಯುವ ಎಂಬರ್ಥವನ್ನು ಈ ಗಾದೆಯು ಧ್ವನಿಸುತ್ತದೆ. ಊರಿನ ಹಬ್ಬ-ಹರಿದಿನ, ಜಾತ್ರೆ-ಉತ್ಸವದ ಸಂದರ್ಭಗಳಲ್ಲಿ ಕಾರ್ಯನಿರ್ವಹಿಸುವ ಚಾಕರಿಯವರಿಗೆ ಆಹಾರ ಒದಗಿಸುವ ಜವಾಬ್ದಾರಿ ಗೌಡನದಾಗಿರುತ್ತದೆ. ಆ ಸಂದರ್ಭದಲ್ಲಿ ಆತ ಮೌನ ತಳೆದಾಗ ಪ್ರಸ್ತುತ ನಾಣ್ನುಡಿ ರೂಢಿಗೆ ಬಂದಿದೆ.

'ಸಾದ್ರು ಕುಂತೆದ್ರೆ ಸಲಕೇಲಿ ಮಣ್ಣೆತ್ತಿ ಹಾಕಬೇಕು'

ಯಾವುದೇ ಒಂದು ಜಾತಿಯನ್ನು ಕುರಿತು ಮತ್ತೊಂದು ಜಾತಿ ಟೀಕಿಸುವುದು, ಚೇಡಿಸುವುದು ಸರ್ವೇಸಾಮಾನ್ಯ ಸಂಗತಿಯೇ ಸರಿ. ಈ ಹಿನ್ನೆಲೆಯಲ್ಲಿ ಕೆಲಗಾದೆಗಳು ಚಾಲ್ತಿಯಲ್ಲಿವೆ. ಅಂಥಹವುಗಳಲ್ಲಿ ಪ್ರಸ್ತುತಗಾದೆಯು ಒಂದಾಗಿದೆ. ಸ್ವಾರ್ಥಪರರಾದ ಜನರು ಇತರರ ಒಳಿತಿನ ಬಗ್ಗೆ ಯೋಚಿಸರು ಎಂಬ ದೃಷ್ಟಿಯಿಂದ, ಜೊತೆಗೆ ತಮ್ಮಿಂದ ನೆರವನ್ನು ಪಡೆದವರೇ ಮತ್ತೆ ನಮಗೆ ತೊಂದರೆಕೊಡುತ್ತಾರೆ ಎಂಬ ಕಾರಣದಿಂದ ಪ್ರಸ್ತುತ ಗಾದೆಯನ್ನು ಹೇಳಲಾಗುತ್ತದೆ.

'ಸಾದ್ರು ಹೆಚ್ಚಿದ ಊರು ಹಾಳು ಏಡಿ ಹೆಚ್ಚಿದ ಕೆರೆ ಹಾಳು'

ಗ್ರಾಮವೊಂದರಲ್ಲಿ ಸಾದರು ಹೆಚ್ಚಿದರೆ ಅದು ಗ್ರಾಮ ಅಭಿವೃದ್ಧಿಗೆ ಪೂರಕವಾಗುವುದಿಲ್ಲ, ಬದಲಾಗಿ ಮಾರಕವಾಗುತ್ತದೆ ಎಂಬ ಅಭಿಪ್ರಾಯ ಕೆಲ ಇತರೆ ಜನರಲ್ಲಿದೆ ಎಂಬುದನ್ನು ಪ್ರಸ್ತುತಗಾದೆ ತಿಳಿಸುತ್ತದೆ. ಸಾದರು ತಮ್ಮ-ತಮ್ಮಲ್ಲೇ ಒಳಜಗಳ ಕಲಹಗಳನ್ನು ಮಾಡಿಕೊಳ್ಳುತ್ತಾ ಗ್ರಾಮದ ಶಾಂತಿ, ನೆಮ್ಮದಿಯನ್ನು ಕದಡಲು ಕಾರಣವಾಗುತ್ತಾರೆ.

ಹಾಗೆಯೇ ಕೆರೆಯಲ್ಲಿ 'ಏಡಿಕಾಯಿ' ಹೆಚ್ಚಾದರೆ ಅವು ಕೆರೆಯ ಒಳಗಿನಿಂದ ದಡವನ್ನೆಲ್ಲಾ ಕೊರೆದು ಬಿಲಗಳನ್ನು ಮಾಡಿಕೊಳ್ಳುತ್ತವೆ. ಇದರಿಂದ ಕೊರೆದ ಭಾಗದಲ್ಲಿ ನೀರು ಜಿನುಗಿ ಹರಿದು ಕೆರೆ

ಬರಿದಾಗಿ ಒಣಗುತ್ತದೆ. ಬೇಸಿಗೆಯಲ್ಲಿ ಕೃಷಿಕಾರ್ಯಕ್ಕೆ ಕೆರೆಯಲ್ಲಿ ನೀರಿಲ್ಲದಾಗುತ್ತದೆ ಎಂಬ ದೃಷ್ಟಿಯಿಂದ ಪ್ರಸ್ತುತ ಗಾದೆ ರೂಢಿಗೆ ಬಂದಿರುವುದನ್ನು, ಬಳಕೆಯಲ್ಲಿರುವುದನ್ನು ಗಮನಿಸಬಹುದು.

'ಸಾದ್ರಿಗ್ ಗುರು ಮಾದ್ರುಗ್ ಮಗ'

ಸಾದರು ಲಿಂಗಾಯಿತರು ತಮ್ಮ, ಗುರು, ಮೂಲಪುರುಷರೆಂದು ನಂಬಿರುವ, ಭಕ್ತಭಾವದಿಂದ ಆರಾಧಿಸುವ ಮರುಳಸಿದ್ಧನನ್ನು ಕುರಿತು ರಚನೆಯಾಗಿರುವ ನಾಣ್ನುಡಿ ಇದಾಗಿದೆ.

ಕಗ್ಗಲ್ಲುಪುರದಲ್ಲಿ ಮಚ್ಚೆಯ ಕಾಯಕವನ್ನು ಮಾಡುತ್ತಿದ್ದ ಮಾರ ಮತ್ತು ಸುಪ್ರಭೆ ಎಂಬ ದಂಪತಿಗಳ ಮಗನಾಗಿ ಜನಿಸಿದ ಮರುಳಸಿದ್ಧರು ಬಾಲ್ಯದಲ್ಲೇ ತಮ್ಮ ತಂದೆ ತಾಯಿಯರನ್ನು ಕಳೆದುಕೊಂಡಾಗ, ಆ ಊರಿನ ಗೌಡರಾದ ಬಾಚಿಗೌಡ ಮತ್ತು ಮಲ್ಲಮ್ಮ ದಂಪತಿಗಳು ಆ ಮಗುವನ್ನು ತಮ್ಮ ಮಗನೆಂದೇ ಭಾವಿಸಿ ಸಾಕುತ್ತಾರೆ. ನಂತರ ಆ ಮಗುವಿಗೆ ಲಿಂಗದೀಕ್ಷೆಯನ್ನು ಮಾಡುತ್ತಾರೆ. ಮುಂದೆ ಮರುಳಸಿದ್ಧರು ಬೆಳೆದು ಮನುಷ್ಯತ್ವದಿಂದ ದೈವತ್ವದ ಮಟ್ಟಕೇರುತ್ತಾರೆ.

ಹೀಗೆ ಮರುಳಸಿದ್ಧರು ಮಾದಿಗ ಜಾತಿಯಲ್ಲಿ ಜನಿಸಿದರೂ ಸಾದರು ಲಿಂಗಾಯಿತರು ಮರುಳಸಿದ್ಧರನ್ನೇ ತಮ್ಮ ಗುರುಗಳು, ಆರಾಧ್ಯದೈವವೆಂದು ಹೆಮ್ಮೆಯಿಂದ ಒಪ್ಪುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಗಾದೆ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

'ಸಾದ್ರು ಒಪ್ಪೊತ್ತಿಗೆ ಇದ್ರೆ ಒಲೆ ಕಿತ್ತಾಕ್ತಾರೆ'

ಪ್ರಸ್ತುತ ಗಾದೆಯು ಸಾದರು ಜಾತಿಯ ಕೆಲವರಲ್ಲಿನ ದುಡುಕುಬುದ್ಧಿ ಮತ್ತು ದುಂದುವೆಚ್ಚದ ಮನೋಭಾವಕ್ಕೆ ಹಿಡಿದ ಕನ್ನಡಿಯಂತಿದೆ. ಒಮ್ಮೆ ಹೊಟ್ಟೆ ತುಂಬ ಊಟಮಾಡಿದರೆ ಮುಂದಿನ (ನಾಳಿನ) ಬಗ್ಗೆ ಯೋಚಿಸದೆ ಒಲೆಯನ್ನೇ ಕಿತ್ತಾಕುವ ಪ್ರವೃತ್ತಿಯನ್ನು ಹೊಂದಿರುವ ಬಗೆಯನ್ನು ಪ್ರಸ್ತುತ ಗಾದೆ ತಿಳಿಯಪಡಿಸುತ್ತದೆ.

ಮುಂದಾಲೋಚನೆಯಿಲ್ಲದ ಕೆಲವರು ತಮ್ಮಲ್ಲಿರುವ ಆರ್ಥಿಕ ಸಂಪತ್ತನ್ನು ವ್ಯರ್ಥವಾಗಿ ಹಾಳು ಮಾಡುತ್ತಾರೆ. ತಮ್ಮ ಮುಂದಿನ ಭವಿಷ್ಯದ ಬಗ್ಗೆಯಾಗಲಿ. ಮುಂದಿನ ಯಾವ ಪೀಳಿಗೆಯ ಬಗೆಯಾಗಲು ಯೋಚಿಸದೇ, ಇರುವ ಎಲ್ಲ ಸಂಪತ್ತನ್ನು ವ್ಯರ್ಥವಾಗಿ ವ್ಯಯಿಸಿ ನಂತರ ಅಪಾಯಕ್ಕೆ ಸಿಲುಕುವ ಪರಿಯನ್ನು ಪ್ರಸ್ತುತ ಗಾದೆಯು ಸೂಚ್ಯವಾಗಿ ತಿಳಿಸುತ್ತದೆ.

'ಸಾದ ಆದೋನ್ನ ಕೇದ'

ಪ್ರಸ್ತುತ ಗಾದೆಯು ಲೈಂಗಿಕ ಅಶ್ಲೀಲತೆಯಿಂದ ಕೂಡಿದ ಗಾದೆಯಾಗಿದ್ದು, ಸಾದರ ಕೆಲವರಲ್ಲಿ ಉಪಕಾರ ಸ್ಮರಣೆಯ ಮನೋಭಾವವಿಲ್ಲದಿರುವುದನ್ನು ತಿಳಿಯಪಡಿಸುತ್ತದೆ.

ಯಾವುದೇ ಒಬ್ಬ ವ್ಯಕ್ತಿಯು ತನ್ನ 'ಕಷ್ಟಕ್ಕಾದೋನ್ನ ಕೊನೆತನಕನೆನೆ' ತನ್ನ ಕಷ್ಟಕಾಲದಲ್ಲಿ

ಎಂಬಂತೆ, ಸಹಾಯಮಾಡಿದ ವ್ಯಕ್ತಿಯನ್ನು ಕೊನೆವರೆಗೂ ನೆನೆಯದೆ ಸಹಾಯಪಡೆದ ಹಿಂದೆಯೇ ಬೆನ್ನಿಗೆಚೂರಿ ಹಾಕುವ ಕಾರ್ಯ ಮಾಡುತ್ತಾರೆ.

ಸಹಾಯ ಮಾಡಿದ ವ್ಯಕ್ತಿಯನ್ನು ಸ್ಮರಿಸುವ ಬದಲು ಸಹಾಯ ಮಾಡಿದವರ ಮೇಲೆಯೇ ದ್ವೇಷ, ಅಸೂಯೆಯನ್ನು ಸಾಧಿಸಿ ಕೊನೆಗೆ ತನ್ನನ್ನು ಉಳಿಸಿದವನೆಂಬುದನ್ನು ನೋಡದೆ. ಆತನಿಗೆ ತೊಂದರೆ ಕೊಡುವ, ಹಿಂಸಿಸುವ ಕ್ರೌರ್ಯದ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಇಂಥ ಪ್ರವೃತ್ತಿಯ ಕೆಲಮಂದಿ ಎಲ್ಲ ಜಾತಿಗಳಲ್ಲಿಯೂ ಇರುವಂತೆ ಸಾದರು ಜಾತಿಯಲ್ಲಿಯೂ ಇದ್ದಾರೆ. ಇಂಥವರನ್ನು ಕಂಡ ಅನ್ಯ ಜಾತಿಯ ಜನ ಬೇಸರದಿಂದ, ಕೋಪದಿಂದ ಪ್ರಸ್ತುತ ಗಾದೆಯನ್ನು ಸೃಷ್ಟಿಸಿರುವಂತೆ ತೋರುತ್ತದೆ. ಸಾದರ ಕೆಲವರಲ್ಲಿ ಉಪಕಾರ ಸ್ಮರಣೆಯ ಮನೋಭಾವದ ಕೊರತೆ ಇರುವುದನ್ನು ಪ್ರಸ್ತುತ ಗಾದೆಯು ಬಿಂಬಿಸುತ್ತದೆ.

'ಜಾಲಿ ಕಾಲಿಗ್ ಮೂಲ ಸಾದ ಆದೋನ್ಗೆ ಮೂಲ'.

'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಯಂತೆ ಪ್ರಸ್ತುತ ಗಾದೆಯೂ ಸಹ ಸಾದರ ಕೆಲ ಜನರಲ್ಲಿರುವ ದುಷ್ಟತನವನ್ನು ಬಿಂಬಿಸುತ್ತದೆ.

ಜಾಲಿಗಿಡವನ್ನು ಯಾರೂ ನೆಡುವುದಿಲ್ಲ, ಅದು ಪ್ರಕೃತಿ ಸಹಜವಾಗಿ ತಾನೇ ಹುಟ್ಟಿದರೂ ಅವನ್ನು ಬೆಳೆಯಲು ಬಿಡುವುದಿಲ್ಲ. ಕಾರಣ ಜಾಲಿಯನ್ನು ಬೆಳೆದರೆ ಮುಂದೆ ಅದರ ಮುಳ್ಳು ಕಾಲಿಗೆ ತಾಗಿದರೆ ಸಾಕಷ್ಟು ನೋವು-ಹಿಂಸೆಯನ್ನು, ಯಾತನೆಯನ್ನು ಅನುಭವಿಸಬೇಕಾಗುತ್ತದೆ.

ಹಾಗೆಯೇ ಸಾದರ ಕೆಲವರೂ ಸಹಾಯಮಾಡಿದ ವ್ಯಕ್ತಿಗೆ ಬೆಂಬಿಡದ ಭೂತವಾಗಿ ಕಾಡುವ, ಹಿಂಸಿಸುವ ಮನೋವೃತ್ತಿಯನ್ನು ಹೊಂದಿರುವವರಾಗಿದ್ದಾರೆ.

ಜಾಲಿಯನ್ನು ಬೆಳೆಸಿದರೆ ಅದರಿಂದ ನೆರಳಾಗಲಿ, ಹಣ್ಣಾಗಲಿ ದೊರೆಯದು ಬದಲಿಗೆ ನೋವು ಕಟ್ಟಿಟ್ಟ ಬುಟ್ಟಿ, ಅಂತೆಯೇ ಕೆಲ ಸಾದರಿಗೆ ಮಾಡಿದ ಸಹಾಯವೂ, 'ಹೊಳೆಯಲ್ಲಿ ಹುಣಸೆ ಹಣ್ಣು ಕಿವುಚಿದಂತೆ' ವ್ಯರ್ಥವಾಗುತ್ತದೆ. ಜೊತೆಗೆ ಸಹಾಯಮಾಡಿದ ವ್ಯಕ್ತಿಯೇ ಸಾಕಷ್ಟು ನೋವು ಅನುಭವಿಸಬೇಕಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಪ್ರಸ್ತುತ ಗಾದೆ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು. ಸಾದರ ಬಗ್ಗೆ ಇರುವ ಈ ಮೇಲಿನ ಕೆಲಗಾದೆಗಳ ವಿವರಣೆಯಲ್ಲಿ ಸಾದರ ಜಾತಿಯ ಸಾಂಸ್ಕೃತಿಕ ಮೌಲ್ಯಗಳು ಮತ್ತು ಅವರ ಗುಣಸ್ವಭಾವಗಳನ್ನು ತಿಳಿಯಲು ನೆರವಾಗುತ್ತವೆ.

೫.೫:- ಒಗಟುಗಳು

ಜನಪದರ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮಗಳಲ್ಲಿ ಒಗಟುಗಳು ಒಂದಾಗಿವೆ. ಇವು ಪೀಳಿಗೆಯಿಂದ-ಪೀಳಿಗೆಗೆ, ತಲೆಮಾರಿನಿಂದ-ತಲೆಮಾರಿಗೆ, ವ್ಯಕ್ತಿಯಿಂದ-ವ್ಯಕ್ತಿಗೆ, ಮೌಖಿಕರೂಪದಲ್ಲಿ ಸಾಗಿಬಂದಿವೆ. ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಒಗಟುಗಳನ್ನು ಬಳಸುತ್ತಾರೆ. ಇವು

ಸಾದರ ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಗಳ ಮಿಶ್ರಣವಾಗಿವೆ. ಕೃಷಿಕಾರ್ಯದಲ್ಲಿ ತೊಡಗಿರುವ ಸಂದರ್ಭದಲ್ಲಿ ಆಸರಿಕೆ, ಬೇಸರಿಕೆ ನೀಗಿಸಿಕೊಳ್ಳಲು ಸಾದರು ಒಗಟುಗಳನ್ನು ಬಳಸುತ್ತಾರೆ. ಇವು ಅವರ ಬುದ್ಧಿವಂತಿಕೆ, ಹಾಸ್ಯಪ್ರವೃತ್ತಿ, ಚಮತ್ಕಾರಿಕ, ಉಕ್ತಿವೈಚಿತ್ರ್ಯ, ಪಿಡಂಬನೆ, ಬೋಧನೆಯ ಮನೋಭಾವವನ್ನು ತಿಳಿಯಲು ನೆರವಾಗುತ್ತವೆ.

ಜನಪದ ಸಾಹಿತ್ಯದಲ್ಲಿ ಗೀತೆ, ಗಾದೆ, ಕಥೆಗಳಂತೆ ಒಗಟುಗಳು ಸಹ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿದ ಪ್ರಕಾರ. ಒಗಟುಗಳು ಬುದ್ಧಿಪ್ರಧಾನವಾದವುಗಳಾಗಿದ್ದು ಪ್ರಶ್ನೋತ್ತರ ಮಾದರಿಯಲ್ಲಿರುತ್ತವೆ. ಯಾವುದೇ ಒಬ್ಬ ವ್ಯಕ್ತಿ ಒಗಟಿನ ಮುಖೇನ ಇತರ ವ್ಯಕ್ತಿಗೆ ಸವಾಲು ಹಾಕುತ್ತಾನೆ. ಮತ್ತೊಬ್ಬ ವ್ಯಕ್ತಿ ಆ ಸವಾಲನ್ನು ಸ್ವೀಕರಿಸಿ ಒಗಟನ್ನು ಬಿಡಿಸುತ್ತಾನೆ, ಒಗಟಿಗೆ ಉತ್ತರವನ್ನು ನೀಡುತ್ತಾನೆ. ಈ ಒಗಟನ್ನು ಬಿಡಿಸುವ ಕ್ರಮವೇ ಒಂದು ರೀತಿಯ ರೋಮಾಂಚಕತೆಯನ್ನುಂಟುಮಾಡುತ್ತದೆ. ನಿಗೂಢ ಅರ್ಥಗಳನ್ನು ಹೊಂದಿರುವ ಒಗಟುಗಳನ್ನು ಬಿಡಿಸುವುದು ಸುಲಭದ ಮಾತಾಗಿರುವುದಿಲ್ಲ. ಆದರೆ ಅಂತಹ ಕ್ಲಿಷ್ಟಕರ ಒಗಟುಗಳನ್ನು ಬಿಡಿಸುವವನ ಬುದ್ಧಿಸಾಮರ್ಥ್ಯವೂ ಅಷ್ಟೇ ಮುಖ್ಯವಾದದ್ದಾಗಿರುತ್ತದೆ. ಒಗಟುಗಳು ಸಹ ಗಾದೆಗಳಷ್ಟೇ ವಿಶಾಲವ್ಯಾಪ್ತಿಯನ್ನು, ಜನಮನ್ನಣೆಯನ್ನು ಹೊಂದಿವೆ.

ಒಗಟುಗಳು ಬೌದ್ಧಿಕ ಚಮತ್ಕಾರವಿದ್ದಂತೆ ಇವುಗಳಿಗೆ ಜೀವನದಲ್ಲಿ ಪ್ರಕೃತಿಯೂ ಕೌಟುಂಬಿಕ ಪರಿಸರದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿರುವ ಕಸುಬಿನಲ್ಲಿ ಪ್ರಾಣಿ, ಪಕ್ಷಿ, ವಸ್ತುಗಳಲ್ಲಿನ ಗುಣಗಳಿಗನುಗುಣವಾಗಿ ಹೊಂದಿಸಿ ಸರಿಯುತ್ತರವನ್ನು ಕಂಡುಕೊಳ್ಳಬೇಕು. ಆದ್ದರಿಂದಲೇ ಒಗಟುಗಳು ಮನುಷ್ಯನ ಬುದ್ದಿಯ ಚಾಣಾಕ್ಷತೆಯ ಪರೀಕ್ಷೆಗೆ ಒಡ್ಡಿದ ಸವಾಲುಗಳಾಗಿವೆ. ಜೊತೆಗೆ ಜನಪದರ ರಮ್ಯ ಕಲ್ಪನೆ, ಊಹೆ, ಜಾಣ್ಮೆಗಳೆಲ್ಲವೂ ಒಗಟಿನ ವಸ್ತುವಿನೊಂದಿಗೆ ಉಜ್ವಲವಾಗಿ ಅನಾವರಣಗೊಳ್ಳುತ್ತದೆ.

ಒಗಟುಗಳಲ್ಲಿ ಭೂಮಿ, ಆಕಾಶ, ಗೊಬ್ಬರ (ಸಗಣಿ) ಹೀಗೆ ಪ್ರತಿಯೊಂದು, ವಸ್ತು, ವ್ಯಕ್ತಿಗಳೂ ಪ್ರಮುಖಪಾತ್ರವಹಿಸುತ್ತವೆ. ಒಗಟುಗಳು ಗಿಡ–ಮರ, ಬಳ್ಳಿಯನ್ನು ಸಹ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಒಗಟುಗಳನ್ನು ಪ್ರಕೃತಿ ಸಂಬಂಧಿ, ಪ್ರಾಣಿ ಸಂಬಂಧಿ ಎಂದು ಕೆಲವಿದ್ವಾಂಸರು ವಿಭಜಿಸಿದ್ದಾರೆ. ಕರ್ನಾಟಕದಲ್ಲಿ ಅಲ್ಪಸಂಖ್ಯಾತ ಜನಸಮುದಾಯವಾಗಿರುವ ಸಾದರು ತಮ್ಮ ಕೃಷಿ ಕಾರ್ಯದ ಸಂದರ್ಭದಲ್ಲಿ ಬೇಸರ ನೀಗಿಸಿಕೊಳ್ಳಲು ಒಗಟುಗಳನ್ನು ಬಳಸುತ್ತಾರೆ. ಒಗಟುಗಳನ್ನು ಪ್ರಯೋಗಿಸುವ ಸಂದರ್ಭದಲ್ಲಿ ತಮ್ಮ ಮನದಲ್ಲಿನ ಇತರ ಎಲ್ಲ ಗೊಂದಲ–ಗೋಜಲುಗಳನ್ನು ಮರೆತು ಅವುಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡಲಾಗುತ್ತದೆ. ಸಂದರ್ಭೋಚಿತವಾಗಿ ಬಳಕೆಯಾಗುವ ಈ ಒಗಟುಗಳು ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದಾಗಿದ್ದು, ಬಹುಜನಪ್ರಿಯವು, ಮಾನ್ಯವೂ ಆದವುಗಳಾಗಿವೆ.

ಈ ಹಿನ್ನೆಲೆಯಲ್ಲಿ ಜಾತಿಯಲ್ಲಿ ಬಳಕೆಯಲ್ಲಿರುವ ಕೆಲ ಒಗಟುಗಳನ್ನು ಗಮನಿಸುವುದಾದರೆ;

ಕೆಲವೊಮ್ಮೆ ಒಗಟುಗಳು ಪ್ರಶ್ನೋತ್ತರರೂಪದಲ್ಲಿರುವುದನ್ನು ಗಮನಿಸಬಹುದು. ಒಂದೇ ಸಮಯದಲ್ಲಿ ಎರಡು ಬೇರೆ ಬಗೆಯ ಪ್ರಶ್ನೆಗಳನ್ನು ಕೇಳಿದರೂ ಉತ್ತರ ಹೇಳುವ ವ್ಯಕ್ತಿ ಎರಡು ಪ್ರಶ್ನೆಗಳಿಗೆ ಒಂದೇ ಉತ್ತರವನ್ನು ಕೊಟ್ಟು ಒಗಟು ಬಿಡಿಸಬೇಕಾಗುತ್ತದೆ.

ದಾರಿಗ (ಪಥಿಕ): ಈ ದಾರಿ ಎಲ್ಲಿಗೆ ಹೋಗುತ್ತದೆ?

ಮಗಳು: ಅಪ್ಪ ನನ್ನ ಅಲಂಕಾರದಲ್ಲಿ ಏನು ಕೊರತೆ ಇದೆ?

ಕೃಷಿಕ (ತಂದೆ): 'ಕಾಡಿಗೆ'.

ಇದು ತುಂಬಾ ಅರ್ಥಗರ್ಭಿತವಾದ ಒಗಟು. ದಾರಿಹೋಕನೊಬ್ಬ ಕೃಷಿಯಲ್ಲಿ ನಿರತನಾದ ವ್ಯಕ್ತಿಯನ್ನು ಈ ದಾರಿ ಎಲ್ಲಿಗೆ ಹೋಗುತ್ತದೆ ಎಂದು ಕೇಳುತ್ತಾನೆ. ಅದೇ ಸಮಯಕ್ಕೆ ಆ ಕೃಷಿಕನ ಮಗಳು ಅಪ್ಪ ನನ್ನ ಅಲಂಕಾರದಲ್ಲಿ ಏನು ಕೊರತೆ ಇದೆ ಎಂದು ಕೇಳುತ್ತಾಳೆ. ಆಗ ಕೃಷಿಕಾರ್ಯದಲ್ಲಿ ನಿರತನಾದ ವ್ಯಕ್ತಿಯು ಪಥಿಕ ಮತ್ತು ಮಗಳ ಇಬ್ಬರ ಪ್ರಶ್ನೆಗೆ ಉತ್ತರವಾಗಿ 'ಕಾಡಿಗೆ' ಎಂದು ಹೇಳುತ್ತಾನೆ.

ಒಮ್ಮೆ ಅಜ್ಜಿ ಜೀವನೋಪಾಯಕ್ಕಾಗಿ ಕಡ್ಲೆಕಾಯಿ ಮಾರುತ್ತಾ ಕುಳಿತಿರುತ್ತಾಳೆ. ಆಗ ಕಡಲೆಕಾಯಿ ಕೊಳ್ಳಲೆಂದು ಬಂದ ಗ್ರಾಹಕನೊರ್ವ ಒಂದು ಪಾವು ಕಡಲೆಕಾಯಿಗೆ ಬೆಲೆ ಎಷ್ಟು? ಎಂದು ಕೇಳುತ್ತಾನೆ. ಅದೇ ಸಮಯಕ್ಕೆ ಬಂದ ಮತ್ತೋರ್ವ ವ್ಯಕ್ತಿ ತನ್ನ ಎಮ್ಮೆಯೊಂದು ಕಳೆದುಹೋಗಿದೆ ನೀನೇನಾದರೂ ನೋಡಿದ್ಯಾ? ಎಂದು ಪ್ರಶ್ನಿಸುತ್ತಾನೆ. ಅವರಿಬ್ಬರ ಪ್ರಶ್ನೆಗೆ ಉತ್ತರವಾಗಿ ಅಜ್ಜಿ 'ನಾಕಾಣೆ' ಎಂದು ಉತ್ತರವನ್ನು ನೀಡುತ್ತಾಳೆ. ಕಳೆದುಹೋದ ಎಮ್ಮೆಯನ್ನು ನಾಕಾಣೆ (ನೋಡಲಿಲ್ಲ), ಒಂದು ಪಾವು ಕಡಲೆಕಾಯಿಯ ಬೆಲೆಯು ನಾಕಾಣೆ (ನಾಲ್ಕಾಣೆ) ಎಂಬರ್ಥದಲ್ಲಿ ಅಜ್ಜಿಯು ಒಗಟಿಗೆ ಉತ್ತರವನ್ನು ನೀಡುತ್ತಾಳೆ. ಈ ರೀತಿಯಲ್ಲಿ ಒಗಟುಗಳನ್ನು ಪ್ರಯೋಗಿಸುವ ಸಂದರ್ಭದಲ್ಲಿ ಕೆಲವೊಮ್ಮೆ ಉತ್ತರವೂ ಪ್ರಶ್ನೆಯ ರೂಪದಲ್ಲಿರುವುದನ್ನು ನೋಡಬಹುದು;

ಅತ್ತೆ: ಕರಕಟ್ಟದೆ ಹೊರ್ಗುಲ್ಲಾಕದೆ

ಕರ ಯಾಕೋ ಮೇವಲ್ದಲ್ಲೇ?

ಅಳಿಯ: ಮೋಡಕಟ್ಟದೆ, ಮೊವರಾಗದೆ

ಮಳೆ ಯಾಕೋ ಹೂಯ್ಯವಲ್ಲವೆ?

ಅಳಿಯ ಅತ್ತೆಯಮನೆಗೆ ಬಂದನಂತೆ, ಆಗ ಅತ್ತೆ ಅಳಿಯನಿಗೆ ಒಬ್ಬಟ್ಟಿನ ಊಟವನ್ನು ಬಡಿಸಿ ತುಪ್ಪವನ್ನು ಹಾಕದೆ ಸುಮ್ಮನೆ ಆದಾಗ, ಅಳಿಯನು ಊಟಮಾಡಲು ಪ್ರಾರಂಭಿಸದೆ ತುಪ್ಪಕ್ಕಾಗಿ ಕಾಯುತ್ತಾ ಕುಳಿತುಕೊಳ್ಳುತ್ತಾನೆ. ಆಗ ಅತ್ತೆಯು ಅಳಿಯನನ್ನು ನೇರವಾಗಿ ಪ್ರಶ್ನಿಸದೆ ಕರುವನ್ನು

ಕಟ್ಟಿದೆ, ಒಂದು ಹೊರೆಹುಲ್ಲು ಹಾಕಿದೆ, ಆದರೆ ಕರುವಿನ್ನು ಯಾಕೋ ಮೇಯುತ್ತಿಲ್ಲ ಎಂದು ಮಗಳನ್ನು ಕೇಳುತ್ತಾಳೆ. ಆಗ ಅಳಿಯ ನೇರವಾಗಿ ತುಪ್ಪವನ್ನು ಕೇಳದೆ ಕಾಯಿಸಿಟ್ಟ ತುಪ್ಪ ಗಟ್ಟಿಯಾಗಿದೆ ಅಂದರೆ ಮೋಡ ಕಟ್ಟಿದೆ ಎಂದು ಅದನ್ನು ಕರಗಿಸಿ ಹಾಕಬೇಕೆಂಬ ಅರ್ಥದಲ್ಲಿ ಸೂರಿನಮೇಲೆ ಇರುವ ತುಪ್ಪ ಇನ್ನು ಊಟಕ್ಕೆ ಬಡಿಸಿಲ್ಲವೆಂಬ ಅರ್ಥದಲ್ಲಿ, ಮೋಡ ಕವಿದರೂ ಮಳೆ ಇನ್ನು ಬಂದಿಲ್ಲ (ಸುರಿದಿಲ್ಲ) ಎಂದು ಹೇಳುತ್ತಾನೆ.

ಹೀಗೆ ಜನಪದರ ಸಹಜ ಉಕ್ತಿಗಳಲ್ಲಿಯು ಒಗಟುಗಳು ಮಡುಗಟ್ಟಿ ನಿಂತಿರುವುದನ್ನು ಕಾಣಬಹುದು. ಗಾದೆಗಳಲ್ಲಿನ ಅರ್ಥವು ನೇರವಾಗಿ ತಿಳಿಯುವಂತಹದಾದರೆ, ಒಗಟುಗಳಲ್ಲಿನ ಉತ್ತರವು ಬೌದ್ಧಿಕ ಚಿಂತನೆಗೆ ಎಡೆಮಾಡಿಕೊಡುವಂತಹದ್ದು. ಒಗಟುಗಳಲ್ಲಿ ಕೆಲ ಕೌಟುಂಬಿಕ ಒಗಟುಗಳು ಇರುವುದನ್ನು ಗಮನಿಸಬಹುದು.

“ಅವ್ವ ಕುಂತವ್ಳೆ; ಮಗ್ಳು ಓಡಾಡ್ತಾವ್ಳೆ;” ಎಂಬೊಂದು ಒಗಟು ಇದೆ.

ಇಲ್ಲಿ ತಾಯಿಯನ್ನು ‘ಹಂಡೆ’ ಎಂದು ಮಗಳು ‘ಚೆಂಬು’ ಎಂದು ಹೋಲಿಸಲಾಗಿದೆ. ತಾಯಿ ಮಗಳ ಅವಿನಾಭಾವ ಸಂಬಂಧವನ್ನು ಈ ಒಗಟು ತಿಳಿಸುತ್ತದೆ. ಹಾಗೆಯೇ ‘ಅಪ್ಪನ ಪಂಚೆ ನೆರಿಗೆ ಎಣಿಸಬಹುದು; ಅವ್ವನ ಸೀರೆ ನೆರಿಗೆ ಎಣಿಸಕ್ಕಾಗಲ್ಲ’ ಎಂಬೊಂದು ಒಗಟು ಇದೆ. ಇದು ಸಹ ಕೌಟುಂಬಿಕ ಗಾದೆಯಾಗಿದ್ದು ಇಲ್ಲಿ ಅಪ್ಪನ ಪಂಚೆಯ ನೆರಿಗೆಯನ್ನು ದುಡ್ಡಿಗೂ (ಕಾಸಿಗು) ಮತ್ತು ಅವ್ವನ ಸೀರೆ ನೆರಿಗೆಯನ್ನು ನಕ್ಷತ್ರಗಳಿಗೂ ಹೋಲಿಸಿ ವರ್ಣಿಸಲಾಗಿದೆ.

ಒಗಟುಗಳಲ್ಲಿ ಕೆಲ ಗಣಿತ ಸಂಬಂಧಿ ಒಗಟುಗಳಿರುವುದನ್ನು ಗಮನಿಸಬಹುದು;

ನಾವು

ನಮ್ಮಷ್ಟು

ನಮ್ಮರ್ಧ

ನಮ್ಕಾಲು

ನೀನು ಸೇರಿದರೆ ನೂರು

ಹಾಗಾದರೆ ಬಂದ ಗಿಣಿಗಳೆಷ್ಟು?

ಜೋಳದ ಹೊಲದಲ್ಲಿ ಒಂದು ಗಿಳಿ ಕುಳಿತಿರುತ್ತದೆ. ಅದೇ ಹೊಲಕ್ಕೆ ಮತ್ತಷ್ಟು ಗಿಳಿಗಳು ಬರುತ್ತವೆ. ಆಗ ಮೊದಲು ಕುಳಿತಿದ್ದ ಗಿಳಿ ಬಂದ ಗಿಳಿಗಳನ್ನು ನೀವು ಎಷ್ಟು ಗಿಳಿಗಳು ಬಂದಿರಿ ಎಂದು ಪ್ರಶ್ನಿಸಿದಾಗ ಅವುಗಳು ಮೇಲಿನಂತೆ ಉತ್ತರಿಸುತ್ತವೆ. ಈ ಒಗಟಿನ ಉತ್ತರ ೩೬ ಎಂದಾಗುತ್ತದೆ. ಅದು ಹೇಗೆಂದರೆ ಬಂದ ೩೬ ಗಿಳಿಗಳಿಗೆ ಅವರಷ್ಟು ಎಂದರೆ ೩೬ ಸೇರಿದರೆ ೭೨ ಗಿಳಿಗಳಾಗುತ್ತವೆ. ಅದಕ್ಕೆ ಅವುಗಳ ಅರ್ಧ ೧೮ ಮತ್ತು ಕಾಲುಭಾಗ ೯ ನ್ನು ಸೇರಿಸಿದರೆ ೯೯ ಗಿಳಿಗಳಾಗುತ್ತವೆ. ಇದಕ್ಕೆ ಮೊದಲು ಕುಳಿತಿದ್ದ ಒಂದು ಗಿಳಿಯನ್ನು ಸೇರಿಸಿದರೆ ೧೦೦ ಆಗುತ್ತವೆ. ಈ

ನೂರರ ಸಂಖ್ಯೆಯನ್ನಿಟ್ಟುಕೊಂಡು ಬಂದ ಗಿಳಿಗಳ ಸಂಖ್ಯೆಯನ್ನು ಕಂಡುಹಿಡಿಯುವುದು ಕಷ್ಟಸಾಧ್ಯವಾದ ಕಾರ್ಯವೇ ಸರಿ.

ಇಂಥ ಒಗಟುಗಳು ಬುದ್ದಿಗೆ ವ್ಯಾಯಾಮವನ್ನು ಕೊಡುತ್ತವೆ. ಜೊತೆಗೆ ಜನಪದರಲ್ಲಿನ ಗಣಿತದ ಪ್ರಜ್ಞೆಯನ್ನು ಅನಾವರಣಗೊಳಿಸುತ್ತವೆ.

ಇನ್ನು ಮನುಷ್ಯ, ಪ್ರಕೃತಿ, ಅದರಲ್ಲಿಯು ಪ್ರಾಣಿ ಮತ್ತು ಸಸ್ಯ ಸಂಬಂಧಿ ಒಗಟುಗಳು ಸಾದರಲ್ಲಿ ಹಿಂದಿನಿಂದಲೂ ರೂಢಿಯಲ್ಲಿರುವುದನ್ನು ಗಮನಿಸಬಹುದು. ಸಾದರ ಮುಖ್ಯ ಕಸುಬಾದ ಕೃಷಿಗೆ ನಿಕಟ ಸಂಬಂಧವಿರುವ ಪ್ರಕೃತಿ, ಪ್ರಾಣಿ, ಪಕ್ಷಿ, ಸಸ್ಯಗಳನ್ನು ಕುರಿತು ಸಾಕಷ್ಟು ಒಗಟುಗಳು ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಬೆಟ್ಟದ ಸುತ್ತ ಬೆಳ್ಳಿ ಉಡ್ದಾರ–ರಾಗಿಕಲ್ಲೂ ಬೀಸಿದ ಹಿಟ್ಟು, ಚಿಕ್ಕಮನೆ ತುಂಬ ಚೆಕ್ಕೆ ತುಂಬೆವೆ–ಹಲ್ಲು, ಕತ್ತಲು ಮನೇಲಿ ಕತ್ತಿಬೀಸ್ತಾವೆ–ದನಗಳ ಬಾಲ, ಒಂಟಿಕಾಲು ಕೊಕ್ಕರೆ ಒಂಬೈನೂರು ಮೊಟ್ಟೆ–ಅಡಕೆ ಗಿಡ ಮತ್ತು ಕಾಯಿ, ಒಂಟಿ ಕಾಲು ಕೊಕ್ಕರೆ ಬಗ್ಗಿ–ಬಗ್ಗಿ ನೀರು ಕುಡಿಯುತ್ತೆ–ಏತ, ಹಸಿರು ಗಿಡದಲ್ಲಿ ಮೊಸರು ಚೆಲ್ಲೈತೆ–ಮಲ್ಲಿಗೆ ಹೂ, ತಾಯ್ ತರ್ಕಿ, ಮಗಳು ಬೋಡಿ, ಮೊಮ್ಮಗಳು ಘಮ್‌ಗಡ್ಲೆ–ಹಲಸಿನಕಾಯಿ, ತೊಳೆ ಮತ್ತು ಬೀಜ, ಹಗ್ಗ ಹಾಸೈತೆ ಮೇಲೆ ಕೋಣ ಮಲಗೈತೆ–ಕುಂಬಳಕಾಯಿ, ದುಡ್ಡುಕೊಟ್ಟು ತರೋದು ಮನೇಲಿಬಂದು ಅಳೋದು–ಈರುಳ್ಳಿ, ಗುಂಪೊಂದು ಗಿಡದಲ್ಲಿ ಕೆಂಪಣ್ಣ ಕುಂತವ್ನೆ–ಮೆಣಸಿನಕಾಯಿ, ಹಸಿರು ಗಿಡದಲ್ಲಿ ಕುಸರಕ್ಕಿ ಮೊಟ್ಟೆ ಇಕ್ಕೈತೆ–ನಿಂಬೆಹಣ್ಣು, ಮೂರು ಕಣ್ಣುಂಟು ಮುಕ್ಕಣ್ಣನಲ್ಲ; ನೀರುಂಟು ಗಂಗೆಯಲ್ಲ–ತೆಂಗಿನಕಾಯಿ.

ಎಷ್ಟು ಕಡಿದರೂ ತುಂಡಾಗಲ್ಲ–ಹರಿಯುವ ನೀರು, ನೀರನ್ನು ಕುರಿತ ಅದ್ಭುತ ಕಲ್ಪನೆ ಇದಾಗಿದೆ. ವೈಜ್ಞಾನಿಕವಾಗಿ ಕಡಿದು ತುಂಡು ಮಾಡಲಾಗದ ವಸ್ತು–ನೀರು.

ಹೀಗೆ ಸಾದರಲ್ಲಿ ಸಾಕಷ್ಟು ಒಗಟುಗಳಿವೆ. ಇವು ಅವರ ಒಟ್ಟು ಸಾಂಸ್ಕೃತಿಕ ಬದುಕಿನ ಅಭಿವ್ಯಕ್ತಿಯ ಮಾಧ್ಯಮವೂ ಆಗಿವೆ. ಇಲ್ಲಿ ಒಗಟನ್ನು ಕಟ್ಟುವವನ ಉಕ್ತಿ ವೈಚಿತ್ರ್ಯ ಮತ್ತು ಬಿಡಿಸುವವನ ಬುದ್ಧಿ ಚಮತ್ಕಾರಗಳೆರಡೂ ಬಹುಮುಖ್ಯವಾದವುಗಳಾಗಿವೆ. ಒಗಟುಗಳು ಮನರಂಜನೆಯ ಸಾಧನಗಳಾಗಿರುವಂತೆ ಚಿಂತನದ ಫಲವೂ ಆಗಿವೆ. ಒಗಟುಗಳಲ್ಲಿ ಸಾರ್ವತ್ರಿಕ ಗುಣವಿದ್ದು ಇವು ಎಲ್ಲ ವೇಷ, ಭಾಷೆ, ಜಾತಿಗಳಲ್ಲಿಯೂ ಕಂಡುಬರುತ್ತವೆ. ಹಾಗೆಯೇ ಸಾದರಲ್ಲಿ ಜನ ಜೀವನದ ನೇರ ಪ್ರತಿಬಿಂಬ ಮತ್ತು ಪ್ರತೀಕಗಳಾಗಿಯೇ ಇಂದಿಗೂ ಉಳಿದಿವೆ.

೫.೬:– ಕಥೆಗಳು

ಕಂಠಸ್ಥ ಸಂಪ್ರದಾಯದ ಜನಪದ ಕಥೆಯು ಗದ್ಯರೂಪದ್ದಾಗಿದ್ದು ತನ್ನದೇ ಆದ ಲಕ್ಷಣ ಮತ್ತು ಆಶಯಗಳನ್ನು ಒಳಗೊಂಡಿದೆ. ಈ ಜನಪದ ಕಥೆಗಳು ಸರಳ ಮತ್ತು ಸಂಕೀರ್ಣ ರಚನೆಗಳಂತಿವೆ, ಹಾಗೂ ವಿಶಿಷ್ಟ ನಿರೂಪಣಾಶೈಲಿಯಿಂದ ಕೂಡಿವೆ. ಜನಪದ ಕಥೆಗಳ ವಸ್ತು

ಸಂಪ್ರದಾಯಿಕವಾಗಿರುವುದಷ್ಟೇ ಅಲ್ಲದೆ, ಅವು ನಿರೂಪಣೆಯಲ್ಲಿ ಪ್ರಚಲಿತವಿರುವ ನೆಲದ ಸಂಸ್ಕೃತಿ, ಕಾಲ, ಚರಿತ್ರೆ, ಭೌಗೋಳಿಕ ವಿಷಯಗಳಿಂದ ಪ್ರಭಾವಿತವಾಗಿರುತ್ತವೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಥಾಸ್ವರೂಪದಲ್ಲಿ ಕೆಲ ಬದಲಾವಣೆಗಳನ್ನು ಹೊಂದುತ್ತವೆ. ಕಥೆಗಳ ಸ್ವರೂಪವು ಎಂಥವರನ್ನೂ ಮರುಳುಗೊಳಿಸುತ್ತವೆ. ಕೇಳುಗ ಅಪ್ರಜ್ಞಾಪೂರ್ವಕವಾಗಿ ಭಾಗಿಯಾಗುತ್ತಾನೆ.

ಇವುಗಳು ವ್ಯಕ್ತಿ ಮತ್ತು ಸಮಾಜದ ನಡುವಿನ ಆಂತರಿಕ ಸಂಬಂಧದ ಫಲಸ್ವರೂಪಿಗಳಾಗಿವೆ. ಜನಪದ ಕಥೆಗಳಲ್ಲಿನ ಬಹುಮುಖ್ಯ ಅಂಶವೆಂದರೆ 'ಕಲ್ಪನೆ', ಕತೆಗಳನ್ನು ಕಲ್ಪನೆಯಿಂದ ರಚಿಸಲಾಗಿರುತ್ತದೆ. ಇವುಗಳ ಸ್ವಾರಸ್ಯವಿರುವುದೇ ಕಾಲ್ಪನಿಕ ಸೃಷ್ಟಿಯಲ್ಲಿ ಎಂದೇ ಹೇಳಬಹುದು.

ವಾಸ್ತವಿಕ ಅಂಶಗಳೊಂದಿಗೆ ಕಾಲ್ಪನಿಕ ಅಂಶಗಳು ಯಾವುದೇ ಭೇದವಿಲ್ಲದೇ ಬೆರೆತು ಬರುತ್ತವೆ. ಜನಪದ ಕತೆಗಳಲ್ಲಿ ಮಾನವ ಪ್ರಪಂಚದ ವಸ್ತುವಿಷಯ ವ್ಯಕ್ತಿಗಳ ಜೊತೆಗೆ ಕಲ್ಪಿತ ಸೃಷ್ಟಿಯಾದ ಮಾತನಾಡುವ ಪ್ರಾಣಿಗಳು, ಜೀವಿಗಳಂತೆ ವರ್ತಿಸುವ ನಿರ್ಜೀವ ವಸ್ತುಗಳು, ದೇವತೆ, ರಾಕ್ಷಸ, ದೆವ್ವ, ಬೇತಾಳ, ಕಿನ್ನರ, ಯಕ್ಷಿಣಿ, ಮಾಟಗಾತಿಯರು, ಸಾಧು-ಸಂತರು ಪಾತ್ರವಹಿಸುತ್ತಾರೆ. ಅಷ್ಟೇ ಅಲ್ಲದೇ ಇಂದು ನಮಗೆ ಅನಾಗರೀಕವೆನ್ನಿಸುವಂತಹ ನರಭಕ್ಷಕತನ, ಮಾಯೆ, ಮಾಟ, ಮೂಢನಂಬಿಕೆಯ ಆಚರಣೆಗಳು, ಬಹುಪತ್ನಿತ್ವ ಮುಂತಾದವುಗಳು ಬಹುವಾಗಿ ಕಾಣಿಸಿಕೊಳ್ಳುತ್ತವೆ. ಕಥೆಗಳು ಸಾಮಾಜಿಕ ಜವಾಬ್ದಾರಿಯನ್ನು ಒಳಗೊಂಡ ಜನತೆಯ ಪರಂಪರಾನುಗತ ಸೃಷ್ಟಿಯ ಕ್ರಿಯೆ ಮತ್ತು ಪ್ರಕ್ರಿಯೆಗಳಾಗಿ ಕಂಡುಬರುತ್ತವೆ. ಜನಪದ ಕಥೆ ಎನ್ನುವುದು ಜನಪದರ ಸಾಂಪ್ರದಾಯಿಕ ಬದುಕನ್ನು ಒಳಗೊಂಡದ್ದಾಗಿದೆ. ಜೊತೆಗೆ ಏಕಮುಖ ಸೃಷ್ಟಿಗೆ ಈ ಜನಪದ ಕಥೆ ಒಳಗಾದದ್ದಲ್ಲ ಅದು ಸಾಮಾಜಿಕ ಪುನರ್‌ಸೃಷ್ಟಿಗೆ ಒಳಗಾದ್ದು. ಇದು ವಕ್ತೃ-ಕೇಳುಗರ ನಡುವೆ ನಡೆದುಬಂದ ಒಂದು ಸಾಂಪ್ರದಾಯಿಕ ಕಲೆಗಾರಿಕೆ. ಈ ಪರಂಪರೆಯು ತನ್ನ ಅಕ್ಕ-ಪಕ್ಕ ಎಷ್ಟೇ ಸಾಹಿತ್ಯ ಪರಂಪರೆಗಳು ಹಾದು ಹೋದರೂ ತನ್ನ ನಿರ್ದಿಷ್ಟ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತದೆ.

ಜನಪದ ಕಥೆಗಳಿಗೆ ನಿರ್ದಿಷ್ಟ ಮತ್ತು ಅಂತ್ಯವಿದ್ದು ಮಧ್ಯದ ಕ್ರಿಯೆ ಒಂದು ನಿಯಮ-ನಿಯತಿಯಂತೆ ನಡೆಯುತ್ತದೆ. ಕಥೆಯಲ್ಲಿ ಸಂಭವಿಸುವ ಪ್ರತಿಯೊಂದು ಘಟನೆ ಮತ್ತು ಕ್ರಿಯೆಗಳು ಅದರ ಒಟ್ಟು ರಚನಾತ್ಮಕ ಸಂಬಂಧಕ್ಕೆ ಹೊಂದಿಕೊಂಡಿರುತ್ತವೆ.

ಜನಪದ ಕಥೆಗಳ ಒಟ್ಟಾರೆ ಕ್ರಿಯೆಯನ್ನು ಗಮನಿಸಿದಾಗ ಅವುಗಳ ತುಡಿತ ಯಾವುದೋ ಒಂದು ನಿರ್ದಿಷ್ಟ ಸಂದೇಶಕ್ಕೆ ಬದ್ಧವಾಗಿರುತ್ತದೆ. ಜನಪದ ಕಥೆಗಳ ಅಧ್ಯಯನದಿಂದ ಆಯಾಯ ಕಾಲಘಟ್ಟದ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಬಹುದು. ಇವುಗಳು ಜನಪದರ ಬದುಕಿನ ಆಯಾಮುಗಳನ್ನು ತಿಳಿಸುತ್ತವೆಯೇ ಹೊರತು ಬೇರೇನನ್ನೂ ಅಲ್ಲ. ಸಂಸ್ಕೃತಿ ಎಂಬುದು ಯಾವುದೇ ಗುಂಪಿನ ಸಾಮಾಜಿಕ ಚಟುವಟಿಕೆಗಳ ಮೊತ್ತವಾಗಿದ್ದು ಅದು ಚಲನಶೀಲವಾಗಿ ಮುಂದುವರೆಯುತ್ತದೆ ಎಂಬ ಅಂಶವು ಜನಪದ ಕಥೆಗಳ ಅಧ್ಯಯನದಿಂದ ಸ್ಪಷ್ಟಗೊಳ್ಳುತ್ತದೆ.

ಜನಪದ ಕಥೆಗಳಲ್ಲಿ ಸಾಮಾಜಿಕ ಚಟುವಟಿಕೆಗಳ ಮೊತ್ತವು ಅಮೋಘವಾಗಿ ಕಂಡುಬರುತ್ತವೆ. ಮಾನವ ಬದುಕಿನ ಸಂಸ್ಕೃತಿಯ ಅಂಗವಾಗಿರುವ ಕಥಾಸಾಹಿತ್ಯವು ಜನಪದರು ತಮ್ಮ-ತಮ್ಮ ಬದುಕಿನ ಅನುಭವ-ಅನಿಸಿಕೆಗಳನ್ನು ತಿಳಿಯಪಡಿಸಲು ನೆರವಾಗಿದೆ. ಜನಪದ ಕಥೆಗಳಲ್ಲಿ ಅಂದಂದಿನ ಸಾಮಾಜಿಕ ವ್ಯವಸ್ಥೆಯ ಮೌಲ್ಯಗಳಿದ್ದು, ಮಾನವ ಬದುಕಿನ ಸ್ಥಿತಿ-ಗತಿಯನ್ನು ಪ್ರತಿಬಿಂಬಿಸುತ್ತವೆ.

ಕಥೆಗಳಲ್ಲಿನ ಕಷ್ಟ-ಸುಖಗಳ, ನೋವು-ನಲಿವುಗಳ ನಡುವೆಯೇ ಸಾಂಸ್ಕೃತಿಕ ರೂಪುರೇಷೆಗಳು ಒಳಮೂಡಿದ್ದು ಅವುಗಳ ಅನುಭವ ಅಂತರ್ಗತ ಸಂವೇದನೆಗಳಾಗಿ ರೂಪುಗೊಂಡಿವೆ. ಜನಪದದ ಉಳಿದ ಯಾವುದೇ ಪ್ರಕಾರಗಳಿಗಿಂತ ಕಥೆಗಳಲ್ಲಿ ಹೆಚ್ಚು-ಹೆಚ್ಚು ಸಾಂಸ್ಕೃತಿಕ ಒಳನೋಟಗಳನ್ನು ಗ್ರಹಿಸಲು ಸಾಧ್ಯ. ಕಥೆಗಳಲ್ಲಿ ಅಂದಂದಿನ ಸಾಮಾಜಿಕ, ರಾಜಕೀಯ ಸಾಂಸ್ಕೃತಿಕ, ಧಾರ್ಮಿಕ, ಚಾರಿತ್ರಿಕ ನೆಲೆಗಳೆಲ್ಲವನ್ನೂ ಗುರುತಿಸಬಹುದು.

ಜನಪದ ಕಥೆಗಳು ಬರಿಯ ಭೂತಕಾಲದ ಬದುಕಿನ ಪಳೆಯುಳಿಕೆ ಎನ್ನುವ ನಿಲುವು ಸಮಂಜಸವಾದದ್ದಲ್ಲ. ಏಕೆಂದರೆ ಜನಪದ ಸಾಹಿತ್ಯ ಸೃಷ್ಟಿ ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ಭೂತಕಾಲದ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಅದು, ವರ್ತಮಾನದ ಬದುಕಿಗೂ ಅಷ್ಟೇ ಸ್ಪಂದಿಸುತ್ತದೆ. ಜನಪದ ಕತೆಗಳು ಕಥೆಗಾರ ಕಥೆಯನ್ನು ಹೇಳುವ ಸಂದರ್ಭಕ್ಕನುಗುಣವಾಗಿ ಬದಲಾಗುವುದರಿಂದ ಇವು ಸ್ಥಿರ ಅಥವಾ ಸ್ಥಗಿತ ಚಿತ್ರಗಳಾಗಿರದೆ ಚಲನಶೀಲತೆಯನ್ನು ಪಡೆದುಕೊಳ್ಳುತ್ತವೆ. ಆ ಮೂಲಕ ಪ್ರಸ್ತುತತೆಯನ್ನು ಸಾಧಿಸಿಕೊಳ್ಳುತ್ತವೆ.

ಜನಪದ ಕಥೆಗಳು ಕೇವಲ ಕಥೆಯನ್ನಷ್ಟೇ ತಿಳಿಸದೆ ಬದುಕಿನ ಹಲವು ನಿತ್ಯ-ಸತ್ಯಗಳನ್ನು ದರ್ಶಿಸುತ್ತವೆ. ಜೊತೆಗೆ ಸಾಹಿತ್ಯಿಕವಾಗಿಯೂ ಜನಪದರ ಬುದ್ಧಿವಂತಿಕೆ, ರಚನಾತ್ಮಕಗುಣ, ಜಾಣ್ಮೆಯನ್ನು ಅನಾವರಣಗೊಳಿಸುತ್ತವೆ.

ಸಾದರಲ್ಲಿ ಅನೇಕ ನೀತಿ ಪ್ರಧಾನ ಜನಪದ ಕಥೆಗಳು ಚಾಲ್ತಿಯಲ್ಲಿವೆ. ಅವುಗಳಲ್ಲಿ ಕೆಲವನ್ನು ಗಮನಿಸುವುದಾದರೆ:-

ನೀತಿ ಕಥೆ-'ನಾಯಿಯ ಶಾಪ':-

ಒಂದು ಊರಲ್ಲಿ ಒಬ್ಬ ರಾಜನಿದ್ದ ಅವನ ಹೆಂಡತಿ ನವಮಾಸದ ಗರ್ಭಿಣಿಯಾಗಿದ್ದಳು. ಅವನ ಅರಮನೆಯ ಪಕ್ಕದಲ್ಲೇ ಒಂದು ನಾಯಿ ವಾಸವಾಗಿತ್ತು ಆ ನಾಯಿಯು ಗರ್ಭಿಣಿಯಾಗಿತ್ತು. ಹೀಗಿರೋವಾಗ ಒಂದಿನ ರಾಜನ ಹೆಂಡತಿ ತನಗೆ ಬೇಕಾದ ತಿಂಡಿ-ತಿನಿಸುಗಳನ್ನು ಮಾಡಿಸಿ ತಿನ್ನುತ್ತಿದ್ದಳು. ಆಗ ನಾಯಿಯು ತನಗೂ ತಿಂಡಿ-ತಿನಿಸುಗಳನ್ನು ಕೊಡೆಂದು ರಾಣಿಯನ್ನು ಅಂಗಲಾಚಿ ಬೇಡಿತು. ಆದರೆ ರಾಣಿಯು ಕೊಡದೆ ನಾಯಿಯನ್ನು ಹೀನಾ-ಮಾನ ಬೈದು ಕಳುಹಿಸಿದಳು. ಇದರಿಂದ ಬೇಸರಗೊಂಡ ನಾಯಿಯು 'ನನಗೆ ಹುಟ್ಟೋ ಮಕ್ಕಳು ನಿಂಗೆ ಹುಟ್ಟಲಿ; ನಿಂಗೆ ಹುಟ್ಟೋ

ಮಕ್ಕಳು ನಂಗೆ ಹುಟ್ಟಲಿ' ಎಂದು ಶಾಪವನ್ನು ಕೊಟ್ಟು ಹೊರಟುಹೋಯಿತು. ನಂತರ ಆ ನಾಯಿಯು ಹಾದಿ-ಬೀದಿ ತಿರುಗಿ ಸಿಕ್ಕ ಆಹಾರ ತಿಂದು ಜೀವಿಸಿತ್ತು.

ಹೀಗೆ ದಿನಕಳೆದಂತೆ ರಾಣಿಗೆ ಎರಡು ನಾಯಿಮರಿಗಳು ಹುಟ್ಟಿದರೆ, ನಾಯಿಗೆ ಎರಡು ಮುದ್ದಾದ ಹೆಣ್ಣು ಮಕ್ಕಳು ಹುಟ್ಟಿದರು. ನಾಯಿಯ ಶಾಪದಿಂದ ಈ ವಿಚಿತ್ರವನ್ನು ಕಂಡು ರಾಣಿಯು ಮರುಗುತ್ತಾಳೆ. ನಾಯಿಯು ತನ್ನ ಮಕ್ಕಳಿಗೆ ಆಹಾರ ತರಲು ಹೋದಾಗ ರಾಣಿಯು ನಾಯಿಯ ಮರಿಗಳನ್ನು ಅದರ ಗುಡಿಸಲಿನಲ್ಲಿ ಮಲಗಿಸಿ ಆ ಹೆಣ್ಣು ಮಕ್ಕಳನ್ನು ತರುತ್ತಿದ್ದಳು. ಆದರೆ ನಾಯಿಯು ಛಲಬಿಡದೆ ಮತ್ತೆ-ಮತ್ತೆ ತನ್ನ ಮಕ್ಕಳನ್ನು ಗುಡಿಸಲಿಗೆ ಕರೆದು ತರುತ್ತಿತ್ತು. ಇದರಿಂದ ಬೇಸರಗೊಂಡ ರಾಣಿ ಸುಮ್ಮನಾದಳು. ನಾಯಿಯು ತುಂಬಾ ಕಷ್ಟದಿಂದ ತನ್ನ ಮಕ್ಕಳನ್ನು ಸಾಕುತ್ತಿತ್ತು.

ದಿನಕಳೆದಂತೆ, ವರ್ಷಉರುಳಿದಂತೆ ಬೆಳೆದು ದೊಡ್ಡವರಾದ ಹೆಣ್ಣು ಮಕ್ಕಳನ್ನು ನಾಯಿಯು ಬಲು ಅಕ್ಕರೆ, ಪ್ರೀತಿ, ವಾತ್ಸಲ್ಯದಿಂದ ಸಾಕುತ್ತಿತ್ತು. ನಾಯಿಗೆ ತನ್ನ ಮಕ್ಕಳಿಗೆ ಆಹಾರ, ಬಟ್ಟೆ-ಬರೆಗಳನ್ನು ತಂದುಕೊಡಲು ತುಂಬಾ ಕಷ್ಟವಾದರೂ ಯಾರಾದರೂ ನದಿಯ ಹತ್ತಿರ ಸ್ನಾನಕ್ಕೆಂದು ಬಿಚ್ಚಿಟ್ಟ ಬಟ್ಟೆ-ಒಡವೆಗಳನ್ನು ಮೆಲ್ಲಗೆ ಕದ್ದುತಂದು ಮಕ್ಕಳಿಗೆ ಕೊಡುತ್ತಿತ್ತು. ಆಗ ಒಂದು ದಿನ ಯಾರೋ ಬಿಚ್ಚಿಟ್ಟ ಒಂದು ಗುಂಡಿನ ಸರವನ್ನು ಕದ್ದು ತಂದು ತನ್ನ ಹಿರಿಯ ಮಗಳಿಗೆಂದು ಕೊಟ್ಟಿತ್ತು. ನಾಯಿಯು ಮಕ್ಕಳಿಗೆ ಆಹಾರ ತರಲು ಹೊರಹೋದಾಗ ಮಕ್ಕಳಿಬ್ಬರು ಒಂದು ಬಂಡೆಯ ಕೆಳಗೆ ಸುಖವಾಗಿದ್ದರು. ಅದೇ ಸಮಯದಲ್ಲಿ ನೆರೆಯ ರಾಜ್ಯದ ರಾಜನ ಮಕ್ಕಳು ಬೇಟೆಗೆಂದು ಬಂದು ಆ ಹೆಣ್ಣು ಮಕ್ಕಳನ್ನು ನೋಡಿ ಮೋಹಗೊಂಡು, ಅವರಿಬ್ಬರನ್ನು ಕರೆದುಕೊಂಡು ಹೋಗುತ್ತಾರೆ. ಹಿರಿಯ ಮಗಳು ನಾಯಿಯು ತಂದುಕೊಟ್ಟಿದ್ದ ಗುಂಡಿನಸರವನ್ನು ಹರಿದು ದಾರಿಯುದ್ದಕ್ಕೂ ಒಂದೊಂದಾಗಿ ಎಸೆಯುತ್ತಾ ಹೋಗುತ್ತಾಳೆ. ರಾಜನ ಮಕ್ಕಳಿಬ್ಬರು ಆ ಇಬ್ಬರು ಹೆಣ್ಣುಮಕ್ಕಳನ್ನು ಮದುವೆಯಾಗುತ್ತಾರೆ.

ಸ್ವಲ್ಪ ಹೊತ್ತಿನ ಬಳಿಕ ಬಂದ ನಾಯಿಯು ತನ್ನ ಮಕ್ಕಳಿಲ್ಲದ್ದನ್ನು ಕಂಡು ಕಂಗಾಲಾಗಿ ಮಕ್ಕಳಿಗಾಗಿ ಎಲ್ಲಾ ಕಡೆ ಹುಡುಕಾಡುತ್ತದೆ. ಕೊನೆಗೆ ತನ್ನ ಹಿರಿಯ ಮಗಳಿಗೆ ಕೊಟ್ಟಿದ್ದ ಗುಂಡಿನ ಸರದ ಗುಂಡುಗಳು ಬಿದ್ದಿರುವುದನ್ನು ನೋಡಿ ಗುಂಡುಗಳನ್ನು ಒಂದೊಂದಾಗಿ ತನ್ನ ಬಾಯಿಯಲ್ಲಿ ಆಯ್ದುಕೊಂಡು ಹೋಗುತ್ತದೆ. ಆಗ ನಾಯಿಗೆ ಒಂದು ದೊಡ್ಡ ಅರಮನೆ ಸಿಗುತ್ತದೆ. ಆಗ ನಾಯಿಯು ಅಯ್ಯೋ ದೇವರೇ ನನ್ನ ಮಕ್ಕಳು ಇಂತಹ ಮನೆಯನ್ನು ಸೇರಿದರೇ! ನಾನು ನನ್ನ ಮಕ್ಕಳಿಗೆ ಜನ್ಮಕೊಟ್ಟಿದ್ದು ಸಾರ್ಥಕವಾಯಿತು ಎಂದುಕೊಂಡು ತನ್ನ ಕಿರಿಯ ಮಗಳ ಹತ್ತಿರ ಹೋಗುತ್ತದೆ. ಆಗ ಅವಳು ಅಯ್ಯೋ ನೀನ್ಯಾಕೆ ಇಲ್ಲಿಗೆ ಬಂದೆ? ಅವರು ಏನಾದರು ನಿನ್ನ ನೋಡಿದರೆ ಬಯ್ಯುತ್ತಾರೆ. ನಾಯಿಯು ನಿನ್ನ ತಾಯಿ! ಎಂದು ಅಸಹ್ಯ ಪಡುತ್ತಾರೆ. ನೀನು ಈ ಕೂಡಲೇ ಇಲ್ಲಿಂದ ಹೊರಟುಹೋಗು ಇನ್ನಾವತ್ತೂ ಈ ಕಡೆ ಬರಬೇಡ ಎಂದು ಬೈದು ಕಳುಹಿಸುತ್ತಾಳೆ. ಆಗ ನೊಂದ ನಾಯಿ ಆ ಚಿನ್ನದ ಸರದ ಗುಂಡುಗಳನ್ನು ತೆಗೆದುಕೊಂಡು ಹಿರಿಯ ಮಗಳ ಹತ್ತಿರ ಬರುತ್ತದೆ. ಆಗ ಹಿರಿಯ ಮಗಳು ತಾಯಿಯನ್ನು ನೋಡಿ ಸಂತೋಷದಿಂದ

ಹೇಗಿದ್ದೀಯಮ್ಮ, ಯಾವಾಗ ಬಂದೆ ಎಂದು ಕೇಳುತ್ತಾಳೆ. ನಾಯಿಯು ತನ್ನ ಬಾಯಲ್ಲಿದ್ದ ಗುಂಡುಗಳನ್ನು ತೆಗೆದು ಕೊಟ್ಟು, ಅಯ್ಯೋ ಮಗಳೇ ನೀವಿಬ್ಬರು ಇಲ್ಲದಿದ್ದನ್ನು ನೋಡಿ ನನಗೆ ತುಂಬಾ ಗಾಬರಿಯಾಯಿತು. ನಿನ್ನ ಸರದ ಗುಂಡುಗಳನ್ನು ನೋಡಿ ನಿನ್ನ ಪತ್ತೆಮಾಡಿ ಬಂದೆ ಎಂದು ಹೇಳುತ್ತದೆ. ಆಗ ಮಗಳು 'ಹೌದು ಅವ್ವ ನಾನೇ ಹಾಗೆ ಗುಂಡುಗಳನ್ನ ಹಾಕುತ್ತಾ ಬಂದೆ. ನಿನಗೆ ದಾರಿ ಗೊತ್ತಾಗಲೆಂದು' ಎಂದೂ ಹೇಳಿದಳು. ತದನಂತರ ತಂಗಿಮನೆಗೆ ಹೋಗಿದ್ಯ ಎಂದು ಕೇಳಿದಳು. ಹೌದು ಹೋಗಿದ್ದೇ ಅವಳು ಬಾಯಿಗೆ ಬಂದಂಗೆ ಬೈದಳು ಎಂದು ಹೇಳಿತು. ಆಗ ಹಿರಿಯಮಗಳು ಅಮ್ಮ ನೀನಿನ್ನು ಎಂದು ಅವಳ ಮನೆಗೆ ಹೋಗಬೇಡ ನನ್ನೊಂದಿಗೆ ಸುಖದಿಂದಿರು ಎಂದು ಹೇಳಿದಳು. ಅದಕ್ಕೆ ನಾಯಿಯು ಸರಿ ಎಂದು ಅವಳೊಂದಿಗೆ ಇರುತ್ತದೆ.

ಹಿರಿಯ ಮಗಳು ತಾಯಿಯನ್ನು ಸುಖವಾಗಿ ನೋಡಿಕೊಂಡಿರುತ್ತಾಳೆ. ತನ್ನ ಗಂಡನಿಗೆ ತಿಳಿಯದಂತೆ ತಾಯಿಯನ್ನು ಕಾಪಾಡುತ್ತಿರುತ್ತಾಳೆ. ಒಂದು ದಿನ ಮರದ ಪೆಟ್ಟಿಗೆಯನ್ನು ತರಿಸಿ ಆ ಪೆಟ್ಟಿಗೆಯಲ್ಲಿ ತಾಯಿಯನ್ನು ಇಟ್ಟಿರುತ್ತಾಳೆ. ಅವಳ ಗಂಡನಿಗೆ ಅನುಮಾನ ಬಂದು ಅದೇನು ತೋರಿಸು ಎಂದು ಹಠವಿಡಿಯುತ್ತಾನೆ. ಮುಂದೆ ದಾರಿ ತೋರದ ಆ ಹೆಣ್ಣುಮಗಳು ಅದು ತನ್ನ ತವರುಮನೆಯಿಂದ ಕೊಟ್ಟ ಉಡುಗೊರೆಯೆಂದು; ಅದರಲ್ಲಿ ಮುತ್ತು; ರತ್ನಗಳಿವೆ ಎಂದು ಹೇಳುತ್ತಾಳೆ. ಅವಳ ಮಾತನ್ನು ಕೇಳಿದ ರಾಜ ಆ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ನಾಯಿಯಿಲ್ಲದೆ ಮುತ್ತು, ರತ್ನಗಳಿರುತ್ತವೆ. ಆಗ ಆ ಹೆಣ್ಣು ಮಗಳು ತಾಯಿ ನನ್ನನ್ನು ಕಾಪಾಡಲು ಹೀಗೆ ಮಾಡಿದಳೆಂದು ತಿಳಿದುಕೊಂಡು ದುಃಖ ಪಡುತ್ತಾಳೆ. ನಿನಗೆ ಇಷ್ಟೊಂದು ಒಡವೆಗಳನ್ನು ಕೊಟ್ಟ ಮೇಲೆ ನಿನ್ನ ತವರಿನವರು ತುಂಬಾ ಜೋರಾಗೆ ಇರಬೇಕು. ನಡಿ ನಿಮ್ಮ ಊರನ್ನು ನೋಡಿಕೊಂಡು ಬರೋಣ ಎಂದು ಹೇಳುತ್ತಾನೆ. ಇವಳು ಏನೂ ಮಾತಾಡದೆ ಅಯ್ಯೋ ದೇವರೆ ಇನ್ನೇನು ಗತಿ, ಮಾರ್ಗಮಧ್ಯದಲ್ಲಿ ಪ್ರಾಣ ಬಿಡುವುದೇ ಸರಿ ಎಂದುಕೊಂಡು ಹೋಗುತ್ತಾಳೆ.

ಹಿರಿಯ ಮಗಳು ಆಕೆಯ ಗಂಡ ಇಬ್ಬರು ತವರಿಗೆ ಹೊರಟು ದಾರಿಯಲ್ಲಿ ಆ ಹೆಣ್ಣು ಮಗಳು ಅಯ್ಯೋ ದೇವರೆ ನನಗೆ ಅಪ್ಪ, ಅವ್ವ, ಬಂಧು-ಬಳಗ ಯಾರೂ ಇಲ್ಲ ಏನು ಮಾಡುವುದು ಅಂತಾನೂ ಗೊತ್ತಾಗ್ತಿಲ್ಲ ಎಂದು ಯೋಚಿಸುತ್ತಾ ಅರ್ಧದಾರಿಯಲ್ಲಿ ಬರುವಾಗ ಒಂದು ದೊಡ್ಡ 'ಹುತ್ತವಿರುತ್ತದೆ' ಆ ಹುತ್ತದಲ್ಲಿರುವ ಹಾವಿಗೆ ಹಲ್ಲಿನಲ್ಲಿ ಕುರು ಎದ್ದು ಆರು ತಿಂಗಳಾಗಿತ್ತು ಆರು ತಿಂಗಳಿನಿಂದ ಏನು ತಿನ್ನದೇ ಇತ್ತು. ಹುತ್ತವನ್ನು ಕಂಡ ಹೆಣ್ಣು ಮಗಳು ಅವಮಾನಕ್ಕಿಂತ ಸಾವೇ ವಾಸಿ ಎಂದು ಹುತ್ತದಲ್ಲಿ ಕೈಹಾಕುತ್ತಾಳೆ. ಆಗ ಇವಳ ಕೈಬೆರಳಿನ ಉಗುರು ಹಾವಿನ ಕುರಕ್ಕೆ ತಗುಲಿ ಅದು ಒಡೆದು ಸರ್‍ರನೆ ಎದ್ದು ಯಾರು ನೀನು ಎಂದು ಕೇಳುತ್ತೆ. ಆಗ ಹಿರಿಮಗಳು ತನ್ನ ಕಥೆಯನ್ನೆಲ್ಲಾ ಆ ಹಾವಿಗೆ ಹೇಳುತ್ತಾಳೆ. ಅದಕ್ಕೆ ಆ ಹಾವು ತನ್ನ ಶಕ್ತಿಯಿಂದ 'ಅರಳು ಉಪ್ಪು; ಒಂದು ಇದ್ದಿಲು; ಒಂದು ಮೆಣಸಿನಕಾಯಿಯನ್ನು ಕೊಟ್ಟು, ಅರಳು ಉಪ್ಪನ್ನು ಎಸೆದರೆ ನಿನ್ನ ತಂದೆ-ತಾಯಿ, ಬಂಧು-ಬಳಗ ಬರುತ್ತದೆ. ನಂತರ ಇದ್ದಿಲನ್ನು ಎಸೆದರೆ ನಿನ್ನ ತವರು ಮನೆ ಸಿದ್ದವಾಗುತ್ತದೆ. ಅಲ್ಲಿ ಅವರು ನಿನಗೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಡುತ್ತಾರೆ. ನಿನ್ನ ಗಂಡನ ಆಸೆ ಈಡೇರಿದ

ಮೇಲೆ ನೀವು ಅಲ್ಲಿಂದ ಹೊರಟಮೇಲೆ ಒಂದು ಮೆಣಸಿನಕಾಯಿಯನ್ನು ಎಸೆ ಆಗ ಎಲ್ಲವೂ ಮಾಯವಾಗುತ್ತದೆ ಎಂದು ಹೇಳಿತು. ನಾಗರಾಜನ (ಹಾವಿನ) ಮಾತಿನಂತೆ ತನ್ನ ಗಂಡನ ಆಸೆಯನ್ನು ಈಡೇರಿಸಿಕೊಂಡು ಹಿರಿಯ ಮಗಳು ಮತ್ತು ಅವಳ ಗಂಡ ಇಬ್ಬರೂ ಮನೆಗೆ ಹಿಂತಿರುಗುತ್ತಾರೆ.

ಹೀಗೆ ಇರೋವಾಗ ಚಿಕ್ಕಮಗಳ ಗಂಡ ನಿನ್ನ ತವರು ಮನೆ ನೋಡಬೇಕು. ನಡಿ ಹೋಗೋಣ ಎಂದು ಹೇಳುತ್ತಾನೆ. ಅವರಿಬ್ಬರು ಬರುತ್ತಾ ಇರೋವಾಗ ದಾರಿಯಲ್ಲಿ ಅವಳು ಚಿಂತಿಸುತ್ತಾ ಅಯ್ಯೋ ದೇವರೇ ನಾನು ಇವರನ್ನು ಕರೆದುಕೊಂಡು ಎಲ್ಲಿಗೆ ಹೋಗಲಿ, ಏನು ಮಾಡಲಿ, ನನ್ನ ತಾಯಿ ನಾಯಿ ಎಂದು ಹೇಗೆ ಹೇಳಲಿ ಎಂದು ಯೋಚಿಸುತ್ತಾ ದಾರಿಯಲ್ಲಿ ಸಿಕ್ಕ ದೊಡ್ಡ ಹುತ್ತದಲ್ಲಿ ಕೈ ಇಡುತ್ತಾಳೆ. ಬದುಕುವುದಕ್ಕಿಂತ ಸಾಯೋದೇ ಮೇಲು, ಅವಮಾನ ಅನುಭವಿಸುವುದು ಬೇಡ ಎಂದು ಹುತ್ತದಲ್ಲಿ ಕೈ ಇಟ್ಟಾಗ ಕೋಪಗೊಂಡ ನಾಗರಾಜ ಅವಳನ್ನು ಕಚ್ಚಿದ್ದರಿಂದ ಅವಳು ಅಲ್ಲೇ ಪ್ರಾಣಬಿಟ್ಟಳು. ಆಗ ರಾಜನು ಅಯ್ಯೋ ದೇವರೆ ತನ್ನ ಪತ್ನಿಯನ್ನು ಬದುಕಿಸು ಎಂದು ಒಂದೇ ಸಮನೆ ಆ ಪರಶಿವನಲ್ಲಿ ಮೊರೆ ಇಟ್ಟನು. ಆಗ ಅವನ ಭಕ್ತಿಗೆ ಮೆಚ್ಚಿದ ಶಿವ-ಪಾರ್ವತಿಯರು ಪ್ರತ್ಯಕ್ಷರಾಗುತ್ತಾರೆ. ಪರಶಿವನು ರಾಜನ ಕಷ್ಟ ಏನು? ಎಂದು ಕೇಳಿದಾಗ, ರಾಜನು, ನನ್ನ ಹೆಂಡತಿಗೆ ಹಾವು ಕಚ್ಚಿದೆ, ಅವಳನ್ನು ಉಳಿಸಿಕೊಡಿ ಎಂದು ಬೇಡಿಕೊಂಡನು. ಆಗ ಶಿವನು ಅವಳು ಮಾಡಿದ ಪಾಪಕ್ಕೆ ತಕ್ಕ ಶಿಕ್ಷೆಯಾಗಿದೆ, ತಾಯಿಯನ್ನು ದಿಕ್ಕರಿಸಿದ್ದಾಳೆ. ತಾಯಿಗೆ ಬಿಸಿ ಗಂಜಿ ಹಾಕಿ ಅವಮಾನ ಮಾಡಿದ್ದಾಳೆ. ಇಂಥ ಪಾಪಿಯನ್ನು ಬದುಕಿಸುವುದಿಲ್ಲ ಎಂದು ಹೇಳುತ್ತಾನೆ. ರಾಜನ ಬೇಡಿಕೆಯನ್ನು ಮನ್ನಿಸಿದ ಪಾರ್ವತಿ ಹೋಗಲಿ ಪಾಪ ತನ್ನ ಹೆಂಡತಿ ಮೇಲೆ ಅಪಾರ ಪ್ರೀತಿಯನ್ನು ಇಟ್ಟುಕೊಂಡಿದ್ದಾನೆ ಅವಳನ್ನು ಬದುಕಿಸಿ ಎಂದು ಶಿವನಿಗೆ ಹೇಳುತ್ತಾಳೆ. ಶಿವನು ಪಾರ್ವತಿಯ ಮೇಲೆ ರೇಗುತ್ತಾನೆ. ಆಗ ಪಾರ್ವತಿ ನಾನು ನಿಮ್ಮ ಜೊತೆ ದೇವಲೋಕಕ್ಕೆ ಬರುವುದೇ ಇಲ್ಲ, ನನ್ನ ಭಕ್ತರನ್ನು ನೋಡಿಕೊಂಡು ಇಲ್ಲೇ ಇರುತ್ತೇನೆ ಎಂದು ಹೇಳಿದಾಗ ಶಿವನು ಬೇರೆ ದಾರಿಕಾಣದೆ ಅವಳಿಗೆ ಜೀವದಾನ ಮಾಡುತ್ತಾನೆ. ಆಗ ಕಿರಿಯ ಮಗಳು ತನ್ನ ನೀಚ ಬುದ್ಧಿಯನ್ನು ಬಿಟ್ಟು ತನ್ನ ಗಂಡನೊಂದಿಗೆ ಸುಖದಿಂದ ಬಾಳುತ್ತಾಳೆ.

ಪ್ರಸ್ತುತ ಜನಪದ ಕಥೆಯಲ್ಲಿ ತಿಳಿಯುವ ಪ್ರಮುಖ ಅಂಶವೆಂದರೆ 'ತಾಯಿಯ ಪ್ರೀತಿ, ವಾತ್ಸಲ್ಯದ ಅಪಾರತೆಯನ್ನು ತಿಳಿಸುತ್ತದೆ. ಹಾಗೆಯೇ ತಾಯಿಯನ್ನು ದಿಕ್ಕರಿಸಿದ ಮಕ್ಕಳಿಗೆ ಒದಗುವ ದುರ್ಗತಿಯನ್ನು ಮತ್ತು ತಂದೆ-ತಾಯಿಯನ್ನೇ, ದೇವರೆಂದು ಪ್ರೀತಿಯಿಂದ ಕಂಡು ಮಕ್ಕಳಿಗೆ ಸಿಗುವ ಸಂತೋಷವನ್ನು ತಿಳಿಸುತ್ತದೆ.

ಹಾಗೆಯೇ ಜನಪದರಿಗೆ ಶಿವಪಾರ್ವತಿಯರು ಬೇರೆಲ್ಲೂ ಇರದೆ ತಮ್ಮ ಮಧ್ಯೆಯೇ ಇದ್ದು ತಮ್ಮ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದಿಸುತ್ತಾರೆ ಎಂಬ ಭಾವನೆಯಿದೆ. ಜನಪದ ಕಥೆಗಳು ಸಾಹಿತ್ಯಿಕ ದೃಷ್ಟಿಯಿಂದಲೂ ಅದ್ಭುತ ಯಶಸ್ಸನ್ನು ಸಾಧಿಸಿವೆ ಎಂಬುದಕ್ಕೆ ಹಲವು ಜನಪದ ಕಥೆಗಳಲ್ಲಿಯೇ ನಿರ್ದಶನಗಳು ದೊರೆಯುತ್ತವೆ.

ಸಾಮಾಜಿಕ ಕಥೆ– 'ಶೆಟ್ಟಿಯ ಬದುಕು':–

ಒಂದು ಊರಿನಲ್ಲಿ ಒಬ್ಬ ಶೆಟ್ಟಿ ಇದ್ದ ಅವನಿಗೆ ಹಗಲು–ಇರುಳು ದುಡ್ಡಿನ್ದೇ ಚಿಂತೆ, ವ್ಯವಹಾರದ್ದೇ ಜ್ಞಾನ. ಹೀಗಿರೋವಾಗ ಒಂದಿನ ಊರಿನ ಜನರೆಲ್ಲಾ ಸೇರಿ ಶೆಟ್ಟಿಗೆ ಹಿಂದಿಲ್ಲ–ಮುಂದಿಲ್ಲ ಹೇಗಾದ್ರೂ ಮಾಡಿ ಅವನ ಒಪ್ಸಿ ಒಂದು ಮದ್ವೆ ಅಂತ ಮಾಡಿದರೆ ಅವನ್ಗೂ ಒಂದು ಬದ್ಕು–ಬಾಳ್ವೆ ಅಂತ ಆಯ್ತದೆ ಎಂದು ಯೋಚನೆ ಮಾಡಿ ಶೆಟ್ಟಿ ಮನೆಗೆ ಬಂದು ಕಷ್ಟಪಟ್ಟು ಮದ್ವೆಗೆ ಒಪ್ಪಿಸ್ತಾರೆ. ಅವನು ಒಲ್ಲದ ಮನಸ್ಸಿನಿಂದ ಒಪ್ತಾನೆ. ಹೇಗೋ ಮದುವೆಯು ಆಗುತ್ತದೆ. ಆದ್ರೆ ಶೆಟ್ಟಿ ಹೆಂಡತಿಯನ್ನು ಮಾತನಾಡಿಸುವುದೇ ಇಲ್ಲ, ಏನು ಅನ್ದೆ, ಎತ್ತ ಅನ್ದೆ ತಾನಾಯ್ತು, ತನ್ನ ಕೆಲ್ಸ ಆಯ್ತು ಅಂತಿದ್ದುಬಿಟ್ಟ. ಆದರೆ ಆ ಹೆಣ್ಣು ಮಗಳು ಶೆಟ್ಟಿಯ ವರ್ತನೆಯಿಂದ ತುಂಬಾ ನೊಂದುಕೊಂಡು ಒಂದಿನ ನೋಡಿದ್ಲು, ಎರಡು ದಿನ ನೋಡಿದ್ಲು, ಮೂರನೇ ದಿನ ಅಯ್ಯೋ ಗಂಡನೇ ಮಾತಾಡಿಸಲಿಲ್ಲ ಅಂದಮ್ಯಾಕೆ ಈ ಬಾಳ್ವೆಯಾಕೆ ಅಂತ ನೇಣು ಹಾಕಿಕೊಂಡು ಪ್ರಾಣ ಬಿಟ್ಟಳು. ಹೀಗೆ ಸ್ವಲ್ಪ ದಿನ ಕಳ್ದಮ್ಯಾಲೆ ಊರಿನವರೆಲ್ಲ ಸೇರಿ ಶೆಟ್ಟಿಗೆ ಎರಡನೇ ಮದ್ವೆ ಮಾಡಿದ್ರು, ಶೆಟ್ಟಿ ಮಾತ್ರ ಬದಲಾಗಲಿಲ್ಲ, ಮಾತಾಡಲಿಲ್ಲ, ಅವಳು ಒಂದಿನ ನೋಡಿದ್ಲು, ಎರಡು ದಿನ ನೋಡಿದ್ಲು, ಮೂರನೇ ದಿನ ಬಾವಿಗೆ ಬಿದ್ದು ಸತ್ತುಹೋದಳು.

ಅಷ್ಟಕ್ಕೇ ಸುಮ್ಮನಾಗದ ಊರಿನ ಜನ ಮತ್ತೆ ಶೆಟ್ಟಿಯನ್ನು ಒಪ್ಸಿ ಅವನಿಗೆ ಇನ್ನೊಂದು ಮದ್ವೆ ಮಾಡಿದ್ರು. ಶೆಟ್ಟಿ ಮಾತ್ರ ಮೂರನೇ ಹೆಂಡತಿಯನ್ನು ಮಾತಾಡಿಸಲಿಲ್ಲ. ಅವಳು ಒಂದಿನ ನೋಡಿ, ಎರಡು ದಿನ ನೋಡಿ, ಮೂರನೇ ದಿನ ಬೆಟ್ಟದಿಂದ ಹಾರಿ ಜೀವ ಕಳಕೊಂಡಳು. ಇದರಿಂದ ಯತಾಪ್ರಕಾರ ಶೆಟ್ಟಿ ಒಂಟಿಯಾದ. ಅಷ್ಟರ ವೇಳೆಗೆ ಶೆಟ್ಟಿಗೂ ವಯಸ್ಸಾಗಿತ್ತು. ಇನ್ನು ಯಾವ ಮದ್ವೆ–ಮುಂಜಿಬೇಡ ಅಂದ್‌ಕೊಂಡು ಸುಮ್ನಿದ್ದ, ಆದ್ರೆ ಊರಿನ್ ಜನ ಬಿಡಲಿಲ್ಲ. ಮತ್ತೆ ಅವನನ್ನು ಮದ್ವೆಗೆ ಒಪ್ಸಿ ನಿಂಗೆ ಕುಡಿಯೋಕೆ ನೀರು ಕೊಡೊರಾದ್ರು ಬೇಡ್ವೆ ಅಂತ ಹೆಣ್ಣು ಹುಡುಕೋಕೆ ಹೊರಟ್ರು.

ಅದೇ ಸಮಯಕ್ಕೆ ಒಬ್ಬ ಬಡ ತಂದೆ ತನ್ನ ಮಗಳಿಗೆ ಒಂದು ಮದ್ವೆ ಅಂತಾದ್ರೆ ಸಾಕು ವರ ಎಂಥವನಾದ್ರೆ ಏನು? ಮಗಳಿಗೆ ಒಂದುಬಾಳು ಸಿಕ್ಕರೆ ಅದೇ ತನಗೆ ಮುಕ್ತಿ ಅಂತ ಕಾಯ್ತಿದ್ದ. ಊರಿನ ಜನ ಆ ಹುಡುಗಿಯನ್ನೇ ಶೆಟ್ಟಿಗೆ ಗೊತ್ತು ಮಾಡಿದರು. ಮದ್ವೆಯು ಆಯ್ತು. ಆದ್ರೆ ಶೆಟ್ಟಿ ಮಾತ್ರ ಮಾತಾಡಿಸಲಿಲ್ಲ. ತುಂಬಾ ಬಡತನದಲ್ಲಿ ಬೆಳೆದ ಹುಡುಗಿ ಆಗಿರೋದ್ರಿಂದ ಶ್ರೀಮಂತ ಶೆಟ್ಟಿ ಮನೇಲಿ ಬಾಯ್ಗೆ ಬೇಕಿದ್ದು ತಿಂದು ಬೇಕಾದ ಒಡವೆ ಹಾಕಿಕೊಳ್ಳಬಹುದು ಅಂದುಕೊಂಡಳು. ಆದರೆ ಗಂಡ ಮಾತಾಡಿಸದೆ ಇದ್ದುದನ್ನು ನೋಡಿ ಬೇಸರದಿಂದ ಶೆಟ್ಟಿಯನ್ನು ಕೇಳ್ತಾಳೆ. ಏನಯ್ಯ ಶೆಟ್ಟಿ ಒಂದಿನ ಆಯ್ತು, ಎರಡು ದಿನ ಆಯ್ತು, ಮೂರು ದಿನ ಆಯ್ತು ಒಂದಿನ ಆದ್ರೂ ಒಂದು ಮಾತು ಆಡ್ಲಿಲ್ಲ? ಎಂದು ಕೇಳುತ್ತಾಳೆ. ಆಗ ಶೆಟ್ಟಿ ನೋಡು; ನಂಗೆ ಮಾತಾಡೋ ಅಷ್ಟು ಪುರುಸೊತ್ತಿಲ್ಲ. ನಿಂಗೆ ಬೇಜಾರಾದ್ರೆ ಅಲ್ಲಿ ಭಜನೆ ಮಂದಿರ ಇದೆ ಅಲ್ಲಿಗೋಗು, ಇಲ್ಲ ದೇವಸ್ಥಾನಕ್ಕೋ ಹೋಗು ಅಂತ ಹೇಳಿ ತನ್ನಪಾಡಿಗೆ ತಾನು ಹೊರಟುಹೋಗ್ತಾನೆ.

ಬೇಸರಗೊಂಡ ಅವಳು ಶೆಟ್ಟಿನೇ ಹೇಳಿದಂತೆ ಭಜನೆ ಮಂದಿರಕ್ಕೆ ಹೋಗ್ತಾಳೆ. ಹೀಗಿರುವಾಗ ಅಲ್ಲಿ ತನ್ನ ವಯಸ್ಸಿನ ಒಬ್ಬ ಹುಡುಗನನ್ನು ಪರಿಚಯ ಮಾಡ್ಕೊತಾಳೆ. ಪರಿಚಯ ಸ್ನೇಹವಾಗಿ, ಸ್ನೇಹ ವಿಶ್ವಾಸಕ್ಕೆ ತಿರುಗಿ ಅವರಬ್ಬರಲ್ಲಿ ಆತ್ಮೀಯತೆ ಬೆಳೆದು ಶೆಟ್ಟಿ ಇಲ್ಲದೆ ಇರೋ ಸಮಯದಲ್ಲಿ ಶೆಟ್ಟಿಮನೆಗೆ ಬಂದು ಹೋಗ್ತಿರ್ತಾನೆ. ಇದನ್ನು ಕಂಡ ಊರಿನ ಜನ ಶೆಟ್ಟಿಯನ್ನು ಕರ್ದು ಬೈದು ನೀನು ಯಾವಾಗ್ಲೂ ದುಡ್ಡು ಅನ್ತಿರ್ತೀಯ. ನಿನ್ನ ಹೆಂಡ್ತಿನೋಡಿದ್ರೆ ಬೇರೆಯವನ ಸ್ನೇಹಮಾಡಿದಾಳೆ. ನಿಂಗೆ ಏನಾದ್ರೂ ಬುದ್ದಿ-ಗಿದ್ದಿ ಇದೆಯ ಎಂದು ಕೇಳ್ತಾರೆ. ಆಗ ಶೆಟ್ಟಿ ಜನ ಹೇಳಿದ ವಿಚಾರವನ್ನು ಪರಿಶೀಲಿಸಬೇಕು ಅಂತ ಒಂದಿನ ಬೆಳಗ್ಗೇನೆ ತಿಂಡಿ ಮುಗಿಸಿ ಸಂತೆಗೆ ಹೋಗ್ತೀನಿ ಅಂತ ಹೆಂಡ್ತಿಗೆ ಹೇಳಿ ಹೊರಡ್ತಾನೆ. ಅವಳು ಸರಿ ಅಂತ ಬಾಗಿಲಲ್ಲಿ ಬಂದು ನಿಲ್ತಾಳೆ. ಶೆಟ್ಟಿ ಸ್ವಲ್ಪದೂರ ಹೋದಂತೆ ಮಾಡಿ ಅಲ್ಲೇ ಬಚ್ಚಿಟ್ಟುಕೊಳ್ತಾನೆ. ಆಗ ಇವಳಿಗೆ ಅನುಮಾನಬರುತ್ತೇ. ಓ! ಶೆಟ್ಟಿಗೆ ನನ್ನ ಮೇಲೆ ಏನೋ ಸಂಶಯ ಇರಬೇಕು ಅಂತ ತನ್ನ ಪಾಡಿಗೆ ಅಡುಗೆ ಮನೆಗೆ ಬಂದು ತನ್ನ ಕೆಲಸ ಮಾಡ್ತಿರ್ತಾಳೆ. ಆಗ ಶೆಟ್ಟಿ ಮೆಲ್ಲಗೆ ಮನೆಗೆ ಬಂದು ಹಟ್ಟದ ಮೇಲೆ ಹತ್ತಿ ಕುಳಿತು ಬಿಡ್ತಾನೆ.

ಅದಾದ ಸ್ವಲ್ಪ ಹೊತ್ತಿಗೆ ಶೆಟ್ಟಿಯ ಹೆಂಡ್ತಿಗೆಳೆಯ ಬಂದು ಮನೆಮುಂದೆ ಶಿಳ್ಳೆ ಹೊಡಿತಾ, ತಿರುಗ್ತಾ ಇರ್ತಾನೆ, ಆಗ ಗಾಬರಿಗೊಂಡ ಶೆಟ್ಟಿ ಹೆಂಡ್ತಿ ತನ್ನ ಗಂಡ ಮನೇಲಿ ಇರುವ ವಿಷಯ ಇವನಿಗೆ ಹೇಗೆ ಹೇಳ್ಳಿ ಅಂತ ಯೋಚಿಸಿ ರಾಗಿಕಲ್ಲು ಮತ್ತು ಒಂದು ಕುಕ್ಕೆಲಿ ರಾಗಿಯನ್ನು ತಂದು ಮನೆಯ ಅಂಗಳದಲ್ಲಿಟ್ಟುಕೊಂಡು 'ಪದ' ಹೇಳ್ತಾ ರಾಗಿ ಬೀಸ್ತಾಳ. ಆ ಪದವೇ (ಪಾಡು) ಎಲ್ಲ ವಿಷಯವನ್ನು ಅವಳ ಗೆಳೆಯನಿಗೆ ತಿಳಿಸುವಂತಿರ್ತದೆ. ಅದೆಂತೆಂದರೆ:-

"ಸುತ್ತಿ ಸುತ್ತಿ ಬರುತೀಯ ನನಗಾಗಿ

ಮೇಲೊಬ್ಬ ಕುಂತವ್ನೆ ನಿನಗಾಗಿ

ಹೋಗತ್ಲ ನೀನು ಅರುಗಾಗಿ

ನಾನಿಲ್ಲಿ ಸಾಯುತೀನಿ ನಿನಗಾಗಿ"

ಅಂತ ಹಾಡ್ತಾ ರಾಗಿನ ಬೀಸಿ ಇಟ್ಟು ತೊಗೊಂಡು ಮನೆ ಒಳಗೆ ಹೋಗ್ತಾಳೆ. ಈ ಪದ ಕೇಳಿ ಆ ಹುಡುಗ ಓ ಏನೋ ಅಪಾಯ ಇರಬೇಕು ಎಂದು ಹಾಗೆ ಹೊರಟು ಹೋಗ್ತಾನೆ. ಪಾಪ ಶೆಟ್ಟಿ ಮಾತ್ರ ಕಾಯ್ದು-ಕಾಯ್ದು ಸಾಕಾಗಿ ಕೊನೆಗೆ ಹಟ್ಟದಿಂದ ಕೆಳಗಿಳಿದು ಬರ್ತಾನೆ. ತನ್ನ ತಪ್ಪಿನ ಅರಿವಾಗಿ ಹೆಂಡತಿಯನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಆದರೆ ಅವನಿಗೆ ತನ್ನ ಹೆಂಡ್ತಿ ಹಾಡಿದ ಆ ಪದದ ಅರ್ಥ ತಿಳಿಯದೆ ಏನೇ ಸುತ್ತಿ-ಸುತ್ತಿ ಬರುತೀಯ ನನಗಾಗಿ, ಮೇಲೊಬ್ಬ ಕುಂತವ್ನೆ ನಿನಗಾಗಿ ಅಂಥ ಏನೋ ಹೇಳ್ತಿದ್ದೆ ಏನದು? ಎಂದು ಕೇಳಿದ. ಆಗ ಅದಕ್ಕವಳು ಅಯ್ಯೋ ಅದ; ಏನಿಲ್ಲ ಬಿಡಿ ನಮ್ಮೂರಲ್ಲಿ ದನಕಾಯೋ ಐಕಳೆಲ್ಲಾ ಈ ಪದ ಹೇಳ್ತಾವೆ ಅಂದ್ಲು, ಶೆಟ್ಟಿ ಅದೇನು ಬಿಡಿಸಿ ಹೇಳು ಎಂದಾಗ ನಮ್ಮೂರಲ್ಲಿ ದನಕಾಯೋ ಹುಡುಗರು ಬೇಜಾರ್ ಕಳಿಯೋಕೆ ಅಂತ ಕೆರೇಲಿ ಮೀನ್

ಹಿಡಿಯೋಕೆ ಗಾಳಾ ಹಾಕ್ತಾರೆ. ಆಗ 'ಎರೆಹುಳು' ಮೀನಿಗೆ ಹೀಗೆ ಹೇಳ್ತಿತ್ತು. 'ಸುತ್ತಿ-ಸುತ್ತಿ ಬರುತೀಯ ನನಗಾಗಿ-ಅಂದ್ರೆ ಗಾಳದ ತುದಿಗೆ ಸಿಕ್ಕಿಸಿದ ಎರೆಹುಳುವಿಗಾಗಿ ಮೀನು ಬರುತ್ತದೆ. ಮೇಲೊಬ್ಬ ಕುಂತವ್ನೆ ನಿನಗಾಗಿ-ಮೀನಿಗಾಗಿ ಗಾಳ ಹಾಕಿ ಕಾಯ್ತಾ ಕುಳಿತಿದ್ದಾನೆ ಮನುಷ್ಯ. ನಾನಿಲ್ಲಿ ಸಾಯುತೀನಿ ನಿನಗಾಗಿ-ಮೀನಿಗಾಗಿ ನಾನು (ಎರೆಹುಳು) ಸಾಯುತ್ತಿದ್ದೀನಿ. ಹೋಗತ್ಲೆ ನೀನು ಅರುಗಾಗಿ-ಇಲ್ಲಿ ಅಪಾಯವಿದೆ. ಈ ಕಡೆ ಬರಬೇಡ, ಅರುಗಾಗಿ ಹೋಗು ಎಂದು ಎರೆಹುಳು ಮೀನಿಗೆ ಹೇಳ್ತಿತ್ತು ಎಂದು ಹೇಳುತ್ತಾಳೆ. ಆಗ ಶೆಟ್ಟಿ ಹೌದಾ! ಎಂದು ಆಕೆಯ ಮಾತನ್ನು ನಂಬಿದ. ಅವರಿಬ್ಬರು ಮುಂದೆ ಸುಖವಾಗಿದ್ದರು ಎಂಬಲ್ಲಿಗೆ ಪ್ರಸ್ತುತ ಕಥೆಯು ಮುಗಿಯುತ್ತದೆ.

ಇಲ್ಲಿ ಆ ಜನಪದ ಹೆಣ್ಣು ಮಗಳ ಜಾಣ್ಮೆ, ಚತುರೋಕ್ತಿಗಳು ಅದ್ಭುತವಾಗಿ ಮೂಡಿಬಂದಿರುವುದನ್ನು ಗಮನಿಸಬಹುದು. ಸಹಜವಾದ ಸ್ವಭಾವೋಕ್ತಿಯ ಬಳಕೆಯಲ್ಲಿಯೇ ಅರ್ಥಗರ್ಭಿತವಾಗಿ ಶ್ಲೇಷಾರ್ಥಮೂಡಿ ಬರುವಂತೆ ಕಥಾ ರಚನೆಯನ್ನು ಮಾಡಿರುವ ಜನಪದರಲ್ಲಿನ ಕಾರ್ಯೈತ್ರಿಪ್ರತಿಭೆ ಎಂಥಹದೆಂಬುದು ತಿಳಿಯುತ್ತದೆ.

ಅಷ್ಟೇ ಅಲ್ಲದೆ ಎಂತಹ ಕ್ಲಿಷ್ಟ ಸಮಸ್ಯೆಗಳಿಗೂ ಬಲುಸುಲಭವಾಗಿ ಪರಿಹಾರ ಕಂಡುಕೊಳ್ಳುವ ಅವರ ಮನೋಬಲವು ಮುಖ್ಯವಾದದ್ದೇ ಸರಿ. ಜೊತೆಗೆ ಜನಪದ ಕಥೆಗಳಲ್ಲಿ ಬಳಕೆಯಾಗುವ ಭಾಷಾ ಶೈಲಿಗೆ ಮೇಲಿನ ಕಲ್ಪಿತ ಕಥೆ ಒಂದು ನಿರ್ದಶನವೆಂದೇ ಹೇಳಬಹುದು.

ಪ್ರಾಣಿಗಳೂ ಸಹ ಜನಪದ ಕಥೆಗಳಲ್ಲಿ ಪ್ರಮುಖಪಾತ್ರವಹಿಸುತ್ತವೆ ಎಂಬುದಕ್ಕೆ ಜನಪದ ಕಥೆಗಳಲ್ಲಿ ಹಲವು ನಿದರ್ಶನಗಳು ದೊರೆಯುತ್ತವೆ. 'ಮಂಗನ ಜಾಣ್ಮೆ' ಎಂಬ ಜನಪದ ಕಥೆಯಲ್ಲಿ 'ಮಂಗವು' ಪ್ರಮುಖ ಪಾತ್ರ ವಹಿಸುವುದನ್ನು ಗಮನಿಸಬಹುದು.

ನೀತಿ ಕಥೆ–'ಮಂಗನ ಚಾತುರ್ಯ'.

ಒಂದು ಊರಿನಲ್ಲಿ ತಾಯಿ-ಮಗಳು ವಾಸವಾಗಿದ್ದರು ಅವರು ಬಡತನದ ಬೇಗೆಯಿಂದ ನರಳುತ್ತಿರುತ್ತಾರೆ. ಮನೆಯಲ್ಲಿ ಒಂದೊತ್ತಿನ ಊಟಕ್ಕೂ ತೊಂದರೆಯಾಗಿರುತ್ತದೆ. ತಾಯಿಯು ಪ್ರತಿದಿನವೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಮಗಳು ಪ್ರತಿ ದಿನ ಬೆಳಗ್ಗೆ ಎದ್ದು ಬೆರಣಿಯನ್ನು ಆಯ್ದುಕೊಂಡು ಬರಲು ಹೋಗುತ್ತಿದ್ದಳು. ತಾಯಿ ಹಾಗೂ-ಹೀಗೂ ದುಡಿದು ಕೆಲಸ ಮಾಡಿ ಮಗಳ ಮದುವೆಗೆಂದು ಒಂದೂವರೆ ರೂಪಾಯಿಯನ್ನು ಕೂಡಿಟ್ಟಿರುತ್ತಾಳೆ.

ಒಂದಿನ ಸೋಮವಾರದಂದು ಸಂತೆಗೆ ಹೋಗೊ ಸಲುವಾಗಿ ಬೆಳಗ್ಗೆ ಬೇಗನೆ ಎದ್ದು ಮನೆಯ ಎಲ್ಲಾ ಕೆಲಸ-ಕಾರ್ಯಗಳನ್ನು ಮುಗಿಸಿ, ಸಂತೆಗೆ ಹೋಗಲು ಸಿದ್ಧವಾಗಿರುತ್ತಾಳೆ. ಸಂತೆ ದಿನವಾದ್ದರಿಂದ ಆ ಊರಿಗೆ ಮಂಗನ್ನ ಕುಣಿಸುವವನು ಬಂದಿರುತ್ತಾನೆ. ಅವನು ಆ ತಾಯಿ-ಮಗಳು ವಾಸವಾಗಿರುವ ಮನೆಯ ಪಕ್ಕದಲ್ಲಿಯೇ ಆತನಿರುತ್ತಾನೆ. ಆಗ ತಾಯಿಯು ಮಗಳೆ ನಾನು ಸಂತೆಗೆ ಹೋಗುತ್ತೇನೆ. ಎಲ್ಲಾ ಮಕ್ಕಳನ್ನು ಮನೆ ಒಳಗೆ ಕೂಡಿಕೊಂಡಿರಬೇಡ. ಮಡಕೆಯಲ್ಲಿ ಒಂದೂವರೆ ರೂಪಾಯಿಯನ್ನು ಇಟ್ಟಿದ್ದೇನೆ, ಜೋಪಾನ ಎಂದು ಹೇಳಿ ಸಂತೆಗೆ ಹೊರಡುತ್ತಾಳೆ. ಆ ಮಾತನ್ನು

ಕೇಳಿಸಿಕೊಂಡ ಮಂಗನ ಕುಣಿಸುವವನು ಇವರ ಮನೆ ಮುಂದೇನೆ ಬಂದು ಸ್ವಲ್ಪ ಹೊತ್ತು ಮಂಗನನ್ನು ಕುಣಿಸಿ ಮಗಳೇ ನಿಮ್ಮ ತಾಯಿ ನನಗೆ ದಾರಿಯಲ್ಲಿ ಸಿಕ್ಕಿದ್ದಳು. ಅವರು ಮಡಕೆಯಲ್ಲಿ ಒಂದೂವರೆ ರೂಪಾಯಿ ಇಟ್ಟಿದ್ದಾರಂತೆ ಆ ಹಣವನ್ನು ನನಗೆ ಕೊಟ್ಟು ನೀನು ಈ ಮಂಗನನ್ನು ಕೊಂಡುಕೊಬೇಕೆಂತೆ ಎಂದು ಸುಳ್ಳು ಹೇಳಿದ. ಅವಳು ಹೌದೇನೋ ಎಂದು ಮಡಕೆಯಲ್ಲಿದ್ದ ಒಂದೂವರೆ ರೂಪಾಯಿ ಹಣವನ್ನು ಕೊಟ್ಟು ಮಂಗನನ್ನು ಕೊಂಡುಕೊಳ್ಳುತ್ತಾಳೆ. ಸರಿ ಎಂದು ಮಂಗ ಕುಣಿಸುವವನು ಹಣವನ್ನು ತೆಗೆದುಕೊಂಡು ಹೊರಟುಹೋಗುತ್ತಾನೆ. ಮಂಗನನ್ನು ಆ ಹೆಣ್ಣು ಮಗಳಿಗೆ ಕೊಡುತ್ತಾನೆ. ಮಂಗವು ಅವಳನ್ನೇ ತನ್ನ ಅಕ್ಕ ಎಂದು ಭಾವಿಸಿ ಅವಳೊಂದಿಗೆ ಸಂತೋಷದಿಂದಿರುತ್ತದೆ.

ಸಂಜೆಯ ವೇಳೆಗೆ ತಾಯಿಯು ಸಂತೆಯಿಂದ ಮನೆಗೆ ಬರುತ್ತಾಳೆ. ಬಂದವಳು ಮಂಗನನ್ನು ನೋಡಿ ಅಯ್ಯೋ ಇದೇನಿದು ಮಂಗನನ್ನೇಕೆ ಕರಕೊಂಡುಬಂದೆ. ಮನೇಲಿ ನಿನ್ನ ಬಿಟ್ಹೋದ್ರೆ ಏನಾದ್ರು ಒಂದು ಅವಾಂತರ ಮಾಡಿರ್ತೀಯ ಎಂದು ಬೈಯ್ತಾಳೆ.

ಅದಕ್ಕೆ ಗಾಬರಿಯಾದ ಮಗಳು ಅವ್ವಾ ನೀನು ತಾನೆ ಹೇಳಿದ್ದು ಆ ಮಂಗನನ್ನು ಕುಣಿಸುವವನ ಹತ್ತಿರ ಮಡಕೆಯಲ್ಲಿ ಒಂದೂವರೆರೂಪಾಯಿ ಇಟ್ಟಿದ್ದೀನಿ ಅದರಲ್ಲಿ ಮಂಗನ ತೆಗೆದುಕೊಳ್ಳುವುದಕ್ಕೆ ನನ್ನ ಮಗಳಿಗೆ ಹೇಳು ಎಂದು ಎನ್ನುತ್ತಾಳೆ. ಅದಕ್ಕೆ ಅವಳ ತಾಯಿ ಅಯ್ಯೋ ಪಾಪಿ ನೀನು ಯಾಕೆ ತೆಗೆದುಕೊಂಡೆ ನಾನು ಹೇಳಿರಲಿಲ್ಲ ಅವನು ಸುಳ್ಳು ಹೇಳಿದ್ದಾನೆ, ನಿನ್ನ ಮದುವೆಗೆಂದು ಕೂಡಿಟ್ಟಿದ್ದ ಒಂದೂವರೆ ರೂಪಾಯಿಯನ್ನು ಹಾಳುಮಾಡಿದೆಯಲ್ಲೇ, ಇನ್ನು ನಾನೇನು ಮಾಡಲಿ ಎಂದು ರೋದಿಸುತ್ತಾ ಮಗಳಿಗೆ ಹೀನಾ-ಮಾನ ಬೈಯ್ಯುತ್ತಾಳೆ. ಕೊನೆಗೆ ತಾಯಿಯೆ ಅಡುಗೆಮಾಡಿ ಮಗಳಿಗೂ, ಮಂಗನಿಗೂ ಊಟಬಡಿಸಿ ತಾನು ತಿಂದು ಮೂವರು ಮಲಗುತ್ತಾರೆ.

ಮಾರನೇ ದಿನ ಬೆಳಗ್ಗೆ ಎಲ್ಲಾ ಹುಡುಗರು ಬೆರಣಿಯನ್ನು ಆಯ್ದುಕೊಂಡು ಬರಲು ಕಾಡಿಗೆ ಹೊರಟು ಅವಳನ್ನು ಕರೆಯುತ್ತಾರೆ. ಆಗ ಮಗಳು ಬುಟ್ಟಿಯನ್ನು ತೆಗೆದುಕೊಂಡು ಹೊರಡುತ್ತಾಳೆ. ಆಗ ಮಂಗ ಅಡ್ಡಬಂದು ಅಕ್ಕ ಬುಟ್ಟಿಕೊಡು ಇವತ್ತು ನಾ ಹೋಗಿ ಬೆರಣಿ ಆಯ್ದು ತರ್ತೀನಿ ಎಂದು ಹೇಳುತ್ತದೆ. ಅದಕ್ಕವಳು ಅಯ್ಯೋ ನಿನಗೆ ಬೆರಣಿ ಆಯ್ದುಕೊಂಡು ಬರಲು ಗೊತ್ತಾಗುತ್ತದೆಯೇ? ಎಂದು ಕೇಳುತ್ತಾಳೆ. ಆಗ ಮಂಗನು ಹುಂ ಅಕ್ಕ ಗೊತ್ತಾಗುತ್ತದೆ ಎಂದು ಹೇಳಿ ಮುರುಕಲು ಬುಟ್ಟಿಯನ್ನು ತೆಗೆದುಕೊಂಡು ಹೋಗುತ್ತದೆ. ಮಕ್ಕಳ ಜೊತೆ ಕಾಡಿಗೆ ಹೋಗಿ ಬೆರಣಿಯನ್ನು ಆಯ್ದುಕೊಂಡು ಬಂದು ಅಕ್ಕಾ, ನಾನು ಬೆರಣಿಯನ್ನು ಆಯ್ದುಕೊಂಡು ಬಂದೆ ಎಂದು ಖುಷಿಯಿಂದ ಹೇಳಿತು. ಅದಕ್ಕವಳು ಹೌದೇನೋ ತಮ್ಮಣ್ಣ ಬುಟ್ಟಿಯನ್ನು ಅಲ್ಲಿಟ್ಟು, ಊಟಮಾಡು ಬಾ ಎಂದು ಕರೆದಳು. ಮಂಗ ಊಟಮಾಡಿ, ಅಕ್ಕನ ಜೊತೆ ಆಟವಾಡುತ್ತಾ ಕಾಲ ಕಳೆಯಿತು. ಆಗ ಮತ್ತೆ ಮಾರನೆಯ ದಿನ ಬೆಳಗ್ಗೆ ಕತ್ತಲೆ ಇದ್ದ ಹಾಗೆಯೇ ಊರಿನ ಮಕ್ಕಳು ಮಂಗನನ್ನು ಬೆರಣಿ ತರಲು ಕರಿಬಾರ್ದು ಅಂತೇಳಿ ಸದ್ದಿಲ್ಲದೆ ಓಡಿಹೋಗುತ್ತವೆ. ಅದು ಮಂಗನಿಗೆ ಗೊತ್ತಾಗುತ್ತದೆ. ಆಗ

ಮಂಗ ಬೇಗನೆ ಎದ್ದು ಅಯ್ಯೋ ಅಕ್ಕ ಅವರು ನನ್ನ ಬಿಟ್ಟು ಹೋಗುತ್ತಿದ್ದಾರೆ ಬುಟ್ಟಿಯನ್ನು ಕೊಡು ಬಾ ಎಂದು ಕೇಳಿತು. ಆಗ ಅವಳು ಅದೇ ಮುರುಕಲು ಬುಟ್ಟಿಯನ್ನು ತೆಗೆದುಕೊಟ್ಟಳು. ಅದನ್ನು ತೆಗೆದುಕೊಂಡು ಆ ಹುಡುಗರ ಹಿಂದೆ ಓಡಿತು. ಹೇಗೋ ಮಂಗನಿಗೆ ದಾರಿ ತಪ್ಪಿತು. ಒಂದು ದೊಡ್ಡ ಕಾಡಿನೊಳಗೆ ಹೋಗಿ ಸೇರಿತು. ಆ ಕಾಡಿನ ಮಧ್ಯದಲ್ಲಿ ಒಬ್ಬ ದೊಡ್ಡ ಕಳ್ಳ ಗುಡಿಸಲನ್ನು ಕಟ್ಟಿಕೊಂಡು ವಾಸಿಸುತ್ತಿದ್ದ.

ಆ ಮನೆಯನ್ನು ಕಂಡ ಮಂಗ ಮೆಲ್ಲನೆ ಆ ಮನೆ ಕಡೆ ಹೆಜ್ಜೆ ಹಾಕಿತು. ಆ ಮನೆಯಲ್ಲಿ ಕಳ್ಳ ತಂದಿಟ್ಟಿದ್ದ ಒಡವೆ, ವಸ್ತ್ರಗಳಿದ್ದವು. ಮಂಗ ಕಿಟಿಕಿಯಿಂದ ಒಳನುಸುಳಿ ಒಡವೆ ವಸ್ತ್ರಗಳನ್ನೆಲ್ಲಾ ಬುಟ್ಟಿಯಲ್ಲಿ ತುಂಬಿಕೊಂಡು ಮೇಲೊಂದು ಬೆರಣಿಯನ್ನಿಟ್ಟುಕೊಂಡು ಪುನಃ ಮನೆಯ ಹಾದಿಯನ್ನಿಡಿದು ಮನೆ ಸೇರಿತು. ಮಂಗ ಮನೆಯನ್ನು ಮುಟ್ಟುತ್ತಲೇ ಸಂತೋಷದಿಂದ ತನ್ನ ಅಕ್ಕನಿಗೆ ಎಲ್ಲಾ ಒಡವೆ-ವಸ್ತ್ರಗಳನ್ನು ಕೊಡುತ್ತದೆ. ಇದನ್ನು ಕಂಡು ಅವಳ ತಾಯಿಯು ಸಂತೋಷಪಡುತ್ತಾಳೆ. ಮಂಗ ನಾಳೆ ಮತ್ತೆ ಅದೇ ಮನೆಗೆ ಹೋಗಿ ಉಳಿದ ಎಲ್ಲ ಒಡವೆಗಳನ್ನು ತರುತ್ತೀನಿ ಎಂದು ಅಕ್ಕನಿಗೂ, ಅವ್ವನಿಗೂ ಹೇಳಿತು.

ತನ್ನ ಕಸುಬಿಗಾಗಿ ಹೋಗಿದ್ದ ಕಳ್ಳ ಪುನಃ ಬಂದು ತನ್ನ ಮನೆ ಬಾಗಿಲನ್ನು ತೆಗೆದು ಕಳುವಾಗಿರುವುದನ್ನು ನೋಡಿ ಗಾಬರಿಗೊಳ್ಳುತ್ತಾನೆ. ಇರಲಿ ನಾಳೆ ಕಳ್ಳ ಮತ್ತೆ ಬರಬಹುದು ಎಂದು ಕಾಯುತ್ತಿರುತ್ತಾನೆ. ಮಾರನೇ ದಿನ ಬೆಳಗಿನ ಜಾವ ಮಂಗ ಮುರುಕಲು ಬುಟ್ಟಿಯನ್ನಿಡಿದು ಕಳ್ಳನ ಮನೆಕಡೆ ಬಂದಿತು. ಯತಾಪ್ರಕಾರ ಮನೆಯೊಳಗೆ ನುಗ್ಗಿ ಇನ್ನೇನು ಬುಟ್ಟಿ ತುಂಬಿಕೊಳ್ಳುವಷ್ಟರಲ್ಲಿ ಕಳ್ಳ ಬಂದು ಮಂಗನನ್ನು ಹಿಡಿದುಕೊಂಡು ಹೊಡೆದು, ಕೊಲ್ಲುತ್ತೇನೆ ಎಂದನು. ಆಗ ಮಂಗ ಭಾವ-ಭಾವ ನನ್ನನ್ನು ಹೊಡೆಯಬೇಡ, ನಿಂಗೆ ನಮ್ಮಕ್ಕನನ್ನು ಕೊಟ್ಟು ಮದುವೆ ಮಾಡ್ತೀನಿ ಎಂದು ಹೇಳಿತು. ಅದನ್ನ ನಂಬಿದ ಕಳ್ಳ ಇನ್ನಷ್ಟು ಒಡವೆಗಳನ್ನು ಕೊಟ್ಟು ಒಂದು ದೊಡ್ಡ ರೇಷ್ಮೇ ಸೀರೆಯನ್ನು ಕೊಟ್ಟ. ಇವನ್ನೆಲ್ಲಾ ನಾಳೆ ನಿಮ್ಮಕ್ಕನಿಗೆ ಹಾಕಿಕೊಂಡು ಬಾ ಎಂದು ಹೇಳಿದನು. ಸರಿ ಎಂದ ಮಂಗಣ್ಣ ಮನೆಗೆ ಬಂದು ನಡೆದ ಸಂಗ್ತಿಯನ್ನೆಲ್ಲಾ ತನ್ನಕ್ಕ ಮತ್ತು ಅವ್ವನಿಗೆ ಹೇಳಿತು. ಇದರಿಂದ ಕೋಪಗೊಂಡ ಅಕ್ಕ ನಾನು ನಿನ್ನನ್ನು ಇಷ್ಟುದಿನ ಚೆನ್ನಾಗಿ ನೋಡಿಕೊಂಡಿದ್ದಕ್ಕೆ ನೀನು ನನ್ನನ್ನು ಆ ಕಳ್ಳನಿಗೆ ಕೊಟ್ಟು ಮದುವೆ ಮಾಡ್ತೀಯ ಎಂದು ಕೋಪಿಸಿಕೊಂಡಳು.

ಆ ಮಂಗ ಅಕ್ಕ ಮತ್ತು ಅವ್ವನಿಗೆ ನಾನು ನಿನ್ನನ್ನು ಆ ಕಳ್ಳನಿಗೂ ಕೊಡುವುದಿಲ್ಲ, ಮಾತೂ ತಪ್ಪುವುದಿಲ್ಲ. ಅದಕ್ಕೆ ನನ್ನ ಬಳಿ ಒಂದು ಉಪಾಯವಿದೆ ಎಂದು ಹೇಳುತ್ತದೆ, ಏನೋ ಮಂಗಣ್ಣ ಅದು ಎಂದು ಅವ್ವ ಕೇಳಿದಾಗ, ಅವ್ವಾ ಎಲ್ಲಾ ನಿಧಾನಕ್ಕೆ ನಿನಗೆ ತಿಳಿಯುತ್ತೆ. ಈಗ ನನಗೆ ಐದು ಕೆ.ಜಿ. ಮೈದಾಹಿಟ್ಟು ತಂದುಕೊಡು ಎಂದು ಹೇಳಿತು. ರಾತ್ರಿ ಇಡೀ ಕುಳಿತು ಒಂದು ಹೆಣ್ಣುಗೊಂಬೆಯನ್ನು ಮಾಡಿಕೊಂಡು ಅದೇ ಮುರುಕಲು ಬುಟ್ಟಿಯಲ್ಲಿಟ್ಟುಕೊಂಡು ಮಾರನೇ ದಿನ ಕಳ್ಳನ ಮನೆಗೆ ಬಂದು ಲೋ ಭಾವ ಬಾಗಿಲು ತೆಗಿ ನನ್ನಕ್ಕನ ಕರೆದುಕೊಂಡು ಬಂದಿದೀನಿ ಎಂದು ಹೇಳಿತು. ಬಾಗಿಲು ತೆರೆದ ಕಳ್ಳನಿಗೆ ನನ್ನ ಅಕ್ಕನಿಗೆ ಖಾಯಿಲೆಯಾಗಿ ಅವಳಿಗೆ ಎಚ್ಚರವಾಗಲು ಸುಮಾರು ೧೫-೨೦ ದಿನಗಳು

ಬೇಕಾಗುತ್ತದೆ. ಅವಳು ಎಚ್ಚರವಾದ ಮೇಲೆ ನಿಮ್ಮಿಬ್ಬರ ಮದುವೆಯನ್ನು ನಾನೇ ಮುಂದೆನಿಂತು ಮಾಡಿಸುತ್ತೇನೆ ಎಂದು ಹೇಳಿ ಆ ಗೊಂಬೆಯನ್ನು ಬಾಗಿಲ ಮೂಲೆಯಲ್ಲಿ ಕೂರಿಸಿ ಹೊರಟುಹೋಯಿತು.

ಕಳ್ಳ ಗೊಂಬೆಗೆ ಎಚ್ಚರವಾಗುತ್ತೆ ಅಂತ ಕಾಯ್ದು-ಕಾಯ್ದು ಆರು ತಿಂಗಳಾದ್ರೂ ಆ ಗೊಂಬೆಯು ಎಚ್ಚರವಾಗಲಿಲ್ಲ ಕಳ್ಳನಿಗೆ ಸಿಟ್ಟುಬಂದು ಆ ಮಂಗ ಮತ್ತೆ ಬರ್ಲಿ ಅದಕ್ಕೆ ತಕ್ಕ ಶಾಸ್ತಿ ಮಾಡ್ತೀನಿ ಎಂದು ಹೇಳಿ ಆ ಗೊಂಬೆಯನ್ನು ಒಂದು ಬಾಳೆಗುಂಡಿಯೊಳಗೆ ಎಸೆದುಬಿಟ್ಟನು.

ಮಂಗಣ್ಣ ನಾನು ಕೊಟ್ಟ ಬೊಂಬೆ ಇಷ್ಟು ದಿವಸದೊಳಗೆ ಎಚ್ಚರವಾಗಿರಬೇಕು. ನೋಡಿಕೊಂಡು ಬರೋಣ ಎಂದು ತನ್ನ ಅಕ್ಕನ ಕೈಯಲ್ಲಿ ಹೋಳಿಗೆ, ಕರ್ಜಿಕಾಯಿ, ನಿಪ್ಪಟ್ಟು ಎಲ್ಲಾ ತಿಂಡಿ-ತಿನಿಸುಗಳನ್ನು ಮಾಡಿಸಿಕೊಂಡು ಕಳ್ಳನ ಮನೆಗೆ ಬರುತ್ತಿರುತ್ತದೆ. ದಾರಿಯಲ್ಲಿ ಒಂದು ಬಾಳೆಗುಂಡಿಯಲ್ಲಿ ಮಂಗನನ್ನು ಅಣ್ಣಾ ಎಂದು ಕರೆದಂತಾಗುತ್ತದೆ. ನೋಡಿದರೆ ಕಳ್ಳ ಎಸೆದ ಗೊಂಬೆಗೆ ಜೀವ ಬಂದಿರುತ್ತದೆ. ಅದೊಂದು ಸುಂದರ ಹೆಣ್ಣಿನರೂಪ ತಾಳಿರುತ್ತದೆ. ಮಂಗಣ್ಣ ಅವಳನ್ನು ಕರೆದುಕೊಂಡು ಕಳ್ಳನ ಮನೆಗೆ ಬರುತ್ತದೆ. ಲೋ ಭಾವ ಎಂದು ಕರೆಯುತ್ತದೆ.

ಆ ಧ್ವನಿ ಕೇಳಿದ ಕಳ್ಳ ಕೋಪದಿಂದ ಕೊಲ್ಲಲು ಬರುತ್ತಾನೆ. ಆದರೆ ಮಂಗಣ್ಣನ ಜೊತೆಯಲ್ಲಿ ಸುಂದರವಾದ ಹುಡುಗಿಯನ್ನು ಕಂಡು ಸುಮ್ಮನೆ ನಿಲ್ಲುತ್ತಾನೆ. ಮಂಗಣ್ಣ ಅವರಿಬ್ಬರಿಗೂ ಮದುವೆ ಮಾಡಿಸುತ್ತದೆ. ಆಗ ಕಳ್ಳ ಸಂತೋಷದಿಂದ ಮಂಗಣ್ಣನಿಗೆ ಸಾಕಷ್ಟು ಒಡವೆ-ವಸ್ತ್ರಗಳನ್ನು ಕೊಡುತ್ತಾನೆ. ಅವೆಲ್ಲವನ್ನೂ ತಂದು ಮಂಗಣ್ಣ ತನ್ನಕ್ಕನನ್ನು ಶ್ರೀಮಂತ ರಾಜಕುಮಾರನಿಗೆ ಕೊಟ್ಟು ವಿವಾಹ ಮಾಡುತ್ತದೆ. ನಂತರ ಆ ಹುಡುಗಿಯ ತಾಯಿ ಮತ್ತು ಮಂಗಣ್ಣ ಸುಖ-ಸಂತೋಷದಿಂದ ನೆಮ್ಮದಿಯಿಂದ ಜೀವನ ಸಾಗಿಸುತ್ತಾರೆ.

ಹೀಗೆ ಜನಪದ ಕಥೆಗಳಲ್ಲಿ ಪ್ರಾಣಿಗಳು ಮನುಷ್ಯನಂತೆಯೇ ಪ್ರಮುಖಪಾತ್ರ ವಹಿಸುವುದನ್ನು ನಾವಿಲ್ಲಿ ಗಮನಿಸಬಹುದು. ಅಷ್ಟೇ ಅಲ್ಲದೇ ಜನಪದ ಕಥೆಗಳು ಆಯಾ ಸಂಸ್ಕೃತಿಯ ಸಂದರ್ಭದ ಆಲೋಚನೆಗಳು, ಭಾವನೆಗಳಿಂದ ರೂಪುಗೊಂಡಿರುತ್ತವೆ. ಆದ್ದರಿಂದಲೇ ಕಥೆಗಳು ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸುವ ಸಾಧನಗಳೆಂದು ತಿಳಿಯಬಹುದು. ಕಥೆಗಳ ನಾಯಕ ಅಥವಾ ನಾಯಕಿ ಕಿರಿಯವರಾಗಿರುವುದೋ, ಸಾಮಾನ್ಯ ಮನುಷ್ಯರಾಗಿರುವುದೋ, ಬಡವರಾಗಿರುವುದೋ ಅಥವಾ ಕೆಲವೊಮ್ಮೆ ಪೆದ್ದರಾಗಿರುವುದೋ, ಅವರು ಬಲಿಷ್ಠರಾದ ರಾಜನನ್ನೋ, ರಾಕ್ಷಸನನ್ನೋ, ಪ್ರಾಣಿಯನ್ನೋ ಅಥವಾ ದೇವಕನ್ಯೆಯನ್ನೋ ಗೆದ್ದು ಬದುಕಿನಲ್ಲಿ ಮೇಲೇರುವುದು ಹೋರಾಟದ ಒಂದು ಸಾಧ್ಯತೆಯನ್ನು ತೆರೆದು ತೋರುತ್ತದೆ. ಆ ಮೂಲಕ ವಾಸ್ತವ ಸಮಕಾಲೀನ ಸಂದರ್ಭವನ್ನು ಪ್ರಶ್ನಿಸುತ್ತಾ, ಪ್ರತಿಭಟಿಸುತ್ತದೆ. ಸಂಸ್ಕೃತಿಯ ಒಂದು ಅಂಗವೇ ಆದ ಜನಪದ ಕಥೆ ಸಾಂಸ್ಕೃತಿಕ, ಜೀವನ ಮೌಲ್ಯಗಳನ್ನು ಜನರಿಗೆ ಬೋಧಿಸುವುದರ ಜೊತೆಗೆ ಮಾನವನ ಸುಪ್ತ ಪ್ರಜ್ಞೆಯ ಭಾವನೆಗಳನ್ನು ಅಭಿವ್ಯಕ್ತಗೊಳಿಸುತ್ತದೆ.

ಈ ಹಿನ್ನೆಲೆಯಲ್ಲಿ "ಏಡಿರಾಜನ" ಕಥೆಯಲ್ಲಿ ಹತ್ತು-ಹಲವು ಕಾಲ್ಪನಿಕ ಚಿತ್ರಣಗಳು ಅಪ್ರಜ್ಞಾಪೂರ್ವಕವಾಗಿ ಮೂಡಿಬಂದಿರುವುದನ್ನು ಗಮನಿಸಬಹುದು.

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಆ ರಾಜನಿಗೆ ಮದುವೆಯಾಗಿತ್ತು. ಗಂಡ-ಹೆಂಡತಿ ಸುಖವಾಗಿದ್ದರು. ಮದುವೆಯಾಗಿ ವರ್ಷಗಳು ಕಳೆದರೂ ರಾಜನಿಗೆ ಮಕ್ಕಳಾಗಲಿಲ್ಲ. ಇದರಿಂದ ತುಂಬಾ ಚಿಂತೆಗೀಡಾದ ರಾಣಿಯು ಅರಮನೆಯಲ್ಲೇ ಇದ್ದು-ಇದ್ದು ಬೇಸರವಾಗಿದೆ, ಹೊರಗಡೆ ಹೋಗಿ ಎಲ್ಲಾದರೂ ಸುತ್ತಾಡಿಕೊಂಡು ಬರುತ್ತೇನೆ ಎಂದು ಹೇಳಿ, ರಾಜನ ಒಪ್ಪಿಗೆಯನ್ನು ಪಡೆದು ತನ್ನ ಸೇವಕಿಯರೊಂದಿಗೆ ಸುತ್ತಾಡಲು ಹೊರಗಡೆ ಹೊರಟಳು, ದಾರಿಯಲ್ಲಿ ಒಂದು ದೊಡ್ಡ ಕೆರೆಯನ್ನು ನೋಡಿದಳು, ಕೆರೆ ದಡದಲ್ಲಿ ಒಂದು 'ಏಡಿ' ವಾಸವಾಗಿತ್ತು. ಅದಕ್ಕೆ ನೂರಾರು ಮರಿಗಳಿದ್ದವು. ಅದನ್ನು ನೋಡಿದ ರಾಣಿ ನೊಂದುಕೊಂಡು ದೇವರೆ ಆ 'ಏಡಿಗೆ' ಅಷ್ಟೊಂದು ಮಕ್ಕಳನ್ನು ಕೊಟ್ಟಿದ್ದೀಯ ಅದರಲ್ಲೇ ನನಗೊಂದು ಮಗುವನ್ನು ಕೊಡಬಾರದಿತ್ತೇ ಎಂದು ದೇವರಲ್ಲಿ ಮೊರೆಯಿಡುತ್ತಾಳೆ. ಹಾಗೆಯೇ ಅಲ್ಲೆಲ್ಲಾ ಸುತ್ತಾಡಿ ಪುನಃ ಮನೆಗೆ ಬರುತ್ತಾಳೆ. ಅದೇ ಯೋಚನೆಯಲ್ಲೇ ಮಲಗಿರುತ್ತಾಳೆ. ನಂತರ ರಾಜನು ರಾಣಿಯ ಯೋಗಕ್ಷೇಮ ವಿಚಾರಿಸಲು ಬಂದಾಗ, ರಾಜನಿಗೆ ಮಹಾರಾಜರೇ ನಾನು ಇಂದು ಒಂದು ದೃಶ್ಯವನ್ನು ಕಂಡೆ, ಒಂದು ಏಡಿಗೆ ಎಷ್ಟೊಂದು ಮರಿಗಳಿರುವುದನ್ನು ಕಂಡೆ, ಆ ದೇವರು ಅದರಲ್ಲಿ ನಮಗೊಂದು ಮಗುವನ್ನು ಕರುಣಿಸಲಾರನೇ ಎಂದು ತನ್ನ ಗಂಡನ ಹತ್ತಿರ ಹೇಳುತ್ತಾಳೆ. ಅದಕ್ಕೇ ರಾಜ ಎಲ್ಲಕ್ಕೂ ಕಾಲಕೂಡಿ ಬರಬೇಕಲ್ಲ ಎಂದು ಹೇಳುತ್ತಾನೆ.

ಹೀಗೆ ಕಾಲ ಕಳೆದಂತೆ ರಾಣಿ ಗರ್ಭಿಣಿಯಾದಳು ಒಂಭತ್ತು ತಿಂಗಳು ಕಳೆದು ಅವಳಿಗೆ 'ಏಡಿಯ' ರೂಪದ ಏಡಿ ಕುಮಾರನೆಂಬ ಗಂಡು ಮಗು ಜನಿಸಿತು. ಅದನ್ನು ನೋಡಿ ಗಾಬರಿಯಾದ ರಾಜ-ರಾಣಿ ಅದನ್ನು ಸಾಕೋದು ಹೇಗೆ, ಸಲಹೋದು ಹೇಗೆ ಎಂದು ಒಂದು ಚೊಂಬಿನಲ್ಲಿ ಆ ಏಡಿಕಾಯಿಯನ್ನು ಹಾಕುತ್ತಾರೆ. ಅದು ಚೊಂಬಿನ ತುಂಬಾ ಬೆಳೆಯುತ್ತದೆ. ಒಂದು ಕೊಡದ ಒಳಗೆ ಹಾಕಿದರೆ ಅದರ ತುಂಬ ಬೆಳೆಯುತ್ತದೆ. ಮತ್ತೆ ಅದರಿಂದ ತೆಗೆದು ಒಂದು ಹಂಡೆಯಲ್ಲಿ ಹಾಕಿದರೆ ಹಂಡೆಯ ತುಂಬಾ ಬೆಳೆಯುತ್ತದೆ. ಬೇರೆ ದಾರಿ ಕಾಣದೆ ಕಣಜದಲ್ಲಿ ಹಾಕಿದರೆ ಅದರ ತುಂಬಲೂ ಬೆಳೆಯುತ್ತದೆ. ಆಗ ರಾಜ 'ಏಡಿಗಾಗಿಯೇ ಒಂದು ದೊಡ್ಡ ಅರಮನೆಯನ್ನು ಕಟ್ಟಿಸಿ ಅದರಲ್ಲಿ ಬಿಡುತ್ತಾನೆ. ಕಾಲ ಕಳೆದು ವರ್ಷಗತಿಸಿದಂತೆ 'ಏಡಿ' ದೊಡ್ಡದಾಗಿ ಬೆಳೆಯಿತು. ಒಂದು ದಿವಸ ಏಡಿಯು ನಾನು ಮದುವೆಯಾಗಬೇಕು ಎಂದು ಜೋರಾಗಿ ಕಿರುಚಿತು. ಅದನ್ನು ಕೇಳಿದ ರಾಜ ದಿಗ್ಭ್ರಮೆಯಾಗಿ ಕುಳಿತುಬಿಡುತ್ತಾನೆ. ಅಯ್ಯೋ ದೇವರೇ ಏಡಿಗೆ ಯಾರು ಹೆಣ್ಣು ಕೊಡುತ್ತಾರೆ ಎಂದು ಯೋಚಿಸಿ ತನ್ನ ಸೇವಕನನ್ನು ಕರೆದು ನನ್ನ ಮಗ ಏಡಿಗೆ ಯಾರು ಹೆಣ್ಣು ಕೊಡ್ತಾರೋ ಅವರಿಗೆ ೧೦ ಸಾವಿರ 'ವರಹ'ಗಳನ್ನು ಕೊಡುತ್ತೀನಿ ಎಂದು ಸಾರಿಕೊಂಡು ಬಾ ಎಂದು ಹೇಳಿ ಕಳುಹಿಸುತ್ತಾನೆ. ಸೇವಕರು ಮತ್ತು ಅವನ ಜೊತೆಗೆ ಮಂತ್ರಿಗಳು, ಎಲ್ಲರೂ ಹೊರಡುತ್ತಾರೆ. ಊರು-ಊರಿಗೂ ಹೋಗಿ ಡಂಗೂರ ಸಾರಿಕೊಂಡು ಬರುತ್ತಿರುತ್ತಾರೆ. ಒಂದು ಮನೆಯಲ್ಲಿ ಇಬ್ಬರು

ಹೆಣ್ಣುಮಕ್ಕಳಿದ್ದರು. ಅವರಲ್ಲಿ ದೊಡ್ಡವಳ ತಾಯಿ ಮರಣಹೊಂದಿದ್ದು ಅವಳು ಮಲತಾಯಿಯ ಆಶ್ರಯದಲ್ಲಿ ಬೆಳೆಯುತ್ತಿರುತ್ತಾಳೆ. ಹೀಗಿರುವಾಗ ಮಲತಾಯಿಯು ರಾಜನ ಸೇವಕರನ್ನು ತನ್ನ ಮನೆಗೆ ಕರೆಯುತ್ತಾಳೆ. ರಾಜನ ಮಗನಿಗೇಕೆ ತನ್ನ ಸವತಿಯ ಮಗಳನ್ನು ಕೊಡುವುದು, ತನ್ನ ಮಗಳನ್ನೇ ಕೊಡೋಣ ಅವಳು ಸುಖವಾಗಿರಲಿ ಎಂದು ಯೋಚಿಸಿ ಅವರು ಕೊಟ್ಟ ೧೦ ಸಾವಿರ ವರಹಗಳನ್ನು ತೆಗೆದುಕೊಂಡು, ತನ್ನ ಮಗಳನ್ನು ಶೃಂಗರಿಸಿ ಮಂತ್ರಿ ಮತ್ತು ಸೇವಕರೊಡನೆ ಕಳುಹಿಸುತ್ತಾಳೆ. ಅವರು ಆ ಹೆಣ್ಣು ಮಗಳನ್ನು ಕರೆತಂದು ಆ ಏಡಿಯ ಅರಮನೆಗೆ ಬಿಡುತ್ತಾರೆ. ಏಡಿಯು ಅವಳನ್ನು ನೋಡಿದ ತಕ್ಷಣ ಜೋರಾಗಿ ಹೆಜ್ಜೆಹಾಕುತ್ತಾ ಬಂದು ಅವಳನ್ನು ಕೊಲ್ಲುತ್ತದೆ.

ಮಾರನೆಯ ದಿನ ಬೆಳಗ್ಗೆ ಮತ್ತೆ ಮದುವೆಯಾಗಬೇಕು ಎಂದು ಏಡಿಯು ಜೋರಾಗಿ ಕಿರುಚುತ್ತದೆ. ರಾಜನು ಮತ್ತೆ ಸೇವಕರಿಗೆ ಮತ್ತು ಮಂತ್ರಿಗೆ ಹೇಳಿ ಮತ್ತೆ ಹೆಣ್ಣಿಗಾಗಿ ಡಂಗೂರ ಸಾರುವಂತೆ ಹೆಣ್ಣುಕೊಟ್ಟವರಿಗೆ ೨೦ ಸಾವಿರ ವರಹಗಳನ್ನು ಕೊಡುವುದಾಗಿ ಹೇಳಿ ಎಂದು ಹೇಳಿಕಳುಹಿಸುತ್ತಾನೆ. ಅವರು ಹಾಗೆಯೇ ಸಾರುತ್ತಾ ಬರುತ್ತಾರೆ. ಹಾಗೆ ಬಂದವರಿಗೆ ಆ ಮಲತಾಯಿಯು ಬನ್ನಿ ನಮ್ಮ ಮನೆಯಲ್ಲಿ ಇನ್ನೊಬ್ಬ ಹೆಣ್ಣು ಮಗಳಿದ್ದಾಳೆ. ಅವಳನ್ನು ಮದುವೆ ಮಾಡಿಕೊಡುತ್ತೇನೆ ಎಂದು ಕರೆದಳು. ಅತ್ಯಂತ ಸಡಗರ-ಸಂಭ್ರಮದಿಂದ ರಾಜನ ಕಡೆಯವರನ್ನು ಕರೆದು ಅವರಿಗೆ ಹಣ್ಣು-ಹಂಪಲು ಕೊಟ್ಟು ಕೂರಿಸಿ ತನ್ನ ಸವತಿಯ ಮಗಳನ್ನು ಬೇಗ ಶೃಂಗಾರಮಾಡಿಕೊಂಡು ಸಿದ್ಧವಾಗಿ ಬಾ ಎಂದು ಹೇಳಿದಾಗ ಅವಳು ಒಲ್ಲದ ಮನಸ್ಸಿನಿಂದ ನದಿಯ ದಂಡೆಯ ಮೇಲೆ ಹೋಗುತ್ತಾಳೆ. ದಂಡೆಯ ಮೇಲೆ ಒಬ್ಬಳೇ ಕುಳಿತು ಅಯ್ಯೋ ದೇವರೇ ನೆನ್ನೆ ತಾನೇ ನನ್ನ ತಂಗಿಯನ್ನು ಮದುವೆಮಾಡಿಕೊಟ್ಟಿದ್ದೇವೆ. ಅವಳನ್ನು ತಿಂದು ಸಾಯಿಸಿದೆ. ಇನ್ನು ನಾನು ಮದುವೆಯಾದರೇ ನನಗೂ ಅದೇ ಸ್ಥಿತಿ ಬರಬಹುದು ಎಂದು ಯೋಚಿಸುತ್ತಾ ಕುಳಿತಿರುವಾಗ ಸಂಚಾರಕ್ಕೆಂದು ಬಂದಿದ್ದ ಶಿವ-ಪಾರ್ವತಿಯರು ಹನ್ನೆರಡು ಹಳ್ಳಿ ಸುತ್ತಿಕೊಂಡು ಅದೇ ನದಿಯ ದಂಡೆಯ ಮೇಲೆ ಬರುತ್ತಾರೆ. ಈ ಹೆಣ್ಣು ಮಗಳು ಚಿಂತಾಜನಕವಾಗಿ ಕುಳಿತಿರುವುದನ್ನು ನೋಡಿ ಯಾರಮ್ಮಾ ನೀನು? ನಿನ್ನ ಕಷ್ಟವೇನು? ಎಂದು ಕೇಳುತ್ತಾರೆ. ಆಗ ಅವಳು ತನ್ನ ಕಷ್ಟವನ್ನೆಲ್ಲಾ ಹೇಳಿದಾಗ ಶಿವನು ಯೋಚಿಸಬೇಡ ಅದಕ್ಕೊಂದು ಉಪಾಯವಿದೆ. ಒಂದು ಅರಳು ಉಪ್ಪು, ಒಂದು ಇದ್ದಿಲು, ಒಂದು ಮೆಣಸಿನಕಾಯಿಯನ್ನು ಕೊಡುತ್ತೀನಿ. ನೀನು ಆ ಅರಮನೆಗೆ ಹೋದಾಗ ಆ ಏಡಿ ನಿನ್ನನ್ನು ತಿನ್ನಲು ಬಂದಾಗ ಒಂದು ಇದ್ದಿಲನ್ನು ಎಸೆದುಬಿಡು. ಆಗ ಅದರ ಕೊಂಬುಗಳು ಮುರಿದು ಹೋಗುತ್ತವೆ. ಆದರೂ ಅದು ಮತ್ತೆ ಬಂದರೆ ಉಪ್ಪು ಮತ್ತು ಮೆಣಸಿನಕಾಯನ್ನು ಎಸೆದುಬಿಡು, ಆಗ ಅದು ಪೂರ್ತಿ ಸುಟ್ಟುಹೋಗಿ, ಒಬ್ಬ ಸುಂದರ ರಾಜಕುಮಾರ ಸೃಷ್ಟಿಯಾಗುತ್ತಾನೆ. ಆಗ ನೀವಿಬ್ಬರು ಸುಖದಿಂದಿರಿ ಎಂದು ಶಿವನು ಆ ಹೆಣ್ಣು ಮಗಳಿಗೆ ಹೇಳಿದನು. ಅದರಂತೆಯೇ ಅವಳು ಮಾಡಿದಳು ಅದರಿಂದ ರಾಜನ ಮಗನ ಏಡಿಯ ರೂಪ ಹೋಗಿ ಮನುಷ್ಯ ಜನ್ಮ ಪ್ರಾಪ್ತವಾಗಿ ಅವರಿಬ್ಬರೂ ಸುಖದಿಂದಿದ್ದರು.

ಈ ವಿಷಯ ತಿಳಿದ ಏಡಿರಾಜನ ತಂದೆ-ತಾಯಿಯರು ತಮ್ಮ ಮಗ ಮತ್ತು ಸೊಸೆಯನ್ನು

ತಮ್ಮ ಅರಮನೆಗೆ ಕರೆದುಕೊಂಡು ಬಂದು ಅವರೆಲ್ಲರೂ ಸಂತೋಷದಿಂದ ಕಾಲಕಳೆಯುತ್ತಿದ್ದರು. ಆದರೆ ಈ ವಿಷಯವನ್ನು ತಿಳಿದ ಮಲತಾಯಿಯು ಕೋಪದಿಂದ ತನ್ನ ಮಗಳಿಗೆ ಸಿಗದ ಸುಖವು ಇವಳಿಗೂ ಸಿಗಬಾರದೆಂದು ಯೋಚಿಸಿ 'ಏಡಿ' ರಾಜ ಮತ್ತು ಅವನ ಪತ್ನಿ ಸಂತೋಷದಿಂದಿರುವಾಗ ರಾಣಿಯು ಗರ್ಭಿಣಿಯಾಗುತ್ತಾಳೆ. ಅವಳಿಗೆ ಒಂದು ಸುಂದರವಾದ ಗಂಡುಮಗು ಜನಿಸುತ್ತದೆ. ಇದರಿಂದ ಮನೆಯವರೆಲ್ಲರಿಗೂ ತುಂಬಾ ಸಂತೋಷವಾಗುತ್ತದೆ.

ಆದರೆ ತನ್ನ ಸವತಿಯ ಮಗಳಿಗೆ ಮಗುವಾದ ವಿಷಯ ತಿಳಿದ ಚಿಕ್ಕಮ್ಮ ಅವಳನ್ನು ನೋಡಲೆಂದು ಕರ್ಜಿಕಾಯನ್ನು ಮಾಡಿಕೊಂಡು ಅದರಲ್ಲಿ ಅರ್ಧಕ್ಕೆ ವಿಷಬೆರೆಸಿ ಮತ್ತರ್ಧಕ್ಕೆ ಬೆರೆಸದೆ ಎರಡನ್ನು ಬೇರೆ-ಬೇರೆ ಕಟ್ಟಿಕೊಂಡು ತನ್ನ ಸವತಿಯ ಮಗಳನ್ನು ನೋಡಲು ಬರುತ್ತಾಳೆ. ರಾಜ-ರಾಣಿಯು (ಏಡಿರಾಜನ ತಂದೆ-ತಾಯಿ) ಅವಳನ್ನು ಸಂತೋಷದಿಂದ ಬರಮಾಡಿಕೊಂಡು ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅವಳು ತಾನು ತಂದ ವಿಷ ಬೆರೆಸದ ಕರ್ಜಿಕಾಯನ್ನು ಅವರಿಗೆ ಕೊಟ್ಟು ತನ್ನ ಮಗಳು ಎಲ್ಲಿದ್ದಾಳೆ ಎಂದು ಕೇಳುತ್ತಾಳೆ. ಅದಕ್ಕವರು ನಿಮ್ಮ ಮಗಳು-ಮಗು ಉಪ್ಪರಿಗೆಯ ಮೇಲಿದ್ದಾರೆ ಹೋಗಿ ನೋಡಿ ಎಂದು ಹೇಳುತ್ತಾರೆ.

ಸರಿ ಎಂದು ಮಲಮಗಳ ಬಳಿ ಬಂದ ಚಿಕ್ಕಮ್ಮ ಅವಳನ್ನು ಪ್ರೀತಿಯಿಂದ ಮಾತನಾಡಿಸುವಂತೆ ನಟಿಸುತ್ತಾಳೆ. ಆದರೆ ಚಿಕ್ಕಂದಿನಿಂದಲೇ ತಾಯಿಯನ್ನು ಕಳೆದುಕೊಂಡಿದ್ದ ಆ ಹೆಣ್ಣು ಮಗಳು ತನ್ನ ಚಿಕ್ಕಮ್ಮನನ್ನೇ ತನ್ನ ತಾಯಿಯೆಂದು ಭಾವಿಸಿರುತ್ತಾಳೆ. ಹೀಗಿರೋವಾಗ ಅವಳ ಚಿಕ್ಕಮ್ಮ ವಿಷಬೆರೆಸಿದ ಕರ್ಜಿಕಾಯನ್ನು ಅವಳಿಗೆ ನೀಡುತ್ತಾಳೆ. ನೀನು ತಿನ್ನು ನಾನು ಇಲ್ಲೇ ಹೋಗಿ ಬರುತ್ತೇನೆಂದು ಬಂದು ಹೊರಗಿನಿಂದ ಕಿಟಕಿಯಲ್ಲಿ ನೋಡುತ್ತಿರುತ್ತಾಳೆ. ಇವಳು ಇನ್ನೇನು ತಿನ್ನಬೇಕು ಎನ್ನುವಷ್ಟರಲ್ಲಿ ಅವಳು ಸಾಕಿದ ಬೆಕ್ಕು ಅಲ್ಲಿಗೆ ಬರುತ್ತದೆ. ಆಗ ಅದಕ್ಕೆ ಸ್ವಲ್ಪ ಕರ್ಜಿಕಾಯನ್ನು ಹಾಕುತ್ತಾಳೆ. ವಿಷದ ಪ್ರಭಾವದಿಂದ ಬೆಕ್ಕು ಮರಣಹೊಂದುತ್ತದೆ. ಆಗ ಎಲ್ಲ ವಿಷಯವನ್ನು ಮನದಲ್ಲೇ ಅರಿತು ಆ ಕರ್ಜಿಕಾಯನ್ನು ಕಿಟಕಿಯಿಂದ ಆಚೆ ಬಿಸಾಡುತ್ತಾಳೆ.

ಕಿಟಕಿಯಿಂದ ನೋಡುತ್ತಿದ್ದ ಚಿಕ್ಕಮ್ಮ ಈ ಬಾರಿಯು ಇವಳು ಉಳಿದುಕೊಂಡಳಲ್ಲ ಎಂದು ಯೋಚಿಸುತ್ತಾ ಹೇಗಾದರೂ ಇವಳನ್ನು ಕೊಲ್ಲಲೇಬೇಕೆಂದು ಮನದಲ್ಲೇ ನಿಶ್ಚಯಿಸಿ ಸ್ವಲ್ಪದಿನಗಳ ಕಾಲ ಮಗು-ಬಾಣಂತಿಯನ್ನು ಅವಳ ತವರುಮನೆಗೆ ಕಳುಹಿಸಿಕೊಡಿ ಸ್ವಲ್ಪದಿನಗಳು ಅಲ್ಲಿಯೇ ಹಾರೈಕೆ ಮಾಡಿ ನಂತರ ಅವಳನ್ನು ಇಲ್ಲಿಗೆ ಕರೆತಂದು ಬಿಡುತ್ತೇನೆ ಎಂದು ಏಡಿರಾಜನನ್ನು ಮತ್ತು ಅವನ ತಂದೆ-ತಾಯಿಯನ್ನು ಕೇಳಿ ಒಪ್ಪಿಸಿ ತನ್ನ ಮಲಮಗಳನ್ನು ತವರುಮನೆಗೆ ಕರೆತರುತ್ತಾಳೆ.

ಚಿಕ್ಕಮ್ಮ ಮೊದಲೇ ಯೋಚಿಸಿದಂತೆ ತನ್ನ ಮಲಮಗಳನ್ನು ಕೊಲ್ಲಲೆಂದು ನಿನ್ನ ಮಗುವಿಗೆ ಸ್ನಾನಮಾಡಿಸು ಬಾ ಎಂದು ಕರೆದು ಅವಳನ್ನು ಒಂದು ಕಂದಕದಲ್ಲಿ ದೂಡುತ್ತಾಳೆ. ದೂಡಿ ಮೇಲೆ ಬಿಸಿನೀರು ಸುರಿಯುತ್ತಾಳೆ. ಇದರಿಂದ ಪೀಡೆ ಕಳೆಯಿತು ಎಂದು ನಿಶ್ಚಿಂತಳಾಗುತ್ತಾಳೆ. ಆದರೆ ಅವಳು ಸುರಿದ ಬಿಸಿನೀರು ತಾಯಿ-ಮಗುವಿನ ಮೇಲೆ ಬೀಳದೆ ಕಂದಕದಲ್ಲಿರುವ ಕಿವಿಯಲ್ಲಿ ಕುರವೆದ್ದು

ನರಳುತ್ತಿರುವ ಏಳೆಡೆ ಸರ್ಪದ ಮೇಲೆ ಬಿದ್ದು ಅದು ತನ್ನ ಖಾಯಿಲೆಯಿಂದ ಮುಕ್ತವಾಗಿ ಆ ತಾಯಿಯನ್ನು ಯಾರಮ್ಮಾ ನೀನು ಎಂದು ಕೇಳುತ್ತದೆ. ಆಗ ಅವಳು ತನ್ನ ಕಥೆಯನ್ನು ಹೇಳುತ್ತಾಳೆ. ಅದನ್ನು ಕೇಳಿ ಮರುಗಿದ ನಾಗರಾಜ ನೀನು ನನ್ನ ಮಗಳಂತೆ. ಇಲ್ಲೇ ಇರು ಎಲ್ಲೂ ಹೋಗಬೇಡ ನಾನೇ ಸಾಕುತ್ತೇನೆಂದು ಹೇಳುತ್ತದೆ. ತಾಯಿ-ಮಗು ಇಬ್ಬರೂ ಅಲ್ಲೇ ಕ್ಷೇಮದಿಂದಿರುತ್ತಾರೆ.

ಈ ಕಡೆ ಚಿಕ್ಕಮ್ಮ ಏಡಿರಾಜನನ್ನು ಕರೆಸಿ ತನ್ನ ಮಲಮಗಳಂತೆ ಇರುವ ತನ್ನ ತಂಗಿ ಮಗಳನ್ನು ಕರೆದು ಇವಳೇ ನಿನ್ನ ಹೆಂಡತಿ ಬಾಣಂತಿಯನ್ನು ಕರೆದುಕೊಂಡು ಹೋಗಪ್ಪ ಎನ್ನುತ್ತಾಳೆ. ಏಡಿರಾಜ ತನ್ನ ಮಗುವೆಲ್ಲಿ ಎಂದು ಕೇಳಿದರೆ ಅಯ್ಯೋ ನಾನು ಏನು ಹೇಳಲಿ ಮಗುವಿಗೆ ಜಡ್ಡಾಗಿ (ಖಾಯಿಲೆ) ಮರಣ ಹೊಂದಿತು ಎಂದು ಸುಳ್ಳು ಹೇಳುತ್ತಾಳೆ. ಇದರಿಂದ ತುಂಬಾ ದುಃಖಿತನಾದ ಏಡಿರಾಜ ಅವಳನ್ನೇ ತನ್ನ ಮನೆಗೆ ಕರೆತರುತ್ತಾನೆ. ಇವಳ ಚಲನ-ವಲನಗಳನ್ನು ಗಮನಿಸಿ ಅನುಮಾನ ಬಂದ ರಾಜ ತಲೆಬಾಚು ಎಂದು ಕೇಳುತ್ತಾನೆ. ಅದಕ್ಕವಳು ಯಾವುದೋ ಬಾಚಣಿಗೆ ತರುತ್ತಾಳೆ. ಇದರಿಂದ ಅವನ ಅನುಮಾನ ಮತ್ತಷ್ಟು ಹೆಚ್ಚಾಗುತ್ತದೆ, ಏಕೆಂದರೆ ತನ್ನ ಹೆಂಡತಿ ಯಾವಾಗಲು ತನಗೆ ಚಿನ್ನದ ಸೀರಿಣಿಗೆ ಮತ್ತು ಚಿನ್ನದ ಬಾಚಣಿಗೆಯಿಂದಲೇ ತಲೆಬಾಚುತ್ತಿದ್ದಳು. ಆದರೆ ಇವಳು ಹೀಗೇಕೆ ಬೇರೆಯದನ್ನು ತರುತ್ತಿದ್ದಾಳೆ ಎಂದು ಮನದಲ್ಲೇ ಯೋಚಿಸಿ ತನ್ನ ನಿಜವಾದ ಹೆಂಡತಿ ಎಲ್ಲಿರಬಹುದು ಹೇಗಾದರೂ ಮಾಡಿ ಅವಳನ್ನು ಹುಡುಕಲೇಬೇಕೆಂದು ತಿರ್ಮಾನಿಸಿ ಬಳೆಗಾರ ವೇಷವನ್ನು ಹಾಕಿ ಬಳೆಮಾರುತ್ತಾ ಬರುತ್ತಾನೆ.

ಆಗ 'ಏಡಿ' ರಾಜನ ಪತ್ನಿಯು ಏಳೆಡೆ ಸರ್ಪದ ಬಳಿ ಬಂದು ಅಪ್ಪಾ ನನ್ನಕೈಲಿ ಬಳೆ ಇಲ್ಲ ನಾನು ಹೋಗಿ ಬಳೆ ತೊಡಿಸಿಕೊಳ್ಳಲ ಎಂದು ಕೇಳುತ್ತಾಳೆ. ಅದಕ್ಕೇನಮ್ಮ ಹೋಗಿ ತೊಡಿಸಿಕೊ ಎಂದು ಹೇಳುತ್ತಾರೆ. ಆಗ ಇವಳು 'ಏಡಿರಾಜ'ನನ್ನು ಕರೆದು ಬಳೆ ತೊಡಿಸುವಂತೆ ಕೇಳುತ್ತಾಳೆ. ಆತ ಬಳೆತೊಡಿಸಯವ ಸಮಯಕ್ಕೆ ಸರಿಯಾಗಿ ಮಗು ಎದ್ದು ಅಳಲುಪ್ರಾರಂಭಿಸುತ್ತದೆ. ಆಗ ಅವಳು "ಏಡಿ ಕುಮಾರನ ಮಗನೇ, ಏಳು ಎಡೆ ಸರ್ಪದ ಮೊಮ್ಮಗನೇ ಎದ್ದೇ ಬಿಟ್ಯಾ ಬಾರೋ" ಎಂದು ತನ್ನ ಕಂದನನ್ನು ಕರೆಯುತ್ತಾಳೆ.

ಇದರಿಂದ ಗಾಬರಿಯಾದ 'ಏಡಿರಾಜ' ಅವಳ ಕೈಹಿಡಿದು ಯಾರು ನೀನು? ಆ ಮಗುವನ್ನೇಕೆ ಏಡಿಕುಮಾರನ ಮಗನೇ, ಏಳು ಎಡೆ ಸರ್ಪರಾಜನ ಮೊಮ್ಮಗನೇ ಎಂದು ಕರೆಯುತ್ತಿದ್ದೀಯ ಎಂದು ಕೇಳಿದಾಗ ಅವಳು ತನ್ನ ಚಿಕ್ಕಮ್ಮ ಮಾಡಿದ ಮೋಸ, ಅವಳು ಏಡಿ ಕುಮಾರನನ್ನು ಮದುವೆಯಾದದ್ದು ನಂತರ ತನ್ನನ್ನು ಮಗುವನ್ನು ಕುದಿಯುವ ನೀರು ಹೊಂಡಕ್ಕೆ ದೂಡಿದ ಎಲ್ಲಾ ಘಟನೆಯನ್ನು ವಿವರಿಸುತ್ತಾಳೆ. ಏಡಿ ಕುಮಾರ ಓ! ಇವಳೇ ನನ್ನ ಹೆಂಡತಿ, ಇವಳನ್ನು ಅನ್ಯಾಯದಿಂದ ಕೊಲ್ಲಲು ಪ್ರಯತ್ನಿಸಿದ ಇವಳ ಚಿಕ್ಕಮ್ಮ, ಅವಳ ಸಂಬಂಧಿಯ ಮಗಳನ್ನು ನನ್ನ ಜೊತೆಯಲ್ಲಿ ಕಳುಹಿಸಿದ್ದಾಳೆಂದು ಮನದಲ್ಲೇ ಯೋಚಿಸಿ. ಏಡಿ ಕುಮಾರನು ನಡೆದ ಎಲ್ಲಾ ಘಟನೆಯನ್ನು ತನ್ನ ಹೆಂಡತಿಗೆ ವಿವರಿಸುತ್ತಾನೆ. ನಂತರ ಗಂಡ-ಹೆಂಡತಿ ಸಂತೋಷದಿಂದ ಸರ್ಪರಾಜನ ಉಪಕಾರಕ್ಕೆ ವಂದಿಸಿ ಸರ್ಪರಾಜನ ಆಶೀರ್ವಾದವನ್ನು, ಒಪ್ಪಿಗೆಯನ್ನು ಪಡೆದು ತನ್ನ

ಹೆಂಡತಿ–ಮಗುವನ್ನು ಅರಮನೆಗೆ ಕರೆದುಕೊಂಡು ಬರುತ್ತಾನೆ. ಬಂದವನು ತನ್ನ ಹೆಂಡತಿಯ ವೇಷದಲ್ಲಿದ್ದವಳನ್ನು ಕರೆದು ತಲೆಬಾಚಲು ಹೇಳಿದಾಗ ಅವಳು ಬೆಪ್ಪಾಗಿ ಚಿನ್ನದ ಸೀರಿಣಿಗೆ–ಬಾಚಣಿಗೆ ಸಿಗದೆ ನಿಲ್ಲುತ್ತಾಳೆ. ಆದರೆ ಏಡಿ ರಾಜನ ಮಡದಿ ಹಿಂದೆ ತಾನಿಟ್ಟ ಜಾಗದಿಂದಲೇ ಚಿನ್ನದ ಸೀರಿಣಿಗೆ–ಬಾಚಣಿಗೆಯನ್ನು ತಂದು ತಲೆಬಾಚುತ್ತಾಳೆ.

ಆಗ ಮೋಸದಿಂದ ತನಗೂ ತನ್ನ ಹೆಂಡತಿಗೂ ವಂಚಿಸಿದ ಚಿಕ್ಕಮ್ಮ ಮತ್ತು ಅವಳ ಸಂಬಂಧಿಗೆ ಇಬ್ಬರಿಗೂ ಅವರು ಮಾಡಿದ ತಪ್ಪಿಗೆ ಅವರಿಗೆ ತಕ್ಕ ಶಿಕ್ಷೆಕೊಡುತ್ತೇನೆಂದು ಹೇಳಿ ತನ್ನ ಮಂತ್ರಿಗೆ ಅವರಿಬ್ಬರ ತಲೆಕಡಿಯುವಂತೆ ಹೇಳುತ್ತಾನೆ. ಆದರೆ 'ಏಡಿರಾಜನ' ಪತ್ನಿಯು ಅವರಿಬ್ಬರನ್ನು ಕ್ಷಮಿಸಿಬಿಡಿ ಎಂದು ಬೇಡಿಕೊಳ್ಳುತ್ತಾಳೆ. ಆಗ ರಾಜ ಅವರನ್ನು ಕ್ಷಮಿಸುತ್ತಾನೆ.

ಮುಂದೆ ಏಡಿ ರಾಜ ತನ್ನ ತಂದೆ–ತಾಯಿ, ಮಡದಿ–ಮಗವಿನೊಂದಿಗೆ ಸುಖ–ಸಂತೋಷದಿಂದಿರುತ್ತಾರೆ.

ಪ್ರಸ್ತುತ ಕಥೆಯಲ್ಲಿ ಅದ್ಭುತ ರಮ್ಯ ಕಲ್ಪನೆಗಳಿರುವುದನ್ನು ಗಮನಿಸಬಹುದು. ನೀರಿನಲ್ಲಿ ತನ್ನ ಮರಿಗಳೊಂದಿಗಿರುವ ಏಡಿಯನ್ನು ನೋಡಿ ತನಗೂ ಅಂತಹ ಮಕ್ಕಳಿದ್ದರೆ ಎಷ್ಟು ಚೆನ್ನ ಎಂದು ಯೋಚಿಸುವ ರಾಣಿ, ಏಡಿಗೆ ಜನ್ಮ ಕೊಡುವುದು, ಅದು ಮುಂದೆ ಸುಂದರ ರಾಜಕುಮಾರನ ರೂಪ ಪಡೆಯುವುದು, ಇಲ್ಲೆಲ್ಲಾ ಮಾಟ–ಮಂತ್ರದ ಬಗ್ಗೆ ಜನಪದರಿಗಿರುವ ನಂಬಿಕೆ ಸ್ಪಷ್ಟವಾಗುತ್ತದೆ. ಏಡಿರಾಜನ ಕಥೆಯು ಸುಖಾಂತ್ಯದ ಕಥೆಯಾಗಿದ್ದು ಇಲ್ಲಿ ಸದ್ಗುಣಕ್ಕೆ, ಸತ್ಯಕ್ಕೆ, ಕರ್ತವ್ಯಕ್ಕೆ ಜಯವನ್ನು ಸೂಚಿಸುತ್ತದೆ. ಇಲ್ಲಿ ಕಥಾನಾಯಕಿಯು ಮಲಮಗಳಾಗಿದ್ದು ಸಾಕಷ್ಟು ನೋವು, ಹಿಂಸೆಗಳನ್ನು ಅನುಭವಿಸುತ್ತಾಳೆ. ಇಲ್ಲಿ ಬದುಕಿನ ವಾಸ್ತವ ಘಟನೆಗಳು, ಅನುಭವಗಳು, ಕಥಾ ಚೌಕಟ್ಟಿನಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಇನ್ನೊಂದು ರೀತಿಯಲ್ಲಿ ಈ ಕಥೆಯು ಮಾನವನ ಸುಪ್ತ ಪ್ರಜ್ಞೆಯ ಭಾವನೆಗಳ ಸಾಂಕೇತಿಕ ಅಭಿವ್ಯಕ್ತಿಯು ಆಗಿದೆ. ವಾಸ್ತವ ಬದುಕಿನಲ್ಲಿ ಸಾಧ್ಯವಾಗದ, ದಮನಕ್ಕೊಳಗಾದ ಭಾವನೆಗಳನ್ನು, ಅಭಿವ್ಯಕ್ತಿಯನ್ನು ಸ್ಥಾಪಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯಾಗಿ ಕಥೆ ಕೆಲಸ ಮಾಡುತ್ತದೆ.

ದೈನಂದಿನ ಬದುಕಿನಲ್ಲಿ ತನಗಾದ ನೋವು, ಅಸಹಾಯಕತೆಗೆ ವಾಸ್ತವದಲ್ಲಿ ಪ್ರತಿಕ್ರಿಯೆ ತೋರಲಾಗದ ಮೌನದ ಒತ್ತಡ ಪ್ರತಿಭಟನೆಯ ಕಾರ್ಯತಂತ್ರವಾಗಿ ಕಥೆಯನ್ನು ಗಮನಿಸಬಹುದು. ಒಟ್ಟಾರೆ ಎಲ್ಲಾ ಜಾತಿಗಳಲ್ಲಿರುವಂತೆ ಸಾದರಲ್ಲಿಯು ಹಲವಾರು ಜನಪದ ಕಥೆಗಳು ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು. ಇವು ಮೌಖಿಕರೂಪದಲ್ಲಿ ತಲೆಮಾರಿನಿಂದ–ತಲೆಮಾರಿಗೆ ಹರಿದುಬಂದಿವೆ.

೫.೭:– ನುಡಿಗಟ್ಟುಗಳು

ಕಥೆ, ಗೀತೆ, ಗಾದೆ, ಒಗಟು, ಒಡಪುಗಳನ್ನು ಹೇಗೆ ಜನಪದ ಸಾಹಿತ್ಯದ ಪ್ರಕಾರಗಳೆಂದು ಗುರುತಿಸಲಾಗುತ್ತದೆಯೋ, ಹಾಗೆಯೇ ನುಡಿಗಟ್ಟುಗಳನ್ನು ಸಹ ಸಾಹಿತ್ಯದ ಪ್ರಕಾರವೆಂದು ಗುರುತಿಸಲಾಗುತ್ತದೆ. ಮನುಷ್ಯ ಮನಸ್ಸಿನ ಭಾವನೆಗಳನ್ನು ಭಾಷೆಯ ಮೂಲಕ ಹೊರಹಾಕುತ್ತಾನೆ.

ತನ್ನ ಮನಸ್ಸಿನ ಸುಖ-ದುಃಖಗಳನ್ನು, ಸೂಕ್ಷ್ಮವಿಚಾರಗಳನ್ನು ಅಭಿವ್ಯಕ್ತಪಡಿಸಲು ಭಾಷೆ ಒಂದು ಸಮರ್ಥ ಮಾಧ್ಯಮ. ಭಾಷಾಭಿವೃದ್ಧಿಯಲ್ಲಿ ನುಡಿಗಟ್ಟುಗಳು ಪ್ರಮುಖಪಾತ್ರ ವಹಿಸುತ್ತವೆ.

"ಎರಡು ಅಥವಾ ಎರಡಕ್ಕಿಂತ ಹೆಚ್ಚು ಶಬ್ದಗಳು ಸೇರಿ ಒಂದು ನುಡಿಗಟ್ಟಾಗಿ ಅದಕ್ಕೊಂದು ನವೀನಾರ್ಥ ಬರುತ್ತದೆ". ಇದು ಎಲ್ಲಾ ಭಾಷೆಯಲ್ಲಿಯೂ ಕಾಣುವ ಸಹಜ ಶಕ್ತಿಯಾಗಿದೆ. ಈ ವಿಶಿಷ್ಟವಾದ ಶಕ್ತಿಯಿಂದ ಕನ್ನಡಭಾಷೆಯಲ್ಲಿ ಅನೇಕ ಅಂದವಾದ ನುಡಿಗಟ್ಟುಗಳನ್ನು ಉಂಟುಮಾಡಿರುತ್ತದೆ. ನುಡಿಗಟ್ಟುಗಳ ಬಳಕೆಯಿಂದ ಭಾಷೆಯಲ್ಲೇ ಇರುವ ಸಾಮಾಗ್ರಿಯನ್ನೇ ಬಳಸಿಕೊಂಡು ಭಾಷಾಭಿವೃದ್ಧಿಯನ್ನು ಮಾಡಲು ಸಹಾಯಕವಾಗುತ್ತದೆ.

ನುಡಿಗಟ್ಟುಗಳ ಬಳಕೆಯಿಂದಾಗಿ ಭಾಷೆಯು ಸತ್ವಪೂರ್ಣಗೊಳ್ಳುವುದರೊಂದಿಗೆ ಶ್ರೀಮಂತವಾಗುತ್ತದೆ. ಭಾಷೆಯೊಂದು ಸತ್ವಪೂರ್ಣಗೊಳ್ಳುವಲ್ಲಿ ಅದರ ಬಳಕೆಯ ಸಾಧ್ಯತೆಯು ಬಹುಮುಖ್ಯ ಪಾತ್ರವಹಿಸುತ್ತದೆ ಎಂಬುದನ್ನು ಮರೆಯುವಂತಿಲ್ಲವಾದ್ದರಿಂದ ನುಡಿಗಟ್ಟುಗಳು ಜನಪದ ಸಾಹಿತ್ಯಪ್ರಕಾರಗಳಲ್ಲಿ ಪ್ರಮುಖಪಾತ್ರ ವಹಿಸುತ್ತದೆ. ಜನಪದರು ತಮ್ಮ ದೈನಂದಿನ ಜೀವನವನ್ನು ಸುಗಮಗೊಳಿಸಿಕೊಳ್ಳುವುದಕ್ಕಾಗಿ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಔಚಿತ್ಯಪೂರ್ಣವಾಗಿ ಪದಗಳನ್ನು ಬಳಸುವುದನ್ನು ಕಾಣುತ್ತೇವೆ. ಇದಕ್ಕೆ ಸಾಹಿತ್ಯದ ಸಮಗ್ರ ಪ್ರಕಾರಗಳೇ ಉದಾಹರಣೆಯಾಗಿ ನಿಲ್ಲುತ್ತವೆ.

ನುಡಿಗಟ್ಟು ಎಂಬ ಪದಕ್ಕೆ ನುಡಿಗಟ್ಟು, ಮಾತಿನ ಜೋಡಣೆ, ಮಾತಿನ ನಿಯಮ ಎಂಬಿತ್ಯಾದಿ ಅರ್ಥಗಳು ಬರುವುದುಂಟು.

<u>ಉದಾ:-</u> ಕಣ್ಣಾರೆ, ಕಂಗೊಳಿಸು, ಕಂದೀಲು, ಬಾಯ್ಬಿಡು, ಕೈಹಾಕು, ಕೈಜೋಡಿಸು, ಬಾನಗಲ, ಬಾನಾಡಿ, ಕಂಗಾಲು, ಕಂಬನಿಗರೆ, ಬೆಕ್ಕಿನ ಕಣ್ಣು, ಮೂಗುಮುರಿ, ಮೂಗುತೂರಿಸು, ಮೀಸೆಮಣ್ಣಾಗು, ಬಾಯಿಗೆ ಬೀಗ ಹಾಕು-ಕಾಲುಕೀಳು, ಬೆಸ್ತುಬೀಳು, ಕೈಚೆಲ್ಲು ಇತ್ಯಾದಿ ಆಯಾ ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಸಾದರು ಔಚಿತ್ಯಪೂರ್ಣವಾಗಿ ನುಡಿಗಟ್ಟುಗಳನ್ನು ಬಳಸುತ್ತಾರೆ.

<u>೫.೮:- ಶಿಷ್ಟ ಸಾಹಿತ್ಯ</u>

ಮೌಖಿಕರೂಪದಲ್ಲಿರುವುದು ಜನಪದ ಸಾಹಿತ್ಯವಾದರೆ; ಬರವಣಿಗೆಯ ರೂಪದಲ್ಲಿರುವುದು ಶಿಷ್ಟ ಸಾಹಿತ್ಯ. ಸಾದರಲ್ಲಿ ರಚನೆಯಾಗಿರುವ ಶಿಷ್ಟಸಾಹಿತ್ಯವನ್ನು ಕುರಿತು ಗಮನಹರಿಸಿದಾಗ, ಸಾದರ ಬಹುತೇಕ ಪ್ರಜ್ಞಾವಂತ ಸಾಹಿತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಸಾದರ ಲೇಖಕರ ಸಾಹಿತ್ಯವು ಸತ್ವಪೂರ್ಣವಾಗಿದ್ದು, ಮಣ್ಣಿನ ವಾಸನೆಯಿಂದ ಕೂಡಿದ್ದು, ನೆಲಮೂಲ ಸಂಸ್ಕೃತಿಯನ್ನು ತೆರೆದು ತೋರುವಂತೆ ಸಾಹಿತ್ಯರಚನೆಯ ಕೈಂಕರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಹೆಮ್ಮೆಪಡಬೇಕಾದ ವಿಷಯವೇ ಹೌದು.

ಆಧುನಿಕ ಕನ್ನಡ ಸಾಹಿತ್ಯ ರಚನೆಯಲ್ಲಿ ಸಾದರು ವಹಿಸಿದ ಪಾತ್ರ ಶ್ಲಾಘನೀಯವಾದದ್ದೇ ಸರಿ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯರಚನೆಯಲ್ಲಿ ಸಾದರು ವಹಿಸಿರುವ ಪಾತ್ರ ಮತ್ತು ಅವರು ಸೃಜಿಸಿರುವ ಸಾಹಿತ್ಯದ ವೈವಿಧ್ಯತೆಯನ್ನು ಕುರಿತು ಒಂದು ಸಂಕ್ಷಿಪ್ತ ವರದಿಯನ್ನು ಮುಂದೆ ಕೊಡಲಾಗಿದೆ.

ಡಾ॥ ರಂಗಾರೆಡ್ಡಿ ಕೋಡಿರಾಂಪುರ:-

ಸಾದರ ಹಿರಿಯ, ಹೆಮ್ಮೆಯ ವರಪುತ್ರರಾಗಿರುವ ಡಾ॥.ರಂಗಾರೆಡ್ಡಿ ಕೋಡಿರಾಂಪುರ ರವರು ೦೮-೧೦-೧೯೫೨ರಲ್ಲಿ ಜನಿಸಿದರು. ಇವರು ಎ.ಇ.ಎಸ್.ನ್ಯಾಷನಲ್ ಪದವಿ ಕಾಲೇಜಿನಲ್ಲಿ (ಗೌರಿಬಿದನೂರು) ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಸಂಶೋಧಕರಾಗಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕೋಲಾರ ಮತ್ತು ತುಮಕೂರು ಪಿ.ಜಿ.ಸೆಂಟರ್‌ನಲ್ಲಿ ಅತಿಥಿ ಉಪನ್ಯಾಸಕರಾಗಿ, ಬೆಂಗಳೂರು, ವಿ.ವಿ.ಯಲ್ಲಿ ಅನುಮೋದಿತ ಸಂಶೋಧನಾ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಿದ ರಂಗಾರೆಡ್ಡಿರವರು ಬರಹಗಾರರಾಗಿ, ನಟರಾಗಿ, ನಿರ್ದೇಕರಾಗಿ, ಜಾನಪದ ತಜ್ಞರಾಗಿ ಹೆಸರು ಮಾಡಿದವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿಯ ಸದಸ್ಯರು, ಬೆಂಗಳೂರು ಆಕಾಶವಾಣಿಯ ಧ್ವನಿ ಪರೀಕ್ಷಾಮಂಡಳಿ ಸದಸ್ಯರೂ ಆಗಿ ಸೇವೆ ಸಲ್ಲಿಸಿದ ರಂಗಾರೆಡ್ಡಿರವರು ಕವಿಯಾಗಿ, ವಿರ್ಮಶಕರಾಗಿ, ಸಂಶೋಧಕರಾಗಿ, ಪ್ರಬಂಧಕಾರರಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮೆರೆದಿದ್ದಾರೆ.

ಇವರು ೧೯೭೭ರಲ್ಲಿ **'ಲಿಖಿತ ಜಾನಪದ'** ಎಂಬ ಲೇಖನ ಸಂಕಲನವನ್ನು, ೧೯೯೦ರಲ್ಲಿ **'ನನ್ನೂರ ಹಾಡು'** ಎಂಬ ಕವನಸಂಕಲವನ್ನು ಮತ್ತು **'ಸಾಧನೆಗಳು-ಯೋಜನೆಗಳು'** ಎಂಬ ಕೃತಿಯನ್ನು ೧೯೯೩ರಲ್ಲಿ ರಚಿಸಿದ್ದಾರೆ. ಇವರು ತೆಲುಗು ಕವಿ ಶ್ರೀ ಶ್ರೀ ರವರನ್ನು ಕುರಿತು ೧೯೯೪ರಲ್ಲಿ **'ತೆಲುಗು ಕವಿ ಶ್ರೀ ಶ್ರೀ ಬದುಕು ಬರಹ'** ಎಂಬ ಕೃತಿಯನ್ನು ರಚಿಸಿದ್ದಾರೆ. ಹಾಗೆಯೇ ೧೯೯೫ರಲ್ಲಿ ರಚಿಸಿದ **'ಬಂಡಾಯ ಜಾನಪದ'** ಎಂಬ ಲೇಖನ ಸಂಕಲನಕ್ಕಾಗಿ ಗುಂಡ್ಮಿಜಾನಪದ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

'ಕೋಲಾರ ಜಿಲ್ಲೆಯ ಜನಪದ ಕಲೆಗಳ ಅಧ್ಯಯನ' (೧೯೯೭) ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.

೧೯೯೮ರಲ್ಲಿ ಜಾನಪದ ಅಕಾಡೆಮಿ ಬೆಳೆದು ಬಂದದಾರಿಯನ್ನು ಕುರಿತಂತೆ **'ತೇರುಹರಿದಾವು'** ಎಂಬ ಕೃತಿಯನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ **'ಗಂಧದ ಮಡುವ ಕಲಕೂತ'**, **'ಒಣಭೂಮಿ ಭತ್ತ'** (ನವ ಸಾಕ್ಷರತಾ ಪುಸ್ತಕ), **ಸೊಲ್ಲುಸೊಲ್ಲೆಲ್ಲ ಅಪರಂಜಿ** ಎಂಬ ವಿಮರ್ಶಾ ಲೇಖನವನ್ನು ರಚಿಸಿದ್ದಾರೆ, ಅಷ್ಟೇ ಅಲ್ಲದೇ **ಗುಬ್ಬಿ ವೀರಣ್ಣ, ಜನಪದ ಸಂಸ್ಕೃತಿ, ಗೊಂಬೆಜೀವ-ಜೀವನಗೌಡ, ಎಣ್ಣ್ಯಾಗ ಭತ್ತಿ ಉರುದಂಗ,** ಎಂಬಿತ್ಯಾದಿ ಹಲವು ಕೃತಿಗಳನ್ನು ರಚಿಸಿದ್ದಾರೆ.

[illegible]

ರಂಗಾರೆಡ್ಡಿರವರು ಸಂಪಾದಕರಾಗಿಯೂ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರ ಸಂಪಾದಿತ ಕೃತಿಗಳನ್ನು ಗಮನಿಸುವುದಾದರೆ **ಶಿಕ್ಷಣ ಮತ್ತು ವೈಚಾರಿಕತೆ, ಕಮಲಾಭಿನಂದನ, ಜಾನಪದ ಗಂಗೋತ್ರಿ, ಜಾನಪದ, ವಿಚಾರ ದರ್ಶನ, ಜಾನಪದ ಸಿದ್ಧಾಂತಗಳು, ಜಾನಪದ ಅನ್ವಯ್ಕತೆ, ಕಲ್ಲರಳಿ ಹೂವಾಗಿ, ಹೊಸಗನ್ನಡ ಕವಿತೆ, ತತ್ವಪದಗಳು, ಸಾಹಿತ್ಯದ ಸಂವಾದ** ಎಂಬಿತ್ಯಾದಿ ಕೃತಿಗಳನ್ನು ಸಂಪಾದಿಸಿದ್ದಾರೆ. ಇವರ ಸಂಪಾದಿತ ಸಂಚಿಕೆಗಳು ಹಲವಿದ್ದು ಸಾಕಷ್ಟು ಜನಪ್ರಿಯತೆಯನ್ನು ಪಡೆದಿವೆ.

'ಮುನ್ನಡೆ', 'ಜಾನಪದ ಗಂಗೋತ್ರಿ', 'ಜಾನಪದ ಸಂಗತಿ', 'ಗಿರಿಸಾಲು ಕೆರೆಮಾಲೆ', 'ಸಾದರ ಸುದ್ದಿ', ಎಂಬ ನಿಯತಕಾಲಿಕೆಯ ಸಂಪಾದಕರಾಗಿ ಆರು ವರ್ಷ ಸೇವೆ ಸಲ್ಲಿಸಿದ್ದಾರೆ. 'ಅಗ್ನಿಹಂಸ' ಎಂಬಿತ್ಯಾದಿ ಸ್ಮರಣಸಂಚಿಕೆಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ಹಲವು ಸ್ಮರಣ ಸಂಚಿಕೆಗಳ ಮಂಡಲಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 'ವಿದುರಾಶ್ವತ್ಥ ಸತ್ಯಾಗ್ರಹ', 'ಪಿನಾಕಿನಿ', 'ಜನಪದ ಸಂಸ್ಕೃತಿ ವಿಶ್ವಕೋಶ', 'ಸಿರಿನಂದಿ', 'ವಿಷನ್', 'ಬಿತ್ತರ' ಮೊದಲಾದ ಸ್ಮರಣಸಂಚಿಕೆಗಳ ಸಂಪಾದಕ ಮಂಡಳಿಯ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯಲೋಕಕ್ಕೆ ಅಪಾರ ಕೊಡುಗೆ ನೀಡಿರುವ ರಂಗಾರೆಡ್ಡಿಯವರು ಹಲವು ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಇವರು ಮೈಸೂರು ವಿಶ್ವವಿದ್ಯಾಲಯದ ಪ್ರಬಂಧ ಸ್ಪರ್ಧೆಯಲ್ಲಿ ೧೯೭೫ರಲ್ಲಿ **"ಹೊನ್ನಶೆಟ್ಟಿ" ಪ್ರಶಸ್ತಿಯನ್ನು, ೧೯೯೫ನೇ ಸಾಲಿನ ಉತ್ತಮ ಪುಸ್ತಕ 'ಬಂಡಾಯ ಜಾನಪದ'ಕ್ಕೆ ಗುಂಡ್ಮಿ ಜಾನಪದ ಪ್ರಶಸ್ತಿಯನ್ನು, ಸೆಕ್ಯುಲರ್ ಇಂಡಿಯಾ ಹಾರ್ಮೋನಿ ಅವಾರ್ಡ್ ನ್ಯೂಡೆಲ್ಲಿ (೨೦೦೦), ಸಮಗ್ರ ಸಾಧನೆಗಾಗಿ ಬಯಲು ಸೀಮೆ ಜಾನಪದ ಪ್ರಶಸ್ತಿ (೨೦೦೫), ಬೆಸ್ಟ್ ಸಿಟಿಜನ್ಸ್ ಆಫ್ ಇಂಡಿಯಾ ಪ್ರಶಸ್ತಿ (೨೦೦೬), ಕರ್ನಾಟಕ ನಾಟಕ ಅಕಾಡೆಮಿ ಸುವರ್ಣ ಕರ್ನಾಟಕ ಗೌರವ ಪ್ರಶಸ್ತಿಯನ್ನು (೨೦೦೭), ಪಡೆದಿದ್ದಾರೆ, ಜೊತೆಗೆ ತುಮಕೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು (೨೦೧೨) ಪಡೆದಿದ್ದಾರೆ.** ಹೀಗೆ ತಮ್ಮ ಸಾಹಿತ್ಯ ಸೇವೆಗಾಗಿ ನಾಡಿನ ಹಲವು ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿರುವ ರಂಗಾರೆಡ್ಡಿರವರು ಸರಳ-ಸಾಮಾನ್ಯ ವಸ್ತು ವಿಷಯವನ್ನೇ ಆಯ್ದುಕೊಂಡು ಅದ್ಭುತ ಕಾವ್ಯ ನಿರ್ಮಾಣ ಕೌಶಲ್ಯವನ್ನು ಮೆರೆದಿರುವುದು ಗಮನಾರ್ಹ ಅಂಶವಾಗಿದೆ.

ಭಾಷೆಯಲ್ಲಿ ಕಸರತ್ತು ಮಾಡಲು ಹೊರಟ ನವ್ಯಕಾವ್ಯ ಪ್ರಬುದ್ಧಾವಸ್ಥೆಯಲ್ಲಿದ್ದ ಸಂದರ್ಭದಲ್ಲಿ ಜನಪದ ಧೋರಣೆಯ ಕಾವ್ಯ ರಚನೆಯ ಕಾರ್ಯದಲ್ಲಿ ಕ್ರಿಯಾಶೀಲರಾಗಿದ್ದಂತಹ ಲೇಖಕರಲ್ಲಿ ಡಾ.ರಂಗಾರೆಡ್ಡಿ ಕೋಡಿರಾಂಪುರ ರವರು ಪ್ರಮುಖರು.

ಇವರು ನವ್ಯಕಾವ್ಯದ ಧಾಟಿಯಲ್ಲಿ ಕಾವ್ಯ ಬರೆಯಲು ಆರಂಭಿಸಿದರು. ಜನಸಮುದಾಯದ ಆಶೋತ್ತರಗಳ ಹಿಡಿತದಿಂದ ಬಿಡಿಸಿಕೊಳ್ಳಲಾಗದೆ, ವೈಯಕ್ತಿಕ ನೆಲೆಯಲ್ಲಿ ಮುಳುಗಿಯೂ ಹೋಗದೆ ಸಮುದಾಯದ ಆಶಯಗಳಿಗೆ ಸ್ಪಂದಿಸುತ್ತಾ ಕಾವ್ಯಕ್ರಿಯೆಯಲ್ಲಿ ತೊಡಗಿದ್ದು ಮಹತ್ವದ ಸಂಗತಿಯಾಗಿದೆ. ಸಮಷ್ಟಿಯ ಆಶಯಗಳ ಜೊತೆಯಲ್ಲಿ ಸ್ಪಂದಿಸುವಾಗ ಅಲ್ಲಿಯ ಲಯ ಮತ್ತು ಗೇಯ ಗುಣಗಳನ್ನು ಅಳವಡಿಸಿಕೊಳ್ಳುವುದು ಸಹಜ. ಹಾಗಾಗಿ ಇವರು ರಚಿಸಿರುವ **'ನನ್ನೂರ**

ಹಾಡು' ಕವನ ಸಂಕಲನದಲ್ಲಿನ ಕವನಗಳು ಅಥವಾ ಹಾಡುಗಳು ಸಹಜವಾಗಿಯೇ ಈ ಗುಣಗಳಿಗೆ ಬದ್ಧವಾಗಿವೆ.

ರಂಗಾರೆಡ್ಡಿರವರ ಮೊದಲ ಕವನಸಂಕಲನ **'ನನ್ನೂರ ಹಾಡು'** ಇಪ್ಪತ್ತೈದು ಕವಿತೆಗಳನ್ನು ಒಳಗೊಂಡಿರುವ ಕವನ ಸಂಕಲನವಾಗಿದ್ದು, ಇಡಿಯಾಗಿ ಸಮಷ್ಟಿಯ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುತ್ತಾ, ಅನ್ಯಾಯವನ್ನು ಕೆದಕುತ್ತಾ, ರೈತನ ಶ್ರಮ, ಭವಣೆಯನ್ನು ಎಳೆ-ಎಳೆಯಾಗಿ ತೆರೆದಿಡುತ್ತಲೇ ಮನುಷ್ಯನ ನೋವು ಮತ್ತು ಅದಮ್ಯ ಚೈತನ್ಯವನ್ನು ಹಿಡಿದಿಡಲು ಯತ್ನಿಸುತ್ತದೆ. ದಟ್ಟವಾದ ಗ್ರಾಮೀಣ ಅನುಭವ, ಜಾನಪದೀಯ ಗೇಯತೆ ಮತ್ತು ಹೋರಾಟದ ತುಡಿತಗಳನ್ನೊಳಗೊಂಡ **'ನನ್ನೂರ ಹಾಡು'** ಭಾರತೀಯ ಸಂದರ್ಭದ ಯಾವುದೇ ಊರಿನ ಪಾಡಾಗಿದೆ. ಇಲ್ಲಿ ಮನುಷ್ಯ ತನ್ನನ್ನು ಗುರುತಿಸಿಕೊಳ್ಳುವ ಕ್ರಿಯೆಯಲ್ಲಿ ತೊಡಗುತ್ತಾನೆ. ಸಮೂಹದಲ್ಲಿ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುತ್ತಾನೆ. ಅಪಮಾನದ ಮೂಲಗಳನ್ನು ಹುಡುಕುತ್ತಾನೆ. ಅನ್ಯಾಯದ ಬದುಕನ್ನು ಕೆದಕುವ ಕನಸುಕಾಣುತ್ತಾನೆ.

'ನನ್ನೂರ ಹಾಡು' ರಂಗಾರೆಡ್ಡಿ ಕೋಡಿರಾಂಪುರ ಅವರ ಮೊದಲ ಕವನ ಸಂಕಲನವಾಗಿದೆ. ಇಲ್ಲಿನ ಕವಿತೆಗಳಲ್ಲಿ ಗೇಯತೆಯೊಂದಿಗೆ ಜಾನಪದ ಸತ್ವವಿರುವುದು ಬಹು ಮಹತ್ವದ ಅಂಶವಾಗಿದೆ. ಶೋಷಣೆಯ ವಿವಿಧ ಸ್ತರಗಳ ಬಗ್ಗೆ ಸಮಚಿತ್ತತೆಯಿಂದ ಯೋಚಿಸುವ ಲೇಖಕರು, ದಲಿತ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿರುವ ಬದ್ಧ ವ್ಯಕ್ತಿಯಾದರೂ ಅವರ ಪದ್ಯಗಳಲ್ಲಿ ಆಕ್ರೋಶಕ್ಕಿಂತ ವಸ್ತು ಸ್ಥಿತಿಯನ್ನು ಅದರ ಸಾಮಾಜಿಕ, ರಾಜಕೀಯ ಹಿನ್ನೆಲೆಯಲ್ಲಿ ಗ್ರಹಿಸಿರುವ ಕಲಾತ್ಮಕ ಅಭಿವ್ಯಕ್ತಿಯಿದೆ.

'ನನ್ನೂರ ಹಾಡು' ಕವನಸಂಕಲನದಲ್ಲಿನ ಕವಿತೆಗಳು ಅಲ್ಲಿನ ನೈಜ ಅನುಭವಗಳಿಂದ ಹಾಗೂ ಪ್ರಯೋಗಿಸಿದ ಶೈಲಿಯಿಂದ ಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ. ಹೋರಾಟದಿಂದ ಸಾಹಿತ್ಯಕ್ಕೆ ಬಂದು ಸಾಹಿತ್ಯದಿಂದ ಮತ್ತೆ ಹೋರಾಟಕ್ಕೆ ಆಗೀಗ ಮರಳುವ ರಂಗಾರೆಡ್ಡಿಯವರು ತಾವು ಹಾಗೂ ಜಾತಿಯ ಜನರು ಪಟ್ಟ ಪಾಡನ್ನೇ ಇಲ್ಲಿ ಹಾಡಿದ್ದಾರೆ. ನೋವನ್ನು ಇಲ್ಲಿ ಸಾಮಾಜೀಕರಣಗೊಳಿಸಲು ಯತ್ನಿಸಿದ್ದರ ಫಲವಾಗಿ ಓದುಗರಿಗೆ ಇಲ್ಲಿನ ನೋವು ತಮ್ಮದೇ ಆಗಿದೆ ಎಂಬ ಭಾವನೆ ಮೂಡಿಸುತ್ತವೆ.

"ದುಡಿವ ಜನ

ಒಂದೆ ಮನ

ಆಗ ಕಡಲು ಕುದಿವುದು

ಇಟ್ಟ ಹೆಜ್ಜೆ

ತೊಟ್ಟ ಗೆಜ್ಜೆ

ಧ್ವನಿಗೆ ಭೂಮಿ ಬಿರಿವುದು"[3] ಎಂಬ ಕವಿ ತಮ್ಮ 'ಕೆಂಪು ಭಾನು' ಕವಿತೆಯಲ್ಲಿ ಒಗ್ಗಟ್ಟಿನ ಮಹತ್ವವನ್ನು ಸಾರಿದ್ದಾರೆ.

'ನನ್ನೂರ ಹಾಡು', 'ಸ್ವಾತಂತ್ರ್ಯ', 'ಕೆರೆತುಂಬ ಕೆನ್ನೀರು', 'ಮುದುಕಿ ಹೇಳಿದ್ದು', ಮುಂತಾದ ಕವನಗಳು ನೋವಿನ ಪದರಗಳನ್ನು ಬಿಚ್ಚುತ್ತಲೇ ಅದಕ್ಕೆ ಕಾರಣವಾಗುವ ಸ್ಥಿತಿಯನ್ನು ವಿಶ್ಲೇಷಿಸುವ ಶೋಧನಾತ್ಮಕ ಗುಣವನ್ನು ಒಳಗೊಂಡಿವೆ. 'ಮರ–ಮರದ ಬಯಕೆ', 'ಬುರುಖದೊಳಗಿನ ಬಾಲೆ', 'ಜಂಬೂ ಸವಾರಿ' ಮುಂತಾದ ಕವನಗಳು ಜಾನಪದದ ಲಯ ಗೇಯತೆಗಳನ್ನು ಬಳಸಿಕೊಳ್ಳುತ್ತಲೇ ಪ್ರತಿಮೆಗಳ ಮೂಲಕ ಅನುಭವವನ್ನು ಕಟ್ಟಿಕೊಡುತ್ತವೆ.

'ಮರೆಯಾದ ಸಂಗಾತಿಗೆ' ಎಂಬ ಕವಿತೆಯು ಪ್ರಾಸಬದ್ಧವಾಗಿ ಪ್ರಾರಂಭವಾಗಿ ನೋವು, ವ್ಯಥೆಯನ್ನು ಗರ್ಭೀಕರಿಸಿಕೊಂಡು ಜನ್ಮವೆತ್ತಂತಿದೆ.

"ಬಡತನದ ಬೇಗೆಯಲಿ ಮತ್ಸರದ ಸೀಗೆಯಲಿ

ಸತ್ತು ಬದುಕಿದ ಕಸ್ತೂರಿ ನೀನು

ನಿಂದೆ ಮಾತಲಿ ನೊಂದು ವಿರಹದುರಿಯಲಿ ಬೆಂದು

ಬದುಕಿ ಸತ್ತ ತಂಬೂರಿ ನಾನು"[4].

'ಮರೆಯಾದ ಸಂಗಾತಿಗೆ' ಕವಿತೆಯ ಕೊನೆಯ ಸಾಲುಗಳಿವು. ಇಲ್ಲಿ ಬಾಳಸಂಗಾತಿಯನ್ನು ಕಳೆದುಕೊಂಡು ಪಟ್ಟಪಾಡನ್ನು ನೋವು, ಹಿಂಸೆಯನ್ನು ಕವಿತೆ ಧ್ವನಿಸುತ್ತದೆ.

ನನ್ನೂರ ಹಾಡು ಕವಿತೆಯಲ್ಲಿ ಲೇಖಕರು ನಾಡಿನ ಜೀವನಾಡಿಯಾದ ಅನ್ನದಾತನ ಬದುಕು–ಬವಣೆಯನ್ನು ತಿಳಿಸಿದ್ದಾರೆ.

"ಮನೆ ಮನೆಯ ನರನರದಿ ಎದ್ದ ನೋವಿನ ಉರಿಗೆ

ಮೌನದಲಿ ಕುಳಿತಿರುವ ಮುದುಕಿಯೆಡೆಗೆ

ಜಂತೆ ಜಂತೆಗೆ ಕಟ್ಟಿರುವ ಜೇಡ ಬಲೆ ಕತ್ತಲೆಗೆ

ಕನ್ನವಿಕ್ಕುವ ಹೈದ ಬೆಳಕ ತರುವನು ಎಂದಿಗೆ"[5].

ಎಂಬ ಪ್ರಶ್ನೆಯೊಂದಿಗೆ ಕವಿತೆ ಮುಕ್ತಾಯವಾಗುತ್ತದೆ. ನಾವು ಬೆಳಕು ತರುವ ಕ್ರಿಯೆಯಲ್ಲಿ ಹೆಚ್ಚು ಹೆಚ್ಚು ತೊಡಗಬೇಕಾಗಿದೆ. ಹೀಗೆ ತೊಡಗಿದಂತೆಲ್ಲಾ ಈ ಹಾಡುಗಳಿಗೆ ಮತ್ತು ಬದುಕಿಗೆ ಹೆಚ್ಚಿನ ಕಳೆ ಬರುವುದು ಎಂಬುದನ್ನು ಲೇಖಕರು ಪ್ರಸ್ತುತ ಕವಿತೆಯಲ್ಲಿ ತಿಳಿಸಿದ್ದಾರೆ.

"ನನ್ನೂರ ಹಾಡು" ಕವನ ಸಂಕಲನದಲ್ಲಿರುವ ಒಂದು ಪದ್ಯ ತಂಗಟೆ ಗಿಡ. ರೈತನಿಗೆ ಚಿರಪರಿಚಿವಾದ ತಂಗಟೆಯ ಗಿಡದ ಬಗ್ಗೆ ಇದು ಮೊದಲ ಕನ್ನಡ ಕವಿತೆ ಎಂದು ಕಾಣುತ್ತದೆ. ಈ ಕವಿತೆಯ ಹಾಡಿನ ಗುಣ, ಲಯದ ಏರಿಳಿತ, ಅನಾಯಾಸವಾಗಿ ಬಂದಂತೆ ಕಾಣುವ ಪ್ರಾಸಾನುಪ್ರಾಸ, ಆರುಸಾಲಿನ ಬಂಧ, ಪರಿಸರದ ಆತ್ಮೀಯ ಚಿತ್ರಣ, ತನ್ನ ತನವನ್ನು ಇಟ್ಟುಕೊಂಡು ಇನ್ನೊಂದರಲ್ಲಿ ಬೆರೆತು ಹೋಗಬೇಕಾದ ಬದುಕಿನ ಅನಿವಾರ್ಯತೆ–ಈ ಎಲ್ಲವನ್ನೂ ಮೈಗೂಡಿಸಿಕೊಂಡ ಈ ಕವಿತೆ ಓದುವವರಿಗೆ, ಅರಿತುಕೊಳ್ಳುವವರಿಗೆ ಸಂತೋಷವನ್ನು ಕೊಡುತ್ತದೆ. ಇಂಥದ್ದೇ ಗುಣವುಳ್ಳ 'ನನ್ನೂರ ಹಾಡು', 'ಬರಗಾಲದ ಹಾಡು', 'ಸ್ವಾತಂತ್ರ್ಯ', 'ಕಾದುಕುಂತವರು'–ಮೊದಲಾದ ಕವಿತೆಗಳು ರಂಗಾರೆಡ್ಡಿಕೋಡಿರಾಂಪುರ ಅವರದ್ದು ವಿಶಿಷ್ಟವಾದ ಧ್ವನಿ ಎನ್ನುವುದನ್ನು ಸೂಚಿಸುತ್ತದೆ ಎಂಬುದಾಗಿ ಸುಮತೀಂದ್ರ ನಾಡಿಗರು (ಪ್ರಜಾವಾಣಿ ೧೯೯೧, ಜೂನ್) ಅಭಿಪ್ರಾಯ ಪಟ್ಟಿದ್ದಾರೆ.

ಹದಗೆಟ್ಟ ವಾತಾವರಣದಲ್ಲಿ ಇಂತಹ ಕನಸುಗಳನ್ನು ಸೃಷ್ಟಿಸುತ್ತಾ ಭ್ರಮೆಗಳನ್ನು ಅಳಿಸಿಹಾಕುವ ಕ್ರಿಯೆಯಲ್ಲಿ ಕವಿ ತೊಡಗುವಾಗ ಎಲ್ಲಿಯೂ ವಾಚಾಳಿ ಆಗುವುದಿಲ್ಲ. ಕಾವ್ಯದ ವಲಯದಲ್ಲೇ ಎಲ್ಲವನ್ನು ನಿಭಾಯಿಸುವಲ್ಲಿ ತಲ್ಲೀನವಾಗಿರುವುದರ ಅರಿವಾಗುತ್ತದೆ ಎಂಬುದಾಗಿ **'ನನ್ನೂರ ಹಾಡು'** ಕವನಸಂಕಲವನ್ನು ಕುರಿತಂತೆ ರಂಜಾನ್ ದರ್ಗಾರವರು ಅಭಿಪ್ರಾಯಪಟ್ಟಿದ್ದಾರೆ.

ಇವರು ರೈತನಿಗೆ ಚಿರಪರಿಚಿತವಾದ ತಂಗಟೆಯಗಿಡವನ್ನು ಕುರಿತು ಬರೆದ 'ತಂಗಟೆಗಿಡ' ಕವಿತೆಯ ಕೆಲಸಾಲುಗಳನ್ನು ನೋಡುವುದಾದರೆ–

"ಬಂಗಾರ ಬಣ್ಣ
ಎಲೆ ಅಗಲ ಸಣ್ಣ
ಕಳಕಳಿಸುವೆ ನೀ ತಂಗಟೆ
ಕಳಕೊಂಡು ಕಾವು
ಮುಲುಗುಡುವ ಹೂವು
ಪಿಸುಗುಡುವ ಮಿಸುನಿಗೊಂಡೆ....
ಗದ್ದೆಯಲಿ ತುಳಿದ
ತಂಗಟೆಯ ಹೂವೆ
ರೇಶಿಮೆಯ ನವಿರ ಚೆಲುವೆ
ಕಳಕೊಂಡು ಜೀವ
ಗೊಬ್ಬರದಿ ಬೆರೆತು
ಪೈರಿನಲಿ ಚಿಗುರಿ ನಲಿವೆ"[೫].

ತಂಗಟೆಯ ಗಿಡವನ್ನು ಕುರಿತು ರಚನೆಯಾದ ಮೊದಲ ಕನ್ನಡ ಕವಿತೆ ಇದಾಗಿದೆ. ಕೃಷಿಕರ ಕೃಷಿಕಾರ್ಯದಲ್ಲಿ ನೆರವಾಗುವ ಈ ತಂಗಟೆ ಗಿಡವು ತನ್ನ ಬದುಕನ್ನೇ ಸವೆಸಿ ಪೈರಿನ ನಗುವಿಗೆ ಜೀವವಾಗುವ ಪರಿಯನ್ನು ಕವಿತೆ ಅದ್ಭುತವಾಗಿ ಧ್ವನಿಸುತ್ತದೆ. ಒಟ್ಟಾರೆ ಎಲ್ಲ ಸಹೃದಯ ಓದುಗರ ಮನಸೂರೆಗೊಳಿಸಿದ ಕವನ ಸಂಕಲನ 'ನನ್ನೂರ ಹಾಡು' ಎಂದೇ ಹೇಳಬಹುದು.

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯಾಗಿರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಇಂಥಹ ಒಂದು ಪ್ರಯತ್ನವನ್ನು ರಂಗಾರೆಡ್ಡಿರವರು ರಚಿಸಿರುವ **'ಶ್ರೀಶ್ರೀ'** ಎಂಬ ಕೃತಿಯಲ್ಲಿ ಗಮನಿಸಬಹುದು. ಪ್ರಸ್ತುತ ಕೃತಿಯಲ್ಲಿ ತೆಲುಗು ಕವಿಯಾದ **'ಶ್ರೀರಂಗಂ ಶ್ರೀನಿವಾಸರಾವ್'** ರವರ ಬದುಕು ಮತ್ತು ಬರವಣಿಗೆಯನ್ನು ಕುರಿತಂತೆ ವಿಶ್ಲೇಷಿಸಲಾಗಿದೆ.

ಆಧುನಿಕ ತೆಲುಗು ಸಾಹಿತ್ಯದ ದಿಗ್ಗಜರೆನಿಸಿದವರು ಶ್ರೀಶ್ರೀ ರವರು. ಇವರು ಮೊದಲಿಗೆ ಭಾವಕವಿಯಾಗಿ, ಆನಂತರ ಅಭ್ಯುದಯ ಕವಿಯಾಗಿ, ಅನಂತರ ವಿಪ್ಲವ ಕವಿಯಾಗಿ ಕವಿತೆಗೆ ಪ್ರಜೆಗಳ ಮಧ್ಯೆ ಗೌರವಸ್ಥಾನ ತಂದುಕೊಟ್ಟು, ಕವಿತೆಗೆ ಸಂಬಂಧಿಸಿದ ಎಲ್ಲ ಒಳ್ಳೆಯದನ್ನು ಸ್ವೀಕರಿಸುತ್ತಾ, ಚಿಕ್ಕವರಿಂದಲೂ ಕಲಿಯುತ್ತಾ ಅವರನ್ನು ಪ್ರೋತ್ಸಾಹಿಸುತ್ತಾ ತೆಲುಗಿನ ಕವಿತೆಗೆ ಜಗತ್‌ಸಾಹಿತ್ಯದಲ್ಲಿ ಸ್ಥಾನ ಕಲ್ಪಿಸುತ್ತಾ ಬೆಳೆದ ಶ್ರೀಶ್ರೀ ಅರ್ಧಶತಮಾನ ಕಾಲ ತೆಲುಗು ಸಾಹಿತ್ಯವನ್ನು ಮುನ್ನಡೆಸಿದರು.

ಶ್ರೀರಂಗಂಶ್ರೀನಿವಾಸರಾವುರವರ ಕವಿತೆಗಳು ಒಂದು ಅನಿರ್ವಚನೀಯ ಮಹೋನ್ನತವಾದ ಆಹ್ಲಾದವನ್ನುಂಟುಮಾಡುತ್ತವೆ. ದಡವನ್ನು ಸವರಿಕೊಂಡು ಕುದುರೆ ನಡಿಕೆಯಲ್ಲಿ ಚಲಿಸುವ ಗಂಗಾನದಿಯ ಚಲನೆಯಂತೆ ಇವರ ಕವಿತೆಗಳು ಜನರ ಮನಸ್ಸನ್ನು ತಟ್ಟುತ್ತವೆ. ಈ ಹಿನ್ನೆಲೆಯಲ್ಲಿ

"ಮಸಣದಂಥ ನಿಘಂಟುದಾಟಿ

ವ್ಯಾಕರಣದ ಸಂಕೋಲೆ ಕಳಚಿ

ಛಂದಸ್ಸಿನ ಸರ್ಪಾಲಿಂಗನ ತೊರೆದು

ವೇಗವಾಗಿ, ಹೊಸ ಕವಿತಾ ಪ್ರವಾಹವಾಗಿ"[6] ಅವರ ರಚನೆಗಳು ಬಂದವು ಎಂಬುದಾಗಿ ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಶ್ರೀ ರವರು ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ 'ವೀರಸಿಂಹ ವಿಜಯ ಸಿಂಹಲು', 'ಗೋಕುಲಾಯಿ', 'ಪರಿಣಯ ರಹಸ್ಯಮು' ಎಂಬ ಕಾದಂಬರಿಗಳನ್ನು ರಚಿಸಿದರು. ಇವರು ಸಾವಿತ್ರಿ ಸತ್ಯವಂತುಲು ಎಂಬ ನಾಟಕವನ್ನು ತಮ್ಮ ಹದಿನೈದನೇ ವಯಸ್ಸಿನಲ್ಲಿ ರಚಿಸಿದ್ದಾರೆ. ಜೊತೆಗೆ

ಅನುವಾದಕರಾಗಿ, ಕವಿಯಾಗಿ ಸಾಕಷ್ಟು ಹೆಸರುಮಾಡಿದ್ದಾರೆ. ಇವರು ರಚಿಸಿದ 'ಪ್ರಭವ' ೧೯೨೮ರಲ್ಲಿ ಪ್ರಕಟವಾಯಿತು. ಇದರಲ್ಲಿ ಮೂರು ಭಾಗದಲ್ಲಿ ಹದಿನಾರು ಗೀತೆಗಳನ್ನು ಅಚ್ಚುಮಾಡಿ ಪ್ರಕೃತಿ ಗೀತೆಗಳು ಎಂಬ ವಿಭಾಗದಲ್ಲಿ ಸ್ವೇಚ್ಛ, ಮೇಘ ಕಲಶಮು, ಪ್ರಕೃತಿ ಗೀತ, ಮಯೂರ ನರ್ತನಮು, ರಜನಿಗಾನಮು, ಮಾತೃಗೀತಿ, ಸಮುದ್ರ ಘೋಷಮು, ಮೃತ್ಯು ಪ್ರಭೋದಮು ಎಂಬ ಕವನಗಳೂ; ಪ್ರಣಯ ಗೀತೆಗಳು ಎಂಬ ವಿಭಾಗದಲ್ಲಿ ಪ್ರಭಾತ ಗಾನಮು, ಅಭಿಸಾರಿಕ, ವಿಯೋಗ ಶಾಂತಿ, ನಿರೀಕ್ಷಣಮು ಎಂಬ ಕವನಗಳೂ; ಪ್ರಕೀರ್ಣ ಗೀತೆಗಳು ವಿಭಾಗದಲ್ಲಿ ಪ್ರಳಯ ನರ್ತನಮು, ಗೀತ ಪದ್ಯಾಲು, ಅಂತಿಮ ಯಾತ್ರ, ಮತಸ್ವೀಕೃತಿ ಎಂಬ ಕವನಗಳಿರುವುದನ್ನು ಗಮನಿಸಬಹುದು. ಇವುಗಳ ಹೆಸರಿನಿಂದಲೇ ರಮ್ಯ ಸಂಪ್ರದಾಯದ ಭಾವಕೇಂದ್ರಿತ ಪದ್ಯಗಳೆಂಬುದು ತಿಳಿಯುತ್ತದೆಂಬುದು ಲೇಖಕರ ಅಭಿಪ್ರಾಯವಾಗಿದೆ.

ತೆಲುಗು ಸಾಹಿತ್ಯ ಕ್ಷೇತ್ರದಲ್ಲೇ ಪ್ರಚಂಡವಾದ ಅಲೆಯನ್ನೆಬ್ಬಿಸಿ, ಯುವಕರ ಬಿಸಿ ನೆತ್ತರನ್ನು ಇನ್ನಷ್ಟು ಕಾವೇರುವಂತೆ ಮಾಡಿ, ಜಡತ್ವದಲ್ಲೂ ಒಂದು ಅಲೆಯನ್ನೆಬ್ಬಿಸಿದ ಶ್ರೀಶ್ರೀ ಯವರ 'ಮಹಾಪ್ರಸ್ಥಾನ' ಕೃತಿಯು ೧೯೫೦ ರಲ್ಲಿ ಈ ವರೆಗೆ ೨೫ ಮುದ್ರಣಗಳನ್ನು ಕಂಡಿದೆ. ಒಟ್ಟು ಒಂದು ಲಕ್ಷ ಇಪ್ಪತ್ತೈದು ಸಾವಿರ ಪ್ರತಿಗಳು ಮಾರಾಟವಾಗಿವೆ. ಅಪಾರ ಪ್ರಮಾಣದಲ್ಲಿ ಜನಮನ್ನಣೆಯನ್ನು ಗಳಿಸಿದ ಕೃತಿ ಇದಾಗಿದೆ. ಪ್ರಸ್ತುತ ಕೃತಿಯ ಕವಿತೆಯೊಂದರ ಕೆಲಸಾಲುಗಳನ್ನು ಗಮನಿಸುವುದಾದರೆ

"ನಡೆಸುವುದು ನಡೆಯಗೊಡುವುದು

ಬದಲಿಸುವುದು ಬದಲಾಗುವುದು

ಹಾಡುವುದು ಹಾಡಿಸುವುದು

ಗಾಡ ನಿದ್ದೆಯಿಂದೆಬ್ಬಿಸುವುದು

ಮುಂದು ಮುಂದಕೆ ಸಾಗಿಸುವುದು

ಪೂರ್ಣ ಬದುಕನು ತುಂಬಿಕೊಡುವುದು

ಬೇಕಾಗಿದೆಯೋ ನವಕವಿತೆಗೆ"[2].

ಶ್ರೀಶ್ರೀ ರವರು ಶ್ರಮಿಕಜೀವನ ಸೌಂದರ್ಯಕ್ಕೆ ಸಮಾನವಾದುದು ಯಾವುದೂ ಇಲ್ಲವೇ ಇಲ್ಲವೆಂದು, ಕಷ್ಟಜೀವಿಗಳ, ಕರ್ಮವೀರರುಗಳ ನೋವಿಗೆ ನಿತ್ಯಮಂಗಳನ್ನು ನಿರ್ದೇಶಿಸುತ್ತಾ, ಸ್ವಸ್ತಿವಾಕ್ಯಗಳನ್ನು ಮಾತನಾಡುತ್ತಾ, ಸ್ವರ್ಣವಾದ್ಯಗಳನ್ನು ಅನುರಣಿಸುತ್ತಾ, ವ್ಯರ್ಥಜೀವಿಗಳ ಸಮರ್ಥ ದೃಶ್ಯಗಳನ್ನು ಬುನಾದಿಯಾಗಿ ಮಾಡಿಕೊಂಡು ಇನ್ನು ಮುಂದೆ ಜನಿಸುವ ಭಾವಿ ವೇದಗಳ ಜೀವ ನಾದಗಳನ್ನು ಜಗತ್ತಿಗೆಲ್ಲ ಕೇಳಿಸುತ್ತೇನೆ ಎಂದು ಪ್ರತಿಜ್ಞೆ ಕೈಗೊಂಡು ನುಡಿದಂತೆ ನಡೆದರು. ಇಂಥಹ

ಮಹಾತ್ಮರ ಬದುಕು-ಬರವಣಿಗೆಯನ್ನು ಕುರಿತಂತೆ ರಂಗಾರೆಡ್ಡಿರವರು ತಮ್ಮ ಶ್ರೀಶ್ರೀ ಕೃತಿಯಲ್ಲಿ ಎಳೆ-ಎಳೆಯಾಗಿ ಚಿತ್ರಿಸಿದ್ದಾರೆ.

ರಂಗಭೂಮಿ ಮತ್ತು ಕನ್ನಡ ಚಲನಚಿತ್ರ ಕ್ಷೇತ್ರದ ದಿಗ್ಗಜರಲ್ಲೊಬ್ಬರಾದವರು 'ಗುಬ್ಬಿವೀರಣ್ಣ'ನವರು. ಇವರ ಹೋರಾಟದ ಕಥೆಯನ್ನು ಜನಪದ ಕ್ಷೇತ್ರದ ಮಹತ್ವಪೂರ್ಣ ಲೇಖಕರಲ್ಲಿ ಒರ್ವರಾದ ಡಾ॥ ರಂಗಾರೆಡ್ಡಿ ಕೋಡಿರಾಂಪುರರವರು ರಚಿಸಿರುವ **'ಗುಬ್ಬಿ ವೀರಣ್ಣ'** ಎಂಬ ಕೃತಿಯಲ್ಲಿ ಎಳೆ-ಎಳೆಯಾಗಿ ತೆರೆದಿಡಲಾಗಿದೆ. ಇದು ಕೇವಲ ವ್ಯಕ್ತಿಚಿತ್ರದ ಕೃತಿಯಲ್ಲದೆ. ವ್ಯಕ್ತಿ, ವ್ಯಕ್ತಿತ್ವ ಸಾಧನೆಯ ಸತ್ವ-ಇವುಗಳೆಲ್ಲದರ ವಿವರಣೆ ಹಾಗೂ ವಿಶ್ಲೇಷಣೆಯನ್ನು ಒಟ್ಟಿಗೆ ಒಳಗೊಂಡ ಆಕೃತಿಗಳಿವಾಗಿವೆ. ವ್ಯಕ್ತಿ ಕೇಂದ್ರಿತವಾಗಿದ್ದು ಅದನ್ನು ಮೀರಿ ಆಯಾ ಕಾಲದ ಚರಿತ್ರೆಯ ಕ್ಷಣಗಳನ್ನು ಮಡಿಲು ತುಂಬಿಕೊಂಡ ತವರಿನ ತೊಟ್ಟಿಲಿನಂತಿದೆ.

ಕನ್ನಡ ಚಲನಚಿತ್ರರಂಗದ ಅಮೃತ ಮಹೋತ್ಸವದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಹೊರತಂದ ಎಪ್ಪತ್ತೈದು ಪುಸ್ತಕಗಳಲ್ಲಿ ಒಂದಾಗಿರುವ 'ಗುಬ್ಬಿ ವೀರಣ್ಣ' ಕೃತಿಯಲ್ಲಿ ಲೇಖಕರು ಸರಳ, ಸಹಜ ಭಾಷೆಯಲ್ಲಿ ವಿಕಾರ-ಉದ್ರೇಕಗಳಿಗೆ ಒಳಗಾಗದಂತೆ ಗುಬ್ಬಿ ವೀರಣ್ಣನವರ ಹೋರಾಟದ ಕಥೆಯನ್ನು ಸಹೃದಯರ ಮನಕಲುಕುವಂತೆ ಚಿತ್ರಿಸಿದ್ದಾರೆ. ಗುಬ್ಬಿ ವೀರಣ್ಣನವರ ತಂದೆ ಹಂಪಣ್ಣನವರು ಎರಡನೇ ಮದುವೆಯಾಗಿ ಮೊದಲನೇ ಹೆಂಡತಿ ಮಕ್ಕಳನ್ನು ಮನೆಯಿಂದ ಹೊರಹಾಕಿದಾಗ ಆ ತಾಯಿ-ಮಕ್ಕಳು ಪಟ್ಟ ಪಾಡನ್ನು, ತಾಯಿ-ಮಕ್ಕಳೆಲ್ಲರೂ ಅನ್ಯರ ಮನೆಯಲ್ಲಿ ಜೀತದ ಬದುಕು ಸಾಗಿಸಬೇಕಾದ ಪರಿಸ್ಥಿತಿ, ಬಾಲಕ ವೀರಣ್ಣನವರು ಎಮ್ಮೆ ಕಾಯುವ ಕೆಲಸವನ್ನೇ ಹೆಮ್ಮೆಯಿಂದ ಮಾಡಿದ ಬಗೆ ಮತ್ತು ಎಮ್ಮೆ ಸವಾರಿ ಮಾಡುವಾಗ ಎಮ್ಮೆ ಬೇಲಿ ಸವರಿಕೊಂಡು ಬೇಲಿಯ ಮುಳ್ಳುಗಳು ಕಾಲಿಗೆತಾಕಿ ರಕ್ತ ಸುರಿದರೂ ಲೆಕ್ಕಿಸದೆ ಮುನ್ನಡೆದ ಅವರ ಮನೋಭಾವವನ್ನು ಕುರಿತು ಲೇಖಕರು ಧ್ವನಿಪೂರ್ಣವಾಗಿ ವಿವರಿಸುತ್ತಾರೆ. "ಚಿಕ್ಕಂದಿನ ಈ ಸಹಿಸುವ ಮನೋಭಾವವು ಮುಂದೆ ಸಂಕಟದಲ್ಲೂ ಸಂತೋಷ ಪಡುವ ಪ್ರವೃತ್ತಿಯನ್ನು ಗಟ್ಟಿಗೊಳಿಸಿರಬೇಕು"[೮] ಎಂಬ ಮಾತುಗಳು ಸಹಜಸುಂದರ ಸ್ವಾಭಾವೋಕ್ತಿಗಳಿಂದ ಮೂಡಿಬಂದಿವೆ.

ಕನ್ನಡದ ಆಧುನಿಕ ರಂಗಭೂಮಿಯ ಕಥೆ ಗುಬ್ಬಿ ಕಂಪನಿಯ ಹಾಗೂ ವೀರಣ್ಣನವರ ಕಥೆಯೇ ಆಗಿದೆ ಎಂಬುದನ್ನು ತಿಳಿಸುತ್ತಾ ಮುಂದೆ ಐದು-ಆರು ವರ್ಷಗಳಲ್ಲಿ ಗುಬ್ಬಿ ಕಂಪನಿಗೆ ಸೇರಿ ಚಂದಣ್ಣನವರ ಮುಂದೆ ಮೂರು ಹಿಡಿ ಅನ್ನಕ್ಕಾಗಿ ವಾಮನನಂತೆ ಬಂದ ಬಾಲಕ ವೀರಣ್ಣ ಮುಂದೆ ತ್ರಿವಿಕ್ರಮನಂತೆ ಬೆಳೆದು ನಿಂತ ಪರಿಯನ್ನು ಲೇಖಕರು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದೇ ಹೇಳಬಹುದು. ಸಾಮಾನ್ಯರಾಗಿ ಜನಿಸಿ ಅಸಾಮಾನ್ಯ ಸಾಧನೆಗೈದ ವೀರಣ್ಣನವರ ವ್ಯಕ್ತಿತ್ವವನ್ನು ಪರಿಚಯಿಸುವುದು ಸಾಮಾನ್ಯದ ಮಾತಲ್ಲ, ಇಂಥ ಅಸಾಮಾನ್ಯ ಕಾರ್ಯವನ್ನು ಸಾಧಿಸಿದವರು, ಗುಬ್ಬಿವೀರಣ್ಣರಂತಹ ಮಹಾನ್ ಚೇತನವನ್ನು ಅರಿಯಲು ಕನ್ನಡ ಸಾರಸ್ವತಲೋಕಕ್ಕೆ ನೆರವಾದ ರಂಗಾರೆಡ್ಡಿರವರ ಪ್ರತಿಭೆ ಅಸಾಮಾನ್ಯವಾದದ್ದೇ ಸರಿ.

ಪ್ರಾರಂಭದಲ್ಲಿ ವೀರಣ್ಣನವರು 'ಕಳ್ಳನ ಪಾತ್ರ ಮಾಡಬೇಕೆಂದು ಬಹುದಿನಗಳಿಂದ ಆಸೆ ಇದೆ. ನನಗೂ ಒಂದು ಅವಕಾಶ ಕೊಡಿ, ಒಂದು ಸಾರಿ ಕಳ್ಳನ ಪಾತ್ರ ಮಾಡಿಸಿ' ಎಂದು ಚಂದಣ್ಣನವರಲ್ಲಿ ವಿನಯದಿಂದ ಬೇಡಿದಾಗ ಅವರು ಸದಾರಮೆ ನಾಟಕದಲ್ಲಿ ಕಳ್ಳನ ಪಾತ್ರವನ್ನು ಕೊಟ್ಟರು. ತಮ್ಮ ಅದ್ಭುತ ನಟನೆಯಿಂದ ಪ್ರೇಕ್ಷಕರ ಮತ್ತು ಚಂದಣ್ಣನ ಮನಸ್ಸನ್ನು ಗೆದ್ದು 'ಇಂದಿನಿಂದ ನೀನೆ ಕಳ್ಳನಾಗು' ಎಂದು ಹರಿಸಿಕೊಂಡವರು ವೀರಣ್ಣನವರು.

ಅಭಿನಯ ಕ್ಷೇತ್ರದ ಎರಡು ಕಣ್ಣುಗಳಂತಿದ್ದ ವೀರಣ್ಣ, ರಾಜಣ್ಣರ ಸಾಹಸಮಯ ಜೀವನವನ್ನು ತಿಳಿಸುತ್ತಾ ಬಾಲ್ಯಾವಸ್ಥೆಯಲ್ಲಿ ಕಷ್ಟ ಕಾರ್ಪಣ್ಯ ಅನುಭವಿಸಿದವರೆಲ್ಲ ತಮ್ಮ ಮುಂದಿನ ಜೀವನದಲ್ಲಿ ಎತ್ತರಕ್ಕೇರಿ ಹೆಜ್ಜೆ ಗುರುತುಗಳನ್ನು ಮೂಡಿಸಿಯೇ ಹೋಗುತ್ತಾರೆ ಎಂಬುದಕ್ಕೆ ಈ ಇಬ್ಬರೂ ಬಾಳಿ ಬದುಕಿದ ರೀತಿಯಲ್ಲಿಯೇ ಸಾಕ್ಷಿಯನ್ನು ಒದಗಿಸುತ್ತದೆ.

ಹೀಗೆ 'ಕಲೆಯನ್ನೇ ಕಾಯಕ'ವನ್ನಾಗಿಸಿಕೊಂಡ ಮಹಾಚೇತನ ಗುಬ್ಬಿ ವೀರಣ್ಣನವರ ವ್ಯಕ್ತಿತ್ವವನ್ನು ಲೇಖಕರು ಅನಾವರಣಗೊಳಿಸಿದ್ದಾರೆ.

ಸೊಲ್ಲು ಸೊಲ್ಲೆಲ್ಲ ಅಪರಂಜಿ ರಂಗಾರೆಡ್ಡಿರವರು ರಚಿಸಿರುವ ಮೊದಲ ವಿಮರ್ಶಾ ಸಂಕಲನವಾಗಿದೆ. ಲೇಖಕ ಕೃತಿಯೊಂದನ್ನು ಎಷ್ಟೇ ವೈಯಕ್ತಿಕ ತುರ್ತಿನಲ್ಲಿ ಸೃಷ್ಟಿಮಾಡಿದ್ದರೂ ಕೊನೆಗೆ ಅದನ್ನು ಸಮಾಜ ಸ್ವೀಕರಿಸಬೇಕು. ಅದರಿಂದ ಮನ್ನಣೆ ಸಿಗಬೇಕು ಎಂದೇ ಭಾವಿಸುತ್ತಾನೆ. ಅಂದರೆ ಅದರರ್ಥ ತನ್ನ ವೈಯಕ್ತಿಕ ನೆಲೆಯ ಸಂಸರ್ಗವನ್ನು ಕಳೆದುಕೊಂಡ ಆ ಕೃತಿ ಸಾಮಾಜಿಕ ನೆಲೆಯ ಸಂಸರ್ಗವನ್ನು ಪಡೆಯಬೇಕೆಂದು ಆ ಕವಿ ಅಥವಾ ಲೇಖಕ ಬಯಸುತ್ತಾನೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಮರ್ಶಾ ಕೃತಿಯಲ್ಲಿ 'ಮಧ್ಯಕಾಲಿನ ಸಾಹಿತ್ಯದಲ್ಲಿ ಯುದ್ಧ ಮತ್ತು ಸಾಮಾಜಿಕ ಧಾರ್ಮಿಕ ಆಶಯವಾಗಿ ಶಾಂತಿ', ಮಧ್ಯಕಾಲಿನ ಸಾಹಿತ್ಯದಲ್ಲಿ ಜಾನಪದೀಯ ಲಯ, ಆಶಯ, ಮಧ್ಯಕಾಲಿನ ಸಾಹಿತ್ಯದಲ್ಲಿ ಅಸ್ಪೃಶ್ಯತೆ; ಒಂದು ಸಾಮಾಜಿಕ ಸಂವಾದ, ಸಾಹಿತ್ಯ ಮತ್ತು ಸಂವಹನದ ಸಮಸ್ಯೆಗಳು, ದೊಡ್ಡ ಮನೆ; ಒಟ್ಟು ನೋಟ, ದೇವನೂರರ ಒಡಲಾಳ; ಮತ್ತೊಂದು ನೋಟ, ದಲಿತ ಸಾಹಿತ್ಯ; ದೃಷ್ಟಿದೋರಣೆಗಳು, ಬಂಡಾಯ ಕಾವ್ಯ ಮತ್ತು ಸಮಕಾಲಿನ ಸವಾಲುಗಳು, ನವೋದಯ ಸಾಹಿತ್ಯದಲ್ಲಿ ನಿಸರ್ಗ ಮತ್ತು ಭಾವಸಂಬಂಧದ ಸ್ವರೂಪ, ಕೆ.ಬಿ.ಸಿದ್ದಯ್ಯನವರ ಕಾವ್ಯ; ಪುರಾಣದೊಳಗಿನ ವರ್ತಮಾನ, ಕುವೆಂಪು ನಾಟಕಗಳಲ್ಲಿ ವೈಚಾರಿಕತೆ, ಕಾಯಕಯೋಗಿ; ಒಂದು ಅವಲೋಕನ, 'ದಿ.ಡಿಕ್ಟೇಟರ್' ಚಿತ್ರದ ಮುಕ್ತಾಯ ಭಾಷಣ; ಚಾಪ್ಲಿನ್, ವಚನ ಸಾಹಿತ್ಯ ಮತ್ತು ಸಮಾಜ ಬದಲಾವಣೆ, ಹೀಗೆ ಸಾಮಾಜಿಕ, ಸಾಂಸ್ಕೃತಿಗಳ, ಸಂಗತಿಗಳ ಅಂತರ್‌ಸಂಬಂಧಗಳ ಶೋಧನೆಯಲ್ಲಿ ಪ್ರಸ್ತುತ ವಿಮರ್ಶಾ ಕೃತಿಯಲ್ಲಿನ ಲೇಖನಗಳು ಮೂಡಿಬಂದಿವೆ.

ಇಲ್ಲಿನ ಬಹುಪಾಲು ಲೇಖನಗಳಲ್ಲಿ ಕೇವಲ ಒಂದು ಕೃತಿಯನ್ನು ಕುರಿತ ವಿಮರ್ಶೆಯಿಲ್ಲ. ಬದಲಿಗೆ ಆ ಕಾಲಘಟ್ಟದ ಒಂದು ಕೃತಿಸಮುದಾಯವನ್ನು ಪರಿಗಣಿಸಿ ಆಯ್ಕೆಮಾಡಿಕೊಂಡಿರುವ

ಶೀರ್ಷಿಕೆಯ ವಿಷಯ ಪ್ರಧಾನವಾಗಿ ಚರ್ಚಿತವಾಗಿರುವ ಬಗೆಯನ್ನು ಮಂಡಿಸಲಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಮಧ್ಯಕಾಲೀನ ಸಾಹಿತ್ಯದಿಂದ ಆರಂಭಿಸಿ ನವೋದಯ, ನವ್ಯ, ದಲಿತ, ಬಂಡಾಯ ಈ ಎಲ್ಲಾ ಕಾಲಘಟ್ಟಗಳ ಬಗೆಗೂ ಇಲ್ಲಿನ ಲೇಖನಗಳ ಹರಹಿದೆ.

'ದೊಡ್ಡ ಮನೆ' ಒಟ್ಟು ನೋಟ ಲೇಖನದಲ್ಲಿ ಮಾತ್ರ ಸಾಮುದಾಯಿಕ ಹಿತಚಿಂತನೆಗಿಂತ ವೈಯಕ್ತಿಕ ಹಿತಾಸಕ್ತಿಗಳು ಕೂಡ ಮುಖ್ಯ ಎಂಬುದರ ಕಡೆ ಒತ್ತುಬಿದ್ದಿದೆ. ಜೊತಗೆ ಪ್ರತಿಷ್ಠಿತ ವಿಮರ್ಶಕರೆನಿಸಿಕೊಂಡವರು ಚರ್ಚೆ ಮಾಡದಿರುವ ಲೇಖಕರನ್ನು ಚರ್ಚೆಗೆ ಎತ್ತಿಕೊಂಡು ಅವರ ಸಾಧನೆ ಸಿದ್ಧಿಗಳನ್ನು ದಾಖಲಿಸುವ ತುರ್ತುಕೂಡ ಇಂದು ನಮಗಿದೆ ಎಂಬುದನ್ನು ತೋರಿಸಬೇಕಾಗಿದೆ ಎಂಬ ಕಾರಣದಿಂದ 'ಕಾಯಕಯೋಗಿ; ಒಂದು ಅವಲೋಕನ' ಎಂಬ ಲೇಖನವನ್ನು ರಚಿಸಲಾಗಿದೆ. ಒಟ್ಟಾರೆ ಇಲ್ಲಿನ ಎಲ್ಲಾ ಲೇಖನಗಳಲ್ಲಿಯೂ ಸಾಹಿತ್ಯವೆಂಬುದು ಬರಿ ಸಾಹಿತ್ಯವಲ್ಲ, ಅದು ಕವಿಯೊಬ್ಬ ಕಾಲ ಮತ್ತು ಕಲೆಯ ಜೊತೆ ನಡೆಸುವ ಗುದ್ದಾಟ ಎಂಬ ತಾತ್ವಿಕ ಹಿನ್ನೆಲೆಯಿದೆ. ಕವಿಯ ವೈಯಕ್ತಿಕ ವೈರುಧ್ಯಗಳು ಸಾಮಾಜಿಕ ವೈರುಧ್ಯಗಳ ಜೊತೆ ಘರ್ಷಣೆಗಿಳಿದಾಗ ಮೂಡಿಬಂದ ಫಲಿತಗಳು ಎಂಬುದರ ಕಡೆ ಮುಖ ಮಾಡಲಾಗಿದೆ. ಆಯಾ ಕಾಲದ ರಾಜಕೀಯ, ಆರ್ಥಿಕ ಏರು–ಪೇರುಗಳು ಸಾಹಿತ್ಯವನ್ನು ಪ್ರಭಾವಿಸುವುದನ್ನು ಗುರುತಿಸಲಾಗಿದೆ.

"ಚುಂಚನಗಿರಿಯಲ್ಲಿ ಸೂಜಿಗಲ್ಲಿನಮ್ಯಾಲೆ

ನಿಂತು ಕಿನ್ನುಡಿಯ ನುಡಿಸೋನೆ! ಬೈರೂವ

ನಿನ್ನ ಸೊಲ್ಲುಸೊಲ್ಲೆಲ್ಲ ಅಪರಂಜಿ" ಎಂಬ ಜನಪದ ತ್ರಿಪದಿಯ ಕೊನೆಯ ಸಾಲನ್ನೇ ಶೀರ್ಷಿಕೆಯನ್ನಾಗಿ ಹೊಂದಿರುವ ಪ್ರಸ್ತುತ ಕೃತಿಯಲ್ಲಿನ ಪ್ರತಿ ವಿಮರ್ಶಾ ಲೇಖನಗಳು ಅಪ್ಪಟ ಅಪರಂಜಿಯೇ ಆಗಿವೆ.

ರಂಗಾರೆಡ್ಡಿರವರ **'ಲಿಖಿತ ಜಾನಪದ'** ಕೃತಿಯು ಆಧುನಿಕವೆನ್ನಬಹುದಾದ ವಿದ್ಯಾರ್ಥಿ ಸಮೂಹದ ಎರಡು ವರ್ತನೆಗಳನ್ನು ಅಭ್ಯಾಸ ಮಾಡಿರುವ ಕೃತಿಯಾಗಿದ್ದು, ಲೇಖಕರ ವಿಷಯ ಸಂಗ್ರಹಣೆ ಮತ್ತು ವಿಶ್ಲೇಷಣೆಗಳು ಮೆಚ್ಚುವಂತಿವೆ. ಜೊತೆಗೆ ಜಾನಪದಕ್ಕೆ ಹೊಸ ನೆಲೆಯನ್ನು ಗುರುತಿಸಿರುವ ರಂಗಾರೆಡ್ಡಿರವರು ಜಾನಪದ ಅಧ್ಯಯನದ ಕ್ಷಿತಿಜವನ್ನು ವಿಸ್ತರಿಸುವ ಕೆಲಸವನ್ನು ಮಾಡಿದ್ದಾರೆ. ಪ್ರಸ್ತುತ ಕೃತಿಯು ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಹೊಸ ಅಲೆಯನ್ನು ಉಂಟುಮಾಡಿದ ಕೃತಿ. "ಇದರಲ್ಲಿರುವ ಬರಹಗಳು ಸಂಸ್ಕೃತಿಗೆ ಹೇಗೆ ಸಂಬಂಧಿಸಿವೆ ಎಂಬುದರ ಹಿನ್ನೆಲೆಯಲ್ಲಿ 'ಲಿಖಿತ ಜಾನಪದ ಕೃತಿಯನ್ನು ಅಧ್ಯಯನ ಮಾಡಬೇಕಿದೆ'. ಜಾನಪದ ಅಭ್ಯಾಸಿಗಳಲ್ಲಿ ಹೆಚ್ಚು ಚರ್ಚೆಗೆ ಗುರಿಯಾಗಿರುವಂತಹ ವಿಷಯವೂ ಇದಾಗಿದೆ. ಇದರಲ್ಲಿರುವ ಮೂರು ಲೇಖನಗಳು ಜಾನಪದದ ಬಗೆಗಿರುವ ಸಾಂಪ್ರದಾಯಿಕ ದೋರಣೆಗಳನ್ನು ಕೆದಕಿ ವಾದಹೂಡುವ ಗುಣ ಹೊಂದಿದೆ. ಒಟ್ಟಾರೆ ಕಾಲದ ಮತ್ತು ಕಾರ್ಯದ ದೃಷ್ಟಿಯಿಂದ ನಮ್ಮ ಜಾನಪದ ಕ್ಷೇತ್ರದಲ್ಲಿ ಗಮನ ಸೆಳೆಯುವ

ಕೃತಿಯಾಗಿದೆ"[⁶⁶] ಎಂಬುದಾಗಿ ಲಿಖಿತ ಜಾನಪದವನ್ನು ಕುರಿತಂತೆ ಡಾ॥ ಜಿ.ಆರ್.ತಿಪ್ಪೇಸ್ವಾಮಿರವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ ಲಿಖಿತ ಜಾನಪದ ಕನ್ನಡ ಜಾನಪದ ಕ್ಷೇತ್ರಕ್ಕೆ ಒಂದು ಹೊಸ ಆಯಾಮವನ್ನು ತಂದು ಕೊಟ್ಟ ಕೃತಿಯಾಗಿದೆ. ಈಗಾಗಲೇ ಸಂಗ್ರಹವಾಗಿರುವ ಜನಪದ ಸಾಹಿತ್ಯದ ವೈಜ್ಞಾನಿಕ ದೃಷ್ಟಿಯ ಅಧ್ಯಯನದಿಂದ ಉಂಟಾಗುವ ತೊಡಕುಗಳನ್ನು ಬಗೆಹರಿಸಲು ಪ್ರಸ್ತುತ ಲಿಖಿತ ಜಾನಪದ ನೆರವಾಗುತ್ತದೆ ಎಂದೇ ಹೇಳಬಹುದು.

ಡಾ॥ ರಂಗಾರೆಡ್ಡಿ ಕೋಡಿರಾಂಪುರ ಅವರು ಸಾಹಿತ್ಯಕ್ಷೇತ್ರದಲ್ಲಿ ಹೆಸರು ಮಾಡಿದವರು; ಶ್ರೇಷ್ಠ ವಿಮರ್ಶಕರು; ಒಳ್ಳೆಯ ಕವಿಗಳು; ಪ್ರತಿಭಾಶಾಲಿ ಚಿಂತಕರು, ಇಂತಹ ಒಬ್ಬ ವಿಧ್ವಾಂಸ ಜಾನಪದ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡು ಸಂಶೋಧನೆ-ವಿಶ್ಲೇಷಣೆ, ದೃಷ್ಟಿಯಿಂದ ಮಹತ್ವದ ಕೆಲಸವನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ.

"ಇತ್ತೀಚಿನ ವಿಧ್ವಾಂಸರು ಕೇವಲ ಪರಿಚಯಾತ್ಮಕ ದೃಷ್ಟಿಯನ್ನು ಬಿಟ್ಟು ತುಂಬಾ ವೈಜ್ಞಾನಿಕವಾಗಿ ಜಾನಪದದ ಅರ್ಥವನ್ನು ಹುಡುಕತೊಡಗಿರುವುದು ಒಂದು ಗಮನಾರ್ಹ ಬೆಳವಣಿಗೆಯಾಗಿದೆ. ಶ್ರೀ ರಂಗಾರೆಡ್ಡಿ ಕೋಡಿರಾಂಪುರ ಅವರ **'ಬಂಡಾಯ ಜಾನಪದ'** ಈ ದೃಷ್ಟಿಯಿಂದ ಒಂದು ಅಪೂರ್ವ ಕೃತಿಯಾಗಿದೆ. ಕೋಡಿರಾಂಪುರ ರವರು ನಮ್ಮ ಜಾನಪದ ಕ್ಷೇತ್ರದಲ್ಲಿ ಮೊದಲಿನಿಂದಲೂ ಬಂಡಾಯ ಧೋರಣೆಯನ್ನು ತೋರುತ್ತಲೇ ಬಂದಿದ್ದಾರೆ. ೧೯೮೦ ರ ಹಿಂದಿನಿಂದಲೂ ಈ ದಿಕ್ಕಿನಲ್ಲಿ ಅವರು ಲೇಖನಗಳನ್ನು ಪ್ರಕಟಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಹಿನ್ನೆಲೆಯಲ್ಲಿ ಜಾನಪದವನ್ನು ಅರ್ಥೈಸಿದವರಲ್ಲಿ ಅವರು ಮೊದಲಿಗರಾಗಿದ್ದಾರೆ. ಅವರ 'ಲಿಖಿತ ಜಾನಪದ'ವು ಜಾನಪದದ ಸಾಂಪ್ರದಾಯಿಕ ದೃಷ್ಟಿಕೋನಕ್ಕೆ ಪ್ರತಿಭಟನಾತ್ಮಕವಾಗಿಯೇ ಪ್ರಕಟವಾಗಿ ನಗರ ಜಾನಪದ ಪರಿಕಲ್ಪನೆಯನ್ನು ಜಾನಪದದಲ್ಲಿ ಅಧ್ಯಯನ ಮಾಡುವಂಥ ಒತ್ತಡವನ್ನು ತಂದಿತು. ಪ್ರಕೃತ ಅವರ ಬಂಡಾಯ ಜಾನಪದ ಕೃತಿಯು ಕನ್ನಡ ಜಾನಪದಕ್ಕೆ ಹೊಸ ಪರಿಕಲ್ಪನೆಯೂ ಆಗಿದೆ; ಆ ನಿಟ್ಟಿನಲ್ಲಿ ಅಧ್ಯಯನ ಮುಂದುವರೆಸುವವರಿಗೆ ಆಕರ ಗ್ರಂಥವೂ ಆಗಿದೆ. ವೈವಿಧ್ಯಮಯವಾದ ಲೇಖನಗಳಿಂದ ಜಾನಪದದ ಮಾನವೀಯತೆಯ ಸ್ಪರ್ಶದಿಂದ ಈ ಕೃತಿ ನಮ್ಮ ಜಾನಪದ ಸಂಶೋಧನಾ ಗ್ರಂಥಗಳ ಸಾಲಿನಲ್ಲಿ ಒಂದು ಅತ್ಯುತ್ತಮ ಕೊಡುಗೆಯಾಗಿ ನಿಲ್ಲುತ್ತದೆ ಎಂಬುದಾಗಿ ಡಾ॥ ಜಿ.ಶಂ. ಪರಮಶಿವಯ್ಯನವರು ಅಭಿಪ್ರಾಯಪಟ್ಟಿದ್ದಾರೆ."

ರಂಗಾರೆಡ್ಡಿರವರ ಲಿಖಿತ ಜಾನಪದ ಪ್ರಕಟವಾದ ಹದಿನಾರು ವರ್ಷಗಳ ನಂತರ ಪ್ರಕಟವಾದ ಜಾನಪದ ಲೇಖನಗಳ ಎರಡನೇ ಕೃತಿಯಾದ 'ಬಂಡಾಯ ಜಾನಪದ'ದಲ್ಲಿ ಬಂಡಾಯ ಜಾನಪದ, ಜಾನಪದದ ಮೇಲೆ ಆಧುನಿಕತೆಯ ಪ್ರಭಾವ, ಜನಪದ ಸಾಹಿತ್ಯದಲ್ಲಿ ಬಂಡಾಯದ ದೋರಣೆ, ಜನಪದ ಕಲೆಗಳು ಮತ್ತು ಬಂಡಾಯದ ಸಾಧ್ಯತೆ, ಜನಪದ ಕಲೆಗಳು ಮತ್ತು ಧರ್ಮ, ಜನಪದ-ಜನಪರ-ಸಂಸ್ಕೃತಿ, ಜನಪದ ಸಾಹಿತ್ಯ; ಪ್ರಧಾನ ಸಂಸ್ಕೃತಿ ಮತ್ತು ಪ್ರತಿಸಂಸ್ಕೃತಿಯ ನೆಲೆಗಳು, ಜನಪದ

ಸಾಹಿತ್ಯದಲ್ಲಿ ಅಸ್ಪೃಶ್ಯತೆ ಮತ್ತು ಸಮಾಜ, ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ-ಆಶಯ, ಮೂಡಲಪಾಯ, ಯಕ್ಷಗಾನ ಮತ್ತು ಪ್ರೇಕ್ಷಕವರ್ಗ, ಬುರ್ರುಕಥ, ನಟವರು, ಜನಪದ ಕರಕುಶಲ ಕಲೆಗಳು, ಹಳ್ಳಿಯ ಮನೆಗಳ ನಿರ್ಮಾಣ-ಹೀಗೆ ಹದಿಮೂರು ಲೇಖನಗಳ ಅಪೂರ್ವ ಸಂಗ್ರಹವಾದ 'ಬಂಡಾಯ ಜಾನಪದ' ಕೃತಿಯು ರಂಗಾರೆಡ್ಡಿರವರು ಕನ್ನಡ ಸಾರಸ್ವತಲೋಕಕ್ಕೆ ನೀಡಿದ ಒಂದು ಸತ್ವಪೂರ್ಣ ಕೃತಿಯಾಗಿದೆ. ಇದಕ್ಕೆ 'ಗುಂಡ್ಮಿ ಚಂದ್ರಶೇಖರ ಐತಾಳ ಜಾನಪದ ಪ್ರಶಸ್ತಿ' ಕೂಡ ಲಭಿಸಿದೆ.

ಲಿಖಿತ ಜಾನಪದ (೧೯೭೯) ಮತ್ತು ಬಂಡಾಯ ಜಾನಪದ (೧೯೯೫)ದ ನಂತರ ಪ್ರಕಟವಾದದ್ದೇ **'ಗಂಧದ ಮಡುವ ಕಲಕೂತ'**. ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಬಹುಮುಖ್ಯ ಅಧ್ಯಯನದ ವಿನ್ಯಾಸ ಇಲ್ಲಿನ ಲೇಖನಗಳಲ್ಲಿದೆ. ಜನಪರವಾದ, ಜೀವಪರವಾದ ನಿಲುವಿನಿಂದ ಜನಪದ ಸಂಸ್ಕೃತಿಯ ಅಧ್ಯಯನ ನಡೆಯುತ್ತಿರುವ ಇಂದಿನ ದಿನಗಳಲ್ಲಿ 'ಗಂಧದ ಮಡುವ ಕಲಕೂತ' ಕೃತಿಯಲ್ಲಿನ ಲೇಖನಗಳು ಓದುಗರನ್ನು ಹೆಚ್ಚಿನ ಚಿಂತನೆಗೆ ಹಚ್ಚುತ್ತವೆ ಎಂಬುದರಲ್ಲಿ ಇನಿತು ಸಂದೇಹವಿಲ್ಲ.

ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಗಂಧದ ಮಡುವಾಗಿದೆ. ಇದನ್ನು ಕಲಕಿದರೆ ಸುಗಂಧದ ಅಲೆಗಳು ಏಳುತ್ತವೆ. ಅದರಲ್ಲಿ ಚಲನೆಯುಂಟಾದ ಕೂಡಲೇ ಸುಗಂಧ ಗಾಳಿಯಲ್ಲಿ ಪಸರಿಸಿ ದಿಕ್ಕುಗಳಿಗೆಲ್ಲ ಪ್ರಸರಿಸುತ್ತದೆ. ಇಲ್ಲಿನ ಒಂದೊಂದು ಲೇಖನವೂ ಒಂದೊಂದು ಅಲೆಯಾಗಿ ಗಂಧ ಚೆಲ್ಲುತ್ತಾ, ಪರಿಮಳವ ಗಾಳಿಗೆ ಸೇರಿಸುತ್ತಾ, ವಾತಾವರಣವನ್ನೆಲ್ಲಾ ಗಂಧಮಯವನ್ನಾಗಿ ಮಾಡಿವೆ.

'ಸಗಣಿ ಜೊತೆ ಸರಸಕ್ಕಿಂತ, ಗಂಧದ ಜೊತೆ ಗುದ್ದಾಡುವುದರಿಂದ ಸಂಸ್ಕೃತಿಗೆ ಮತ್ತು ವ್ಯಕ್ತಿತ್ವಕ್ಕೆ ಲಾಭವಿದೆ' ಎಂದೇ ನಂಬಿರುವ ಲೇಖಕರು ಓದುಗರನ್ನು ಆಕರ್ಷಿಸಿ ಚಿಂತನೆಗೆ ಹಚ್ಚುವ ಬಗೆಯಲ್ಲಿ ನಾವೀನ್ಯವಿರುವುದನ್ನು ನಾವಿಲ್ಲಿ ಗಮನಿಸಬಹುದು.

"ಡಾ॥ರಂಗಾರೆಡ್ಡಿ ಕೋಡಿರಾಂಪುರ ರವರು ನನ್ನೂರ ಹಾಡು ಹಾಡಿದರೆ ನಗುಮುಖದ ಕ್ಯಾದಗಿ ಹೂ ಮುಡಿದು ಗಂಧದ ಮಡುವ ಕಲಕೂತ ಹತ್ತೂರ ತೇರು ಹರಿದಾವು. ರಂಗಾರೆಡ್ಡಿ ಯವರ ಅಧ್ಯತೆಯ ಕ್ಷೇತ್ರ ಜಾನಪದ ಲೋಕ. ಪಂಪನ ಮಾತನ್ನು ಸ್ವಲ್ಪ ಬದಲಿಸಿ ಹೇಳುವುದಾದರೆ ಇವರ ಬರವಣಿಗೆ ಮಾರ್ಗದೋಳ್ ಪುಗುವುದು, ಪೊಕ್ಕು ದೇಸಿಯೊಳ್ ತಳ್ವುದು ಎನ್ನಬಹುದು. ಹಾಗೆಂದು ಜಾನಪದ ವೈಭವೀಕರಣದಲ್ಲಿಯೇ ನೆಲೆನಿಲ್ಲದೇ ಶಿಷ್ಟ ಸಾಹಿತ್ಯದಲ್ಲಿ ಕಂಡು ಬರುವ ಗ್ರಾಮೀಣ ಸಂಸ್ಕೃತಿ ಸಂದರ್ಭಗಳನ್ನು ಪ್ರಸ್ತುತಕ್ಕೆ ತಗೋಲ್ಚಿ ಅನಾವರಣ ಮಾಡುವ ಸಾಮರ್ಥ್ಯ ಇವರಿಗಿದೆ. ಆದ್ದರಿಂದಲೇ ಇವರು ಶ್ರಮ ಮತ್ತು ಸಂಸ್ಕೃತಿಗಳ ಅಂತರ್ ಸಂಬಂಧವನ್ನು ಶೋಧಿಸುವ ಬರವಣಿಗೆಯನ್ನು ಮಾಡುತ್ತಾ ಬಂದಿದ್ದಾರೆ. ಇವರ ಪದ್ಯಗಳಲ್ಲಾಗಲಿ, ವಿಮರ್ಶೆಗಳಲ್ಲಾಗಲಿ, ಜಾನಪದ ವಿಷಯದ ಬರಹಗಳಲ್ಲಾಗಲಿ, ಸಂಸ್ಕೃತಿ ಚಿಂತನೆ ಪ್ರಮುಖವಾಗಿರುತ್ತದೆ. ಎಡಪಂಥೀಯ

ವಿಚಾರಧಾರೆಯ ಜೊತೆಜೊತೆಯಲ್ಲೇ ಸತ್ಯಗಳನ್ನು ಬೆರೆಸುವ ಅವರ ಲೇಖನಗಳು ತನ್ಮಯತೆಯಿಂದ ಓದಿಸಿಕೊಳ್ಳುತ್ತವೆ" ಎಂಬುದಾಗಿ ಪ್ರೊ.ಶಿವರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಗಂಧದ ಮಡುವ ಕಲಕೂತ ಕೃತಿಯಲ್ಲಿ ಕಾಡು–ನಾಡು; ಸಂಘರ್ಷ ಮತ್ತು ಸಂಬಂಧ, ಜಾಗತೀಕರಣ ಮತ್ತು ಸಂಸ್ಕೃತಿ, ಜಾನಪದ ಮತ್ತು ಕಲೆಗಳು, ಜನಪದ ಕುಣಿತಗಳು; ಶ್ರಮಸಂಸ್ಕೃತಿ ಅಭಿವ್ಯಕ್ತಿ, ಕೋಲಾರ ಜಿಲ್ಲೆಯ ಜನಪದ ಅಧ್ಯಯನ, ಗೌರಿಬಿದನೂರು ಸುತ್ತಲಿನ ಸ್ಥಳನಾಮಗಳು–ಒಂದು ಟಿಪ್ಪಣಿ, ರಂಗರೂಪದ ಜನಪದ ಕಲೆಗಳು, ಜೈನಕಥೆಗಳ ಮೇಲೆ ಜಾನಪದ ಪ್ರಭಾವ, ಮಾಧ್ಯಮಗಳ ಜಾನಪದ–ಹೊಸಮಜಲು, ಪ್ರಾಣಿ ಪರಿಸರ, ಜನಪದ ದೈವ ವಸತಿ, ಜನಪದ ಧರ್ಮಗಳು, ಜನಪದ ಸಂಸ್ಕೃತಿ–ಉಪಸಂಸ್ಕೃತಿ; ಪರಿಕಲ್ಪನೆ, ಜನಪದ ಚಿತ್ರಕಲೆ ಮತ್ತು ಜನಜೀವನ, ಗ್ರಾಮದೇವತೆ ಸ್ವಾರಮ್ಮ–ಒಂದು ಟಿಪ್ಪಣಿ, ಲೇಖನಗಳ ಸಂದರ್ಭಸೂಚಿ, ವಿಮರ್ಶಕರ ಅಭಿಪ್ರಾಯಗಳು ಸೇರಿದಂತೆ ಪ್ರಸ್ತುತ ಕೃತಿಯಲ್ಲಿ ಒಟ್ಟು ಹದಿನೇಳು ಲೇಖನಗಳ ಒಂದು ಗುಚ್ಛವಿದಾಗಿದೆ.

ಮಾಧ್ಯಮಗಳ ಜಾನಪದ; ಹೊಸಮಜಲು ಎಂಬ ಲೇಖನದಲ್ಲಿ

"ಮುಳ್ಳುಂಟು ಮರವಲ್ಲ

ನಾಲಗೆಯುಂಟು ಮಾತಿಲ್ಲ

ನೆತ್ತರುಂಟು ಮಾನವನಲ್ಲ

ಟೋಪಿಯುಂಟು ಸಾಬಿಯಲ್ಲ

ಹಾಗಾದರೆ ನಾನು ಯಾರು"[೧೦] ಎಂಬ ಆಧುನಿಕ ಒಗಟಿನ ಮುಖೇನ ಮಾಧ್ಯಮಗಳ ಜಾನಪದ ಎಂಬ ವಿಷಯವನ್ನು ಪ್ರವೇಶಿಸುವ ಬಗೆ ಔಚಿತ್ಯಪೂರ್ಣವಾಗಿದೆ.

ಅಕ್ಷರ ಸಂಸ್ಕೃತಿಯ ಬರವಣಿಗೆಯ ಸಾಧನವಾದ 'ಪೆನ್ನು' ಎಂಬ ವಸ್ತುವನ್ನು ಕುರಿತ ಈ ಒಗಟು ಅದರ ರೂಪ ಕಾರ್ಯಗಳನ್ನು ಕುರಿತು ವಿರೋಧಾಬಾಸದ ಹೇಳಿಕೆಗಳ ಮೂಲಕ ಅಭಿವ್ಯಕ್ತಿಪಡೆದುಕೊಂಡಿದೆ.

'ಕೋಲಾರ ಜಿಲ್ಲೆಯ ಜನಪದ ಕಲೆಗಳು'–ಶ್ರೀ ರಂಗಾರೆಡ್ಡಿಯವರು, ಪಿಹೆಚ್.ಡಿ.ಗಾಗಿ ಸಲ್ಲಿಸಿದ ಮಹಾಪ್ರಬಂಧ ಇಲ್ಲಿ ಒಂಭತ್ತು ಅಧ್ಯಾಯಗಳಿವೆ. ಮೊದಲ ಅಧ್ಯಾಯ ಕೋಲಾರ ಜಿಲ್ಲೆಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಹೇಳುತ್ತದೆ. ಕರ್ನಾಟಕದಲ್ಲಿ ನಡೆದಿರುವ ಜನಪದ ಕಲೆಗಳ ಅಧ್ಯಯನ ಇತಿಹಾಸ ಹೇಳುವ ಎರಡನೇ ಅಧ್ಯಾಯದಲ್ಲಿ ಜನಪದ ಕಲೆಗಳ ವಿವರಣೆ, ವರ್ಗೀಕರಣ, ಕೋಲಾರ ಜಿಲ್ಲೆಗೆ ಸೇರಿದ ಜನಪದ ಕಲೆಗಳ ವಿವರಣೆ, ವರ್ಗೀಕರಣ ಮತ್ತು ಆ ಕಲೆಗಳ ಧರ್ಮವನ್ನು ವಿವರಸಲಾಗಿದೆ.

ಮೂರನೇ ಅಧ್ಯಾಯ ಕೋಲಾರ ಜಿಲ್ಲೆಯ ಧಾರ್ಮಿಕ ಕಲೆಗಳು, ವೃತ್ತಿಗಾರರು, ಭಾಷೆ, ವಾದ್ಯಗಳು ಹಾಗೂ ವೇಷಗಾರಿಕೆಯನ್ನು ಕುರಿತಿದೆ.

ಅಧ್ಯಾಯ ನಾಲ್ಕರಲ್ಲಿ ಕೋಲಾರ ಜಿಲ್ಲೆಯ ಜನಪದ ಕಲೆಗಳನ್ನು ಪ್ರದರ್ಶನಾತ್ಮಕ ಸಿದ್ಧಾಂತದ ಹಿನ್ನೆಲೆಯಲ್ಲಿ ನೋಡಲಾಗಿದೆ.

ಐದನೇ ಅಧ್ಯಾಯ ಕೋಲಾರ ಜಿಲ್ಲೆಯ ಬುರ್ರ ಕಥೆಯ ಬಗ್ಗೆ, ಆರನೇ ಮತ್ತು ಏಳನೇ ಅಧ್ಯಾಯ ಕೇಳಿಕೆ ಮತ್ತು ತೊಗಲುಗೊಂಬೆಯ ಬಗ್ಗೆ, ಎಂಟನೇ ಅಧ್ಯಾಯ ಜನಪದ ಮನರಂಜಕರನ್ನು ಕುರಿತು ವಿವರಣೆಯಿದೆ. ಒಂಭತ್ತನೇ ಅಧ್ಯಾಯ ಉಪಸಂಹಾರವಾಗಿದ್ದು ನಂತರದಲ್ಲಿ ಕಲೆಗಳ ಸಾಹಿತ್ಯವನ್ನು ಸಂಗ್ರಹಿಸಿ ಕೊಡಲಾಗಿದೆ.

ಒಂದು ಜಿಲ್ಲೆಯ ಜನಪದ ಕಲೆಗಳನ್ನು ಒಟ್ಟಾಗಿ ಅಧ್ಯಯನಕ್ಕೆ ಒಳಪಡಿಸುವುದು. ಆ ಮೂಲಕ ಜನಪದ ಪ್ರದೇಶ (Folk Area) ಜಾನಪದ ಅಂಶಗಳ ತಿಳಿವಿಗೆ ಈ ಪ್ರಬಂಧ ನೆರವಾಗಿದೆ. ಆಂಧ್ರಪ್ರದೇಶ ಹಾಗೂ ತಮಿಳು ನಾಡಿಗೆ ಗಡಿಯಾಗಿರುವ ಕರ್ನಾಟಕದ ಕೋಲಾರ ಜಿಲ್ಲೆಯ ಜಾನಪದ ಕಲೆಗಳ ಅಧ್ಯಯನ ಮಾಡಿರುವುದು ಎರಡು ಭಾಷಿಕ ಪ್ರದೇಶಗಳು ಮತ್ತೊಂದು ಭಾಷಿಕ ಪ್ರದೇಶದ ಮೇಲೆ ಬೀರಿರುವ ಪ್ರಭಾವ ಮತ್ತು ಸತ್ವವನ್ನು ಅರ್ಥಮಾಡಿಕೊಳ್ಳಲು ಈ ಪ್ರಬಂಧ ನೆರವಾಗಿದೆ. ಈ ಮಹಾಪ್ರಬಂಧದಲ್ಲಿ ಒಳ್ಳೆಯ ಒಳನೋಟಗಳಿವೆ-ವಿಶ್ಲೇಷಣೆಗಳಿವೆ.

<u>ಉದಾ:-</u> 'ಎದ್ದು ನಾಣ್ಯಂ' ಎಂಬ ಕೋಲಾರ ಜಿಲ್ಲೆಯ ವಿಶಿಷ್ಟ ಕಲೆ ಮನುಷ್ಯನ ಪಾಳೇಗಾರಿ ಪ್ರವೃತ್ತಿ (Feudal Nature) ಹೀಗಳೆಯುವುದರ ಮೂಲಕ ಅವನ ಕುಬ್ಜತೆಯನ್ನು ಮನಗಾಣಿಸುತ್ತದೆ. (ಪುಟ.ಸಂಖ್ಯೆ-೮೬) ಇದೇ ಜಿಲ್ಲೆಯಲ್ಲಿರುವ ಪಾಳೇಗಾರನ ಕುಣಿತ ವಿರುದ್ಧ ಮುಖವಾಗಿದೆ. ನಿಸ್ಸಹಾಯಕ ಸ್ಥಿತಿಯಲ್ಲಿದ್ದ ಹರಿಜನರು ಹೀಗೆ ಬಯ್ಯುವುದರಿಂದ ತಮ್ಮ ಆಕ್ರೋಶಗಳನ್ನು ಹೊರಹಾಕಿದ್ದಾರೆ. (ಪು.೩೦). ಪ್ರೇಕ್ಷಕರಾಗಲಿ ದಿನವಿಡೀ ಕಷ್ಟಪಟ್ಟು ದುಡಿದು ತಮ್ಮ ಗೋಳಿನಂತಹದ್ದೇ ಇನ್ನೊಂದು ಗೋಳನ್ನು ತಾವು ನೋಡುವ ರಂಗ ಕಲೆಗಳಲ್ಲಿ ನೋಡಲು ಬಯಸುವುದಿಲ್ಲ. (ಪುಟ.೧೪೫). ಇಂತಹ ಮಾತುಗಳ ಮೂಲಕ ರಂಗಾರೆಡ್ಡಿಯವರು ಸಾಮಾಜಿಕ ಶ್ರೇಣೀಕರಣದ ಹಿನ್ನೆಲೆಯಲ್ಲಿ ಇಂತಹ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಬರವಣಿಗೆಯಲ್ಲಿ ಕ್ರಮಬದ್ಧತೆ ಅಚ್ಚುಕಟ್ಟುತನ ಇದೆ. ಪ್ರತಿ ಅಂಶ-ಅಂಗವನ್ನು ಬಿಡಿಸಿ-ಬಿಡಿಸಿ ವಿವರಿಸಲಾಗಿದೆ. ನೇರ ತಾಕುವ ಸರಳ ಭಾಷೆಯನ್ನು ಬಳಸಿ ವಿಷಯಗ್ರಹಿಕೆಗೆ ಅನುಕೂಲ ಮಾಡಿಕೊಡಲಾಗಿದೆ ಎಂದು ಡಾ॥ ಹಿ.ಶಿ.ರಾಮಚಂದ್ರಗೌಡರವರು ಅಭಿಪ್ರಾಯಪಟ್ಟಿದ್ದಾರೆ.

"ಜಾನಪದದ ಸರ್ವಾಂಗೀಣ ಅಭಿವೃದ್ಧಿಗೆ ಒಂದು ಪ್ರತ್ಯೇಕ ಅಕಾಡೆಮಿ ಬೇಕೆಬೇಕಿತ್ತು. ಸನ್ನಿವೇಶದ ಒತ್ತಡಗಳಿಂದ, ವಿದ್ವಾಂಸರು ಕಲಾವಿದರ ಒತ್ತಾಯದಿಂದ ಕರ್ನಾಟಕ ಸರಕಾರ ಈ ದಿಶೆಯಲ್ಲಿ ಇಡೀ ದೇಶಕ್ಕೆ ಮಾದರಿಯಾಗಿರುವಂತಹ ಕರ್ನಾಟಕ ಜಾನಪದ ಮತ್ತು ಯಕ್ಷಗಾನದ ಹೆಸರಿನಲ್ಲಿ ದಿನಾಂಕ ೩-೧೧-೧೯೮೦ ರಲ್ಲಿ ಪ್ರತ್ಯೇಕ ಅಕಾಡೆಮಿಯನ್ನು ಅಸ್ತಿತ್ವಕ್ಕೆ ತಂದಿತು.

ಪ್ರಸ್ತುತ ಅಕಾಡೆಮಿಯ ೧೭ ವರ್ಷಗಳ ಅವಧಿಯಲ್ಲಿ ಅದು ಶ್ರಮಿಸಿದ ಹಾದಿಯ ಮತ್ತು ಆ ಹಾದಿಯಲ್ಲಿ ನಿರ್ಮಿಸಿದ ವಿಶಿಷ್ಟತೆಗಳ ಪರಿಚಯವನ್ನು 'ತೇರು ಹರಿದಾವು' ಎಂಬ ಕೃತಿ ಸಂಕ್ಷಿಪ್ತವಾದರೂ ಸುಂದರ ಮತ್ತು ಮನಮುಟ್ಟುವ ರೀತಿಯಲ್ಲಿ ಅನಾವರಣ ಮಾಡಿದೆ. ಲೇಖಕರಾದ ಡಾ॥ ರಂಗಾರೆಡ್ಡಿ ಕೋಡಿರಾಂಪುರ ಅವರು ಸ್ವತಃ ವಿಮರ್ಶಕರು, ಜಾನಪದ ವಿಧ್ವಾಂಸರು ಆದ್ದರಿಂದ ಸಹಜವಾಗಿಯೇ ಅವರ ಲೇಖನಿಯ ಮೂಲಕ ಶುಷ್ಕ ವರದಿಯಾಗದೇ ಆಕರ್ಷಕ ಓದಿನ ದಾರಿಯಾಗಿ ಈ ಕೃತಿ ಪರಿಣಮಿಸಿದೆ.

ಪ್ರಸ್ತುತ ಕೃತಿಯಲ್ಲಿ ಶ್ರೀ.ಹೆಚ್.ಎಲ್.ನಾಗೇಗೌಡರ ಅವಧಿಯಿಂದ ಆರಂಭಿಸಿ ಡಾ॥. ಎಚ್.ಜಿ.ಲಕ್ಕಪ್ಪಗೌಡರ ಕಾಲದವರೆಗೆ ಅಕಾಡೆಮಿ ನಡೆಸಿದ ಕಾರ್ಯ ಚಟುವಟಿಕೆಗಳ ವಿವರಗಳನ್ನು, ಹಮ್ಮಿಕೊಂಡ ಯೋಜನೆಗಳನ್ನು, ಪ್ರಕಟಿಸಿದ ಪುಸ್ತಕಗಳನ್ನು ಕುರಿತು ವಿಷಯಾಧಾರಿತ ಯೋಜನೆಗಳ ಬಗ್ಗೆ ಪರಿಚಯಿಸುತ್ತ-ಪ್ರತಿಕ್ರಿಯಿಸುತ್ತಾ ಅದರ ಪ್ರಸ್ತುತತೆಯನ್ನು ಸಾದರಪಡಿಸುವ ಕೆಲಸವನ್ನು ಲೇಖಕರು ಬಹು ಜತನದಿಂದ ನಿರ್ವಹಿಸಿದ್ದಾರೆ.

"ಮನುಷ್ಯ ತನ್ನ ಬದುಕಿನ ಹಿನ್ನೆಲೆಯಲ್ಲಿ ಗಳಿಸಬಹುದಾದ ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು, ಸಂಪ್ರದಾಯಗಳು ಹಾಗೂ ಅರ್ಹತೆ, ಅಭ್ಯಾಸಗಳ ಸಂಕೀರ್ಣಮೊತ್ತ ಸಂಸ್ಕೃತಿ ಎಂದು ಇ.ಬಿ.ಟೈಲರ್ ಅಭಿಪ್ರಾಯಪಡುತ್ತಾರೆ. ಸಂಸ್ಕೃತಿ ಎಂಬುದು ಮಾನವ ನಿರ್ಮಿತ ಪರಿಸರ ಎಂದು ಎಂ.ಜೆ.ಹರ್ಸ್ಕೋವಿಟ್ಸ್ ಹೇಳುತ್ತಾರೆ. ಮನುಷ್ಯನ ಶ್ರಮ ಎಷ್ಟೆಷ್ಟು ವ್ಯಯವಾಗುತ್ತೋ ಅಷ್ಟಷ್ಟು ಸಂಸ್ಕೃತಿ ವಿಕಾಸವಾಗುತ್ತದೆ ಎಂದು ವೈಟ್ ಎಂಬ ವಿದ್ವಾಂಸ ನುಡಿಯುತ್ತಾನೆ. ಆದ್ದರಿಂದ ಗ್ರಾಮೀಣ ಪರಿಸರ, ಗ್ರಾಮೀಣ ಬದುಕಿನ ರೀತಿ ನೀತಿಗಳು ಸಂಸ್ಕೃತಿ ಎಂದು ಯಾರಾದರೂ ಒಪ್ಪಬೇಕಾಗುತ್ತದೆ".[೧೧]

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಳೆದು ಬಂದ ಬಗೆ, ಅದರ, ಆರಂಭದ ಘಟ್ಟ, ಪ್ರಕಟಣೆಯ ಘಟ್ಟ, ಚಟುವಟಿಕೆಯ ಘಟ್ಟಗಳನ್ನು ಕುರಿತು ಚರ್ಚಿಸುತ್ತಲೇ ಜಾನಪದ ಅಕಾಡೆಮಿ ರೂಪಿಸಿದ ಕರ್ನಾಟಕ ಸಾಂಸ್ಕೃತಿಕ ನೀತಿಯನ್ನು ಲೇಖಕರು ತಮ್ಮ 'ತೇರು ಹರಿದಾವು' ಕೃತಿಯಲ್ಲಿ ಸಂಕ್ಷಿಪ್ತವಾದರೂ ಸುಂದರವಾದ ಮತ್ತು ಮನಮುಟ್ಟುವ ರೀತಿಯಲ್ಲಿ ಅನಾವರಣ ಮಾಡಿದ್ದಾರೆ.

ಸಮಾನತೆಗಾಗಿ ದುಡಿಯುವ ಶಾಂತಿ, ಸೌಹಾರ್ದಯುತ ಸ್ವಭಾವದ ಇವರು ಸಾಹಿತ್ಯ, ಸಂಸ್ಕೃತಿ, ಕಲೆ, ಮತ್ತು ಅಧ್ಯಾಪಕ, ಜೀವನ ಇವುಗಳೆಲ್ಲವುಗಳಲ್ಲಿಯೂ ಒಂದು ಅಂತರ್ ಸಂಬಂಧವನ್ನಿಟ್ಟುಕೊಂಡು ನುಡಿದಂತೆ ನಡೆಯುವ ವ್ಯಕ್ತಿತ್ವ ಉಳ್ಳವರಾಗಿದ್ದಾರೆ.

ದಲಿತ ಸಂಘರ್ಷ ಸಮಿತಿ, ಸಮುದಾಯ ಚಳುವಳಿ, ಬಂಡಾಯ ಚಳುವಳಿ, ಸಾಕ್ಷರತಾ ಆಂದೋಲನ, ಬೀದಿ ನಾಟಕ ಚಳುವಳಿ, ಮುಂತಾದ ಜನಪರ ಚಳುವಳಿಗಳ ಜೊತೆಯಲ್ಲೂ ರಂಗಾರೆಡ್ಡಿಯವರು ಗುರುತಿಸಿಕೊಂಡು ಸಾಮಾಜಿಕ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದಾರೆ.

ಅವರು ಬರೆದ 'ಒಂದು ಸೊಸೈಟಿಯ ಕಥೆ' ಎಂಬ ಬೀದಿ ನಾಟಕ ಗೌರಿಬಿದನೂರು ತಾಲ್ಲೂಕಿನ ಕೆಂಕರೆ ಎಂಬ ಗ್ರಾಮದ ಒಂದು ಸೊಸೈಟಿಯನ್ನೇ ಬದಲಾಯಿಸಿದಂತ ಅಪರೂಪದ ನಾಟಕವಾಗಿದೆ.

೧೯೮೪ರಲ್ಲಿ ಬಂದ ಬರದ ಸಂದರ್ಭದಲ್ಲಿ ಅವರು ಬರೆದ 'ಮಳೆಯ ದೂತರು' ಎಂಬ ಬೀದಿನಾಟಕ ಕೋಲಾರದಿಂದ ಕುಂದಾಪುರದವರೆಗೂ ಪ್ರಯೋಗಗೊಂಡು ಜನಮನ್ನಣೆಗೆ ಪಾತ್ರವಾಗಿದೆ. ಇದರಲ್ಲಿ ಪುರಾಣವನ್ನು ಬಳಸಿಕೊಳ್ಳುತ್ತಲೇ, ಪುರಾಣ ಭಂಜನವನ್ನು ಮಾಡಿ ವೈಜ್ಞಾನಿಕ ವಿಧಾನದಲ್ಲಿ ಮಳೆಯ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

'ಶಂಬೂಕ ಪ್ರಕಾಶನ' ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ವಿಚಾರ ಪ್ರಚೋದಕವಾದ ಬೇರೆಯವರ ಹಲವಾರು ಉತ್ತಮ ಪುಸ್ತಕಗಳನ್ನು ಪ್ರಕಟಪಡಿಸಿದ್ದಾರೆ. ಸರ್ಕಾರದ ಹಲವಾರು ಜನಪದ ಕಾರ್ಯಕ್ರಮಗಳ ಜೊತೆಯಲ್ಲಿ ತೊಡಗಿಸಿಕೊಂಡು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಬೀದಿ ನಾಟಕ ಮತ್ತು ರಂಗನಾಟಕದಲ್ಲಿ ಅಭಿನಯಿಸಿದ್ದಾರೆ. ಜೊತೆಗೆ ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿದ 'ಬೆಂಕಿ', 'ಕೋಟೆ', 'ಕರಡಿಪುರ', 'ಅಂಗುಲಿಮಾಲ' ಮುಂತಾದ ಚಲನಚಿತ್ರಗಳಲ್ಲಿ ಅಭಿನಯಿಸಿರುವುದರ ಜೊತೆಗೆ ಸಹನಿರ್ದೇಶಕರಾಗಿಯೂ ಸಹ ಕಾರ್ಯನಿರ್ವಹಿಸಿದ್ದಾರೆ. ಒಟ್ಟಾರೆ ಕನ್ನಡ ಸಾರಸ್ವತ ಲೋಕಕ್ಕೆ ರಂಗಾರೆಡ್ಡಿರವರು ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾದುದಾಗಿದೆ.

ಸಾ.ನ.ಲಕ್ಷ್ಮಣಗೌಡ:-

ಸಾ.ನ ಲಕ್ಷ್ಮಣಗೌಡರವರು ನಮ್ಮ ನಾಡಿನ ನಮ್ರ ನುಡಿಸೇವಕರಲ್ಲೊಬ್ಬರು. ಸರಳ-ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿರುವ ಇವರು ಅಧ್ಯಾಪಕರಾಗಿ, ಸಮಾಜಸೇವಕರಾಗಿ, ದಶಕಗಳ ಕಾಲ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇವರು ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ಲಘು ಹಾಸ್ಯ ಲೇಖನ, ಸಾಹಿತ್ಯ ವಿಮರ್ಶೆ, ಅನುವಾದ, ಕಾವ್ಯ ರಚನೆ, ವ್ಯಕ್ತಿಚಿತ್ರ ರಚನೆ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಸಾದರಲ್ಲಿನ ಪ್ರಮುಖ ಸಾಹಿತಿಗಳಲ್ಲಿ ಒರ್ವರಾಗಿರುವ ಸಾ.ನ.ಲಕ್ಷ್ಮಣಗೌಡರವರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿಯ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

ಇವರು **'ತ(ರ)ಲೆಹರಟೆ)'** ಎಂಬ ಕಿರು ಹಾಸ್ಯ ಲೇಖನ ಸಂಗ್ರಹವನ್ನು ಮತ್ತು **'ನೀನಾರಿಗಾದೆಯೋ ಎಲೆ ಮಾನವ.....?'** ಎಂಬ ಸಂಕಲನವನ್ನು ರಚಿಸಿದ್ದಾರೆ. ಗೌರಿಬಿದನೂರು ತಾಲ್ಲೂಕು ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ (ಜನವರಿ ೭-೮-೨೦೧೨) ದ ಸ್ಮರಣ ಸಂಚಿಕೆ

'ಗೌರಿಬಾಗಿನ' ಕೃತಿಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೩೧ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದ ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತ ಐಯ್ಯರ್ ವಿರಚಿತ **'ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್'** ಕೃತಿಯಲ್ಲಿನ ಸಾದು ಮತಸ್ಥರ ಬಗ್ಗೆ ಇರುವ 'ಸಾದರು' ಎಂಬ ಆಂಗ್ಲ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಲಕ್ಷ್ಮಣಗೌಡ ರವರ 'ತ(ರ)ಲೆ ಹರಟೆ' ಎಂಬ ಕೃತಿಯಲ್ಲಿ ಹಾಸ್ಯದ ಬಗೆಗೆ ಇವರಿಗಿರುವ ಒಲವು–ನಿಲುವನ್ನು ಗಮನಿಸಬಹುದು. ಹಾಸ್ಯದ ಅಗಾಧ ಶಕ್ತಿ ಮತ್ತು ಮಾನವನ ಬದುಕಿನಲ್ಲಿ ಹಾಸ್ಯದ ಪ್ರಾಮುಖ್ಯತೆಯನ್ನು ಬಿಂಬಿಸುತ್ತಲೇ ಸರಳವೂ–ಸುಲಲಿತವೂ ಆದ ಭಾಷೆಯಲ್ಲಿ ಸಾಹಿತ್ಯ ಕೃಷಿಮಾಡಿರುವುದನ್ನು ಕಾಣಬಹುದು.

ಹಾಗೆಯೇ ಇವರ "ನೀನಾರಿಗಾದೆಯೋ ಎಲೆ ಮಾನವ....."? ಎಂಬ ಕವನ ಸಂಕಲನದಲ್ಲಿ ಹಲವು ಕವಿತೆಗಳು ವೈಚಾರಿಕತೆಯ ಹಿನ್ನೆಲೆಯಲ್ಲಿ ರಚನೆಯಾಗಿರವುದು ಗಮನಾರ್ಹ ವಿಚಾರವಾಗಿದೆ. ಇತ್ತೀಚಿನ ಸಂದರ್ಭದಲ್ಲಿ ಬಹುತೇಕ ಮಹಾತ್ಮರ ಜಯಂತಿಯನ್ನು ಕೇವಲ ಸಾಂಕೇತಿಕವಾಗಿ ಆಚರಿಸಿ ಅವರ ತತ್ವ, ಆದರ್ಶ, ಸಿದ್ಧಾಂತಗಳನ್ನು ಗಾಳಿಗೆ ತೂರುವ ಕೆಟ್ಟ ಪ್ರವೃತ್ತಿ ಎಲ್ಲೆಡೆ ತಲೆದೂರುತ್ತಿದೆ. ಇಂತ ಅನಿಷ್ಟ ಪ್ರವೃತ್ತಿಯನ್ನು ಲಕ್ಷ್ಮಣಗೌಡರವರು ತಮ್ಮ 'ಗಾಂಧಿ' ಎಂಬ ಕವಿತೆಯಲ್ಲಿ ಕಟುವಾಗಿ ಟೀಕಿಸುತ್ತಾರೆ. ಕವಿತೆಯ ಕೆಲಸಾಲುಗಳು ಹೀಗಿವೆ–

"ಜೈ ಅಂತೀವಿ
ಮಹಾತ್ಮ ಗಾಂಧೀಜಿಕೀ ಜೈ'
ಹಿಂಗ್ ಆಚರಿಸುತ್ತೀವಿ ನಿನ್ನ ಜಯಂತಿ
ಓ ನಮ್ಮ ನೇತಾ ಗಾಂಧಿ ತಾತಾ
ಕಪಾಟಿನಲ್ಲಿಟ್ಟು ನಿನ್ನ ಇಗ್ರಾನ
ಬಾಡ್ ತಿನ್ನಾಕ ಹೋಗ್ತೀವಿ
ನೀ ಹ್ಯಾಗ್ಹುಟ್ದಿ ಬೆಳ್ದೀ ಬದುಕ್ದೀ
ಅಂತ ನಿನ್ನ ಇಚಾರಾನ ಬೊಗಳಿ ಬೋಗಳೀ
ನಿನ್ನ ಆಚಾರಾನ ಅಗುಳು ಅಗುಳೇ ನುಂಗಿ ಬಾಯಾರಿ
ಕಲ್ಲಂಗಡಿ ಕಡ್ಗೆ ಕಾಲ್ ಹಾಕ್ತೀವಿ
ನೀರಿಗೆ ಬರ ಆದ್ರಿಂದ 'ನೀರ' ಕುಡೀತೀವಿ"[೧೨].

ಗ್ರಾಮ್ಯ ಭಾಷೆಯಲ್ಲಿ ನಿರೂಪಿತವಾಗಿರುವ ಕವಿತೆಯು ಗಾಂಧೀ ಜಯಂತಿಯನ್ನು ನಾವು ಹೇಗೆ ಆಚರಿಸುತ್ತೇವೆ? ಎಂಬ ಪ್ರಶ್ನೆಗೆ ವ್ಯಂಗ್ಯ ವಿಡಂಬನೆಯ ಮುಖೇನ ಉತ್ತರವನ್ನು ಧ್ವನಿಸುತ್ತದೆ. ಇಂದಿನ ಪ್ರಜ್ಞಾವಂತ ಸಮಾಜ ನಡೆದುಕೊಳ್ಳುವ ರೀತಿ ವಿಷಾಧನೀಯವೆಂಬುದನ್ನು ಕವಿತೆಯು ಮಾರ್ಮಿಕವಾಗಿ ಧ್ವನಿಸುತ್ತದೆ. ನುಡಿದಂತೆ ನಡೆಯದ ಇಂದಿನ ಸಮಾಜದ ಅರ್ಥಹೀನ ಆಚರಣೆಗಳನ್ನು ಕವಿತೆಯು ಬಹಳ ಸಮರ್ಥವಾಗಿ ಕಟ್ಟಿಕೊಡುತ್ತದೆ ಎಂದೇ ಹೇಳಬಹುದು.

ಅಪಾರ ಜೀವಾನುಭವವಿರುವ ಲಕ್ಷ್ಮಣಗೌಡರವರು ಸಮಾಜದ ಬಗ್ಗೆ ಕಾಳಜಿಯುಳ್ಳವರಾಗಿದ್ದು ಪ್ರಕೃತಿ ಪ್ರೇಮ, ದೇಶ ಪ್ರೇಮ, ಭಾಷಾ ಪ್ರೇಮ, ಜೊತೆಗೆ ದೀನ ದಲಿತರ ಬಗ್ಗೆ ತಮಗಿರುವ ಉತ್ಕಟ ಪ್ರೀತಿಯನ್ನು ತಮ್ಮ ಕವಿತೆಯ ಮುಖೇನ ಎಳೆ-ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಒಟ್ಟಾರೆ ಸಾದರ ಮತ್ತು ನಮ್ಮ ನಾಡಿನ ಪ್ರಮುಖ ಕವಿಗಳಲ್ಲಿ ಸಾ.ನ.ಲಕ್ಷ್ಮಣಗೌಡರವರು ಒರ್ವರಾಗಿದ್ದಾರೆ.

ಬಸವರಾಜ ಶಿವಪುರ:-

ನಾಡು ಕಂಡ ಪ್ರಾಮಾಣಿಕ ಶಿಕ್ಷಕರಲ್ಲಿ ಒರ್ವರು, ಶಿಸ್ತು, ಚಾರಿತ್ರ್ಯ ಮತ್ತು ಪಾಂಡಿತ್ಯದ ಸಂಗಮದಂತಿರುವವರು ಬಸವರಾಜ ಶಿವಪುರರವರು. ಇವರು ಆದರ್ಶಪ್ರಾಯ ವ್ಯಕ್ತಿತ್ವದವರಾಗಿದ್ದು ತಮ್ಮ **'ಕಾವ್ಯ ಕಾವೇರಿ'** ಎಂಬ ಕವನ ಸಂಕಲನವನ್ನು ರಚಿಸಿ ನಾಡಿನ ಜನತೆಗೆ ಕೊಡುಗೆಯಾಗಿ ನೀಡಿದ್ದಾರೆ. ೨೭ ಕವನಗಳನ್ನು, ಮೂರು ಚುಟುಕುಗಳು, ಐದು ವಚನಗಳನ್ನು, ಈ ಕವನ ಸಂಕಲನ ಒಳಗೊಂಡಿದ್ದು ಬಸವರಾಜ ಶಿವಪುರ ಅವರ ಮನೋಧರ್ಮಕ್ಕೆ ಹಿಡಿದ ಕೈಗನ್ನಡಿಯಂತದೆ.

"ದೇವರ ಮುಂದೆ ಎಲ್ಲರೂ ಒಂದೆ

ಆದರು ಜಗದೊಳು ಏನಿದು ದಂದೆ

ಮಾತಿಗೂ ಕೃತಿಗೂ ಸೇತುವೆ ಕಡಿದು

ಮೆರೆದಿದೆ ಜಗದೊಳು ತರತಮವು"[೧೩].

ಮನುಕುಲದ ಅಂತರಂಗವನ್ನು ಬಹಿರಂಗಪಡಿಸುವ ಬಗೆ ಇದಾಗಿದೆ. 'ಮಾನವ ಜಾತಿ ತಾನೊಂದೇ ವಲಂ' ಎಂಬ ಪಂಪನ ಧರ್ಮಾತೀತ ಮಾನವ ಪ್ರೀತಿ, ಬಸವಣ್ಣನ ಜಾತ್ಯಾತೀತ ಖ್ಯಾತಿ, ಕುವೆಂಪುರವರ ಅನಿಕೇತನ ನೀತಿಗೆ ಪುಷ್ಟಿಕೊಡುವಂತೆ ಕಾವ್ಯರಚನೆ ಮಾಡಿರುವ ಖ್ಯಾತಿ ಬಸವರಾಜ ಶಿವಪುರ ರವರದ್ದಾಗಿದೆ.

ಇನ್ನು ಕನ್ನಡತಿ ಕೊರಗ್ಯಾಳ, ಕಲ್ಯಾಣ, ಕರ್ಮಯೋಗಿ ಕವನಗಳ ಮೂಲಕ ವರ್ತಮಾನದ ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ನಾಡು-ನುಡಿಯ ಬಗೆಗೆ ಕವಿಗಿರುವ ಅಪಾರವಾದ ಅಭಿಮಾನ, ಪ್ರೀತಿ, ಶರಣರ ಆಶಯವನ್ನು ಒಪ್ಪಿಕೊಂಡಿರುವ ಕವಿಯ ಹೃದಯ ಶ್ರೀಮಂತಿಕೆ ಮತ್ತು ದೇಶದ ಬೆನ್ನೆಲುಬಾದ ರೈತನ ಬಗೆಗಿರುವ ಅನನ್ಯ ಕಾಳಜಿಯನ್ನು ಪ್ರಸ್ತುತ ಕವಿತೆಗಳಲ್ಲಿ ಗುರುತಿಸಬಹುದು.

"ಗುಳಿಬಿದ್ದ ಕಣ್ಣುಗಳು

ಎಲುಬೆದ್ದ ಮೈ

ನಿನ್ನ ಬಾಳೆಲ್ಲ

ಗೋಳೆಂದು ಸಾರುತಿಹವಲ್ಲೋ"[೧೪]

ಎಂದು ನಾಡಿನ ಅನ್ನದಾತ, ಕರ್ಮಯೋಗಿಯಾದ ರೈತನ ಬಗ್ಗೆ ಕನಿಕರದ ಧ್ವನಿ ಎತ್ತಿದ್ದಾರೆ ಸಾಮಾಜಿಕ ಸಮಾನತೆಗಾಗಿ, ನ್ಯಾಯಕ್ಕಾಗಿ ಕವಿಯ ಹೃದಯ ಮಿಡಿಯುವುದನ್ನು ಗಮನಿಸಬಹುದು. ಇವರು ದಾವಣಗೆರೆ ಪ್ರಾದೇಶಿಕ ಪರಿಸರದಲ್ಲೆಲ್ಲಾ ಅಪಾರ ಶಿಷ್ಯವೃಂದವನ್ನು ಹೊಂದಿದ್ದು, ಎಲ್ಲರ ಅಭಿಮಾನ ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ಬಸವರಾಜು ಶಿವಪುರ ಅವರ ಕವನಗಳು ಒಳಿತನ್ನು ಬಯಸಿವೆ; ಮೌಢ್ಯಗಳಿಗೆ ತಿಲಾಂಜಲಿ ಇಡಲು ಕರೆ ಇತ್ತಿವೆ, ಸಾಮಾಜಿಕ ನ್ಯಾಯವನ್ನು ಒತ್ತಿ ಹೇಳಿವೆ. ಮೇಲು-ಕೀಳು, ಜಾತೀಯತೆ, ಅಸ್ಪಶ್ಯತೆ, ಭ್ರಷ್ಟಾಚಾರದ ನಿರ್ಮೂಲನೆಗೆ ಕರೆಕೊಡುತ್ತಿವೆ. ಆರೋಗ್ಯಪೂರ್ಣ ಸಮಾಜವನ್ನು ಕಟ್ಟಲು ಆಶಿಸುವ ಕವಿತೆಗಳು ನೇರವಾಗಿ ಓದುಗರನ್ನು ಮುಟ್ಟುತ್ತವೆ, ತಟ್ಟುತ್ತವೆ, ಜೊತೆಗೆ ಸಮಾಜವನ್ನು ಜಾಗೃತಗೊಳಿಸುತ್ತವೆ.

ಸಮಾಜದ ಸ್ವಾಸ್ಥ್ಯಕ್ಕಾಗಿ ದುಡಿದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಬದುಕಿನ ಹೆಜ್ಜೆಗುರುತುಗಳನ್ನು **"ಧೀನರಾಧಾರ"** ಕವಿತೆಯಲ್ಲಿ ಗುರುತಿಸಬಹುದು:-

"ಎಂಟು ದಶಕದ ಹಿಂದೆ

ನೀನುದಿಸಿ ಬಂದೆ

ಸತ್ಯ ಸಮತೆಯ ಸಾರೆ

ಹಗಲಿರುಳು ಬೆಂದೆ

ದೀನದಲಿತರ ಕಂಡು

ಕಾಪಾಡ ಬಂದೆ

ಬಿದ್ದವರ ಮೇಲೆತ್ತಿ ನಡೆಸಿರುವೆ ಮುಂದೆ!"[೧೫].

ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ ವ್ಯಕ್ತಿತ್ವವನ್ನು ಓದುಗರು ಅರ್ಥೈಸಿಕೊಳ್ಳಲು ಯಾವ ನಿಘಂಟಿನ ಸಹಾಯವೂ ಅಗತ್ಯವಿಲ್ಲ. ಅಷ್ಟು ಸರಳ ಸುಂದರವಾಗಿ ಅವರ ವ್ಯಕ್ತಿತ್ವವನ್ನು ಶಿವಪುರ ರವರ ಕವನಗಳಲ್ಲಿ ಸೃಜಿಸಲಾಗಿದೆ.

ಕವನ ರಚನೆಯಂತೆ ವಚನರಚನೆಯಲ್ಲಿಯು ಅದ್ಭುತ ಪ್ರತಿಭೆಯನ್ನು ಮೆರೆದಿರುವ ಬಸವರಾಜ ಶಿವಪುರರವರನ್ನು ಆಧುನಿಕ ವಚನಕಾರರೆಂದೇ ಗುರುತಿಸಲಾಗುತ್ತದೆ.

ಪೂರ್ಣಿಮಾಮೂರ್ತಿ:-

ಸಾದರಲ್ಲಿನ ಕೇವಲ ಕೆಲವೇ-ಕೆಲವು ಮಹಿಳಾ ಲೇಖಕಿಯರಲ್ಲಿ ಒಬ್ಬರಾಗಿರುವ ಪೂರ್ಣಿಮಾಮೂರ್ತಿರವರು ಕವನ ರಚನೆ ಮತ್ತು ಗಮಕ ಕಲೆಯಲ್ಲಿ ಗಮನಾರ್ಹರಾಗಿದ್ದಾರೆ. ರಾಜ್ಯಮಟ್ಟದ ಕವನ ಸ್ಪರ್ದೆಯಲ್ಲಿ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗಿರುವ ಇವರು 'ಕವನಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಬಿಡಿ ಕವಿತೆಗಳು ಸುಧಾ, ತರಂಗ, ತುಷಾರ, ಮಲ್ಲಿಗೆ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ.

ಕಾವ್ಯರಚನೆಯೊಂದಿಗೆ ಹಬ್ಬ-ಹರಿದಿನಗಳಲ್ಲಿ ಸಂಗೀತ ಕಛೇರಿಯನ್ನು ನೀಡುವ ಇವರು ಸುಮಾರು ವರ್ಷಗಳಿಂದ ಆಸಕ್ತರಿಗೆ ಉಚಿತ ಸಂಗೀತವನ್ನು ಕಲಿಸುವ ಮುಖೇನ ಗಮಕ ಕಲೆಯ ಉಳಿವಿಗೂ ಸಾಕಷ್ಟು ಶ್ರಮಿಸಿದ್ದಾರೆ.

ಇವರು ರಚಿಸಿರುವ **ಮುರಳಿಯ ಹರವಿನಲಿ, ಮರಳಿ ಬರುತಿದೆ ಯುಗಾದಿ, ಹೊಮ್ಮಿದ ಹೊಂಬೆಳಗಿನ ಕಾಂತಿ, ಕಳ್ಳಕಾಳಿಂಗ, ಜ್ಯೋತಿ ಬೆಳಗಿಸು, ಗಿಳಿಬಂದಿಯಾಗಿತ್ತು ಪಂಜರದೊಳಗೆ, ವೈವಿಧ್ಯದ ಸುಳಿಯಲ್ಲಿ ವರಾಹ, ಮುಗಿಲೆತ್ತರಕೆ, ದೂರೀಕರಿಸು ದಾವಾನಲವ, ಪ್ರಗತಿಪಥದತ್ತ, ಭೂರಮೆಯ ಅಳಲು, ಕನಸುಗಳ ಪರಿಭಾಯೆ, ಕಡಲ ದಂಡೆಯಲ್ಲೊಂದು ಸುಂದರ ಸಂಜೆ** ಎಂಬಿತ್ಯಾದಿ ಅಪ್ರಕಟಿತ ಕವನಗಳು ಗಮನಾರ್ಹವಾಗಿವೆ.

ಪೂರ್ಣಿಮಾಮೂರ್ತಿರವರು ಜಾನಪದ ಪಂಪ ಎಂದೇ ಕರೆಯಲ್ಪಡುವ ಡಾ.ಜಿ.ಶಂಪಾರವರ ಸ್ಮರಣಾರ್ಥವಾಗಿ ರಾಜ್ಯಮಟ್ಟದ ಕವನ ಸ್ಫರ್ಧೆಗೆ ರಚಿಸಿ, ಪ್ರಶಸ್ತಿ ಪಡೆದಂತಹ **'ಗಿಳಿಬಂದಿಯಾಗಿತ್ತು ಪಂಜರದೊಳಗ'** ಎಂಬ ಕವಿತೆಯು ಸಹಜ-ಸುಂದರ ಸ್ವಭಾವೋಕ್ತಿಗಳಿಂದ ಕೂಡಿದ ಅತ್ಯದ್ಭುತ ಕಾವ್ಯಕುಸುರಿಯಿಂದ ಕೂಡಿದೆ ಎಂದೆನ್ನಬಹುದು.

"ದಶರಥರಾಜ, ಇತ್ತಾಪತ್ನಿಗೆ ವಾಗ್ದಾನ
ಶಿರಬದ್ಧರಾಗಿ, ಪಿತನಾಪರಮಾಣತೀಯಂತೆ
ರಾಮ, ಸೀತೇರೂ ಹೊರಟ್ಯಾರ ವನವಾಸ
ತ್ಯಜಿಸ್ಯಾರ ಅರಸೊತ್ತಿಗೆ ಭೋಗಾಭಾಗ್ಯಾವ
ನೆರಳ್ಹಾಂಗ ಹೊರಟಾ ಅನುಜಾ ಲಕ್ಷ್ಮಣ
ಒಡಗೂಡಿ ಬರುತೀನಂದ ಮಡದೀಯ
ದಿಟ್ಟ ನುಡಿಯ ಕಟ್ಟಾಜ್ಞೆಯೊಳಗಿಟ್ಟ
ಕಟ್ಟೇ ಕಣ್ಣೀರಾ ಕೋಡಿ ಹರಿದಿತ್ತ
ಹಿರಿಯೋರು ಅರಿತೋರು ಹೇಳ್ತಾರ

ಅತ್ತೀಮನ್ಯಾಗ ಇರಬೇಕು ಮುತ್ತಾಂಗ

ಬಿಚ್ಚೂಮಾತುಗಳ ಕೂರಂಬು ಖಡ್ಗ

ಥಟ್ಟಾನೆ ತಿವಿದ್ಯಾವ ಹೂವಂತಾ ಮನವಾ

ಎದೆಯಾಗ ದುಮ್ಮಾನ ಊಮ್ಮಳಿಸಿತ್ತು

ಒಡಲಾಗ ಧಗಧಗನ ಚಿಂತೀ ಉರಿದಿತ್ತ

ನೆನಪೂ ಮೂಡ್ತಿತ್ತ ಹಾಡೂ ಹಗಲ್ಹಾಂಗ

ನೋವು ಕಾಡ್ತಿತ್ತ ಕಾರೆಂಬೊ ಕತ್ತಾಲೆ ಕವಿದ್ಹಾಂಗ

ಚುಕ್ಕಿ ಚಂದ್ರಮರನಾಡಿಗೆ ಮಬ್ಬೂ ಮುಸುಕಿತ್ತ

ಪ್ರೀತೀಯ ಕಾರಂಜಿ ಬತ್ತಿಹೋಗಿತ್ತ

ಮೂಕಾವೇದನೆ ಹಾದ್ಯಾಗ ಮುಳ್ಳು ಹಾಸಿತ್ತ

ಗಿಳಿಬಂಧಿಯಾಗಿತ್ತ ಪಂಜರದೊಳಗೆ"[೧೬].

ಪ್ರಸ್ತುತ ಕವಿತೆಯು ಹೊಸದಾಗಿ ಮದುವೆಯಾಗಿ–ನೂರಾರು ಆಸೆ, ಆಕಾಂಕ್ಷೆ, ಕನಸುಗಳನ್ನು ಹೊತ್ತು ಅಯೋಧ್ಯೆಗೆ ಬಂದ ಊರ್ಮಿಳಿಗೆ ಒದಗಿದ ನೋವು, ಹಿಂಸೆ, ಯಾತನೆಯನ್ನು ಕವಿತೆ ಎಳೆ–ಎಳೆಯಾಗಿ, ಧ್ವನಿ ಪೂರ್ಣವಾಗಿ ಕಟ್ಟಿಕೊಡುವುದನ್ನು ನಾವಿಲ್ಲಿ ಗಮನಿಸಬಹುದು.

ಹಲವಾರು ನಿಯತಕಾಲಿಕೆಗಳಲ್ಲಿ ಕವನ ರಚನೆಯ ಮುಖೇನ ಸಹೃದಯ ಸಾಹಿತ್ಯಾಸಕ್ತರ ಮನತಣಿಸಿದ್ದಾರೆ. ಇವರು ಸಾದರ ಪ್ರಮುಖ ಬರಹಾಗಾರ್ತಿಯರಲ್ಲಿ ಒರ್ವರಾಗಿದ್ದಾರೆ. (ಪೂರ್ಣಿಮಾಮೂರ್ತಿರವರ ಇನ್ನಿತರ ಕೆಲಪ್ರಮುಖ ಕವನಗಳನ್ನು ಗಮನಿಸುವುದಾದರೆ ಅನುಬಂಧದಲ್ಲಿ ಗಮನಿಸಬಹುದು).

<u>ಸಾ.ನ.ಸುನಂದ:–</u>

ಚಿಕ್ಕಬಳ್ಳಾಪುರ ಜಿಲ್ಲೆಯ, ಗೌರಿಬಿದನೂರು ತಾಲ್ಲೂಕಿನ ಸಾದರ್ಲಹಳ್ಳಿ ಗ್ರಾಮದ ನಿವಾಸಿಯಾಗಿರುವ ಸಾ.ನ.ಸುನಂದರವರು ಸಾದರಲ್ಲಿರುವ ಬರಹಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ. ಇವರು ವೈಚಾರಿಕತೆ, ಪ್ರಖರತೆ ಹಾಗೂ ಸಾಮಾಜಿಕ ಕಳಕಳಿಯಿಂದ, ಜೀವನವನ್ನು ವಿಭಿನ್ನ ದೃಷ್ಟಿಕೋನದಿಂದ ದರ್ಶಿಸಿ, ಚಿಂತನೆಗೈದು ಬಿಡಿಕವನಗಳನ್ನು ರಚಿಸಿದ್ದಾರೆ. ಎಂತಹದ್ದೇ ಪರಿಸ್ಥಿತಿ ಎದುರಾದರೂ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೆ ನಮ್ಮ ಗುರಿಯೆಂಬ ಬೆಳಕಿನೆಡೆಗೆ ದಿಟ್ಟ ಹೆಜ್ಜೆಯನ್ನು ಹಾಕಬೇಕೆಂಬ ಮನೋಭಾವದ ಲೇಖಕಿ ಸಾ.ನ.ಸುನಂದ.

ಇವರು ರಚಿಸಿರುವ **'ವಸಂತ ಬಂದ'** ಕವಿತೆಯು ಪ್ರಕೃತಿಯ ರಮ್ಯಮನೋಹರತೆಯನ್ನು ವರ್ಣಿಸುತ್ತಲೇ ಬದುಕಿನ ವಾಸ್ತವತೆಯ ಅರಿವನ್ನುಂಟುಮಾಡುತ್ತದೆ.

"ತಿದ್ದಿ ತೀಡುವ ಕೆಲಸ ಸಂವತ್ಸರದ ತವಕ
ಹಿಮದ ಬೂದಿಯ ಕೊಡವಿ, ಹಸಿರು ರೆಕ್ಕೆಯ ಒದರಿ
ಗ್ರೀಷ್ಮ ಬೆಂಕಿಯಿಂದೆದ್ದು ಬಂದಿಹ ಹಕ್ಕಿ
ಯಾರ ಬೇಟದ ಫಲವೋ? ಯಾವ ಬೇಟದ ತವಕವೋ?"[೧೭]

ಕಾಲವು ನಿರಂತರ ಚಲನಶೀಲವಾದುದ್ದಾಗಿದ್ದು ಅದು ಮನುಷ್ಯನನ್ನು ಸದಾಕಾಲವೂ ತಿದ್ದುವ ಪ್ರಯತ್ನವನ್ನು ಎಡೆಬಿಡದೆ ಮಾಡುತ್ತಿರುತ್ತದೆ ಎಂಬುದಕ್ಕೆ ಪ್ರಸ್ತುತ ಸಾಲುಗಳು ನಿದರ್ಶನವೆಂಬಂತಿವೆ.

"ಮತ್ಸ್ಯ ಕೂರ್ಮಾದಿಗಳೇ ಸಾಕಿತ್ತು ಮುಂಚೆ
ಪಾಪಿಗಳ ಬಗ್ಗು ಬಡಿಯುವುದಕ್ಕೆ
ಊರೂಗಳಲ್ಲಿ ತಲೆಯತ್ತುತ್ತಿದ್ದರೂ ಕಲ್ಕಿ
ಆಗಿಲ್ಲ ಕಲಿಯುಗದಲ್ಲಿ
ಪಾಪಿಗಳ ಸಂಹರಿಸಲಿಕ್ಕೆ!"[೧೮]

ಪ್ರಸ್ತುತ ಹನಿಗವಿತೆಯಲ್ಲಿ ಲೇಖಕಿಯು ಪುರಾಣ ಪ್ರತಿಮೆಗಳನ್ನು ಬಳಸಿರುವ ರೀತಿ ಔಚಿತ್ಯಪೂರ್ಣವಾಗಿದ್ದು ಇಂದಿನ ಕ್ರಾಂತಿಯ ಸ್ವರೂಪ ಮತ್ತು ವಿಫಲತೆಯನ್ನು ಅರ್ಥಪೂರ್ಣವಾಗಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಒಟ್ಟಾರೆ ಸಾದರಲ್ಲಿರುವ ಪ್ರಮುಖ ಬರಹಗಾರ್ತಿಯರಲ್ಲಿ ಸಾ.ನ.ಸುನಂದರವರು ಒಬ್ಬರಾಗಿದ್ದಾರೆ.

ಬಿ.ಕೆ.ಶಾಂತರಾಜು:-

ಸರಳರು, ಸಾತ್ವಿಕ, ಸಜ್ಜನ ಸ್ವಭಾವದವರೂ ಆದ ಇವರು ವೃತ್ತಿಯಿಂದ ಶಿಕ್ಷಕರಾಗಿದ್ದು, ಪ್ರವೃತ್ತಿಯಿಂದ ಸಾಹಿತ್ಯ ರಚನೆಯ, ಆಯುರ್ವೇದ ವೈದ್ಯ ಪದ್ಧತಿ, ಸಮಾಜಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಕುರೂಡಿ ಗ್ರಾಮದ ನಿವಾಸಿಯಾದ ಇವರು **'ಸಾದರ ಸುದ್ದಿ'**, **'ಸಾದರ ವಾಣಿ'** ಮುಂತಾದ ನಿಯತಕಾಲಿಕೆಗಳಿಗೆ ಬಿಡಿಲೇಖನಗಳು, ಹನಿಗವಿತೆಗಳು, ಕವನಗಳನ್ನು ರಚಿಸಿ ಎಲ್ಲರ ಗಮನ ಸೆಳೆದಿದ್ದಾರೆ.

ಇವರ **'ಸುಮಧುರ ಮಾವು'** ಕವಿತೆಯು ವಸಂತ ವರ್ಣನೆಯಿಂದ ಪ್ರಾರಂಭವಾಗಿ ಮಾವು ಮನುಷ್ಯನ ಬದುಕಿನೊಂದಿಗೆ ಹೇಗೆ ಅವಿನಾಭಾವ ಸಂಬಂಧವನ್ನೊಂದಿದೆ ಎಂಬುದನ್ನು ವಿವರಿಸಿದ್ದಾರೆ.

"ಎಲ್ಲ ಹಬ್ಬ ಹರಿದಿನಗಳಲಿ ಎಲೆ
ತೋರಣಕಟ್ಟಿ ಭಕ್ತಿ ಭಾವದಿ ಪೂಜೆ
ಪುನಸ್ಕಾರಗಳಲ್ಲಿ ಯಾರು ತಾನೇ
ಭಾಗವಹಿಸದಿರುವರು!?"[೧೯]

ಹಬ್ಬ ಹರಿದಿನಗಳಲ್ಲಿ ಮಾವಿಗೆ ವಿಶೇಷ ಸ್ಥಾನವಿದೆ, ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕಾರವಾದ ಮಾವು ಎಲ್ಲ ಧಾರ್ಮಿಕ ವಿಧಿ-ವಿಧಾನಗಳಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ಪ್ರಸ್ತುತ ಸಾಲುಗಳು ಔಚಿತ್ಯಪೂರ್ಣವಾಗಿ ಧ್ವನಿಸುತ್ತವೆ.

ಎನ್. ತಿಮ್ಮಪ್ಪ:-

ಎನ್.ತಿಮ್ಮಪ್ಪರವರು ೧೯೫೯ರಲ್ಲಿ ಗಂಗಸಂದ್ರ ಗ್ರಾಮದಲ್ಲಿ ಜನಿಸಿದರು. ಇವರು 'ಸಾದರವಾಣಿ' ಎಂಬ ರಾಷ್ಟ್ರೀಯ ಕನ್ನಡ ಮಾಸ ಪತ್ರಿಕೆಯನ್ನು ೨೦೦೦ ರಲ್ಲಿ ಪ್ರಾರಂಭಿಸಿದರು. ವಕೀಲರು, ಪತ್ರಕರ್ತರೂ, ಸಮಾಜಸೇವಕರೂ ಆಗಿರುವ ಇವರ ಸೇವೆಯನ್ನು ಗುರುತಿಸಿದ ಹಲವಾರು ಸಂಘ-ಸಂಸ್ಥೆಗಳು ಇವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದೆ. ಅವುಗಳಲ್ಲಿ ಕೆಲ ಪ್ರಮುಖವಾದವುಗಳೆಂದರೆ:- **'ದಾನ ಪ್ರಕಾಶ ಶ್ರೀ', 'ಸಮಾಜ ಸೇವಾಭೂಷಣ', 'ಪದ್ಮಶ್ರೀ ಕಲಾರತ್ನ', 'ಮಯೂರ ರತ್ನ', ' ಸುವರ್ಣ ಶಿಲ್ಪ', 'ವಿಶ್ವ ಜ್ಯೋತಿ', 'ಹೊಯ್ಸಳ', 'ರತ್ನಗರ್ಭ ವಸುಂಧರೆ', 'ಕನ್ನಡ ಸಿರಿ', 'ಸಮಾಜ ಸೇವಾ ರತ್ನ', 'ವಿಶ್ವಮಾನವ ಕುವೆಂಪು ರತ್ನ', 'ಆದರ್ಶ ಶೃಂಗ ಪ್ರಶಸ್ತಿ'** ಹೀಗೆ ನಾಡಿನ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗಿರುವ ಎನ್.ತಿಮ್ಮಪ್ಪರವರ ಸಾರಥ್ಯದಲ್ಲಿ ಪ್ರಕಟವಾಗುತ್ತಿರುವ ಸಾದರ ಸುದ್ದಿ ಮಾಸ ಪತ್ರಿಕೆಯು ಸಮಕಾಲಿನ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಗುಣವುಳ್ಳದ್ದಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾನೂನು ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಎನ್. ತಿಮ್ಮಪ್ಪರವರು ಜಾತಿಯ ಹಿರಿಯರು, ಪ್ರಮುಖರಲ್ಲಿ ಒರ್ವರಾಗಿದ್ದಾರೆ.

ಅಡಿಟಿಪ್ಪಣಿಗಳು:-

೧. ಮಾಸ್ತಿ ವೆಂಕಟೇಶ ಅಯ್ಯಂಗಾರ್-'ಕರ್ನಾಟಕ ಜನತೆಯ ಸಂಸ್ಕೃತಿ'-ಪುಟಸಂಖ್ಯೆ-೪೯.

೨. ಡಾ॥ ರಂಗಾರೆಡ್ಡಿಕೋಡಿರಾಂಪುರ-'ನನ್ನೂರ ಹಾಡು'-ಪುಟ ಸಂಖ್ಯೆ-೧೪.

೩. ಅದೇ.ಪು.ಪುಟ ಸಂಖ್ಯೆ-೧೯.

೪. ಅದೇ.ಪು.ಪುಟ ಸಂಖ್ಯೆ-೨೩.

೫. ಅದೇ.ಪು.ಪುಟ ಸಂಖ್ಯೆ-೧೭.

೬. ಡಾ॥ ರಂಗಾರೆಡ್ಡಿಕೋಡಿರಾಂಪುರ -'ಶ್ರೀಶ್ರೀ'-ಪುಟ ಸಂಖ್ಯೆ-೩೫.

೭. ಡಾ॥ ರಂಗಾರೆಡ್ಡಿಕೋಡಿರಾಂಪುರ -'ಶ್ರೀಶ್ರೀ'-ಪುಟ ಸಂಖ್ಯೆ-೫೯.

೮. ಡಾ॥ ರಂಗಾರೆಡ್ಡಿಕೋಡಿರಾಂಪುರ -'ಗುಬ್ಬಿ ವೀರಣ್ಣ'-ಪುಟ ಸಂಖ್ಯೆ-೦೨

೯. ಡಾ॥ ರಂಗಾರೆಡ್ಡಿಕೋಡಿರಾಂಪುರ -'ಗಂಧದ ಮಡುವ ಕಲಕೂತ'-ಪುಟ ಸಂಖ್ಯೆ-೨೬೪.

೧೦. ಡಾ॥ ರಂಗಾರೆಡ್ಡಿಕೋಡಿರಾಂಪುರ -'ಗಂಧದ ಮಡುವ ಕಲಕೂತ'-ಪುಟ ಸಂಖ್ಯೆ-೮೬.

೧೧. ಡಾ॥ ರಂಗಾರೆಡ್ಡಿಕೋಡಿರಾಂಪುರ-'ತೇರು ಹರಿದಾವು'-ಪುಟ ಸಂಖ್ಯೆ-೦೧

೧೨. ಸಾ.ನ.ಲಕ್ಷ್ಮಣಗೌಡ-'ನೀನಾರಿಗಾದೆಯೋ ಎಲೆ ಮಾನವ.....?'-ಪುಟಸಂಖ್ಯೆ-೧೭.

೧೩. ಬಸವರಾಜು ಶಿವಪುರ-ಕಾವ್ಯ ಕಾವೇರಿ-ಪುಟಸಂಖ್ಯೆ-೦೧.

೧೪. ಅದೇ ಪು. ಪುಟಸಂಖ್ಯೆ-0೫.

೧೫. ಅದೇ ಪು. ಪುಟಸಂಖ್ಯೆ-೧೭.

೧೬. ಪೂರ್ಣಿಮಾ ಮೂರ್ತಿ-ಅಪ್ರಕಟಿತ ಕವನ ಸಂಕಲನ-ಪುಟಸಂಖ್ಯೆ-೦೬.

೧೭. ಸಾನ.ಸುನಂದ-'ಗೌರಿ ಬಾಗಿನ' (ತಾಲ್ಲೂಕು ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಹೊತ್ತಿಗೆ)-ಪುಟ ಸಂಖ್ಯೆ-೭೫.

೧೮. ಅದೇ ಪು.ಪುಟ ಸಂಖ್ಯೆ-೫೫.

೧೯. ಬಿ.ಕೆ.ಶಾಂತರಾಜು-'ಸಿರಿಗೌರಿ'(ಸಾಹಿತ್ಯ ಶ್ರೀಮಂತಿಕೆ ಮೆರೆದ ಗೌರಿಬಿದನೂರು ಸ್ಮರಣ ಸಂಚಿಕೆ ೨೦೧೩)-ಪುಟ ಸಂಖ್ಯೆ-೨೫.

ಅಧ್ಯಾಯ-೬

ಸಾದರು ಜಾತಿಯಲ್ಲಿನ ವೈದ್ಯ ಪದ್ಧತಿ

೬.೧: ಜನವೈದ್ಯ.

೬.೨: ಪಶುವೈದ್ಯ.

೬.೩: ಕೃಷಿ ವೈದ್ಯ.

ಅಧ್ಯಾಯ-೬

ಸಾದರು ಜಾತಿಯಲ್ಲಿನ ವೈದ್ಯ ಪದ್ಧತಿ

ಸೃಷ್ಟಿಯ ಎಲ್ಲಾ ಜೀವಿಗಳಿಗೂ ಒಂದಲ್ಲಾ ಒಂದು ಬಾರಿ ದೈಹಿಕ ಅಥವಾ ಮಾನಸಿಕ ಆರೋಗ್ಯ ಕೆಡುವುದು ಸಹಜ. ಯಾವುದೇ ಒಂದು ಜಾತಿಯು ತನ್ನ ಸದಸ್ಯರ ಇತರೆ ಅವಶ್ಯಕತೆಗಳಂತೆ ಅವರ ಆರೋಗ್ಯದ ಕಡೆಗೂ ಗಮನ ನೀಡುವುದು ಬಹು ಮುಖ್ಯ ಕರ್ತವ್ಯವಾಗಿದೆ. ಶತ-ಶತಮಾನಗಳಿಂದಲೂ ಜನಪದ ಸಂಸ್ಕೃತಿಯ ಒಂದು ಅಂಗವಾಗಿರುವ ಜನಪದ ವೈದ್ಯ ಪದ್ಧತಿಯು ಹಿಂದಿನಿಂದ ಇಂದಿನವರೆಗೆ ತನ್ನ ವಿಶಿಷ್ಟತೆಯನ್ನು, ಅನನ್ಯತೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಸಾದರ ಸಂಸ್ಕೃತಿಯ ಪ್ರಮುಖ ಅಂಶಗಳಲ್ಲಿ ಜನಪದ ವೈದ್ಯ ಪದ್ಧತಿಯು ಒಂದಾಗಿದೆ.

ಜನಪದರ ರೋಗ-ರುಜಿನಗಳು ಮತ್ತು ಅವುಗಳನ್ನು ಗುಣಪಡಿಸುವ ಸಲುವಾಗಿ ಅನುಸರಿಸುವ ಮಾರ್ಗೋಪಾಯಗಳನ್ನು ಕುರಿತ ಎಲ್ಲಾ ರೀತಿಯ ಸಾಂಪ್ರದಾಯಿಕ ಆಚರಣೆಗಳ ಸಾರ-ಸರ್ವಸ್ವವನ್ನೇ ಜನಪದ ವೈದ್ಯ ಪದ್ಧತಿ ಎಂದು ಕರೆಯಬಹುದು. ಜನಪದ ವೈದ್ಯ ಬಹುಮಟ್ಟಿಗೆ ಮನೆವೈದ್ಯ. ವಿಶಾಲ ಅರ್ಥದಲ್ಲಿ ಹೇಳುವುದಾದರೆ, ಯಾವುದೇ ಒಂದು ಜಾತಿಯು ತಲೆ, ತಲಾಂತರದಿಂದ ರೂಢಿಸಿಕೊಂಡು ಬಂದ ವೈದ್ಯ ಪದ್ಧತಿಯೇ ಜನಪದ ವೈದ್ಯ ಪದ್ಧತಿ ಎಂದು ಹೇಳಬಹುದು. ಈ ವೈದ್ಯ ಪದ್ಧತಿಗೆ ಬಳಕೆಯಾಗುವ ಸಾಮಾಗ್ರಿಗಳೆಲ್ಲವೂ ಸಾಮಾನ್ಯವಾಗಿ ಆಯಾ ಸುತ್ತಮುತ್ತಲಿನ ಪ್ರಾದೇಶಿಕ ಪರಿಸರದಲ್ಲಿ ದೊರೆಯುವಂತಹವುಗಳೇ ಆಗಿರುತ್ತವೆ.

ಜನಪದರಲ್ಲಿ ರೋಗಗಳಿಗೆ ಹಲವು ಕಾರಣಗಳನ್ನು ಆರೋಪಿಸಲಾಗುತ್ತದೆ. ಅವುಗಳಲ್ಲಿ ಕೆಲ ಮುಖ್ಯವಾದವುಗಳೆಂದರೆ-ದೈವಗಳು ಮುನಿಯುವುದು, ಜನಪದರಲ್ಲಿ ಜನರಿಗೆ ಒಳ್ಳೆಯ ಮತ್ತು ಕೆಟ್ಟದ್ದು ಎರಡನ್ನು ಮಾಡುವವರು ದೇವ-ದೇವತೆಗಳೆಂದು ನಂಬುತ್ತಾರೆ. ಹರಕೆ ಹೊತ್ತು ತಮ್ಮ ಕೋರಿಕೆ ಫಲಿಸಿದ ನಂತರ ಹರಕೆಯನ್ನು ತೀರಿಸದಿದ್ದರೆ ಆಗ ದೇವರು ಮುನಿದು ಮನುಷ್ಯನಿಗೆ, ಅವನ ದನಕರುಗಳಿಗೆ, ಪೈರಿಗೆ ರೋಗಗಳನ್ನು ತರುತ್ತಾರೆ ಎಂಬ ನಂಬಿಕೆ ಇವರಲ್ಲಿದೆ. ಸಮಸ್ಯೆಯಾದ ಕೂಡಲೇ ಮನುಷ್ಯ ತನ್ನ ತಪ್ಪನ್ನು ಅರಿತು ದೈವದ ಮೊರೆ ಹೊಕ್ಕು, ತಪ್ಪು-ಕಾಣಿಕೆಯನ್ನು ಕೊಟ್ಟು ತಮ್ಮ ಸಮಸ್ಯೆಯಿಂದ ಪಾರಾಗಲು ಪ್ರಯತ್ನಿಸುತ್ತಾರೆ.

ಮತ್ತೆ ಕೆಲವೊಮ್ಮೆ ದುಷ್ಟಶಕ್ತಿಗಳಿಂದಲೂ ತೊಂದರೆ ಸಂಭವಿಸುವುದೆಂಬ ನಂಬಿಕೆ ಸಾದರಲ್ಲಿದೆ. ಆಗಲೂ ಇವರು ದೈವ, ಮಾಟ, ಮಂತ್ರದ ಮೊರೆ ಹೋಗುತ್ತಾರೆ. ಜೊತೆಗೆ ಜನಪದ ವೈದ್ಯಪದ್ಧತಿಯ ಪ್ರಕಾರ ನಾವು ಸೇವಿಸುವ ಆಹಾರದಲ್ಲಿ ಉಂಟಾಗುವ ಅಸಮತೋಲನದಿಂದಾಗಿ ಮತ್ತು ಪರಿಸರದಲ್ಲಿನ ವಾತಾವರಣದಲ್ಲಿ ಉಂಟಾಗುವ ಏರು-ಪೇರುಗಳಿಂದಾಗಿ ಖಾಯಿಲೆಗಳು ಗೋಚರಿಸುತ್ತವೆ. ಋತುಗಳ ಸಂಕ್ರಮಣಾವಸ್ಥೆಯಲ್ಲಿ ಮನುಷ್ಯನ ದೇಹವು ಸುಲಭವಾಗಿ

ಖಾಯಿಲೆಗಳಿಗೆ ಒಳಗಾಗುತ್ತದೆ, ಎಂಬ ವಿಚಾರಗಳಿಗೆ ಅನುಗುಣವಾಗಿ ಜನಪದ ವೈದ್ಯಪದ್ಧತಿಯಲ್ಲಿ ಹಲವು ಬಗೆಯ ವಿಶಿಷ್ಟ, ವಿಭಿನ್ನ ಆಚರಣೆಗಳು ಜನ್ಮತಾಳಿವೆ.

ಜನಪದ ಸಂಸ್ಕೃತಿಯಲ್ಲಿ ವೈದ್ಯನ ಶಕ್ತಿಯಲ್ಲಿ ರೋಗಿಯ ನಂಬಿಕೆ ಮುಖ್ಯ, ರೋಗಿಯಲ್ಲಿ ಈ ಭಾವನೆಯನ್ನು ಮೂಡಿಸಲು ವೈದ್ಯರು ಮೊದಲು ಪ್ರಯತ್ನಿಸುತ್ತಾರೆ. ರೋಗಿ ತನ್ನೆಡೆಗೆ ಬಂದಾಗ ಅವನನ್ನು ವಿಚಾರಿಸುವ ರೀತಿ, ಕೇಳುವ ಪ್ರಶ್ನೆ, ನೋಡಿದ ಕೂಡಲೇ ರೋಗವನ್ನು ಊಹಿಸುವುದು, ಅಭಯದ ಮಾತುಗಳು ಮುಂತಾದವು ವೈದ್ಯನಲ್ಲಿ ನಂಬಿಕೆ ಹುಟ್ಟುವಂತೆ ಮಾಡುತ್ತವೆ.

ರೋಗವು ಪತ್ತೆಯಾದ ಅಥವಾ ಅವಲೋಕನೆಯಾದ ನಂತರ ಗುಣಪಡಿಸಲು ನಿವಾರಣೆ ಪ್ರಾರಂಭವಾಗುತ್ತದೆ. ರೋಗದ ಲಕ್ಷಣ, ವೈದ್ಯದ ರೀತಿ, ಮುಂತಾದವುಗಳಿಗೆ ಅನುಗುಣವಾಗಿ ಔಷದೋಪಚಾರ ಪ್ರಾರಂಭವಾಗುತ್ತದೆ.

ಸಾದರಲ್ಲಿನ ಜನಪದ ವೈದ್ಯಪದ್ಧತಿಯನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಮೂರು ವಿಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ

ಅ. ಜನವೈದ್ಯ

ಆ. ಪಶುವೈದ್ಯ ಮತ್ತು

ಇ. ಕೃಷಿ ವೈದ್ಯ.

ಸಾದರಲ್ಲಿರುವ ಹಲವು ಜನಪದ ವೈದ್ಯರನ್ನು ಭೇಟಿಮಾಡಿ ಕ್ಷೇತ್ರಕಾರ್ಯದ ಮುಖೇನ ಮಾಹಿತಿ ಸಂಗ್ರಹಿಸಲಾಗಿದೆ. 'ಜನಪದ ವೈದ್ಯ' ಎಂಬುದು ಅಧುನಿಕರು ಕೊಟ್ಟ ಹೆಸರು. ಜನಪದರು 'ನಾಟಿ ವೈದ್ಯ', ನಾಡ ಔಷದಿ, ಊರಮದ್ದು, ನಾಡ ಮದ್ದು, ಮನೆ ಮದ್ದು ಎಂಬಿತ್ಯಾದಿ ಹೆಸರುಗಳಿಂದ ಕರೆಯುವುದುಂಟು.

<u>೬.೧:- ಜನ ವೈದ್ಯ</u>

ಹಿಂದಿನಿಂದ ಇಂದಿನವರೆಗೆ ಜನಪದರು ತಮ್ಮ ದೈಹಿಕ ಮತ್ತು ಮಾನಸಿಕ ಖಾಯಿಲೆಗಳ ಅಥವಾ ರೋಗ-ರುಜಿನಗಳ ನಿವಾರಣೆಗಾಗಿ ಕಂಡುಕೊಂಡ ಪ್ರಾಕೃತಿಕ ಶುಶ್ರೂಷೆಯ ವಿಧಾನಗಳೇ ಜನ ವೈದ್ಯ. ಇಲ್ಲಿ ಮದ್ದಿಗಿಂತ ಮದ್ದುಗಾರರು ಮುಖ್ಯರು ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಜನಪದ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಸಾದರ ಹಿರಿಯರು, ಜನಪ್ರಿಯ ಜನಪದ ವೈದ್ಯರು ಆದಂತಹ **'ಪಂಡಿತ ಹೆಚ್.ಹನುಮಂತರಾಯ'**ರವರನ್ನು ಭೇಟಿಮಾಡಿ ಜನವೈದ್ಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲಾಗಿದೆ. ಜನಪದ ವೈದ್ಯಪದ್ಧತಿಯನ್ನು ಕೇವಲ ಪ್ರವೃತ್ತಿಯನ್ನಾಗಿಸಿಕೊಳ್ಳದೇ, ವೃತ್ತಿಯನ್ನಾಗಿಸಿಕೊಂಡವರು. ಇವರ ಈ ಉದ್ಯಮ ನಾಲ್ಕಾರು ಜನರಿಗೆ ಉದ್ಯೋಗವನ್ನು ಒದಗಿಸುವುದರೊಂದಿಗೆ, ಸಹಸ್ರಾರು ಜನರ ರೋಗ-ರುಜಿನಗಳನ್ನು ಗುಣಪಡಿಸುವಲ್ಲಿ

ಸಹಕಾರಿಯಾಗಿದೆ. ಜನಪದ ವೈದ್ಯಲೋಕದ ಇವರ ಸಾಧನೆಯನ್ನು ನಾಡಿನ ಹಲವು ಗಣ್ಯರು ಪ್ರಶಂಶಿಸಿದ್ದಾರೆ.

ಇವರು ೧೯೨೮ರಲ್ಲಿ ತುಮಕೂರು ಜಿಲ್ಲೆಯ ರಾಮಗೊಂಡನಹಳ್ಳಿ ಗ್ರಾಮದಲ್ಲಿ ಜನಿಸಿದರು. ಯಾರ ಮಾರ್ಗದರ್ಶನವೂ ಇಲ್ಲದೆ ಜನಪದ ವೈದ್ಯಕ್ಷೇತ್ರದಲ್ಲಿ ಇವರು ಮಾಡಿದ ಅಪಾರ ಸಾಧನೆಯನ್ನು ಗಮನಿಸಿದ ಸಿದ್ದಗಂಗಾಮಠದ ಶ್ರೀಗಳಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಇವರಿಗೆ ೧೯೯೬ರಲ್ಲಿ **'ಏಕಲವ್ಯ'** ಪ್ರಶಸ್ತಿಯನ್ನು ಮತ್ತು ೨೦೧೦ರಲ್ಲಿ **'ಸಂಘಸಿರಿ'** ಪ್ರಶಸ್ತಿ ಪುರಸ್ಕಾರವನ್ನು ನೀಡಿ ಗೌರವಿಸಿದರು. ಹಾಗೆಯೇ ವೀರಶೈವ ಕ್ಷೇಮಾಭಿವೃದ್ದಿ ಸಂಘವು **'ಸ್ವಯಂ ಸಿದ್ದ ವೈದ್ಯ'** ಎಂಬ ಪ್ರಶಸ್ತಿಯನ್ನು ನೀಡಿದೆ.

ಬಾಳೆಹೊನ್ನೂರು ಜಗದ್ಗುರುಗಳಿಂದ ಅಭಿನಂದನಾ ಪತ್ರವನ್ನು ಪಡೆದಿರುವ ಇವರು ೧೯೯೪ರಲ್ಲಿ **'ಉದ್ಯೋಗ ಎಕ್ಸಲೆನ್ಸಿ ಗೋಲ್ಡ್ ಮೆಡಲ್'** (ನ್ಯೂಡೆಲ್ಲಿ), ೨೦೧೧ರಲ್ಲಿ ಎಕನಾಮಿಕ್ ಡೆವಲಪ್‌ಮೆಂಟ್ ಫೋರಂನಿಂದ **'ರಾಷ್ಟ್ರೀಯ ಉದ್ಯೋಗ ರತ್ನ, ನಾಡ ರತ್ನ,** ಕನ್ನಡ ಸಾಂಸ್ಕೃತಿಕ ಸಂಘದ ವತಿಯಿಂದ **'ಆಯುರ್ವೇದ ತ್ರಿವಿಕ್ರಮ'** ಪ್ರಶಸ್ತಿಯನ್ನು ಪಡೆದಿದ್ದಾರೆ. ನಾಡಿನ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುವ ಶ್ರೀಯುತರು ಸಾದರು ಜಾತಿಯಲ್ಲಿನ ಹೆಮ್ಮೆಯ ಜನಪದ ವೈದ್ಯರೆಂದೇ ಹೇಳಬಹುದು.

ಜನವೈದ್ಯಕ್ಕೆ ಸಂಬಂಧಿಸಿದಂತೆ ಕೆಲಪ್ರಮುಖ ಅಂಶಗಳನ್ನು ಗಮನಿಸುವುದಾದರೆ-ಕೆಲವೊಮ್ಮೆ ದೊಡ್ಡವರಿಗಿಂತ ಚಿಕ್ಕಮಕ್ಕಳು ಬಹುಬೇಗ ಖಾಯಿಲೆಗೆ ಒಳಗಾಗುತ್ತಾರೆ. ಕೆಲವು ಮಕ್ಕಳು ಹುಟ್ಟುವಾಗಲೇ ಖಾಯಿಲೆ ಬಂದರೆ ಮತ್ತೆ ಕೆಲವು ಮಕ್ಕಳಿಗೆ ತಾಯಂದಿರು ತಿನ್ನುವ ಆಹಾರ ದೋಷದಿಂದ ಮತ್ತು ವಾತಾವರಣದ ಏರಿಳಿತಗಳಿಂದ ಖಾಯಿಲೆಗಳು ಬರುತ್ತವೆ.

ಹದಿಮೂರನೆಯ ಶತಮಾನದಲ್ಲಿದ್ದ ಮಹಾಕವಿ ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ 'ನಾಡ ಮದ್ದಂ ತಿಂದು ಕುತ್ತ ಕೆಡದಿರಬಹುದೇ' ಎಂದು ಜನಪದ ವೈದ್ಯಪದ್ಧತಿಯ ಮಹತ್ವವನ್ನು ಕುರಿತು ಪ್ರಶಂಸೆಯ ಮಾತುಗಳನ್ನಾಡಿದ್ದಾನೆ. ರಾಘವಾಂಕನ ಮಾತು ಅಕ್ಷರಶಃ ಸತ್ಯವಾದದ್ದೇ ಸರಿ. ಎಲ್ಲ ಬಗೆಯ ಖಾಯಿಲೆಗಳಿಗೂ ಜನಪದರಲ್ಲಿ ಔಷದಿಯುಂಟು.

ಚಿಕ್ಕಮಕ್ಕಳಿಗೆ 'ಕರಿಚೊವ್ವೆ' ರೋಗ ಬರುವುದುಂಟು. ಈ ರೋಗ ಬಂದಾಗ ಮೈ ಮೇಲೆ ಕಪ್ಪು ಬಣ್ಣದ ಚುಕ್ಕೆಯಾಗುವುದು. ಅಂತಹ ಸಂದರ್ಭದಲ್ಲಿ ಸೋರೆಬುರುಡೆಯ ಚೆಕ್ಕೆಯನ್ನು ನೀರಿನಲ್ಲಿ ತೇಯ್ದು ಮಗುವಿಗೆ ನೆಕ್ಕಿಸಿ ನಂತರ ಮೈಗೆ ಸವರಿದರೆ ಖಾಯಿಲೆ ಗುಣವಾಗುತ್ತದೆ. ಜನಪದ ವೈದ್ಯಪದ್ಧತಿಯಲ್ಲಿ ಮಕ್ಕಳ ವಯಸ್ಸಿನ ಆಧಾರದ ಮೇಲೆ ಔಷದಿಯ ಸ್ವರೂಪ ಮತ್ತು ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.

ಬಸುರಿ-ಬಾಣಂತಿಯರಿಗೆ ಹಲಬಗೆಯ ವಿಶಿಷ್ಟ ಖಾಯಿಲೆಗಳು ಬರುವುದುಂಟು, ಈ

ಖಾಯಿಲೆಗಳ ಸ್ವರೂಪವನ್ನು ಗುರುತಿಸಿ ಸೂಲಗಿತ್ತಿಯರು, ಮನೆಯ ಹಿರಿಯ ಹೆಂಗಸರು ಸೂಕ್ತವಾದ ಔಷದಿಯನ್ನು ನೀಡುತ್ತಾರೆ. ಬಾಣಂತಿಯರಿಗೆ ದಾವು ಆಗುವುದು, ಸನ್ನಿಯಾಗುವುದು, ಶೀತವಾಗುವುದು, ಮುಂತಾದ ತೊಂದರೆಗಳು ಸಂಭವಿಸದಂತೆ ಬಸುರಿ-ಬಾಣಂತಿಯರ ಆಹಾರ ಪದಾರ್ಥದಲ್ಲಿ ಕಟ್ಟುನಿಟ್ಟಾದ ಪಥ್ಯವನ್ನು ಅನುಸರಿಸಲಾಗುತ್ತದೆ.

'ಆರೋಗ್ಯವೇ ಭಾಗ್ಯ' ಎಂಬ ಗಾದೆಯಂತೆ ಪ್ರತಿಯೊಬ್ಬ ಮನುಷ್ಯನು ಒಳ್ಳೆಯ ಆರೋಗ್ಯಕ್ಕಾಗಿಯೇ ಹಂಬಲಿಸುತ್ತಾನೆ. ಉತ್ತಮ ಆರೋಗ್ಯವಿಲ್ಲದ ಮನುಷ್ಯ ಏನನ್ನೂ ಸಾಧಿಸಲಾರನಾದ್ದರಿಂದ ಆರೋಗ್ಯದ ಪ್ರಾಮುಖ್ಯತೆ ಎಂತಹುದು ಎಂಬುದು ತಿಳಿಯುತ್ತದೆ.ಇನ್ನು ಆರೋಗ್ಯ ಹದಗೆಟ್ಟಾಗ ಜನಪದ ವೈದ್ಯ ಖಾಯಿಲೆಯನ್ನು ಗುಣಪಡಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತಾನೆ.

ಜನಪದ ವೈದ್ಯದಲ್ಲಿ ಬಳಕೆಯಾಗುವ ಸಾಮಾಗ್ರಿಗಳು ನಮ್ಮ ಸುತ್ತಲಿನ ಪ್ರಾದೇಶಿಕ ಪರಿಸರದಲ್ಲಿಯೇ ಸುಲಭವಾಗಿ ದೊರಕುವಂತಹವುಗಳೇ ಆಗಿರುತ್ತವೆ. ಜೇನು ತುಪ್ಪ, ನಿಂಬೆಹಣ್ಣು, ಬಗೆ-ಬಗೆಯ ಸೊಪ್ಪುಗಳು, ನಾರು, ಬೇರುಗಳು, ತಾಮ್ರದ ತಗಡು, ಕೋಳಿಮೊಟ್ಟೆ, ಹಳ್ಳೆಣ್ಣೆ, ಉಪ್ಪು, ಮೆಣಸಿನಕಾಯಿ, ಹರಿಶಿನ, ಮಜ್ಜಿಗೆ, ವೀಳ್ಯದೆಲೆ, ಶುಂಠಿ, ಮೆಣಸು, ಬೆಳ್ಳುಳ್ಳಿ, ಮತ್ತಿತರ ಸಾಮಾಗ್ರಿಗಳು ಜನಪದ ವೈದ್ಯಪದ್ಧತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುತ್ತವೆ.

'ಆರೋಗ್ಯವೇ ಸಂಪತ್ತು, ಅನಾರೋಗ್ಯವೇ ವಿಪತ್ತು' ಎಂಬ ನಾಣ್ಣುಡಿಯಂತೆ ಜನಪದರು ತಮ್ಮ ಆರೋಗ್ಯ ಸುಧಾರಣೆಗಾಗಿ ಜನಪದ ವೈದ್ಯವನ್ನು ಕಂಡುಕೊಂಡರು. ಸಾದರು ತಮ್ಮ ಕೃಷಿಕಾರ್ಯದಲ್ಲಿ ನಿರತರಾದ ಸಂದರ್ಭದಲ್ಲಿ ಕೆಲವೊಮ್ಮೆ ಉಗುರು, ಕಣ್ಣಿಗೆ ಸೀಬು ಹೊಕ್ಕರೆ ಅದು ಅಲ್ಲೇ ಕೀವು ತುಂಬಿ ಊದಿಕೊಳ್ಳುತ್ತದೆ. ಆಗ ನಿಂಬೆಹಣ್ಣನ್ನು ಉಗುರುಸುತ್ತಾದ ಬೆರಳಿಗೆ ಸಿಕ್ಕಿಸಿಕೊಂಡರೆ ಸ್ವಲ್ಪಸಮಯದಲ್ಲೇ ಕೀವು ಆಚೆ ಬಂದು ನೋವು ಕಡಿಮೆಯಾಗುತ್ತದೆ.

ಸಾಮಾನ್ಯ ಅಜೀರ್ಣದಿಂದ ವಾಂತಿಯಾದರೆ ನಿಂಬೆಹಣ್ಣಿನ ಸಿಪ್ಪೆಯನ್ನು ಒಣಗಿಸಿ, ಸುಟ್ಟು ಪುಡಿಮಾಡಿ, ಜೇನುತುಪ್ಪದಲ್ಲಿ ಬೆರೆಸಿ ತಿಂದರೆ (ನೆಕ್ಕರೆ) ವಾಂತಿ ನಿಲ್ಲುತ್ತದೆ. ಸತ್ತ ಕೊಳಕುಮಂಡಲದ ಮೂಳೆ ತುಳಿದರೆ ಕಾಲು ಕೊಳೆಯುತ್ತದೆ. ಆಗ ಕೊಳೆಯುತ್ತಿರುವ ಭಾಗಕ್ಕೆ ತಾಮ್ರದ ತಗಡನ್ನು ಕಟ್ಟಿದರೆ ತಾಮ್ರ ವಿಷವನ್ನು ಹೀರುತ್ತದೆ. ಕ್ರಮೇಣ ಕೊಳೆಯುತ್ತಿದ್ದ ಭಾಗ ಕಪ್ಪಾಗಿ ನಂತರ ವಾಸಿಯಾಗುತ್ತದೆ.

ಸಾದರ ಪ್ರಮುಖ ಜನವೈದ್ಯರಲ್ಲಿ ಸಾರಗೊಂಡ್ಲು ಪಾರ್ವತಮ್ಮರವರು ಒರ್ವರಾಗಿದ್ದಾರೆ. ಇವರು ಕೈಮಸುಕು ತೆಗೆಯುವಲ್ಲಿ ನಿಪುಣರಾಗಿದ್ದಾರೆ. ಬಾಳೆಹಣ್ಣಿನಲ್ಲಿ ಔಷದಿ ಸಸ್ಯದ ಬೇರಿನ ಪುಡಿಯನ್ನು ಬೆರೆಸಿಕೊಟ್ಟು ಅದರಿಂದ ಕೈಮಸುಕು ತೆಗೆಯುತ್ತಾರೆ.

ಸಾಮಾನ್ಯವಾಗಿ ದಿನನಿತ್ಯದಲ್ಲಿ ಬರುವ ಕೆಲ ಖಾಯಿಲೆಗಳಿಗೆ ಸಾದರಲ್ಲಿ ಚಾಲ್ತಿಯಲ್ಲಿರುವ ಜನಪದ ವೈದ್ಯಪದ್ಧತಿಯ ಕ್ರಮವನ್ನು ಕುರಿತು ಅವಲೋಕಿಸುವುದಾದರೆ-

ನೆಗಡಿ:–

ನೆಗಡಿ ಒಂದು ಸಾಮಾನ್ಯ ಖಾಯಿಲೆಯಾದರೂ, ಅದನ್ನು ಅನುಭವಿಸುವವರಿಗೆ ಅದರ ಕಷ್ಟವೇನೆಂಬುದು ತಿಳಿದಿರುತ್ತದೆ. ಈ ಹಿನ್ನೆಲೆಯಲ್ಲಿಯೇ 'ನೆಗಡಿಗಿಂತ ಖಾಯಿಲೆ ಇಲ್ಲ, ಬುಗುಡಿಗಿಂತ ಒಡವೆ ಇಲ್ಲ' ಎಂಬ ನಾಣ್ನುಡಿ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

ಕಾಳುಮೆಣಸಿನಪುಡಿ, ಒಣಶುಂಠಿ, ತುಳಸಿಯಿಂದ ಮಾಡಿದ ಕಷಾಯವನ್ನು ದಿನಕ್ಕೆ ಮೂರ್‌ನಾಲ್ಕು ಬಾರಿ ಕುಡಿಯುವುದರಿಂದ ಮೂಗುಸೋರುವುದು, ಗಂಟಲಕೆರೆತ ಕಡಿಮೆಯಾಗುತ್ತದೆ. ಜೊತೆಗೆ ರೋಗನಿರೋಧಕ ಗುಣವನ್ನು ಹೊಂದಿರುವ ನಿಂಬೆಹಣ್ಣಿನ ರಸವನ್ನು ಸೇವಿಸುವುದರಿಂದ ನೆಗಡಿ ಕಡಿಮೆಯಾಗುತ್ತದೆ. ಒಂದು ನಿಂಬೆಹಣ್ಣಿನ ರಸವನ್ನು ಬೆಚ್ಚಗಿನ ನೀರಿನಲ್ಲಿ ಒಂದು ಚಮಚ ಜೇನು ತುಪ್ಪದೊಡನೆ ಬೆರೆಸಿ ದಿನಕ್ಕೆ ಎರಡುಬಾರಿ ಸೇವಿಸಿದರೆ ನೆಗಡಿ ಕಡಿಮೆಯಾಗುತ್ತದೆ.

ಅರಿಶಿನ ನೆಗೆಡಿಗೆ ಉತ್ತಮ ದಿವ್ಯಔಷದವೆಂದೇ ಹೇಳಬಹುದು. ಒಂದು ಲೋಟ ಹಾಲು ಸ್ವಲ್ಪ ಅರಿಶಿನ, ಶುಂಠಿ, ಕಾಳು ಮೆಣಸಿನ ಪುಡಿ, ಒಂದು ಏಲಕ್ಕಿ, ಸ್ವಲ್ಪ ಜೀರಿಗೆ, ಸ್ವಲ್ಪ ಬೆಲ್ಲವನ್ನು ಹಾಕಿ ಚೆನ್ನಾಗಿ ಕುದಿಸಿ ಎರಡುಬಾರಿ ಕುಡಿಯುವುದರಿಂದಲೂ ನೆಗಡಿ ಕಡಿಮೆಯಾಗುತ್ತದೆ. ಅರಿಶಿನದ ಪುಡಿಯನ್ನು ನೀರಿಗೆ ಹಾಕಿ ಕುದಿಸಿ ಅದರ ಆವಿಯನ್ನು ಉಸಿರಿನಲ್ಲಿ ತೆಗೆದುಕೊಳ್ಳುವುದರಿಂದ ಗಟ್ಟಿಯಾದ ಮೂಗಿನ ಸ್ರವಿಕೆ ತಿಳಿಯಾಗಿ ನೆಗಡಿ ಉಪಶಮನವಾಗುತ್ತದೆ.

ಕೆಂಡವನ್ನು ಒಂದು ಪಾತ್ರೆಯಲ್ಲಿ ತುಂಬಿಟ್ಟುಕೊಂಡು ಅದಕ್ಕೆ ಅರಿಶಿನ ಮತ್ತು ಸ್ವಲ್ಪ ರಾಗಿಯ ಹಿಟ್ಟನ್ನು ಹಾಕಿ ಅದರ ಹೊಗೆಯನ್ನು ಉಸಿರಾಡುವುದರಿಂದಲೂ ನೆಗಡಿ ಶಮನವಾಗುತ್ತದೆ. ನೆಲ್ಲಿಕಾಯಿ, ನಿಂಬೆಹಣ್ಣಿನ ಸೊಪ್ಪನ್ನು ಸೇವಿಸಬೇಕಾಗುತ್ತದೆ. ಮಳೆಯಲ್ಲಿ ನೆನೆಯದೆ ಎಚ್ಚರಿಕೆವಹಿಸಬೇಕು, ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಚಳಿಗೆ ಪೂರಕವಾದ ವಸ್ತ್ರವನ್ನು ಧರಿಸಬೇಕು. ಇದರಿಂದ ನೆಗಡಿಯಂತ ಖಾಯಿಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕೆಮ್ಮು:–

ದ್ರಾಕ್ಷಿ ಕೆಮ್ಮಿಗೆ ಬಹಳ ಉಪಯುಕ್ತವಾದ ಮದ್ದು. ಇದು ಕಫವನ್ನು ಕರಗಿಸಿ ನೆಗಡಿ–ಕೆಮ್ಮುಗಳನ್ನು ಉಪಶಮನಗೊಳಿಸುತ್ತದೆ. ಒಂದು ಲೋಟ ದ್ರಾಕ್ಷಿರಸಕ್ಕೆ ಒಂದು ಚಮಚ ಜೇನುತುಪ್ಪ ಬೆರೆಸಿ ದಿನಕ್ಕೆ ಎರಡು ಬಾರಿ ಕುಡಿಯಬೇಕು. ಒಣದ್ರಾಕ್ಷಿ ಮತ್ತು ಅದರಿಂದ ತಯಾರಿಸಿದ ರಸ ಕೆಮ್ಮಿಗೆ ಉತ್ತಮ ಔಷದಿ. ತುಳಸಿಯ ರಸವನ್ನು ಶುದ್ಧ ಜೇನು ತುಪ್ಪದೊಂದಿಗೆ ಬೆರೆಸಿ ದಿನಕ್ಕೆರಡು ಬಾರಿ ಸೇವಿಸುವುದರಿಂದ ಕೆಮ್ಮು ಉಪಶಮನವಾಗುತ್ತದೆ. ಹಾಗೆಯೇ ವೀಳ್ಯದೆಲೆಯನ್ನು ಲವಂಗ, ತುಳಸಿ ಎಲೆಯೊಂದಿಗೆ ಸೇರಿಸಿ ತಿನ್ನುವುದರಿಂದ ಕೆಮ್ಮು ಉಪಶಮನವಾಗುತ್ತದೆ.

ಬಾಳೆಹಣ್ಣನ್ನು ಕರಿಮೆಣಸಿನ ಚೂರ್ಣದೊಂದಿಗೆ ಸೇವಿಸುತ್ತಿದ್ದರೆ ಕೆಮ್ಮು ನಿವಾರಣೆಯಾಗುತ್ತದೆ. ನಾಲ್ಕೈದು ಲವಂಗಗಳನ್ನು ಹಗುರಾಗಿ ಹುರಿದು, ಒಂದು ತುಂಡು

ಬೆಲ್ಲದೊಂದಿಗೆ ಅಗಿದು ತಿಂದರೆ ಕೆಮ್ಮು ನಿವಾರಣೆಯಾಗುತ್ತದೆ. ಮೂಲಂಗಿ ರಸ ಮತ್ತು ಜೇನುತುಪ್ಪ ಸಮಪ್ರಮಾಣದಲ್ಲಿ ಮಿಶ್ರಮಾಡಿ ಒಂದು ಊಟದ ಚಮಚದಷ್ಟು ಮಿಶ್ರಣವನ್ನು ದಿನಕ್ಕೆ ಮೂರುಬಾರಿ ಸೇವಿಸುತ್ತಿದ್ದರೆ ಕೆಮ್ಮು ಗುಣವಾಗುತ್ತದೆ.

ಸಾಧಾರಣ ಜ್ವರ:-

ಬೇವಿನ ಸೊಪ್ಪಿನ ರಸ ಜ್ವರಕ್ಕೆ ಒಳ್ಳೆಯ ಔಷದಿ. ಒಂದು ಚಮಚೆಯಷ್ಟು ಬೇವಿನ ರಸವನ್ನು ಎರಡು ಚಮಚೆ ಜೇನುತುಪ್ಪದೊಂದಿಗೆ ಬೆರೆಸಿ ದಿನಕ್ಕೆ ಎರಡುಬಾರಿ ಸೇವಿಸಿದರೆ ಜ್ವರ ನಿವಾರಣೆಯಾಗುತ್ತದೆ.

ಸಮಯಕ್ಕೆ ಸರಿಯಾಗಿ, ಮಿತವಾಗಿ ಕ್ರಮವರಿತು ಉತ್ತಮ ಪೋಷಕಾಂಶಗಳಿಂದ ಕೂಡಿದ ಆಹಾರ ಸೇವಿಸುತ್ತಿದ್ದರೆ ದೇಹದ ಬೆಳವಣಿಗೆಯಾಗುವುದು, ನಶಿಸಿಹೋಗಿರುವ ಅಂಗಾಂಶಗಳ ಪುನರುಜ್ಜೀವನ ಕಾರ್ಯ ನಡೆಸಲು ಸಹಾಯಕವಾಗುವುದು, ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾದ ಶಕ್ತಿಯು ಬಿಡುಗಡೆಯಾಗುವುದು ಮತ್ತು ಆರೋಗ್ಯ ರಕ್ಷಣೆಯಾಗುವುದು, ಕೆಲವೊಮ್ಮೆ ತಿನ್ನುವ ಆಹಾರದಲ್ಲಿ ಏರು-ಪೇರು ಸಂಭವಿಸಿದರೆ ರೋಗ-ರುಜಿನಗಳು ಬರುತ್ತವೆ. ಅಂತಹ ಸಂದರ್ಭದಲ್ಲಿ ಸಸ್ಯಮೂಲ ಔಷದಿಗಳ ಪ್ರಯೋಗದಿಂದ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ನಾವು ಸೇವಿಸುವ ಆಹಾರ ಕ್ರಮದಲ್ಲಿ ಏರು-ಪೇರು ಸಂಭವಿಸಿ ಜ್ವರ ಉಲ್ಬಣಿಸಿದಾಗ ಅಡುಗೆ ಉಪ್ಪು ಕದಡಿದ ತಣ್ಣನೆಯ ನೀರಿನಲ್ಲಿ ಅದ್ದಿದ ಬಟ್ಟೆಯ ಮಡಿಕೆಯನ್ನು ಹಣೆಯ ಮೇಲಿಡುವುದರಿಂದ ಜ್ವರದ ತಾಪ ತಗ್ಗುವುದು.

ಅಳಲೆಕಾಯಿಯನ್ನು ಶುಂಠಿ ರಸದಲ್ಲಿ ತೇದು ಗಂಧ ತೆಗೆದು ಅದನ್ನು ಜೇನುತುಪ್ಪದಲ್ಲಿ ರಂಗಳಿಸಿ ನಾಲಗೆಯ ಮೇಲೆ ಸವರುವುದರಿಂದ ಅಥವಾ ತಿನ್ನುವುದರಿಂದ ಜ್ವರ ವಾಸಿಯಾಗುತ್ತದೆ. ಜೊತೆಗೆ ಬಾಳೆಗೊನೆಯ ಕಾಂಡವನ್ನು ಒಂದು ಗೇಣು ಕತ್ತರಿಸಿಕೊಂಡು ಇದನ್ನು ಸ್ವಲ್ಪ ನೀರಿನಲ್ಲಿ ಇಡೀ ರಾತ್ರಿ ನೆನೆಹಾಕಿ ಮರುದಿನ ಬೆಳಗ್ಗೆ ಆ ನೀರನ್ನು ಕುಡಿಯುವುದರಿಂದ. ಸ್ವಲ್ಪಹೊತ್ತಿನ ನಂತರ ದೇಹ ಅತಿಯಾಗಿ ಬೆವರುವುದರಿಂದ ಜ್ವರದ ತಾಪ ಇಳಿಯುವುದು.

ಕೆಲವೊಮ್ಮೆ ದೀರ್ಘಕಾಲದ ಜ್ವರ ಪೀಡಿತರಾಗಿರುವಂತಹ ಸಂದರ್ಭದಲ್ಲಿ ಬೇವಿನ ಮರದ ತೊಗಟೆಯ ಒಳಪದರವನ್ನು ಕೆತ್ತಿ ತೆಗೆದು ಅದನ್ನು ಕುದಿಯುವ ನೀರಿಗೆ ಹಾಕಿ ಗಟ್ಟಿಯಾಗಿ ಕಷಾಯ ಮಾಡಿ, ಪ್ರತಿದಿನ ಬೆಳಗ್ಗೆ ಸ್ವಲ್ಪ ಕಷಾಯವನ್ನು ರೋಗಿಗೆ ಕುಡಿಸುತ್ತಿದ್ದರೆ ಒಂದು ವಾರದೊಳಗೆ ಜ್ವರ ಸಂಪೂರ್ಣವಾಗಿ ಬಿಟ್ಟುಹೋಗುವುದು.

ತಲೆನೋವು:-

ನಿಂಬೆಹಣ್ಣು ತಲೆನೋವಿಗೆ ಪರಿಣಾಮಕಾರಿ ಔಷದಿ, ಒಂದು ಲೋಟ ನೀರಿಗೆ ನಿಂಬೆಹಣ್ಣು ರಸವನ್ನು ಹಾಕಿ ಸೇವಿಸುವುದರಿಂದ ತಲೆನೋವು ನಿವಾರಣೆಯಾಗುತ್ತದೆ. ನುಗ್ಗೆ ಸೊಪ್ಪಿನ ರಸದಲ್ಲಿ ಕರಿಮೆಣಸು ತೇದು ಗಂಧತೆಗೆದು ಅದನ್ನು ಹಣೆಗೆ ಲೇಪಿಸುವುದು, ಮೃದುವಾದ ಬೇವಿನ ಎಲೆಯನ್ನು ಕುಟ್ಟಿ ರಸಹಿಂಡಿ, ಒಂದೆರಡು ಟೀ ಚಮಚಗಳಷ್ಟು ರಸ ಸೇವಿಸಿದ್ದಲ್ಲಿ ತಲೆನೋವು ನಿವಾರಣೆಯಾಗುವುದು.

ಕೆಲವೊಮ್ಮೆ ಬಿಸಿಲಿನ ಝಳಕ್ಕೆ ತಲೆನೋವು ಉಂಟಾಗಿದ್ದಲ್ಲಿ, ನಿಂಬೆಹಣ್ಣಿನ ಸಿಪ್ಪೆಯನ್ನು ನುಣ್ಣಗೆ ಅರೆದು ಹಣೆಗೆ ಪಟ್ಟುಹಾಕುವುದರಿಂದ ತಲೆಸೋವು ನಿವಾರಣೆಯಾಗುತ್ತದೆ. ಈರುಳ್ಳಿಯನ್ನು ನೀರಿನೊಂದಿಗೆ ಅರೆದು ಆ ತೊಕ್ಕನ್ನು ಅಂಗಾಲಿಗೆ ಹಚ್ಚಿ ವಿರಮಿಸುವುದು, ದಾಲ್ಚಿನ್ನಿಯನ್ನು ನಿಂಬೆರಸದಲ್ಲಿ ತೇದು ಗಂಧ ತೆಗೆದು ಅದನ್ನು ಹಣೆ ಮತ್ತು ಕೆನ್ನೆಗೆ ಲೇಪಿಸುವುದರಿಂದ ತಲೆನೋವಿನಿಂದ ಬಿಡುಗಡೆಯನ್ನು ಪಡೆಯಬಹುದು.

ಹಲ್ಲುನೋವು:-

'ಒಲೆಗೊಂದು ಕೊರಡು, ಮನೆಗೊಂದು ಮುದುಕಿ' ಇರಬೇಕೆಂಬುದು ಅನುಭವದ ಮಾತು, ಮುದುಕಿಯು ತಾನು ಬದುಕಿನಲ್ಲಿ ಕಂಡುಂಡ ಕಹಿ-ಸಿಹಿ ವಿಚಾರಗಳ ಅನುಭವಾಮೃತವನ್ನು ಮುಂದಿನ ಪೀಳಿಗೆಗೆ ಧಾರೆ ಎರೆಯುತ್ತಾಳೆ. ಈ ನಿಸ್ವಾರ್ಥ ಸೇವೆ ಕೌಟುಂಬಿಕ ಸೌಖ್ಯದ ಅಡಿಗಲ್ಲು ಎಂದೇ ಹೇಳಬಹುದು. ಈ ನಿಟ್ಟಿನಲ್ಲಿ ಸಹಿಸಲಸಾಧ್ಯವಾದ ಹಲ್ಲುನೋವಿಗೂ ಜನಪದರಲ್ಲಿ ಹಲವು ಬಗೆಯ ಔಷದಿಗಳಿರುವುದನ್ನು ಗುರುತಿಸಬಹುದು.

ಹಲ್ಲುನೋವಿರುವಲ್ಲಿಗೆ ತುಳಸಿ ಸೊಪ್ಪು, ಲವಂಗ ಇಡುವುದು, ಹೊಗೆಸೊಪ್ಪನ್ನಿಡುವುದು, ನೀಲಗಿರಿ ಎಣ್ಣೆಯನ್ನು ಹತ್ತಿಯಲ್ಲಿ ನೆನೆಸಿ ಹಲ್ಲಿನ ಮೇಲ್ಭಾಗದಲ್ಲಿ ಇಟ್ಟುಕೊಳ್ಳುವುದು, ಬಿಸಿ ನೀರಿನಲ್ಲಿ ಉಪ್ಪು ಮತ್ತು ನಿಂಬೆಹಣ್ಣಿನ ರಸವನ್ನು ಹಾಕಿ ಬಾಯಿ ಮುಕ್ಕಳಿಸುವುದರಿಂದ ಹಲ್ಲುನೋವು ಕಡಿಮೆಯಾಗುತ್ತದೆ. ಬೆಳ್ಳುಳ್ಳಿ ಹಲ್ಲುನೋವಿನ ನಿವಾರಣೆಯಲ್ಲಿ ಉತ್ತಮಪಾತ್ರ ವಹಿಸುತ್ತದೆ. ಬೆಳ್ಳುಳ್ಳಿಯ ಒಂದು ಎಸಳನ್ನು ಸ್ವಲ್ಪ ಉಪ್ಪಿನೊಂದಿಗೆ ತೊಂದರೆಯಾದ ಹಲ್ಲಿನ ಮೇಲಿಡುವುದು, ದಿನವೂ ಒಂದೆಸಳು ಬೆಳ್ಳುಳ್ಳಿಯನ್ನು ಅಗಿಯುವುದರಿಂದ ಹಲ್ಲು ಗಟ್ಟಿಗೊಳ್ಳುತ್ತದೆ, ನೋವು ನಿವಾರಣೆಯಾಗುತ್ತದೆ. ಈರುಳ್ಳಿಯನ್ನು ಪ್ರತಿನಿತ್ಯ ಬೆಳಗ್ಗೆ ಅಗಿದು ತಿಂದರೆ ಅನೇಕ ಹಲ್ಲುರೋಗಗಳು ಬರುವುದಿಲ್ಲ. ಕೊಳೆತಹಲ್ಲು ಅಥವಾ ವಸಡಿನ ಮೇಲೆ ಈರುಳ್ಳಿ ಮತ್ತು ತುಳಸಿಸೊಪ್ಪನ್ನಿಡುವುದರಿಂದ ನೋವು ನಿವಾರಣೆಯಾಗುತ್ತದೆ.

ನಿಂಬೆಹಣ್ಣಿನ ರಸ ಹಲ್ಲುಗಳ ಹಾಗೂ ದೇಹದ ಮೂಳೆಗಳ ಆರೋಗ್ಯವನ್ನು ಕಾಪಾಡುತ್ತದೆ. ಜೊತೆಗೆ ಹಲ್ಲು ಕೊಳೆಯುವುದು, ಸಡಿಲಗೊಳ್ಳುವುದು, ಹುಳುಕಲ್ಲು ಮತ್ತು ವಸಡುಗಳಿಂದ

ರಕ್ತಸ್ರಾವವನ್ನು ನಿಯಂತ್ರಿಸುತ್ತದೆ. ಹಲ್ಲುನೋವಿನ ನಿವಾರಣೆಯಲ್ಲಿ ಲವಂಗ ಪ್ರಮುಖ ಪಾತ್ರ ವಹಿಸುತ್ತದೆ. ಲವಂಗದ ಎಣ್ಣೆಯನ್ನು ಕೊಳೆತ ಹಲ್ಲಿನ ಮೇಲೆ ಹಚ್ಚಿದರೆ ಹಲ್ಲುನೋವು ನಿವಾರಣೆಯಾಗುತ್ತದೆ.

ಜನಪದ ವೈದ್ಯಪದ್ಧತಿಯು ಮೌಖಿಕ ಸಂಪ್ರದಾಯ ಮುಖೇನ ಸಾಗುತ್ತದೆ. ರೋಗದ ನಿವಾರಣೆಗೆ ಉಪಯೋಗಿಸುವಂತಹ ಔಷದಿ ಸಸ್ಯಗಳು ಮೌಖಿಕ ಸಂಪ್ರದಾಯದಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ, ಕೆಲವೊಮ್ಮೆ ವಂಶಪಾರಂಪರ್ಯವಾಗಿ ಮತ್ತೆ ಕೆಲವೊಮ್ಮೆ ಗೌಪ್ಯವಾಗಿ ಮುಂದುವರೆಯುತ್ತದೆ. ಈ ವೈದ್ಯ ಪದ್ಧತಿಯು ವಿವಿಧ ಪ್ರದೇಶಗಳಲ್ಲಿ ವಿವಿದ ಬಗೆಯಲ್ಲಿ ಗೋಚರಿಸುತ್ತವೆ. ಕೆಲವೊಮ್ಮೆ ಸ್ವತಂತ್ರ್ಯವಾಗಿಯೂ ಮತ್ತೆ ಕೆಲವೊಮ್ಮೆ ಸ್ವೀಕರಣೆಯ ವಿಧಾನದ ಮುಖೇನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜನಪದ ವೈದ್ಯ ಪದ್ಧತಿಯು ಹರಡುತ್ತದೆ. ಇಲ್ಲಿ ನಂಬಿಕೆಯೇ ಮೂಲ ಬಂಡವಾಳವಾಗಿರುತ್ತದೆ. ಜನಪದ ವೈದ್ಯಪದ್ಧತಿಯಲ್ಲಿ ಪ್ರಮುಖವಾಗಿ ಬಳಕೆಯಾಗುವ ಔಷದೀಯ ಸಸ್ಯಗಳೆಂದರೆ ಶ್ರೀತುಳಸಿ, ತುಂಬೆ ಗಿಡ, ಅರಿಶಿನ, ಎಕ್ಕದ ಗಿಡ, ಬಿಲ್ವ ವೃಕ್ಷ, ಶ್ರೀಗಂಧ, ಅರಳಿ, ಸಿಹಿಬೇವು, ವೀಳೆದೆಲೆ, ಮಾವಿನಗಿಡ, ಗರಿಕೆ, ಅಮೃತ ಬಳ್ಳಿ, ಇತ್ಯಾದಿ ಗಿಡಗಳ ಎಲೆ, ಬೇರು, ತೊಗಟೆ, ಕಾಯಿಗಳು ಔಷಧಿ ತಯಾರಿಕೆಯಲ್ಲಿ ಬಳಕೆಯಾಗುತ್ತವೆ.

ಮಾವಿನ ಚಿಗುರೆಲೆಗಳನ್ನು ಸಂಗ್ರಹಿಸಿ ಅದರಿಂದ ಕಷಾಯವನ್ನು ತಯಾರಿಸಿ ಸೇವಿಸುವುದರಿಂದ ಅತಿಸಾರವನ್ನು ನಿಯಂತ್ರಿಸಬಹುದು. ಹಾಗೆಯೇ ಜನಪದ ವೈದ್ಯಪದ್ಧತಿಯಲ್ಲಿ ಬೇವು ಪ್ರಮುಖಪಾತ್ರ ವಹಿಸುತ್ತದೆ. ನಮ್ಮ ನಾಲಿಗೆಗೆ ಸಿಹಿ ಎಷ್ಟು ಪ್ರಿಯವೋ ವೈದ್ಯನಿಗೆ ಬೇವಿನ ಕಹಿಯು ಅಷ್ಟೇ ಪ್ರಿಯ. ಬೇವಿನ ಹೂವು, ಬೇವಿನ ಸೊಪ್ಪು, ಬೇವಿನ ತೊಗಟೆ, ಬೇವಿನ ಎಣ್ಣೆ ಇವುಗಳಿಂದ ಹಲವಾರು ರೋಗಗಳನ್ನು ಗುಣಪಡಿಸಬಹುದು. ನಂಜುನಾಶಕ ಗುಣವುಳ್ಳ ಬೇವು ರೋಗಗಳಿಗೆ ಸಿದ್ಧೌಷದಿಯಾಗಿದೆ ಎಂದು ಹೇಳಬಹುದು. ಚರ್ಮದ ಮೇಲೆ ಬಿಳಿಮಚ್ಚೆ, ಚಿಕ್ಕ-ಚಿಕ್ಕ ಗುಳ್ಳೆಗಳು ಏಳುವುದು, ತುರಿಕೆ ಉಂಟಾದಾಗ ಬೇವಿನ ಸೊಪ್ಪನ್ನು ನೀರಿನೊಂದಿಗೆ ಹದವರಿತು ಕುದಿಸಿ ನಂತರ ಅದನ್ನು ಶೋಧಿಸಿ ಸೂರ್ಯೋದಯದ ಸಮಯಕ್ಕೆ ಸರಿಯಾಗಿ ಬೇವಿನ ಕಷಾಯವನ್ನು ಕುಡಿದು ಒಂದು ತಾಸು ಮಲಗಿ ವಿಶ್ರಾಂತಿ ಪಡೆಯುವುದರಿಂದ ಹಲಬಗೆಯ ಚರ್ಮಸಂಬಂಧಿಯಾದ ಖಾಯಿಲೆಗಳು ನಿವಾರಣೆಯಾಗುತ್ತವೆ.

'ಇಸುಬು' ಆದಾಗ ದತ್ತೂರಿ ಗಿಡದ ಹಾಲನ್ನು ಅಥವಾ ಗಿಡದ ಮೇಲ್ಭಾಗವನ್ನು ಕತ್ತರಿಸಿದಾಗ ಬರುವ ಹಳದಿ ವರ್ಣದ ದ್ರವವನ್ನು ಲೇಪಿಸುವುದರಿಂದ ಇಸುಬು ನಂಜಾಗುವುದು ನಿಂತು ಗಾಯ ಮಾಯುತ್ತದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಶಬ್ದಮಾಲಿನ್ಯ ಮತ್ತು ಮಾನಸಿಕ ಒತ್ತಡದಿಂದ ಬರುವ ಅರೆತಲೆನೋವಿನ ನಿವಾರಣೆಗೆ ಜನಪದರಲ್ಲಿ ಬಹು ಸರಳ ನಿವಾರಣೋಪಾಯವಿದೆ. ಅದೆಂದರೆ

ತುಂಬೆಯ ಸೊಪ್ಪನ್ನು ನುಣ್ಣಗೆ ಅರೆದು ಬಿಸಿಮಾಡಿ ಸರಿಯ ರೀತಿಯಲ್ಲಿರುವ ಆ ಲೇಪನವನ್ನು ಹದವರಿತು ಹಣೆಗೆ ಲೇಪಿಸುವುದರಿಂದ ಅರೆತಲೆನೋವು ನಿವಾರಣೆಯಾಗುತ್ತದೆ.

ಅರಿಶಿನ ಮತ್ತು ಕರಿಮೆಣಸು ಸಮಪಾಲು ತೆಗೆದುಕೊಂಡು ನುಣ್ಣಗೆ ಪುಡಿಮಾಡಿ ಎಳ್ಳಿನ ಎಣ್ಣೆಯಲ್ಲಿ ಬೆರೆಸಿ ಅದನ್ನು ಕಾಯಿಸಿ ಮೈಗೆ ಹಚ್ಚುವುದರಿಂದ ತುರಿಕೆ ನಿವಾರಣೆಯಾಗುತ್ತದೆ. ಇನ್ನು ಗುಡ್ಡಗಾಡುಗಳಲ್ಲಿ ಬೆಳೆದಿರುವ ಗುಬಚಿ ಹೂವನ್ನು ಸೇವಿಸುವುದರಿಂದ ಅಸಾಧ್ಯವಾದ ಕೆಮ್ಮು ನಿವಾರಣೆಯಾಗುತ್ತದೆ.

ಕೆಟ್ಟ ಹುಳುಗಳು ಹರಿದಾಡುವ ಜಾಗವನ್ನು ಸ್ಪರ್ಶಿಸಿದಾಗ ಹುಳುಕಡ್ಡಿಯಾಗುತ್ತದೆ. ಆಗ ರಾಮಗುಳಿಕಾಯಿಯನ್ನು ಹಚ್ಚುವುದರಿಂದ ಮತ್ತು ಹಂಚಿಕಡ್ಡಿಯನ್ನು ಉಳುಕಡ್ಡಿಯ ಮೇಲಿಟ್ಟು ಮಂತ್ರಿಸಿ ಮುರಿಯುವುದರಿಂದ ಉಳುಕಡ್ಡಿಯು ನಿವಾರಣೆಯಾಗುತ್ತದೆ.

ನಮ್ಮ ಪ್ರಾದೇಶಿಕ ಪರಿಸರದಲ್ಲೇ ದೊರೆಯುವ ಗಿಡ, ಮರ, ಬಳ್ಳಿಗಳು ಹಲವು ಮಾರಕರೋಗಗಳನ್ನು ಗುಣಪಡಿಸುವ ನಿವಾರಣಾ ಗುಣವನ್ನು ಹೊಂದಿರುತ್ತದೆ.

ಉದಾಹರಣೆಗೆ:- H_1N_1 ಜ್ವರ ಇತ್ತೀಚಿನ ದಿನಗಳಲ್ಲಿ ಜನತೆಯನ್ನು ಭೀಕರವಾಗಿ ಕಾಡುವಂತಹುದ್ದಾಗಿದೆ. ಈ ರೋಗಕ್ಕೆ ಅಮೃತಬಳ್ಳಿಯೇ ದಿವ್ಯೌಷಧಿಯಾಗಿದೆ. ಇನ್ನು ದುರ್ದೆಯಾದಾಗ ಈಶ್ವರನ ಸೊಪ್ಪನ್ನು ಹಚ್ಚಿದರೆ ವಾಸಿಯಾಗುತ್ತದೆ. ಸೊಂಟ ನೋವಿಗೆ ಉಸಿರುಮದ್ದಿನ ಸೊಪ್ಪನ್ನು ಹಚ್ಚಲಾಗುತ್ತದೆ. ಚಿಕ್ಕಮಕ್ಕಳಿಗೆ ಪೈತ (ಚಿಕ್ಕ-ಚಿಕ್ಕ ಗುಳ್ಳೆ) ಏಳುವುದು ಸಾಮಾನ್ಯ. ಆಗ ಅಡಕೆಪಟ್ಟೆ ಸುಟ್ಟು ಅದರ ಮಸಿಯನ್ನು ಹಚ್ಚಿದರೆ ಪೈತ ವಾಸಿಯಾಗುತ್ತದೆ.

ಇನ್ನು ಎಳೆಯ ಮಗುವಿಗೆ ಜಾಕಾಯಿ, ಗೊರೋಜನ, ಅಳಲೆ ಕಾಯಿಯನ್ನು ತಾಯಿಯ ಎದೆಹಾಲಿನಲ್ಲಿ ತೇದು ನಾಲಿಗೆಗೆ ಸೋರಿಸಲಾಗುತ್ತದೆ. ಇದರಿಂದ ಖಾಯಿಲೆ ಬರುವುದನ್ನು ತಡೆಯಬಹುದು ಎಂಬುದು ಜನಪದ ವೈದ್ಯರ ಅಭಿಪ್ರಾಯ. ಮಗುವಿಗೆ ಜ್ವರ, ನೆಗಡಿ, ಕೆಮ್ಮು ಬಂದಾಗ ತುಳಸಿ ಮತ್ತು ಮಳೆಕಾಳಿನ ಸೊಪ್ಪಿನ ರಸವನ್ನು ವೀಳೆದೆಲೆ ರಸದೊಂದಿಗೆ ಮಗುವಿಗೆ ತಿನ್ನಿಸಿದರೆ ರೋಗ ನಿವಾರಣೆಯಾಗುತ್ತದೆ.

ಮಗುವಿಗೆ ಜ್ವರ ಬಂದಾಗ ಕಣ್ಣಿನರೆಪ್ಪೆ ಎಳೆದಂತಿದ್ದರೆ ಅದಕ್ಕೆ ಬಾಲಗ್ರಹವಾಗಿದೆ ಎಂದು ತಿಳಿಯಲಾಗುತ್ತದೆ. ಆಗ ಮಗುವಿಗೆ ಬಾಲಗ್ರಹ ತಾಯಿತವನ್ನು ಹಾಕಿಸುವುದು, ಕಪ್ಪುಬಳೆಯ ಚೂರನ್ನು ದೀಪದ ಉರಿಯಲ್ಲಿ ಕಾಯಿಸಿ ತಲೆಯ ಸುಳಿ, ಕೈ ಬೆಟ್ಟು ಮತ್ತು ಕಾಲಿನ ಹೆಬ್ಬೆರಳಿಗೆ ಸುಟಿಕೆ ಹಾಕಲಾಗುತ್ತದೆ. ತದನಂತರ ಓಕಳಿ ನೀರನ್ನು ಮಾಡಿ ಅದಕ್ಕೆ ಒಂದು ವೀಳೆದೆಲೆ, ಒಂದು ಅಡಿಕೆಯನ್ನು ಹಾಕಿ ಅದನ್ನು ಮಗುವಿಗೆ ನೀವಳಿಸಿ ಮೂರು ದಾರಿ ಸೇರುವ ಕಡೆ ಅದನ್ನು ಚೆಲ್ಲಲಾಗುತ್ತದೆ. ತದನಂತರ ಸ್ವಲ್ಪ ಅನ್ನ, ಅರಿಶಿನ-ಕುಂಕುಮವನ್ನು ಹಾಕಿ, ಒಂದು ಈರುಳ್ಳಿ, ಊದುಬತ್ತಿಯನ್ನಿಟ್ಟು ಅದನ್ನು ಮಗುವಿಗೆ ನೀವಳಿಸಿ ಊರಾಚೆ ಇರುವ ಒಂದು ಮರದಕೆಳಗೆ ಇಟ್ಟು

ಹಿಂದಕ್ಕೆ ನೋಡದಂತೆ ಬರಬೇಕು. ಇದರಿಂದ ಬಾಲಗ್ರಹ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ.

ಚಿಕ್ಕ ಮಕ್ಕಳು ಕೆಟ್ಟ ಜಾಗದಲ್ಲಿ ಬೀಳುವುದರಿಂದ ಅವರಿಗೆ ಬಿದ್ದಬೀಳು ಆಗುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ದುಷ್ಟಶಕ್ತಿಗಳ ಕಾಟದಿಂದ ಬರುವ ಈ ರೋಗ ನಿವಾರಣೆಗಾಗಿ ವಿಧವೆಯ ಕೈಯಿಂದ ಹಲವು ಆಚರಣೆಗಳನ್ನು ಮಾಡಿಸಲಾಗುತ್ತದೆ. ಒಂದು ಗೌರಿ ಮರದಲ್ಲಿ ಅಕ್ಕಿ, ಬೇಳೆ, ಬೆಂಕಿ ಕಡ್ಡಿ, ಈರುಳ್ಳಿ, ಬೆಳ್ಳುಳ್ಳಿ, ಒಂದೇ ತರಹದ ಸೌದೆಮುಳ್ಳೆ, ಬಿಳಿಯ ಬಟ್ಟೆ, ಅನ್ನ ಇಜ್ಜಲಪುಡಿ, ಒಂದು ಊದುಬತ್ತಿ, ಆರಿಶಿನ-ಕುಂಕುಮ, ಒಂದು ವೀಳೆದೆಲೆ, ಒಂದು ರೂಪಾಯಿ ನಾಣ್ಯ ಎಲ್ಲವನ್ನೂ ಇಟ್ಟು ಒಂದು ಎಣ್ಣೆ ಬಟ್ಟೆಯನ್ನು ಸಣ್ಣ ಕಡ್ಡಿಯೊಂದಕ್ಕೆ ಸುತ್ತಿ ಅದಕ್ಕೆ ಬೆಂಕಿ ಹಚ್ಚಿ ಮಗುವಿಗೆ ನೀವಳಿಸಿ ನಂತರ ಮರವನ್ನು ನೀವಳಿಸಿ ಮೂರುದಾರಿ ಸೇರುವಲ್ಲಿ ಚಿಕ್ಕ ಗುಂಡಿಯನ್ನು ಮಾಡಿ ಅದರಲ್ಲಿ ಈ ಎಲ್ಲಾ ಸಾಮಾಗ್ರಿಗಳನ್ನು ಹಾಕಿ ಅದರ ಮೇಲೊಂದು ಮೇಟಿಕಲ್ಲು ಇಡಲಾಗುತ್ತದೆ. ಅದರ ಮೇಲೆ ಅರಿಶಿನ-ಕುಂಕುಮವನ್ನು ಹಾಕಲಾಗುತ್ತದೆ. ಇದರಿಂದ ಬಿದ್ದಬೀಳು ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ.

ಹೀಗೆ ಜನಪದ ವೈದ್ಯಪದ್ಧತಿಯಲ್ಲಿ ದುಷ್ಟಶಕ್ತಿಗಳು ರೋಗಗಳನ್ನು ಸೃಷ್ಟಿಸುತ್ತವೆ ಎಂಬ ನಂಬಿಕೆ ಬಲವಾಗಿದೆ. ಜೊತೆಗೆ ಅಂತಹ ರೋಗದ ನಿವಾರಣೆಯಲ್ಲಿ ಮಾಟ-ಮಂತ್ರಗಳು ಪರಿಣಾಮಕಾರಿಯಾದದ್ದು ಎಂಬ ಮೂಢ ನಂಬಿಕೆಗಳು ಜನಪದರಲ್ಲಿ ಹೇರಳವಾಗಿ ದೊರೆಯುತ್ತವೆ. ಆದರೆ ಕಾಕತಾಳೀಯವೆಂಬಂತೆ ಕೆಲವೊಮ್ಮೆ ರೋಗ ಗುಣವಾದರೆ ಇದರಿಂದ ಜನರ ನಂಬಿಕೆ ಮತ್ತಷ್ಟು ಬಲವಾಗಿ ಬೇರೂರುತ್ತದೆ. ಗುಣಪಡಿಸಲಸಾಧ್ಯವಾದಂತಹ ಕಾಲರ ರೋಗಕ್ಕೂ ಜನಪದರಲ್ಲಿ ಔಷಧವಿದೆ. ಚೆನ್ನಾಗಿ ಬಲಿತ ಎಕ್ಕದ ಗಿಡದ ಬೇರಿನ ತೊಗಟೆ ಮತ್ತು ಅಷ್ಟೇ ತೂಕದ ಹಸಿ ಶುಂಠಿಯನ್ನು ಈರುಳ್ಳಿಯೊಂದಿಗೆ ನುಣ್ಣಗೆ ಅರೆದು, ಚಿಕ್ಕ-ಚಿಕ್ಕ ಗುಳಿಗೆಗಳನ್ನು ತಯಾರಿಸಿ ಅದನ್ನು ಅರ್ಧ ತಾಸಿಗೊಮ್ಮೆ ಬಿಸಿನೀರಿನಲ್ಲಿ ಜೇನುತುಪ್ಪದಲ್ಲಿ ಸೇವಿಸುತ್ತಿದ್ದರೆ ಕಾಲರಾರೋಗ ನಿವಾರಣೆಯಾಗುತ್ತದೆ. ಹಾಗೆಯೇ ಕೃಷಿಕಾರ್ಯ ನಿರ್ವಹಿಸುವಾಗ ಮುಳ್ಳು ಅಥವಾ ಸೀಬು ಕೈ-ಕಾಲುಗಳ ಒಳಗೆ ಸೇರಿ ತೆಗೆಯಲು ಬಾರದಿದ್ದರೆ ಆಗ ಎಕ್ಕದ ಹಾಲನ್ನು ಹಚ್ಚಿದರೆ ನೋವು ಕಡಿಮೆಯಾಗಿ ಮುಳ್ಳು ಹೊರಬರುತ್ತದೆ.

ಸಮಯಕ್ಕೆ ಸರಿಯಾಗಿ ಹಸಿವಾಗದೇ ಇರುವುದನ್ನು ಜನಪದರು ಕೈಮಸುಕು ಇಕ್ಕಿರುವುದೆಂದು ಭಾವಿಸುತ್ತಾರೆ. ತಮಗೆ ಆಗದವರು ಅಥವಾ ತಮ್ಮ ಶತ್ರುಗಳು ಮಾಡಿಸಿದ ಮಾಟ-ಮಂತ್ರದ ಪ್ರಭಾವದಿಂದ ಹೀಗೆ ಹಸಿವಾಗುವುದಿಲ್ಲವೆಂದು ನಂಬುತ್ತಾರೆ. ಅಂತಹ ಸಂದರ್ಭದಲ್ಲಿ ಚಿತ್ರಮೂಲ ಗಿಡದ ಬೇರನ್ನು ತೆಗೆದು ಒಣಗಿಸಿ ಅದನ್ನು ಪುಡಿಮಾಡಿ ಬಾಳೆಹಣ್ಣಿನಲ್ಲಿಟ್ಟು ತಿನ್ನಿಸುವುದರಿಂದ ಕೈಮಸುಕು ನಿವಾರಣೆಯಾಗುತ್ತದೆ. ಅಷ್ಟೇ ಅಲ್ಲದೇ ಆ ಬೇರಿನಿಂದ ಕಷಾಯವನ್ನು ತಯಾರಿಸಿ ಸೇವಿಸಿದರೆ ಹೊಟ್ಟೆಯಲ್ಲಿ ಕಲ್ಲಿದ್ದರೂ ಕರಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಜೊತೆಗೆ

ಚೆನ್ನಾಗಿ ಹಸಿವಾಗುತ್ತದೆ. ಆರೋಗ್ಯವೂ ವೃದ್ಧಿಸುತ್ತದೆ ಎಂಬುದು ಸಾದರ ಜನಪದ ವೈದ್ಯೆ ಪಾರ್ವತಮ್ಮನವರ ಅಭಿಪ್ರಾಯವಾಗಿದೆ.

ದೇಹದ ಯಾವುದೇ ಭಾಗದಲ್ಲಿ ಊತ ಕಂಡುಬಂದಾಗ ಬಿಲ್ವಪತ್ರದ ರಸ ಸೇವಿಸಿದರೆ ಒಳಿತು. ಒಂದು ಊಟದ ಚಮಚೆಯಷ್ಟು ರಸವನ್ನು ದಿನಕ್ಕೆ ಎರಡಾವರ್ತಿ ಸೇವಿಸುತ್ತಿದ್ದರೆ ಊತ ಇಳಿಯುತ್ತದೆ.

ಕೆಲವೊಮ್ಮೆ ಕಿವಿ ಸರಿಯಾಗಿ ಕೇಳದೆ ಮಂದವಾಗಿರುವ ಸಂದರ್ಭದಲ್ಲಿ ಎಳೆಯ ಬಿಲ್ವದ ಕಾಯಿಗಳ ತಿರುಳನ್ನು ಹಸುವಿನ ಗಂಜಲದಲ್ಲಿ ನುಣ್ಣಗೆ ಅರೆದು, ಇದರೊಂದಿಗೆ ಎರಡು ಪಟ್ಟು ಎಳ್ಳೆಣ್ಣೆ ಸೇರಿಸಿ ಕುದಿಸಿ, ಆರಿದ ನಂತರ ಶೋಧಿಸಿ ಈ ಎಣ್ಣೆಯನ್ನು ಹನಿ-ಹನಿಯಾಗಿ ಕಿವಿಗೆ ಬಿಡುವುದು, ನಿರಂತರ ನಾಲ್ಕೈದು ದಿನಗಳ ಚಿಕಿತ್ಸೆಯ ನಂತರ ಶ್ರವಣ ಶಕ್ತಿಯು ಸುಧಾರಿಸುವುದು, ಬಿಲ್ವವೃಕ್ಷದ ಬೇರನ್ನು ಗೋಮೂತ್ರದಲ್ಲಿ ತೇದು ತಲೆಗೆ ಹಚ್ಚಿ ಸುಮಾರು ಎರಡು ಗಂಟೆಗಳು ಕಳೆದು ನಂತರ ಸ್ನಾನ ಮಾಡುವುದರಿಂದ ತಲೆಯಲ್ಲಿ ಬೀಳುವ ಹೇನುಗಳ ನಿವಾರಣೆಯಾಗುವುದು.

'ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು' ಎಂಬ ನಾಣ್ಣುಡಿಯು ಇವರು ಸೇವಿಸುವ ಆಹಾರದಲ್ಲಿನ ಕ್ರಮಬದ್ಧತೆಯನ್ನು ಸೂಚಿಸುವಂತಿದೆ. ಹಾಗೆಯೇ **'ತುಸ ತಿಂದರು ಕಸ ತಿನ್ನಬಾರದು'** ಎಂಬಂತೆ ಜಾಗರೂಕತೆಯಿಂದ ಆಹಾರವನ್ನು ಸೇವಿಸಿದರೂ ಕೆಲವೊಮ್ಮೆ ಅನಿವಾರ್ಯವಾಗಿ ರೋಗ-ರುಜಿನಗಳಿಗೆ ಒಳಗಾದಂತಹ ಸಂದರ್ಭದಲ್ಲಿ ಜನಪದ ವೈದ್ಯಪದ್ಧತಿಯು ಪ್ರಮುಖಪಾತ್ರ ವಹಿಸುತ್ತದೆ. ಹೊಟ್ಟೆಯಲ್ಲಿ ಜಂತು ಹುಳುಗಳು ಹೆಚ್ಚಾಗಿ ಹೊಟ್ಟೆ ನೋವು ಬಂದಾಗ ಮಾವಿನ ಬೀಜವನ್ನು ನುಣ್ಣಗೆ ಅರೆದು. ಒಂದು ಗೋಲಿಯ ಗಾತ್ರದಂತೆ ದಿನಕ್ಕೆ ಒಂದುಬಾರಿಯಂತೆ ನಾಲ್ಕೈದು ದಿನಗಳು ಸೇವಿಸುತ್ತಾ ಬಂದಾಗ ಜಂತುಹುಳು ನಿವಾರಣೆಯಾಗುತ್ತದೆ.

ಕೆಲವೊಮ್ಮೆ ಗಾಯವಾದಾಗ ಅಡ್ಡಿಕೆಸೊಪ್ಪನ್ನು ಹಚ್ಚುವುದು, ನಿಂಬೆರಸದಲ್ಲಿ ವೀಳೆದೆಲೆಯನ್ನು ನುಣ್ಣಗೆ ಅರೆದು, ಗಾಯಕ್ಕೆ ಮೆತ್ತಿ ಕಟ್ಟುವುದು, ಬಾಳೆಕಾಯಿ ಕತ್ತರಿಸಿದಾಗ ರಸ ತೊಟ್ಟಿಕ್ಕುವುದು ಈ ರಸವನ್ನು ಗಾಯದ ಮೇಲೆ ತೊಟ್ಟಿಕ್ಕಿಸಿ ಗಾಯಕ್ಕೆ ಪಟ್ಟು ಕಟ್ಟುವುದು, ವೀಳೆದೆಲೆಯನ್ನು ಹಿಂಡಿರಸ ತೆಗೆದು ಆ ರಸವನ್ನು ಗಾಯಕ್ಕೆ ಲೇಪಿಸಿ ನಂತರ ಗಾಯದ ಮೇಲೆ ಒಂದು ವೀಳೆದೆಲೆ ಇಟ್ಟು ಪಟ್ಟು ಕಟ್ಟುವುದು, ಅರಿಶಿನದ ಪುಡಿ, ಬೇವಿನಸೊಪ್ಪು, ಕರಿ ಎಳ್ಳು ಅಪ್ಪಟ ತುಪ್ಪ ಮತ್ತು ಒಂದು ಬಿಲ್ಲೆ ಕರ್ಪೂರ ಇದಿಷ್ಟನ್ನು ನುಣ್ಣಗೆ ಅರೆದು ಮುಲಾಮು ತಯಾರಿಸಿ ಇದನ್ನು ಗಾಯಗಳಿಗೆ ಹಚ್ಚುವುದರಿಂದ ಗಾಯ ಶೀಘ್ರವಾಗಿ ಗುಣವಾಗುತ್ತದೆ.

ಸುಟ್ಟ ಗಾಯಕ್ಕೆ ಒಣಗಿದ ಮಾವಿನ ಎಲೆಗಳನ್ನು ಸುಟ್ಟು ಬೂದಿ ಮಾಡಿ ಆ ಬೂದಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ, ಸುಟ್ಟ ಗಾಯದ ಬೊಬ್ಬೆಗಳಿಗೆ ಲೇಪಿಸುವುದು, ಕೊಬ್ಬರಿಯನ್ನು ಸುಟ್ಟು ಅದು ಉರಿಯುವಾಗ ಆರಿಸಿ, ಕಲ್ಲಿನಿಂದ ಕೊಬ್ಬರಿಯನ್ನು ಜಜ್ಜಿ ಅದರಿಂದ ಬರುವ ಎಣ್ಣೆಯನ್ನು

ಸುಟ್ಟಗಾಯಕ್ಕೆ ಇಡುವುದು. ಬಾಪಿಯಲ್ಲಿನ ಪಾಚಿಯನ್ನು ಗಾಯಕ್ಕೆ ಲೇಪಿಸುವುದರಿಂದ ಸುಟ್ಟಗಾಯ ವಾಸಿಯಾಗುತ್ತದೆ.

ಕೃಷಿ ಕಾರ್ಯದಲ್ಲಿ ನಿರತರಾಗಿರುವ ಸಂದರ್ಭದಲ್ಲಿ ಮಚ್ಚು, ಕುಡುಗೋಲು ಇತ್ಯಾದಿ ಸಲಕರಣೆಗಳಿಂದ ಗಾಯವಾಗಿ ರಕ್ತಸ್ರಾವ ನಿಲ್ಲದಿರುವಾಗ ರಕ್ತಸ್ರಾವವನ್ನು ತಡೆಗಟ್ಟಲು ತೆಂಗಿನ ಮಟ್ಟೆಯ ಮೇಲಿನ ಮೆತ್ತನೆಯ ಹಾಸನ್ನು ಉಗುರಿನಲ್ಲಿ ಕೆರೆದು ಸಂಗ್ರಹಿಸಿ ಅದನ್ನು ಗಾಯದ ಮೇಲೆ ಒತ್ತಿಹಿಡಿದರೆ ರಕ್ತಬರುವುದು ನಿಲ್ಲುತ್ತದೆ. ಗಾಯ ಬೇಗ ಮಾಯುತ್ತದೆ. ಹಾಗೆಯೇ ಕಾಶಿ ಕಣಗಿಲೆ ವರ್ಷವಿಡೀ ಕೆಂಪು ಮತ್ತು ಬಿಳಿ ಹೂಗಳನ್ನು ಬಿಡುವ ಹೆಚ್ಚು ಎತ್ತರಕ್ಕೆ ಬೆಳೆಯುವ ಹೂಗಿಡ. ಇದೊಂದು ಅತ್ಯುತ್ತಮ ಔಷದೀಯ ಸಸ್ಯ. ಈ ಸಸ್ಯದ ಹಸಿರೆಲೆಗಳನ್ನು ನುಣ್ಣಗೆ ಅರೆದು ಪಟ್ಟು ಹಾಕುವುದರಿಂದ ಗಾಯದಿಂದ ಒಸರುವ ರಕ್ತಸ್ರಾವ ನಿಲ್ಲುತ್ತದೆ, ಆ ಚೂರ್ಣವನ್ನು ರಕ್ತ ಒಸರುವ ಗಾಯದ ಮೇಲೆ ಪಟ್ಟು ಹಾಕುವುದರಿಂದ ಗಾಯ ಬೇಗ ಗುಣವಾಗುತ್ತದೆ.

ಮತ್ತೆ ಕೆಲವೊಮ್ಮೆ ಕೈ-ಕಾಲು ಉಳುಕಿರುವ ಸಂದರ್ಭದಲ್ಲಿ ಸ್ವಲ್ಪ ಬೆಲ್ಲವನ್ನು ಕುಟ್ಟಿ ಪುಡಿಮಾಡಿ ಈ ಬೆಲ್ಲದ ಪುಡಿಯೊಂದಿಗೆ ಸ್ವಲ್ಪ ತುಪ್ಪ ಸೇರಿಸಿ ಮಿಶ್ರಣವನ್ನು ಬಿಸಿಮಾಡಿ ಇದನ್ನು ಬಿಸಿಯ ಹದವರಿತು ಉಳುಕಿರುವ ಭಾಗದ ಮೇಲೆ ಲೇಪಿಸಿ ಕಟ್ಟುಹಾಕುವುದರಿಂದ ಊತ ಇಳಿದು ನೋವು ಕಡಿಮೆಯಾಗುತ್ತದೆ. ಹಾಗೆಯೇ ರಾಗಿಯ ಬಿಸಿಯ ಹಿಟ್ಟನ್ನು ಹದವರಿತು ಕಾವು ಕೊಡುವುದು, ಹರಳು ಉಪ್ಪನ್ನು ಬೆಚ್ಚಗೆ ಮಾಡಿ ಕಾವು ಕೊಡುವುದರಿಂದ ಊತ ಇಳಿದು ನೋವು ಮಾಯುತ್ತದೆ.

ಜೇನು ನೋಣ ಕಚ್ಚಿದಾಗ ಈರುಳ್ಳಿಯನ್ನು ಗಂಧದ ಕಲ್ಲಿನ ಮೇಲೆ ತೇದು ಜೇನ್ನೊಣ ಕಚ್ಚಿದ ಜಾಗಕ್ಕೆ ಲೇಪಿಸಿದರೆ ನೋವು ಶಮನವಾಗುವುದು.

ಚೇಳು ಕಡಿದ ಸಂದರ್ಭದಲ್ಲಿ ತುಳಸಿಯ ಗಿಡದ ಹಸಿಬೇರನ್ನು ತೇದು ಅದನ್ನು ಚೇಳು ಕುಟುಕಿದ ಜಾಗಕ್ಕೆ ಲೇಪಿಸುವುದು. ನಿಂಬೆ ಹಣ್ಣಿನ ಬೀಜಗಳನ್ನು ನುಣ್ಣಗೆ ಅರೆದು ಚೇಳು ಕುಟುಕಿದ ಭಾಗದ ಮೇಲೆ ಲೇಪಿಸಿ ಶಾಖಕೊಡುವುದು, ಹೊಸತಾದ ವೀಳ್ಯದ ಸುಣ್ಣವನ್ನು ಅಷ್ಟೇ ಪ್ರಮಾಣದ ಹುಣಸೆ ಹಣ್ಣಿನೊಂದಿಗೆ ಸೇರಿಸಿ, ಚೆನ್ನಾಗಿ ಮಸೆದು ಅದನ್ನು ಚೇಳು ಕಡಿದ ಜಾಗದ ಮೇಲಿಟ್ಟು ಬೆರಳಿನಿಂದ ಒತ್ತಿ ಹಿಡಿಯುವುದರಿಂದ ವಿಷದ ಪ್ರಭಾವ ಇಳಿದು ನೋವು ನಿವಾರಣೆಯಾಗುತ್ತದೆ.

ಹಾವು ಕಡಿದ ತಕ್ಷಣ, ಕಡಿದ ಜಾಗದಲ್ಲಿ ಹರಿತವಾದ ಚಾಕು ಅಥವಾ ಬ್ಲೇಡಿನಿಂದ ದೊಡ್ಡಗಾಯಮಾಡಿ, ಅಲ್ಲಿನ ವಿಷಪೂರಿತ ರಕ್ತವನ್ನು ಹೊರತೆಗೆದು ಸ್ವಚ್ಛನೀರಿನಿಂದ ಗಾಯವನ್ನು ತೊಳೆದು ನಂತರ ನುರಿತ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯಬೇಕಾಗುತ್ತದೆ.

ಜನಪದ ವೈದ್ಯಪದ್ಧತಿಯಲ್ಲಿ ಮಂತ್ರ-ತಂತ್ರಗಳ ಬಳಕೆಯೂ ಇದೆ. ಕಾಲು ಉಳುಕಿದರೆ, ಕೆಟ್ಟದಾದಾಗ ಇವರು ಮಂತ್ರಹಾಕುವ ಮುಖೇನ ಅದನ್ನು ಗುಣಪಡಿಸುವ ಪ್ರಯತ್ನವನ್ನು

ಮಾಡುತ್ತಾರೆ. ರೋಗಿಯು ದೈಹಿಕ ಯಾತನೆಯಿಂದ ನರಳುತ್ತಿದ್ದರೆ ಅದಕ್ಕೆ ಕೆಲವು ಬೇರು, ಎಲೆ, ತೊಗಟೆ, ಬೀಜ ಮುಂತಾದವುಗಳ ರಸ ಲೇಹ್ಯಗಳನ್ನು ತಿನ್ನಲು ಇಲ್ಲವೇ ದೇಹಕ್ಕೆ ಲೇಪಿಸಿಕೊಳ್ಳಲು ಕೊಡಬಹುದು. ಇನ್ನೊಂದು ಬಗೆಯ ವೈದ್ಯರು ಮಾಯಮಾಟದಿಂದ ರೋಗ ನಿವಾರಣೆ ಮಾಡುತ್ತಾರೆ. ರೋಗಿಯು ತನಗೆ ಆಗದವರು ಯಾರೋ ಮಾಟಮಾಡಿಸಿ ತೊಂದರೆ ಕೊಡುತ್ತಿದ್ದಾರೆ ಎಂಬ ಭಾವನೆಯಿಂದ ವೈದ್ಯರ ಬಳಿಗೆ ಬಂದಾಗ ಈ ರೋಗವನ್ನು ಮಾಟ-ಮಂತ್ರದಿಂದಲೇ ನಿವಾರಿಸಬೇಕು ಎಂದು ಹೇಳುತ್ತಾರೆ.

ಕೆಲವೊಮ್ಮೆ ದೃಷ್ಟಿ ಆದಾಗ ದೃಷ್ಟಿ ತೆಗೆಯುವುದು ಜಾತಿಯಲ್ಲಿ ರೂಢಿಯಲ್ಲಿದೆ. ನರಮನುಷ್ಯನ ದೃಷ್ಟಿಗೆ ಕಲ್ಲುಕೂಡ ಸಿಡಿದು ಚೂರಾಗುತ್ತದೆ ಎಂಬುದು ಹಿರಿಯರ ಅಭಿಪ್ರಾಯ. ದೃಷ್ಟಿಗೆ ಅಷ್ಟೊಂದು ಶಕ್ತಿಯಿದೆ. ಕೆಟ್ಟ ಕಣ್ಣು, ನೀಚ ನೋಟ, ಈರ್ಷೆಯ ಭಾವನೆಯಿಂದ ದೃಷ್ಟಿದೋಷ ಉಂಟಾಗುತ್ತದೆ. ದೃಷ್ಟಿದೋಷಕ್ಕೆ ಒಳಗಾದ ವ್ಯಕ್ತಿ ಏನೇ ಕೆಲಸ ಕಾರ್ಯಗಳಿಗೆ ಕೈಹಾಕಿದರೂ ಅವು ಯಶಸ್ಸು ಕಾಣುವುದಿಲ್ಲ. ಅಂತಹ ಸಮಯದಲ್ಲಿ ಬಲ್ಲವರಿಂದ ದೃಷ್ಟಿದೋಷವನ್ನು ನಿವಾರಿಸಿಕೊಳ್ಳುವುದೊಂದೇ ಸೂಕ್ತ ಪರಿಹಾರವೆಂಬುದು ಜನಪದರ ಅಭಿಪ್ರಾಯ. ಇದನ್ನು ಆಡುಭಾಷೆಯಲ್ಲಿ 'ದೃಷ್ಟಿ ತೆಗೆಯುವುದು, ನಿವಾಳಿಸುವುದು' ಎಂದು ಕರೆಯುತ್ತಾರೆ. ಊಟ ಸೇರದಿರುವಿಕೆ. ಕೈ-ಕಾಲು ನೋವು, ನರಸೆಳೆತ, ಹೊಟ್ಟೆನೋವು ಏನೇ ಸಮಾಧಾನ ಮಾಡಿದರೂ ಅಳು ನಿಲ್ಲಿಸದ ಮಕ್ಕಳ ಮುಂದೆ ಎಡ ಕೈಯಲ್ಲಿ ಒಂದು ಹಿಡಿ ಕಲ್ಲುಪ್ಪನ್ನು ಹಿಡಿದು ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಮೂರು ಸಾರಿ ನಿವಾಳಿಸಿ ಥೂ.....ಥೂ.....ಥೂ.....ಎಂದು ಮೂರು ಸಾರಿ ಅದಕ್ಕೆ ಉಗುಳಿ ಆ ನಂತರ ತಲೆಯಿಂದ ಪಾದದವರೆಗೆ ನಿವಾಳಿಸಿ ದೃಷ್ಟಿತೆಗೆದು ಒಲೆಯೊಳಗೆ ಹಾಕಲಾಗುತ್ತದೆ. ಆಗ ಆ ಕಲ್ಲುಪ್ಪು ಎಷ್ಟು ಚಟಚಟನೆ ಸದ್ದು ಮಾಡಿ ಸಿಡಿಯುತ್ತದೋ, ಅಷ್ಟು ಪ್ರಮಾಣದಲ್ಲಿ ದೃಷ್ಟಿ ತಗಲಿದೆ ಎಂದು ಅರ್ಥೈಸಿಕೊಳ್ಳಲಾಗುತ್ತದೆ.

ನವ ವಧು-ವರರಿಗೆ ಮತ್ತು ಮೊದಲ ಬಾರಿಗೆ ಗಂಡನ ಮನೆ ಪ್ರವೇಶಿಸುವ ನವ ವಧುವಿಗೆ ಹಿರಿಯ ಮುತ್ತೈದೆಯರು ಓಕುಳಿ ಮಾಡಿಸಿ ಆನಂತರ ಅದನ್ನು ಮನೆಯ ಅಂಗಳದಲ್ಲಿ ಚೆಲ್ಲುತ್ತಾರೆ.

ಮತ್ತೆ ಕೆಲವೊಮ್ಮೆ ಪರಕೆ ಕಡ್ಡಿಗೆ ಬೆಂಕಿಹಚ್ಚಿ ಅದನ್ನು ಬಲಗಡೆ ಮತ್ತು ಎಡಗಡೆ ಮೂರು-ಮೂರು ಬಾರಿ ನೀವಳಿಸಿ ಮೂರು ಬಾರಿ ಅದಕ್ಕೆ ಉಗಿದು ಅದನ್ನು ಒಲೆಯ ಮೂಲೆಯಲ್ಲಿಡುತ್ತಾರೆ. ಅದು ಚಟ-ಚಟ ಸದ್ದುಮಾಡುತ್ತಾ ಉರಿದರೆ ದೃಷ್ಟಿ ಆಗಿದೆ ಎಂದು ತಿಳಿದುಕೊಳ್ಳಲಾಗುತ್ತದೆ.

ಜನಪದ ವೈದ್ಯಪದ್ಧತಿಯೂ ವರವೂ ಹೌದು ಶಾಪವೂ ಹೌದು. ಏಕೆಂದರೆ ಕೆಲ ಚಿಕ್ಕ-ಪುಟ್ಟ ಖಾಯಿಲೆಗಳು ಕಾಕತಾಳೀಯವೆಂಬಂತೆ ಜನಪದ ವೈದ್ಯದಿಂದ ಗುಣವಾಗುತ್ತದೆ. ಆದರೆ ಮತ್ತೆ ಕೆಲವು ರೋಗಗಳನ್ನು ಬಹಳ ಕಾಲ ನಿರ್ಲಕ್ಷಿಸಿ ಕೊನೆಗೆ ದೊಡ್ಡ ಆಸ್ಪತ್ರೆಗೆ ಬರುವುದರಿಂದ ರೋಗಿ ಜೀವಂತ ಹಿಂತಿರುಗುವುದಿಲ್ಲ. ತಪ್ಪು ನಮ್ಮದೇ, ನಾವೇ ಕೊನೆಗೆ ದೊಡ್ಡ ಆಸ್ಪತ್ರೆಗೆ ಬಂದಿದ್ದೇವೆ ಎನ್ನುವ ಕಲ್ಪನೆಯು ಅವರಲ್ಲಿರುವುದಿಲ್ಲ. ಬದಲಾಗಿ ರೋಗವು ದೇವರಿಂದ ಕಳುಹಿಸಲ್ಪಟ್ಟದ್ದು ಈ ತೊಂದರೆಗೆ

ನಿವಾರಣೆಯಾಗಿ ದೇವರಿಗೆ ಹರಕೆಹೊರುವುದು, ಕಾಣಿಕೆ ಕೊಡುವುದು, ಪೂಜೆ ಮುಂತಾದವು ಸಮಂಜಸವೆಂದು ತಿಳಿಯುತ್ತಾರೆ.

ಆದರೆ ಇತ್ತೀಚಿನ ಪ್ರಜ್ಞಾವಂತ ಸಮಾಜವನ್ನು ಗಮನಿಸಿದಾಗ ಜನಪದ ವೈದ್ಯದ ಬಗ್ಗೆ ಸ್ಪಷ್ಟ ಅರಿವುಂಟಾಗಿರುವುದನ್ನು ಗಮನಿಸಬಹುದು. ಇದರಿಂದಾಗಿ ಅವರು ಜನಪದ ವೈದ್ಯವನ್ನು ಅತಿಯಾಗಿ ಅವಲಂಬಿಸದೆ ಆಸ್ಪತ್ರೆಗಳಿಗೆ ಮೊರೆ ಹೋಗುತ್ತಾರೆ. ಆದರೆ ಆ ಆಸ್ಪತ್ರೆಗಳು ಇಂದು ಶೋಷಣೆಯಿಂದ ಮುಕ್ತವಾಗಿಲ್ಲವೆಂಬುದು ಶೋಚನೀಯ ಸಂಗತಿಯೇ ಸರಿ.

ಜೀವ ಸಂಜೀವಿನಿ ರೇಕಿ ವೈದ್ಯ ಪದ್ಧತಿ:-

ರೇಕಿ ಒಂದು ದಿವ್ಯಶಕ್ತಿಯ ಶಾಂತಿಯ ಕಿರಣ, ದೇಹ-ಮನಸ್ಸುಗಳ ಜೀವ ಸಂಜೀವಿನಿಯಷ್ಟೇ ಅಲ್ಲ ಅದೊಂದು ಅದ್ಭುತ ವೈದ್ಯವಿದ್ಯೆ. ಸತತವಾದ ಸಾಧನೆ, ನಿರಂತರ ಪ್ರಯತ್ನ, ಪರಿಶ್ರಮವಿದ್ದರೆ ಏನನ್ನುಬೇಕಾದರೂ ಸಾಧಿಸಬಹುದೆಂಬುದಕ್ಕೆ ನಮ್ಮಲ್ಲಿ ಸಾಕಷ್ಟು ನಿದರ್ಶನಗಳಿವೆ. ಆದರೆ! ವೈದ್ಯ ಪದ್ಧತಿಯನ್ನು ಗಮನಿಸಿದಾಗ ಸಾದರಲ್ಲಿ ಸಾದಕರ ಸಂಖ್ಯೆ ಅತಿವಿರಳ. ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇಂತಹ ಶ್ರಮದ ಹಾದಿಯಲ್ಲಿ ಸಾಗಿ, ಸಾಧಿಸಿ ಇತರರ ಬಾಳಿಗೆ ಬೆಳಕನ್ನು, ಬದುಕಿಗೆ ನೆಮ್ಮದಿಯನ್ನು ನೀಡುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅಂತಹ ಮಹತ್ವಪೂರ್ಣ ವ್ಯಕ್ತಿಗಳಲ್ಲಿ ಶ್ರೀಮತಿ ಲಕ್ಷ್ಮೀರೆಡ್ಡಿರವರು ಓರ್ವರಾಗಿದ್ದಾರೆ. ವೃತ್ತಿಯಿಂದ ಅಧ್ಯಾಪಕಿಯಾಗಿದ್ದು, ಪ್ರವೃತ್ತಿಯಿಂದ ಜೀವ ಸಂಜೀವಿನಿಯಾದ ರೇಕಿ ಚಿಕಿತ್ಸಾ ವಿಧಾನವನ್ನು ತಿಳಿದಿರುವ ಸಾದರ ಬಹುಮುಖ್ಯ ರೇಕಿ ವೈದ್ಯೆಯಾಗಿದ್ದಾರೆ.

ರೇಕಿಯ ಮೊದಲ ಉಲ್ಲೇಖ ಭಾರತೀಯ ಅಥರ್ವ ವೇದದಲ್ಲಿ ಕಂಡುಬರುತ್ತದೆ. 'ರೇಕಿ' ಎಂಬ ಪದ ಜಪಾನಿ ಭಾಷೆಯ 'ರೇ' ಮತ್ತು 'ಕಿ' ಎಂಬ ಎರಡು ಶಬ್ದಗಳ ಸಮ್ಮಿಲನ, 'ರೇ' ಎಂದರೆ ಬ್ರಹ್ಮಾಂಡ 'ಕಿ' ಎಂದರೆ ಪ್ರಾಣಶಕ್ತಿ ಎಂಬ ಅರ್ಥವಿದೆ. ಮನುಷ್ಯನ ದೇಹ ಹಾಗೂ ಮನಸ್ಸಿಗೆ ಬ್ರಹ್ಮಾಂಡದ ಪ್ರಾಣಶಕ್ತಿಯೊಡನೆ ಸಂಪರ್ಕವನ್ನು ಏರ್ಪಡಿಸುವುದೇ ರೇಕಿ ವಿದ್ಯೆಯ ಮುಖ್ಯ ಗುರಿ.

ಈ ವೈದ್ಯಪದ್ಧತಿಯಲ್ಲಿ ಮಹತ್ವಪೂರ್ಣವಾದ ಸಾಧನೆಗೈದಿರುವ ಶ್ರೀಮತಿ ಲಕ್ಷ್ಮೀರೆಡ್ಡಿರವರು ತಮ್ಮ ಹಸ್ತಗುಣದಿಂದ ತಮ್ಮ ಹಾಗೂ ಇತರರ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆಂಬುದು ಹರ್ಷದಾಯಕವಾದ ವಿಚಾರವೇ ಆಗಿದೆ. ರೇಕಿಯಲ್ಲಿ ಸಾಧನೆಯನ್ನು ಮಾಡಿರುವ ಯಾವುದೇ ವ್ಯಕ್ತಿಯಲ್ಲಿಯೂ ಸಹ ಆರೋಗ್ಯ, ಮನಸ್ಥಿತಿ, ಆರ್ಥಿಕ ಸ್ಥಿತಿ-ಗತಿಯು ಉತ್ತಮವಾಗಿರುವುದನ್ನು ಕಾಣಬಹುದು.

ಪುರಾತನ ಬೌದ್ಧ ಗ್ರಂಥಗಳಲ್ಲಿ ರೇಕಿಯ ವಿವರಗಳನ್ನು ಅಭ್ಯಸಿಸಿ ಅದನ್ನು ಹೊರ ಜಗತ್ತಿಗೆ ಪರಿಚಯಿಸಿದ ಕೀರ್ತಿ ಜಪಾನಿನ **ಡಾ.ಮಿಕಾವೋ ಉಸೋಯಿ** (೧೮೬೫ ರಿಂದ ೧೯೨೬)ರವರಿಗೆ ಸಲ್ಲುತ್ತದೆ. ಇವರ ಶಿಷ್ಯ ಪರಂಪರೆಯಲ್ಲಿ ಮೂಡಿ ಬಂದ ಪ್ರಮುಖರಲ್ಲಿ ಶ್ರೀಮತಿ ಲಕ್ಷ್ಮೀರೆಡ್ಡಿರವರು

ಗಮನಾರ್ಹರು. ರೇಕಿಯ ಸಾಧನೆಯಲ್ಲಿ ಗುರುದೀಕ್ಷೆ ಅಗತ್ಯವಾದದ್ದು. ಈ ಹಿನ್ನೆಲೆಯಲ್ಲಿ ಲಕ್ಷ್ಮೀರೆಡ್ಡಿರವರ ಗುರುವರ್ಯರಾದ **'ಶ್ರೀಮತಿ ವಿಧ್ಯಾ** ಮತ್ತು ಟ್ರೇಡೀಷನಲ್ ರೇಕಿ ಮಾಸ್ಟರ್ ಆಗಿರುವ ಹೆಸರಾಂತ ಲೇಖಕರಾದ **'ಶಿವಯೋಗಿ ಜಿ.ಮದನಭಾವಿ'**ರವರ ಸ್ಮರಣೆ ಔಚಿತ್ಯಪೂರ್ಣವಾದದ್ದೇ ಸರಿ.

ರೇಕಿ ಸಾಧನೆಯಿಂದ ವೈದ್ಯಕೀಯಕ್ಷೇತ್ರಕ್ಕೆ ಸವಾಲಾಗಿರುವ ಖಾಯಿಲೆಗಳಿಂದ ಮುಕ್ತಿಪಡೆದು ಆರೋಗ್ಯದಲ್ಲಿ ಸುಧಾರಣೆ, ವ್ಯಕ್ತಿತ್ವ ವಿಕಸನ, ಇಷ್ಟಾರ್ಥ ಸಿದ್ಧಿ, ಕಹಿ ಘಟನೆಗಳ ಚಿಂತನೆಯಿಂದ ಮುಕ್ತಿ ಮನುಷ್ಯ ಸಂಬಂಧಗಳ ಸುಧಾರಣೆ ಜೊತೆಗೆ ಆತ್ಮವಿಶ್ವಾಸ ಮೂಡಿಸುವಲ್ಲಿಯೂ ರೇಕಿ ಸಹಾಯಕವಾಗುತ್ತದೆ.

ಹೀಗೆ ಹತ್ತಾರು ಉಪಯುಕ್ತಕರ ಅಂಶಗಳನ್ನು ಒಳಗೊಂಡಿರುವ ರೇಕಿ ಕಲಿಕೆ ಕ್ಲಿಷ್ಟಕರವಾಗಿರುವ ರೇಕಿಯು ಸತತ ಪರಿಶ್ರಮ ಮತ್ತು ಸಮಚಿತ್ತದಿಂದ ಮಾತ್ರ ಕಲಿಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಲಕ್ಷ್ಮೀರೆಡ್ಡಿರವರು ಅಭಿನಂದನಾರ್ಹರೇ ಸರಿ.

೬.೨: ಪಶು ವೈದ್ಯ:-

ಸಾದರಲ್ಲಿ ಬಹುತೇಕರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಅವಲಂಬಿಸಿದ್ದಾರೆ. ಕೃಷಿಕರಿಗೆ ದನಗಳೇ ಸಂಪತ್ತು, ಬೇಸಾಯಕ್ಕೆ ಎತ್ತು, ಕೋಣ, ಹೈನುಗಾರಿಕೆಗೆ ಹಸು, ಎಮ್ಮೆ, ಆಡು-ಕುರಿಗಳನ್ನು ಕೃಷಿಕ ಸಾದರು ಸಾಕುವುದುಂಟು. ಕೃಷಿಕರು ದನಗಳನ್ನು ತಮ್ಮ ಮನೆಯ ಸದಸ್ಯರಂತೆಯೇ ವಿಶೇಷ ಆಸಕ್ತಿಯಿಂದ ಜೋಪಾನ ಮಾಡುತ್ತಾರೆ. ದನಗಳು ಜನಪದರ ಜೀವನಾಡಿಗಳಿದ್ದಂತೆ. ತಮ್ಮ ದನ-ಕರುಗಳಿಗೆ ದಿನನಿತ್ಯದಲ್ಲಿ ಬರುವ ರೋಗ-ರುಜಿನಗಳಿಗೆ, ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ದೊರೆಯುವ ನಾರು-ಬೇರು, ಸೊಪ್ಪುಗಳಿಂದ ಔಷಧಿಯನ್ನು ತಯಾರಿಸಿ ತಮ್ಮ ರಾಸುಗಳ ಖಾಯಿಲೆಗಳನ್ನು ಗುಣಪಡಿಸುತ್ತಾರೆ. ಸಾದರಲ್ಲಿ ಒಕ್ಕಲುತನದ ಎಲ್ಲಾ ಕೆಲಸಗಳಿಗೆ ಅಂದರೆ-ಉಳುವುದು, ರಂಟೆ ಹೊಡೆಯುವುದು, ಬಿತ್ತುವುದು, ಎಡೆ ಕುಂಟೆ ಹೊಡೆಯುವುದು, ಅರಗುವುದು, ಅಂತಿ ಕಟ್ಟಿ ತೆನೆ ತುಳಿಸುವುದು ಮತ್ತು ಪೇಟೆಗೆ ಮಾಲು ಸಾಗಿಸುವುದು ಈ ಎಲ್ಲಾ ಕೆಲಸಗಳಿಗೆ ಎತ್ತುಗಳೇ ಮೂಲಾಧಾರ. ಒಟ್ಟಾರೆ ಕೃಷಿಗೆ ಆಕಳು ಮತ್ತು ಎತ್ತುಗಳು ಆಧಾರಸ್ತಂಭವಾಗಿವೆ. ದನಗಳೇ ರೈತನ ಜೀವಾಳ, ರೈತನ ಸಂಪತ್ತು.

ಸರ್ವಜ್ಞ ಕವಿಯು:-

"ನಲ್ಲೆತ್ತು ಬಂಡಿ ಬಲವಿಲ್ಲದಾರಂಭ,

ಕಲ್ಲು ಕಳೆಗಳು ಬಿಟ್ಟವನು ಹೊಲದೊಳಗೆ

ಹುಲ್ಲನೇ ಬೆಳೆವ ಸರ್ವಜ್ಞ॥.

ಹರಗದ ಎತ್ತಾಗಿ, ಬರಡಾದ ಹಯನಾಗಿ

ಹರಟೆ ಹೊಡೆಯುವ ಮಗನಾಗೆ ಹೊಲದಲ್ಲಿ

ಕರಡವೇ ಬೆಳಗು ಸರ್ವಜ್ಞ ॥[7].

ಎಂದು ದನಗಳ ಹಿರಿಮೆಯನ್ನು ಹಾಡಿದ್ದಾನೆ. ನಮ್ಮಲ್ಲಿಯ ಕೃಷಿಕಾರ್ಯ ಸುಗಮವಾಗಿ, ಫಲದಾಯಕವಾಗಿ ಸಾಗಬೇಕಾದರೆ ನಮ್ಮ ದನಗಳು ಗಟ್ಟಿಮುಟ್ಟಾಗಿರಬೇಕು, ದೃಢಕಾಯವಾಗಿರಬೇಕು, ಹೆಚ್ಚು ಹಾಲು ಹಿಂಡುವಂತಿರಬೇಕು, ಮುಖ್ಯವಾಗಿ ಆರೋಗ್ಯವಾಗಿರಬೇಕು. ದನಗಳ ಆರೋಗ್ಯವೇ ರೈತನ ಭಾಗ್ಯ, ಕಾರಣ ದನಗಳನ್ನು ರೋಗ-ರುಜಿನವಿಲ್ಲದಂತೆ ಸಾಕಿ ಸಲಹಬೇಕು.

ಸಾಮಾನ್ಯವಾಗಿ ದನಗಳಿಗೆ ರೋಗಗಳು ಅವುಗಳು ತಿನ್ನುವ ಆಹಾರ, ಕುಡಿಯುವ ನೀರು, ವಾಸಿಸುವ ಸ್ಥಳ ಮತ್ತು ಹವಾಮಾನದಲ್ಲಿ ಉಂಟಾಗುವ ಬದಲಾವಣೆಗಳಿಂದ ಬರುತ್ತವೆ.

'ಹೆಂಡತಿ ಇಲ್ಲದವನಿಗೆ ಮನೆ ಇಲ್ಲ, ದನ ಇಲ್ಲದವನಿಗೆ ದಗದ ಇಲ್ಲ' ಎಂಬ ಗಾದೆಯು ಕೃಷಿಕನಾದವನಿಗೆ ದನಗಳು ಎಷ್ಟು ಮುಖ್ಯ ಎಂಬುದನ್ನು ತಿಳಿಸುತ್ತದೆ. ಜನರಿಗೆ ರೋಗ ಬರುವಂತೆ ದನಗಳಿಗೂ ಬರುತ್ತವೆ. ಸಾದರಲ್ಲಿ ದನಗಳನ್ನು ಉಪಚರಿಸಿ ರೋಗಗಳನ್ನು ಗುಣಪಡಿಸುವ ಪಶು ವೈದ್ಯರಿದ್ದಾರೆ. ತೊಂಬತ್ತು ವರ್ಷದ ಇಳಿವಯಸ್ಸಿನಲ್ಲಿಯೂ ತುಂಬಾ ಆಸಕ್ತಿಯಿಂದ ದನಗಳ ರೋಗಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಚಿಕಿತ್ಸೆಯನ್ನು ಉಚಿತ ರೀತಿಯಲ್ಲಿ ನೀಡುವ, ಜನಪದ ವೈದ್ಯರಲ್ಲಿ ಪ್ರಮುಖರು ಸಿದ್ದಪ್ಪನವರು. ಇವರು ಕೋಡಿರಾಂಪುರದ ನಿವಾಸಿಯಾಗಿದ್ದು ತಮ್ಮ ಬದುಕಿನ ವಿಶಾಲ ಅನುಭವದಿಂದ ಹಲವು ದನಗಳಿಗೆ ಚಿಕಿತ್ಸೆ ನೀಡಿ ಗುಣಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ದನಗಳು ಹೊಲದಲ್ಲಿ ಕೆಲಸ ಮಾಡುವಾಗ ಕಾಲಿಗೆ ನೇಗಿಲು, ಕುಳ ತಾಗುವುದರಿಂದ, ಚೂಪಾದ ಗಾಜು, ಕಲ್ಲು, ಮುಳ್ಳು ತುಳಿದು ಕಾಲಿನ ಗೊರಸಿನಲ್ಲಿ ಗಾಯವಾದಾಗ ಆ ಗಾಯವನ್ನು ಸಣ್ಣದು ಎಂದು ಉದಾಸೀನ ಮಾಡಿ ಬಿಟ್ಟಲ್ಲಿ ಅದು ಮುಂದೆ ದೊಡ್ಡದಾಗಿ ಕಾಲು ಬಾತು ಹುಳು ಬಿದ್ದು ದೊಡ್ಡ ವ್ರಣವಾಗಿ ಪರಿಣಮಿಸುತ್ತದೆ. ಆದ್ದರಿಂದ ಗಾಯ ಸಣ್ಣದು ಎಂದು ತಾತ್ಸಾರಮಾಡದೆ ಅದಕ್ಕೆ ತಕ್ಕ ಕಾಲದಲ್ಲಿ ಔಷದೋಪಚಾರ ಮಾಡುವುದು ಜಾಣತನ.

ಆಕಸ್ಮಿಕವಾಗಿ ಹರಿತವಾದ ವಸ್ತುವಿನಿಂದ ಗಾಯವಾಗಿ ರಕ್ತ ಹೆಚ್ಚಾಗಿ ಸ್ರವಿಸುತ್ತಿದ್ದ ಆ ಗಾಯದ ಮೇಲೆ ಒಂದು ತಣ್ಣೀರು ಬಟ್ಟೆಯನ್ನು ಬಿಗಿಯಾಗಿ ಕಟ್ಟಬೇಕು. ಮತ್ತು ಬಟ್ಟೆಯ ತೇವ ಆರದಂತೆ ಆಗಾಗ್ಗೆ ಅದರ ಮೇಲೆ ತಣ್ಣೀರು ಹಾಕುತ್ತಿರಬೇಕು. ಇದರಿಂದ ಬೇಗ ರಕ್ತ ನಿಲ್ಲುತ್ತದೆ. ಆ ನಂತರ ಗಾಯವನ್ನು ಶುದ್ದವಾದ ನೀರಿನಲ್ಲಿ ಉಪ್ಪು ಬೆರೆಸಿ ಈ ಉಪ್ಪಿನ ನೀರಿನಿಂದ ಗಾಯವನ್ನು ಚೆನ್ನಾಗಿ ತೊಳೆದು ಶುಚಿಮಾಡಬೇಕು. ಗಾಯದ ತೇವವನ್ನು ಒರೆಸಿ, ಒಣಗಿದ ಮೇಲೆ ಗಾಯಕ್ಕೆ ಅರಿಸಿನ ಪುಡಿ ಮತ್ತು ಬೆಣ್ಣೆ ಕಲೆಸಿ, ಒಂದು ವೀಳ್ಯದೆಲೆಯಿಟ್ಟು ಗಾಯದ ಮೇಲೆ ಪಟ್ಟು ಕಟ್ಟಬೇಕು. ಇದರಿಂದ ಗಾಯ ಬೇಗ ವಾಸಿಯಾಗುತ್ತದೆ.

ದನಗಳು ಹೊಲದಲ್ಲಿ ಕೆಲಸಮಾಡಿ ಆಯಾಸವಾಗಿರುವ ಸಮಯದಲ್ಲಿ ಅವುಗಳಿಗೆ ಹೆಚ್ಚಿನ

ಪ್ರಮಾಣದಲ್ಲಿ ಹಸಿರುಹುಲ್ಲನ್ನು ತಿನ್ನಲು ಬಿಟ್ಟಾಗ ಕೆಲವು ದನಗಳಿಗೆ ಅಜೀರ್ಣವಾಗುತ್ತದೆ. ಮತ್ತೆ ಕೆಲವೊಮ್ಮೆ ಅವುಗಳು ತಿಂದ ಆಹಾರವು ಸರಿಯಾಗಿ ಜೀರ್ಣವಾಗದಿದ್ದರೆ ಅದಕ್ಕೆ ಅಜೀರ್ಣವೆಂದು ಕರೆಯುತ್ತಾರೆ. ಜನಪದರು ಈ ರೀತಿಯ ಅಜೀರ್ಣವನ್ನು 'ಕುಂದು' ಎಂದು ಕರೆಯುತ್ತಾರೆ. ದನಗಳಿಗೆ 'ಕುಂದು' ರೋಗ ಬಂದಾಗ ಅದರ ನಿವಾರಣೆಯಲ್ಲಿ ಸಿದ್ದಪ್ಪನವರು ಸಿದ್ಧಹಸ್ತರು. ತುಂಬೇಗಿಡ, ಸಣ್ಣ ಮಲ್ಲಿಗೆ ಗಿಡ, ಮೆಣಸು, ಬೆಳ್ಳುಳ್ಳಿ ಎಲ್ಲವನ್ನೂ ಅರೆದು ಕಾಲುಮಡಿಯಲ್ಲಿ ಹಾಕಿ ಗೊಟ್ಟದಲ್ಲಿ ದನಗಳಿಗೆ ಕುಡಿಸಿದರೆ ರೋಗವು ಬಹುಬೇಗ ಶಮನವಾಗುತ್ತದೆ. ಜೊತೆಗೆ ಈರುಳ್ಳಿ, ವೀಳ್ಯದೆಲೆ ಮತ್ತು ಬೆಲ್ಲವನ್ನು ತಿನ್ನಿಸಿದರೆ ರೋಗ ಗುಣವಾಗುತ್ತದೆ. ಮತ್ತೆ ಕೆಲವೊಮ್ಮೆ ಒಂದೇ ಹೆಸರಿನ ಇಬ್ಬರು ಸ್ತ್ರೀಯರು ಕುಂದು ಕೇರೋಮುಖೇನ ರೋಗವನ್ನು ಗುಣಪಡಿಸುತ್ತಾರೆ.

ಉದಾಹರಣೆಗೆ:- ಪದ್ಮಾವತಮ್ಮ ಎಂಬ ಹೆಸರಿನ ಇಬ್ಬರು ಸ್ತ್ರೀಯರು ಎರಡು ಮರವನ್ನು (ಧಾನ್ಯ ಕೇರುವ ಸಾಧನ) ತೆಗೆದುಕೊಂಡು ಅದಕ್ಕೆ ಸ್ವಲ್ಪರಾಗಿ ಇಟ್ಟು ಮತ್ತು ಒಂದೊಂದು ತಾಮ್ರದ ನಾಣ್ಯವನ್ನು ಹಾಕಿಕೊಂಡು ಕುಂದಾದ ಹಸುವಿನ ಅಕ್ಕ-ಪಕ್ಕದಲ್ಲಿ ನಿಂತುಕೊಂಡು

'ಅಡವಿಗೋಗಿ ಮೇಯ್ಕೊಂಡು

ಹೊಂಡದಲ್ಲಿ ನೀರುಕುಡಿದು

ಅಡ್ಡಾಡಿಕೊಂಡು ಬಾರಪ್ಪ ಬಸವಣ್ಣ' ಎಂದು ಹೇಳುತ್ತಾ ಕುಂದುಕೇರಿ ನಂತರ ಮರದಲ್ಲಿ ತಲೆಯಿಂದ ಬಾಲದವರೆಗೆ ನೀವಳಿಸುತ್ತಾರೆ. ಹೀಗೆ ದಿನಕ್ಕೆ ಮೂರುಬಾರಿ ಕುಂದು ಕೇರಿದರೆ ಎರಡು ದಿನಗಳೊಳಗಾಗಿ ಖಾಯಿಲೆ ನಿವಾರಣೆಯಾಗುತ್ತದೆ.

ಜನಪದ ಪಶುವೈದ್ಯರಿಗೆ ಇರಲೇಬೇಕಾದ ಬಹುಮುಖ್ಯ ಗುಣವೆಂದರೆ ಸೇವಾಮನೋಭಾವ. ಯಾವ ಫಲಾಪೇಕ್ಷೆಯು ಇಲ್ಲದೆ ಮೂಕಪಶುಗಳಿಗೆ ಸಲ್ಲಿಸುವ ನಿಸ್ವಾರ್ಥಸೇವೆ ಇದಾಗಿರುತ್ತದೆ.

ದನಗಳು ಮಳೆಗಾಲದಲ್ಲಿ ಬಳಲಿದಾಗ ಅಥವಾ ಜಡಿಮಳೆಯಲ್ಲಿ ನೆನೆದಾಗ ಶೀತ, ಕೆಮ್ಮು, ಜ್ವರ ಮುಂತಾದ ರೋಗದಿಂದ ಬಳಲುತ್ತವೆ. ಅಂತಹ ಸಂದರ್ಭದಲ್ಲಿ ದನಗಳು ಚಳಿಯಿಂದ ನಡುಗುವಾಗ ಅವುಳ ಮೈಮೇಲೆ ಬೆಚ್ಚಗಿನ ಹೊದಿಕೆಯನ್ನು ಹೊದಿಸಬೇಕು; ಇದಕ್ಕೂ ಮುಂಚೆ ನೀಲಗಿರಿ ಎಣ್ಣೆಗೆ ಸ್ವಲ್ಪ ಕೊಬ್ಬರಿ ಎಣ್ಣೆ ಸೇರಿಸಿ ಎದೆಯ ಎರಡೂ ಮಗ್ಗಲಿಗೆ, ಗಂಟಲು ಮತ್ತು ಕುತ್ತಿಗೆಯ ಕೆಳಗೆ ಸವರಬೇಕು. ಕೆಮ್ಮು ಬಹಳ ಜಾಸ್ತಿಯಾದಂತೆ ಸಾಸಿವೆಯನ್ನು ಅರೆದು ನೀರಿನಲ್ಲಿ ಕಲಸಿ ಎದೆಯ ಮೇಲೆ ಸಾಸಿವೆಯ ಪಟ್ಟನ್ನು ಕಟ್ಟಬೇಕು ಮತ್ತು ಕುದಿಯುವ ನೀರಿನಲ್ಲಿ ನೀಲಗಿರಿ ಎಣ್ಣೆಯನ್ನು ಸೇರಿಸಿ ಅದರ ಹವೆಯನ್ನು ಉಸಿರಾಡುವಂತೆ ಮಾಡಬೇಕು. ಜೊತೆಗೆ ತುಳಸಿ, ಶುಂಠಿ, ಮೆಣಸು-ಇವುಗಳನ್ನು ನೀರಿನಲ್ಲಿ ಕುದಿಸಿ ಕಷಾಯ ಮಾಡಿ ಕುಡಿಸಬಹುದು. ಇದರಿಂದ ಖಾಯಿಲೆ ಉಪಶಮನವಾಗುತ್ತದೆ.

ದನಗಳಿಗೆ ಬಾಯಿಬೇನೆ ಆಗುವುದುಂಟು ಆಗ ಪ್ರತಿ ದಿನ ಅರ್ಧಕಿಲೋ ಒಳ್ಳೆಣ್ಣೆಯನ್ನು

ಎರಡು ಮೂರು ದಿನ ಕುಡಿಸಿ ಕಳಿತ ಬಾಳೆಹಣ್ಣನ್ನು ಒಂದೆರೆಡು ಬಾರಿ ತಿನ್ನಲು ಕೊಟ್ಟರೆ ರೋಗ ಗುಣವಾಗುತ್ತದೆ. ಗಂಟಲ ಬೇನೆಯಾದಾಗ ಟರ್ಪೆಂಟೈನ್ ಮತ್ತು ಒಳ್ಳೆಣ್ಣೆ ಸೇರಿಸಿ ಗಂಟಲಿನ ಹೊರಭಾಗಕ್ಕೆ ಹಚ್ಚಿ ಕಾವು ಕೊಡುವುದರಿಂದ ಗಂಟಲಬೇನೆ ವಾಸಿಯಾಗುತ್ತದೆ.

ಕಣ್ಣಿನಲ್ಲಿ ಹೂ ಆದರೆ ಕುಂಕುಮವನ್ನು ಬೆಣ್ಣೆ ಇಲ್ಲವೆ ಒಗೆಯುವ ಸಾಬೂನಿನ ನೊರೆಯಲ್ಲಿ ಕಲಸಿ ಅದನ್ನು ದಿನಕ್ಕೆ ಎರಡು-ಮೂರು ಸಾರಿಯಂತೆ ಎರಡು-�ೂರು ದಿನಗಳು ಹಾಕಿದಾಗ ರೋಗ ನಿವಾರಣೆಯಾಗುತ್ತದೆ. ಹೊಟ್ಟೆನೋವು ಬಂದಾಗ ೨೫೦ ಗ್ರಾಂ ಗಾಣದ ಎಣ್ಣೆಯೊಂದಿಗೆ ಒಂದು ಬಾಟಲ್ ಟರ್ಪೆಂಟೈನ್ ಸೇರಿಸಿ ಗೊಟ್ಟದಲ್ಲಿ ಹಾಕಿದರೆ ಹೊಟ್ಟೆನೋವು ವಾಸಿಯಾಗುತ್ತದೆ.

ಹಾಗೆಯೇ ಹೊಟ್ಟೇ ಉಬ್ಬಿದರೆ ೫ ಗ್ರಾಂ ಕರ್ಪೂರವನ್ನು ೨೦೦ ಗ್ರಾಂ ತಿನ್ನುವ ಸೋಡಾದೊಂದಿಗೆ ಬೆರೆಸಿ ದ್ರಾವಣಮಾಡಿ ಹಾಕಿದರೆ ರೋಗ ನಿವಾರಣೆಯಾಗುತ್ತದೆ. ಕೃಷಿಕಾರ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿದ ದನಗಳಿಗೆ ಕೆಲವೊಮ್ಮೆ ಹೆಗಲು ಬರುವುದುಂಟು. ಆಗ ಮೇಣದ ಬತ್ತಿಯನ್ನು ಒಳ್ಳೆಣ್ಣೆಯೊಂದಿಗೆ ಸೇರಿಸಿ ಕುದಿಸಿ ಗಾಯಕ್ಕೆ ಲೇಪಿಸಲಾಗುತ್ತದೆ. ಕಾಲುಬೇನೆಯಾದಾಗ ಟರ್ಪೆಂಟೈನ್ ಅನ್ನು ನಾಲ್ಕು ಕಾಲುಗಳ ಗೊರಸುಗಳ ಕೆಳಭಾಗದಲ್ಲಿ ಹನಿ-ಹನಿಯಾಗಿ ಹಾಕುವುದರಿಂದ ರೋಗ ಶಮನವಾಗುತ್ತದೆ.

ಕೆಲವೊಮ್ಮೆ ಅನಿವಾರ್ಯವಾಗಿ ಮೊಳೆ ಅಥವಾ ಸೂಜಿಯನ್ನು ನುಂಗಿದರೆ ಶಿಲಾಜಿತ (ಸೂಜಿಗಲ್ಲು) ಅರೆದು ಪುಡಿಮಾಡಿ ಅದನ್ನು ಹೊಟ್ಟೆಯಲ್ಲಿ ಹಾಕಲಾಗುತ್ತದೆ. ಮತ್ತೆ ಕೆಲವೊಮ್ಮೆ ದನಗಳಿಗೆ ಹೇನು, ಕೂರೆ, ತಿಗಣೆ ಹತ್ತಿದಾಗ ಕೂದಲು ಉದುರುತ್ತದೆ. ಆಗ ಬೇವಿನ ಸೊಪ್ಪನ್ನು ನುಣ್ಣಗೆ ಅರೆದು ದನಗಳ ಮೈಗೆ ತಿಕ್ಕಿ ಒಂದೆರೆಡು ಗಂಟೆ ಬಿಟ್ಟು ಮೈ ತೊಳೆಯುವುದು, ಕೂದಲು ಉದುರಿದ ಭಾಗಕ್ಕೆ ತುಪ್ಪಸವರುವುದು, ಹೀರೆಮದ್ದಿನ ಸೊಪ್ಪನ್ನು ಅರೆದು ಸವರುವುದರಿಂದ ರೋಗ ಗುಣವಾಗುತ್ತದೆ. ದನಗಳಿಗೆ ಬಾವು ಆದಾಗ ಹೀರೆಮದ್ದಿನ ಸೊಪ್ಪನ್ನು ಸವರುವುದರಿಂದ ರೋಗ ಗುಣವಾಗುತ್ತದೆ.

ಇನ್ನು ದನಗಳನ್ನು ಕಾಡುವ ಪ್ರಮುಖ ರೋಗಗಳಲ್ಲಿ ಚಪ್ಪೆರೋಗವು ಒಂದು. ಇದು ಕುರಿ, ಮೇಕೆಗಳಿಗೂ ಸಹ ಬರುವುದುಂಟು. ಆದರೆ ಹೆಚ್ಚಾಗಿ ದನಗಳಿಗೆ ಅದರಲ್ಲಿಯೂ ಎಳೆಯ ಕರುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ. ಈ ರೋಗದ ಗುಣಲಕ್ಷಣವನ್ನು ಪತ್ತೆಹಚ್ಚುವುದು ಬಲು ಕಷ್ಟದಾಯಕವಾದ ವಿಚಾರವಾಗಿದೆ. ಕೆಲವೊಮ್ಮೆ ರೋಗ ಯಾವುದೆಂದು ಪತ್ತೆಯಾಗುವ ಮುನ್ನವೇ ದನಗಳು ಸಾಯುತ್ತವೆ. ಚಪ್ಪೆ ರೋಗವು ದನಗಳಿಗೆ ಮರಣಕಾರಕವಾಗಿರುವಂತಹುದಾಗಿದೆ. ಈ ರೋಗ ತಗುಲಿದ ದನಗಳು ಮೆಲುಕು ಹಾಕದೇ ಮೈ ಮುದುಡಿಕೊಂಡು ಜ್ವರದಿಂದ ನರಳುತ್ತಿರುತ್ತವೆ. ರೋಗ ತಗಲಿದ ದನಗಳು ಓಡಾಡುವುದಿಲ್ಲ, ಬಲವಂತದಿಂದ ಓಡಾಡಿಸಿದರೆ ಕುಂಟುತ್ತವೆ. ಕುಂಟುಬಿದ್ದ ಕಾಲನ್ನು ಎತ್ತಿ ಹಿಡಿದುಕೊಂಡೇ ನಿಂತಿರುತ್ತವೆ.

ಈ ರೋಗವು ಔಷದೋಪಚಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಗುಣಕಾಣುವುದಿಲ್ಲ. ಆದ್ದರಿಂದ

ರೋಗ ಬರುವ ಮೊದಲೇ ರೋಗ ಬರದಂತೆ ಎಲ್ಲ ದನಗಳಿಗೆ ರೋಗ ಪ್ರತಿಬಂಧಕ ಮೈಲಿ (ಚುಚ್ಚು ಮದ್ದು) ಹಾಕಿಸುವುದರಿಂದ ಈ ರೋಗ ಗುಣವಾಗುತ್ತದೆ. ಮತ್ತೆ-ಕೆಲವೊಮ್ಮೆ ವಿಶಾಲ ಅನುಭವ ಪಡೆದ ನುರಿತ ಪಶುವೈದ್ಯರು ಇಂತಹ ರೋಗಗಳನ್ನು ಸಹ ತಮ್ಮ ನಾರು-ಬೇರು, ಕೈ ಚಳಕದಿಂದಲೇ ಗುಣಪಡಿಸುತ್ತಾರೆ. ಆದರೆ ಕಷಾಯದಲ್ಲಿ ಬಳಕೆಯಾದ ನಾರು-ಬೇರು, ಸೊಪ್ಪು ಯಾವುದು, ಅವರು ಉಚ್ಛರಿಸಲ್ಪಡುವ ಮಂತ್ರಗಳಾವುವು ಎಂಬುದು ಗೌಪ್ಯರೀತಿಯಲ್ಲೇ ಉಳಿದುಹೋಗುವುದರಿಂದ ಇಂದು ಸಾಕಷ್ಟು ಖಾಯಿಲೆಗಳಿಗೆ ನಮ್ಮ ಸುತ್ತಮುತ್ತಲಿನ ಪ್ರಾದೇಶಿಕ ಪರಿಸರದಲ್ಲಿಯೇ ಔಷಧಿಯಿದ್ದರೂ ಅದು ನಮಗಿಂದು ತಿಳಿಯದಂತಾಗಿದೆ.

೬.೩: ಕೃಷಿ ವೈದ್ಯ:-

ಸಾದರ ವೈದ್ಯಪದ್ಧತಿಯಲ್ಲಿ ಜನವೈದ್ಯ, ಪಶು ವೈದ್ಯದಂತೆ ಅಷ್ಟೇ ಪ್ರಾಮುಖ್ಯತೆ, ಮಹತ್ವವುಳ್ಳ ವೈದ್ಯಪದ್ಧತಿಯೆಂದರೆ ಕೃಷಿ ವೈದ್ಯ. ಪಶುವೈದ್ಯದಂತೆ ಕೃಷಿವೈದ್ಯ ಪದ್ಧತಿಯಲ್ಲಿ ಸಾಕಷ್ಟು ವೈವಿಧ್ಯತೆ ಇಲ್ಲದಿದ್ದರೂ ಜನಪದ ವೈದ್ಯದ ಸಮಗ್ರ ಅರಿವಿಗಾಗಿ ಕೃಷಿವೈದ್ಯದ ಅಧ್ಯಯನ ಹೆಚ್ಚು ಮಹತ್ವಪೂರ್ಣವಾದುದಾಗಿದೆ.

ಮನುಷ್ಯ ಸಂಕುಲ ಮತ್ತು ಪ್ರಾಣಿಸಂಕುಲಕ್ಕೆ ರೋಗ-ರುಜಿನಗಳು ಬರುವಂತೆ ಸಸ್ಯ ಸಂಕುಲಗಳಿಗೂ ಹಲವಿಧದ ರೋಗಗಳು ತಗುಲುತ್ತವೆ. ನಮ್ಮಲ್ಲಿ ಹಿಂದೆ ಮನುಷ್ಯನಿಗೆ ಖಾಯಿಲೆ ಬಂದಾಗ 'ಮನುಷ್ಯನಿಗೆ ಬರದೇ, ಇನ್ನೇನು ಮರಕ್ಕೆ ಬರುತ್ತದೆಯೇ' ಎಂದು ಹೇಳಲಾಗುತ್ತಿತ್ತು. ಆದರೆ ಇಂದು ಮನುಷ್ಯನಿಗಿಂತ ದುಪ್ಪಟ್ಟು ಪ್ರಮಾಣದಲ್ಲಿ ಸಸ್ಯಗಳಿಗೂ ರೋಗ ತಗುಲುತ್ತದೆ. ಈ ರೋಗಗಳಿಂದ ಕೃಷಿಕ ತಾನು ನೆಟ್ಟ ಬೆಳೆಯನ್ನು ಪಾರು ಮಾಡದಿದ್ದರೆ ಹಗಲಿರುಳು ಶ್ರಮಿಸಿದ ರೈತನ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು ಸಾಧ್ಯವಿಲ್ಲ. ಆದಕಾರಣ ಕೃಷಿಕ ಸಾದರು ತಮ್ಮ ಬೆಳೆಗಳ ಸಂರಕ್ಷಣೆಗಾಗಿ ಹಲಬಗೆಯ ಕೃಷಿ ವೈದ್ಯ ಪದ್ಧತಿಯನ್ನು ಕಂಡುಕೊಂಡಿದ್ದಾರೆ.

ಜನಪದ ಕೃಷಿ ವೈದ್ಯವು ಜನವೈದ್ಯ ಹಾಗೂ ಪಶುವೈದ್ಯದಂತೆ ಮದ್ದು ಹಾಗೂ ಮಾಟ ಎರಡೂ ಬಗೆಯ ಚಿಕಿತ್ಸಾ ವಿಧಾನಗಳನ್ನು ಒಳಗೊಂಡಿದೆ. ಬೆಳೆಗಳಿಗೆ ಸಾಮಾನ್ಯವಾಗಿ ಬರುವ ಕೆಲವೊಂದು ರೋಗಗಳು ಕೀಟಾದಿಗಳ ಉಪದ್ರವದಿಂದ ಬರುತ್ತವೆ. ಮತ್ತೆ ಕೆಲವೊಮ್ಮೆ ಬ್ಯಾಕ್ಟೀರಿಯಾ ಮತ್ತು ಫಂಗಸ್‌ನಂತಹ ಶಿಲೀಂಧ್ರಗಳಿಂದಲೂ ರೋಗಗಳು ಬರುವುದುಂಟು. ಅತಿಯಾದ ಮಳೆ ಅದರಿಂದಾಗುವ ಶೀತ, ಅತಿಯಾದ ಬಿಸಿಲಿನತಾಪ ಇವು ರೋಗವರ್ಧಕಗಳಾಗಿ ಕೆಲಸ ಮಾಡುವುದುಂಟು.

ವಿಶಾಖ ಮಳೆಯಲ್ಲಿ ವಿಷದ ಅಂಶವಿದೆ ಎಂಬ ನಂಬಿಕೆ ಕೃಷಿಕರಲ್ಲಿದೆ. ಆದ್ದರಿಂದ ವಿಶಾಖ ಮಳೆ ಉಯ್ದರೆ ಬೆಳೆಗಳನ್ನು ಆವರಿಸಿರುವ ಕೆಲಕೀಟಗಳು ತಾವಾಗಿಯೇ ಸಾಯುತ್ತವೆ. ಸೀಡೆಯಂತಹ ರೋಗ ಈ ಮಳೆಯಿಂದ ತನ್ನಿಂತಾನೇ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಕೃಷಿ ವೈದ್ಯ ಪದ್ಧತಿಯಲ್ಲಿ ರೋಗ ನಿವಾರಣೆಗೆ ಪರಿಸರಮಾರಕ ರಾಸಾಯನಿಕಗಳನ್ನು ಬಳಸದೆ, ಕಡಿಮೆ

ಖರ್ಚಿನಲ್ಲೇ ದೊರೆಯುವ ಪರಿಸರ ಸ್ನೇಹಿ ಸಾವಯವ ದ್ರವ್ಯಗಳನ್ನು ಬಳಸುವುದರಿಂದ ಆಹಾರಧಾನ್ಯಗಳು ವಿಷಪೂರಿತವಾಗುವುದು ತಪ್ಪುತ್ತದೆ. ಪರಿಸರದ ಸಂರಕ್ಷಣೆಯು ಸಾಧ್ಯವಾಗುತ್ತದೆ.

ಬದನೆಗಿಡಕ್ಕೆ ಹೇನು ಬೀಳುವುದು, ಇಲ್ಲವೆ ನುಸಿ ರೋಗ ಬಂದರೆ ಅದರ ನಿವಾರಣೆಗಾಗಿ ಅಡುಗೆ ಒಲೆಯ ಬೂದಿಯನ್ನು ಎರಚಲಾಗುತ್ತದೆ. ಇದರಿಂದ ನುಸಿರೋಗ ನಿವಾರಣೆಯಾಗುತ್ತದೆ.

ಮುಂದಿನ ವರ್ಷದ ಬಿತ್ತನೆ ಬೀಜಗಳಿಗೆಂದು ಬದನೆಕಾಯಿ, ಟೊಮೆಟೋ, ಸೌತೆಕಾಯಿ, ಕುಂಬಳಕಾಯಿ ಇತ್ಯಾದಿಗಳ ಸಂರಕ್ಷಣೆಗಾಗಿ ಬೂದಿಯನ್ನು ಸವರಿ ಒಣಗಿಸಿ ಇಡುವುದರಿಂದ ಉಳು ಬಿದ್ದು ಹಾಳಾಗುವುದನ್ನು ತಡೆಯಬಹುದು.

ಹತ್ತಾರು ವರ್ಷ ಬಾಳುವ ಅಡಕೆಗಿಡಗಳಿಗೆ ಒಮ್ಮೊಮ್ಮೆ ಸುಳಿ ಒಣಗುತ್ತದೆ. ಕಾರಣ ಅದರ ಸುಳಿಯನ್ನು ಹುಳುತಿಂದು ನಾಶಪಡಿಸುತ್ತಿರುತ್ತವೆ. ಅಂತಹ ಸಮಯದಲ್ಲಿ ಒಂದು ತೆಳ್ಳನೆಯ ಬಟ್ಟೆಯಲ್ಲಿ ಕಲ್ಲುಪ್ಪನ್ನು ಗಂಟುಕಟ್ಟಿ ಅಡಕೆಗಿಡದ ಸುಳಿಯ ಮೇಲಿಟ್ಟು ದಿನಕ್ಕೊಮ್ಮೆ ನೀರುನ್ನು ಹಾಕಲಾಗುತ್ತದೆ. ಇದರಿಂದ ಸುಳಿಕೊರೆಯುವ ಹುಳುಸತ್ತು ಗಿಡಕ್ಕೆ ಹೊಸ ಜೀವ ಬರುತ್ತದೆ, ಮತ್ತೆ ಹೊಸ ಸುಳಿ ಇಟ್ಟು ಗಿಡ ಉಳಿಯುತ್ತದೆ, ಬೆಳೆಯುತ್ತದೆ.

ಭತ್ತದ ಗದ್ದೆಗೆ ಪೈರನ್ನು ನಾಟಿಮಾಡಿದ ಕೆಲವೇ ದಿನಗಳಲ್ಲಿ ಬೆಂಕಿ ಸೀಡೆ ರೋಗ ಬರುತ್ತದೆ. ಈ ರೋಗವು ಬಂದ ಕೆಲವೆ ದಿನಗಳಲ್ಲಿ ಇದು ಗದ್ದೆಯ ತುಂಬೆಲ್ಲಾ ವ್ಯಾಪಿಸಿ ಗರಿಗಳೆಲ್ಲಾ ಒಣಗಲಾರಂಭಿಸುತ್ತವೆ. ಈ ರೋಗ ನಿವಾರಣೆಗೆ ಬೇವಿನಕಾಯಿಯ ಬೀಜವನ್ನು ಕುಟ್ಟಿ ಗದ್ದೆಗೆ ಎರಚುವುದರಿಂದ ರೋಗ ನಿಯಂತ್ರಣಕ್ಕೆ ಬರುತ್ತದೆ. ಜೊತೆಗೆ ಇಳುವರಿಯ ಗುಣಮಟ್ಟ ಹೆಚ್ಚಿ ಉತ್ತಮವಾದ ಬೆಳೆ ದೊರೆಯುತ್ತದೆ.

ಕೆಲವೊಮ್ಮೆ ಬೇವನ್ನು ಕೀಟನಾಶಕವಾಗಿ ಬಳಸುವುದುಂಟು, ಬೆಳೆಗೆ ಬೇವಿನ ಎಣ್ಣೆಯನ್ನು ಸಿಂಪಡಿಸಿದರೆ ಕೀಟಗಳು ಬರುವುದಿಲ್ಲ. ಅಷ್ಟೇ ಅಲ್ಲದೇ ಹೆಣ್ಣು ಕೀಟಗಳು ಮೊಟ್ಟೆ ಇಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಗಂಡು ಕೀಟಗಳು ನಪುಂಸಕತ್ವ ಹೊಂದುತ್ತವೆ. ಜೊತೆಗೆ ಇದು ಪರಿಸರ ಪೂರಕ ಸಾವಯವ ಗೊಬ್ಬರವಾಗುತ್ತದೆಯೇ ಹೊರತು ಪರಿಸರ ಮಾರಕವಾಗುವುದಿಲ್ಲ.

ಸಾದರಲ್ಲಿ ಆಚರಣಾತ್ಮಕ ಕೃಷಿವೈದ್ಯಪದ್ಧತಿಯು ಚಾಲ್ತಿಯಲ್ಲಿದೆ. ಇದಕ್ಕೆ ಧಾರ್ಮಿಕ ಹಿನ್ನೆಲೆಯ ನಂಬಿಕೆ, ಆಚರಣೆ, ಪೂಜೆ, ಹರಕೆ ಇತ್ಯಾದಿಗಳು ಕಾರಣವಾಗಿದ್ದು, ಇವೆಲ್ಲವೂ ಗ್ರಾಮೀಣ ಬದುಕಿನ ಅವಿನಾಭಾವ ಅಂಗವೇ ಆಗಿವೆ.

ಸಮೃದ್ಧವಾಗಿ ಬೆಳೆದಿರುವ ಹಸಿರು ಬೆಳೆಯನ್ನು ಕೆಟ್ಟ ದೃಷಿಯುಳ್ಳವನು ನೋಡಿದರೆ ದೃಷ್ಟಿತಾಗುತ್ತದೆಂಬ ನಂಬಿಕೆ ಜನಪದರಲ್ಲಿ ವ್ಯಾಪಕವಾಗಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಅದರ ಕೇಡಿನ ನಿವಾರಣೆಗಾಗಿ ಬೆದರುಬೊಂಬೆಯನ್ನು ಬೆಳೆಯ ಮಧ್ಯೆ ನಿಲ್ಲಿಸುವ ಪರಿಹಾರ ಇಂದಿಗೂ ಚಾಲ್ತಿಯಲ್ಲಿದೆ.

ಗ್ರಹಣದ ದಿನ ಗ್ರಹಣ ಬಿಡುವ ಸಮಯಕ್ಕೆ ಸರಿಯಾಗಿ ಅನ್ನಕ್ಕೆ ಮೊಸರು, ಕುಂಕುಮವನ್ನು ಬೆರೆಸಿ ಅದನ್ನು ರಾಗಿಹೊಲ ಮತ್ತಿತರೆ ಬೆಳೆಗಳಿಗೆ ಎರಚಲಾಗುತ್ತದೆ. ಇದನ್ನು ಎರಚುವಾಗ ಬಲಿಯೋ-ಬಲಿ ಎಂದು ಕೂಗುತ್ತ ಎರಚಲಗುತ್ತದೆ. ಇದುವೆ ಕಾಣದ ದುಷ್ಟಶಕ್ತಿಗಳಿಂದ ಬೆಳೆಯನ್ನು ರಕ್ಷಿಸಿಕೊಳ್ಳಲು ನೀಡುವ ಬಲಿ ಎಂಬುದು ಜನಪದರ ನಂಬಿಕೆ.

ಬೆಳೆಯ ನಡುವೆ ಬೀಳುವ ಕೆಂಪು ಅನ್ನದ ಅಗುಳಿಗೆ ಆಕರ್ಷಿತವಾಗುವ ಕೀಟಾಹಾರ ಪಕ್ಷಿಗಳು ಅದನ್ನು ತಿನ್ನಲು ಹೋಗಿ ಪೈರಿನಲ್ಲಿರುವ ಹುಳು-ಹುಪ್ಪಟೆಗಳನ್ನು ಆಯ್ದು ತಿನ್ನುತ್ತವೆ. ಕೀಟಗಳಿಂದ ಪೈರಿನ ಸಂರಕ್ಷಣೆಯಾಗುತ್ತದೆ. ಜನಪದ ಕೃಷಿ ವೈದ್ಯದ ಅಧ್ಯಯನವು ಗುಣದೋಷಗಳನ್ನು ಗುರುತಿಸಲು ನೆರವಾಗುವುದರೊಂದಿಗೆ ಜಾಗತಿಕ ಸಂದರ್ಭದಲ್ಲಿ ನಮ್ಮ ಪಾರಂಪರಿಕ ಕೃಷಿ ವಿಜ್ಞಾನದ ಮಹತ್ವ ಎಂತಹದೆಂಬುದನ್ನು ಸಾರಿ ಹೇಳುವಂತಿದೆ.

ಅಡಿಟಿಪ್ಪಣಿಗಳು

೧. ಶ್ರೀ. ರಾಮರಾವ್ ಜ್ಯೋತಿ–'ದನಗಳ ರೋಗಗಳು ಅವುಗಳ ನಿವಾರಣೋಪಾಯಗಳು'– ಪುಟ ಸಂಖ್ಯೆ–೦೧.

ಅಧ್ಯಾಯ–೭

ಜನಪದ ಕಲೆಗಳು

೭.೧: ಕೋಲಾಟ.

೭.೨: ಮಳೆರಾಯನ ಕುಣಿತ.

೭.೩: ಸುಗ್ಗಿಯ ಕುಣಿತ.

೭.೪: ರಂಗೋಲಿ.

೭.೫: ಗೃಹಾಲಂಕಾರ ವಸ್ತುಗಳ ತಯಾರಿ.

೭.೬: ಕೃಷಿ ಸಲಕರಣೆಗಳ ತಯಾರಿ.

೭.೭: ಜನಪದ ಆಟಗಳು.

ಅಧ್ಯಾಯ-೭
ಜನಪದ ಕಲೆಗಳು

ಜನಪದ ಕಲೆಗಳು:

ಜನಪದ ಕಲೆ ಎಂಬುದು ಮನುಷ್ಯನ ಅದ್ಭುತ ಯುಕ್ತಿಯ ಸಂಕೇತವಾಗಿ ಬೆಳೆದುಬಂದ ಒಂದು ದಿವ್ಯ ಶಕ್ತಿ. ಸಾಮಾನ್ಯವಾಗಿ ಮನುಷ್ಯನಲ್ಲಿ ಸುಪ್ತಾವಸ್ಥೆಯಲ್ಲಿರುವ ಕಲೆ ಸಂದರ್ಭಕ್ಕನುಗುಣವಾಗಿ ತನಗೆ ತಾನೇ ಪ್ರಕಟಗೊಂಡು, ಮುಂದೆ ಬೆಳೆದು ಬದಲಾಗುತ್ತಾ ಸಾಗುತ್ತದೆ. ಜನಪದ ಸಂಸ್ಕೃತಿ ಮಾತಿನ ಮೂಲಕ ಅಭಿವ್ಯಕ್ತಗೊಂಡದ್ದಕ್ಕಿಂತ, ಅವರ ಆಚರಣೆ, ನಂಬಿಕೆ, ಕಲೆಗಳ ಮೂಲಕ ಅಭಿವ್ಯಕ್ತಗೊಂಡದ್ದೇ ಹೆಚ್ಚು ದಟ್ಟವಾಗಿ ಕಾಣಿಸಿಕೊಳ್ಳುತ್ತದೆ. ಮೌನ ಕಲಿಕೆಯ ವಿಧಾನವೇ ಜನಪದ ಪಾಠಶಾಲೆಯಾಗಿದೆ ಎಂದು ಹೇಳಬಹುದು. ಕಲೆಗಳ ವಿಷಯದಲ್ಲಂತೂ ಇದು ನೂರಕ್ಕೆ ನೂರರಷ್ಟು ಸತ್ಯವೆನಿಸುತ್ತದೆ. ಜನಪದರು ಮೌಖಿಕ ಪರಂಪರೆಯಿಂದ ವಿಷಯಗಳನ್ನು, ಸಂಗತಿಗಳನ್ನು ಗ್ರಹಿಸಿ ಕಲಿಯುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಆ ಮೂಲಕ ಜನಪದರು ಅಪಾರ ಅನುಭವವನ್ನು ತಮ್ಮದಾಗಿಸಿಕೊಂಡು ಮುಂದಿನ ಪೀಳಿಗೆಗೆ ರವಾನಿಸಿದ್ದಾರೆ.

"ಒಂದು ಜನಾಂಗಕ್ಕೆ ಇಂದ್ರಿಯ ಪ್ರಜ್ಞೆ ಬಂದಾಗಲೇ ಒಂದಿಲ್ಲೊಂದು ಬಗೆಯ ನಾಟ್ಯ ಪ್ರಜ್ಞೆಯೂ ಬೆಳೆದು ಬಂದಿರುತ್ತದೆ. ತುಂಬಿದ ಅನುಭವ ತುಳಕಲಾರಂಭಿಸಿದಾಗ ಅಭಿವ್ಯಕ್ತಿಯ ಮಾಧ್ಯಮಗಳು ಗೋಚರವಾಗತೊಡಗುತ್ತವೆ. ಪ್ರಕೃತಿಗೆ ಪ್ರಕ್ರಿಯೆ ತೋರುವಾಗಲೋ, ಅಥವಾ ಅದರ ವ್ಯಾಪಾರಗಳ ಅನುಕರಣೆ ಮಾಡುವಾಗಲೋ ಆದಿಮಾನವ ಕುಣಿದಿರಬೇಕು, ಹಾಡಿರಬೇಕು. ಕ್ರಿಯೆ ಪ್ರತಿಕ್ರಿಯೆಗಳೆರಡನ್ನು ಏಕಕಾಲದಲ್ಲಿ ಕುಣಿದಾಡುವಾಗ ಒಂದಕ್ಕಿಂತ ಹೆಚ್ಚು ಪಾತ್ರಗಳು ಹುಟ್ಟಿರಬೇಕು. ಅವುಗಳಿಗೆ ಮುಂದೆ ಧಾರ್ಮಿಕ ಸ್ವರೂಪವೂ ಬಂದಿರಬೇಕು. ಸ್ವಚ್ಛಂದವಾಗಿದ್ದ ಈ ಕಲೆ ವ್ಯವಸ್ಥೆಗೆ ಮೈ ಒಡ್ಡಿದಾಗ, ನಿಯಮಗಳಿಗೆ ಸಿಕ್ಕಾಗ ಅಭಿಜಾತವಾಗಿರಬೇಕು. ಅಲ್ಲದೇ ಇದು ಜಗತ್ತಿನ ಕೆಲವೇ ಜನಾಂಗಕ್ಕೆ ಬರೆದುಕೊಟ್ಟ ದೇಣಿಗೆಯೇನೂ ಅಲ್ಲ, ಕೈಕಾಲು, ಬಾಯಿ ಉಳ್ಳ ಯಾವ ಜನಾಂಗಕ್ಕೂ ಇದು ಸ್ವಾಭಾವಿಕ ಪ್ರವೃತ್ತಿಯಾಗಿದೆ"[1] ಎಂದು ಜನಪದ ಕಲೆಗಳ ಉಗಮವನ್ನು ಕುರಿತಂತೆ ಡಾ.ರಾಜಶೇಖರ ಹನುಮಲಿರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿಸಿಕೊಂಡಿರುವ ಸಾದರಲ್ಲಿಯೂ ಹಲವು ಜನಪದ ಕಲೆಗಳು ರೂಢಿಯಲ್ಲಿರುವುದನ್ನು ಗಮನಿಸಬಹುದು. ಸಮಾಜದ ಒಂದು ಮುಖ್ಯ ವಾಹಿನಿಗೆ ಬರುಲು ಪ್ರಯತ್ನಿಸುತ್ತಿರುವ 'ಸಾದರ' ಬದುಕಿನಲ್ಲಿಯೂ ಈ ಜನಪದ ಕಲೆಗಳು ಜೀವಂತವಾಗಿವೆ. ಮನರಂಜನೆಯ ಪ್ರದರ್ಶನ ಕಲೆಗಳಾಗಿ ಕೋಲಾಟ, ಮಳೆರಾಯನ ಕುಣಿತ, ಸುಗ್ಗಿ ಸಮಯದ ಕುಣಿತ, ನಾಟಕ ಮತ್ತು ಕರಕುಶಲಕಲೆಗಳಾಗಿ ರಂಗೋಲಿ, ಗೃಹಾಲಂಕಾರಿಕ ವಸ್ತುಗಳ ನಿರ್ಮಾಣ, ಹಗ್ಗ ಹೊಸೆಯುವುದು, ಕೃಷಿ ಸಲಕರಣೆಗಳ ತಯಾರಿಕೆ ಇನ್ನು ಮುಂತಾದ ಕರಕುಶಲ ಕಲೆಗಳು ಇವರಲ್ಲಿರುವುದನ್ನು ಗುರುತಿಸಬಹುದು.

೭.೧: ಕೋಲಾಟ:-

ಬಹುತೇಕ ಎಲ್ಲಾ ಜಾತಿಗಳಲ್ಲಿಯೂ ಆಚರಣೆಯಲ್ಲಿರುವ ಈ ಜನಪದ ಕಲೆಯು ಆಯಾ ಜನಸಮುದಾಯದ ಆಶೋತ್ತರಗಳನ್ನು ಬಿಂಬಿಸುತ್ತವೆ. ಸಾದರಲ್ಲಿಯೂ ಸಹ ಮನರಂಜನೆಯ ಪ್ರದರ್ಶನ ಕಲೆಗಳಲ್ಲಿ ಕೋಲಾಟ ಬಹುಜನಪ್ರಿಯ ಕಲೆಯಾಗಿದೆ. ಜಾತಿ-ಮತ-ಲಿಂಗಭೇದವಿಲ್ಲದೇ ಎಲ್ಲಾ ಗ್ರಾಮಗಳಲ್ಲಿಯೂ ಕೋಲಾಟ ತನ್ನ ಅಸ್ತಿತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಮೂಲತಃ ಮನೆರಂಜನೆಯನ್ನೇ ತನ್ನ ಪ್ರಧಾನ ಆಶಯವನ್ನಾಗಿ ಹೊಂದಿರುವ ಈ ಜನಪದ ಕಲೆಯು ಸಾಹಿತ್ಯ, ಸಂಗೀತ, ಕುಣಿತವನ್ನು ಮೇಳೈಸಿಕೊಂಡು ರೂಪಿತವಾಗಿದೆ. ಕೋಲಾಟದಲ್ಲಿ ಕೋಲುಗಳು ಪ್ರಧಾನಪಾತ್ರ ವಹಿಸುತ್ತವೆ. ಬಿದಿರಿನ ಕಡ್ಡಿಗಳಿಗೆ ರಂಗು-ರಂಗಿನ ಬಣ್ಣವನ್ನು ಬಳಿದು ಕೋಲುಗಳನ್ನು ಸಿದ್ದಪಡಿಸಿಕೊಳ್ಳುತ್ತಾರೆ. ೮, ೧೦, ೧೨, ೧೪, ೧೬ ರಂತೆ ಸಮಸಂಖ್ಯೆಯ ಜೋಡಿಗಳಾಗಿ ಆಟ ಆರಂಭಿಸುತ್ತಾರೆ, ಸುಮಾರು ೧೦-೧೫ ವರ್ಷಗಳ ಮಕ್ಕಳಿಂದಿಡಿದು ೪೦-೫೦ ವರ್ಷಗಳ ಮಧ್ಯವಯಸ್ಕರವರೆಗಿನ ವಯೋಮಾನದವರೂ ಸಹ ಕೋಲಾಟದಲ್ಲಿ ಪಾಲ್ಗೊಳ್ಳುತ್ತಾರೆ. ತಾಳಕ್ಕೆ ತಕ್ಕಂತೆ ಒಬ್ಬರ ಕೋಲಿಗೆ ಮತ್ತೊಬ್ಬರ ಕೋಲನ್ನು ತಾಕಿಸುತ್ತಾ, ಒಮ್ಮುಖವಾದ ಶಬ್ದವನ್ನು ಹೊಮ್ಮಿಸುತ್ತಾ ಹಾಡು ನೃತ್ಯದೊಂದಿಗೆ ಆರಂಭವಾಗುವ ಕೋಲಾಟವು ೨-೩ ಗಂಟೆಗಳ ಕಾಲ ಪ್ರದರ್ಶಿತವಾಗುವ ಜನಪದ ಕಲೆಯಾಗಿದೆ. ಇದೊಂದು ಉತ್ತಮ ವ್ಯಾಯಾಮ ಸಾಧನ ಕಲೆಯಾಗಿದ್ದು ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪುಷ್ಟಿದಾಯಕವಾದುದಾಗಿದೆ. “ಕೋಲು ಕೋಲನ್ನ ಕೋಲೆ, ಚಿನ್ನದಾ, ರನ್ನದಾ......ಕೋಲು ಕೋಲನ್ನ ಕೋಲೆ” ಎಂಬ ಪಲ್ಲವಿಯಿಂದ ಪ್ರಾರಂಭವಾಗುವ ಕೋಲಾಟವನ್ನು ಸುಗ್ಗಿ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾಡಲಾಗುತ್ತದೆ. ಸಂಕ್ರಾಂತಿಯ ಸಮಯದಲ್ಲಂತೂ ಕೋಲಾಟದ ಪ್ರಾಧಾನ್ಯತೆ ಹೆಚ್ಚಿರುತ್ತದೆ. ರೈತರು ತಾವು ಬೆಳೆದ ಬೆಳೆಯನ್ನು ಅಥವಾ ಧಾನ್ಯವನ್ನೆಲ್ಲಾ ಒಟ್ಟಾಗಿ ಕಣದಲ್ಲಿ ರಾಶಿಮಾಡಿ ಬೆಳದಿಂಗಳಲ್ಲಿ ಕೋಲಾಟವಾಡುತ್ತಾ ಸಂಭ್ರಮಿಸುತ್ತಾರೆ. ಆ ಮೂಲಕ ಶ್ರಮಸಂಸ್ಕೃತಿಯ ವಕ್ತಾರರಾದ ಕೃಷಿಕರೆಲ್ಲರೂ ತಮ್ಮ ಎಲ್ಲ ನೋವನ್ನು ಮರೆತು ನೆಮ್ಮದಿಯ ಬದುಕಿನೆಡೆಗೆ ಪಯಣಸಾಗಿಸುವ ಪ್ರಯತ್ನ ಮಾಡುತ್ತಾರೆ. ಮತ್ತೆ ಕೆಲವೊಮ್ಮೆ ಮದುವೆ ಮುಂತಾದ ಶುಭಸಮಾರಂಭಗಳ ಸಂದರ್ಭದಲ್ಲಿಯೂ ಸಹ ಕೋಲಾಟದ ಸಂಭ್ರಮವಿರುತ್ತದೆ.

೭.೨: ಮಳೆರಾಯನ ಕುಣಿತ:-

ಕೃಷಿಯು ಮಳೆಯೊಂದಿಗಾಡುವ ಜೂಜಾಟ ಎಂಬುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ. ಅತಿವೃಷ್ಟಿಯಾದರೂ, ಅನಾವೃಷ್ಟಿಯಾದರೂ ಅದು ಕೃಷಿಕರಾದ ಸಾದರ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ಮಳೆಬಾರದೆ ರೈತರು ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಅವರು ಮಳೆರಾಯನ ಮೊರೆಹೋಗುತ್ತಾರೆ. ಊರಿನ ಜನರೆಲ್ಲರೂ ಸೇರಿ ಜೇಡಿಮಣ್ಣಿನಿಂದ ಹಲಗೆಯ ಮೇಲೆ ಮಳೆರಾಯನನ್ನು ಮಾಡಿ ಅದನ್ನು ಊರದೇವಾಲಯದ ಮುಂದಿಟ್ಟು ಪೂಜಿಸಿ ಅದನ್ನು ಒಬ್ಬ ಚಿಕ್ಕ

ಹುಡುಗನ ತಲೆಯಮೇಲೆ ಹೊರಿಸಿಕೊಂಡು ಮನೆಗೊಂದಾಳಿನಂತೆ ಗ್ರಾಮದ ಎಲ್ಲರೂ ಪ್ರತಿಯೊಂದು ಮನೆಯ ಮುಂದೆ ಹೋಗಿ ನಿಂತು

"ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ

ಬಾರೋ ಬಾರೋ ಮಳೆರಾಯ ಬಾಳೆಯ ತೋಟಕೆ ನೀರಿಲ್ಲ

ಬಾರಪ್ಪೋ ಮಳೆರಾಯ ನೀ ಬಂದುಯ್ಯೋ ಮಳೆರಾಯ" ಎಂದು ಹಾಡುತ್ತಾ ಕುಣಿಯುತ್ತಾರೆ. ಆಗ ಮನೆಯಲ್ಲಿನ ಹೆಣ್ಣು ಮಕ್ಕಳು ಮನೆಯಲ್ಲಿನ ಒಂದು ಕೊಡ ನೀರನ್ನು ತಂದು ವಿಗ್ರಹದ ಮೇಲೆ ಮತ್ತು ಹಲಗೆ ಹೊರುವವರ ಮೇಲೆ ಸುರಿಯುತ್ತಾರೆ. ನಂತರ ತಮ್ಮ ಇಚ್ಛಾನುಸಾರ ದವಸ-ಧಾನ್ಯಗಳನ್ನು ದಾನವಾಗಿ ನೀಡುತ್ತಾರೆ. ನಂತರ ಎಲ್ಲರೂ ಊರ ಹೊರಗಿನ ಗುಡ್ಡದ ಮೇಲಕ್ಕೆ ಮಳೆರಾಯನನ್ನು ಹೊತ್ತುಕೊಂಡು ಹೋಗಿ ಹಾಡುತ್ತಾ ಕುಣಿಯುವರು. ಈ ಆಚರಣೆಯಿಂದ ಮಳೆಬರುವುದೆಂಬ ನಂಬಿಕೆ ಇಂದಿಗೂ ಜನಪದರಲ್ಲಿ ಜೀವಂತವಾಗಿದೆ.

೭.೩: ಸುಗ್ಗಿಯ ಕುಣಿತ:-

ಸುಗ್ಗಿಯ ಸಂದರ್ಭದಲ್ಲಿ ಆಚರಣೆಯಲ್ಲಿರುವ ಈ ಜನಪದ ಕಲೆಗೆ ಸುಗ್ಗಿ ಕುಣಿತವೆಂದು ಕರೆಯಲಾಗುತ್ತದೆ. ಸಾದರಿಗೆ ಸುಗ್ಗಿ ಸಂತಸ-ಸಂಭ್ರಮಗಳ ಕಾಲ. ವರ್ಷವಿಡೀ ದುಡಿದ ದುಡಿಮೆಯ ಫಲವಾಗಿ ಧವಸ-ಧಾನ್ಯಗಳು ಮನೆಸೇರಿ, ಮನೆಮಂದಿಯೆಲ್ಲಾ ನೆಮ್ಮದಿಯಿಂದ ವಿಶ್ರಮಿಸುವ ಕಾಲವದು. ಅಂತಹ ಸಂದರ್ಭದಲ್ಲಿ ಸುಗ್ಗಿಯ ಕುಣಿತವನ್ನು ದೇವಾಲಯ, ಊರ ಮುಂದಿನ ಬಯಲಿನಲ್ಲಿ ಆಚರಿಸಲಾಗುತ್ತದೆ. ಸುಗ್ಗಿಯ ಕುಣಿತಕ್ಕೆ ಇಂತಹದ್ದೇ ಉಡುಪಿರಬೇಕೆಂಬ ನಿರ್ಭಂಧವಿಲ್ಲ. ಬಿಳಿಯ ಕಚ್ಚೆ-ಪಂಚೆಯನ್ನು ಮತ್ತು ಪೇಟವನ್ನು ಧರಿಸುತ್ತಾರೆ. ತಮಟೆ, ನಗಾರಿಗಳ ಮೇಳದೊಂದೊಗೆ ಹಾಡುತ್ತಾ ರಾತ್ರಿ ಇಡೀ ಕುಣಿದು ಸಂಭ್ರಮಿಸುತ್ತಾರೆ.

ನಾಟಕ:-

ಬೇಸಿಗೆಯಲ್ಲಿ ಸಾದರು ತಮ್ಮ ಬಿಡುವಿನ ವೇಳೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಿರಿಯರೆಲ್ಲರೂ ಒಂದೆರೆಡು ನಾಟಕಪ್ರದರ್ಶನದ ಬಗ್ಗೆ ಚಿಂತಿಸಿ ಅಲ್ಲೇ ಇರುವ ನಾಟಕ ಕಲಿಸುವ ಗುರುಗಳನ್ನು ಕರೆಸಿ ಆಸಕ್ತಿಯಿರುವ ಚಿಕ್ಕ ಹುಡುಗರಿಂದಿಡಿದು ಮಧ್ಯವಯಸ್ಕರವರೆಗೆ ಅವರವರ ವಯಸ್ಸು, ವ್ಯಕ್ತಿತ್ವ, ವರ್ಚಸ್ಸು, ಧ್ವನಿಗೆ ಅನುಗುಣವಾಗಿ ಪಾತ್ರಗಳ ಹಂಚಿಕೆ ಕಾರ್ಯ ನಡೆಯುತ್ತದೆ. ನಾಟಕ ಇನ್ನು ಒಂದು ತಿಂಗಳಿರುವಾಗಲಿಂದಲೇ ನಾಟಕ ಕಲಿಕೆ ಪ್ರಾರಂಭವಾಗುತ್ತದೆ. ನಾಟಕ ಪ್ರದರ್ಶನವಿನ್ನೂ ಒಂದು ವಾರವಿದೆ ಎನ್ನುವಾಗಲೇ ಪಾತ್ರಧಾರಿಗಳು ತಮ್ಮ ನೆಂಟರಿಷ್ಟರು, ಬಂಧು-ಬಾಂಧವರನ್ನೆಲ್ಲಾ ನಾಟಕನೋಡಲು ಕರೆದುಬರುತ್ತಾರೆ. ನಾಟಕ ದಿನದಂದು ನಾಟಕವಾಡುವ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲೆಲ್ಲಾ ಹಬ್ಬದ ವಾತಾವರಣವಿರುತ್ತದೆ. ಹೊಲ-

ಗದ್ದೆಗಳಿಗೆ ದನ-ಕರುಗಳನ್ನು, ಕುರಿ-ಮೇಕೆಗಳನ್ನು ಮೇಯಿಸುವ ಸಲುವಾಗಿ ಹೋಗಿರುವ ಗ್ರಾಮದ ಸದಸ್ಯರೆಲ್ಲರೂ ಬಹು-ಬೇಗನೆ ಗ್ರಾಮಕ್ಕೆ ಮರಳಿಬರುತ್ತಾರೆ. ಇನ್ನು ನೆರೆಯ ಗ್ರಾಮಸ್ಥರು ನಾಟಕ ನೋಡುವ ಸಲುವಾಗಿ ಸಾಯಂಕಾಲ ಮುಸ್ಸಂಜೆ ವೇಳೆಗಾಗಲೇ ಪಂಜುಗಳನ್ನಿಡಿದುಕೊಂಡು ಬಂದು ಸೇರುತ್ತಾರೆ. ಗ್ರಾಮದ ಮಕ್ಕಳೆಲ್ಲರೂ ಚಾಪೆ, ಕಂಬಳಿಯನ್ನು ತಂದು ನಾಟಕ ಆಡುವಲ್ಲಿ ತಮ್ಮ ಸ್ಥಳಗಳನ್ನು ಕಾಯ್ದಿರಿಸಿಕೊಳ್ಳುತ್ತಾರೆ. ಪಾತ್ರಧಾರಿಗಳು ತಮ್ಮ ಪಾತ್ರಗಳಿಗನುಗುಣವಾಗಿ ವಿಶಿಷ್ಟ ವೇಷ ಭೂಷಣಗಳಿಂದ ಸಿದ್ದರಾಗಿರುತ್ತಾರೆ. ಸುಮಾರು ೧೦-೧೧ ಗಂಟೆಗೆ ದೇವರ ಪೂಜೆಯನ್ನು ಮಾಡಿ ನಂತರ ನಾಟಕವನ್ನು ಪ್ರಾರಂಭಿಸುತ್ತಾರೆ. ಎಲ್ಲರೂ ಸಡಗರ ಸಂಭ್ರಮದಿಂದ ನಾಟಕವನ್ನು ವೀಕ್ಷಸುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಆಧಾರಿತ ನಾಟಕಗಳನ್ನು ಆಡುತ್ತಾರೆ. ಕಥೆ ಚಿಕ್ಕದಾದರೆ ಒಂದು ರಾತ್ರಿ, ಕೆಲವೊಮ್ಮೆ ಕತೆ ದೊಡ್ಡದಾದರೆ ಎರಡು-ಮೂರು ರಾತ್ರಿಯೂ ಆಡುವುದುಂಟು. ಪಾತ್ರಧಾರಿಗಳು ಪ್ರೇಕ್ಷಕರನ್ನು ತಮ್ಮ ಅಭಿನಯ, ಸಂಭಾಷಣೆಯಿಂದ ರಂಜಿಸುತ್ತಾರೆ. ಆಗ ಪ್ರೇಕ್ಷಕರು ತಮ್ಮ ಇಚ್ಛಾನುಸಾರ ಬೋಂಡ, ನೋಟು (ಹಣ), ಹೂ ಮತ್ತಿತರೆ ಹಾರಗಳನ್ನು ಪಾತ್ರಧಾರಿಗಳ ಕೊರಳಿಗೆ ಮಾಲೆಯಾಗಿ ಹಾಕುತ್ತಾರೆ. ನೆಂಟರಿಷ್ಟರು ಪಾತ್ರಧಾರಿಗಳಿಗೆ ಹಂಡೆ, ಗುಂಡಿ, ಕೊಳಗ, ಮತ್ತಿತರೆ ಪಾತ್ರೆ-ಪದಾರ್ಥಗಳನ್ನು ಉಡುಗೊರೆಯಾಗಿ ನೀಡುತ್ತಾರೆ.

ಹೀಗೆ ಜನಪದರು ಇಡೀರಾತ್ರಿ ನಾಟಕವನ್ನು ಕೆಲವರು ಆಡಿ ಹಲವರು ನೋಡಿ ಹರ್ಷಿಸುತ್ತಾರೆ. ನಾಟಕವನ್ನು ಕಲಿಸಿದ ಗುರುಗಳಿಗೆ ಗ್ರಾಮಸ್ಥರು ಧವಸ-ಧಾನ್ಯಗಳನ್ನು ಧಾನವಾಗಿ ನೀಡುತ್ತಾರೆ. ಈ ರೀತಿಯ ನಾಟಕ ಪ್ರದರ್ಶನವು ಜನರಲ್ಲಿ ಸತ್ಯ, ನ್ಯಾಯ, ನೀತಿಯಂತಹ ಉತ್ತಮ ಮೌಲ್ಯಗಳ ಪ್ರತಿಪಾದನೆಗೆ ನೆರವಾಗುತ್ತವೆ.

ನಾಟಕವನ್ನು ಕುರಿತು ಹಲವು ಅಲೌಕಿಕ ಪರಿಕಲ್ಪನೆಗಳು ಜನಮಾನಸದಲ್ಲಿ ಬೇರೂರಿರುವುದನ್ನು ಗಮನಿಸಬಹುದು. ನಾಟಕ ಆಡುವುದರಿಂದ ದೇವರು ಗ್ರಾಮಕ್ಕೆ ಒಳ್ಳೆಯ ಮಳೆ-ಬೆಳೆಯನ್ನು ಅನುಗ್ರಹಿಸುತ್ತಾರೆ. ಇದರಿಂದ ಗ್ರಾಮ ಸಮೃದ್ಧವಾಗಿರುತ್ತದೆ ಎಂಬ ನಂಬಿಕೆ ಇದೆ.

ಹಾಗೆಯೇ ನಾಟಕದ ಪಾತ್ರಧಾರಿ ವೇಷ ಹಾಕಿದ ಮೇಲೆ ಒಬ್ಬಂಟಿಯಾಗಿ ಎಲ್ಲೂ ಓಡಾಡಬಾರದು. ಹಾಗೇನಾದರೂ ಓಡಾಡಿದರೆ ದೆವ್ವ-ಭೂತಗಳು ತೊಂದರೆಕೊಡುತ್ತವೆ ಎಂಬ ಮೂಢನಂಬಿಕೆಯೂ ಜನಪದರಲ್ಲಿದೆ.

ಒಟ್ಟಾರೆ ದೃಶ್ಯಮಾಧ್ಯಮ ಮತ್ತು ಶ್ರವ್ಯಮಾಧ್ಯಮಗಳೆರಡನ್ನೂ ಒಳಗೊಂಡಿರುವ ನಾಟಕವು ಜನಪದರಿಗೆ ಉತ್ತಮ ಮೌಲ್ಯಗಳೊಂದಿಗೆ ಮನರಂಜನೆಯನ್ನು ನೀಡುವ ಕಲೆಯಾಗಿದೆ. ಜೊತೆಗೆ ಜಾತಿ, ಮತ ಭೇದವಿಲ್ಲದೆ ಮತ್ತು ತಮ್ಮಲ್ಲಿರುವ ದ್ವೇಷ-ವೈಷಮ್ಯವನ್ನು ಮರೆತು ಎಲ್ಲರೂ ಒಟ್ಟಾಗಿ ಸೇರಿ ಸಂಭ್ರಮಿಸುತ್ತಾರೆ ಎಂದೇ ಹೇಳಬಹುದು.

೭.೪: ಕರಕುಶಲ ಕಲೆಗಳು:–

ರಂಗೋಲಿ:–

ಗ್ರಾಮೀಣ ಸಂಸ್ಕೃತಿಯ ಶ್ರೀಮಂತಿಕೆಗೆ ಕಾರಣರಾದ ಸಾದರು ತಮ್ಮ ಸಾಮಾಜಿಕ ವೈಶಿಷ್ಟ್ಯತೆಗಳನ್ನು ಪರಂಪರಾನುಗತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ನಯ–ವಿನಯ, ಸಂಕೋಚಗಳ, ಆದರೆ ತ್ಯಾಗ ಬಲಿದಾನಗಳಲ್ಲಿ, ಸಮಾಜ ಸೇವೆಯಲ್ಲಿ ಹಿಂದುಳಿಯದ ಸಾದರು ಬುದ್ಧಿವಂತರು, ಕುಶಿಲಿಗಳು, ಶ್ರಮಜೀವಿಗಳು ಆಗಿದ್ದು ದುಂದುವೆಚ್ಚ ಮಾಡದೇ ಸರಳ, ಸಾತ್ವಿಕ–ಸಜ್ಜನಿಕೆಯ ಬದುಕಿಗೆ ತಮ್ಮನ್ನು ತಾವು ನಿವೇದಿಸಿಕೊಂಡವರಾಗಿದ್ದಾರೆ. ಅವರ ಸಾಮಾಜಿಕ ಬದುಕು ಎಲ್ಲರಂತೆ ಇದ್ದರೂ ಕೆಲವು ವಿಶೇಷತೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಸಾದರಲ್ಲಿನ ಕರಕುಶಲ ಕಲೆಗಳಲ್ಲಿ ರಂಗೋಲಿಯು ಒಂದಾಗಿದೆ.

ರಂಗೋಲಿಯು ತನ್ನದೇ ಆದ ಪುರಾತನ ಪರಂಪರೆಯನ್ನು ಹೊಂದಿದ್ದು, ಶ್ರೀಮಂತ ಸಂಸ್ಕೃತಿಯ ಸಾಕಾರ ರೂಪದಂತಿದೆ. ಜಾತಿಯಲ್ಲಿನ ಸ್ತ್ರೀಯರು ಪ್ರತಿನಿತ್ಯವೂ, ವಿಶೇಷವಾಗಿ ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಂದು, ಮನೆಯ ಅಂಗಳವನ್ನು ಸಗಣಿಯಿಂದ ಸಾರಿಸಿ ರಂಗೋಲಿಯನ್ನು ಇಡುತ್ತಾರೆ. ರಂಗೋಲಿಯನ್ನು ಇಡುವಾಗ ತಮ್ಮ ಮನೆ ದೇವರನ್ನು ನೆನೆಯುವುದು ವಿಶೇಷ.

"ಹಾದಿ ಗುಡಿಸೀರಮ್ಮ ಬೀದಿಯಾ ಗುಡಿಸೀರೆ

ಬಾಗಿಲಿಗೆ ರಂಗೋಲಿ ಬಿಡಿರಮ್ಮ! ಬಸವ

ಈ ಊರ ಬೀದೀಲಿ ಬರುತ್ತಾನೆ"

ಎಂದು ತಮ್ಮ ಮನೆದೇವರನ್ನು ನೆನೆಯುತ್ತಾ ರಂಗೋಲಿಯನ್ನಿಡುತ್ತಾರೆ. ಸಾಂಸ್ಕೃತಿಕ ಶ್ರೀಮಂತಿಕೆಯ ಸಂಕೇತವಾದ ರಂಗೋಲಿಯು ಹಲಬಗೆಗಳಿಂದ ಕೂಡಿರುತ್ತದೆ. ವಿಶೇಷವಾಗಿ ಆಯಾ ಹಬ್ಬಗಳಂದು ಹಬ್ಬಗಳ ಸಂಕೇತವನ್ನು ರಂಗೋಲಿಯಲ್ಲಿ ಸೂಚಿಸಲಾಗುತ್ತದೆ.

ಉದಾಹರಣೆಗೆ:– ಸಂಕ್ರಾಂತಿಯಂದು ಕಬ್ಬು, ಮಡಕೆಯ ಸಾಲುಗಳನ್ನು ದಸರಾ ಸಮಯದಲ್ಲಿ ಆನೆಗಳ ಸಾಲನ್ನು, ದೀಪಾವಳಿಯಲ್ಲಿ ದೀಪಗಳ ಸಾಲನ್ನು ರಂಗೋಲಿಯಲ್ಲಿ ಬಿಡಿಸಲಾಗುತ್ತದೆ. ಪ್ರತಿಯೊಂದು ಹಬ್ಬಗಳಲ್ಲಿಯೂ ಸಹ ಅದರ ವಿಶೇಷತೆಗನುಗುಣವಾಗಿ ರಂಗೋಲಿಯನ್ನು ಇಡಲಾಗುತ್ತದೆ.

ಹೀಗೆ ಶ್ರೀಮಂತ ಸಂಸ್ಕೃತಿಗೆ ಸಾಕಾರವಾದ ರಂಗೋಲಿಯನ್ನು ಇಡದವರು, ಇಟ್ಟು ಸಂಭ್ರಮ ಪಡದವರು ಯಾರೂ ಇರಲಾರರೆಂದೆನ್ನಬಹುದು. ರಂಗೋಲಿಯು ಶುಭದ ಸಂಕೇತವೆಂದೇ ಹೇಳಲಾಗುತ್ತದೆ. ಆದರೆ ಕೆಲವೊಮ್ಮೆ ದುಷ್ಟವ್ಯಕ್ತಿಗಳು, ಜನರಲ್ಲಿನ ಮೌಢ್ಯ ಭಾವನೆಯನ್ನು ದುರುಪಯೋಗ ಪಡಿಸಿಕೊಳ್ಳುವ ಸಲುವಾಗಿ ಮೂರು–ದಾರಿಗಳು ಕೂಡುವಲ್ಲಿ ಚಿತ್ರ–

ವಿಚಿತ್ರ ಗೊಂಬೆಗಳ ಚಿತ್ರವನ್ನು ಬರೆದು ಅದರ ಮುಂದೆ ರಂಗೋಲಿಯನ್ನಿಟ್ಟು ಅದಕ್ಕೆ ಅತಿಯಾಗಿ ಬಣ್ಣ ತುಂಬಿ ಜನರ ಮನದಲ್ಲಿ ಭಯ-ಭೀತಿಯುಂಟಾಗುವಂತೆ ಮಾಡುತ್ತಾರೆ. ಪ್ರಜ್ಞಾವಂತ ಸಮಾಜ ಇಂತಹ ಶೋಷಣೆಯಿಂದ ಮುಕ್ತವಾಗಿ ಬದುಕುವುದನ್ನು ಕಲಿಯುವ ಅಗತ್ಯವಿದೆ.

ಒಟ್ಟಾರೆ ರಂಗೋಲಿಯು ಶ್ರೀಮಂತ ಸಂಸ್ಕೃತಿಯ ಸಾಕಾರರೂಪದಂತಿದೆ ಎಂದೇ ಹೇಳಬಹುದು.

೭.೫: ಗೃಹಾಲಂಕಾರಿಕ ವಸ್ತುಗಳ ತಯಾರಿ:-

ಸಾದರ ಕೆಲ ಗೃಹಿಣಿಯರು ತಮ್ಮ ಬಿಡುವಿನ ವೇಳೆಯಲ್ಲಿ ಬಟ್ಟೆ, ಉಲ್ಲನ್, ಮಣಿಗಳು, ಪ್ಲಾಸ್ಟಿಕ್ ಚೀಲ ಮುಂತಾದ ವಸ್ತುಗಳನ್ನು ಬಳಸಿ ಹಲವು ಗೃಹಾಲಂಕಾರಿಕ ವಸ್ತುಗಳಾದ ತೋರಣ, ಬಾಗಿಲ ಪರದೆ, ಮಣಿಗಳಲ್ಲಿ ಆನೆ, ಕುರ್ಚಿ, ಗಿಳಿ ಮುಂತಾದವುಗಳ ಕಲಾಕೃತಿಗಳನ್ನು ಮಾಡುತ್ತಾರೆ. ಇದರಿಂದ ತಮ್ಮ ಬಿಡುವಿನವೇಳೆಯಲ್ಲಿ ಮನಸ್ಸಿನ ಆಸರಿಕೆ-ಬೇಸರಿಕೆ ನೀಗುವುದರ ಜೊತೆಗೆ ಮನೆಯಲ್ಲೇ ದೊರೆಯುವ ವಸ್ತುಗಳನ್ನು ಬಳಸಿ ಮನೆಯ ಅಲಂಕಾರವನ್ನು ಹೆಚ್ಚಿಸಲು ನೆರವಾಗುತ್ತದೆ. ಕೆಲವರು ಇದನ್ನೆ ಕಾಯಕವನ್ನಾಗಿ ರೂಢಿಸಿಕೊಂಡಿರುವುದುಂಟು. ಇದರಿಂದ ಅವರ ಚಿಕ್ಕ-ಪುಟ್ಟ ಖರ್ಚುಗಳನ್ನು ಸರಿದೂಗಿಸಲು ಸಹ ನೆರವಾಗುತ್ತವೆ.

೭.೬: ಕೃಷಿ ಸಲಕರಣೆಗಳ ತಯಾರಿ:-

ಮೂಲತಃ ಕೃಷಿಕರಾದ ಸಾದರು ತಮ್ಮ ದಿನನಿತ್ಯದ ಕೃಷಿಚಟುವಟಿಕೆಗಳಿಗೆ ನೆರವಾಗುವ ಹಲವಾರು ಸಲಕರಣೆಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಇದರಿಂದ ಇತರರನ್ನು ಅವಲಂಬಿಸುವುದು ತಪ್ಪಿ ತಮ್ಮ ಕೆಲಸಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ನೆರವಾಗುತ್ತದೆ.

ಇವರು ನೇಗಿಲು, ಹಲುವೆ, (ಮರದ ಹಲುವೆ, ಮುಳ್ಳು ಹಲುವೆ) ಹಗ್ಗ, ಕುಂಟೆ, ಮರ, (ಹೆಂಟೆ ಒಡೆಯಲು), ತಟ್ಟಿ, ಬುಟ್ಟಿ ಹಣೆಯುವುದು ಇತ್ಯಾದಿ ಸಲಕರಣೆಗಳನ್ನು ತಾವೇ ಸ್ವತಃ ನಿರ್ಮಿಸಿಕೊಳ್ಳುತ್ತಾರೆ. ಇದರಿಂದ ಸಾದರ ಸ್ವಾವಲಂಬಿ ಮನೋಭಾವ ಎಂತಹದೆಂಬುದನ್ನು ತಿಳಿಯಲು ಸಹಾಯಕವಾಗುತ್ತದೆ.

೭.೭: ಜನಪದ ಆಟಗಳು (ಕ್ರೀಡೆಗಳು):-

ಕ್ರೀಡೆಗಳು ಮನುಷ್ಯನ ದೇಹ ಮತ್ತು ಮನಸ್ಸುಗಳೆರೆಡನ್ನು ಆರೋಗ್ಯವಾಗಿಡುತ್ತದೆ. ಅಷ್ಟೇ ಅಲ್ಲದೇ ಬುದ್ಧಿಯನ್ನು ಚುರುಕುಗೊಳಿಸುತ್ತದೆ. ಮನುಷ್ಯನ ಆತ್ಮವಿಶ್ವಾಸವನ್ನು ವರ್ಧಿಸುವಲ್ಲಿಯೂ ಕ್ರೀಡೆಗಳು ಪ್ರಮುಖಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ **"ಕ್ವಾಣೆ ಕೂಸು ಕೊಳೆತೋಯ್ತು, ಬೀದಿ ಕೂಸು ಬೆಳೆದೋಯ್ತು"** ಎಂಬ ಗಾದೆಯು ನಾಲ್ಕು ಗೋಡೆಗಳ ಮಧ್ಯವಿರುವ ಯಾವುದೇ ಒಂದು ಮಗುವಿನ

ವ್ಯಕ್ತಿತ್ವ ವಿಕಾಸ ಹೊಂದದೆ ನಾಶವಾಗುವುದನ್ನು ಮತ್ತು ನಿರ್ಮಲ ವಾತಾವರಣದಲ್ಲಿ ಸ್ವಚ್ಛಂದವಾಗಿ ಆಡಿ ಬೆಳೆದ ಮಗುವಿನ ಸತ್ವಪೂರ್ಣ ಬದುಕಿನ ಕ್ರಮವನ್ನು ಬಿಂಬಿಸುತ್ತದೆ.

'ಬಾಲ್ಯದಲ್ಲಿ ಕ್ರೀಡೆಯಲ್ಲಿ ತೊಡಗದ ಮಕ್ಕಳು ಮಂಕಾಗುತ್ತವೆ, ಅವರು ಸದ್ವರ್ತನೆಯುಳ್ಳ ನಾಗರೀಕರಾಗಲಾರರು, ಬಾಲ್ಯದ ಆಟಗಳಿಗೂ ಆ ನಂತರದ ಕಾನೂನು ಪಾಲನೆ, ಅಥವಾ ಕಾನೂನು ಭಂಗಕ್ಕೂ ನಿಕಟ ಸಂಬಂಧವಿದೆ'ಯೆಂದು ಪ್ಲೇಟೋರವರು ಅಭಿಪ್ರಾಯ ಪಡುತ್ತಾರೆ.

ಹಾಗೆಯೇ ಗ್ರೀಕ್‌ನ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸ್ಸಿಗಳಲ್ಲಿಯೂ ಕ್ರೀಡೆಗಳ ಉಲ್ಲೇಖವಿದೆ. ವೇದಗಳಲ್ಲಿಯೂ ಸಹ ಆಟಗಳ ಉಲ್ಲೇಖವಿರುವುದನ್ನು ಗಮನಿಸಬಹುದು. ಜೊತೆಗೆ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಕ್ರೀಡೆಗಳ ಉಲ್ಲೇಖವಿದೆ. ಅಷ್ಟೇ ಅಲ್ಲದೇ ಇನ್ನು ಹಲವಾರು ಮಹಾಕಾವ್ಯಗಳಲ್ಲಿ ಕ್ರೀಡೆಗಳ ಉಲ್ಲೇಖವಿರುವುದನ್ನು ಗಮನಿಸಬಹುದು. ಇದರಿಂದ ಕ್ರೀಡೆಗಳ ಮಹತ್ವ ಎಂತಹದೆಂಬುದನ್ನು ತಿಳಿಯಬಹುದು. ಜನಪದ ಕ್ರೀಡಾ ಜಗತ್ತು ವಿಶಾಲ ವ್ಯಾಪ್ತಿಯನ್ನು, ವೈವಿಧ್ಯತೆಯನ್ನು ಹೊಂದಿದ್ದು, ಚೇತೋಹಾರಿಯಾದುದಾಗಿದೆ. ಆಧುನಿಕ ಆಟಗಳನ್ನು ಮೀರಿಸುವಂತಹ ಮನರಂಜನೆ ಮತ್ತು ದೈಹಿಕ ಸಧೃಡತೆಯನ್ನು ನೀಡುವ ಪ್ರಾಚೀನ ಜನಪದ ಆಟಗಳಲ್ಲಿ ಅನೇಕವು ಇಂದು ಆಧುನಿಕತೆಯ ಸೋಗಿನಲ್ಲಿ ಕಣ್ಮರೆಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಜನಪದರಲ್ಲಿ ಆಟಗಳಿಗೆ ವಿಶೇಷಸ್ಥಾನವಿದೆ. ಆಟಗಳು ಸರ್ವರಿಗೂ ಪ್ರಿಯವಾದವಷ್ಟೇ ಅಲ್ಲದೆ ಎಲ್ಲರ ಬದುಕಿನೊಂದಿಗೆ ಹಾಸು ಹೊಕ್ಕಾಗಿವೆ.

"ಆಡಿ ಬಾ ನನ ಕಂದ ಅಂಗಾಲ ತೊಳೆದೇನ
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮಾರಿ ತೊಳೆದೇನು"[2].

ಆಟ ಆಡಿ ಬಂದ ಮಗುವನ್ನು ಕುರಿತು ತಾಯಿ ಸಂತೋಷದಿಂದ ಹೇಳುವ ಮಾತಿದು. ಆಟಗಳು ಪರಂಪರೆಯಿಂದ ಬಂದವುಗಳಾಗಿದ್ದು, ಕಾಲಕಳೆದಂತೆಲ್ಲಾ ಅವುಗಳಲ್ಲಿ ಬದಲಾವಣೆ ಉಂಟಾಗುತ್ತಿರುತ್ತದೆ. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅತ್ಯಗತ್ಯವಾದ ಆಟಗಳು ಮನರಂಜನೆಯನ್ನು ನೀಡುತ್ತವೆ. ಆಟಗಳು ಪ್ರಾದೇಶಿಕ ಭಿನ್ನತೆಯಿಂದ ಕೂಡಿರುತ್ತವೆ.

ಇವುಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳು ಎಂದು ಎರಡು ವಿಧಗಳಿವೆ. ಮನೆಯ ಅಥವಾ ಶಾಲೆಯ ಒಳಗೆ ಆಡುವ ಆಟಗಳು 'ಒಳಾಂಗಣ ಆಟ'ಗಳೆಂದು ಕರೆಯಲಾಗುತ್ತದೆ. **ಉದಾ:** ಚೌಕಾಬಾರ, ಅಟ್ಟಗುಣಿ, ಆಣೆಕಲ್ಲು, ಹುಲಿಮನೆ ಇತ್ಯಾದಿ.

ಬಯಲಿನಲ್ಲಿ ಆಡುವ ಆಟಗಳನ್ನು ಹೊರಾಂಗಣ ಆಟಗಳೆಂದು ಕರೆಯಲಾಗುತ್ತದೆ. **ಉದಾ:** ಕಣ್ಣಾಮುಚ್ಚಾಲೆ, ಕುಂಟಾಟ, ಕುಂಟೆಬಿಲ್ಲೆ, ಕಲ್ಲೋಮಣ್ಣೋ, ಉಪ್ಪಿನ ಮನೆಯಾಟ, ರತ್ತೋರತ್ತೋ

ಇತ್ಯಾದಿ ಆಟಗಳನ್ನು ಹೊರಾಂಗಣ ಆಟಗಳೆಂದು ಕರೆಯಲಾಗುತ್ತದೆ. ಇವಿಷ್ಟೇ ಅಲ್ಲದೇ ಇನ್ನು ಹಲವು ಬಗೆಯ ಆಟಗಳು ಜನಪದರಲ್ಲಿ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

ಜನಪದ ಆಟಗಳ ಸಾಮಾಗ್ರಿಗಳು ಸುಲಭವಾಗಿ ನಮ್ಮ ಸುತ್ತಮುತ್ತಲಿನ ಪರಸರದಲ್ಲಿಯೇ ಸಿಗುವಂತಹವು. ಅವುಗಳೆಂದರೆ ಕಲ್ಲು, ಮಣ್ಣು, ಮರದ ಚೆಕ್ಕೆ, ಕಡ್ಡಿ ತುಂಡು, ಇಜ್ಜಿಲು ಮಸಿ, ಬಳೆ ಚೂರು, ಹುಣಸೆಕಾಳು ಮುಂತಾದವು. ಇವೆಲ್ಲವೂ ಸುಲಭವಾಗಿ ಸಮೀಪದಲ್ಲೇ ದೊರೆಯುವಂತಹವುಗಳಾಗಿವೆ.

ಎಲ್ಲಾ ಜಾತಿಗಳ ಸಂಸ್ಕೃತಿ ಮತ್ತು ಅವರ ಜೀವನ ವಿಧಾನಗಳನ್ನು ತಿಳಿದುಕೊಳ್ಳುವಲ್ಲಿ ಕ್ರೀಡೆಗಳು ಪ್ರಮುಖಪಾತ್ರವಹಿಸುತ್ತವೆ. ಅವರು ಆಡುವ ಎಲ್ಲ ಆಟಗಳು ತನ್ನದೇ ಆದ ತಂತ್ರ ಮತ್ತು ವಿಧಾನಗಳಿಂದ ಕೂಡಿರುತ್ತವೆ. ಜೊತೆಗೆ ಕ್ರೀಡೆಗಳು ಸಾಮಾಜಿಕ ಜನಜೀವನದ ಆಶೋತ್ತರಗಳನ್ನು ಬಿಚ್ಚಿ ಹೇಳುತ್ತವೆ. ಮಾನವನ ಹುಟ್ಟು ಗುಣವಾಗಿರುವ ಕ್ರೀಡಾ ಮನೋವೃತ್ತಿಯು ಅವನ ಬೌದ್ಧಿಕ ಮತ್ತು ಭೌತಿಕ ವಿಕಾಸಕ್ಕೆ ಹೆಚ್ಚಿನ ಆಕರವನ್ನು ಒದಗಿಸುತ್ತದೆ ಮತ್ತು ಕ್ರೀಡೆ ಮಾನವನನ್ನು ಸದಾಕಾಲ ಚೈತನ್ಯಮಯವಾಗಿರಿಸಲು ಸಹಾಯಕವಾಗಿದೆ.

ಮೂಲತಃ ಕೃಷಿಕರಾಗಿರುವ ಸಾದರಲ್ಲಿ ಕೆಲವು ಕ್ರೀಡೆಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ. ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಮದುವೆ ಮತ್ತಿತರೆ ಶುಭಕಾರ್ಯಗಳಲ್ಲಿ ಎಲ್ಲರೂ ಒಂದೆಡೆ ಸೇರಿಕೊಂಡಾಗ ಎಲ್ಲರೂ ಕ್ರೀಡೆಗಳಲ್ಲಿ ತೊಡಗುತ್ತಾರೆ. ಸಾದರಲ್ಲಿ ರೂಢಿಯಲ್ಲಿರುವ ಪ್ರಮುಖ ಕ್ರೀಡೆಗಳೆಂದರೆ ಚಿಣ್ಣಿದಾಂಡು, ಲಗೋರಿ ಆಟ, ಬುಗರಿ ಆಟ, ಕಬ್ಬಡಿ ಆಟ, ಮರಕೋತಿ ಆಟ ಇವು ಗಂಡಸರ ಆಟವಾದರೆ, ಹೆಣ್ಣುಮಕ್ಕಳು ಕಣ್ಣಾಮುಚ್ಚಾಲೆ, ಕುಂಟೆಬಿಲ್ಲೆ, ಚಕ್ಕಾಬಾರ, ಅಟ್ಟುಗುಣಿ ಆಟಗಳನ್ನು ಆಡುತ್ತಾರೆ.

ಚಿಣ್ಣಿದಾಂಡು ಆಟ:-

ತಮ್ಮ ವಾಸಸ್ಥಳಕ್ಕೆ ಸಮೀಪವಿರುವ ಬೀಳು, ಗದ್ದೆ ಬಯಲುಗಳನ್ನು ಆಟಕ್ಕೆ ಆಯ್ಕೆಮಾಡಿಕೊಳ್ಳಲಾಗುತ್ತದೆ. ಹತ್ತು-ಹದಿನೈದು ವರ್ಷಗಳ ವಯೋಮಾನದ ಹುಡುಗರ ಅಚ್ಚುಮೆಚ್ಚಿನ ಆಟ ಇದಾಗಿದೆ. ಈ ಆಟ ಆಡುವುದಕ್ಕೆ ಇಬ್ಬಿಬ್ಬರು ಒಂದೊಂದು ಜೋಡಿಯಿರಬೇಕು. ಚಿಕ್ಕ ಕೋಲಿನಿಂದ ಎರಡು ತುದಿಯನ್ನು ಚೂಪಾಗಿಸಿ ಚಿಣ್ಣಿಯನ್ನು ತಯಾರಿಸುತ್ತಾರೆ. ಒಂದೂವರೆ ಅಡಿ ಇರುವ ಕೋಲನ್ನು ದಾಂಡು ಎಂದು ಕರೆಯುತ್ತಾರೆ. ಸಮತಟ್ಟಾದ ಭೂಮಿಯ ಮೇಲೆ ಸಣ್ಣನೆಯ ಹಳ್ಳವನ್ನು ಮಾಡಿ ಚಿಣ್ಣಿಯನ್ನು ಒಂದು ತುದಿ ಸ್ವಲ್ಪ ಮೇಲಿರುವಂತೆ ಇಟ್ಟು ಆಟ ಪ್ರಾರಂಭಿಸಲ್ಪಡುತ್ತದೆ. ಚಿಣ್ಣಿಯನ್ನು ಕೇಂದ್ರ ಬಿಂದುವಿನಿಂದ ದಾಂಡದಿಂದ ಚುಮ್ಮಿಸಿದಾಗ ಎದುರಾಳಿ ಹಿಡಿದರೆ ಸರಿ. ಇಲ್ಲದಿದ್ದರೆ ಆ ಚಿಣ್ಣಿಯಿಂದ ದಾಂಡಿಗೆ ತಗುಲುವಂತೆ ಎಸೆಯಬೇಕು. ಆ ಚಿಣ್ಣಿ ದಾಂಡಕ್ಕೆ ಬಡಿಯದಿದ್ದರೆ ಪ್ರತಿ ಸ್ಪರ್ಧಿ ಮತ್ತೆ ಮೂರು ಬಾರಿ ಚಿಣ್ಣಿಯನ್ನು ಎಷ್ಟು ದೂರ ಸಾಧ್ಯವೋ

ಅಷ್ಟು ದೂರಕ್ಕೆ ಹೊಡೆಯುತ್ತಾನೆ. ಚಿಣ್ಣಿ ಹೋದ ಕಡೆಯಿಂದ ಲಗ್ಗೆಯವರೆಗೆ ದಾಂಡದಿಂದ ಅಳೆದು ಆ ಸಂಖ್ಯೆಯನ್ನು ತನ್ನ ಗೆಲುವಿನ ಸಂಖ್ಯೆಯನ್ನಾಗಿರಿಸಿಕೊಳ್ಳುತ್ತಾರೆ. ಇನ್ನೊಂದು ತಂಡದವರು ಮತ್ತೆ ಹೀಗೆ ಆಡಿ ತಮ್ಮ ಸಂಖ್ಯೆಯನ್ನು ಗುರುತಿಟ್ಟುಕೊಳ್ಳುತ್ತರೆ. ಯಾರು ಕಡಿಮೆ ಸಂಖ್ಯೆಯನ್ನು ಪಡೆದಿರುತ್ತಾರೋ ಅವರು ಆಟದಲ್ಲಿ ಸೋತರೆಂದು ನಿರ್ಧರಿಸಲಾಗುತ್ತದೆ.

ಲಗೋರಿ ಆಟ:-

ಈ ಆಟವನ್ನು ಆಡುವಾಗ ಎರಡು ಗುಂಪುಗಳಾಗುವುದು ಸಾಮಾನ್ಯ. ನಾಣ್ಯವನ್ನು ಮೇಲೆ ಚಿಮ್ಮಿ ಗೆದ್ದವರು ಮೊದಲು ಆಡಲು ಪ್ರಾರಂಭಿಸುತ್ತಾರೆ. ಬಟ್ಟೆಯಿಂದ ಚೆಂಡನ್ನು ತಯಾರಿಸಿ, ಎಂಟತ್ತು ಕಲ್ಲುಗಳನ್ನು ಸ್ವಲ್ಪದೂರದಲ್ಲಿ ಬೀಳಿಸಿ ಒಂದು ಗುಂಪು ಅವುಗಳನ್ನು ಆಯುವವರೆಗೆ ಮತ್ತೊಂದು ಗುಂಪು ಅವರನ್ನು ಚೆಂಡಿನಿಂದ ಹೊಡೆಯುತ್ತಾರೆ. ಸಾದರಲ್ಲಿ ಈ ಆಟ ಹೆಚ್ಚಿನ ಮನರಂಜನೆಯನ್ನುಂಟುಮಾಡುವ ಆಟವಾಗಿದೆ.

ಬುಗುರಿ ಆಟ:-

ಸದಾಕಾಲ ಎಲ್ಲಮಕ್ಕಳಿಗೂ ಪ್ರಿಯವಾದ ಆಟವೆಂದರೆ ಬುಗುರಿಯ ಆಟ. ಹೆಚ್ಚಿನ ಪ್ರಮಾಣದಲ್ಲಿ ಬುಗುರಿಯನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಅಂಗಡಿಯಿಂದ ಕೊಂಡು ತರುತ್ತಾರೆ. ಜೊತೆಗೆ ಗೋಣಿ ನಾರಿನಿಂದ ಚಾಟಿಯನ್ನು ತಯಾರಿಸಿಕೊಳ್ಳುತ್ತಾರೆ. ಬುಗುರಿಯನ್ನು ಚಾಟಿಯಿಂದ ಸುತ್ತಿ ಬಿಟ್ಟಾಗ ಯಾರ ಬುಗುರಿ ಹೆಚ್ಚು ಹೊತ್ತು ತಿರುಗುತ್ತದೋ, ಅವನು ಬೇಗ ನೆಲಕಚ್ಚಿದ ಬುಗುರಿಯನ್ನು ನೆಲಕಿಟ್ಟು ತನ್ನ ಬುಗುರಿಯಿಂದ ಹೊಡೆಯುತ್ತಾನೆ. ಇದಲ್ಲದೇ ಬಹಳ ಸಮಯದವರೆಗೂ ಬಗರಿ ನಿದ್ರೆ ಮಾಡುವ ಸ್ಪರ್ದೆ, ಚಾಟಿಯಿಂದ ಬುಗುರಿಯನ್ನು ನೆಲದ ಮೇಲೆ ಬಿಟ್ಟು ಅದು ಆಡುತ್ತಿರುವಂತೆಯೇ ಅದನ್ನು ತಮ್ಮ ಕೈಮೇಲೆ ಎತ್ತಿ ಆಡಿಸುವ ಸ್ಪರ್ದೆಗಳಿವೆ. ಹೀಗೆ ಬುಗುರಿಯ ಆಟವು ಸಾದರಲ್ಲಿ ರೂಢಿಯಲ್ಲಿರುವುದನ್ನು ಗಮನಿಸಬಹುದು.

ಕಾಯಿ ಕಟ್ಟೋ ಆಟ:-

ಜನಪದ ಆಟಗಳಲ್ಲಿ ಕಾಯಿ ಕಟ್ಟೋ ಆಟವು ಒಂದು. ಊರ ಮುಂದಿರುವ ಯಾವುದಾದರೊಂದು ಮರದ ಕೊಂಬೆಗೆ ತೆಂಗಿನ ಕಾಯಿಯನ್ನು ಕಟ್ಟಿ ತೂಗುಬಿಡಲಾಗುತ್ತದೆ. ಕೆಳಗೆ ನಿಂತು ಆ ಕಾಯಿಗೆ ಕಲ್ಲಿನಿಂದ ಗುರಿಯಿಟ್ಟು ಒಡೆಯುವ ಸ್ಪರ್ದೆ ಇರುತ್ತದೆ. ಈ ಸ್ಪರ್ದೆಯಲ್ಲಿ ಯಾರು ತೆಂಗನಕಾಯಿಯನ್ನು ಒಡೆಯುತ್ತಾರೆಯೋ, ಅವರಿಗೆ ಆ ಕಾಯಿಯನ್ನು ಬಹುಮಾನವಾಗಿ ಕೊಡಲಾಗುತ್ತದೆ. ಯುಗಾದಿ ಹಬ್ಬದ ದಿನದಂದು ಈ ಆಟವನ್ನು ಆಡಲು, ನೋಡಲು ಗ್ರಾಮದ ಹಿರಿಯ-ಕಿರಿಯರೆನ್ನದೆ ಎಲ್ಲರೂ ಸಡಗರ-ಸಂಭ್ರಮದಿಂದ ಆಟದಲ್ಲಿ ಪಾಲ್ಗೊಳ್ಳುತ್ತಾರೆ.

ಉಪ್ಪಿನಮನೆಯ ಆಟ:–

ಮಕ್ಕಳಿಗೆ ಹೆಚ್ಚಿನ ಪ್ರಿಯವಾದ ಆಟ ಇದಾಗಿದೆ. ದೈಹಿಕ ವ್ಯಾಯಾಮದೊಂದಿಗೆ ಮನಸ್ಸಿಗೆ ಹರ್ಷವನ್ನು ನೀಡುವ ಆಟವಿದಾಗಿದೆ. ಇದೊಂದು ಅತ್ಯುತ್ತಮ ಹೊರಾಂಗಣ ಆಟವಾಗಿದೆ. ಎದುರಾಳಿಗಳ ಕೈಗೆ ಸಿಗದಂತೆ ತಪ್ಪಿಸಿಕೊಂಡು ಗುರಿಮುಟ್ಟುವ ಆಟ ಇದಾಗಿದೆ. ಪ್ರಸ್ತುತ ಆಟದಲ್ಲಿ ಆಟಗಾರರು ಎರಡು ಕಡೆಗಳಲ್ಲಿಯೂ ಸಮಸಂಖ್ಯೆಯಲ್ಲಿರುತ್ತಾರೆ. ವಿಶಾಲ ಅಂಗಳದಲ್ಲಿ ಅಡ್ಡವಾಗಿ ಏಳು ಮತ್ತು ಉದ್ದವಾಗಿ ಮೂರು ಗೆರೆಗಳನ್ನು ಎಳೆಯಲಾಗುತ್ತದೆ. ಒಂದು ತಂಡದ ಆರು ಆಟಗಾರರು ಅಡ್ಡಗೆರೆಗಳಲ್ಲಿ ನಿಲ್ಲುವರು. ಇದನ್ನು 'ರಕ್ಷಕ ತಂಡ' ಎಂದು ಕರೆಯಲಾಗುತ್ತದೆ. ಅಷ್ಟೇ ಸಂಖ್ಯೆಯ ಎದುರು ತಂಡದವರು ಇವರಿಂದ ತಪ್ಪಿಸಿಕೊಂಡು ಮೊದಲ ಗೆರೆಯಿಂದ ಓಡಿ ಕೊನೆ ಗೆರೆದಾಟಿ ನಂತರ ಒಂದು ಹಿಡಿ ಮರಳನ್ನು ತೆಗೆದುಕೊಂಡು ಹಿಂತಿರುಗಬೇಕು. ಇದನ್ನು 'ಆಕ್ರಮಣಕಾರಿ ತಂಡ' ಎಂದು ಕರೆಯಲಾಗುತ್ತದೆ.

ಇನ್ನು ಅಡ್ಡಗೆರೆಗಳಲ್ಲಿ ನಿಂತವರು ಉದ್ದಗೆರೆ–ಅಡ್ಡಗೆರೆಯಲ್ಲಿ ಚುರುಕಾಗಿ ಓಡಾಡಿ ಆಕ್ರಮಣಕಾರಿ ತಂಡವನ್ನು ತಡೆಯಲು ಪ್ರಯತ್ನಿಸುತ್ತಾರೆ. ಆಕ್ರಮಣಕಾರಿ ತಂಡದ ಕೊನೆಯವನನ್ನು ಗೆರೆದಾಟಿ ಉಪ್ಪು ತೆಗೆದುಕೊಂಡು ನಂತರ ಆ ಕಡೆಯಿಂದ ಹಿಂದಕ್ಕೆ ಬರುವಾಗ ರಕ್ಷಕ ತಂಡದವರು ಆ ಕಡೆ ತಿರುಗುತ್ತಾರೆ. ಆಗ ಉಪ್ಪು ತೆಗೆದುಕೊಂಡು ಬರುವವರು ರಕ್ಷಕ ತಂಡದಿಂದ ತಪ್ಪಿಸಿಕೊಂಡು ಬರಬೇಕು. ತಂಡದ ಎಲ್ಲರೂ ತಾವು ಹೊರಟಜಾಗಕ್ಕೆ ಪುನಃ ತಪ್ಪಿಸಿಕೊಂಡು ಬಂದು ಸೇರಿದರೆ ಅವರಿಗೆ ಪೂರ್ಣ ಅಂಕ ದೊರೆಯುತ್ತದೆ.

ಹೀಗೆ ಆಕ್ರಮಣಕಾರಿ ತಂಡದವರು ಹೋಗಿ ಬಂದರೆ ಒಂದು 'ಸುತ್ತು' ಮುಗಿದಂತೆ. ಈ ರೀತಿ ಪ್ರತಿ ತಂಡದವರಿಗೆ ಮೂರು–ಮೂರು ಸುತ್ತು ಆಟವಿರುತ್ತದೆ. ಆಟದಲ್ಲಿ ಹೆಚ್ಚು ಅಂಕ ಪಡೆದವರು ಗೆಲುವು ಸಾಧಿಸುತ್ತಾರೆ. ಹೀಗೆ ಆಟ ಮುಂದುವರೆಯುತ್ತದೆ. ಈ ರೀತಿಯಲ್ಲಿ ಆಟಗಳಿಂದ ಮಕ್ಕಳಿಗೆ ವ್ಯಾಯಮ ಸಿಗುವುದರೊಂದಿಗೆ ಮನಸ್ಸಿಗೆ ಉಲ್ಲಾಸ ದೊರೆಯುತ್ತದೆ. ಅಲ್ಲದೇ ಮಂಕಾಗಿರುವ ಮಕ್ಕಳು ಚುರುಕಾಗುತ್ತಾರೆ.

ಮರಕೋತಿ ಆಟ:–

ಸಾದರಲ್ಲಿ ಸಮವಯಸ್ಕ ಹುಡುಗರು ದನ, ಕರು, ಕುರಿ, ಮೇಕೆಗಳನ್ನು ಮೇಯಿಸಲೆಂದು ಹೊಲ–ಗದ್ದೆಗಳ ಬಳಿಗೆ ತೆರಳಿದಾಗ, ಜಾನುವಾರುಗಳನ್ನು ಮೇಯಲು ಬಿಟ್ಟು ಗಿಡ್ಡವಾಗಿ, ಅಗಲವಾಗಿ ನೆಲದಲ್ಲೇ ಹರಡಿಕೊಂಡಿರುವ ಮರವನ್ನು ಆಟಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ಮೊದಲಿಗೆ ನಾಣ್ಯದಲ್ಲಿ ರಾಜ–ರಾಣಿಯನ್ನು ಹಾಕುತ್ತಾರೆ. ಇದರಲ್ಲಿ ಒಬ್ಬನನ್ನು ಉಳಿದು ಮಿಕ್ಕ ಎಂಟತ್ತು ಹುಡುಗರಲ್ಲಿ ಒಬ್ಬ ಒಂದು ಕಡ್ಡಿಯನ್ನು ತನ್ನ ಕಾಲಡಿಯಿಂದ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ಎಸೆಯುತ್ತಾನೆ. ಎಸೆದು ಆತನು ಮರ ಹತ್ತಿ ಅನುಕೂಲಕರ ಟೊಂಗೆಯಲ್ಲಿ ಕುಳಿತುಕೊಳ್ಳುತ್ತಾನೆ. ಜೊತೆಗೆ ಉಳಿದ ಎಂಟತ್ತು ಹುಡುಗರು ಹಾಗೆಯೇ ಮರವನ್ನು ಹತ್ತಿ ಕುಳಿತುಕೊಳ್ಳುತ್ತಾರೆ. ಅವರೆಲ್ಲರೂ ಮರವೇರಿದ

ಕೂಡಲೇ ವೃತ್ತದಲ್ಲಿ ನಿಂತಿರುವ ಹುಡುಗ ಆ ಕಡ್ಡಿಯನ್ನು ತರಲು ಓಡಿಹೋಗುತ್ತಾನೆ. ಆತ ಕಡ್ಡಿಯನ್ನು ತಂದು ಮರದಲ್ಲಿರುವವರಲ್ಲಿ ಯಾರಾದರೊಬ್ಬರನ್ನು ಮುಟ್ಟಬೇಕು. ಅಷ್ಟರಲ್ಲಿ ಮರದಲ್ಲಿರುವ ಹುಡುಗರಲ್ಲಿ ಯಾರಾದರೊಬ್ಬರು ಮರದಿಂದ ದುಮುಕಿ ಆ ಕಡ್ಡಿಯನ್ನು ಮುಟ್ಟಿದರೆ ಪುನಃ ಆ ಕಡ್ಡಿಯನ್ನು ದೂರ ಎಸೆಯಲಾಗುತ್ತದೆ. ಹೀಗೆ ಆಟ ಬಹಳ ಸಮಯದವರೆಗೆ ಮುಂದುವರೆಯುತ್ತದೆ.

ಕಣ್ಣಾಮುಚ್ಚಾಲೆ ಆಟ:-

ಹೆಣ್ಣುಮಕ್ಕಳ ಮತ್ತು ಚಿಕ್ಕಮಕ್ಕಳ ಬಹುಪ್ರಿಯವಾದ ಆಟವೆಂದರೆ ಕಣ್ಣಾಮುಚ್ಚಾಲೆ ಆಟವಾಗಿದೆ. ಈ ಆಟದಲ್ಲಿ ಅಜ್ಜಿಯ ಪಾತ್ರವು ಬಹುಮುಖ್ಯವಾದದ್ದೇ ಸರಿ, ಕಣ್ಣಾಮುಚ್ಚಾಲೆ ಆಟದಲ್ಲಿ ಅಜ್ಜಿಯು ಭಾಗವಹಿಸುವ ಮುಖೇನ ಮಕ್ಕಳಿಗೆ ಪ್ರೋತ್ಸಾಹವನ್ನೀಯುತ್ತಾಳೆ.

ಈ ಆಟದಲ್ಲಿ ಅಜ್ಜಿಯು ಸೇರಿದಂತೆ ಎಂಟೊಂಭತ್ತು ಜನ ಮಕ್ಕಳು ಭಾಗವಹಿಸುತ್ತಾರೆ. ಅವರಲ್ಲಿ ಯಾರಾದರೊಬ್ಬರಿಗೆ ಅಜ್ಜಿಯು ಕಣ್ಣುಮುಚ್ಚಿ

'ಕಣ್ಣ ಮುಚ್ಚೆ ಕಾಡೇ ಗೂಡೆ

ಉದ್ದಿನ ಮೂಟೆ ಉರುಳೇ ಹೋಯ್ತು

ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ

ನಿಮ್ಮಯ ಹಕ್ಕಿ ಬಚ್ಚಿಟ್ಟುಕೊಳ್ಳಿ'

ಎಂದು ದ್ವಂದ್ವಾರ್ಥ ಸೂಚಿಸುವ ಹಾಡನ್ನು ಹೇಳುತ್ತಾರೆ. ಇಲ್ಲಿ ಅಜ್ಜಿಯ ಮಾತಿನ ಅರ್ಥ ಅದ್ಭುತವಾದದ್ದು. ನಮ್ಮ ಮಹಾಕಾವ್ಯವಾದ ರಾಮಾಯಣ ಕತೆಯ ಸಾರವನ್ನು ಈ ಸಾಲುಗಳು ಬಿಂಬಿಸುತ್ತವೆ. ಧಶರಥ ಕಣ್ಣುಮುಚ್ಚಿದ, ರಾಮನಿಗೆ ಕಾಡೇ ಮನೆಯಾಯಿತು. ರಾವಣನ ದೇಹ ಉದ್ದಿನ ಮೂಟೆಯಂತೆ ಉರುಳಿಬಿತ್ತು. ಎಂಬರ್ಥವನ್ನು ಜೊತೆಗೆ ಮನುಷ್ಯ ವಯಸ್ಸಾಗಿ ಮರಣಹೊಂದಿ ಕಣ್ಣುಮುಚ್ಚಿದಾಗ ಕಾಡೇ ಮನೆಯಾಗುತ್ತದೆ. ಈ ನಮ್ಮ ದೇಹವು ಉದ್ದಿನ ಮೂಟೆಯಂತೆ ನಶ್ವರವಾದದ್ದು, ನನ್ನ ಪ್ರಾಣಪಕ್ಷಿ ಹಾರುತಿದೆ, ನೀವಿನ್ನು ಎಳೆಯರು ನಿಮ್ಮ ಪ್ರಾಣಪಕ್ಷಿಯನ್ನು ಬಚ್ಚಿಟ್ಟುಕೊಳ್ಳಿರೆನ್ನುತ್ತಾ ಅಜ್ಜಿಯು ಮಕ್ಕಳಿಗೆ ಬದುಕಿನ ನಿತ್ಯ-ಸತ್ಯದ ಹಲವಿಚಾರಗಳನ್ನು ತಿಳಿಸುತ್ತಾಳೆ. ಇದರಿಂದ ಮಕ್ಕಳಿಗೆ ಆಟದ ಜೊತೆಗೆ ಬದುಕಿಗೆ ಬೇಕಾದ ಅರಿವು ಮತ್ತು ತಿಳುವಳಿಕೆಯು ದೊರೆಯುತ್ತದೆ.

ಅಜ್ಜಿಯು ಕಣ್ಣುಮುಚ್ಚಿ ಬಿಡುವಷ್ಟರಲ್ಲಿ ಉಳಿದವರೆಲ್ಲರೂ ಬಚ್ಚಿಟ್ಟುಕೊಳ್ಳುತ್ತಾರೆ. ಅವರಲ್ಲಿ ಯಾರು ಮೊದಲು ಸಿಕ್ಕಿದರೆ ಅವರು ಸೋತಂತೆ ಮತ್ತೆ ಅಜ್ಜಿ ಅವರಿಗೆ ಕಣ್ಣುಮುಚ್ಚುತ್ತಾರೆ. ಹೀಗೆ ಆಟ ಮುಂದುವರೆಯುತ್ತದೆ.

ಆಟಗಳು ಮನುಷ್ಯನ ಬದುಕಿಗೆ ಮಾರ್ಗದರ್ಶಕವಾಗಬಲ್ಲವು. 'ಸದೃಢ ದೇಹದಲ್ಲಿ ಸಬಲಮನಸ್ಸಿರುತ್ತದೆ' ಎಂಬ ಆರಿಸ್ಟಾಟಲ್‌ನ ಹೇಳಿಕೆಯಂತೆ ಮನುಷ್ಯನ ದೇಹ ಮತ್ತು ಬುದ್ಧಿಗಳೆರೆಡೆರ ಬೆಳವಣಿಗೆಗೆ ಕ್ರೀಡೆಗಳು ಪ್ರಮುಖ ಸಾಧನಗಳಾಗಿವೆ. ಜನಪದ ಕ್ರೀಡೆಗಳು ಆಯಾ ಕಾಲದ ಜನಜೀವನದಲ್ಲಿ ಹಾಸುಹೊಕ್ಕಾಗಿರುವುದರಿಂದ ಅಂದಿನ ಸಮಾಜದ ಒಂದೊಂದು ಸಮೂಹದ ಬದುಕು ಮತ್ತು ಸಂಸ್ಕೃತಿಯನ್ನು ಅರಿಯುವಲ್ಲಿಯು ನೆರವಾಗುತ್ತವೆ.

<u>ಅಟ್ಟಗುಣಿ ಆಟ:-</u>

ಪಟ-ಪಟನೆ ಸದ್ದು ಮಾಡುತ್ತಾ ಮರದ ಗುಳಿಗಳಲ್ಲಿ ಹುಣಸೆಕಾಳುಗಳನ್ನು ಹಾಕಿ ಆಡುವ ಆಟವೇ ಅಟ್ಟಗುಣಿ ಆಟ. ಇದನ್ನು ಚೆನ್ನಮಣಿ ಆಟ ಎಂದು ಸಹ ಕರೆಯಲಾಗುತ್ತದೆ. ಪ್ರಸ್ತುತ ಆಟವನ್ನು ಆಡಲು ಇಬ್ಬರು ಆಟಗಾರರು, ಅಟ್ಟಗುಣಿಮಣೆ ಮತ್ತು ಎಪ್ಪತ್ತು ಹುಣಸೆಕಾಳು ಬೇಕಾಗುತ್ತದೆ. ಪ್ರತಿಯೊಂದು ಗುಳಿಯಲ್ಲಿಯೂ ಐದಾರು ಕಾಳುಗಳನ್ನು ತುಂಬಿ ಆಡುವುದು. ಇಬ್ಬರಲ್ಲಿ ಯಾರು ಮೊದಲು ಆಡಬೇಕೆಂಬುದು ನಿರ್ಧರಿಸಿದ ಬಳಿಕವೇ ಆಟ ಪ್ರಾರಂಭವಾಗುತ್ತದೆ.

ಆಟವನ್ನು ಯಾರು ಪ್ರಾರಂಭಿಸುತ್ತಾರೆಯೋ ಅವರು ತಮ್ಮ ಸಾಲಿನ ಒಂದು ಗುಳಿಯಿಂದ ಪ್ರಾರಂಭಿಸಿ ಹುಣಸೆಕಾಳುಗಳನ್ನು ಎತ್ತಿ ಎಡದಿಂದ ಬಲಕ್ಕೆ ಒಂದೊಂದನ್ನು ಗುಳಿಗೆ ಹಾಕುತ್ತಾ ಹೋಗಬೇಕು. ಐದರಲ್ಲಿ ಕೊನೆಯ ಹುಣಸೆಕಾಳು ಎಲ್ಲಿ ಮುಗಿಯುತ್ತದೆಯೋ ಅದರ ಮುಂದಿನ ಮನೆ ಮುರಿದು (ಅಲ್ಲಿನ ಹುಣಸೆಕಾಳುಗಳನ್ನು ಎತ್ತಿ) ಮತ್ತೆ ಆಟ ಮುಂದುವರಿಸಬೇಕು. ಹೀಗೆ ಆಟವಾಡುತ್ತಿರುವಾಗ ಕೊನೆ ಹುಣಸೆಕಾಳು ಬೀಳುವ ಪಕ್ಕದ ಮನೆ ಖಾಲಿ ಇದ್ದಾಗ ಸೀಟ್ ಹೇಳಿ ಆ ಮನೆಯನ್ನು ಸವರಿ ಅದರ ಪಕ್ಕದ ಮನೆ ಹುಣಸೆ ಕಾಳುಗಳನ್ನೆಲ್ಲಾ ಎತ್ತಿಕೊಳ್ಳಬೇಕು. ಅದರ ಎದುರುಮನೆಯಲ್ಲಿ ಕಾಳುಗಳಿದ್ದರೆ ಅವೂ ಅವರಿಗೆ ಸೇರುತ್ತವೆ. ಇದಕ್ಕೆ ಪಂಥ ಎಂದು ಕರೆಯಲಾಗುತ್ತದೆ. ಜೋಡಿಯಾಗಿ ಸಿಕ್ಕ ಪಂಥಗಳಿಗೆ ಜೋಡಿ ಪಂಥ ಎಂದು ಕರೆಯುತ್ತಾರೆ. ನಂತರ ಮೇಲಿನಂತೆಯೇ ಆಟ ಮುಂದುವರೆಯುತ್ತದೆ. ಆಟವನ್ನು ಆಡುವಾಗ 'ಪಂಥದ ಪಕ್ಕದಲ್ಲಿ ಎರಡು ಮನೆಗಳು ಖಾಲಿ ಇದ್ದರೆ ಕಾಳನ್ನು ತೆಗೆದುಕೊಳ್ಳುವಂತಿಲ್ಲ, ಖಾಲಿಯಾದ ಮನೆಗೆ ಒಂದೊಂದೇ ಕಾಳು ಹಾಕುವಾಗ ಯಾವ ಮನೆಯಲ್ಲಿ ನಾಲ್ಕು ಕಾಳು ಸೇರುತ್ತವೆಯೋ ಅದಕ್ಕೆ ಕರು ಎನ್ನುವರು. ಆಯಾ ಸಾಲಿನವರೆಗೆ ಆ 'ಕರು' ಸೇರುತ್ತದೆ. ಒಮ್ಮೆ ಕಾಳೆಲ್ಲವೂ ಮುಗಿದ ಬಳಿಕ ಎರಡನೇ ಸುತ್ತು ಪ್ರಾರಂಭವಾಗುತ್ತದೆ. ಇನ್ನುಳಿದ ಮನೆಗಳಿಗೆ ಒಂದೊಂದು ಚಿಕ್ಕ ಕಲ್ಲನ್ನು ಹಾಕುತ್ತಾರೆ. ಇವನ್ನು ಪಿಗ್ಗಿ ಎಂದು ಕರೆಯಲಾಗುತ್ತದೆ. ಆಟಗಾರರು ಕೇವಲ ನಾಲ್ಕು ಕಾಳುಗಳನ್ನು ಪಡೆದರೆ ಆಗ ನಾಲ್ಕು ಮನೆಗೆ ಒಂದೊಂದೇ ಕಾಳನ್ನು ಹಾಕಿ ಆಟ ಆಡಲಾಗುತ್ತದೆ. ಕೇವಲ ಒಂದು ಮನೆಗೂ ಹಾಕುವಷ್ಟು ಕಾಳನ್ನು ಪಡೆಯದ ಆಟಗಾರ ಸೋತಂತೆ. ಇದೇ ರೀತಿ ಐದು, ಏಳು ಅಥವಾ ಹನ್ನೆರಡು ಮನೆಯಾಟವನ್ನು ಆಡಲಾಗುತ್ತದೆ.

ಇಂತಹ ಆಟಗಳು ದೈಹಿಕ ಶ್ರಮವಿಲ್ಲದೇ ಮನದ ಬೇಗೆ-ಬೇಸರವನ್ನು ನೀಗಿ ಮನರಂಜನೆಯನ್ನು ನೀಡುತ್ತವೆ. ಜೊತೆಗೆ ಗೋಲಿಯಾಟ, ಉಯ್ಯಾಲೆ, ಚಕ್ಕಾ-ಬಾರ, ಇತ್ಯಾದಿ ಜನಪದ ಆಟಗಳು ರೂಢಿಯಲ್ಲಿರುವುದನ್ನು ಗಮನಿಸಬಹುದು. ನಾಗರೀಕ ಆಟಗಳಿಗೆ ಹೆಚ್ಚು ಖರ್ಚು ಬೀಳುತ್ತದೆ. ಜನಪದ ಆಟಗಳೇನು ಹೆಚ್ಚು ಖರ್ಚಿನವಲ್ಲ. ಆದರೂ ಸಹ ಆಧುನಿಕರಣದ ಪ್ರಭಾವದಿಂದಾಗಿ ಇತ್ತೀಚಿನ ಸಂದರ್ಭದಲ್ಲಿ ಗ್ರಾಮೀಣ ಆಟಗಳು ಕಣ್ಮರೆಯಾಗುತ್ತಿದ್ದು ಅವುಗಳ ಸ್ಥಾನವನ್ನು ಆಧುನಿಕ ಆಟಗಳಾದ ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್ ಮುಂತಾದ ಆಟಗಳು ಆಕ್ರಮಿಸಿಕೊಳ್ಳುತ್ತಿವೆ.

ಅಡಿಟಿಪ್ಪಣಿಗಳು

೧. ಡಾ. ರಾಜಶೇಖರ ಹನುಮಲಿ–"ವೀರಗಾಸೆ"–ಪುಟ ಸಂಖ್ಯೆ–೦೩ (ಸಂಶೋಧನಾ ಮಹಾಪ್ರಬಂಧ).

೨. (ಸಂ) ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ– 'ಗರತಿಯ ಹಾಡು'– ಪುಟ ಸಂಖ್ಯೆ–೧೩.

ಅಧ್ಯಾಯ-೮

ಬದಲಾಗುತ್ತಿರುವ ಪರಿಸರದಲ್ಲಿ ಸಾದರು

ಅಧ್ಯಾಯ-೮

ಬದಲಾಗುತ್ತಿರುವ ಪರಿಸರದಲ್ಲಿ ಸಾದರು

ಸಾದರು ಅಲ್ಪಸಂಖ್ಯಾತರಾಗಿದ್ದು, ಹಿಂದಿನಿಂದಲೂ ಸಮಾಜಕ್ಕೆ ಮತ್ತು ದೇಶಕ್ಕೆ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಮುಂದುವರೆದ ವರ್ಗಗಳೊಂದಿಗೆ ಸೆಣಸಾಡಲು ಸಾಧ್ಯವಾಗದೇ, ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಲಾಗದೆ ಸಾಕಷ್ಟು ನೋವು, ಹಿಂಸೆಯನ್ನು ಅನುಭವಿಸುವಂತಹ ಪರಿಸ್ಥಿತಿ ಇತ್ತು. ಕಾರಣ ಸಾದರು ಜಾತಿಯನ್ನು ಸರ್ಕಾರ ಗುರುತಿಸುವ ಮುನ್ನ ಸರ್ಕಾರದ ಯಾವ ಸಹಾಯ ಸಹಕಾರವೂ ಸಾದರಿಗಿರಲಿಲ್ಲ. ಜೊತೆಗೆ ಅನಕ್ಷರತೆ, ಅಜ್ಞಾನದಿಂದ ಕೂಡಿದ್ದು ಸಮಾಜದಲ್ಲೇ ಇದ್ದರೂ ಒಂಟಿ-ಒಬ್ಬಂಟಿಯಾಗಿ ಬದುಕನ್ನು ಎದುರಿಸಬೇಕಾದ ಪರಿಸ್ಥಿತಿಯಿತ್ತು.

ಪ್ರಧಾನ ಸಂಸ್ಕೃತಿಯು ಅಧೀನ ಸಂಸ್ಕೃತಿಯನ್ನು ತನ್ನೆಡೆ ಸೆಳೆಯಲು ಪ್ರಯತ್ನಿಸುವಂತೆ ಜೈನಸಮುದಾಯದ ಮುಖಂಡರು ಸಾದರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಗ್ರಾಮಗಳಿಗೆ ಭೇಟಿನೀಡಿ ಸಾದರನ್ನು ಸಂಪರ್ಕಿಸಿ ಅವರನ್ನೆಲ್ಲಾ ಒಂದೆಡೆಗೆ ಸೇರಿಸಿ 'ಸಾದರು ಜಾತಿಯು ಲೆಕ್ಕಕ್ಕಿಲ್ಲ-ಬುಕ್ಕಿಗಿಲ್ಲ, ನೀವಿಲ್ಲೇ ಇದ್ದು ಸಾಧಿಸೋದಾದರೂ ಏನನ್ನ ನೀವೆಲ್ಲಾ ಜೈನರಾಗಿ ನಿಮಗೆ ಸಾಕಷ್ಟು ಅನುಕೂಲವನ್ನು ನಾವು ಮಾಡಿಕೊಡುತ್ತೇವೆ' ಎಂದು ಅವರು ಹೇಳಿದ ಮಾತುಗಳನ್ನು ಜಾತಿಯ ಹಿರಿಯರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಇನ್ನು ವೀರಶೈವರು ಸಾದ ಲಿಂಗಾಯಿತರು ಶ್ರೇಷ್ಠ, ಬರಿಯ ಸಾದರು ಲಿಂಗಾಯಿತ ಸಾದರಷ್ಟು ಶ್ರೇಷ್ಠರಲ್ಲ. ಎಂದು ಹೇಳುತ್ತಾ ಮೇಲು-ಕೀಳು ಭಾವನೆಯನ್ನು ಸೃಷ್ಟಿಸುವುದರ ಜೊತೆಗೆ ತನ್ನೊಡನೆ ಬಂದವರನ್ನು ಸಾದರ ಲಿಂಗಾಯತರಾಗಿ ಸೇರಿಸಿಕೊಳ್ಳುವ ಪ್ರಯತ್ನವನ್ನು ನಡೆಸಿದರು.

ಕೆಲವರು ತಮ್ಮ ಜಾತಿಯನ್ನು ತೊರೆದು ಹೋದರು ಆದರೆ ಹಲವರು ಯಾರು ಏನೇ ಹೇಳಿದರೂ ಸಹ ತಮ್ಮ ಮೂಲ ಸಂಸ್ಕೃತಿಯನ್ನು, ಜಾತಿಯನ್ನು ತೊರೆಯದೇ, ತೊರೆದು ಹೋಗದೆ ಅವರಿಂದ ತಮ್ಮ ಜಾತಿಯ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳುವ ಸಲುವಾಗಿ ಇಂದು ತಮ್ಮನ್ನು ತಾವು 'ಹಿಂದೂ ಸಾದರು' ಎಂದು ಕರೆದುಕೊಂಡರು.

ಎಲ್ಲ ಜಾತಿಯವರಿಗೂ ಇರುವಂತೆ ಹಿಂದೂ ಸಾದರಿಗೂ ತಮ್ಮ ಸಂಸ್ಕೃತಿ, ಆಚಾರ-ವಿಚಾರ, ರೂಢಿ-ಸಂಪ್ರದಾಯಗಳ ಬಗ್ಗೆ ಅಪಾರ ನಂಬಿಕೆ, ವಿಶ್ವಾಸವಿದೆ. ಆದಕಾರಣ ಸಾದರ ಸಂಸ್ಕೃತಿಯು ಪ್ರಧಾನ ಸಂಸ್ಕೃತಿಯಲ್ಲಿ ಲೀನವಾಗದೇ ತನ್ನ ತನವನ್ನು ಉಳಿಸಿಕೊಂಡು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸಾದರ ಸಾಕಷ್ಟು ಜನ ಹಿರಿಯರು ತಮ್ಮ ಜನರ ಬದುಕನ್ನು ಹಸನುಗೊಳಿಸುವ ಸಲುವಾಗಿ ನಿರಂತರ ಶ್ರಮಿಸುತ್ತಾ ಬಂದಿರುವುದನ್ನು ಗಮನಿಸಬಹುದು.

ನಾಗರಿಕ ಸಮಾಜದಲ್ಲೇ ಇದ್ದರೂ ತಮ್ಮನ್ನು ತಾವು ಗುರುತಿಸಿಕೊಳ್ಳಲಾರದೇ

ಅನಾಗರೀಕರಂತೆ ಬಳಲಿದ್ದನ್ನು ಮರೆಯುವಂತಿಲ್ಲ. ತಮ್ಮ ಸಂಸ್ಕೃತಿಯನ್ನು ತೊರೆಯಲಾರದೇ, ಅನ್ಯ ಸಂಸ್ಕೃತಿಯನ್ನು ಸ್ವೀಕರಿಸಲಾರದೆ ಬದುಕುಗೊಂದಲದ ಗೂಡಾಗಿದ್ದ ಸಂದರ್ಭದಲ್ಲಿ ಸಾದರ ಬದುಕಿಗೆ ಆಸರೆಯಾಗುವಂತೆ ಕರ್ನಾಟಕ ಸರ್ಕಾರ ೧೯೯೪ ರಲ್ಲಿ ಸಾದರು ಜಾತಿಯನ್ನು ಪ್ರವರ್ಗ "IIA" ಪಟ್ಟಿಯಲ್ಲಿ ಸೇರಿಸಿ ಸಾದರ ಪ್ರಗತಿಗೆ ನಾಂದಿಯಾಡಿತು.

ಇತ್ತೀಚಿನ ಸಂದರ್ಭದಲ್ಲಿ ಸಾಕ್ಷರತೆಯ ಪ್ರಮಾಣ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಕಾಲಗತಿಗನುಗುಣವಾಗಿ ಬದಲಾವಣೆಯ ಹಾದಿಯಲ್ಲಿ ಸಾದರು ಶ್ರಮಿಸಿ ಅಭಿವೃದ್ಧಿಯ ಪಥದೆಡೆಗೆ ಸಾಗುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಸಾದರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿಶೀಲ ಸ್ಥಿತಿಯಲ್ಲಿದ್ದಾರೆ. ಬಡತನದ ರೇಖೆಯ ಕೆಳಗೆ ವಾಸಿಸುತ್ತಿರುವವರು ಜಾತಿಯಲ್ಲಿ ಬೆರಳೆಣಿಕೆಯ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು. ಸಾದರ ಎಲ್ಲ ಸದಸ್ಯರೂ **'ಮನೆಮನೇಲಿ ಮುದ್ದೆ ಮಾರಿಗುಡೀಲಿ ನಿದ್ದೆ'** ಎನ್ನದೇ ಶ್ರಮವಹಿಸಿ ಹಗಲಿರುಳು ದುಡಿದು ಆರ್ಥಿಕ ಸ್ವಾವಲಂಬನೆಯತ್ತ ಹೆಜ್ಜೆಹಾಕುತ್ತಿರುವುದನ್ನು ಗಮನಿಸಬಹುದು.

ಹಿಂದೆ ಕೃಷಿಕ ಸಾದರು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆರ್ಥಿಕ ಅಭಿವೃದ್ಧಿಗೆ ಅದು ಪೂರಕವಾಗಿರಲಿಲ್ಲ. ಆದರೆ ಇಂದು ಅತ್ಯಾಧುನಿಕ ಕೃಷಿ ಸಲಕರಣೆಗಳನ್ನು ಬಳಸಲಾಗುತ್ತಿದೆ. ಇದು ಅಭಿವೃದ್ಧಿಗೆ ಪೂರಕ ಅಂಶವಾಗಿ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಹೈನುಗಾರಿಕೆಯು ಸಹ ಸಾದರ ಅಭಿವೃದ್ಧಿಗೆ ಸಹಾಯಕವಾಗಿದೆ.

ಹೀಗೆ ಸಾದರಲ್ಲಿ ಕೇವಲ ಬೆರಳೆಣಿಕೆಯಷ್ಟು ಮಂದಿ ಸರ್ಕಾರಿ ನೌಕರಿಯಲ್ಲಿಯೂ, ಕೆಲವರು ಖಾಸಗಿ ಉದ್ಯಮಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದರೆ ಹಲವರು ಕೃಷಿಯನ್ನೇ ನಂಬಿ ನೆಚ್ಚಿ ಬದುಕು ಸಾಗಿಸುತ್ತಿದ್ದಾರೆ. ಹಿಂದೆ ಸಾದರಲ್ಲಿ ಸಂಘಟನೆಯ ಮನೋಭಾವವಿರಲಿಲ್ಲ. ಅಲ್ಪಸಂಖ್ಯಾತರಾದ ಇವರು ಕರ್ನಾಟಕದ ಕೆಲಭಾಗಗಳಲ್ಲಿ ಮತ್ತು ಆಂಧ್ರಪ್ರದೇಶ, ತಮಿಳುನಾಡಿನ ಗಡಿಭಾಗಗಳಲ್ಲಿ ಕಡಿಮೆ ಪ್ರಮಾಣದಲ್ಲಿ ವಾಸಿಸುತ್ತಿದ್ದಾರೆ. ಹೀಗಿರುವಾಗ ಸಾದರಲ್ಲಿ ಸಂಘಟನೆ ಕಷ್ಟದಾಯಕವಾದ ವಿಚಾರವೇ ಆಗಿತ್ತು. ಆದರೆ ಜಾತಿಯ ಎಲ್ಲ ಹಿರಿಯ ಮುಖಂಡರ ಪರಿಶ್ರಮ, ನಿರಂತರ ಹೋರಾಟದ ಪ್ರತಿಫಲವಾಗಿ ಇಂದು ಸಾದರಲ್ಲಿ ಸಂಘಟನೆಯ ಮನೋಭಾವವಿದೆ. ೨೦೧೩ರಲ್ಲಿ ನಡೆದ **'ಹಿಂದೂ ಸಾದರ ರಾಜ್ಯ ಮಟ್ಟದ ಮಹಾಸಮಾವೇಶ'**ವೇ ಇದಕ್ಕೆ ಸಾಕ್ಷಿ ಎನ್ನಬಹುದು. ದಿನಾಂಕ: ೨೦-೦೧-೨೦೧೩ರ ಭಾನುವಾರ ಗೌರಿಬಿದನೂರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಾದರ ಸದಸ್ಯರು ಭಾಗವಹಿಸಿದ್ದರು. ಇದರಿಂದ ಇವರಲ್ಲಿನ ಸಂಘಟನೆಯ ಮನೋಭಾವವು ಜಾಗೃತಾವಸ್ಥೆಯಲ್ಲಿರುವುದನ್ನು ತಿಳಿಯಬಹುದು. ಸಂಘಟನೆಯು ಸಾದರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ಮರೆಯುವಂತಿಲ್ಲ.

ಇತ್ತೀಚಿನ ಸಂದರ್ಭದಲ್ಲಿ ಹಿಂದೂ ಸಾದರು, ಜೈನ ಸಾದರು, ಸಾದರ ಲಿಂಗಾಯತರುಗಳ ನಡುವಿನ ಸಾಮಾಜಿಕ ಅಂತರ ಗಣನೀಯವಾಗಿ ಕಡಿಮೆಯಾಗುತ್ತಿದ್ದು, ಈ ಮೂರೂ ಗುಂಪುಗಳ

ನಡುವೆ ವೈವಾಹಿಕ ಸಂಬಂಧಗಳೇರ್ಪಡುತ್ತಿವೆ. ಇದರಿಂದ ಇವರ ನಡುವಿನ ಅಂತರ ಕಡಿಮೆಯಾಗಿ ಸೌಹಾರ್ದತೆಯ ಬಾಳ್ವೆಗೆ ನೆರವಾಗುತ್ತವೆ.

ಕರ್ನಾಟಕ ಸರ್ಕಾರವು ೧೯೯೪ರಲ್ಲಿ ಹಿಂದೂ ಸಾದರನ್ನು ಪ್ರವರ್ಗ "IIA" ಗೆ ಸೇರಿಸಿ ಇವರ ಅಭಿವೃದ್ಧಿಗೆ ನೆರವಾಯಿತು. ಆ ಸಂದರ್ಭದಲ್ಲಿ ಅಲ್ಪಸಂಖ್ಯಾತ ಹಿಂದೂ ಸಾದರಿಗಾಗಿ ದೊರೆತ ಈ ಅವಕಾಶವನ್ನು ಬಹುಸಂಖ್ಯಾತರು, ಮುಂದುವರೆದವರಾದ ಸಾದರ ಲಿಂಗಾಯಿತರು ಪಡೆಯಲು ಅಪೇಕ್ಷಿಸಿದರು. ಇದು ಹಲವು ಗೊಂದಲಗಳಿಗೆ ಎಡೆಮಾಡಿಕೊಟ್ಟಿತು. ಸಾದರ ಲಿಂಗಾಯಿತರು ತಾವೂ ಹಿಂದೂ ಸಾದರು, ತಮಗೂ ಹಿಂದೂ ಸಾದರಿಗೂ ಯಾವುದೇ ವ್ಯತ್ಯಾಸ ಇಲ್ಲವೆಂದೂ ತಾವು ಹಿಂದೂ ಸಾದರ ಹೆಸರಿನಡಿಯಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಅರ್ಹರೆಂದು ತಿಳಿಸಿದರು. ಇದನ್ನು ಹಿಂದೂ ಸಾದರು ಬಲವಾಗಿ ವಿರೋಧಿಸಿ ನಮಗೂ ವೀರಶೈವ ಸಾದರಿಗೂ ಸಂಬಂಧವಿಲ್ಲವೆಂದು ಅನೇಕ ಸಾಕ್ಷಿ ಪುರಾವೆಗಳೊಂದಿಗೆ ಸಾಬೀತು ಪಡಿಸಲು ಪ್ರಯತ್ನಿಸಿದರು.

"ಈ ಗೊಂದಲದ ನಿವಾರಣೆಗಾಗಿ ಮಾನವ ಶಾಸ್ತ್ರಜ್ಞರಾದ ಎಡ್ಗರ್ ಥರ್ಸ್ಟನ್ ರವರ **"ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ"** ಎಂಬ ಗ್ರಂಥದಿಂದ ಆರಂಭಿಸಿ ಕೆ.ಎಸ್.ಸಿಂಗ್, ನಂಜುಂಡಯ್ಯ ಮತ್ತು ಅಯ್ಯರ್ ಮೊದಲಾದವರು ಹಿಂದೂಸಾದರ ಮತ್ತು ಲಿಂಗಾಯಿತ ಸಾದರ ಬಗ್ಗೆ ನೀಡಿರುವ ವ್ಯಾಖ್ಯಾನಗಳನ್ನು ಪರಿಶೀಲಿಸುವುದರೊಂದಿಗೆ ಹಿಂದುಳಿದ ವರ್ಗಗಳ ಆಯೋಗದ ವರದಿಗಳಾದ ಹಾವನೂರು ವರದಿ, ಜಸ್ಟೀಸ್ ಚಿನ್ನಪ್ಪರೆಡ್ಡಿರವರ ವರದಿ, ವೆಂಕಟಸ್ವಾಮಿ ವರದಿಯನ್ನು ಒಳಗೊಂಡಂತೆ ಪ್ರೊ.ರವಿಕುಮಾರ ರವರ ವರದಿ ಹಾಗೂ ಸಿದ್ಧಗಂಗಯ್ಯನವರ ನೇತೃತ್ವದ ಆಯೋಗ ನೀಡಿರುವ ಮಧ್ಯಂತರ ವರದಿಯನ್ನು ಪರಿಶೀಲಿಸಿ ಹಿಂದೂ ಸಾದರು ಮತ್ತು ವೀರಶೈವ ಸಾದರೊಂದಿಗಿನ ವ್ಯತ್ಯಾಸಗಳನ್ನು ಅಧ್ಯಯನ ಮಾಡಿ ಸ್ಪಷ್ಟವಾಗಿ ಮನಗಂಡಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಹೇಳುವುದಾದರೆ ಹಿಂದೂ ಸಾದರು ಜೈನ ಮೂಲದಿಂದ ಬಂದವರಾದರೆ, ಸಾದರ ಲಿಂಗಾಯತರು ವೀರಶೈವ ಮೂಲದಿಂದ ಬಂದವರಾಗಿದ್ದಾರೆ. ಹಿಂದಿನ ಆಯೋಗದ ವರದಿಗಳನ್ನು ಆಧರಿಸಿ ಹೇಳುವುದಾದರೆ ಹಿಂದೂ ಸಾದರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ. ಅವರಲ್ಲಿ ಯಾವುದೇ ವಿದ್ಯಾ ಸಂಸ್ಥೆಗಳಿಲ್ಲ, ಬೃಹತ್ ಮಟ್ಟದ ವಿದಾರ್ಥಿನಿಲಯಗಳಿಲ್ಲ, ವಾಣಿಜ್ಯ ಸಂಸ್ಥೆಗಳೂ ಇಲ್ಲ. ಯಾವುದೇ ಮೆಡಿಕಲ್, ಎಂಜಿನಿಯರಿಂಗ್ ಕಾಲೇಜುಗಳಿಲ್ಲ, ಅಧಿಕಾರಸ್ಥ ರಾಜಕಾರಣಿಗಳು ಮತ್ತು ಉನ್ನತ ಅಧಿಕಾರಿಗಳ ಸಂಖ್ಯೆಯನ್ನು ನೋಡಿದಾಗ ವೀರಶೈವ ಲಿಂಗಾಯಿತ ಸಾದರ ಪ್ರಾಬಲ್ಯ ಹೆಚ್ಚಿದೆ"[7].

ಈ ಎಲ್ಲಾ ವ್ಯತ್ಯಾಸಗಳನ್ನು ಮನಗಂಡ ಹಿಂದುಳಿದ ವರ್ಗಗಳ "IIA" ಪಟ್ಟಿಯಲ್ಲಿರುವ ೧೦೨ ಜಾತಿಗಳವರು ವೀರಶೈವ ಲಿಂಗಾಯಿತ ಸಾದರಿಗೆ "IIA" ನಲ್ಲಿ ಸಿಂಧುತ್ವ ಪ್ರಮಾಣ ಪತ್ರ

ನೀಡುವುದರಿಂದ ತಮಗೆ ಅನ್ಯಾಯವಾಗುತ್ತದೆ ಎಂಬ ಕಾರಣದಿಂದ ಸಾಕಷ್ಟು ವಿರೋಧ ವ್ಯಕ್ತಪಡಿಸಿದರು. ಹೀಗೆ "IIA" ಸಂಬಂಧಿಸಿದಂತೆ ಹಿಂದೂ ಸಾದರು ಮತ್ತು ಲಿಂಗಾಯಿತ ಸಾದರಲ್ಲಿ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ವಾದ-ವಿವಾದಗಳು ಉದ್ಭವಿಸಿರುವುದನ್ನು ಗಮನಿಸಬಹುದು.

ಹಾಗೆಯೇ ಭಾರತ ಸರ್ಕಾರ ೨೦೦೬ ರಲ್ಲಿ ಹಿಂದುಳಿದ ವರ್ಗಗಳ (ಓ.ಬಿ.ಸಿ) ಪಟ್ಟಿಯಲ್ಲಿ ಸೇರಿಸಿ ಸಾದರ ಏಳಿಗೆಗೆ ಸಹಕಾರಿಯಾಗಿರುವುದು ಗಮನಾರ್ಹ ಸಂಗತಿಯೇ ಸರಿ.

ಒಟ್ಟಾರೆಯಾಗಿ ಹೇಳುವುದಾದರೆ ಇತ್ತೀಚಿನ ದಿನಗಳಲ್ಲಿ ಸಾದರು ಉತ್ತಮ ಸಂಘಟನೆಯೊಂದಿಗೆ, ಅಭಿವೃದ್ಧಿಯ ಪಥದೆಡೆಗೆ ಸಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಾದರ ಏಳಿಗೆಗಾಗಿ ಶ್ರಮಿಸಿದ ಕೆಲ ಪ್ರಮುಖ ಸಾಧಕರನ್ನು ಗಮನಿಸಬಹುದು.

ಸಾದರು ಜಾತಿಯ ಸಾಧಕರು:-

ಮಂಡಿಹರಿಯಣ್ಣನವರು:-

ಸಾದರ ಪ್ರಮುಖ ಸಾಧಕರಲ್ಲಿ 'ಮಂಡಿ ಹರಿಯಣ್ಣ'ನವರು ಗಮನಾರ್ಹರು. ಪ್ರಾತಃಸ್ಮರಣೀಯರೂ ಆದವರು. ಡಿ.ವಿ.ಜಿ.ರವರು ಹೇಳುವಂತೆ-'ಹರಿಯಣ್ಣವರು ಎತ್ತರವಾದ ನಿಲುವು, ಹೊಳೆಯುವ ಹೊಂಬಣ್ಣ, ಗಂಭೀರವಾದ ಸೌಮ್ಯಮುಖ, ಮೆಲ್ದುಟಿಯ ಮೇಲೆ ಎದ್ದು ಕಾಣುತ್ತಿದ್ದ ತುಂಬುಮೀಸೆ, ಕ್ಲೋಸ್ ಕಾಲರ್ ಕೋಟು, ಅದರ ಮೇಲೆ ಸರಿಗೆಯ ಶಲ್ಯ, ಸಣ್ಣಸರಿಗೆ ಅಂಚಿನ ಮುಂಡಾಸು, ಕೈಯಲ್ಲಿ ಒಂದು ಬೆತ್ತವನ್ನು ಹಿಡಿದು ಶಾಂತಸ್ವಾಭಾವದವರಾಗಿ ಕಂಗೊಳಿಸುತ್ತಿದ್ದರು'.

ಸಂದರ್ಭೋಚಿತವಾಗಿ ಮಾತನಾಡುತ್ತಿದ್ದ ಹರಿಯಣ್ಣನವರು ಸಜ್ಜನರೂ, ಸ್ನೇಹಶೀಲರೂ, ವಿನೋದಪ್ರಿಯರು ಆಗಿದ್ದರು. ಇವರು ಸರ್.ಎಂ.ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಬಿ.ಕೆ.ಗರುಡಾಚಾರ್, ಸಜ್ಜನರಾವ್, ಪುಟ್ಟಣ್ಣ ಚೆಟ್ಟಿ, ತೋಟದಪ್ಪ, ಕೆ.ಎಸ್.ಕೃಷ್ಣಯ್ಯ ಶೆಟ್ಟರು (ಐರಿಸ್ ಪ್ರೆಸ್‌ನ ಮಾಲೀಕರು), ಡಿ.ವಿ.ಗುಂಡಪ್ಪರವರ ಸಮಕಾಲೀನರೂ, ಆಪ್ತರೂ ಆಗಿದ್ದರು.

ಹರಿಯಣ್ಣನವರು ಸರ್.ಎಂ.ವಿಶ್ವೇಶ್ವರಯ್ಯನವರು ಒಟ್ಟಿಗೆ ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡಿದವರು. ಹರಿಯಣ್ಣನವರು ಇಂಟರ್ ವರೆಗೂ ಓದಿ ನಂತರ ತಮ್ಮ ವಂಶಪಾರಂಪರ್ಯ ವೃತ್ತಿಯಾದ ಮಂಡಿ ವ್ಯಾಪಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಹಣಸಂಪಾದನೆಯೊಂದೇ ವ್ಯಾಪಾರದ ಗುರಿಯಲ್ಲವೆಂದು, ವ್ಯಾಪಾರದ ಮೂಲಕವೂ ಉತ್ತಮ, ಸಮಾಜ ಸೇವೆ ಸಾಧ್ಯವೆಂಬುದನ್ನು ಸಾಧಿಸಿತೋರಿಸಿದ ಮಹಾನ್ ವ್ಯಕ್ತಿ ಇವರು.

೧೯೪೦-೪೪ ರ ಯುದ್ಧಕಾಲದಲ್ಲಿ ವರ್ತಕರು ಕಾಳಸಂತೆಯಲ್ಲಿ ಅಕ್ಕಿ ವ್ಯಾಪಾರವನ್ನು ಮಾಡಿ ಅಪಾರ ಹಣಸಂಪಾದನೆ ಮಾಡುತ್ತಿದ್ದರು. ಆದರೆ ಹರಿಯಣ್ಣನವರು ಮಂಡಿಬೇಕಾದರೆ

ಮುಚ್ಚುತ್ತೇನೆಯೇ ಹೊರತು ಇಂತಹ ಅಧರ್ಮದ ಕಾರ್ಯಕ್ಕೆ ನಾನೆಂದು ಕೈಹಾಕುವುದಿಲ್ಲವೆಂದರು. ಇದರಿಂದ ಮಂಡಿಹರಿಯಣ್ಣನವರ ಪ್ರಾಮಾಣಿಕ ನಿಲುವನ್ನು ತಿಳಿಯಬಹುದು.

ಉನ್ನತ ವ್ಯಾಸಂಗಕ್ಕೆಂದು ಗ್ರಾಮೀಣ ಪ್ರದೇಶದಿಂದ ಬೆಂಗಳೂರಿಗೆ ಬಂದ ವಿದ್ಯಾರ್ಥಿಗಳಿಗೆ ೧೯೧೭ ರಲ್ಲಿ ಹರಿಯಣ್ಣನವರು ಮೊಟ್ಟಮೊದಲ ಬಾರಿಗೆ ಮೂವತ್ತು ವಿದ್ಯಾರ್ಥಿಗಳಿಗೆ ಊಟ-ವಸತಿಯನ್ನು ಒದಗಿಸುವುದರ ಮೂಲಕ, ಉಚಿತ ವಿದ್ಯಾರ್ಥಿನಿಲಯವನ್ನು ತಮ್ಮ ಮನೆಯಲ್ಲೇ ಪ್ರಾರಂಭಿಸಿದರು. ಇವರ ಕಠಿಣ ಪರಿಶ್ರಮದಿಂದ ಪ್ರಾರಂಭವಾದ **ಸಾದರ ವಿದ್ಯಾರ್ಥಿ ನಿಲಯ** ಮತ್ತು **ಸಾದರ ವಿದ್ಯಾಭಿವೃದ್ಧಿ ಸಂಘ** ಇಂದು ಬೃಹತ್ತಾಗಿ ಬೆಳೆದಿದೆ. ಹೀಗೆ ಸಂಘದ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾದ ಪ್ರಮುಖರು ಶ್ರೀಮಾನ್ ಮಂಡಿ ಹರಿಯಣ್ಣನವರು.

ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ತಮ್ಮ ಸಹಪಾಟಿಯಾಗಿದ್ದ ಹರಿಯಣ್ಣನವರ ಮನೋಧರ್ಮವನ್ನು ಗಮನಿಸಿ, ಅವರ ಬಹುಮುಖ ಪ್ರತಿಭೆಯನ್ನು, ದೇಶಾಭಿಮಾನವನ್ನು, ವರ್ತಕರು ಅವರಿಗೆ ಕೊಡುತ್ತಿದ್ದ ಮರ್ಯಾದೆ, ಗೌರವವನ್ನು ಕಂಡು ಹರಿಯಣ್ಣನವರನ್ನು ಮೈಸೂರು ರಾಜ್ಯದ ಆಗಿನ ೧೯೧೪-೧೮ ರ ಲೆಜಿಸ್ಲೇಟೀವ್ ಕೌನ್ಸಿಲ್‌ನ ಸದಸ್ಯರನ್ನಾಗಿ ನಾಮಕರಣ ಮಾಡಿದ್ದರು.

ಇವರು ಬಸವನಗುಡಿಯ ಪಶ್ಚಿಮದ ಕಡೆಯ ಸಣ್ಣಗುಡ್ಡದ ಮೇಲಿನ ಹರಿಹರೇಶ್ವರ ದೇವಾಲಯವನ್ನು ನಿರ್ಮಿಸಿದರು. ವರ್ಷಂಪ್ರತಿ ಶಿವರಾತ್ರಿಯಂದು ವಿಜೃಂಭಣೆಯಿಂದ ದೇವತಾಕಾರ್ಯಗಳು ಸಾಂಗವಾಗಿ ನೆರವೇರುತ್ತಿದ್ದವು.

ಡಿ.ವಿ.ಜಿ.ರವರು ಹೇಳುವಂತೆ ಮಿತಭಾಷಿಗಳಾದ ಹರಿಯಣ್ಣನವರು ವರ್ತಕರೊರ್ವರು ಅಪಾರ ನಷ್ಟವನ್ನು ಅನುಭವಿಸಿ ಸಂಕಷ್ಟದಲ್ಲಿದ್ದಾರೆಂಬ ವಿಷಯವನ್ನು ತಿಳಿದು ತಮ್ಮ ಗೆಳೆಯರಾದ ಸಜ್ಜನರಾಯರು, ಬಿ.ಕೆ.ಗರುಡಾಚಾರ್ಯರು ಇನ್ನಿತರೆ ಸ್ನೇಹಿತರೊಂದಿಗೆ ಸೇರಿ ಚರ್ಚಿಸಿ ನಷ್ಟ ಅನುಭವಿಸಿ, ಕಷ್ಟದಲ್ಲಿ ಸಿಲುಕಿದ್ದ ವರ್ತಕನಿಗೆ ನೆರವಾಗಿ ಅವರನ್ನು ಆಪತ್ತಿನಿಂದ ಪಾರುಮಾಡಿದ್ದರು. ಅಂತಹ ಆತ್ಮೀಯ ಸ್ನೇಹಿತರನ್ನು ನಾವಿಂದು ನೋಡಲಾಗದು ಎಂಬುದು ಡಿ.ವಿ.ಜಿ.ರವರ ಅಭಿಪ್ರಾಯವಾಗಿದೆ.

ಬಹುತೇಕ ನಿರುದ್ಯೋಗಿಗಳಿಗೆ ಬಂಡವಾಳವನ್ನು ಕೊಟ್ಟು ಅವರು ತಮ್ಮ ಬದುಕನ್ನು ರೂಪಿಸಿಕೊಳ್ಳಲು ನೆರವಾದವರು ಮಂಡಿಹರಿಯಣ್ಣನವರು. 'ನಮ್ಮ ಕಷ್ಟಕಾಲದಲ್ಲಿ ಆದವರು ಅವರನ್ನು ದೇವರು ಚೆನ್ನಾಗಿಟ್ಟಿರಲಿ ಎಂದು ಅವರಿಂದ ಸಹಾಯ ಪಡೆದ ಬಹುಮಂದಿ ಅವರನ್ನು ಸದಾ ಹಾರೈಸುತ್ತಿದ್ದರು. ಡಿ.ವಿ.ಜಿ.ರವರ ಸಾರಥ್ಯದಲ್ಲಿ ಪ್ರಕಟವಾಗುತ್ತಿದ್ದ **'ಕರ್ನಾಟಕ ಪತ್ರಿಕೆ'**ಯನ್ನು ಹರಿಯಣ್ಣನವರು ತಪ್ಪದೇ ಓದಿ, ಅದಕ್ಕೆ ಟೀಕೆ-ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಆಂಗ್ಲ ಭಾಷೆಯನ್ನು ಬಲ್ಲ ಇವರು ಕನ್ನಡ ನಾಡು-ನುಡಿಯ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿದ್ದರು. ಸಮಾಜದ

ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ ಇವರು ಉನ್ನತ ಸ್ಥಾನ-ಮಾನವನ್ನು ಹೊಂದಿದ್ದು ಇತರರ ಅಭಿಪ್ರಾಯಗಳಿಗೆ ಮನ್ನಣೆ ನೀಡುವಂತಹವರಾಗಿದ್ದರು.

ಹರಿಯಣ್ಣನವರು ಬೆಂಗಳೂರಿನಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದಾಗ ಬೆಂಗಳೂರಿನ ವರ್ತಕ ಪ್ರಮುಖರಾದ ಸಂಗಮ ತಿಮ್ಮಯ್ಯರವರು ಹರಿಯಣ್ಣನವರಲ್ಲಿ ಬಂದು ನಿಮ್ಮ ಹಾಸ್ಟೆಲಿನ ಪಕ್ಕದಲ್ಲಿ ಒಂದು ಮಠವಿದೆ ಅದು ನನಗೆ ಸೇರಿದ್ದು, ಅದನ್ನು ನಿಮ್ಮ ಹಾಸ್ಟೆಲ್‌ಗೆ ಉಚಿತವಾಗಿ ದಾನಮಾಡಬೇಕೆಂದು ನಿರ್ಧರಿಸಿದ್ದೇನೆ ಎಂದಾಗ, ಹರಿಯಣ್ಣನವರು ಪರರ ಸ್ವತ್ತು ಪಾಷಾಣದಂತೆ, ಕಂಡೋರ ಒಡವೆ ನಮಗೆ ಬೇಡವೆಂದು ಹೇಳಿದರು. ಇದರಿಂದ ಹರಿಯಣ್ಣನವರ ನಿಸ್ವಾರ್ಥ ಮನೋಭಾವ ಬಿಂಬಿತವಾಗುತ್ತದೆ.

ಸಾದರ ಉನ್ನತಿಗಾಗಿ, ಏಳಿಗೆಗಾಗಿ ಶ್ರಮಿಸಿದ ಶ್ರೀಮಾನ್ ಮಂಡಿಹರಿಯಣ್ಣನವರು ಜಾತಿಯ ಎಲ್ಲರನ್ನು ಸಂಘಟಿಸಲು ೨೯-೧೨-೧೯೩೧ ರಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಕುಚ್ಚಂಗಿಯಲ್ಲಿ ಮಹಾಸಭೆಯನ್ನು ನಡೆಸಿದರು. ನಂತರ ೦೫-೦೧-೧೯೩೧ ರಲ್ಲಿ ಮಂಡಿ ಹರಿಯಣ್ಣನವರು ವಿದ್ಯಾರ್ಥಿನಿಲಯದಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಮಹಾಸಭೆಯನ್ನು ಕರೆದಿದ್ದರು. ಹೀಗೆ ಹಲವು ಸಭೆ- ಸಮಾರಂಭಗಳನ್ನು ಮಾಡಿ ಜನತೆಯಲ್ಲಿ ಅಭಿವೃದ್ಧಿಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಮಾಡಿದರು.

ಹರಿಯಣ್ಣನವರು **ಗ್ರೈನ್ ಮರ್ಚೆಂಟ್ಸ್ ಕೋ ಆಪರೇಟೀವ್ ಬ್ಯಾಂಕ್** ಸ್ಥಾಪನೆಯಲ್ಲಿ ಪ್ರಮುಖಪಾತ್ರ ವಹಿಸಿದರು. ಇವರ ಮಾರ್ಗದರ್ಶನದ ಮೇರೆಗೆ ಬ್ಯಾಂಕಿನ ಹಣಕಾಸಿನ ವ್ಯವಹಾರಗಳೆಲ್ಲವೂ ಸಮರ್ಥವಾಗಿ ನಡೆಯುತ್ತಿದ್ದವು. ೧೮ ವರ್ಷಗಳ ಕಾಲ ಪ್ರಸ್ತುತ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕೂಸನ್ನು ಜೋಪಾನಮಾಡುವಂತೆ ಪ್ರೀತಿ, ಅಭಿಮಾನದಿಂದ ಬ್ಯಾಂಕನ್ನು ಮುನ್ನಡೆಸಿ ಚಾಮರಾಜಪೇಟೆಯಲ್ಲಿ ಬ್ಯಾಂಕಿಗಾಗಿ ಒಂದು ಕಟ್ಟಡವನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಇವರು ಮೈಸೂರು ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿಯಲ್ಲಿ ೧೯೧೩ ರಿಂದ ೧೯೨೫ ರ ವರೆಗೆ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಮಾನವ ಸದಾಕಾಲ ತನ್ನ ಹಾಗೂ ಇತರರ ಉನ್ನತಿಗಾಗಿ ಶ್ರಮಿಸಬೇಕು, ಇತರರ ಕಷ್ಟ-ಕಾರ್ಪಣ್ಯಗಳನ್ನು ಅರಿತು ಔದಾರ್ಯದಿಂದ ನಡೆದುಕೊಳ್ಳಬೇಕು ಎಂದು ಸಾರಿ ಹೇಳುತ್ತಿದ್ದರು.

ಜ್ಞಾನದಾನಕ್ಕಿಂತ ಮಿಗಿಲಾದ ದಾನ ಮತ್ತೊಂದಿಲ್ಲವೆಂದು ನಂಬಿ ಹಲವಾರು ವಿದ್ಯಾರ್ಥಿಗಳಿಗೆ ವಸತಿ-ಊಟದ ವ್ಯವಸ್ಥೆಯನ್ನು ಕಲ್ಪಿಸಿ ಆ ಮೂಲಕ ಸಾವಿರಾರು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ನೆರವಾದರು. **'ದಾನ ಪ್ರಕಾಶ', 'ಅನ್ನದಾತರೆಂಬ'** ಬಿರುದುಗಳಿಂದಲೇ ಕರೆಯಲ್ಪಡುವ ಮಂಡಿ ಹರಿಯಣ್ಣನವರು ಸಾದರ ಪ್ರಾತಃ ಸ್ಮರಣೀಯರಲ್ಲಿ ಒರ್ವರಾಗಿದ್ದಾರೆ.

ಗಂಗಸಂದ್ರದ ಗೌರಮ್ಮ:-

ಸಾದರ ಸಾಧಕರಲ್ಲಿ ಗಂಗಸಂದ್ರ ಗೌರಮ್ಮನವರು ಒರ್ವರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿರುವ ಇವರು ಸ್ತ್ರೀಯರಿಗೆ ಅಭಿವ್ಯಕ್ತಿಯ ಸ್ವಾತಂತ್ರ್ಯವೇ ಇಲ್ಲದ ದಿನಗಳಲ್ಲಿ, ಬ್ರಿಟೀಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ಬಂಡೆದ್ದು ಹೋರಾಟಮಾಡಿದ, ಕೆಲವೇ ಕೆಲವು ದಿಟ್ಟ-ಧೀಮಂತ ಮಹಿಳೆಯರಲ್ಲಿ ಒಬ್ಬರಾಗಿದ್ದಾರೆ. ಶ್ರೀಮತಿ ಗೌರಮ್ಮ ಸಾದರ ಸಮಾಜಕ್ಕೆ ಸೇರಿದವರೆಂಬುದು ಹೆಮ್ಮೆಯ ಸಂಗತಿಯಾಗಿದೆ. ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ವಿದುರಾಶ್ವತ್ಥದ ಕಾಂಗ್ರೆಸ್ ಅಧಿವೇಶನ ಮಹತ್ವಪೂರ್ಣ ಮೈಲುಗಲ್ಲು. ಕರ್ನಾಟಕದ ಜಲಿಯನ್‌ವಾಲಾಬಾಗ್ ಎಂದೇ ಹೆಸರಾದ ವಿದುರಾಶ್ವತ್ಥ ದುರ್ಘಟನೆಯಲ್ಲಿ ಮಹಿಳಾ ಸ್ವಾತಂತ್ರ್ಯ ಹೋರಾಟ ತಂಡದ ನಾಯಕಿಯಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಜೊತೆ ಪಾಲ್ಗೊಂಡಿದ್ದರು. ಪೋಲೀಸರ ಗೋಲಿಬಾರ್‌ನಿಂದ ಕೂದಲೆಳೆಯಲ್ಲಿ ಪಾರಾದ ಗಂಗಸಂದ್ರದ ಗೌರಮ್ಮನವರು ಶಿವಪುರ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮಹಿಳೆಯರ ತಂಡದ ನೇತೃತ್ವವನ್ನು ವಹಿಸಿದ್ದರು. ಆಗ ಬ್ರಿಟೀಷರು ಇವರನ್ನು ಬಂಧಿಸಿ ಚಿಕ್ಕಬಳ್ಳಾಪುರ ಸೆರೆಮನೆಯಲ್ಲಿಟ್ಟಿದ್ದರು.

ಇವರು ೧೩-೦೨-೧೯೦೨ ರಲ್ಲಿ ಗೌರಿಬಿದನೂರು ತಾಲ್ಲೂಕು ಗೊಟಕಣಾಪುರ ಗ್ರಾಮದಲ್ಲಿ ಶ್ರೀ ಅಣ್ಣಯ್ಯಪ್ಪ ಮತ್ತು ಶ್ರೀಮತಿ ಅಕ್ಕಯ್ಯಮ್ಮನವರ ದ್ವಿತೀಯ ಪುತ್ರಿಯಾಗಿ ಜನಿಸಿದರು. ಇವರ ಪತಿ ಶ್ರೀ ನಾರಾಯಣಗೌಡರು ಮತ್ತು ಅಣ್ಣನವರಾದ ವೆಂಕಟಶಾಮಿಗೌಡರ ಪ್ರೇರೇಪಣೆಯನ್ನು ಪಡೆದು ತಮ್ಮ ಜೀವನವನ್ನು ಸಮಾಜಸೇವೆಗೆಂದು ಮುಡಿಪಾಗಿಸಿದರು.

ಸಮಾಜ ಸೇವಕರಾದ ದಿ. ಶ್ರೀಮತಿ ಯಶೋಧರ ದಾಸಪ್ಪನವರ ಮಾರ್ಗದರ್ಶದಂತೆ **'ಕಸ್ತೂರಾ ಬಾ ಗಾಂಧಿ ನ್ಯಾಷನಲ್ ಮೆಮೊರಿಯಲ್ ಟ್ರಸ್ಟ್'** (ಅರಸೀಕೆರೆ) ಯಲ್ಲಿ ಆರು ತಿಂಗಳು ತರಬೇತಿ ಪಡೆದು ನಂತರ ತಮ್ಮ ಸ್ವಗ್ರಾಮಕ್ಕೆ ಹಿಂತಿರುಗಿದರು. ಗಂಗಸಂದ್ರದಲ್ಲಿ ೧೯೪೬ ರಲ್ಲಿ **'ಕಸ್ತೂರಾ ಬಾ'** ಕೇಂದ್ರವನ್ನು ತೆರೆದು ಹರಿಜನ ಸೇವೆಯನ್ನು ಪ್ರಾರಂಭಿಸಿದರು. ಭೀಕರ ಬರಗಾಲದಿಂದ ಜನ ತತ್ತರಿಸುತ್ತಿದ್ದ ಸಮಯದಲ್ಲಿ ತಮ್ಮ ಮನೆಯಲ್ಲೇ ಗಂಜಿ ಕೇಂದ್ರವನ್ನು ತೆರೆದರು, ದವಸ-ಧಾನ್ಯಗಳನ್ನು ಹಳ್ಳಿ-ಹಳ್ಳಿಗೆ ಹೋಗಿ ಸಂಗ್ರಹಿಸಿ ತಂದು ಗಂಜಿಕೇಂದ್ರವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವವರಿಗೆ ಸಹಾಯಾರ್ಥವಾಗಿ ಮುಖಂಡರ ಆದೇಶದಂತೆ ಸುವರ್ಣದಾನವಾಗಿ ತಮ್ಮ ಎರಡು ಬಳೆಗಳನ್ನು ದಾನವಾಗಿ ನೀಡಿದರು. ಅಷ್ಟೇ ಅಲ್ಲದೆ ವಿನೋಭಾಜಿಯವರ ಆದೇಶದ ಮೆರೆಗೆ ಭೂದಾನ ಚಳುವಳಿಯ ಪ್ರಭಾವದಿಂದ ಪ್ರೇರಿತರಾಗಿ ತಮ್ಮ ಎರಡು ಎಕರೆ ಭೂಮಿಯನ್ನು ಬಡವರಿಗೆ ದಾನಮಾಡಿದರು. ಜೊತೆಗೆ ಶ್ರೀ ಚಂಗಲರಾಯರೆಡ್ಡಿರವರ ಜೊತೆ ಏಳು ಜನ ಮಂತ್ರಿಗಳನ್ನು ಸ್ವಗ್ರಾಮಕ್ಕೆ ಆಹ್ವಾನಿಸಿ ಗಾಂಧೀಜಿಯವರ ತತ್ವದ ಮೇರೆಗೆ ಚರಕದಿಂದ ನೂಲು ತೆಗೆಸಲು ಆರಂಭಿಸಿದರು.

೧೯೪೪ರಲ್ಲಿ ಗಂಗಸಂದ್ರಕ್ಕೆ ಭೇಟಿ ನೀಡಿದ ತಕ್ಕರ್ ಭಾಪರವರು 'ಕಸ್ತೂರಾ ಬಾ' ಕೇಂದ್ರದ ಶಂಕು ಸ್ಥಾಪನೆ ಕಾರ್ಯ ನೆರವೇರಿಸಿದರು. ಗೌರಮ್ಮನವರು ಬಾಲವಾಡಿ ಮತ್ತು ಕ್ರಬ್ ಸೆಂಟರ್‌ನ್ನು ಪ್ರಾರಂಭಿಸಿದರು. ಆ ಮೂಲಕ ಕೃಷಿ ಕಾರ್ಮಿಕರ ಮಕ್ಕಳ ಹಾರೈಕೆಯನ್ನು ಮಾಡುತ್ತಿದ್ದರು. ಜಾತಿ ವ್ಯವಸ್ಥೆ ಕಠಿಣವಾದ ಸಂದರ್ಭದಲ್ಲಿ ಗೌರಮ್ಮನವರ ಕಾರ್ಯ ನಿಜಕ್ಕೂ ಶ್ಲಾಘನಿಯವೇ ಸರಿ. ಇಂದಿನ ಬೇಬಿ ಸಿಟ್ಟಿಂಗ್ ಸೆಂಟರ್ ಅನ್ನು ಹೋಲುವ **'ಬಾಲವಾಡಿ'**ಯ ಸ್ಥಾಪನೆಯಿಂದ ಸಹಸ್ರಾರು ಜನರಿಗೆ ಸಹಾಯವಾಯಿತು. ಇದರಿಂದ ಗೌರಮ್ಮನವರ ನಿಸ್ವಾರ್ಥ ಸೇವಾ ಮನೋಭಾವವೆಂಥದೆಂಬುದು ತಿಳಿಯುತ್ತದೆ.

ಗೌರಮ್ಮನವರು ೧೯೪೪ರಲ್ಲಿ **'ನವಭಾರತ ಮಹಿಳಾ ಸಮಾಜ'**ವನ್ನು ಸ್ಥಾಪಿಸಿ ಅದರ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ೧೯೬೦-೬೧ ರಲ್ಲಿ ದೀನ ದಲಿತರ ಹೆಣ್ಣು ಮಕ್ಕಳಿಗಾಗಿ ಕಂಡೆನ್ಸ್ ಕೋರ್ಸ್ ಶಾಲೆಯನ್ನು ಪ್ರಾರಂಭಿಸಿದರು. ಇವರ ಸೇವೆಯನ್ನು ಪ್ರಶಂಸಿಸಿ ೧೯೬೨ರಲ್ಲಿ ಘನ ಮೈಸೂರು ಸರ್ಕಾರವು ಬೆಳ್ಳಿ ಪದಕವನ್ನು ನೀಡಿ ಗೌರವಿಸಿದೆ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮದರಾಸಿನಲ್ಲಿ ಗಾಂಧೀಜಿಯವರ ದರ್ಶನ ಪಡೆದು ತಮ್ಮ ಸ್ವಗ್ರಾಮವಾದ ಗಂಗಸಂದ್ರದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಪಣತೊಟ್ಟು ಹರಿಜನರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಟ್ಟರು. ಜೊತೆಗೆ ಹರಿಜನ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಇಂದಿಗೂ ವಿದ್ಯಾರ್ಥಿನಿಲಯವು ಸೇವೆ ಸಲ್ಲಿಸುತ್ತಲಿದೆ.

೧೯೮೪-೮೫ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಇವರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸೇವೆಯನ್ನು ಪ್ರಶಂಸಿಸಿ ಇವರಿಗೆ **"ಉತ್ತಮ ಸಮಾಜ ಸೇವಕಿ"** ಎಂಬ ಪ್ರಶಸ್ತಿ ನೀಡಿದೆ. ಹೀಗೆ ಸಾದರಲ್ಲಿನ ಸಾರ್ಥಕ ಬದುಕಿನ ಸಾದಕಿಯರಲ್ಲಿ ಗಂಗಸಂದ್ರದ ಗೌರಮ್ಮರವರು ಪ್ರಮುಖ ಪಾತ್ರ ವಹಿಸುತ್ತಾರೆ.

ಎಂ.ಎಸ್.ಮಲ್ಲಯ್ಯ:-

ಸಾದರ ಅಭಿವೃದ್ದಿಗಾಗಿ ಹಗಲಿರುಳು ಶ್ರಮಿಸಿದವರಲ್ಲಿ ಎಂ.ಎಸ್.ಮಲ್ಲಯ್ಯರವರು ಪ್ರಮುಖರು. ಇವರು ಕಡುಬಡತನದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಸರ್ಕಾರಿ ನೌಕರಿಯನ್ನು ಪಡೆದರು. ತಮ್ಮ ಗುರಿಸಾಧನೆಗಾಗಿ ತಾನು ಅನುಭವಿಸಿದ ನೋವು-ಯಾತನೆಯನ್ನು ಮುಂದಿನ ಬಡ ವಿದ್ಯಾರ್ಥಿಸಮುದಾಯ ಅನುಭವಿಸಬಾರದೆಂದು, ಅವರಿಗೆ ತಮ್ಮ ಶಕ್ತಿಮೀರಿ ಎಲ್ಲ ಸವಲತ್ತುಗಳನ್ನು ಒದಗಿಸಲು ಸಾಕಷ್ಟು ಶ್ರಮಿಸಿದರು.

ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗಾಗಿ ಒಂದು ಹಾಸ್ಟೆಲನ್ನು (ವಿದ್ಯಾರ್ಥಿನಿಲಯ) ನಿರ್ಮಿಸಲು ಸತತ ಹೋರಾಟ ನಡೆಸಿದರು. ಅಲ್ಪಸಂಖ್ಯಾತರಾಗಿರುವ ಸಾದರನ್ನು ಭೇಟಿಮಾಡಿ ಅವರಿಂದ ವಂತಿಗೆಯನ್ನು ಸಂಗ್ರಹಿಸಿ ವಿದ್ಯಾರ್ಥಿನಿಲಯ ನಿರ್ಮಿಸುವಲ್ಲಿ

ಯಶಸ್ವಿಯಾದರು. ಸಾದರ ಮೊದಲ ಜನಗಣತಿಯನ್ನು ಮಾಡುವ ಹಂಬಲ ಹೊಂದಿದ್ದವರು, ಮಲ್ಲಯ್ಯನವರು ´ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ನಿಸ್ವಾರ್ಥಸೇವಾಮನೋಭಾವವುಳ್ಳ ಕರ್ಮಯೋಗಿಯಂತೆ, ಛಲಬಿಡದ ತ್ರಿವಿಕ್ರಮನಂತೆ ತಮ್ಮ ಅಭೀಷ್ಟೇ ನೆರವೇರುವವರೆಗೂ ಸಮಾಜದ ಏಳಿಗೆಗಾಗಿ ಅನವರತ ದುಡಿದವರು.

ಇವರ ಶ್ರಮದ ಫಲವಾಗಿ ಇಂದು ಸಹಸ್ರಾರು ವಿದ್ಯಾರ್ಥಿಗಳು ವಿದ್ಯೆ ಕಲಿತು ತಮ್ಮ ಬದುಕನ್ನು ಹಸನುಗೊಳಿಸಿಕೊಳ್ಳಲು ನೆರವಾಯಿತು.

ಮುಖ್ಯಮಂತ್ರಿ ಚಂದ್ರು:-

ಸಾದರ ಮತ್ತೊರ್ವ ಪ್ರಮುಖ ಸಾಧಕರೆಂದರೆ, 'ಚಂದ್ರುರವರು'. ಇವರು ಕಲಾವಿದರಾಗಿ, ರಾಜಕಾರಣಿಯಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನಮ್ಮ ನಾಡು, ನುಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ತಮ್ಮ ಅಭಿನಯದ ಮೂಲಕ ಎಲ್ಲ ಸಹೃದಯರ ಮನಸೂರೆಗೊಳಿಸಿ, 'ಮುಖ್ಯಮಂತ್ರಿ ಚಂದ್ರು' ಎಂಬ ಅಭಿದಾನಕ್ಕೆ ಪಾತ್ರರಾಗಿದ್ದಾರೆ. ೨೮ ಆಗಸ್ಟ್ ೧೯೫೩ರಲ್ಲಿ ಜನಿಸಿದ ಇವರು ಕನ್ನಡ ಚಲನಚಿತ್ರಕ್ಷೇತ್ರದಲ್ಲಿ ಹಾಸ್ಯಕಲಾವಿದರಾಗಿ ಅಭಿನಯಿಸುವುದರೊಂದಿಗೆ, ಗಂಭೀರಪಾತ್ರಗಳಲ್ಲಿಯೂ ಅಷ್ಟೇ ಮನೋಜ್ಞವಾಗಿ ಅಭಿನಯಿಸಿ ಅಭಿನಯಶಾರದೆಯ ಮನಸೂರೆಗೊಳಿಸುವುದರೊಂದಿಗೆ ನಾಡಿನ ಜನತೆಯ ಮನಗೆಲ್ಲುವಲ್ಲಿಯೂ ಯಶಸ್ವಿಯಾಗಿದ್ದಾರೆ.

ಇವರು ೧೯೮೩ರಲ್ಲಿ **ಚಕ್ರವ್ಯೂಹ** ಚಲನಚಿತ್ರದಲ್ಲಿ ನಟಿಸುವುದರೊಂದಿಗೆ ಚಲನಚಿತ್ರಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿದರು. ಅಂದಿನಿಂದ ಇಂದಿನವರೆಗೂ ನಿರಂತರ ಕಾರ್ಯಪ್ರವೃತ್ತರಾಗಿರುವ ಇವರು ಸುಮಾರು ೪೫೦ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿ ಆ ಮೂಲಕ ಅತಿಹೆಚ್ಚು ಚಲನಚಿತ್ರದಲ್ಲಿ ಅಭಿನಿಯಿಸಿ ಯಶಸ್ವಿಯಾದ ಕಲಾವಿದರೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಸಾದರ ಹೆಮ್ಮೆಯ ವರಪುತ್ರರೆನಿಸಿದ ಚಂದ್ರುರವರು ಅಭಿನಯಿಸಿದ ಕೆಲವು ಪ್ರಮುಖ ಚಲನಚಿತ್ರಗಳನ್ನು ಗಮನಿಸುವುದಾದರೆ 'ಮುದುಡಿದ ತಾವರೆ ಅರಳಿತು', 'ನಾನು ನನ್ನ ಹೆಂಡ್ತೀರು', 'ಜ್ವಾಲಾಮುಖಿ', 'ಗುರಿ', 'ಎಸ್.ಪಿ.ಸಾಂಗ್ಲಿಯಾನ ಪಾರ್ಟ್-೧', 'ಅಂಜದ ಗಂಡು', 'ಒಂದಾಗಿ ಬಾಳು', 'ನೀನು ನಕ್ಕರೆ ಹಾಲು ಸಕ್ಕರೆ', 'ಪೋಲೀಸನ ಹೆಂಡ್ತಿ', 'ಗೋಲ್‌ಮಾಲ್ ರಾಧಾಕೃಷ್ಣ', 'ಗಣೇಶನ ಮದುವೆ', 'ಇಬ್ಬರು ಹೆಂಡಿರ ಮುದ್ದಿನ ಪೋಲೀಸ್', 'ರೆಡಿಮೇಡ್ ಗಂಡ', 'ಗೃಹಪ್ರವೇಶ', 'ಗೋಪಿಕೃಷ್ಣ', 'ಗಣೇಶ ಸುಬ್ರಮಣ್ಯ', 'ಮಾಮಾಶ್ರೀ ಮಾಲಾಶ್ರೀ', 'ಒಂದು ಸಿನಿಮಾ ಕತೆ', 'ಲಕ್ಷ್ಮೀ ಮಹಾಲಕ್ಷ್ಮೀ', 'ಯಾರಿಗೂ ಹೇಳ್ಬೇಡಿ', 'ಸಿಪಾಯಿ', 'ಸೂರ್ಯವಂಶ', 'ಗಲಾಟೆ ಅಳಿಯಂದ್ರು', 'ಸಿಂಹಾದ್ರಿಯ ಸಿಂಹ', 'ಪಾಂಡುರಂಗ ವಿಠಲ', 'ಮಿಲನ', 'ಗೋವಿಂದಾಯ ನಮಃ', ಹೀಗೆ ಸುಮಾರು ೪೫೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿ ಕನ್ನಡಿಗರ ಜನಮಾನಸದಲ್ಲಿ ನೆಲೆಯಾಗಿ ನಿಂತಿದ್ದಾರೆ.

ಇವರು ಕಲಾಕ್ಷೇತ್ರದಲ್ಲಷ್ಟೇ ಅಲ್ಲದೆ ರಾಜಕೀಯ ಕ್ಷೇತ್ರದಲ್ಲಿಯು ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ರಾಮಕೃಷ್ಣಹೆಗ್ಗಡೆಯವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ (೧೯೮೫) ಗೌರಿಬಿದನೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು.

ತದನಂತರ ೧೯೮೯ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸಿದರು. ನಂತರ ಇವರು ಜನತಾದಳವನ್ನು ಬಿಟ್ಟು ಭಾರತೀಯ ಜನತಾಪಾರ್ಟಿಯನ್ನು ೧೯೯೪ ರಲ್ಲಿ ಸೇರಿದರು. ಪಕ್ಷವು ೧೯೯೮ರಲ್ಲಿ ಇವರನ್ನು ಒ.ಐ.ಅ., ಯಾಗಿ ಆಯ್ಕೆಮಾಡಿತು. ೨೦೧೨-೨೦೧೩ ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಕನ್ನಡ ಭಾಷಾಭಿವೃದ್ದಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾಡು-ನುಡಿಯ ಅಭಿವೃದ್ದಿಗೆ ಶ್ರಮಿಸುತ್ತಾ ಆ ಮೂಲಕ ಸಾದರ ಅಭಿವೃದ್ದಿಗೂ, ಏಳಿಗೆಗೂ ನಾಂದಿಹಾಡಿದ್ದಾರೆ. ಒಟ್ಟಾರೆ ಸಾದರ ಪ್ರಮುಖ ಸಾಧರಕರಲ್ಲಿ ಚಂದ್ರುರವರು ಚಿರಸ್ಮರಣೀಯರಾಗಿದ್ದಾರೆ.

ಅಡಿಟಿಪ್ಪಣಿಗಳು

೧. ಡಾ.ಸಿ.ಎಸ್.ದ್ವಾರಕಾನಾಥ್–"ಹಿಂದುಳಿದ ಜಾತಿ ಪಟ್ಟಿ; ಹೊಸ ಸೇರ್ಪಡೆಯ ಗೊಂದಲ"–ಪ್ರಜಾವಾಣಿ (ದಿನಪತ್ರಿಕೆ)–ಅಭಿಮತ ಲೇಖನ, ದಿನಾಂಕ: ೨೬–೦೬–೨೦೦೯.

ಅಧ್ಯಾಯ-೯

ಉಪಸಂಹಾರ

ಅಧ್ಯಾಯ-೯

ಉಪಸಂಹಾರ

ಭಾರತದಲ್ಲಿ ವಾಸಿಸುತ್ತಿರುವ ಹಲವು ಜಾತಿಗಳಲ್ಲಿ ಸಾದರ ಜಾತಿಯು ಒಂದಾಗಿದೆ. ಮುಂದುವರೆದ ಜಾತಿಯು ಅಲ್ಲದ, ಬುಡಕಟ್ಟು ಜಾತಿಯು ಅಲ್ಲದೆ, ತೀರಾ ಹಿಂದುಳಿದ ಸ್ಥಿತಿಯಲ್ಲಿಯೂ ಇರದೆ, ಮಧ್ಯಂತರ ಪರಿಸ್ಥಿತಿಯಲ್ಲಿರುವ ಅಭಿವೃದ್ಧಿಶೀಲ, ಅಲ್ಪಸಂಖ್ಯಾತ ಜಾತಿಯಾಗಿದೆ. ನಾಡಿನ ಪ್ರತಿಯೊಂದು ಜಾತಿಯು ತನ್ನ ಪ್ರತ್ಯೇಕ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುವ ಹಾಗೆ ಸಾದರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರಾಗಿದ್ದಾರೆ. ಡಾ.ಸಿ.ಎಸ್.ದ್ವಾರಕಾನಾಥ್, ವೈಷ್ಣವ ಗುಂಪಿನ ಗುರು ತಾತಾಚಾರ್ಯ, ನದಿಹರಳಹಳ್ಳಿ ಮತ್ತಿತರ ಶಾಸನಗಳ ಪ್ರಕಾರ ಹಿಂದೂ ಸಾದರು ಜೈನ ಮೂಲದಿಂದ ಬಂದಿದ್ದಾರೆಂಬುದು ತಿಳಿದುಬರುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ಸಾದರು ಜಾತಿಯ ಅಧ್ಯಯನದ ಉದ್ದೇಶ-ವ್ಯಾಪ್ತಿ, ಮೂಲ, ಜೀವನ ವಿಧಾನ, ಆಚರಣೆ ಮತ್ತು ಸಂಪ್ರದಾಯಗಳು, ಭಾಷೆ ಮತ್ತು ಸಾಹಿತ್ಯ, ವೈದ್ಯ ಪದ್ಧತಿ, ಜನಪದ ಕಲೆಗಳು, ಬದಲಾಗುತ್ತಿರುವ ಪರಿಸರದಲ್ಲಿ ಸಾದರನ್ನು ಕುರಿತು ಜೀವನದ ಪ್ರತಿಯೊಂದು ಹಂತಗಳನ್ನು ಕೂಲಂಕುಷವಾಗಿ ವಿವರಿಸಲಾಗಿದೆ.

ಸಾದರನ್ನು ಕುರಿತು ಈವರೆಗೂ ನಡೆದಿರುವ ಪರಿಚಯಾತ್ಮಕ ವಿವರಗಳನ್ನು ಗಮನದಲ್ಲಿರಿಸಿಕೊಂಡು ಜೊತೆಗೆ ದಕ್ಷಿಣ ಕರ್ನಾಟಕದಾದ್ಯಂತ ಅಲ್ಲಲ್ಲಿ (ಸಾದರು ವಾಸಿಸುವಲ್ಲಿ) ಕ್ಷೇತ್ರಕಾರ್ಯ ಕೈಗೊಂಡು, ಹಿರಿಯ-ಕಿರಿಯ ವಕ್ತೃಗಳನ್ನು, ಸಾದರನ್ನು ಬಲ್ಲ ಇತರೆ ಜಾತಿಯ ಹಿರಿಯ ವಕ್ತೃಗಳನ್ನು ಸಂಪರ್ಕಿಸಿ, ಸಂದರ್ಶಿಸಿ ಅವರಿಂದ ಸಂಗ್ರಹಿಸಿ ತಂದ ಸಾದರ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ವಿವರಿಸಲಾಗಿದೆ. ಕೃಷಿಯನ್ನೇ ತಮ್ಮ ಪ್ರಮುಖ ಕಸುಬನ್ನಾಗಿಸಿಕೊಂಡಿರುವ ಸಾದರು ದಕ್ಷಿಣ ಕರ್ನಾಟಕದ ಕೆಲಭಾಗಗಳಲ್ಲಿ ಮತ್ತು ಆಂಧ್ರಪ್ರದೇಶ, ತಮಿಳುನಾಡಿನ ಗಡಿಭಾಗಗಳಲ್ಲಿ ವಾಸವಾಗಿದ್ದು, ಇವರು ಅಲ್ಪಸಂಖ್ಯಾರತೆನ್ನುವುದು ನಿರ್ವಿವಾದ.

ಹಿಂದೂ ಸಾದರು, ಜೈನ ಸಾದರು, ಸಾದರ ಲಿಂಗಾಯತರು, ಬೆಳ್ಳಿ ಸಾದರು, ಹೂವ್ವಿನವರು, ಹೊಂಗೆಯವರು, ನೀರಗಂಟಿಯವರನ್ನು ಕುರಿತು ತೌಲನಿಕ ಅಧ್ಯಯನ ಮಾಡಲಾಗಿದೆ. ಜೈನಧರ್ಮದಿಂದ ಪ್ರಭಾವಿತರಾದ ಜೈನ ಸಾದರು, ವೀರಶೈವ ಧರ್ಮದಿಂದ ಪ್ರಭಾವಿತರಾದ ಸಾದರು ಲಿಂಗಾಯತರು, ಮತ್ತು ಈ ಯಾವ ಧರ್ಮದಿಂದಲೂ ಪ್ರಭಾವಿತರಾಗದೇ ತಮ್ಮ ಮೂಲ ಧರ್ಮವಾದ ಹಿಂದೂ ಧರ್ಮದಲ್ಲೇ ನಂಬಿಕೆಯನ್ನಿಟ್ಟುಕೊಂಡುಬಂದ ಹಿಂದೂ ಸಾದರ ಸಂಸ್ಕೃತಿಯನ್ನು ಕುರಿತು ಸ್ಪಷ್ಟವಾದ ಚಿತ್ರಣವನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಇದರ ಜೊತೆಗೆ ಒಂದು ಜನಪದ ವೃಂದಕ್ಕಿಂತ ಮತ್ತೊಂದು ಜನಪದ ವೃಂದ ಹೇಗೆ ಭಿನ್ನವಾಗಿದೆ, ಅವುಗಳಿಗಿರುವ ವ್ಯತ್ಯಾಸ ಹಾಗೂ ಆಯಾ ಜನರ ಮೂಲವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಸಾದರ ಲಿಂಗಾಯತರು , ಜೈನ ಸಾದರು, ಹಿಂದೂ ಸಾದರಲ್ಲಿ ಇತ್ತೀಚಿನವರೆಗೂ ಹೆಣ್ಣು ಕೊಟ್ಟು ತರುವ ಸಂಬಂಧವಿದ್ದಿರಲಿಲ್ಲ. ಈಗೀಗ ಈ ಮೂರು ಗುಂಪುಗಳ ಅಥವಾ ಪಂಗಡಗಳ

ನಡುವೆ ಈ ಸಂಪ್ರದಾಯ ಹಿಂದೆ ಸರಿದು ಒಳಪಂಗಡಗಳಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿರುವ ವಿಚಾರವನ್ನು ಗುರುತಿಸಲಾಗಿದೆ. ಸಾದರ ಜನಜೀವನ ಮತ್ತು ಅವರ ಪರಂಪರೆಯ ಹಿನ್ನೆಲೆಯಲ್ಲಿ ಇಡೀ ಸಮಾಜ; ಸಂಸ್ಕೃತಿಯ ಚಿತ್ರಣವನ್ನು ಕೊಡಲಾಗಿದೆ. ಸಾದರ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಅವಲೋಕಿಸುತ್ತ ಇವರು ತಮ್ಮದೇ ಆದ ಒಂದು ವ್ಯವಸ್ಥಿತ ಬದುಕನ್ನು ರೂಪಿಸಿಕೊಂಡು, ರೂಢಿಸಿಕೊಂಡಿರುವದನ್ನು ಕುರಿತು ಚರ್ಚಿಸಲಾಗಿದೆ.

ಸಾದರ ಕುಟುಂಬ ವ್ಯವಸ್ಥೆಯನ್ನು ಕುರಿತು ಚರ್ಚಿಸುತ್ತಾ ಅವಿಭಕ್ತ ಕುಟುಂಬ ಪದ್ಧತಿಯು ಕೃಷಿಕಾರ್ಯಕ್ಕೆ ನೆರವಾಗುತ್ತಿದ್ದ ಬಗೆಯನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಹಾಗೆಯೇ ಬದಲಾದ ಪರಿಸ್ಥಿಯಲ್ಲಿನ ವಿಭಕ್ತ ಕುಟುಂಬ ಪದ್ಧತಿಯ ಬಗೆಗೂ ಅವಲೋಕಿಸಲಾಗಿದೆ.

ಸಾದರ ಆಹಾರ ಪದ್ಧತಿಯನ್ನು ಕುರಿತು ಅವಲೋಕಿಸುತ್ತಾ ಜೈನ ಧರ್ಮದ ಪ್ರಭಾವ ಮತ್ತು ಹಿನ್ನೆಲೆಯಿಂದ ಬಂದ ಕಾರಣದಿಂದ ಸಾದರು ಶುದ್ಧ ಸಸ್ಯಾಹಾರಿಗಳಾಗಿದ್ದಾರೆಂಬ ಅಂಶವನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ಇವರು ಉಡುಗೆ-ತೊಡುಗೆಗೆ ಸಂಬಂಧಿಸಿದ ವಿಚಾರಗಳನ್ನು ಗಮನಿಸಲಾಗಿದೆ, ಬಹು ಹಿಂದಿನಿಂದಲೂ ಸಾದರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿ ಆಯ್ಕೆಮಾಡಿಕೊಂಡ ಹಿನ್ನೆಲೆಯಲ್ಲಿ ಅವರಿಗೆ ಕೃಷಿ ಹಾಗೂ ಹೈನುಗಾರಿಕೆಯ ಮೇಲೆ ಅಪಾರ ಅಭಿಮಾನವಿದ್ದಿತೆಂಬ ವಿಚಾರವನ್ನು ಸೋದಾಹರಣವಾಗಿ ವಿವರಿಸಲಾಗಿದೆ.

ರಾಜಕೀಯ ಕ್ಷೇತ್ರದ ಬಗೆಗಿನ ಸಾದರ ಅರಿವು ಮತ್ತು ಅವರಿಗಿರುವ ಸ್ಥಾನ-ಮಾನವನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಸಾದರಲ್ಲಿನ ಪ್ರಮುಖವಾಗಿ ಕಾಕಿ ಕಟ್ಟೆಮನೆ, ಬ್ಯಾಡಗೆರೆ ಕಟ್ಟೆಮನೆ ಎಂಬ ಎರಡು ಪ್ರಮುಖ ನ್ಯಾಯಕಟ್ಟೆಗಳಿದ್ದು, ಅವು ತಮ್ಮ ಜನರಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಹೇಗೆ ಪರಿಹಾರವನ್ನು ಸೂಚಿಸುತ್ತವೆ ಎಂಬುದನ್ನು ಕುರಿತಂತೆ ಮತ್ತು ಅಪರಾಧಿಯನ್ನು ಶಿಕ್ಷಿಸಿ, ನಿರಾಪರಾಧಿಯನ್ನು ರಕ್ಷಿಸುವ, ಜನತೆಗೆ ಸಾಮಾಜಿಕ ನ್ಯಾಯ, ಭದ್ರತೆಯನ್ನು ಒದಗಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದವು ಎಂಬುದನ್ನು ಚರ್ಚಿಸಲಾಗಿದೆ.

ಸಾದರು ಶೈಕ್ಷಣಿಕವಾಗಿ ಅಭಿವೃದ್ಧಿಯ ಪಥದೆಡೆಗೆ ಹೆಜ್ಜೆಹಾಕುತ್ತಿರುವುದನ್ನು ಗುರುತಿಸಲಾಗಿದೆ. ಜೊತೆಗೆ ಸಾದರ ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಅವಲೋಕಿಸಿದರೆ ಸಾದರು ಶಿವ, ವಿಷ್ಣುವನ್ನು ಸೇರಿದಂತೆ ಎಲ್ಲ ದೇವರು-ದೇವತೆಗಳನ್ನು ಪೂಜಿಸುತ್ತಿದ್ದು, ಆ ಕುರಿತು ಇವರಲ್ಲಿರುವ ಹಲವು ವಿಧಿ-ನಿಷೇಧಗಳನ್ನು ವಿವರವಾಗಿ ಪರಿಶೀಲಿಸಿಲಾಗಿದೆ. ರೂಢಿ-ಸಂಪ್ರದಾಯಗಳನ್ನು ಕುರಿತು ಚರ್ಚಿಸುತ್ತಾ ವಂಶಪಾರಂಪರ್ಯವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದು ಈಗ ಅಲ್ಪಸ್ವಲ್ಪ ಕಣ್ಮರೆಯಾಗುತ್ತಿರುವ ಆಚರಣೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಅನೇಕ ಅಂಶಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಸಾದರ ಹುಟ್ಟಿನಿಂದ ಸಾವಿನವರೆಗೆ ರೂಢಿಸಿಕೊಂಡು ಬಂದಿರುವ ಆಚರಣೆ ಮತ್ತು ಸಂಪ್ರದಾಯಗಳು ಅವುಗಳ ವೈವಿದ್ಯ, ವೈಶಿಷ್ಟ್ಯ, ಅನನ್ಯತೆಯನ್ನು ವಿವೇಚಿಸಲಾಗಿದೆ. ಈ ಹಿನ್ನೆಲೆಯಲ್ಲಿ

ಜನನ ಸಂಬಂಧಿ ಆಚರಣೆಗಳಲ್ಲಿ ಕಂಡು ಬರುವ ಕೆಲವು ವೈಶಿಷ್ಟ್ಯಪೂರ್ಣ ಆಚರಣೆಗಳು ಮತ್ತು ಅವುಗಳ ಔಚಿತ್ಯವನ್ನು ಗುರುತಿಸಲಾಗಿದೆ.

ವಿವಾಹ ಸಂಬಂಧಿ ಆಚರಣೆಗಳು ಅವುಗಳ ವೈಶಿಷ್ಟ್ಯತೆ, ವಿವಾಹವು ಸಾಮಾಜಿಕ ಭದ್ರತೆಯನ್ನು ಒದಗಿಸುವ ಪರಿಯನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳನ್ನು ಕುರಿತು ವಿವರವಾದ ಮಾಹಿತಿಯನ್ನು ಕಲೆ ಹಾಕಲಾಗಿದೆ. ಮರಣ ಸಂಬಂದಿ ಆಚರಣೆಗಳನ್ನು ಕುರಿತಂತೆ ವಿವರವಾದ ವಿವೇಚನೆಗೆ ಗುರಿಪಡಿಸಿ ಸಾದರಲ್ಲಿ ಅತೃಪ್ತ ಜೀವಗಳು ಪ್ರೇತಗಳಾಗಿ ಕಾಡುತ್ತವೆಂಬ ಭಯವಿದ್ದು, ಇವರಲ್ಲಿ ಪುನರ್ಜನ್ಮ ಬಗೆಗೆ ಯಾವುದೇ ನಂಬಿಕೆ ಇಲ್ಲವೆಂಬುದನ್ನು ಗುರುತಿಸಲಾಗಿದ್ದು, ಮರಣ ಹೊಂದಿದ ವ್ಯಕ್ತಿಯನ್ನು ಸಕಲ-ಗೌರವಗಳೊಂದಿಗೆ ಅಂತ್ಯಸಂಸ್ಕಾರ ಮಾಡುವಲ್ಲಿ ಅನುಸರಿಸುವ ಹಲವು ಆಚರಣೆಗಳು ಜಾರಿಯಲ್ಲಿರುವುದನ್ನು ವಿವೇಚಿಸಲಾಗಿದೆ.

ಇನ್ನು ಸ್ತ್ರೀ ಸಂಬಂಧಿ ಅಚರಣೆಗಳಿಗೆ ಸಂಬಂಧಿಸಿದಂತೆ ಋತುಮತಿಯ ಆಚರಣೆಗಳು, ಬಸುರಿ, ಬಾಣಂತಿಯಾದ ಸಂದರ್ಭದಲ್ಲಿ ಆಚರಿಸಲ್ಪಡುವ ಎಲ್ಲಾ ಆಚರಣೆಗಳನ್ನು ವಿವರಿಸಲಾಗಿದೆ. ಜೊತೆಗೆ ಇವರಲ್ಲಿರುವ ಹಲವು ನಂಬಿಕೆಗಳು, ಅವುಗಳಲ್ಲಿರುವ ವೈಜ್ಞಾನಿಕ ಸತ್ಯ, ವೈಚಾರಿಕ ಸತ್ವ, ಮೂಢನಂಬಿಕೆಗಳನ್ನು ಕುರಿತು ಚರ್ಚಿಸಲಾಗಿದೆ.

ಸಾದರು ಕನ್ನಡವನ್ನೇ ತಮ್ಮ ಮಾತೃಭಾಷೆಯನ್ನಾಗಿ ಹೊಂದಿದ್ದು ತಮಿಳು, ತೆಲುಗು ಭಾಷೆಯನ್ನು ಬಲ್ಲವರಾಗಿದ್ದಾರೆ. ಸಾಹಿತ್ಯವನ್ನು ಕುರಿತು ಚರ್ಚಿಸುತ್ತಾ, ಜನಪದ ಸಾಹಿತ್ಯದಲ್ಲಿ ಸಂಪ್ರದಾಯದ ಹಾಡುಗಳು, ಗಾದೆಗಳು, ಒಗಟುಗಳು, ಕಥೆಗಳು ಹಾಗೂ ಸಾದರಲ್ಲಿನ ಶಿಷ್ಟಸಾಹಿತ್ಯವನ್ನು ಗುರುತಿಸಲಾಗಿದೆ.

ಸಾದರಲ್ಲಿನ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಜನವೈದ್ಯ, ಪಶು ವೈದ್ಯ, ಕೃಷಿ ವೈದ್ಯ, ರೇಕಿ ಚಿಕಿತ್ಸಾ ವಿಧಾನವನ್ನು ಕುರಿತು ಮಾಹಿತಿಯನ್ನು ಕಲೆಹಾಕಲಾಗಿದೆ. ಜೊತೆಗೆ ಮಾಟ-ಮಂತ್ರದ ಬಗೆಗೆ ಇವರಲ್ಲಿರುವ ನಂಬಿಕೆಗಳನ್ನು ಕುರಿತು ಚರ್ಚಿಸಲಾಗಿದೆ.

ಎಲ್ಲ ಕಲೆಗಳಿಗೂ ಮೂಲ ಜನಪದ ಕಲೆ, ಇದು ಇಂದಿಗೂ ತನ್ನ ಸೊಗಡನ್ನು ಕಳೆದುಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಜನಪದ ಕಲೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಜೊತೆಗೆ ಬದಲಾಗುತ್ತಿರುವ ಪರಿಸರದಲ್ಲಿ ಸಾದರನ್ನು ಕುರಿತಂತೆ ವಿವೇಚಿಸಲಾಗಿದೆ. ಹಾಗೆಯೇ 'ಕೆಟ್ಟು ಪಟ್ಟಣಸೇರು' ಎಂಬ ನಾಣ್ನುಡಿಯಂತೆ ಸಾದರು ಬಹು ನಿಧಾನವಾಗಿಯಾದರೂ ದೊರೆತ ಅವಕಾಶಗಳನ್ನು ಬಳಸಿಕೊಂಡು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಪರಿಣಾಮಕಾರಿ ರೀತಿಯಲ್ಲಿ ಪರಿವರ್ತನೆಯ ನೆಲೆಯಲ್ಲಿದ್ದಾರೆಂಬುದನ್ನು ಗ್ರಹಿಸಲಾಗಿದೆ. ಬಹುಪಾಲು ಕ್ಷೇತ್ರಕಾರ್ಯದ ಮೇಲೆಯೇ ಈ ಮಹಾಪ್ರಬಂಧದ ಅಧ್ಯಯನ ಅವಲಂಬಿತವಾಗಿರುವುದರಿಂದ, ವಕ್ತೃಗಳಿಂದ ಅಪಾರ ಸಹಾಯ ಪಡೆಯಲಾಗಿದೆ. ವಕ್ತೃಗಳ ಸಹಾಯ-ಸಹಕಾರದಿಂದಲೇ ಈ ಮಹಾಪ್ರಬಂಧ ರೂಪುಗೊಂಡಿದೆ

ಎಂದು ಹೇಳಬೇಕಾಗುತ್ತದೆ. ಆದಕಾರಣ ವಕ್ತೃಗಳ ಪರಿಚಯ ಪಟ್ಟಿಯನ್ನು, ಛಾಯಾಚಿತ್ರಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ. ಜೊತೆಗೆ ಅಧ್ಯಯನಕ್ಕೆ ನೆರವಾದ ಗ್ರಂಥಗಳನ್ನು, ಪತ್ರಿಕೆ-ನಿಯತಕಾಲಿಕೆಗಳ ಪಟ್ಟಿ ಮಾಡಿಲಾಗಿದೆ. ಜನಪದೀಯ ಹಿನ್ನೆಲೆಯಲ್ಲಿ **'ಸಾದರು; ಒಂದು ಸಾಂಸ್ಕೃತಿಕ ಅಧ್ಯಯನ'** ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಒಟ್ಟಾರೆ ಸಾದರ ಸಾಂಸ್ಕೃತಿಕ ಅಧ್ಯಯನದಿಂದ ಈ ಕೆಳಗಿನ ಅಂಶಗಳನ್ನು ಕಂಡುಕೊಳ್ಳಬಹುದಾಗಿದೆ.

೧. 'ಸಾದರು' ಎಂಬ ಪದವು ಅವರ ವೃತ್ತಿ ಆಧಾರದಿಂದ ಬಂದ ಪದವಾಗಿರದೆ, ಜಾತಿಯ ಜನತೆಯ ಗುಣ-ಸ್ವಭಾವಗಳ ಮತ್ತು ಅವರ ಆಚರಣೆ ಮತ್ತು ಸಂಪ್ರದಾಯಗಳ ಹಿನ್ನೆಲೆಯಿಂದ ಬಂದ ಪದವಾಗಿದೆ.

೨. ಸಾದರ ಜಾತಿಯ ಮೇಲೆ ಜೈನಧರ್ಮದ ಹಿನ್ನೆಲೆ ಮತ್ತು ಪ್ರಭಾವವಿರುವುದನ್ನು ಗಮನಿಸಬಹುದು.

೩. ಸಾದರು ಯಾವುದೇ ಒಂದು ನಿರ್ದಿಷ್ಟ ಧರ್ಮಕ್ಕೆ ಕಟ್ಟುಬಿದ್ದವರಲ್ಲ. ಇವರು ಶಿವ, ವಿಷ್ಣು, ಮಹಾವೀರ, ಸೇರಿದಂತೆ ಎಲ್ಲ ದೇವರು ಮತ್ತು ದೇವತೆಗಳನ್ನು ಆರಾಧಿಸುತ್ತಾರೆ.

೪. ಕೃಷಿಯೇ ಇವರ ಪ್ರಧಾನ ಕಸುಬು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳ ಕಡೆಗೆ ಮುಖ ಮಾಡಿದ್ದಾರೆ.

೫. ವಂಶಪಾರಂಪರ್ಯವಾಗಿ ಬಂದಿರುವ ಜನಪದ ವೈದ್ಯ, ನ್ಯಾಯನಿರ್ಣಯಗಳ ಹಿನ್ನೆಲೆಯಲ್ಲಿ ಅವರ ಸಂಸ್ಕೃತಿಯನ್ನು ರಕ್ಷಿಸುವ ಅಗತ್ಯವಿದೆ.

೬. ಮಾದಿಗ ಜಾತಿಯ ಮರುಳಸಿದ್ಧರು ಸಾದರ ಲಿಂಗಾಯತರ ಗುರುಗಳು. ಈ ಹಿನ್ನೆಲೆಯಲ್ಲಿ ಕೆಲವರು ಮರುಳಸಿದ್ಧರನ್ನು 'ಮಾದ್ರುಗ್ ಮಗ, ಸಾದ್ರುಗ್ ಗುರು' ಹೇಗೆಂದು ವಾದಿಸುವುದುಂಟು. ಇದುವೇ ವೀರಶೈವ ಧರ್ಮದ ವಿಶೇಷತೆ ಎಂಬುದನ್ನು ಅರಿಯುವಲ್ಲಿ ವಿಫಲರಾದವರಲ್ಲಿ ಮಾತ್ರವೇ ಉದ್ಭವಿಸುವ ಪ್ರಶ್ನೆ ಇದಾಗಿದೆ. ಏಕೆಂದರೆ ವೀರಶೈವ ಧರ್ಮದಲ್ಲಿ ಜಾತಿಗೆ ಸ್ಥಳವಿಲ್ಲ. ಜಾತಿಯನ್ನು ಬಿಡದೆ ಈ ಧರ್ಮದಲ್ಲಿ ಪ್ರವೇಶ ಸಿಗಲಾರದು ಎಂಬುದು ಗಮನಾರ್ಹ ಸಂಗತಿಯಾಗಿದೆ.

೭. ಹಿಂದೂ ಸಾದರ ವ್ಯಕ್ತಿಯೋರ್ವನು ಸತ್ತರೆ ಮಾದಿಗ ಜಾತಿಯ ಜನರೇ ಬಂದು ಕೂಳು ತಿನ್ನಬೇಕು. ಹಾಗೆ ಕೂಳು ತಿಂದರೆ ಮಾತ್ರ ಸತ್ತ ವ್ಯಕ್ತಿಗೆ ಸದ್ಗತಿ ದೊರೆಯುತ್ತದೆ. ಇದರಿಂದ ಆದಿ ದ್ರಾವಿಡರಾದ ಮಾದಿಗರಿಗೂ ಸಾದರಿಗೂ ಬಾದರಾಯಣ ಸಂಬಂಧವಿರುವುದನ್ನು ಗಮನಿಸಬಹುದು.

೮. ಇತ್ತೀಚಿನ ಸಂದರ್ಭದಲ್ಲಿ ಸಾದರಲ್ಲಿ ಸಂಘಟನೆಯ ಮನೋಭಾವ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ **'ಹಿಂದೂ ಸಾದರ ಕ್ಷೇಮಾಭಿವೃದ್ದಿಸಂಘ'** ಸ್ಥಾಪನೆಗೊಂಡು ಇವರ ಹಿತಾಸಕ್ತಿಗಳಿಗೆ ಸ್ಪಂದಿಸುತ್ತಿದೆ.

೯. ಸಾದರು ತಮ್ಮತನವನ್ನು ಬಿಟ್ಟುಕೊಡದೆ ರೂಢಿ-ಸಂಪ್ರದಾಯ, ಆಚರಣೆಗಳು, ನಂಬಿಕೆಗಳನ್ನು ಚಾಚೂತಪ್ಪದೇ ಪಾಲಿಸುತ್ತಾ ಬಂದು, ಇತರೆ ಗುಂಪುಗಳಿಂದ ತಮ್ಮನ್ನು ತಾವು ಪ್ರತ್ಯೇಕಿಸಿಕೊಳ್ಳುವ ಮತ್ತು ಗುರುತಿಸಿಕೊಳ್ಳುವ ಸಲುವಾಗಿ ಇವರು ತಮ್ಮನ್ನು 'ಹಿಂದೂ ಸಾದರು' ಎಂದು ಕರೆದುಕೊಂಡಿದ್ದಾರೆ.

೧೦. ಹಿಂದೂ ಸಾದರನ್ನು ಕೇಂದ್ರದಲ್ಲಿಟ್ಟುಕೊಂಡು ಪ್ರಬಂಧ ಸಿದ್ಧಪಡಿಸಿರುವುದರಿಂದ ಸಾದರ ಲಿಂಗಾಯತರು, ಜೈನಸಾದರು, ಬೆಳ್ಳಿಸಾದರು, ಹೂವ್ವಿನವರು, ಹೊಂಗೆಯವರನ್ನು ಕುರಿತು ಸಂಶೋಧನೆಯ ಕೊರತೆ ಕಂಡು ಬರುತ್ತದೆ. ಇನ್ನು ಮುಂದೆ ಒಟ್ಟಾರೆ ಎಲ್ಲಾ ಸಾದರ ಗುಂಪುಗಳನ್ನು ಕುರಿತಂತೆ ತೌಲನಿಕ ಅಧ್ಯಯನ ಮಾಡಲು ಅವಕಾಶಗಳಿವೆ.

೧೧. ಸಾದರ ಜಾತಿಯನ್ನು ಕುರಿತು ಕೆಲವು ಲೇಖನಗಳು ಬಂದಿರುವುದು ನಿಜವಾದರೂ, ಸಾದರ ಜಾತಿಗೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಸಮಗ್ರ ಸಂಗತಿಗಳನ್ನು ಕುರಿತು ವಿಸ್ತಾರವಾದ ಅಧ್ಯಯನ ನಡೆದಿಲ್ಲದ ಹಿನ್ನೆಲೆಯಲ್ಲಿ, ಪ್ರಸ್ತುತ ಅಧ್ಯಯನ ಆ ದಿಕ್ಕಿನಲ್ಲಿ ಒಂದು ಪ್ರಮುಖ ಹೆಜ್ಜೆ ಎಂದು ತಿಳಿದಿದ್ದೇನೆ.

ಇದೊಂದು ಸಾಂಸ್ಕೃತಿಕ ಅಧ್ಯಯನವಾಗಿರುವುದರಿಂದ ಮನಃಶಾಸ್ತ್ರ, ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಅವಕಾಶಗಳಿವೆ.

ಸಮಗ್ರವಾಗಿ ಕ್ಷೇತ್ರಕಾರ್ಯಮಾಡಿ ವಿಷಯ ಸಂಗ್ರಹಿಸಿ ಸಂಶೋಧನೆಗೆ ಒಳಪಡಿಸಿದೆ. ಸಾದರ ಮೂಲವನ್ನು ಹೊರತು ಪಡಿಸಿ ಬಹುತೇಕ ಕ್ಷೇತ್ರಕಾರ್ಯದ ಆಧಾರದ ಮೇಲೆಯೇ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಸಾದರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮಗ್ರವೆನ್ನಿಸುವಷ್ಟು ಮಾಹಿತಿಗಳನ್ನು ಒದಗಿಸಲು ಪ್ರಯತ್ನಿಸಲಾಗಿದೆ. 'ಸಾದರನ್ನು' ಕುರಿತಂತೆ ತೌಲನಿಕ ಅಧ್ಯಯನ ಮಾಡುವವರಿಗೆ ಪ್ರಸ್ತುತ ಪ್ರಬಂಧ ಸಹಾಯಕವಾಗಬಲ್ಲದೆಂದು ಭಾವಿಸುತ್ತೇನೆ.

'ಕೊಡದೊಳಗೆಷ್ಟು ನಿಲ್ವುದು ಗಂಗಾಜಲಂ', 'ಕನ್ನಡಿಯೊಳಗದೆಷ್ಟುತೋರ್ಪುದು ವರಕಾಂಚನಾದ್ರಿ' ಎಂಬ ಕವಿವಾಣಿಯಂತೆ ಪ್ರಸ್ತುತ ಅಧ್ಯಯನವು ಹಲವು ಮಿತಿಗಳ ನಡುವೆಯೂ ಸಾದರ ಸಂಸ್ಕೃತಿಯನ್ನು ಸ್ವಲ್ಪ ಮಟ್ಟಿಗಾದರೂ ಪರಿಚಯಮಾಡಿಕೊಡಬಹುದೆಂಬ ನಂಬಿಕೆಯಿದೆ.

[illegible]

ಅನುಬಂಧ–೧

೧. ಗಾದೆಗಳು.

೨. ಒಗಟುಗಳು

೩. ನಂಬಿಕೆಗಳು

೪. ಹಾಡುಗಳು

೫. ಕಥೆಗಳು.

ಗಾದೆಗಳು

೧. 'ಸಾದಿಟ್ಟವನೇ ಸಾದ'.

೨. 'ಸಾದಿನಬೊಟ್ಟು ಹಣೆಯಾಗೆ'

೩. 'ಹಂಚಿಕಡ್ಡಿಯಷ್ಟು ಸಾದಿದರೆ ಕಂಚಿತನಕ ಇಟ್ಟುಕೊಂಡು ಬರಬಲ್ಲ'.

೪. 'ಊರ್‌ಗೊಂದು ಸಾದ್ರುಮನೆ'.

೫. 'ಹರಿವೇ ಬೀಜಕ್ಕೆ ಒಂಭತ್ತು ಎಜ್ಜೆ ಹಾಕೋನು ಸಾದ್ರು'.

೬. 'ಸಾದಣ್ಣ ಉದ್ದಣ್ಣ'.

೭. 'ಸಾದ್ರುಗ್ ಕುಲ ಇಲ್ಲ, ಮ್ಯಾದರೀಗ್ ಕದ ಇಲ್ಲ'.

೮. 'ಗೌಡ ಗದ್ದೆಗೆ, ಗೌಡ್ತಿ ಮುದ್ದೆಗೆ'.

೯. 'ಕಟ್ಟೆಕಲ್ಲನ್ನು ಕಟ್ಟೆಗೆ ಸೇರ್‌ಸು'.

೧೦. 'ಗೌಡಾ ಅಂದ್ರೆ ಓ ಅಂದ ಇಬ್ರಾಳಿಗೆ ಊಟ ಅಂದ್ರೆ ಸಲ್ಲೆ ಇಲ್ಲ'.

೧೧. 'ಸಾದ್ರು ಹೆಚ್ಚಿದ್ ಊರು ಹಾಳು, ಏಡಿ ಹೆಚ್ಚಿದ ಕೆರೆ ಹಾಳು'.

೧೨. 'ಸಾದ್ರು ಒಪ್ಪೊತ್ತಿಗೆ ಇದ್ರೆ ಒಲೆ ಕಿತ್ತಾಕ್ತಾರೆ'.

೧೩. 'ಸಾದ ಆದೋನ್ನ ಕೇದ'.

೧೪. 'ಸಾದ್ರುಗ್ ಗುರು, ಮಾದ್ರುಗ್ ಮಗ'.

೧೫. 'ಜಾಲಿ ಕಾಲಿಗ್ ಮೂಲ, ಸಾದ ಆದೋನ್ಗೆ ಮೂಲ'.

೧೬. 'ಹೊಟ್ಟೆತುಂಬ ಇಟ್ಟು, ಬಾಯಿತುಂಬ ಪ್ರಸಾದ.'

೧೭. 'ಗೂಳೂರು ಗಟ್ಟಿ ಏಳೂರು ಅನ್ನಕೆಡಿಸ್ತು'.

೧೮. 'ಸಸಲ್ ಆಡಿ ಕೊರವನ್ ತಲೆಗ್ ತನ್ತು'.

೧೯. 'ಕಾಟ್‌ನಾಯ್ಕನ್ ಮನೆಗೆ ಕನ್ನಹಾಕಿದ್ರೆ, ನ್ಯಾತಾಡವ್ ಎಲ್ಡ್ ಇಭೂತಿಗಟ್ಟಿ'.

೨೦. 'ನಮ್ಮೊರು ನಮ್ಗೆ ಮೂಲ, ಕುಂಟೆತ್ತು ಹೊಲಕ್ ಮೂಲ'.

ಒಗಟುಗಳು:

೧. ಅಕ್ಕ-ಪಕ್ಕದಲ್ಲೇ ಇದ್ರೂ ಒಬ್ಬರನ್ನೊಬ್ಬರು ನೋಡೋಕಾಗಲ್ಲ-ಕಣ್ಣು.

೨. ಒಂದು ಹೋಳಿಗೆ ನೂರಾಳು-ವಿಭೂತಿ.

೩. ಅಂಗಡಿಯಲ್ಲಿ ಮಾರಲ್ಲ, ತಕ್ಕಡಿಯಲ್ಲಿ ತೂಗಲ್ಲ, ನಾನಿಲ್ದೆ ಹಬ್ಬ ಆಗಲ್ಲ,

ಆಗಾದರೆ ನಾನು ಯಾರು?-ಸಗಣಿ.

೪. ಕುರಿ ಮರಿ ಕೋಳಿಗೆಷ್ಟು ಕಾಲು-೧೦

೫. ನೀರಲ್ಲುಟ್ಟುದ್ರು ಮೈಗೆ ನೀರಂಟಲ್ಲ, ಬೆಲೆ ಜಾಸ್ತಿ-ಮುತ್ತು

೬. ಒಂದೇ ಮನೇಲಿ ಇಬ್ಬರು ಕಳ್ಳರು-ಕಡಲೇ ಬೀಜ.

೭. ಕೆಲಸದ ಆಳು ಬೀಜ ಬಿತ್ತುತಿರುವಲ್ಲಿಗೆ ಒಬ್ಬ ವ್ಯಕ್ತಿ ಬಂದು ಅದು ಯಾವ ಕಾಳು? ಎನ್ನುತ್ತಾನೆ, ಮತ್ತೊಬ್ಬ ಮನೇಲಿ ಯಜಮಾನ್ರು ಇದ್ದಾರ? ಎಂದು ಕೇಳುತ್ತಾನೆ. ಎರಡೂ ಪ್ರಶ್ನೆಗೂ ಒಂದೇ ಉತ್ತರ!- ಅವರೆ.

೮. ದಾರಿ ಮದ್ಯೆ ಬಸ್ಸು ಕೆಟ್ಟೋಯ್ತು, ಒಬ್ಬ ವ್ಯಕ್ತಿ ಅಲ್ಲಿದ್ದ ಹುಡುಗಿಯನ್ನು ಬಸ್ಸು ಯಾಕೆ ಕೆಟ್ಟೋಗಿದೆ ಎಂದು ಕೇಳಿದರೆ, ಮತ್ತೊಬ್ಬ ನಿನ್ನ ಹೆಸರೇನು ಎನ್ನುತ್ತಾನೆ, ಎರಡು ಪ್ರಶ್ನೆಗಳಿಗೆ ಒಂದೇ ಉತ್ತರ-ಕಾವೇರಿ.

೯. ಕೋಗಿಲೆ ಕಂಠ ಆದರೆ ಕೋಗಿಲೆಯಲ್ಲ,
ಪಾರ್ವತಿ ಗಂಡ ಆದರೆ ಶಿವನಲ್ಲ-ಡಾ॥ರಾಜ್ ಕುಮಾರ್.

೧೦. ಹಸಿರು ಕೋಟೆ, ಕೆಂಪು ಅರಮನೆ, ಕಪ್ಪು ಸೈನಿಕರು-ಕಲ್ಲಂಗಡಿಹಣ್ಣು.

೧೧. ಸುತ್ತಲೂ ಸುಣ್ಣದ ಗೋಡೆ, ಎತ್ತ ನೋಡಿದರೂ ದಾರಿ ಇಲ್ಲ-ಕೋಳಿ ಮೊಟ್ಟೆ.

೧೨. ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ನಾರದನಲ್ಲ, ಮೂರು ಕಣ್ಣುಂಟು ಶಿವನಲ್ಲ, ಆಗಾದರೆ ನಾನು ಯಾರು?-ತೆಂಗಿನಕಾಯಿ.

೧೩. ತೇಲುತ್ತೆ, ಮುಳುಗುತ್ತೆ, ಕರಗುತ್ತೆ-ಎಲೆ, ಅಡಿಕೆ ಸುಣ್ಣ.

೧೪. ಉದ್ದ ಗಂಡಸಿಗೆ ತಲೆಮೇಲೆ ಗೋಲಿಕಾಯಿಗಳು-ಈಚಲುಮರ.

೧೫. ನೀರುಂಟು ಬಾವಿಯಲ್ಲ, ರೆಕ್ಕೆಯುಂಟು ಪಕ್ಷಿಯಲ್ಲ, ಕಪ್ಪುಂಟು ಕಸ್ತೂರಿಯಲ್ಲ-ಕಣ್ಣು.

೧೬. ಶಿವನ ಹಾರದ ಆಹಾರದ ಮಗಳ ಗಂಡನ ಶತ್ರುವಿನ ಮಕ್ಕಳ ಹೆಸರೇನು?-ಲವಕುಶ. (ಶಿವನ ಹಾರ ಹಾವು, ಹಾವಿನ ಆಹಾರ ಕಪ್ಪೆ. ಕಪ್ಪೆಯ ಮಗಳು ಮಂಡೋಧರಿ, ಮಂಡೋಧರಿಯ ಗಂಡ ರಾವಣ, ರಾವಣನ ಶತ್ರು ರಾಮ, ರಾಮನ ಮಕ್ಕಳು-ಲವಕುಶ).

೧೬. ಕಟ್ಟೆ ನೀರು ಮನೆ ಬೆಳಗಿತ್ತು-ವಿದ್ಯುತ್ ದೀಪ.

೧೭. ನೀರಲ್ಲೆ ಹುಟ್ಟುತ್ತೆ, ನೀರಲ್ಲೇ ಬೆಳೆಯುತ್ತೆ, ನೀರಲ್ಲೇ ಸಾಯುತ್ತೆ-ಉಪ್ಪು.

೧೮. ಕಿತ್ರೆ ಬೆಳೆಯೋಲ್ಲ, ನೆಟ್ರೆ ಚಿಗುರೋಲ್ಲ-ಕೂದಲು.

೧೯. ಪುಟ್ಟ ಹುಡುಗಿಗೆ ಮಾರುದ್ದ ಜಡೆ-ಸೂಜಿದಾರ.

ನಂಬಿಕೆಗಳು:

ಶುಭಕಾರ್ಯಕ್ಕೆ ಹೊರಟಾಗ ದಾರಿಯಲ್ಲಿ ಹೂವ್ವಿನ ಬುಟ್ಟಿ, ತುಂಬಿದಕೊಡ ಎದುರಾದ್ರೆ ಒಳ್ಳೆಯದಾಗುತ್ತದೆ. ಹೋದ ಕೆಲಸ ಸುಸೂತ್ರವಾಗಿ ನೆರವೇರುತ್ತದೆ. ಆದ್ರೆ ಮಂಕರಿ, ಗುದ್ದಲು, ಕಾಲಿ ಬಿಂದಿಗೆ ಎದುರಾದ್ರೆ, ಯಾರಾದ್ರೂ ಎಲ್ಲಿಗೆ ಎಂದು ಕೇಳಿದರೆ ಅಶುಭ, ಒಳ್ಳೆಯದಲ್ಲ ಹೋದ ಕೆಲಸ ಆಗೋಲ್ಲ ಎಂಬ ನಂಬಿಕೆ ಇವರಲ್ಲಿದೆ.

ಹಾಗೆಯೇ ಒಲೆ 'ಬರೋ' ಎಂದು ಶಬ್ದ ಮಾಡಿದರೆ, ಊಟ ಮಾಡುವಾಗ ತುತ್ತು ಕೈಜಾರಿ ಕೆಳಗೆ ಬಿದ್ದರೆ, ಮನೆ ಮುಂದೆ ಕಾಗೆ ಕೂತು ಕೂಗಿದ್ರೆ ಅವತ್ತು ಮನೆಗೆ ಯಾರಾದ್ರು ನೆಂಟರು ಬರ್ತಾರೆ ಎಂಬ ನಂಬಿಕೆ ಇವರಲ್ಲಿದೆ.

ಮನೆಯ ಮೇಲೆ ಗೂಬೆ ಕೂರಬಾರ್ದು, ಒಂದು ವೇಳೆ ಗೂಬೆಯೇನಾದ್ರು ಮನೆ ಮೇಲೆ ಕೂತು ಕೂಗಿದ್ರೆ, ಅದು ಮನೆಗೆ ಒಳ್ಳೆಯದಲ್ಲ, ಆದ ಕಾರಣ ಮೂರು ತಿಂಗಳು ಆ ಮನೆ ಬಿಡಬೇಕು ಎಂಬ ನಂಬಿಕೆಯು ಇದೆ.

ನಾಯಿಯು ಆಕಾಶದೆಡೆಗೆ ಮುಖಮಾಡಿ ಹೂಳಿಟ್ರೆ ಮಳೆ ಬರುತ್ತೆ ಎಂತಲೂ ಹಾಗೆ ಭೂಮಿಕಡೆಗೆ ನೋಡಿ ಹೂಳಿಟ್ರೆ ಆ ಊರಲ್ಲಿ ಯಾರಾದ್ರು ಸಾಯ್ತಾರೆ ಎಂಬ ನಂಬಿಕೆ ಇದೆ.

ಹೆಣ್ಣು ಮಕ್ಕಳಿಗೆ ಬಲಗಣ್ಣು ಅದುರಿದರೆ ಅಶುಭವೆಂತಲೂ ಎಡಗಣ್ಣು ಅದುರಿದರೆ ಶುಭವೆಂತಲೂ ನಂಬಿಕೆ ಇದೆ. ಆದರೆ ಪುರುಷರಿಗೆ ಬಲಗಣ್ಣು ಶುಭ ಶಕುನವಾದರೆ, ಎಡಗಣ್ಣು ಅಶುಭ ಶಕುನವಾಗಿರುತ್ತದೆ.

ಹಾಗೆಯೇ ಹೆಣ್ಣು ಮಕ್ಕಳು ಭರಣಿ ಮಳೆಯಲ್ಲಿ ಮೈನೆರೆಯಬಾರದು ಎಂಬೊಂದು ನಂಬಿಕೆ ಇದೆ. ಏಕೆಂದರೆ "ಭರಣೀಲಿ ದೊಡ್ಡೊರಾದ್ರೆ, ಧರಣೀಲಿ ಉಳಿಯಲ್ಲ" ಎಂಬ ನಂಬಿಕೆ ಇವರಲ್ಲಿದೆ.

ಎಣ್ಣೆಯಿಂದ ಮಾಡಿದ ಪದಾರ್ಥಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಥವಾ ಸ್ಥಳಕ್ಕೆ ತೆಗೆದುಕೊಂಡು ಹೋಗಬಾರ್ದು, ಹಾಗೇನಾದ್ರೂ ತೆಗೆದುಕೊಂಡು ಹೋಗಲೇ ಬೇಕಾದರೆ ಬುತ್ತಿಯನ್ನು ಕಟ್ಟುವಾಗ ಅದರೊಳಗೆ ಇಜ್ಜಲು, ಒಣಮೆಣಸಿನಕಾಯಿ, ಸ್ವಲ್ಪ ಉಪ್ಪನ್ನು ಹಾಕಿ ಕಟ್ಟಲಾಗುತ್ತದೆ. ಏಕೆಂದರೆ ಕರಿದ ಪದಾರ್ಥಗಳೆಂದರೆ ದೆವ್ವಭೂತಗಳಿಗೆ ಬಲುಪ್ರೀತಿ, ಬುತ್ತಿಯ ಆಸೆಯಿಂದ ಬಂದು ನಮಗೆ ತೊಂದರೆ ಕೊಡುತ್ತವೆ ಎಂಬ ನಂಬಿಕೆ ಇವರಲ್ಲಿದೆ. ಬುತ್ತಿ ತೆಗೆದುಕೊಂಡು ಹೋಗೋವಾಗ ಒಂದು ವೇಳೆ ಎಡವಿ ಬಿದ್ದರೆ, ಅದು ಪ್ರೇತಾತ್ಮಗಳ ಕಾಟವೆಂದೇ ಭಾವಿಸುವ ಇವರು ಅದನ್ನು (ಬುತ್ತಿಯನ್ನು) ಅಲ್ಲಿಯೇ ಎಸೆದು ಹಿಂದೆ ತಿರುಗಿ ನೋಡದೆ ಬಿದ್ದ ಜಾಗದಲ್ಲಿ ಮೂರುಬಾರಿ ಉಗಿದು ಮುಂದೆ ಸಾಗುತ್ತಾರೆ.

ಇನ್ನು ಬಾಣಂತಿ ಕೋಣೆಯಲ್ಲಿ ರಾತ್ರಿ ವೇಳೆ ಮಲಗುವಾಗ ದೀಪವನ್ನು ಆರಿಸುವುದಿಲ್ಲ,

ಕಾರಣ ವಿಧಿಯಮ್ಮ ಮಗುವಿನ ಹಣೆಬರಹವನ್ನು ಬರೆಯಲು ಬರುತ್ತಾಳೆ. ಒಂದು ವೇಳೆ ಕತ್ತಲಿದ್ದರೆ, ತಪ್ಪು–ತಪ್ಪಾಗಿ ಬರೆದು ಬಿಡುತ್ತಾಳೆ. ಇದರಿಂದ ಮಗುವಿಗೆ ಮುಂದೆ ಕಷ್ಟ ಬರುತ್ತದೆ ಎಂಬ ನಂಬಿಕೆಯೂ ಇವರಲ್ಲಿದೆ.

ಯಾವುದೇ ಒಂದು ಶುಭಕಾರ್ಯಮಾಡುವ ಮೊದಲು ದೇವರಲ್ಲಿ ಹೂವನ್ನು ಕೇಳುವುದು ಇವರಲ್ಲಿ ರೂಢಿಯಲ್ಲಿದ್ದು ತಮಗೆ ಆಗಬೇಕಾದ ಕೆಲಸವನ್ನು ದೇವರಲ್ಲಿ ನಿವೇದಿಸಿಕೊಳ್ಳುತ್ತಾರೆ. ದೇವರು ಬಲಭಾಗದಲ್ಲಿ ಹೂವನ್ನು ಕೊಟ್ಟರೆ ಅದು ಶುಭವೆಂತಲೂ ಎಡಭಾಗದಲ್ಲಿ ಹೂವನ್ನು ಕೊಟ್ಟರೆ ಅದು ಅಶುಭವೆಂತಲೂ ನಿರ್ಧರಿಸುತ್ತಾರೆ. ಮನೆಕಟ್ಟಲು, ಮದುವೆಮಾಡಲು, ಕೊಳವೆ ಬಾವಿ ತೆಗೆಸಲು ಹೀಗೆ ಯಾವುದೇ ಕೆಲಸ ಕಾರ್ಯಗಳನ್ನು ಪ್ರಾರಂಭಿಸುವ ಮುನ್ನ ದೇವರಲ್ಲಿ ಹೂವನ್ನು ಕೇಳಿ ದೇವರು ಹೂವುಕೊಟ್ಟರೆ ಮಾತ್ರ ಆ ಕೆಲಸದಲ್ಲಿ ಮುಂದುವರೆಯುತ್ತಾರೆ. ಹೀಗೆ ದೇವರ ಬಗ್ಗೆ ಅಪಾರ ಭಯ–ಭಕ್ತಿಯಿರುವುದನ್ನು, 'ಹುಟ್ಟಿಸಿದ ದೇವರು ಹುಲ್ಲುಮೇಯಿಸನೆಂಬ' ನಂಬಿಕೆಯಿರುವುದನ್ನು ಗಮನಿಸಬಹುದು.

ಯಾವುದಾದರೂ ವಿಷಯದ ಬಗ್ಗೆ ಮಾತನಾಡುತ್ತಿರುವಾಗ, ಹಲ್ಲಿ ಲೊಚ ಲೊಚನೆ ಶಬ್ದ ಮಾಡಿದರೆ, ಯಾರಾದರು ಎರಡು ಬಾರಿ ಸೀನಿದರೆ ಅದು ಒಳ್ಳೆಯದೆಂತಲೂ, ಒಂಟಿ ಸೀನು ಬಂದರೆ ಅದು ಕೆಟ್ಟದೆಂಬ ನಂಬಿಕೆ ಇವರಲ್ಲಿದೆ.

ಹೀಗೆ ಸಾದರ ದಿನನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಹಲವು ನಂಬಿಕೆ–ಮೂಢನಂಬಿಕೆಗಳು ಇರುವುದನ್ನು ಗಮನಿಸಬಹುದು.

ಹಾಡುಗಳು

ಭಜನೆ ಹಾಡು:–

ಬಂದೇವು ಪಂಡರಿ ಪುರಕೆ

ಭವಬಂಧನವ ಕಳೆವುದಕೆ

ಪಾಂಡುರಂಗನನು ನೋಡುದಕೆ

ರಂಗನಾ ಮುದ್ದು ಮೋಹದ್ವಾರ

ಎಷ್ಟೇಳಲದರ ವಿಸ್ತಾರ

ರನ್ನ ಮಣಿಕೆದಗ ಪುರಾ

ಇಟ್ಟಿಗೇಲಿ ನಿಂತಾನೆ ಧೀರ

[illegible]

ಬಂದೇವು ಪಂಡರಿ ಪುರಕೆ

ಪಾಂಡುರಂಗನನು ನೋಡುದಕೆ

ಭವಬಂಧನವ ಕಳೆವುದಕೆ

ಭಾಗೀರಥಿಯನ್ನು ಕುರಿತ ಗೀತೆ:-

ಭಾಗೀರಥಿ ಭಾಗ್ಯವಕೊಡೆ ಭಾಗ್ಯವತಿ

ಕಾಶೀಯ ನಗರದಿ ವಾಸವಾಗಿರುವೆನೆ

ಈಶದರೇಶೆಗೆ ಪರಮಸಂತೋಷ

ಕೊಡುತಾಯಿ ಭಾರತಿ ಭಾಗೀರಥಿ

ಭಾಗ್ಯವಕೊಡೆ ಪಾರ್ವತಿ

ಹರಿಪದ ನಗರದಿ ಹರಿದುಬಂದೇನೆತಾಯಿ

ಉತ್ತುಮ ಕಾರ್ಯದಿ ಬ್ರಮಸಿ ಬಂದೇನೆ

ಕೊಡುತಾಯಿ ಭಾರತಿ ಭಾಗೀರಥಿ

ಭಾಗ್ಯವಕೊಡೆ ಪಾರ್ವತಿ

ಗಿರಿಜಫಾಲಿಟಲನ ಮಮತೆಯ ಮಗಳೆಲೆ

ಉತ್ತುಮಕಾರ್ಯದಿ ಬ್ರಮಸಿ ಬಂದೇನೆ

ಭಾಗ್ಯವ ಕೊಡುತಾಯಿ ಭಾರತಿ ಭಾಗೀರಥಿ.

ಹಸೆಹಾಡು:-

೧. ಚಂದ್ರದೆಸೆಗೆ ಬಾರೆ ಕಾಂತೆ ರಮಣಿ
ಹಸಿರು ಪಿತಾಂಬರ ಹಸನದ ಕುಪ್ಪುಸ
ತಳತಳ ಹೊಳೆಯುತ ಬಾ ಹಸೆಗೆ
ಕಾಲಂದಿಗೆ ಗೆಜ್ಜೆ ಕೈಗಳ ಪೈಡನೆದೊರ್ಯವು
ಗಲ್ಲುಗಲ್ಲೆನುತಾಲಿ ಬಾಹಸೆಗೆ
ರಾಮಾವತಾರದಿ ಪಟ್ಟದ ರಾಣಿಯಾದೆ
ಸೀತಾದೇವಿಯೇ ಬಾ ಹಸೆಗೆ.

೨. ಹಸೆಗೆ ಬಾರೇ ನೀ ಬಿಸುಜಾಕ್ಷನರಾಣಿ ವಾಣಿ
ಬಿಸುಜಾಕ್ಷಿಯರು ಕರೆಯುವರು
ಗಟ್ಟಿನನಗರ ಮುರಿಯನು ತೊಟ್ಟು
ಹಸೆಗೆ ಬಾರೆ ಬಿಸುಜಾಕ್ಷನ ರಾಣಿ ವಾಣಿ
ನಸುನಗುತ ಪೀಠಕೆ ನಲಿಯುತ ಬಾರೆ.

೩. ಜನಕನ ಮನೆಯೋಳು ಅರಗಿನ ಗೌರಿಯು
ಮರದಲಿ ಬಾಗಿನ ನಿರಸಿದಳು
ಹರಿಸಿನ-ಕುಂಕುಮ ಕರಿಮಣಿ ಬಳೆಯ
ಜಲ್ಮನೆಯಾರೆಲ್ಲ ಮುಡಿಸಿದರು
ಹುಡುಗರು ಬಂದರೆ ಸಡಗರದಿಂದಲಿ
ಕಡಬನೆ ಆಕೆಯು ಬಡಸಿದಳು
ನಡೆಯಿರಿ ನಡೆಯಿರಿ ನಾವಿನ್ನು ಹೋಗುವ
ಗೌರಿದೇವಿಯ ಆರತಿಗೆ.

ಹೊಮ್ಮಿದ ಹೊಂಬೆಳಕಿನ ಕಾಂತಿ:- (ರಾಜ್ಯ ಮಟ್ಟದ ಕಾವ್ಯಕಮ್ಮಟಕ್ಕೆ ಆಯ್ಕೆಯಾದ ಕವನ)

ಚೊಕ್ಕಸಾರಣೆ ಅಂಗಳದ ಮುಂದೆ
ಚುಕ್ಕಿಸಾಲ ಇಡುತ ಲೆಕ್ಕಹಾಕುತ
ಕೇಳಿದಳು ಲಕ್ಕಮ್ಮ
ಅಮ್ಮ ಇನ್ನೊಂದು ವಾರಕೆ ದೀವಳಿಗೆ
ತರಬೇಕು ಬಟ್ಟೆಬರೆ ಪಟಾಕಿ ಮಕ್ಕಳಿಗೆ
ಕೊಟ್ಟರೆ ಸಾಲ ಒಂದು ಸಾವಿರ
ಎರಡು ತಿಂಗಳಲೆ ಆಗುವುದು ಚುಕ್ತ
ಅಯ್ಯೋ! ತಿಂಗಳ ಕೊನೆಯಲ್ಲೇ
ಕೇಳಬಾರದಾಗಿತ್ತೇನೆ ಮೊದಲೆ
ಹೇಳಿದೆ ಸಂಕುಚಿತ ಭಾವದಲೆ

ನಿರಾಸೆಯ ಭಾವಹೊತ್ತು
ಮುಗಿಸಿದಳು ಹೊರೆಗೆಲಸವ ಸರಸರನೆ
ಬಂದೇ ಬಂದಿತು ದೀವಳಿಗೆ ಬರಬರನೆ
ಅಂಗಳದಲ್ಲಿನಕ್ಕಿತು ಲಕ್ಕಮ್ಮನ ಚಿತ್ರಚಿತ್ತಾರ ರಂಗೋಲೆ
ಸುರುಸುರು ಬತ್ತಿ ಹಚ್ಚಿದರು ಮಕ್ಕಳು
ಚುರುಚುರುಗುಟ್ಟಿತು ನನ್ನೊಡಲು
ಪಾಯಸ ಕಜ್ಜಾಯ ಹೋಳಿಗೆ
ಇಳಿಯಲಿಲ್ಲ ಗಂಟಲಿಗೆ ಹೊರಟೆಲಕ್ಕಮ್ಮನ ಮನೆಯತ್ತ
ನೋಡುತ್ತಿದ್ದರು ಅವಳ ಮಕ್ಕಳು ಸುತ್ತಮುತ್ತ
ಆಸೆಗಳ ಹುಗಿದು ಬಾಣಬಿರುಸುಗಳತ್ತ
ಇತ್ತಾಗ ಸಾವಿರ ಲಕ್ಕಮ್ಮನ ಕೈಗೆ
ಹೊಮ್ಮಿತು ನೂರಾರು ಮತಾಪು, ಹೂ ಕುಂಡಗಳ
ಹೊಂಬೆಳಕಿನ ಕಾಂತಿ ಮಕ್ಕಳ ಕಣ್ಣಳಲಿ".

ಪ್ರಸ್ತುತ ಕವಿತೆಯನ್ನು ಪೂರ್ಣಿಮಾಮೂರ್ತಿರವರು ಬರೆದಿರುವ ಅಪ್ರಕಟಿತ ಕವನ ಸಂಕಲನದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಕಥೆಗಳು

ಒಂದೂರಲ್ಲಿ ಒಬ್ಬರಾಜ ಇದ್ದನಂತೆ, ಆ ರಾಜನಿಗೆ ಮೂರುಜನ ಹೆಂಡ್ತೀರಿರ್ತಾರೆ. ಮೊದಲನೆಯವಳಿಗೆ ಒಂದು ಕೂದಲಿರುತ್ತೆ, ಎರಡನೇಯವಳಿಗೆ ಎರಡು ಕೂದಲಿರುತ್ತೆ, ಮೂರನೆಯವಳಿಗೆ ಮೂರೇ ಕೂದಲಿರುತ್ತೆ ಇದರಿಂದ ರಾಜನಿಗೆ ತುಂಬಾ ಬೇಜಾರಾಗಿ ಅವರನ್ನೆಲ್ಲಾ ಅರಮನೆ ಬಿಟ್ಟು ಓಡಿಸ್ತಾನೆ.

ಆಗ ಮೊದಲನೇ ರಾಣಿ ಬೇಜಾರಾಗಿ ಬರ್ತಾಇರಬೇಕಾದ್ರೆ ದಾರಿಲಿ ಒಂದು ಗುಲಾಬಿ ಗಿಡ ಸಿಗುತ್ತೆ, ಅದು ರಾಣಿ-ರಾಣಿ ನನಗ್ ನೀರ್‌ಹಾಕು ನಾನ್‌ನಿಂಗ್ ತಲೆತುಂಬಾ ಹೂ ಕೊಡ್‌ತೀನ್ ಅನ್ನುತ್ತೆ, ಅದಕ್ಕವಳು ತಲೇಲಿ ಇರೋದೆ ಒಂದು ಕೂದಲು ಹೂನು ಬೇಡ ಏನು ಬೇಡ ಅಂತ ನೀರಾಕ್ದೆ ಹಾಗೆ ಹೊರಟು ಹೋಗ್ತಾಳೆ. ಸ್ವಲ್ಪ ಮುಂದೆ ಹೋದ್ರೆ ಒಂದು ಆನೆ ಸಿಗುತ್ತೆ. ಅದು ರಾಣಿ-ರಾಣಿ ನನಗ್ ಕಾಲಲ್ಲಿ ಮುಳ್ಳು ಚುಚ್ಚಿದೆ ನನ್ ಕಾಲಲ್ಲಿರೊ ಮುಳ್ಳು ತೆಗೆ ನಾನ್ ನಿನ್ನ ಊರೆಲ್ಲ

ಮೆರವಣಿಗೆ ಮಾಡ್ತೀನಿ ಅನ್ನುತ್ತೆ. ಅದಕ್ಕವಳು ಮುಳ್ಳು ತೆಗಿದೇ ಹಾಗೆ ಹೊರಟು ಹೋಗ್ತಾಳೆ. ಮುಂದೆ ಒಂದು ಅಜ್ಜಿ ಸಿಗುತ್ತೆ. ಅಜ್ಜಿ ರಾಣಿ-ರಾಣಿ ನಿನ್‌ಗೆ ಹೊಸ ಸೀರೆ ಬೇಕಾ ಹಳೆ ಸೀರೆ ಬೇಕಾ ಅನ್ನುತ್ತೆ. ಅದಕ್ಕವಳು ಹೊಸ ಸೀರೆ ಅನ್ತಾಳೆ. ಆದರೆ ಅಜ್ಜಿ ಅವಳಿಗೆ ಹಳೇ ಸೀರೆನೆ ಕೊಡ್ತಾಳೆ. ಎರಡನೇ ರಾಣಿನು ಇದೇ ರೀತಿ ನಡ್‌ಕೊಳ್ತಾಳೆ.

ಆದ್ರೆ ಮೂರನೇ ರಾಣಿ ಬೇಸರದಿಂದ ಬರ್ತಾ ಇರೋವಾಗ ಗುಲಾಬಿಗಿಡ ಮತ್ತೆ ನೀರು ಕೇಳುತ್ತೆ ಅದಕ್ಕವಳು ಅದಕ್ಕೆಷ್ಟು ಬೇಕೋ ಅಷ್ಟು ನೀರ್ ಹಾಕ್ತಾಳೆ. ಅದು ಸಂತೋಷದಿಂದ ಅವಳಿಗೆ ತಲೆ ತುಂಬ ಹೂಕೊಡುತ್ತೆ. ಅವಳಿಗೆ ತಲೆ ತುಂಬಾ ಕೂದಲು ಬೆಳೆಯುತ್ತೆ. ಮುಂದೆ ಒಂದು ಆನೆ ಸಿಗುತ್ತೆ ಆನೆ ಕೇಳಿದಂತೆ ಅದರ ಕಾಲಿನ ಮುಳ್ಳು ತೆಗಿತಾಳೆ. ಸ್ವಲ್ಪ ಮುಂದೆ ಹೋದ್ರೆ ಒಂದು ಅಜ್ಜಿ ರಾಣಿ-ರಾಣಿ ನಿನ್‌ಗೆ ಹೊಸ ಸೀರೆ ಬೇಕಾ ಹಳೆ ಸೀರೆ ಬೇಕಾ ಅನ್ನುತ್ತೆ, ಅದಕ್ಕವಳು ಹಳೇ ಸೀರೆಬೇಕು ಅನ್ತಾಳೆ. ಆಗ ಅಜ್ಜಿ ಅವಳ ಒಳ್ಳೆ ಮನಸ್ಸಿಗೆ ನೋವಾಗಬಾರ್ದು ಅಂಥ ಹೊಸ ಸೀರೆನೆ ಕೊಡುತ್ತೆ.

ಆನೆ ಅವಳನ್ನ ತನ್ನ ಮೇಲೆ ಕುಂಡ್ರುಸ್‌ಕೊಂಡು ಊರಲ್ಲೆಲ್ಲಾ ಮೆರವಣಿಗೆ ಮಾಡ್ತಿರುತ್ತೆ. ಆಗ ರಾಜನೋಡಿ ಓ ನನ್ನ ಹೆಂಡ್ತಿ ಆನೆಮೇಲೆ ಬರ್‍ತಿದಾಳೆ ಅಂಥ ಸಂತೋಷದಿಂದ ಅವಳನ್ನ ಅರಮನೆಗೆ ಕರ್‌ಕೊಂಡು ಹೋಗ್ತಾನೆ. ಇಬ್ಬರೂ ಸುಖವಾಗಿ ನೂರ್‌ಕಾಲ ಬಾಳ್ತಾರೆ.

ಪಾರ್ವತಿ-ಪರಮೇಶ್ವರರ ಕಥೆ.

ಒಂದ್ ಸಾರಿ ಪಾರ್ವತಿ-ಪರಮೇಶ್ವರರು ಲೋಕಸಂಚಾರಕ್ಕೆ ಹೋಗುತ್ತಿರುವಾಗ ಒಬ್ಬ ರಾಜನ ಮಗನ ಮದುವೆಯ ದಿಬ್ಬಣವನ್ನು ನೋಡಿ ಪಾರ್ವತಿಯು "ಮದುವೆ ನೋಡಿಕೊಂಡು ಹೋಗೋಣ ಬನ್ನಿ ಅಂತ ಪರಮೇಶ್ವರನನ್ನು ಕೇಳ್ತಾರೆ. ಆಗ ಪರಮೇಶ್ವರನು 'ಬಡವರ್ ಮನೆ ಊಟ ಚಂದ, ಸಿರಿವಂತ್ರು ಮನೆ ನೋಟ ಚಂದ' ಅಷ್ಟೇ, ಅವರು ಯಾರೂ ಒಂದು ಒಳ್ಳೆಯ ಮಾತನ್ನ ಆಡಲ್ಲ, ಅಲ್ಲಿಗೆ ಹೋಗೋದು ಬ್ಯಾಡ ಅಂತಾನೆ ಅದಕ್ಕೆ ಪಾರ್ವತಿ ಇಲ್ಲ ನಾವು ಹೋಗ್‌ಲೇ ಬೇಕು ಅಂತ ಹಟಹಿಡಿತಾಳೆ.

ಪರಮೇಶ್ವರ ಸರಿ ಆಯ್ತು ಅಂತ ಒಪ್‌ಕೊಂಡ. ಅವರಿಬ್ಬರೂ ಭಿಕ್ಷುಕರ ವೇಷದಲ್ಲಿ ಹೋಗ್ತಾರೆ. ಆದರೆ ಆ ಶ್ರೀಮಂತ್ರು ದಿಬ್ಬಣದವರ್‍ನ ಮಾತ್ರ ನೋಡಕೊಂಡು, ಊಟ, ಉಪಚಾರ ಮಾಡ್ತಾರೆ, ಆದರೆ, ಇವರಿಗೆ ನೀರು ಕೂಡ ಕೊಡಲಿಲ್ಲ, ಊಟಕ್ಕೆ ಹೋದ್ರೆ ಒನಿಕೆ ತಕ್ಕೊಂಡು ಬಡಿಯಲು ಬಂದರು. ಆಗ ಬೇಸರಗೊಂಡ ಪಾರ್ವತಿ-ಪರಮೇಶ್ವರರು ತನ್ನ ಒಬ್ಬನೇ ಮಗನನ್ನು ಕಳೆದುಕೊಂಡು ಚಿಂತಿಸುತ್ತಾ ಕುಳಿತಿದ್ದ ಅಜ್ಜಿ ಗುಡಿಸಲಿಗೆ ಬರುತ್ತಾರೆ. ಅಜ್ಜಿ ಅವರನ್ನ ಪ್ರೀತಿಯಿಂದ ಸ್ವಾಗತಿಸಿ ಅಡಿಗೆ ಮಾಡಿಕೊಂಡು ಊಟ ಮಾಡಿ ನನಗೂ ಬಡಿಸಿರೆಂದು ವಾತ್ಸಲ್ಯದಿಂದ

ಕರೆಯುತ್ತಾಳೆ. ಅದರಿಂದ ಸಂತೋಷಗೊಂಡ ಪರಮೇಶ್ವರ ಸತ್ತಿದ್ದ ಮಗನನ್ನು ಬದುಕಿಸಿ, ಅವಳ ಗುಡಿಸಲನ್ನು ಭವ್ಯ ಬಂಗಲೆಯಾಗಿ ಮಾಡಿಬಿಡ್ತಾನೆ. ಬೇಕಾದಷ್ಟು ಸಂಪತ್ತನ್ನು ಕೊಡ್ತಾನೆ.

ಆಗ ಅಜ್ಜಿ ತನ್ನ ಮಗನಿಗೆ ಹೆಣ್ಣು ಕೇಳಲು ಅಣ್ಣಂದಿರ ಮನೆಗೆ ಹೋಗ್ತಾಳೆ. "ಸತ್ತ ಮಗನಿಗೆ ಹೆಣ್ಣು ಕೇಳಲು ಬಂದಿದ್ದಾಳೆ! ಬಡ ತಂಗಿಗೆ ಹುಚ್ಚು ಹಿಡಿದಿರಬೇಕು" ಎಂದು ತಿಳಿದು ದೊಡ್ಡ ಅಣ್ಣ 'ಕರಿ ಬುಧವಾರ ದಿಬ್ಬಣ ತಗೊಂಡು ಬಾ' ಅಂತ ಹೇಳಿಬಿಡ್ತನೆ. ತಂಗಿಯು ನಂಬಿಕೊಂಡು ಕೃಷ್ಣಪಕ್ಷದ ಒಂದು ಬುಧವಾರದಂದು ವೈಭವದಿಂದ ದಿಬ್ಬಣ ಹೊರಡಿಸ್ಕೊಂಡು ಬರ್ತಾಳೆ. ಅಣ್ಣನ ಮನೇಲಿ ನೋಡಿದ್ರೆ ಯಾವ ಮದುವೆ ಸಿದ್ಧತೆಯೂ ಇಲ್ಲ, ತಂಗಿಯ ಮದುಮಗನನ್ನು ನೋಡಿ, ಮದುವೆ ದಿಬ್ಬಣದ ವೈಭವ ನೋಡಿದ ಮೇಲೆ ಅಣ್ಣಂದಿರಿಬ್ಬರೂ ಹೆಣ್ಣು ಕೊಡೋಕೆ 'ನಾ ಮುಂದು ತಾ ಮುಂದು ಎಂದು ಬಂದಾಗ ಇನ್ನೊಂದು ದಿನ ದಿಬ್ಬಣ ತೆಗೆದುಕೊಂಡು ಬಾ ನಾವು ಲಗ್ನದ ಸಿದ್ಧತೆ ಮಾಡಿಕೊಂಡಿರ್ತೀವಿ' ಅಂದಾಗ ಅಜ್ಜಿ ಬೇಸರದಿಂದ ನಿಮ್ಮ ಮಗಳು ನಂಗ್ಬೇಡ ಅಂತೇಳಿ ತನ್ನ ಕಿರಿತಮ್ಮನ ಮಗಳನ್ನೇ ಮಗನಿಗೆ ಮದುವೆ ಮಾಡಿ ಎಲ್ಲರೂ ಸುಖವಾಗಿರ್ತಾರೆ.

ಅನುಬಂಧ-೨

೧. ಸಾದರಿರುವ (ಹಿಂದೂ ಸಾದರಿರುವ) ಗ್ರಾಮಗಳು.

೨: ಗ್ರಂಥಸೂಚಿ.

೩: ವಕ್ತೃಗಳ ವಿವರ.

೪: ಛಾಯಾಚಿತ್ರಗಳು.

೧:-ಸಾದರಿರುವ (ಹಿಂದೂ ಸಾದರಿರುವ) ಗ್ರಾಮಗಳು.

ತುಮಕೂರು ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಅಮೃತಗಿರಿ, ಅಣ್ಣೇನಹಳ್ಳಿ, ಕರೆಕಲ್‌ಪಾಳ್ಯ, ಕ್ಯಾತ್ಸಂದ್ರ, ಕುಚ್ಚಂಗಿ, ಗುಂಡಗಲ್ಲು, ಗೊಲ್ಲಹಳ್ಳಿ, ಚೌಡಯ್ಯನಪಾಳ್ಯ, ಬೆಳಧರ, ಬೊಮ್ಮನಹಳ್ಳಿ, ಬ್ರಹ್ಮಸಂದ್ರ, ಮುದಿಗೆರೆ ರಾಮಗೊಂಡನಹಳ್ಳಿ, ಶೆಟ್ಟಿಹಳ್ಳಿ.

ಗುಬ್ಬಿ ತಾಲ್ಲುಕಿನಲ್ಲಿ ಸಾದರಿರುವ ಗ್ರಾಮಗಳು:-

ದೇವರಹಳ್ಳಿ, ಶೇಷನಹಳ್ಳಿ,

ಸಿರಾ ತಾಲ್ಲುಕಿನಲ್ಲಿ ಸಾದರಿರುವ ಗ್ರಾಮಗಳು:-

ಕಡವಿಗೆರೆ, ಕಾರ್ಪೇನಹಳ್ಳಿ, ಗಂಜಲಕುಂಟೆ, ಗುಮ್ಮನಹಳ್ಳಿ, ಚಿಕ್ಕನಹಳ್ಳಿ, ತರೂರು, ಬಾಲೇನಹಳ್ಳಿ, ಮಾಗೋಡು, ದೊಡ್ಡ ಅಗ್ರಹಾರ.

ಕೊರಟಗೆರೆ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಅರಸಾಪುರ, ಅಮ್ಮನಹಳ್ಳಿ, ಅಳಾಲಸಂದ್ರ, ಇರಕಸಂದ್ರ, ಎಸ್.ಕೆ.ಪಾಳ್ಯ, ಕಾಮರಾಜನಹಳ್ಳಿ, ಕ್ಯಾಸವಾರ, ಕೆರೆಯಗಲಹಳ್ಳಿ, ಕುರಂಕೋಟೆ, ಚಿಕ್ಕಪಾಲನಹಳ್ಳಿ, ಜುಂಜರಾಮನಹಳ್ಳಿ, ತಣ್ಣೇನಹಳ್ಳಿ, ದಿನ್ನೇಪಾಳ್ಯ, ದೊಡ್ಡಪಾಲನಹಳ್ಳಿ, ಪಕೀರಪ್ಪನಪಾಳ್ಯ, ಬೈರೇನಹಳ್ಳಿ, ಬೋಡಬಂಡೆನಹಳ್ಳಿ, ಮಣುವಿನ ಕುರಿಕೆ, ಸೀಗೆಪಾಳ್ಯ, ಸುಣ್ಣಕಲ್ಲಪಾಳ್ಯ, ಹನುಮಂತಪುರ, ಹರಿಹರಪ್ಪನಪಾಳ್ಯ, ಹೊಸಪಾಳ್ಯ.

ಮಧುಗಿರಿ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಇಮ್ಮಡಿಗಾನಹಳ್ಳಿ, ಕಾಳೇನಹಳ್ಳಿ, ಕೊಡಗದಾಲ, ಕೋಡ್ಲಾಪುರ, ಕೋಡಿರಾಂಪುರ, ಕೊಡಿಗೇನಹಳ್ಳಿ, ಕೊಟಗಾರ್ಲಹಳ್ಳಿ, ಕೆಂಪಚೆನ್ನೇನಹಳ್ಳಿ, ಗಂಕಾರನಹಳ್ಳಿ, ಗುಟ್ಟೇ, ಗುರುವಡೇರಹಳ್ಳಿ, ಚನ್ನಸಾಗರ, ಚಿಕ್ಕಮಾಲೂರು, ತವಕದಹಳ್ಳಿ, ತೆರೆಯೂರು, ತಿಂಗಳೂರು, ತೊಣಚಗೊಂಡನಹಳ್ಳಿ, ದೊಡ್ಡಹೊಸಹಳ್ಳಿ, ದೊಡ್ಡಮಾಲೂರು, ದೊಡ್ಡದಾಳವಾಟ, ಪುಲಮಘಟ್ಟ, ಪುರವಾರ, ಪೂಜಾರಹಳ್ಳಿ, ಬ್ಯಾಲ್ಯ, ಬೂದೇನಹಳ್ಳಿ, ಬೊಮ್ಮನಹಳ್ಳಿ, ಬಿಜವಾರ, ಮಾಯಗೊಂಡನಹಳ್ಳಿ, ಮೈದನಹಳ್ಳಿ, ಮುದ್ದಯ್ಯನಪಾಳ್ಯ, ಯಾಕಾರ್ಲಹಳ್ಳಿ, ರಂಟವಾಳಲು, ರಾಮಗೊಂಡನಹಳ್ಳಿ, ವೆಂಕಟಾಪುರ, ವೀರಾಪುರ, ಶಂಕೇನಹಳ್ಳಿ, ಶ್ರಾವಂಡಹಳ್ಳಿ, ಶ್ಯಾನಗಾನ ಹಳ್ಳಿ, ಸಜ್ಜೆಹೊಸಹಳ್ಳಿ, ಸೋದೇನಹಳ್ಳಿ, ಸಿಂಗನಹಳ್ಳಿ.

ಪಾವಗಡ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ದೇವಲಕೆರೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಅಲಕಾಪುರ, ಅರುಕುಂಟೆ, ಆರ್ಕುಂದ, ಆನೂಡಿ, ಇಡಗೂರು, ಕಡಬೂರು, ಕಲ್ಲೂಡಿ, ಕಂಬಾಲಹಳ್ಳಿ, ಕಾದಲವೇಣಿ, ಕಲ್ಲಿನಾಯಕನಹಳ್ಳಿ, ಕುಂದಿಹಳ್ಳಿ, ಕುರೂಡಿ, ಕೊನಗಾನಕೊಪ್ಪ, ಕೊಂಡೇನಹಳ್ಳಿ, ಗಂಗಸಂದ್ರ, ಗೊಟಕನಾಪುರ, ಗುಂಡಾಪುರ, ಗೆದರೆ, ಗೌಡಗೆರೆ, ಚಂದನದೂರು, ಚಿಕ್ಕಹನುಮೇನಹಳ್ಳಿ, ಜಕ್ಕೇನಹಳ್ಳಿ, ಜಾಲಹಳ್ಳಿ, ಜೋಡಿ ಬಿಸಲಹಳ್ಳಿ, ತೊಂಡೇಬಾವಿ, ದ್ವಾರಗಾನಹಳ್ಳಿ, ನಂದಿಗಾನಹಳ್ಳಿ, ನಾಮಗೊಂಡ್ಲು, ಪುರ, ಪುಟಪುರ್ಲಹಳ್ಳಿ, ಪೋತೇನಹಳ್ಳಿ, ಬಜೇರಂಗನಹಳ್ಳಿ, ಬಿಸಲಹಳ್ಳಿ, ಬೊಮ್ಮಶೆಟ್ಟಿಹಳ್ಳಿ, ಮಂಚೇನಹಳ್ಳಿ, ಮರಿಪಡುಗು, ಮಾವಿನಕಾಯನಹಳ್ಳಿ, ಮಾದನಹಳ್ಳಿ, ಮೈಲಗಾನಹಳ್ಳಿ, ರಮಾಪುರ, ರಂಗನಹಳ್ಳಿ, ರಾಯರೇಖಲಹಳ್ಳಿ, ರೆಡ್ಡಿದ್ಯಾವರಹಳ್ಳಿ, ವರುವಣಿ, ವೆಳಪಿ, ವಾಟದಹೊಸಹಳ್ಳಿ, ಸಾರಗೊಂಡ್ಲು, ಸಾದಾರ್ಲಹಳ್ಳಿ, ಸೊನಗಾನಹಳ್ಳಿ, ಹನುಮೇನಹಳ್ಳಿ, ಹಳೇಉಪ್ಪಾರಹಳ್ಳಿ, ಹಂಪಸಂದ್ರ, ಹೊಸ ಉಪ್ಪಾರಹಳ್ಳಿ, ಹೀರೆಬಿದನೂರು.

ಮಾಗಡಿ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಅಣ್ಣಾಜಪ್ಪನಪಾಳ್ಯ, ಉಡುಕುಂಟೆ, ಕಲ್ಯ, ಕಳ್ಳಿಪಾಳ್ಯ, ಕುದೂರು, ಕೆಂಪಸಾಗರ, ಕೆಂಪಚಿಕ್ಕನಪಾಳ್ಯ, ಕೋಡಿಹಳ್ಳಿ, ಗುಡೇಮಾರನಹಳ್ಳಿ, ಚಿಕ್ಕಮಸ್ಕಲ್, ಚೀಳೂರು, ತಿಪ್ಪಸಂದ್ರ, ಪಣ್ಣಯ್ಯನ ಪಾಳ್ಯ, ಬಸವನಪಾಳ್ಯ, ಬಿಸ್ಕೂರು, ಮಾಗಡಿ ರಂಗನಪಾಳ್ಯ, ಮುತ್ಸಾಗರ, ಲಕ್ಕೇನಹಳ್ಳಿ, ಸಾತನೂರು. ಹುಲಿಕಲ್, ಹೊಸಪಾಳ್ಯ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಕನ್ನಕುಂಟೆ, ಕೋಳೂರು, ಮಲ್ಲಸಂದ್ರ.

ಮೈಸೂರು ಜಿಲ್ಲೆಯ ಸಾದರಿರುವ ಗ್ರಾಮ:-

ಕಡಕೊಳ.

ಆನೇಕಲ್ ತಾಲ್ಲೂಕಿನಲ್ಲಿ ಸಾದರಿರುವ ಗ್ರಾಮಗಳು:-

ಅತ್ತಿಬೆಲೆ, ಇಗ್ಗಲೂರು, ಕೆಂಪದೊಡ್ಡೇರಹಳ್ಳಿ, ಬಿದರಕುಪ್ಪೆ.

ತಮಿಳುನಾಡಿನ ಹೊಸೂರು ತಾಲ್ಲೂಕಿನ ಸಾದರಿರುವ ಗ್ರಾಮಗಳು:-

ಬೇಗೇನಹಳ್ಳಿ, ಮೊತ್ತಂಅಗ್ರಹಾರ.

ಆಂಧ್ರಪ್ರದೇಶದ ಮಡಕಶಿರಾ, ಪೆನುಗೊಂಡ, ಹಿಂದೂಪುರ ತಾಲ್ಲೂಕುಗಳಲ್ಲಿಯೂ ಸಾದರಿದ್ದಾರೆ, ಮಡಕಶಿರಾ ತಾಲ್ಲೂಕಿನ ಸಾದರಿರುವ ಗ್ರಾಮಗಳು:-

ಹೇಮಾವತಿ, ಮದ್ಯಶಿವರ.

೨. ವಕ್ತೃಗಳ ವಿವರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಜಾತಿ	ಊರು	ತಾಲ್ಲೂಕು	ಜಿಲ್ಲೆ
೧	೨	೩	೪	೫	೬	೭	೮
೧	ಡಾ॥.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು	೫೪	ಧಾರ್ಮಿಕ ಮುಖಂಡರು	ಸಾದರು ಲಿಂಗಾಯತರು	ಸಿರಿಗೆರೆ	ಚಿತ್ರದುರ್ಗ	ಚಿತ್ರದುರ್ಗ
೨	ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು	೫೮	ಧಾರ್ಮಿಕ ಮುಖಂಡರು	ಸಾದರು ಲಿಂಗಾಯತರು	ಸಾಣೆಹಳ್ಳಿ	ಹೊಸದುರ್ಗ	ಚಿತ್ರದುರ್ಗ
೩	ಡಾ॥ ರಂಗಾರೆಡ್ಡಿ ಕೋಡಿರಾಂಪುರ	೬೧	ನಿ.ಪ್ರಾಧ್ಯಾಪಕರು	ಸಾದರು	ಕೋಡಿರಾಂಪುರ	ಮಧುಗಿರಿ	ತುಮಕೂರು
೪	ಡಾ॥ ಕೆ.ಜಿ.ಗುರುಮೂರ್ತಿ	೭೪	ನಿ.ಪ್ರಾಧ್ಯಾಪಕರು	ಸಾದ ಬಣಜಿಗರು	ದಾವಣಗೆರೆ	ದಾವಣಗೆರೆ	ದಾವಣಗೆರೆ
೫	ಬಸವರಾಜು ಶಿವಪುರ	೭೦	ನಿ.ಶಿಕ್ಷಕರು	ಸಾದರು	ದಾವಣಗೆರೆ	ದಾವಣಗೆರೆ	ದಾವಣಗೆರೆ
೬	ಡಾ॥ ನಾ.ಲೋಕೇಶ್ ಒಡೆಯರ್	೬೦	ಪ್ರಾಚಾರ್ಯರು	ಹಾಲುಮತ ಒಡೆಯರ್	ಸಿರಿಗೆರೆ	ಚಿತ್ರದುರ್ಗ	ಚಿತ್ರದುರ್ಗ
೭	ನಾಗರಾಜ ಸಿರಿಗೆರೆ	೩೬	ಶಿಕ್ಷಕರು	ಸಾದರ ಲಿಂಗಾಯತರು	ಸಿರಿಗೆರೆ	ಚಿತ್ರದುರ್ಗ	ಚಿತ್ರದುರ್ಗ
೮	ಬಸವರಾಜು.ಎ.ಎಸ್.	೫೫	ವ್ಯವಸಾಯ	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೯	ಪದ್ಮಾವತಮ್ಮ.ಟಿ.	೫೪	ಗೃಹಿಣಿ	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೧೦	ಮರಿಸಿದ್ಧಪ್ಪ	೫೮	ದೈಹಿಕ ಶಿಕ್ಷಣ ನಿರ್ದೇಶಕರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೧	ಅನ್ನಪೂರ್ಣ	೫೦	ಗೃಹಿಣಿ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೨	ಪೂರ್ಣಿಮಾಮೂರ್ತಿ	೬೫	ಗೃಹಿಣಿ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೩	ದಿ.ಶಾಂತಮ್ಮ	೭೫	ಗೃಹಿಣಿ	ಸಾದರು	ಕಲ್ಲೂಡಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೧೪	ಪಾರ್ವತಮ್ಮ	೮೫	ಗೃಹಿಣಿ	ಸಾದರು	ಸಾರಗೊಂಡ್ಲು	ಗೌರಿಬಿದನೂರು	ಚಿಕ್ಕಬಳ್ಳಾಪುರ
೧೫	ಸಾ.ನ.ಲಕ್ಷ್ಮಣಗೌಡರು	೭೬	ಪ್ರಾಂಶುಪಾಲರು	ಸಾದರು	ಮಂಚೇನಹಳ್ಳಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೧೬	ಡಾ॥ ವಸಂತಲಕ್ಷ್ಮಿ.ಕೆ.	೫೮	ಪ್ರಾಧ್ಯಾಪಕರು	ಬ್ರಾಹ್ಮಣರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೭	ತಿಮ್ಮಪ್ಪ.ಎನ್.	೫೦	ವಕೀಲರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೮	ಅಶ್ವತ್ಥಪ್ಪ	೮೦	ನಿ.ಹಿ.ಸಾ.ಕ್ಷೇ.ಸಂ. ಅಧ್ಯಕ್ಷರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೧೯	ಶಾಂತರಾಜು.ಬಿ.ಕೆ	೭೦	ನಿ.ಅಧ್ಯಾಪಕರು	ಸಾದರು	ಕುರೂಡಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೨೦	ನಾರಾಯಣಸ್ವಾಮಿ.ಕೆ.ಟಿ.	೫೦	ವ್ಯವಹಾರಗಾರರು	ಸಾದರು	ಕಲ್ಲೂಡಿ	ಗೌರಿಬಿದನೂರು	ಚಿಕ್ಕಬಳ್ಳಾಪುರ

೨೧	ಕೆಂಕರೆ ಹನುಮಂತೇಗೌಡರು	೭೬	ಸಮಾಜ ಸೇವಕರು (ಸಂಶೋಧಕರು)	ಕುಂಚಿಟಿಗ ಒಕ್ಕಲಿಗರು	ಕೆಂಕರೆ	ಮಡಕಶಿರಾ	ಅನಂತಪುರ
೨೨	ಪಂಡಿತ ಹನುಮಂತರಾಯ	೮೦	ಜನಪದ ವೈದ್ಯರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೩	ನಾಗರಾಜಪ್ಪ.ಎ.	೭೫	ವ್ಯವಸಾಯ	ಸಾದರು	ಅರಸಾಪುರ	ಕೊರಟಗೆರೆ	ತುಮಕೂರು
೨೪	ಸುನಂದಮ್ಮ	೬೦	ಗೃಹಿಣಿ	ಸಾದರು	ಅರಸಾಪುರ	ಕೊರಟಗೆರೆ	ತುಮಕೂರು
೨೫	ಡಾ॥ ಪಿ.ವಿ.ಕೃಷ್ಣಮೂರ್ತಿ	೬೧	ಶಾಸನ ತಜ್ಞರು	ಬ್ರಾಹ್ಮಣರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೬	ಲಕ್ಷ್ಮೀ.ಕೆ.ಎಲ್.	೪೫	ಶಿಕ್ಷಕರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೨೭	ಚೆನ್ನಪ್ಪ	೭೬	ವ್ಯವಸಾಯ	ಸಾದರು	ಬಸವನಪಾಳ್ಯ	ಮಾಗಡಿ	ರಾಮನಗರ
೨೮	ಆನಂದ	೪೮	ವ್ಯವಸಾಯ	ಸಾದರು	ಬಸವನಪಾಳ್ಯ	ಮಾಗಡಿ	ರಾಮನಗರ
೨೯	ಶ್ರೀನಿವಾಸ	೪೬	ವ್ಯವಸಾಯ	ಸಾದರು	ಬಸವನಪಾಳ್ಯ	ಮಾಗಡಿ	ರಾಮನಗರ
೩೦	ರವೀಶ	೩೯	ವ್ಯವಸಾಯ	ಸಾದರು	ಬಸವನಪಾಳ್ಯ	ಮಾಗಡಿ	ರಾಮನಗರ
೩೧	ಸಿದ್ಧಲಿಂಗಪ್ಪ	೮೫	ನಿ.ಶಿಕ್ಷಕರು	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೩೨	ನಾಗರಾಜು.ಪಿ	೫೪	ವ್ಯವಸಾಯ (ಅರ್ಚಕರು)	ಸಾದರು	ಮಧ್ಯಶಿವರ	ಮಡಕಶಿರಾ	ಅನಂತಪುರ
೩೩	ಮುದ್ಧಗಂಗಮ್ಮ	೪೦	ಗೃಹಿಣಿ	ಸಾದರು	ಮಧ್ಯಶಿವರ	ಮಡಕಶಿರಾ	ಅನಂತಪುರ
೩೪	ಲಕ್ಷ್ಮೀದೇವಮ್ಮ	೩೬	ಗೃಹಿಣಿ	ಸಾದರು	ಮಧ್ಯಶಿವರ	ಮಡಕಶಿರಾ	ಅನಂತಪುರ
೩೫	ಮುದ್ದಪ್ಪ	೩೭	ಕಾರ್ಮಿಕರು	ಸಾದರು	ಮಧ್ಯಶಿವರ	ಮಡಕಶಿರಾ	ಅನಂತಪುರ
೩೬	ಕೆ.ವಿ.ನಂಜುಂಡಗೌಡ	೭೫	ವ್ಯವಸಾಯ	ಸಾದರು	ಕಲ್ಲೂಡಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೩೭	ದಿ.ತಿಮ್ಮಮ್ಮ	೯೫	ವ್ಯವಸಾಯ	ಸಾದರು	ಕಲ್ಲೂಡಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೩೮	ಮಹೇಶ್ ಕುಮಾರ್.ಕೆ.ಆರ್.	೩೫	ವ್ಯವಸಾಯ	ಸಾದರು	ಕೋಡಿರಾಂಪುರ	ಮಧುಗಿರಿ	ತುಮಕೂರು
೩೯	ವರಲಕ್ಷ್ಮೀ	೩೦	ಗೃಹಿಣಿ	ಸಾದರು	ಕೋಡಿರಾಂಪುರ	ಮಧುಗಿರಿ	ತುಮಕೂರು
೪೦	ಚೌಡಪ್ಪ	೭೨	ವ್ಯವಸಾಯ	ಸಾದರು	ಕೋಡಿರಾಂಪುರ	ಮಧುಗಿರಿ	ತುಮಕೂರು
೪೧	ಕೃಷ್ಣಪ್ಪ.ಬಿ.	೬೫	ವ್ಯವಸಾಯ	ಸಾದರು	ಕೋಡಿರಾಂಪುರ	ಮಧುಗಿರಿ	ತುಮಕೂರು
೪೨	ಸಿದ್ಧಪ್ಪ ಕೋಡಿರಾಂಪುರ	೯೦	ವ್ಯವಸಾಯ	ಸಾದರು	ರಂಟವಾಳ	ಮಧುಗಿರಿ	ತುಮಕೂರು
೪೩	ಗಂಗಮ್ಮ	೭೦	ವ್ಯವಸಾಯ	ಸಾದರು	ರಂಟವಾಳ	ಮಧುಗಿರಿ	ತುಮಕೂರು
೪೪	ಉಮೇಶ್	೪೫	ವ್ಯವಸಾಯ	ಸಾದರು	ರಂಟವಾಳ	ಮಧುಗಿರಿ	ತುಮಕೂರು
೪೫	ಬಿ.ಟಿ.ಹನುಂತರಾಯಪ್ಪ	೭೫	ನಿ.ಪ್ರಾಂಶುಪಾಲರು	ಸಾದರು	ಬೊಮ್ಮನಹಳ್ಳಿ	ತುಮಕೂರು	ತುಮಕೂರು
೪೬	ಕಾಂತಮ್ಮ	೬೫	ವ್ಯಾಪಾರ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೪೭	ಮಲ್ಲಣ್ಣ	೫೦	ವ್ಯವಸಾಯ	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೪೮	ಚಂದ್ರಕಲ	೪೦	ಗೃಹಿಣಿ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೪೯	ಚಿಕ್ಕಮ್ಮ	೮೦	ಗೃಹಿಣಿ	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೫೦	ಮಹೇಶ್.ಎ.ಬಿ	೩೦	ಭೂಮಾಪಕರು	ಸಾದರು	ಅಮೃತಗಿರಿ	ತುಮಕೂರು	ತುಮಕೂರು
೫೧	ಮೋಹನ್ ಕುಮಾರ್	೩೧	ವ್ಯಾಪಾರ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು

೫೨	ಮಂಜುಳ.ಎ.ಬಿ	೨೮	ವ್ಯಾಪಾರ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೫೩	ರೇಖ.ಎ.ಎಮ್.	೨೫	ಗೃಹಿಣಿ	ಸಾದರು	ತುಮಕೂರು	ತುಮಕೂರು	ತುಮಕೂರು
೫೪	ಪಂಕಜ.ಎಸ್.	೬೧	ನಿ.ಶಿಕ್ಷಕರು	ಲಿಂಗಾಯತರು	ಗೌರಿಬಿದನೂರು	ಗೌರಿಬಿದನೂರು	ಚಿಕ್ಕಬಳ್ಳಾಪುರ
೫೫	ಗಂಗಾಧರಪ್ಪ	೭೫	ವ್ಯವಸಾಯ	ಸಾದರು	ಕಂಬಾಲಹಳ್ಳಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೫೬	ಕೆಂಪಮ್ಮ	೬೮	ವ್ಯವಸಾಯ	ಸಾದರು	ಕಂಬಾಲಹಳ್ಳಿ	ಗೌರಿಬಿದನೂರು	ಚಿಕ್ಕಬಳ್ಳಾಪುರ
೫೭	ಪದ್ಮ	೨೬	ಶಿಕ್ಷಕಿ	ಸಾದರು	ಕಡಕೊಳ	ಮೈಸೂರು	ಮೈಸೂರು
೫೮	ಸಪ್ತಗಿರಿ.ಕೆ.ಆರ್.	೩೦	ಶಿಕ್ಷಕರು	ಸಾದರು	ಗೌರಿಬಿದನೂರು	ಗೌರಿಬಿದನೂರು	ಚಿಕ್ಕಬಳ್ಳಾಪುರ
೫೯	ಶೋಭಾ.ಎನ್.ಎಂ.	೬೭	ಹಿಂ.ಸಾ.ಕ್ಷೇ.ಸಂ.... (ವನಿತಾ ವಿಭಾಗದ ಕಾರ್ಯದರ್ಶಿ)	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೬೦	ಕೃಷ್ಣಮೂರ್ತಿ	೭೬	ನಿವೃತ್ತ ರಾಜ್ಯ ಸರ್ಕಾರಿ ಲೆಕ್ಕ ಪತ್ರಾಧಿಕಾರಿ	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೬೧	ಶಿವಲಿಂಗಸ್ವಾಮಿ.ಕೆ.ಆರ್.	೨೯	ವ್ಯವಹಾರಗಾರರು	ಸಾದರು	ಗೌರಿಬಿದನೂರು	ಗೌರಿಬಿದನೂರು	ಚಿಕ್ಕಬಳ್ಳಾಪುರ
೬೨	ಲಕ್ಷ್ಮೀಪತಿ	೫೬	ವ್ಯವಹಾರಗಾರರು	ಸಾದರು	ಬೆಂಗಳೂರು	ಬೆಂಗಳೂರು	ಬೆಂಗಳೂರು
೬೩	ಪೃಥ್ವಿ	೨೫	ವಿದ್ಯಾರ್ಥಿನಿ	ಸಾದರು ಲಿಂಗಾಯತರು	ಬೇಲೂರು	ಹಾಸನ	ಹಾಸನ
೬೪	ಲಲಿತಮ್ಮ	೩೬	ಶಿಕ್ಷಕರು	ಉಪ್ಪಾರ	ಗೌರಿಬಿದನೂರು	ಗೌರಿಬಿದನೂರು	ಚಿಕ್ಕಬಳ್ಳಾಪುರ
೬೫	ಕೃಷ್ಣಮೂರ್ತಿ.ಜಿ.ವಿ.	೭೨	ಹಿ.ಸಾ.ಕ್ಷೇ.ಸಂ. ಕಾರ್ಯದರ್ಶಿ	ಸಾದರು	ಗೌರಿಬಿದನೂರು	ಗೌರಿಬಿದನೂರು	ಚಿಕ್ಕಬಳ್ಳಾಪುರ

೩. ಗ್ರಂಥಋಣ

೧. ಡಾ॥ ಅರ್ಜುನ ಗೊಳಸಂಗಿ – **'ದಲಿತರ ಬದುಕು ಮತ್ತು ಸಂಸ್ಕೃತಿ'**, ವಿಮೋಚನಾ ಪ್ರಕಾಶನ, ಅಥಣಿ, ಬೆಳಗಾವಿ, ೨೦೦೦.

೨. ಡಾ॥ ಉಪಾಧ್ಯಾ.ಜೆ.ಎನ್. – **'ಸಂಸ್ಕೃತಿ ಶೋಧ ಮತ್ತು ಪ್ರೊ.ಹಂಪನಾ'**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೮.

೩. ಕೋಟಿಗಾನಹಳ್ಳಿ ರಾಮಯ್ಯ – 'ಸಿಂದ್ ಮಾದಿಗರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೫೬೦೦೦೨.

೪. ಡಾ॥ ಗುರುಮೂರ್ತಿ.ಕೆ.ಜಿ – **'ಜನಪದ ಸಮಾಜ ಮತ್ತು ಸಂಸ್ಕೃತಿ'**, ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯.
'ಮಾನವಶಾಸ್ತ್ರೀಯ ಸಂಶೋಧನೆ; ಬೆಳೆದು ಬಂದ ದಾರಿ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೬.

೫. ಡಾ॥ ಚಿದಾನಂದಮೂರ್ತಿ.ಎಂ – **'ವೀರಶೈವಧರ್ಮ; ಭಾರತೀಯ ಸಂಸ್ಕೃತಿ (ಹಿಂದೂ ಲಿಂಗಾಯಿತ)'**, ಮಿಂಚು ಪ್ರಕಾಶನ, ಬೆಂಗಳೂರು–೨೦೦೦.

೬. (ಸಂ) ದೇವಿರಪ್ಪ.ಹೆಚ್. ಮಹದೇವ ಬಣಕಾರ – **'ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ'**, ತರಳಬಾಳು ಪ್ರಕಾಶನ,

		ಅಣ್ಣನ ಬಳಗ, ಸಿರಿಗೆರೆ, ೧೯೭೪.
೭. ಡಾ॥ ನಲ್ಲೂರು ಪ್ರಸಾದ್	–	**'ಗಂಗಡಿಕಾರ ಒಕ್ಕಲಿಗರು',** ಅಪ್ರಧೀನ ಪ್ರಕಾಶನ, ಬೆಂಗಳೂರು, ೨೦೦೧.
೮. ನಾಗರಾಜು.ಎಂ.ಹೆಚ್.	–	**'ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ'** ಅನಿಕೇತನ ಪ್ರಕಾಶನ, ತುಮಕೂರು, ಪ್ರ.ಪ್ರಕಟಣೆ–೨೦೦೩.
೯. (ಸಂ) ಶ್ರೀ.ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು	–	**'ಮಹಾಬೆಳಕು',** ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, ೧೯೯೨.
೧೦. ಡಾ॥ ಪದ್ಮಪ್ರಸಾದ್.ಎಸ್.ಪಿ.	–	**'ಮಳೆ; ಒಂದು ಜಾನಪದೀಯ ಅಧ್ಯಯನ',** ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೧೯೯೪.
೧೧. (ಸಂ) ಪ್ರಶಾಂತ್.ಹೆಚ್.ಡಿ.	–	**'ಕರ್ನಾಟಕ ರಾಜ್ಯಕೋಶ:೪, ಜನಸಮುದಾಯ ಸಂಪುಟ'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೧೨. ಬಸವರಾಜು ಶಿವಪುರ	–	**'ಕಾವ್ಯಕಾವೇರಿ',** ವಿಶ್ವಚೇತನ ಪ್ರಕಾಶನ, ಚಿಕ್ಕಮಗಳೂರು, ೧೯೯೭.
೧೩. ಬಸವರಾಜು ತೂಲಹಳ್ಳಿ.ಟಿ.	–	'ಆಲದ ಮರ', ನಿವೇದಿತ ಪ್ರಕಾಶನ, ಬೆಂಗಳೂರು–೨೮.
೧೪. ಡಾ॥ ಭಾಸ್ಕರ್.ಟಿ.ಎಂ	–	**'ಸುಡುಗಾಡು ಸಿದ್ಧರು; ಒಂದು ಸಾಂಸ್ಕೃತಿಕ**

ಅಧ್ಯಯನ',
ಮರುಗ ಪ್ರಕಾಶನ, ಗುಲಬರ್ಗಾ, ೨೦೦೦.

೧೫. (ಸಂ) ಬೋರಲಿಂಗಯ್ಯ.ಹಿ.ಚಿ. – **'ಕರ್ನಾಟಕ ಜನಪದ ಕಲೆಗಳ ಕೋಶ'**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ವಿದ್ಯಾರಣ್ಯ, ಹಂಪಿ, ೧೯೯೬.

೧೬. ಮರಿಯಪ್ಪ.ಎನ್. – **'ಪ್ರಾಚೀನ ಗುಡಿ ವೀರಮಾಸ್ತಿ ದೇವಾಲಯ',**
ಸಾಧನ ಪ್ರಕಾಶನ, ಬೆಂಗಳೂರು, ೨೦೦೭.
'ಕೋಳೂರು ನಂಜುಂಡಪ್ಪ ಪರಿಚಯ ಪುಸ್ತಕ',
ಸಾಧನ ಪ್ರಕಾಶನ, ಬೆಂಗಳೂರು, ೨೦೦೭.

೧೭. ಡಾ॥ ಮದನಕೇಸರಿ.ಹೊ. – **'ಜೈನ ಧರ್ಮದ ಇತಿಹಾಸ',**
ಜಿನ ಜ್ಯೋತಿ ಪ್ರಕಾಶನ,
ಬೆಂಗಳೂರು, ೨೦೦೦.

೧೮. ಮಹದೇವ ಬಣಕಾರ – **'ವಿಶ್ವಬಂದು ಮರುಳಸಿದ್ಧರ ಕಾವ್ಯ',**
ಶ್ರೀ ತರಳಬಾಳು ಪ್ರಕಾಶನ,
ಸಿರಿಗೆರೆ, ೧೯೮೯.

೧೯. ಡಾ॥ ಮಂಗಳಾ ಶ್ರೀಧರ್ – **'ಬುಡಕಟ್ಟು ವೈದ್ಯ ಸಂಸ್ಕೃತಿ',**
ಡಾ॥ ಎಂ.ಬೈರೇಗೌಡ, ಮುದ್ದು ಶ್ರೀ ಗ್ರಂಥಮಾಲೆ,
ಬೆಂಗಳೂರು, ೨೦೦೮.

೨೦. (ಸಂ). ಮಹದೇವ ಬಣಕಾರ – **'ದಿಟ್ಟ ಹೆಜ್ಜೆ ಧೀರ ಕ್ರಮ',**
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ,
ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, ೧೯೮೮.

೨೧. ಯೋಗೇಶ್.ಡಿ.ಎನ್. – **'ಜಯಮಂಗಲಿ'**
ಕನ್ನಡ ಸಾಹಿತ್ಯ ಪರಿಷತ್,

ಬೆಂಗಳೂರು, ೨೦೦೨.

೨೨. ಡಾ॥ ರಂಗಾರೆಡ್ಡಿ ಕೋಡಿರಾಂಪುರ – **'ಗಂಧದ ಮಡುವ ಕಲಕೂತ'**, ತಳಗವಾದಿ ಪ್ರಕಾಶನ, ಮೈಸೂರು, ೨೦೦೩.

'ನನ್ನೂರ ಹಾಡು', ಶಂಬೂಕ ಪ್ರಕಾಶನ, ಗೌರಿಬಿದನೂರು, ೧೯೯೦.

'ಗುಬ್ಬಿ ವೀರಣ್ಣ', ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಬೆಂಗಳೂರು, ೨೦೦೯.

'ಸೊಲ್ಲು ಸೊಲ್ಲೆಲ್ಲ ಅಪರಂಜಿ', ನೆಲಮಲೆ ಪಬ್ಲಿಷಿಂಗ್ ಹೌಸ್, ರಾಮನಗರ, ೨೦೧೨.

'ಬಂಡಾಯ ಜಾನಪದ', ಅಖಿಲ ಭಾರತ ಮುಂಡಾಲ ಸಮಾಜ ಸಂಘ (ನೋಂ), ಬೆಂಗಳೂರು, ೧೯೯೫.

೨೩. ಡಾ॥ ರಾಜಶೇಖರ ಹನುಮಲಿ – **'ವೀರಗಾಸೆ'**, ಸಾಹಿತ್ಯಸಿರಿ, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ೨೦೦೫.

೨೪. ರಾಮರಾವ್ ಜ್ಯೋತಿ – **'ದನಗಳ ರೋಗಗಳು ಮತ್ತು ಅವುಗಳ ನಿವಾರಣೋಪಾಯಗಳು'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೨೫. ಲಕ್ಕಪ್ಪಗೌಡ.ಹೆಚ್.ಜೆ. – **'ಕರ್ನಾಟಕ ಬಡಕಟ್ಟುಗಳು ಸಂಪುಟ–೧'**, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮.

೨೬. ಲಕ್ಷ್ಮಣಗೌಡ.ಸಾ.ನ. – **'ತ(ರ)ಲೆ ಹರಟೆ'**, ದೈವಿಕ ಪ್ರಕಾಶನ, ಬೆಂಗಳೂರು, ೨೦೧೧.

'ನೀನಾರಿಗಾದೆಯೋ ಎಲೆ ಮಾನವ.....?', ದೈವಿಕ ಪ್ರಕಾಶನ, ಬೆಂಗಳೂರು, ೨೦೧೧.

೨೭. ವೇಣು.ಬಿ.ಎಲ್. – **'ಕ್ರಾಂತಿಯೋಗಿ ಮರುಳಸಿದ್ಧ'**, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ೨೦೦೦.

೨೮. (ಸಂ) ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, – **'ಮರುಳಸಿದ್ಧ ದೇವರ ಚರಿತ್ರೆ'**, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ೧೯೭೦.

೨೯. ಡಾ॥ ಶೆಟ್ಟಿ.ಎಸ್.ಡಿ. – **'ದಕ್ಷಿಣ ಕನ್ನಡ ಜಿಲ್ಲೆಯ ಜೈನ ಧರ್ಮ ಪರಂಪರೆ ಮತ್ತು ಅದರ ವಿಶಿಷ್ಟ ಸಂಪ್ರದಾಯಗಳು'**, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ–೫೭೪೨೪೦, ಪ್ರ.ಪ್ರಕಟಣೆ–೨೦೦೦.

೩೦. ಡಾ॥ ಸಿದ್ಧಲಿಂಗಯ್ಯ – **'ಜನಸಂಸ್ಕೃತಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೧. ಸಿ.ಸಿ.ಎ.ಪೈ.ಎಸ್.ಜೆ. – **'ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

೩೨. ಡಾ॥ ಹಂಪ ನಾಗರಾಜಯ್ಯ – **'ಚಂದ್ರಕೊಡೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೩೩. ಹನುಮಂತರಾಯ ಹೆಚ್. ಪಂಡಿತ್ – **'ಸಾದರು ಜನಾಂಗದ ಇತಿಹಾಸ'**, ತರಳಬಾಳು ಪ್ರಕಾಶನ, ಸಿರಿಗೆರೆ, ಚಿತ್ರದುರ್ಗ, ೧೯೭೦.

ಇಂಗ್ಲೀಷ್ ಗ್ರಂಥಗಳು

1. Edgar Thurston - Caste and Tribes of Southern India, Vol.VI ,1909.

2. Nanjundayya.H.V. & AnanthaKrishna Iyer. - The Mysore Tribes & Castes, Vol.IV, 1931.

3. Singh.K.S. - People of India-Karnataka.

ವಿಶ್ವಕೋಶಗಳು

೧. (ಪ್ರ.ಸಂ) ನಾಗೇಗೌಡ.ಎಚ್.ಎಲ್. – **'ಕನ್ನಡ ಜಾನಪದ ಕೋಶ'**, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೮.

೨. (ಪ್ರ.ಸಂ) ವೆಂಕಟಸುಬ್ಬಯ್ಯ.ಜಿ. – **'ಸಂಕ್ಷಿಪ್ತ ನಿಘಂಟು'**, (ಕನ್ನಡ–ಕನ್ನಡ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭.

ನಿಯತಕಾಲಿಕೆಗಳು; ಪತ್ರಿಕೆಗಳು, ಸ್ಮರಣಸಂಚಿಕೆಗಳು.

೧. ಸಾದರ ವಾಣಿ – (ಸಂ) ತಿಮ್ಮಪ್ಪ.ಎನ್.

೨. ಸಾದರ ಸುದ್ದಿ – (ಸಂ) ಪಂಡಿತ್ ಹನುಮಂತರಾಯ.

೩. ಗೌರಿಬಾಗಿನ – ಸ್ಮರಣ ಸಂಚಿಕೆ, ಗೌರಿಬಿದನೂರು ತಾಲ್ಲೂಕು ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ, ೨೦೧೨.


೪. ಸಿರಿಗೌರಿ – ಸ್ಮರಣ ಸಂಚಿಕೆ, ೨೦೧೩.

೫. ಪ್ರಜಾವಾಣಿ – ಬೆಂಗಳೂರು, (೨೬ ನೇ ಜೂನ್ ೨೦೦೯).

೪. ಛಾಯಾಚಿತ್ರಗಳು



ಬಸವೇಶ್ವರ ಸ್ವಾಮಿ



ಬಸವೇಶ್ವರ ಸ್ವಾಮಿ ರಥೋತ್ಸವ
(ಗೌತಮಾರನಹಳ್ಳಿ)


ಶಾಸ್ತ್ರದಲ್ಲಿ
ಮಾಡಿಕೊಳ್ಳುತ್ತಿರುವುದು.


ಭತ್ತ ಕುಟ್ಟುವ ಶಾಸ್ತ್ರ







ಗಂಗೆ ತರುವ ಶಾಸ್ತ್ರ



ಧಾರೆಕಂಭ ತರುತ್ತಿರುವುದು



[illegible] ಶಾಸ್ತ್ರ



ವರನಿಗೆ ಅರಿಶಿನ ಹಚ್ಚುತ್ತಿರುವುದು.



ವರನ ಕಾಲು ತೊಳೆಯುವ ಶಾಸ್ತ್ರ